ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಗಿರಿಜಾ

ಮಾರ್ಗದರ್ಶಕರು
ಡಾ. ಡಿ.ವಿ. ಪರಮಶಿವಮೂರ್ತಿ
ಪ್ರವಾಚಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಭಾಷಾ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಆಗಸ್ಟ್ ೨೦೦೨

ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಗಿರಿಜಾ

ಮಾರ್ಗದರ್ಶಕರು
ಡಾ. ಡಿ.ವಿ.ಪರಮಶಿವಮೂರ್ತಿ
ಪ್ರವಾಚಕರು, ಶಾಸನಶಾಸ್ತ್ರ ವಿಭಾಗ

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಆಗಸ್ಟ್ ೨೦೦೭

ಮಾರ್ಗದರ್ಶಕರ ಪ್ರಮಾಣ ಪತ್ರ

ಗಿರಿಜಾ ಅವರು **ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಡಿ.ವಿ. ಪರಮಶಿವಮೂರ್ತಿ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೦/೮/೦೨
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ಡಾ.ಡಿ.ವಿ.ಪರಮಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಗಿರಿಜಾ
ಸಂಶೋಧಕಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೦/೮/02
ಸ್ಥಳ : ವಿದ್ಯಾರಣ್ಯ

ಸಂಕೇತ ಸೂಚಿ

೧. ಕ.ರಾ.ಗ್ಯಾ - ಕರ್ನಾಟಕ ರಾಜ್ಯ ಗ್ಯಾಸೆಟಿಯರ್

೨. ಸಂ.ಪ.ಕಾ.ತ - ಸಂಡೂರು ಪರಿಸರದ ಕಾರ್ತಿಕೇಯ ತಪೋವನ

೩. ಸೊಂ.ಇ ಮತ್ತು ಸಾಂ.ಪ - ಸೊಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ

೪. ಹೊ.ತಾ.ದ - ಹೊಸಪೇಟೆ ತಾಲ್ಲೂಕು ದರ್ಶನ

೫. ಕ.ಪು.ನೆ - ಕರ್ನಾಟಕದ ಪುರಾತತ್ವ ನೆಲೆಗಳು

೬. ವ.ಸೂ.ಬ ಮತ್ತು ಸೊಂ - ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸೊಂಡೂರು

೭. ಕ.ವಿ.ವಿ.ವಿ.ಕೋ - ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ

೮. ಪ್ರಾ.ಕ.ರಾ - ಪ್ರಾಚೀನ ಕರ್ನಾಟಕದಲ್ಲಿ ರಾಜ್ಯಾಡಳಿತ

೯. ಕೊ.ಜಿ - ಕೊಪ್ಪಳ ಜಿಲ್ಲೆ

೧೦. ಬ.ಜಿ.ಸಾಂ.ಇ - ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ

೧೧. ಬ.ಜಿ.ಸಾಂ.ದ - ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ದರ್ಶನ

೧೨. ಬ.ಜಿ.ಶಾ.ಸಂ. - ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ

೧೩. ವಿ.ಅ.ಸಂ. - ವಿಜಯನಗರ ಅಧ್ಯಯನ ಸಂಪುಟ

೧೪. ಹು.ಶ್ರೀ.ಜೋ.ಸಂ.ಲೇ - ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು

೧೫. ಕ.ಸೇ.ಇ. - ಕರ್ನಾಟಕದ ಸೇವುಣರ ಇತಿಹಾಸ

೧೬. ಕ.ವಿ.ವಿ.ಶಾ.ಸಂ. - ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ

೧೭. ಜ.ರಾ.ಸಾಂ.ದ - ಜಟಂಗಿರಾಮೇಶ್ವರ ಸಾಂಸ್ಕೃತಿಕ ದರ್ಶನ

೧೮. ಕ.ಕು.ರಾ.ಪಂ - ಕರ್ನಾಟಕದಲ್ಲಿ ಕುಮಾರರಾಮನ ಪಂಥ

೧೯. ಕ.ಪಾ. ಮತ್ತು ಒ.ಇ. - ಕರ್ನಾಟಕದ ಪಾಳೆಗಾರರು ಮತ್ತು ಒಡೆಯರ ಇತಿಹಾಸ

೨೦. ಬ.ಜಿ.ಪಾ - ಬಳ್ಳಾರಿ ಜಿಲ್ಲೆಯ ಪಾಳೆಗಾರರು

೨೧. ಸಂ.ಪ.ಶಾ ಮತ್ತು ಉ.ದೇ - ಸಂಡೂರು ಪರಿಸರದ ಶಾಸನ ಉಲ್ಲೇಖಿತ ದೇವಾಲಯಗಳು

೨೨. ಬ.ಜಿ.ಸ್ವಾ.ಹೋ - ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

೨೩. ಕ.ಸಂ.ಸ - ಕರ್ನಾಟಕ ಸಂಸ್ಕೃತಿ ಸಮೀಕ್ಷೆ

೨೪. ಕ.ಶಾ.ಸಂ. - ಕರ್ನಾಟಕ ಶಾಸನ ಸಂಪುಟಗಳು

೨೫. ಕು.ಸಿಂ.ಒಂ.ಅ - ಕುರುಗೋಡು ಸಿಂಧರು ಒಂದು ಅಧ್ಯಯನ

೨೬. ಕ.ಪ.ಅ. ಮತ್ತು ಉ.ಶಾ - ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು

೨೭. ಪ್ರಾ.ಕ.ಆ.ಪಾ.ಪ.ಕೋ - ಪ್ರಾಚೀನ ಕರ್ನಾಟಕದ ಆಡಳಿತದ ಪಾರಿಭಾಷಿಕ ಪದಕೋಶ

೨೮. ಆ.ವಿ.ಶಾ.ಒಂ.ಅ - ಆರನೆಯ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ

೨೯. ಪ್ರಾ.ಕ.ಆ.ವಿ - ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು

೩೦. ಸ.ಬ.ವೀ.ಮ.ಸ್ಮಾ - ಸಮಾಧಿ ಬಲಿದಾನ ವೀರ ಮರಣ ಸ್ಮಾರಕಗಳು

೩೧. ಶಾ.ಕ.ಸ್ತ್ರೀ.ಸ. - ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ

೩೨. ಕ.ಶಾ.ಶಿ - ಕನ್ನಡ ಶಾಸನ ಶಿಲ್ಪ

೩೩. ಎ.ಆರ್.ಎಸ್.ಐ.ಇ - ಆನುಯಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ

೩೪. ವಿ.ಪಿ.ಆರ್ - ವಿಜಯನಗರ ಪ್ರೋಗ್ರೆಸ್ ರಿಸೇರ್ಚ್

೩೫. ಎಸ್.ಐ.ಐ - ಸೌತ್ ಇಂಡಿಯನ್ ಇನಸ್ಕ್ರಿಪ್ಶಿಯನ್

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಅಗತ್ಯ ಮತ್ತು ಸ್ವರೂಪ

೧.೧. ಅಧ್ಯಯನದ ಅಗತ್ಯತೆ

೧.೨. ಅಧ್ಯಯನದ ವ್ಯಾಪ್ತಿ

೧.೩. ಈವರೆಗಿನ ಅಧ್ಯಯನಗಳು

೧.೪. ಅಧ್ಯಯನದ ಸ್ವರೂಪ

೧

ಅಧ್ಯಯನದ ಅಗತ್ಯ ಮತ್ತು ಸ್ವರೂಪ

೧.೧. ಅಧ್ಯಯನದ ಅಗತ್ಯತೆ

ಇತಿಹಾಸ ರಚನೆಯಲ್ಲಿ ಶಾಸನಗಳು ಮತ್ತು ಸ್ಮಾರಕಗಳು ಬಹಳ ಮುಖ್ಯವಾದ ಪಾತ್ರವಹಿಸುತ್ತವೆ. ಇದಕ್ಕೆ ಪೂರಕವಾಗಿ ಕೋಟೆ-ಕೊತ್ತಲಗಳು, ದೇವಾಲಯಗಳು, ಸ್ಮಾರಕಾವಶೇಷ ಮುಂತಾದ ಆಕರಗಳು ಇತಿಹಾಸದ ತಿಳುವಳಿಕೆಯನ್ನು ವಿಸ್ತರಿಸುತ್ತವೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಇತಿಹಾಸ ರಚನೆಯಲ್ಲಿಯೂ ಸಹ ಮೇಲ್ಕಂಡ ಆಕರಗಳೇ ಮೂಲ ಆಕರಗಳಾಗುತ್ತವೆ. ಸಂಡೂರು ಪರಿಸರದಲ್ಲಿ ಇಂತಹ ಸ್ಮಾರಕ ಅವಶೇಷಗಳಿಗೆ ಕೊರತೆಯಿಲ್ಲ.

ಸಂಡೂರು ತಾಲ್ಲೂಕಿನ ಸಮಗ್ರವಾದ ಚರಿತ್ರೆಯ ಅಧ್ಯಯನ ಮಾಡಬೇಕೆಂಬ ಆಸೆ ನನ್ನ ಮನದಲ್ಲಿ ಮೂಡಲು ಕಾರಣ ಇದು ನಾನು ಹುಟ್ಟಿ, ಬೆಳೆದ ಪ್ರದೇಶ ಹಾಗೂ ಚಿಕ್ಕಂದಿನಿಂದಲೂ ಈ ತಾಲ್ಲೂಕಿನಲ್ಲಿ ಕಾಣಸಿಗುವ ಐತಿಹಾಸಿಕ ಮಹತ್ವ ಪಡೆದ ಇಲ್ಲಿನ ಸ್ಮಾರಕ ಶಿಲ್ಪಗಳು, ದೇವಾಲಯಗಳು, ಕೋಟೆಗಳು, ಅರಮನೆಗಳು, ಮಂಟಪಗಳು, ಬ್ರಿಟೀಷರ ಬಂಗಲೆಗಳು ಇತ್ಯಾದಿಗಳನ್ನು ಗಮನಿಸುತ್ತ ಬಂದಿರುವುದೇ ಆಗಿದೆ. ಆದರೆ ಇತ್ತೀಚೆಗೆ ಅಕ್ರಮ ಗಣಿಗಾರಿಕೆಯಿಂದ ಈ ಪ್ರದೇಶದ ಪ್ರಾಕೃತಿಕ ಸಂಪತ್ತು ಸಂಪೂರ್ಣವಾಗಿ ಹಾಳಾಗುತ್ತಿದೆ. ಈ ಪ್ರದೇಶದಲ್ಲಿಯ ಐತಿಹಾಸಿಕ ಮಹತ್ವ ಪಡೆದ ಶಾಸನಗಳು ಮತ್ತು ಸ್ಮಾರಕಾವಶೇಷಗಳು ಮುಂಬರುವ ದಿನಗಳಲ್ಲಿ ಹೇಳ ಹೆಸರಿಲ್ಲದಂತೆ ನಾಶವಾಗುವುದರಲ್ಲಿ ಸಂದೇಹವಿಲ್ಲ. ಅಕ್ರಮ ಗಣಿಗಾರಿಕೆಯ ಕಾರ್ಯ ಚಟುವಟಿಕೆಯಿಂದ ಈಗಾಗಲೇ ಕೆಲವು ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸ್ಮಾರಕಗಳು ನಾಶವಾಗಿವೆ. ಮತ್ತು ಉಳಿದಿರುವಂತಹ ಸ್ಮಾರಕಗಳನ್ನಾದರೂ, ಅಧ್ಯಯನಕ್ಕೊಳ ಪಡಿಸಿ ಅವನ್ನು ಶೈಕ್ಷಣಿಕ ವಲಯದಲ್ಲಿ ದಾಖಲು ಮಾಡಬೇಕೆಂಬ ಮಹದಾಸೆಯಿಂದ ಈ ಅಧ್ಯಯನವನ್ನು ಮಾಡಲಾಗಿದೆ.

ಸಂಡೂರು ತಾಲ್ಲೂಕು ಈ ಹಿಂದೆ ಸಮೃದ್ಧವಾದ ಅರಣ್ಯ ಸಂಪತ್ತನ್ನು ಹೊಂದಿದ್ದು ಬೆಟ್ಟ ಗುಡ್ಡಗಳಿಂದ, ಖನಿಜ ಸಂಪತ್ತಿನಿಂದ ಕೂಡಿದ ಪ್ರದೇಶವಾಗಿತ್ತು. ಆದರೆ ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ಹಣದಾಸೆಗೆ ಬಲಿಯಾದ ಮಾನವ ತನ್ನ ಸುತ್ತಮುತ್ತಲ ಬೆಟ್ಟಗಳಲ್ಲಿ ಕಬ್ಬಿಣದ ಅದಿರನ್ನು

ತೆಗೆಯುವ ಮತ್ತು ಹೊರ ದೇಶಗಳಿಗೆ ಮಾರಾಟ ಮಾಡುವ ದುಷ್ಕೃತ್ಯದಲ್ಲಿ ನಿರತನಾಗಿರುವನು. ಅಷ್ಟೇ ಅಲ್ಲದೆ ಭೂಮಿಯನ್ನು ಉತ್ತು-ಬಿತ್ತುವ ರೈತರು ಸಹ ತಮ್ಮ ಭೂಮಿಯಲ್ಲಿ ದೊರೆಯುವ ಕಬ್ಬಿಣದ ಅದಿರಿಗಾಗಿ ಆಸೆಪಟ್ಟು ಭೂಮಿಯನ್ನು ಮಾರಾಟ ಮಾಡಿಕೊಳ್ಳುತ್ತಿರುವ ದುರಾಸೆಯ ಕೆಲಸ ಇಂದು ಈ ತಾಲ್ಲೂಕಿನಲ್ಲಿ ವ್ಯಾಪಕವಾಗಿ ನಡೆಯುತ್ತಿರುವುದು ನಿಜಕ್ಕೂ ಶೋಚನೀಯವಾದ ಸಂಗತಿಯಾಗಿದೆ. ಇದರಿಂದ ಬಳ್ಳಾರಿಯ ಮಲೆನಾಡು ಎಂದು ಪ್ರಸಿದ್ಧಿ ಪಡೆದಿದ್ದ ಸಂಡೂರು ತಾಲ್ಲೂಕು ಮುಂದೊಂದು ದಿನ ಬರಡು ಬಂಜರು ಭೂಮಿಯಾಗಿ ಉಳಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಒಂದು ಕಡೆ ಗಣಿಗಾರಿಕೆಯಿಂದ ಪ್ರಕೃತಿ ನಾಶವಾಗುತ್ತಿದ್ದರೆ ಮತ್ತೊಂದು ಕಡೆ ಜಿಂದಾಲ್ ವಿಜಯನಗರದಂತಹ ಉಕ್ಕಿನ ಕಾರ್ಖಾನೆಯಿಂದ ಹೊರಬರುವ ವಿಷಪೂರಿತ ಅನಿಲ, ತ್ಯಾಜ್ಯವಸ್ತುಗಳಿಂದ ಪರಿಸರ ಮಾಲಿನ್ಯ ಅಧಿಕವಾಗುತ್ತಿದೆ. ಏಕಕಾಲದಲ್ಲಿಯೇ ಒಂದು ಕಡೆ ಕೈಗಾರಿಕೀಕರಣ ಮತ್ತೊಂದು ಕಡೆ ಗಣಿಗಾರಿಕೆಯ ಪರಿಣಾಮವಾಗಿ ಪರಿಸರದಲ್ಲಿ ಅಸಮತೋಲನ ಉಂಟಾಗಿ, ಈ ಪ್ರದೇಶವು ಸರ್ವರೋಗಗಳ ತಾಣವಾಗುವುದರಲ್ಲಿ ಸಂಶಯವಿಲ್ಲ. ಹಣದಾಸೆಗೆ ಬಲಿಯಾದ ಮಾನವನಿಗೆ ತಮ್ಮ ಪೂರ್ವಿಕರ ಜೀವನ ವಿಧಾನಗಳು ಮತ್ತು ಅವರ ಏಳು-ಬೀಳಿನ ಚರಿತ್ರೆಯು ಪ್ರಸ್ತುತವಾಗದೆ ಹಣಗಳಿಸುವುದೊಂದೇ ಅವನಿಗೆ ಮುಖ್ಯ ಗುರಿಯಾಗಿದೆ. ತನ್ನ ಹಣದಾಹದ ಈಡೇರಿಕೆಗಾಗಿ ಚರಿತ್ರೆಯ ಯಾವ ಆಯಾಮಗಳನ್ನೂ ಅವನು ಚಿಂತಿಸುವುದಿಲ್ಲ. ಕೋಟೆ-ಕೊತ್ತಲ, ದೇವಾಲಯಗಳಂತಹ ಪ್ರಾಚೀನ ಅವಶೇಷಗಳ ಮಹತ್ವವನ್ನು ಅವನು ಅರಿಯಲಾರನು. ಇದರಿಂದ ಈ ತಾಲ್ಲೂಕಿನಲ್ಲಿ ಕಂಡುಬರುವ ಸ್ಮಾರಕಗಳೆಲ್ಲವೂ ಮುಂದೊಂದು ದಿನ ಹೇಳ ಹೆಸರಿಲ್ಲದಂತೆ ಕಣ್ಮರೆಯಾಗುವುದರಲ್ಲಿ ಅನುಮಾನವಿಲ್ಲ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಈ ಭಾಗದ ಐತಿಹಾಸಿಕ ಪರಂಪರೆಯ ಅಧ್ಯಯನ ಅತ್ಯಂತ ಅವಶ್ಯಕವೆಂದು ಮನಗಂಡು ಈ ಅಧ್ಯಯನವನ್ನು ಕೈಗೊಳ್ಳಲಾಯಿತು.

೧.೨. ಅಧ್ಯಯನದ ವ್ಯಾಪ್ತಿ

ನಮ್ಮ ಈ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದ್ದು, ಅಧ್ಯಯನದ ಅನುಕೂಲಕ್ಕಾಗಿ ಅನೇಕ ಉಪ ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಸಂಡೂರು ತಾಲ್ಲೂಕು ಭೌಗೋಳಿಕ, ನೈಸರ್ಗಿಕ ಸ್ವರೂಪದಿಂದ ಹಾಗೂ ಐತಿಹಾಸಿಕ ಪರಂಪರೆಯ ದೃಷ್ಟಿಯಿಂದ ಎಷ್ಟೊಂದು ವೈವಿಧ್ಯತೆಯನ್ನು ಹೊಂದಿದೆಯೋ ಅಷ್ಟೇ ಆಧುನಿಕವಾದ ಸ್ಥಿತ್ಯಂತರಗಳಿಗೂ ಒಳಗಾಗುತ್ತ ಬಂದಿದೆ. ಪ್ರಾಕೃತಿಕ ಸಂಪತ್ತು, ಚಾರಿತ್ರಿಕ ಸ್ವರೂಪ, ಗಣಿಗಾರಿಕೆ ಹೀಗೆ ಹಲವು ನಿಟ್ಟಿನಲ್ಲಿ ಸಂಡೂರು ತಾಲ್ಲೂಕನ್ನು ಗುರುತಿಸುವುದು ಈ ನನ್ನ ಮಹಾಪ್ರಬಂಧದ ಅಧ್ಯಯನದ ಚೌಕಟ್ಟಾಗಿದೆ. ಸಂಡೂರು ತಾಲ್ಲೂಕಿನ ನಕ್ಷೆಯನ್ನು ಆಧರಿಸಿ ಸಂಡೂರಿನ ವ್ಯಾಪ್ತಿಯನ್ನು ಇಟ್ಟುಕೊಂಡು ಇಲ್ಲಿನ ವಿಶ್ಲೇಷಣೆಯನ್ನು ಮಾಡಲಾಗಿದೆ.

ಮುಖ್ಯವಾಗಿ ಈ ತಾಲ್ಲೂಕಿನಲ್ಲಿ ಕಂಡುಬರುವ ಶಿಲಾ ಶಾಸನಗಳು, ಕೋಟೆ-ಕೊತ್ತಲಗಳು, ದೇವಾಲಯಗಳು ಇನ್ನಿತರ ಐತಿಹಾಸಿಕ ಸ್ಮಾರಕ ಅವಶೇಷಗಳನ್ನು ವಿಶೇಷವಾಗಿ ಗಮನಹರಿಸಿ ಚರ್ಚಿಸಲಾಗಿದೆ. ಈ ನಮ್ಮ ಅಧ್ಯಯನಕ್ಕೆ ಈ ಭಾಗದಲ್ಲಿ ಪ್ರಚಲಿತವಿರುವ ಪೌರಾಣಿಕ ಅಂಶಗಳು, ಅವುಗಳ ಹಿನ್ನೆಲೆ, ಐತಿಹ್ಯಗಳು ಆಚರಣೆಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೩. ಈವರೆಗಿನ ಅಧ್ಯಯನಗಳು

ಸಂಡೂರು ತಾಲ್ಲೂಕಿನ ಪೂರ್ವೇತಿಹಾಸ, ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಕೆಲವು ಕೃತಿಗಳು ಮತ್ತು ಲೇಖನಗಳು ಈಗಾಗಲೇ ಪ್ರಕಟವಾಗಿವೆ. ಆದರೆ ಅವು ನಿರ್ದಿಷ್ಟವಾದ ಒಂದು ವಿಷಯವನ್ನೊ ಅಥವಾ ಒಂದು ಸ್ಥಳವನ್ನೋ ಕುರಿತು ಚರ್ಚಿಸಿವೆ. ಇಡೀ ಸಂಡೂರು ತಾಲ್ಲೂಕನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ದೊರೆಯುವ ಎಲ್ಲ ಆಕರಗಳನ್ನು ಬಳಸಿಕೊಂಡು ನಡೆಸಿರುವ ಸಂಡೂರಿನ ಚಾರಿತ್ರಿಕ ಅಧ್ಯಯನದ ಕೊರತೆ ಇತ್ತು. ಈ ಕಾರಣದಿಂದ ಇದೇ ಪರಿಸರದವಳಾದ ನಾನು ಈ ಭಾಗದಲ್ಲಿ ದೊರಕುವ ಆಕರಗಳನ್ನು ಪ್ರಾಮಾಣಿಕವಾಗಿ ಬಳಸಿಕೊಂಡು ಈ ತಾಲ್ಲೂಕಿನ ಚಾರಿತ್ರಿಕ ಅಧ್ಯಯನ ಕೈಗೊಂಡಿದ್ದೇನೆ.

ಕೆ.ಬಿ.ಶಿವತಾರಕ್‌ರವರು, ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ತಮ್ಮ ಗ್ರಂಥದಲ್ಲಿ ಈ ತಾಲ್ಲೂಕಿನ ಬಗ್ಗೆ ಈವರೆಗೆ ಕಂಡುಬಂದಿರುವ ಪುರಾತತ್ವ ನೆಲೆಗಳ ವಿವರಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅವುಗಳು ಈ ಕೆಳಕಂಡಂತಿವೆ.

ಟೆಲರ್ ಎಮ್. ಅವರು, ೧೮೫೩ರಲ್ಲಿ ಬಾಂಬೆ ಬ್ರಾಂಚ್ ರಾಯಲ್ ಏಶಿಯಾಟಿಕ್ ಸೊಸೈಟಿ ಎಂಬ ಜರ್ನಲ್‌ನಲ್ಲಿ ಈ ತಾಲ್ಲೂಕಿನ ಮಲ್ಲಾಪುರ ಗ್ರಾಮವು ಸೂಕ್ಷ್ಮಶಿಲಾಯುಗ ಮತ್ತು ಬೃಹತ್ ಶಿಲಾಯುಗದ ತಾಣವಾಗಿತ್ತೆಂದು ಗುರುತಿಸಿರುವರು. ಇದು ಈ ತಾಲ್ಲೂಕನ್ನು ಕುರಿತಾದ ಮೊದಲ ವರದಿಯಾಗಿದೆ. ಆರ್.ಬಿ.ಫೂಟ್‌ರವರು ೧೯೧೬ರಲ್ಲಿ ಮದ್ರಾಸಿನ ಇಂಡಿಯನ್ ಪ್ರೀ-ಹಿಸ್ಟಾರಿಕ್ ಅಂಡ್ ಪ್ರೋಟೋ-ಹಿಸ್ಟಾರಿಕ್ ಆಂಟಿಕ್ವಿಟಿಸ್ ಎಂಬ ವರದಿಯಲ್ಲಿ ಈ ತಾಲ್ಲೂಕಿನ ಕುರೆಕುಪ್ಪೆ, ತೋರಣಗಲ್ಲು, ದರೋಜಿ, ಜೋಗ, ಲಿಂಗದಹಳ್ಳಿ ಗ್ರಾಮಗಳು, ಆದಿಹಳೆಯ ಶಿಲಾಯುಗದ, ಸೂಕ್ಷ್ಮ ಶಿಲಾಯುಗದ, ನೂತನ ಶಿಲಾಯುಗ, ಶಿಲಾ-ತಾಮ್ರಯುಗದ, ಇತಿಹಾಸ ಆರಂಭಯುಗದ ತಾಣಗಳಾಗಿದ್ದವೆಂದು ಗುರುತಿಸಿರುವರು.[೧]

ಹುಲ್ಲೂರು ಶ್ರೀನಿವಾಸ ಜೋಯಿಸರು ೧೯೪೩ರಲ್ಲಿ ಈ ತಾಲ್ಲೂಕಿನ ದೊರವಡಿ ಗ್ರಾಮದ ಬಗ್ಗೆ ಪ್ರಬುದ್ಧ ಕರ್ನಾಟಕ, ಸಂಪುಟ-೫ರಲ್ಲಿ ಒಂದು ಲೇಖನವನ್ನು ಪ್ರಕಟಿಸಿರುವರು.[೨] ಕೆ.ಬಿ.ಶಿವತಾರಕ್ ರವರು, ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ಗ್ರಂಥದಲ್ಲಿ ಪದ್ದಯ್ಯ ಕೆ. ಅವರು, ೧೯೭೩ರಲ್ಲಿ

ಇನ್‌ವೆಸ್ಟಿಗೇಶನ್ ಇನ್ ಟು ದ ನಿಯೋಲಿಥಿಕ್ ಕಲ್ಚರ್ ಆಫ್ ದ ಶೋರಪೂರ್ ದೋಅಬ್ ಸೌತ್ ಇಂಡಿಯ, ಲೀಡೆನ್ ಎಂಬ ವರದಿಯಲ್ಲಿ ಈ ತಾಲ್ಲೂಕಿನ ದರೋಜಿ ಗ್ರಾಮದ ಬಗ್ಗೆ ಒಂದು ವರದಿಯನ್ನು ಸಲ್ಲಿಸಿರುವರೆಂದು ತಿಳಿಸಿದ್ದಾರೆ.[೩] ಡಬ್ಲ್ಯೂ.ವಿ.ಎಸ್.ನರಸಿಂಹಮ್ ರವರು ೧೯೮೭-೮೮ರ ಇಂಡಿಯನ್ ಆರ್ಕಿಯಾಲಾಜಿಕಲ್ ರಿವ್ಯೂ[೪] ಎಂಬ ವರದಿಯಲ್ಲಿ ಈ ತಾಲ್ಲೂಕಿನ ಅಪ್ಪಲಾಪುರ, ಅಯ್ಯನಹಳ್ಳಿ, ಕೋಡಾಲು, ರಾಂಪುರ(ಕೆರೆ) ಗ್ರಾಮಗಳು ಸೂಕ್ಷ್ಮ ಶಿಲಾಯುಗದ ತಾಣಗಳಾಗಿದ್ದವೆಂದು ಮತ್ತು ಇಂಗಳಗಿ ಗ್ರಾಮವು ನೂತನ ಶಿಲಾಯುಗದ ಹಾಗೂ ರಾಜಾಪುರ ಗ್ರಾಮವು ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ಶಿಲಾ-ತಾಮ್ರಯುಗ, ಬೃಹತ್ ಶಿಲಾಯುಗದ ತಾಣಗಳಾಗಿದ್ದವೆಂದು ಗುರುತಿಸಿದ್ದಾರೆ.

೧೯೯೧ರಲ್ಲಿ ಪ್ರಕಟವಾದ ಲೇಖನಗಳು

ಜಿ.ಎಚ್.ಸಂಭಾಪೂರ ಅವರು ಪುರಾಣಗಳಲ್ಲಿ ಸ್ಕಂದ ಜನ್ಮ ವೃತ್ತಾಂತಗಳು[೫] ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಕುಮಾರಸ್ವಾಮಿಯ ಜನನದ ಬಗ್ಗೆ ವೇದ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ಹಾಗೂ ಪುರಾಣಗಳಲ್ಲಿ ಸ್ಕಂದನ ಜನ್ಮ ವೃತ್ತಾಂತವನ್ನು ತಿಳಿಸಿಕೊಟ್ಟಿದ್ದಾರಾದರೂ ಈ ಪ್ರದೇಶಕ್ಕೆ ಸಂಬಂಧಿಸಿದ ಕುಮಾರಸ್ವಾಮಿಯ ಚರಿತ್ರೆಯನ್ನು ಕಟ್ಟಿಕೊಟ್ಟಿಲ್ಲ. ಈ ಬಗ್ಗೆ ನನ್ನ ಅಧ್ಯಯನದಲ್ಲಿ ಗಮನಿಸಲಾಗಿದೆ. ಡಾ.ಮೃತ್ಯುಂಜಯ ರುಮಾಲೆಯವರು ಸಂಡೂರು : ಒಂದು ಪರಿಚಯ[೬] ಎಂಬ ಲೇಖನವನ್ನು ಪ್ರಕಟಿಸಿರುವರು. ಅದರಲ್ಲಿ ಅವರು ಈ ತಾಲ್ಲೂಕಿನ ಐತಿಹಾಸಿಕ ಮತ್ತು ರಾಜಕೀಯ ಚರಿತ್ರೆಯ ಸಂಕ್ಷಿಪ್ತವಾದ ಮಾಹಿತಿಯನ್ನು ನೀಡಿರುವರು. ಆದರೆ ಈ ವಿಷಯಗಳ ಕುರಿತು ಇಲ್ಲಿ ವ್ಯಾಪಕವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಎಸ್.ಎಂ.ಅಪ್ಪನಗೌಡರ ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು[೭] ಎಂಬ ಈ ಲೇಖನದಲ್ಲಿ ಸಂಡೂರಿನ ಸುತ್ತಮುತ್ತಲು ಇರುವ ಎತ್ತರವಾದ ಪರ್ವತಗಳಲ್ಲಿ ದೊರೆಯುವ ಐರನ್ ಫಾರ್ಮೇಶನ್ ಎಂಬ ಕಲ್ಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ ಹಾಗೂ ಇವು ಉತ್ತಮ ದರ್ಜೆಗೆ ಸೇರಿದ ಅದಿರು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರಾದರೂ ಈ ತಾಲ್ಲೂಕಿನಲ್ಲಿ ಕಂಡುಬರುವ ವ್ಯಾಪಕವಾದ ಗಣಿಗಾರಿಕೆಯನ್ನು ಕುರಿತಾದ ಸಮಗ್ರ ಮಾಹಿತಿಯನ್ನು ನೀಡಿಲ್ಲ. ಆದ್ದರಿಂದ ನಮ್ಮ ಈ ಅಧ್ಯಯನದಲ್ಲಿ ಈ ಗಣಿಗಾರಿಕೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇರುವುದನ್ನು ಮನಗಂಡು ಈ ಗಣಿಗಾರಿಕೆಯ ಬಗ್ಗೆ ವಿಸ್ತಾರವಾದ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

೧೯೯೨-೯೩ರ ಇಂಡಿಯನ್ ಆರ್ಕಿಯಾಲಾಜಿಕಲ್ ರಿವ್ಯೂ[೮] ಎಂಬ ವರದಿಯಲ್ಲಿ ಈ ತಾಲ್ಲೂಕಿನ ಯಶವಂತನಗರ ಗ್ರಾಮವು ಸೂಕ್ಷ್ಮ ಶಿಲಾಯುಗದ ಮತ್ತು ಕಾರ್ತಿಕೇಯ ಕ್ಷೇತ್ರವು ಇತಿಹಾಸ ಆರಂಭಯುಗದ ತಾಣಗಳಾಗಿದ್ದವೆಂದು ಗುರುತಿಸಿರುವರು. ೧೯೯೨-೯೪ರ ಇಂಡಿಯನ್ ಆರ್ಕಿಯಾಲಾಜಿಕಲ್

ರಿವ್ಯೂ[೯] ಎಂಬ ವರದಿಯಲ್ಲಿ ಮೇದರಹಳ್ಳಿ ಗ್ರಾಮವು ಸೂಕ್ಷ್ಮ ಶಿಲಾಯುಗದ ತಾಣವಾಗಿತ್ತೆಂದು ಗುರುತಿಸಿರುವರು. ೧೯೯೪ರ ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ[೧೦] ಎಂಬ ಲೇಖನದಲ್ಲಿ ಅ.ಸುಂದರ ಅವರು ಈ ತಾಲ್ಲೂಕಿನ ರಾಜಾಪುರ ಗ್ರಾಮವು ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಶಿಲಾ-ತಾಮ್ರಯುಗ, ಬೃಹತ್ ಶಿಲಾಯುಗದ ತಾಣವಾಗಿತ್ತೆಂದು ಗುರುತಿಸಿದ್ದಾರೆ.

೧೯೯೪ರಲ್ಲಿ ಪ್ರಕಟವಾದ ಲೇಖನಗಳು

ಸೊಂಡೂರಿನ ಶ್ರೀ ಕುಮಾರಸ್ವಾಮಿ ಎಂಬ ಲೇಖನದಲ್ಲಿ ಡಾ.ಎ.ವೃಷಬೇಂದ್ರಾಚಾರ್ ಅವರು ಕುಮಾರಸ್ವಾಮಿ ಕುರಿತಾದ ಪೌರಾಣಿಕ ಮತ್ತು ಐತಿಹಾಸಿಕದ ಸಂಕ್ಷಿಪ್ತ ಹಿನ್ನೆಲೆಯನ್ನು ನೀಡಿರುವರು.[೧೧] ಸೊಂಡೂರಿನ ವಿರಕ್ತಮಠ ಎಂಬ ಲೇಖನದಲ್ಲಿ ಡಾ.ಮೃತ್ಯುಂಜಯ ರುಮಾಲೆಯವರು ವಿರಕ್ತಮಠದ ಪ್ರಾಚೀನತೆ, ಗುರು, ಪರಂಪರೆ, ಇತ್ತೀಚಿನ ಇತಿಹಾಸದ ಬಗ್ಗೆ ತಿಳಿಸಿದ್ದಾರೆ. ಪೂಜ್ಯ ಶ್ರೀ ಮಲ್ಲಿಕಾರ್ಜುನ ದೇವರು ಎಂಬ ಲೇಖನದಲ್ಲಿ ಡಾ.ಮೃತ್ಯುಂಜಯ ಹೊರಕೇರಿಯವರು ಸಂಡೂರಿನ ವಿರಕ್ತಮಠದ ಮಲ್ಲಿಕಾರ್ಜುನ ಪ್ರಭುದೇವರ ಜೀವನ ಚರಿತ್ರೆಯ ಹಿನ್ನೆಲೆ ಕುರಿತು ತಿಳಿಸಿರುವರು.[೧೨] ಯಶವಂತನಗರ ಶ್ರೀ ಸಿದ್ಧರಾಮೇಶ್ವರರನ್ನು ಕುರಿತ ಲೇಖನದಲ್ಲಿ ಹೆಚ್.ಬಾಲರಾಜು ಅವರು ಯಶವಂತನಗರದ ಮಠದ ಇತಿಹಾಸವನ್ನು ಪರಿಚಯಿಸಿರುವರು.[೧೩] ಮೇಲ್ಕಂಡ ಈ ಮಠಗಳ ಇತಿಹಾಸವನ್ನು ನನ್ನ ಈ ಅಧ್ಯಯನದಲ್ಲಿ ವಿವರವಾಗಿ ಗಮನಿಸಲಾಗಿದೆ. ಸಂಡೂರು ಕೆಲವು ಐತಿಹಾಸಿಕ ಘಟನೆಗಳು ಲೇಖನದಲ್ಲಿ ಜೆ.ಎಮ್. ನಾಗಯ್ಯನವರು ಸಂಡೂರು ಸ್ಥಳನಾಮದ ಉತ್ಪತ್ತಿ, ಈ ತಾಲ್ಲೂಕಿನ ಪುರಾತತ್ವ ವಿಷಯಗಳು ಮತ್ತು ರಾಜಕೀಯದ ಸಂಕ್ಷಿಪ್ತ ಇತಿಹಾಸವನ್ನು ನೀಡಿರುವರು.[೧೪]

೧೯೯೫ರಲ್ಲಿ ಪ್ರಕಟವಾದ ಲೇಖನಗಳು

ಕರ್ನಾಟಕ ಇತಿಹಾಸ ದರ್ಶನ ಸಂಪುಟ-೧೦ರಲ್ಲಿಯ ವಡ್ಡಾರಾದನೆ ಸೂಚಿಸುವ ಬಸದಿ ಮತ್ತು ಸಂಡೂರು ಎಂಬ ಲೇಖನದಲ್ಲಿ ಜೆ.ಎಮ್.ನಾಗಯ್ಯನವರು ವಡ್ಡಾರಾಧನೆಯ ಕಾರ್ತೀಕೆಯ ಯತಿಯೇ ಕುಮಾರಸ್ವಾಮಿಯೆಂಬ ದೇವರಾಗಿ, ಆ ಬಸದಿಯೇ ಈಗ ದೇವಾಲಯವಾಗಿ ಪರಿವರ್ತನೆಗೊಂಡಿರಬಹುದೆಂದು, ಕುಮಾರಸ್ವಾಮಿ ಬೆಟ್ಟದ ಕೆಳಭಾಗದಲ್ಲಿ ನಂದಿಹಳ್ಳಿಯ ಪಶ್ಚಿಮಕ್ಕೆ ಇರುವ ಜೋಗಿಕೊಳ್ಳವನ್ನು ಕಥೆಯಲ್ಲಿರುವ ಬಸದಿಯ ಪ್ರದೇಶವಾಗಿರಬೇಕೆಂದೂ ಹೇಳುತ್ತಾ ಈ ಲೇಖನದಲ್ಲಿಯ ವಡ್ಡಾರಾಧನೆ ಸೂಚಿಸುವ ಬಸದಿ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಸಬೇಕೆಂದು ವಿದ್ವಾಂಸರ ಗಮನ ಸೆಳೆದಿದ್ದಾರೆ. ಈ ಕುರಿತು ನಮ್ಮ ಅಧ್ಯಯನದಲ್ಲಿ ಗಮನಿಸಲಾಗಿದೆ. ಇದೇ ಸಂಪುಟದಲ್ಲಿ ಅ.ಸುಂದರ ಅವರು ಶ್ರೀಮದ್ರಾಮಾಯಣದ ಕಾರ್ತಿಕೇಯವನವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಎಂಬ ಲೇಖನದಲ್ಲಿ ಕಾರ್ತಿಕೇಯ ತಪೋವನ ಯಾವುದೆಂದು ಚರ್ಚಿಸಿರುವರು.[೧೫] ಇದೇ ಸಂಪುಟದಲ್ಲಿಯ ಮತ್ತೊಂದು

ಲೇಖನದಲ್ಲಿ ಎನ್.ಎಮ್.ನಾಗಭೂಷಣರವರು ಸೊಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ಎಂಬ ಲೇಖನದಲ್ಲಿ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯ ಈ ಪ್ರದೇಶವನ್ನು ಕುರಿತು ಹಲವು ವಿಚಾರಗಳನ್ನು ಹಾಗೂ ಕೆಲವು ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿಸಿದ್ದಾರೆ.

೧೯೯೭ರಲ್ಲಿ ಪ್ರಕಟವಾದ ಲೇಖನಗಳು

ವಿಜಯನಗರ ಅಧ್ಯಯನ ಸಂಪುಟ-೨ರಲ್ಲಿ ಡಬ್ಲ್ಯೂ.ವಿ.ಎಸ್ .ನರಸಿಂಹಮ್ ಅವರು 'ಜೋಗದ ತಾಮ್ರ ಶಾಸನ'[೧೯] ಎಂಬ ಲೇಖನದಲ್ಲಿ ಸಿದ್ಧವೀರಪ್ಪ ಸಂಗನಬಸಪ್ಪ ಎಂಬ ಜಂಗಮನ ಹತ್ಯೆಯನ್ನು ಹತ್ಯೆಗೈದ ಕುಡತಿನಿ ತಳವಾರಗೊಸ ಪೆಂನ್ನಯ್ಯನ ಪರವಾಗಿ ಅವನ ತಳವಾರಿಕೆಗೆ ಸೇರಿದ ಗ್ರಾಮದ ಜನರೆಲ್ಲರು ಸೇರಿ ಜಂಗಮಹತ್ಯೆಗೆ ಪರಿಹಾರ ಕಂಡುಕೊಳ್ಳಲು ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ. ಹಾಗೂ ಈ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಹೆಸರಿಸಿದ್ದಾರೆ. ವಾಸುದೇವ ಬಡಿಗೇರ ಸಂಡೂರು ಪರಿಸರದ ಕಾರ್ತಿಕೇಯ ತಪೋವನ ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಕಾರ್ತಿಕೇಯನ ಆರಾಧನೆ ಬಹು ಹಿಂದಿನ ಕಾಲದಿಂದಲೂ ಹೇಗೆ ನಡೆದುಬಂದಿದೆ. ಅದರಲ್ಲೂ ವಿಶೇಷವಾಗಿ ಈಗಿನ ಸಂಡೂರು, ಕುಡತಿನಿ, ಕೊಳಗಲ್ಲು, ಗ್ರಾಮಗಳಲ್ಲಿ ಮಧ್ಯಕಾಲೀನ ಯುಗದಲ್ಲಿ ಕಾರ್ತಿಕೇಯನ ಆರಾಧನೆ ಹೇಗೆ ವಿಶೇಷವಾಗಿತ್ತು, ಬಾದಾಮಿ ಚಾಲುಕ್ಯರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕುಮಾರಸ್ವಾಮಿಯ ಅನೇಕ ಶಿಲ್ಪಗಳ ಕಂಡರಣೆಯಾಯಿತು. ಮತ್ತು ದೇವಾಲಯಗಳ ನಿರ್ಮಾಣವಾಯಿತು ಎಂದು ಹಾಗೂ ಕುಮಾರಸ್ವಾಮಿಯ ಆರಾಧನೆ, ಐತಿಹ್ಯ, ಶಿಲ್ಪಗಳು, ದೇವಾಲಯಗಳ ಬಗ್ಗೆ ಕೆಲವು ವಿವರವನ್ನು ನೀಡಿದ್ದಾರೆ. ಆದರೆ ನಾವು ಇಲ್ಲಿ ಇವನ್ನೊಳಗೊಂಡಂತೆ ಕ್ಷೇತ್ರಕಾರ್ಯದಿಂದ ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿಕೊಳ್ಳಲಾಗಿದೆ. ಸಿ.ಎಸ್.ಪಾಟೀಲರು 'ಇನ್ಸ್‌ಸ್ಕ್ರಿಪ್ಷನ್ಸ್ ಆಫ್ ಬಳ್ಳಾರಿ ಡಿಸ್ಟ್ರೀಕ್ಟ್-ಸಂಪುಟ-IIರಲ್ಲಿ ಈ ತಾಲ್ಲೂಕಿನ ೫೯ ಶಾಸನಗಳ ಸಾರಾಂಶವನ್ನು ಪ್ರಕಟಿಸಿರುವರು.

೧೯೯೮ರಲ್ಲಿ ಪ್ರಕಟವಾದ ಲೇಖನಗಳು

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧ರಲ್ಲಿ ಸಂಡೂರು ತಾಲ್ಲೂಕಿಗೆ ಸಂಬಂಧಿಸಿದ ೨೭ ಶಾಸನಗಳು ಪ್ರಕಟವಾಗಿವೆ.[೨೨] ಆದರೆ ಇವನ್ನು ಹೊರತುಪಡಿಸಿ ನಾವು ಈ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಇನ್ನೂ ಅನೇಕ ಶಾಸನಗಳನ್ನು ಗುರುತಿಸಿ ಅಧ್ಯಯನಕ್ಕೊಳಪಡಿಸಿದ್ದೇವೆ. ಬಿ.ಶೇಷಾದ್ರಿ ಮತ್ತು ಇತರರು, 'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ' ಎಂಬ ಕೃತಿಯಲ್ಲಿ ಸಂಡೂರು ಸಂಸ್ಥಾನವು ಭಾರತದ ಗಣರಾಜ್ಯದಲ್ಲಿ ವಿಲೀನಗೊಂಡ ಸಂದರ್ಭದಲ್ಲಿ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೨೩] ನನ್ನ ಅಧ್ಯಯನದಲ್ಲಿ ಈ ವಿಷಯದ ಬಗ್ಗೆಯೂ ಗಮನಿಸಲಾಗಿದೆ.

೧೯೯೯ರಲ್ಲಿ ಪ್ರಕಟವಾದ ಲೇಖನಗಳು

ಕೆ.ಎಂ.ಸುರೇಶ್‌ರವರ 'ಕರ್ನಾಟಕ ದೇವಾಲಯಕೋಶ' ಎಂಬ ಗ್ರಂಥದಲ್ಲಿ[೨೪] ಈ ತಾಲ್ಲೂಕಿನ ಕೆಲವು ದೇವಾಲಯಗಳ ವಾಸ್ತು, ಶಿಲ್ಪಶೈಲಿಗಳನ್ನು ಗುರುತಿಸಿದ್ದಾರೆ. ಆದರೆ ಇದರಲ್ಲಿ ಉಲ್ಲೇಖವಾಗದ ಐತಿಹಾಸಿಕ ಮಹತ್ವವುಳ್ಳ ಅನೇಕ ದೇವಾಲಯಗಳು ಬಹಳಷ್ಟು ಇದ್ದು ಅವುಗಳನ್ನೂ ನಾವು ಅಧ್ಯಯನ ಮಾಡಿ ಇಲ್ಲಿ ನೀಡಿದ್ದೇವೆ. ಸಿ.ಎಸ್.ಪಾಟೀಲರು 'ಕರ್ನಾಟಕ ಕೋಟೆಗಳು' ಎಂಬ ಕೃತಿಯಲ್ಲಿ[೨೫] ಸಂಡೂರು ತಾಲ್ಲೂಕಿನ ಪ್ರಮುಖವಾದ ಕೋಟೆಗಳನ್ನು ಮಾತ್ರ ಗುರುತಿಸಿದ್ದಾರೆ. ಆದರೆ ಈ ತಾಲ್ಲೂಕಿನಲ್ಲಿ ಇನ್ನೂ ವಿದ್ವಾಂಸರ ಗಮನಕ್ಕೆ ಬಾರದ ಅನೇಕ ಕೋಟೆಗಳಿದ್ದು ಅವುಗಳ ಅಧ್ಯಯನದ ಅಗತ್ಯವಿದ್ದುದನ್ನು ಗಮನಿಸಿ ಅವುಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

೨೦೦೧ರಲ್ಲಿ ಪ್ರಕಟವಾದ ಲೇಖನಗಳು

ಕರ್ನಾಟಕ ಚರಿತ್ರೆ ಮಾಲೆ ಸಂಪುಟ-೧ರಲ್ಲಿ ಅ.ಸುಂದರ ಅವರು ಅನುಬಂಧ-೨ರಲ್ಲಿ, ಪೂರ್ವಭಾವಿ ಇತಿಹಾಸ ಜನ ಸಮುದಾಯಗಳು ಮತ್ತು ಅವರ ಐತಿಹಾಸಿಕತೆ ಎಂಬ ಲೇಖನದಲ್ಲಿ ಸಂಡೂರಿನ ಕುಮಾರಸ್ವಾಮಿ ಬೆಟ್ಟವೇ ಕಾರ್ತಿಕೇಯನ ವನವೆಂದು ಚರ್ಚಿಸಿದ್ದಾರೆ. ಶಿವತಾರಕ್ ಕೆ.ಬಿ.ರವರು ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ಕೃತಿಯಲ್ಲಿ ಸಂಡೂರು ತಾಲ್ಲೂಕಿನ ಅನೇಕ ಸ್ಥಳಗಳ ಪ್ರಾಗಿತಿಹಾಸ ನೆಲೆಗಳನ್ನು ಕುರಿತು ಮಾಹಿತಿಯನ್ನು ನೀಡಿರುವರು.[೨೭] ಅವನ್ನು ನನ್ನ ಈ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ.

೨೦೦೨ರ ಕರ್ನಾಟಕ ಇತಿಹಾಸ ದರ್ಶನ ಸಂಪುಟ-೨೭ರಲ್ಲಿ ಆರ್.ಪುರುಷೋತ್ತಮ ರೆಡ್ಡಿಯವರು ಸಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ ಎಂಬ ಲೇಖನದಲ್ಲಿ ಕಬ್ಬಿಣ ತಯಾರಿಕೆಯ ಕಾರ್ಯ ಈ ಸಂಡೂರು ಪ್ರದೇಶದಲ್ಲಿ ವ್ಯಾಪಕವಾಗಿ ಹರಡಲು ಕಾರಣ ಇಲ್ಲಿಯ ಕಬ್ಬಿಣದ ಅದಿರು ಉತ್ತಮ ದರ್ಜೆಯದ್ದಾಗಿದೆ.[೨೮] ಇದಕ್ಕೆ ಆಧಾರವೆಂಬಂತೆ ಈ ತಾಲ್ಲೂಕಿನ ಯಶವಂತನಗರದ ಬಳಿ ದೊರೆಯುವ ಕಿಟ್ಟದ ರಾಶಿಯ ಗುಡ್ಡೆಗಳು ಹಾಗೂ ಕುಲುಮೆಯಲ್ಲಿ ಬಳಸುತ್ತಿದ್ದ ಜೇಡಿಮಣ್ಣಿನ ಕೊಳವೆಗಳು, ಬೂದಿಯ ರಾಶಿಯನ್ನು ಇಂದಿಗೂ ಅಲ್ಲಿ ಕಾಣಬಹುದು ಎಂಬುದರ ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಈ ಅಂಶಗಳನ್ನು ಗಮನಿಸಿ ಗಣಿಗಾರಿಕೆಯ ಪ್ರಾಚೀನ ಇತಿಹಾಸದ ಅಗತ್ಯವನ್ನು ಅರಿತು ಆ ಬಗ್ಗೆಯೂ ಇಲ್ಲಿ ಗಮನಿಸಲಾಗಿದೆ.

೨೦೦೪ರಲ್ಲಿ ಪ್ರಕಟವಾದ ಲೇಖನಗಳು

ಲೋಹಾದ್ರಿಯ ಮಡಿಲು ಸ್ಮರಣ ಸಂಚಿಕೆಯಲ್ಲಿಯ ಸಂಡೂರು ತಾಲ್ಲೂಕಿನ ಭೌಗೋಳಿಕ ಪರಿಚಯ ಎಂಬ ಲೇಖನದಲ್ಲಿ ಜಗದೀಶ ಕೆರೆನಳ್ಳಿ ಅವರು ಸಂಡೂರು ತಾಲ್ಲೂಕಿನ ಭೌಗೋಳಿಕ

ಪರಿಸರದ ಬಗ್ಗೆ ಮಾಹಿತಿಯನ್ನು ನೀಡಿರುವರು.[೨೯] ಇದೇ ಸಂಚಿಕೆಯಲ್ಲಿ ಸಂಡೂರು ತಾಲ್ಲೂಕಿನ ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ಎಂಬ ನನ್ನ ಲೇಖನದಲ್ಲಿ ಈ ತಾಲ್ಲೂಕಿನ ಆಳ್ವಿಕೆಗೆ ಒಳಪಟ್ಟ ರಾಜವಂಶಗಳ ಸಂಕ್ಷಿಪ್ತ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದೇನೆ.[೩೦] ಇದೇ ಸಂಚಿಕೆಯಲ್ಲಿ ಡಾ.ಎಂ. ವೃಷಬೇಂದ್ರಾಚಾರ್ ಅವರು ಸಂಡೂರು ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ-ಘೋರ್ಪಡೆಯವರ ಕಾಲ ಎಂಬ ಲೇಖನದಲ್ಲಿ ಘೋರ್ಪಡೆ ಮಹಾರಾಜರ ವಂಶದ ಮೂಲ ಮತ್ತು ಅವರ ವಂಶಾವಳಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ಇವರ ಪ್ರತಿಕ್ರಿಯೆ ಹೇಗಿತ್ತು ಎಂಬ ಬಗ್ಗೆ ನನ್ನ ಅಧ್ಯಯನದಲ್ಲಿ ವಿಮರ್ಶಾತ್ಮಕವಾಗಿ ಗಮನಿಸಿದ್ದೇನೆ. ಇದೇ ಸಂಚಿಕೆಯಲ್ಲಿ ಸಂಡೂರು ತಾಲ್ಲೂಕಿನ ಶಾಸನಗಳು ಎಂಬ ಲೇಖನದಲ್ಲಿ ಡಾ.ಕೆ.ರವೀಂದ್ರನಾಥರವರು ಈ ತಾಲ್ಲೂಕಿನಲ್ಲಿ ಕಾಣಸಿಗುವ ಕೆಲವು ಶಾಸನಗಳ ವಿಷಯ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಿರುವರು.[೩೨] ಇದೇ ಸಂಚಿಕೆಯಲ್ಲಿ ಡಾ.ಎಂ.ಕೊಟ್ರೇಶ್ ರವರು ಈ ತಾಲ್ಲೂಕಿನ ಕೆಲವು ದೇವಾಲಯಗಳ ವಿಷಯವನ್ನು ಸಂಗ್ರಹಿಸಿ ಸಂಕ್ಷಿಪ್ತ ವಾಗಿ ಮಾಹಿತಿಯನ್ನು ನೀಡಿದ್ದಾರೆ.

೨೦೦೫ರ ವಿಜಯನಗರ ಅಧ್ಯಯನ ಸಂಪುಟ-೧೧ರಲ್ಲಿ ಸಾಳ್ವನರಸಿಂಹನ ಕಾಲದ ವ್ಯಾಸರಾಯರ ಮಠದ ಅಪ್ರಕಟಿತ ಶಾಸನ ಎಂಬ ನನ್ನದೇ ಲೇಖನದಲ್ಲಿ ಬೊಮ್ಮಗಟ್ಟ ಗ್ರಾಮದ ಶಾನಭೋಗರು ವ್ಯಾಸರಾಯರ ಮಠಕ್ಕೆ ಕೆಲವು ದಾನಗಳನ್ನು ನೀಡಿದ ವಿಷಯದ ಬಗ್ಗೆ ಚರ್ಚಿಸಿದ್ದೇನೆ. ೨೦೦೬ರ ವಾಲ್ಮೀಕಿ ಸಿರಿ ಗ್ರಂಥದಲ್ಲಿ ನನ್ನ ಸಂಡೂರು ತಾಲ್ಲೂಕಿನ ಪಾಳೆಗಾರರ ಕಾಲದ ಸ್ಮಾರಕಗಳು ಎಂಬ ಲೇಖನದಲ್ಲಿ ಪಾಳೆಗಾರ ಅವಧಿಯ ಕೋಟೆ-ಕೊತ್ತಲಗಳನ್ನು ಕುರಿತು ಮಾಹಿತಿಯನ್ನು ನೀಡಿದ್ದೇನೆ.[೩೩]

ಒಟ್ಟಿನಲ್ಲಿ ಸಂಡೂರು ತಾಲ್ಲೂಕಿನ ಬಗ್ಗೆ ಬಹಳಷ್ಟು ಅಧ್ಯಯನಗಳು ನಡೆದಿದ್ದರೂ ಅವುಗಳಲ್ಲಿ ಯಾವುವೂ ಕೂಡ ತಾಲ್ಲೂಕಿನ ಸಮಗ್ರ ಚಾರಿತ್ರಿಕ ಅಧ್ಯಯನವನ್ನು ನಡೆಸಿಲ್ಲ. ನಾವು ಇಲ್ಲಿ ಸಂಡೂರು ತಾಲ್ಲೂಕಿನ ಚರಿತ್ರೆಯನ್ನು ಮುಖ್ಯವಾಗಿಟ್ಟುಕೊಂಡು ಅನೇಕ ಆಧಾರಗಳ ಮೂಲಕ ವಿಸ್ತಾರವಾದ ಅಧ್ಯಯನ ಕೈಗೊಂಡಿದ್ದೇವೆ. ಈ ಕಾರಣದಿಂದ ನಮ್ಮ ಅಧ್ಯಯನಕ್ಕೆ ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನವೆಂಬ ಶೀರ್ಷಿಕೆಯನ್ನು ಇಟ್ಟುಕೊಂಡು ಮೊದಲ ಬಾರಿಗೆ ಈ ತಾಲ್ಲೂಕಿನ ಸಮಗ್ರ ಇತಿಹಾಸವನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ

ನಮ್ಮ ಅಧ್ಯಯನವನ್ನು ಅನುಕೂಲದ ದೃಷ್ಟಿಯಿಂದ ಎಂಟು ಅಧ್ಯಾಯಗಳನ್ನಾಗಿ ಮತ್ತು ಆ ಅಧ್ಯಾಯಗಳ ಅಡಿಯಲ್ಲಿ ಅನೇಕ ಉಪ ಅಧ್ಯಾಯಗಳನ್ನು ವಿಂಗಡಿಸಿಕೊಳ್ಳಲಾಗಿದೆ.

ಮೊದಲ ಅಧ್ಯಾಯದಲ್ಲಿ ಸಂಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಈವರೆಗೆ ನಡೆದ ಅಧ್ಯಾಯನಗಳು ಮತ್ತು ಪ್ರಸ್ತುತ ಸಂದರ್ಭದಲ್ಲಿ ಈ ತಾಲ್ಲೂಕಿನ ಚರಿತ್ರೆಯ ಬಗ್ಗೆ ವ್ಯಾಪಕವಾದ ಅಧ್ಯಯನ ಕೈಗೊಳ್ಳುವ ಅಗತ್ಯತೆಯನ್ನು ಕುರಿತು ಹೇಳಲಾಗಿದೆ ಮತ್ತು ಅದರ ಸ್ವರೂಪವನ್ನು ಚರ್ಚಿಸಲಾಗಿದೆ. ಅದರ ಜೊತೆಗೆ ಈ ಅಧ್ಯಯನದಲ್ಲಿ ಬಳಸಿಕೊಂಡ ಮೂಲ ಆಕರ ಸಾಮಾಗ್ರಿಗಳ ಕುರಿತು ವಿವೇಚಿಸಲಾಗಿದೆ. ಪುರಾತತ್ವ, ಇತಿಹಾಸ, ಸ್ಥಳೀಯ ಆಚರಣೆಗಳು, ಐತಿಹ್ಯ, ಜಾನಪದ ಇತ್ಯಾದಿ ಆಕರಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಸ್ಥಳೀಯ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಈ ಅಧ್ಯಯನದ ಅಗತ್ಯತೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಸಂಡೂರು ತಾಲ್ಲೂಕಿನ ಇತಿಹಾಸದ ಬಗ್ಗೆ ಚರ್ಚಿಸಲಾಗಿದ್ದು, ಭೌಗೋಳಿಕ ವಾಗಿ ಸಂಪತ್ಭರಿತವಾದ ವನಸಿರಿಯನ್ನೊಂದಿದ ಮತ್ತು ಅಪಾರವಾದ ಖನಿಜ ಸಂಪತ್ತಿನಿಂದ ಕೂಡಿರುವ ಈ ಪ್ರದೇಶವು ಇಂದಿಗೂ ಕಬ್ಬಿಣ ಗಣಿಗಾರಿಕೆಗೆ ಹೆಚ್ಚು ಪ್ರಸಿದ್ಧಿಯನ್ನು ಹೊಂದಿರುವ ಪ್ರದೇಶವಾಗಿದೆ. ಹೆಚ್ಚು ಅರಣ್ಯ ಮತ್ತು ಬೆಟ್ಟಗಳಿಂದಾವೃತ್ತವಾದ ಈ ಪ್ರದೇಶದಲ್ಲಿ ಮಳೆ ಹೆಚ್ಚು. ಇದರಿಂದ ಇಲ್ಲಿಯ ನೆಲ-ಜಲ ಸದಾ ಹಸಿರಿನಿಂದ ಕಂಗೊಳಿಸುತ್ತದೆ. ಈ ಪ್ರದೇಶದಲ್ಲಿ ವಾಸಿಸುವ ಪ್ರಾಣಿ, ಪಕ್ಷಿಗಳು, ಇಲ್ಲಿಯ ಅರಣ್ಯದಲ್ಲಿ ಬೆಳೆಯುವ ಪ್ರಮುಖ ವೃಕ್ಷಗಳು, ಇಲ್ಲಿ ಬೆಳೆಯುವ ಆಹಾರ ಧಾನ್ಯಗಳು ಮತ್ತು ಈ ತಾಲ್ಲೂಕಿನ ಭೌಗೋಳಿಕ ಸನ್ನಿವೇಶಗಳನ್ನು ಕುರಿತು ವಿವರಿಸಲಾಗಿದೆ. ಈ ಪ್ರದೇಶವು ಇತಿಹಾಸ ಪೂರ್ವಕಾಲದಿಂದಲೂ ಮಾನವನ ವಸತಿ ಪ್ರದೇಶವಾಗಿತ್ತೆಂಬುದಕ್ಕೆ ಈ ತಾಲ್ಲೂಕಿನಲ್ಲಿ ಕಾಣಸಿಗುವ ಹಳೆಯ ಶಿಲಾಯುಗ, ನವಶಿಲಾಯುಗ, ತಾಮ್ರ ಶಿಲಾಯುಗ, ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗದ ಮತ್ತು ಇತಿಹಾಸ ಆರಂಭಯುಗದ ಗೀರು ಚಿತ್ರಗಳು ಕೈಗೊಡಲಿ, ಮಡಕೆಯ ಚೂರುಗಳು, ಬಂಡೆ ಚಿತ್ರಗಳು, ಕಂಡಿಕೋಣೆ ಗೋರಿಗಳು, ಊರ್ಧ್ವಮುಖದ ಯೋನಿಪೀಠ ರಹಿತಲಿಂಗಗಳು ಇತ್ಯಾದಿ ಈ ಪ್ರದೇಶದಲ್ಲಿ ಕಂಡುಬರುವ ಇತಿಹಾಸ ಪೂರ್ವಕಾಲದ ಅನೇಕ ಉಪಕರಣಗಳು ಸಾಕ್ಷಿಯಾಗಿವೆ. ಈ ಹಿನ್ನೆಲೆಯಲ್ಲಿ ಈ ತಾಲ್ಲೂಕಿನ ಪೂರ್ವೇತಿಹಾಸ ಮತ್ತು ಇತಿಹಾಸವನ್ನು ಚರ್ಚಿಸಲಾಗಿದೆ. ಐತಿಹಾಸಿಕ ಹಿನ್ನೆಲೆಯ ಭಾಗದಲ್ಲಿ ಈ ಪ್ರದೇಶವನ್ನಾಳಿದ ಅರಸರುಗಳಾದ ಮೌರ್ಯರು, ಶಾತವಾಹನರು, ಗಂಗರು, ಕದಂಬರು, ಸಿಂಧರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಕುಮ್ಮಟದ ನಾಯಕರು, ವಿಜಯನಗರದ ಅರಸರು, ಪಾಳೆಗಾರರು, ಬಿಜಾಪುರದ ಸುಲ್ತಾನರು, ಮರಾಠರು, ಬ್ರಿಟೀಷರು ನಂತರ ಘೋರ್ಪಡೆಯ ಅರಸರ ಆಳ್ವಿಕೆಗೆ ಈ ತಾಲ್ಲೂಕು ಯಾವ ರೀತಿಯಾಗಿ ಒಳಪಟ್ಟಿತೆಂಬ ವಿಷಯವನ್ನು ಕುರಿತು ವ್ಯಾಪಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಈ ತಾಲ್ಲೂಕಿನ ಶಾಸನಗಳ ವೈವಿಧ್ಯತೆಯ ಬಗ್ಗೆ ಚರ್ಚಿಸಲಾಗಿದೆ. ಈ ತಾಲ್ಲೂಕಿನಲ್ಲಿ ಅನೇಕ ರೀತಿಯ ಶಾಸನಗಳು ಕಾಣಸಿಗುತ್ತವೆಯಾದರೂ ಅವುಗಳಲ್ಲಿ ದಾನ

ಶಾಸನಗಳೇ ಅಧಿಕವಾಗಿವೆ. ದಾನ ಶಾಸನಗಳಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳ ಜೀರ್ಣೋದ್ಧಾರ, ನಿರ್ಮಾಣಕಾರ್ಯ, ನಿರ್ವಹಣೆ, ನಿತ್ಯದ ಪೂಜಾಕಾರ್ಯಕ್ಕಾಗಿ ಗ್ರಾಮ, ಅಗ್ರಹಾರ, ತೋಟಗಳಂತಹ ಭೂಮಿದಾನಗಳನ್ನು ನೀಡಿರುವ ವಿಷಯಗಳು ತಿಳಿದುಬರುತ್ತದೆ. ಮತ್ತು ಅದರಂತೆಯೇ ಕಾಸು, ಕೌಲು, ಸಿದ್ಧಾಯ, ಗದ್ಯಾಣ, ವೀಸ ಇತ್ಯಾದಿ ತೆರಿಗೆಗಳನ್ನು ದೇವಾಲಯದ ನಿತ್ಯ ಪೂಜೆಗಾಗಿ ದಾನ ನೀಡಿದ ವಿಷಯವನ್ನು ತಿಳಿಸುವ ಶಾಸನಗಳೂ ಇವೆ. ಇವುಗಳ ಜೊತೆಗೆ ಸಾರ್ವಜನಿಕ ಉಪಯೋಗಕ್ಕಾಗಿ ಕೆರೆ, ಬಾವಿ, ಹೊಂಡ(ಕೊಳ), ಮಂಟಪ ಇತ್ಯಾದಿಗಳನ್ನು ನಿರ್ಮಿಸಿ ದಾನ ನೀಡಿರುವ ವಿವರಗಳಿವೆ. ಅದರಂತೆ ಸ್ಥಳೀಯರಿಂದ ನೀಡಲ್ಪಟ್ಟ ದಾನಗಳ ಕುರಿತು, ಶಾಸನಗಳಲ್ಲಿ ಉಲ್ಲೇಖವಾದ ವಂಶಾವಳಿ, ನಾಡುಗಳ ವಿವರ, ೬೦ ಸಂವತ್ಸರಗಳು, ೧೧ ಮಾಸಗಳು, ೬ ವಿಶೇಷ ದಿನಗಳು, ಪ್ರತಿನಾಮಕರಣಗೊಂಡ ಗ್ರಾಮಗಳು, ಕನ್ನಡ, ಸಂಸ್ಕೃತ, ತೆಲುಗು ಭಾಷೆಯ ಶಾಪಾಶಯಗಳು ಮತ್ತು ಶೈವ, ವೈಷ್ಣವ ಶ್ಲೋಕಗಳ ಬಗ್ಗೆ ಗಮನಿಸಲಾಗಿದೆ. ಇವುಗಳ ಜೊತೆಗೆ ಯುದ್ಧದಲ್ಲಿ ಹೋರಾಡಿ ಜಯಗಳಿಸಿರುವ ಮತ್ತು ಹೋರಾಡಿ ಮಡಿದ ವೀರರ ಸ್ಮರಣೆಗಾಗಿ ನಿಲ್ಲಿಸಿದ ಸ್ಮಾರಕ ಶಾಸನಗಳನ್ನು ಹಾಗೂ ಸ್ಮಾರಕ ಶಿಲ್ಪಗಳಾದ ವೀರಗಲ್ಲು, ಮಾಸ್ತಿಕಲ್ಲು, ನಿಸಿದಿಗಲ್ಲುಗಳ ವೈವಿಧ್ಯತೆಯನ್ನು ಗುರುತಿಸಲಾಗಿದೆ. ಇಷ್ಟೇ ಅಲ್ಲದೆ ವಾಮನಮುದ್ರೆಕಲ್ಲು, ಯಂತ್ರಕಲ್ಲು, ಗಡಿಗಲ್ಲುಗಳ ಬಗ್ಗೆಯೂ ಗಮನಹರಿಸಲಾಗಿರುವುದು. ಈ ತಾಲ್ಲೂಕಿನಲ್ಲಿ ಬೇರೆ ಭಾಷೆಯ ಶಾಸನಗಳು ಕಂಡುಬಂದರೂ ಅಧಿಕವಾಗಿ ಕನ್ನಡ ಭಾಷೆಯ ಶಾಸನಗಳೇ ಕಂಡುಬರುತ್ತವೆ. ಹೆಚ್ಚಿನ ಶಾಸನಗಳು ೬-೭ ಸಾಲಿನ ತುಂಡು ಶಾಸನಗಳೇ ಆಗಿವೆ. ಒಟ್ಟಿನಲ್ಲಿ ಈ ತಾಲ್ಲೂಕಿನಲ್ಲಿ ಕಂಡುಬರುವ ವಿವಿಧ ವಿಷಯದ ಶಾಸನಗಳು, ಸ್ಮಾರಕಗಳು, ಶಾಸನ ಶಿಲ್ಪಗಳನ್ನು ಕುರಿತಾದ ವಿವರವಾದ ಚರ್ಚೆಯನ್ನು ಈ ಅಧ್ಯಾಯ ಒಳಗೊಂಡಿದೆ.

ನಾಲ್ಕನೇ ಅಧ್ಯಾಯದಲ್ಲಿ ಈ ತಾಲ್ಲೂಕಿನ ವಾಸ್ತುಶಿಲ್ಪದ ಬಗ್ಗೆ ಚರ್ಚಿಸಲಾಗಿದೆ. ವಾಸ್ತುಶಿಲ್ಪದ ಚರಿತ್ರೆ ಎಂದರೆ ಒಂದು ಜನಾಂಗದ ಅಭಿರುಚಿಯ ಚರಿತ್ರೆಯಾಗಿದೆ. ಇದು ಆಯಾ ಅರಸರುಗಳ ಅವಧಿಯಲ್ಲಿ ಆದ ಧಾರ್ಮಿಕ, ಸಾಮಾಜಿಕ, ರಾಜಕೀಯ ಬದಲಾವಣೆಗೆ ಅನುಗುಣವಾಗಿ ವಾಸ್ತುಶಿಲ್ಪ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಈ ತಾಲ್ಲೂಕಿನ ವಾಸ್ತುಶಿಲ್ಪ ಕಲೆಯ ಚಾರಿತ್ರಿಕ ಅಧ್ಯಯನಕ್ಕೆ ನಮಗೆ ದೊರಕುವ ಮೂಲ ಆಕರಗಳೆಂದರೆ ದೇವಾಲಯಗಳು, ಬಸದಿಗಳು, ಮಸೀದಿಗಳು, ಮೂರ್ತಿಶಿಲ್ಪಗಳು, ಕಾಷ್ಠಶಿಲ್ಪಗಳು, ಭಿತ್ತಿ ಶಿಲ್ಪಗಳು, ದೇವಕೋಷ್ಠದ ಶಿಲ್ಪಗಳು, ಕೋಟೆ-ಕೊತ್ತಲಗಳು, ಅರಮನೆ ಮತ್ತು ಮಂಟಪಗಳಾಗಿವೆ.

ಈ ತಾಲ್ಲೂಕಿನ ದೇವಾಲಯ, ಬಸದಿ, ಮಸೀದಿಗಳ ಬಗ್ಗೆ ಅವುಗಳ ವಾಸ್ತುಶೈಲಿ, ಪಂಥ, ಕಾಲ, ಬಳಸಿದ ಶಿಲೆ, ಪ್ರಸ್ತುತ ಅದರ ಸ್ಥಿತಿ, ನಿರ್ವಹಣೆ ಮುಂತಾದ ವಿಷಯಗಳನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯ ಹಿನ್ನೆಲೆಯಲ್ಲಿ ಚರ್ಚೆಗೊಳಪಡಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಚಾಲುಕ್ಯ

ಪೂರ್ವಯುಗದ ವಾಸ್ತುಶೈಲಿಯಿಂದ ಹಿಡಿದು ವಿಜಯನಗರೋತ್ತರ ವಾಸ್ತುಶೈಲಿಯವರೆಗೆ ಅನೇಕ ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸಲಾಗಿದೆ. ಅದರಂತೆಯೇ ಈ ತಾಲ್ಲೂಕಿನಲ್ಲಿ ಕಂಡುಬರುವ ಮೂರ್ತಿಶಿಲ್ಪಗಳನ್ನು ಸಹ ಚಾಲುಕ್ಯ ಪೂರ್ವಯುಗದಿಂದ ಪ್ರಾರಂಭಿಸಿ ವಿಜಯನಗರೋತ್ತರದ ಅವಧಿಯವರೆಗಿನ ಮೂರ್ತಿಶಿಲ್ಪಗಳೆಂದು ವಿಂಗಡಿಸಿಕೊಂಡು ಅವುಗಳ ಲಕ್ಷಣ, ಕಾಲ, ಶಿಲೆ, ಶೈಲಿ, ಪಂಥ, ನಿರ್ವಹಣೆ ಇತ್ಯಾದಿಗಳ ಬಗ್ಗೆ ಹೇಳಲಾಗಿದೆ. ಅದರ ಜೊತೆಗೆ ಈ ತಾಲ್ಲೂಕಿನಲ್ಲಿ ಕಂಡುಬರುವ ಕೆಲವು ದೇವಾಲಯಗಳಲ್ಲಿಯ ಬಾಗಿಲುವಾಡಗಳಿಗೆ ಮತ್ತು ಕಂಬಗಳಿಗೆ ಅಳವಡಿಸಲ್ಪಟ್ಟ ಕಾಷ್ಠಶಿಲ್ಪದ ಬಗ್ಗೆಯೂ ಗಮನಿಸಲಾಗಿದೆ. ದೇವಾಲಯದ ಭಿತ್ತಿಯ ಅಲಂಕಾರವನ್ನು ಹೆಚ್ಚಿಸುವ ಸಲುವಾಗಿ ನಿರ್ಮಾಣಗೊಂಡ ಪೌರಾಣಿಕ ಮತ್ತು ಐತಿಹಾಸಿಕ ದೃಶ್ಯವನ್ನೊಳಗೊಂಡ ಭಿತ್ತಿಶಿಲ್ಪಗಳನ್ನು ಕುರಿತು ಹಾಗೂ ದೇವಾಲಯದ ಗೋಡೆಯ ಅರ್ಧಗಂಭಗಳ ಮಧ್ಯದಲ್ಲಿಯ ಕೋಷ್ಠಕಗಳಲ್ಲಿರುವ ದೇವಕೋಷ್ಠದ ಶಿಲ್ಪಗಳ ಬಗ್ಗೆಯು ಗಮನಿಸಲಾಗಿದೆ. ಈ ತಾಲ್ಲೂಕಿನಲ್ಲಿ ಕಂಡುಬರುವ ಅನೇಕ ಕೋಟೆಗಳಲ್ಲಿ, ವಿಜಯನಗರ ಪೂರ್ವದ ಕೋಟೆಗಳು ಮತ್ತು ವಿಜಯನಗರೋತ್ತರದ ಕೋಟೆಗಳೆಂದು ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸಿಕೊಳ್ಳಲಾಗಿದೆ. ಇವುಗಳ ಜೊತೆಗೆ ಈ ತಾಲ್ಲೂಕಿನಲ್ಲಿ ಕಂಡುಬರುವ ಮಂಟಪಗಳ ಶೈಲಿ ಹಾಗೂ ಕ್ರಿ.ಶ.೧೯೪೦ರಲ್ಲಿ ನಿರ್ಮಾಣಗೊಂಡ ಸಂಡೂರು ಅರಮನೆಯ ವಾಸ್ತುಶೈಲಿಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಈ ತಾಲ್ಲೂಕಿನ ಲೋಹ ತಯಾರಿಕೆಯ ಐತಿಹಾಸಿಕ ಹಿನ್ನೆಲೆಯ ಬಗ್ಗೆ ವಿವರಿಸಲಾಗಿದೆ. ಸಂಡೂರು ಪ್ರದೇಶಕ್ಕೆ ಪುರಾಣಗಳ ಉಲ್ಲೇಖದಂತೆ ಕಲಿಯುಗದಲ್ಲಿ ಲೋಹಾಚಲ ಎಂಬ ಹೆಸರಿತ್ತೆಂದು, ಇದರ ಚರಿತ್ರೆ ಸು.೩೦೦೦ ವರ್ಷಗಳಷ್ಟು ಪೂರ್ವದ್ದಾಗಿತ್ತು ಎಂದು ತಿಳಿದುಬರುತ್ತದೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಅಧ್ಯಯನ ಕೈಗೊಂಡು ಮೊದಲಿಗೆ ಪ್ರಪಂಚದಾದ್ಯಂತ ಲೋಹ ತಯಾರಿಕೆಯ ಪ್ರಾಚೀನತೆಯ ಬಗ್ಗೆ ಮತ್ತು ಕಬ್ಬಿಣ ತಯಾರಿಕೆಯ ಮೂಲ ಕರ್ತೃಗಳ ಬಗ್ಗೆ ತಿಳಿಸಲಾಗಿದೆ. ನಂತರ ಈ ಪರಿಸರದ ಶಾಸನಗಳಲ್ಲಿ ಉಲ್ಲೇಖವಾದ ಲೋಹ ತಯಾರಿಕೆಯಲ್ಲಿ ಪ್ರಮುಖರಾದ ಐದು ವರ್ಗದವರು ಅಂದರೆ ಸ್ಥಾನದಯ್ದುವರ್ಗದವರನ್ನು ಕುರಿತು ಹೇಳಲಾಗಿದೆ. ಕಾರ್ತಿಕೇಯ ತಪೋವನ - ಒಂದು ಉತ್ತಮ ಲೋಹ ಶಾಸ್ತ್ರಾಸ್ತ್ರ ತಯಾರಿಕ ಕೇಂದ್ರವಾಗಿತ್ತು ಎಂಬ ಬಗ್ಗೆ ಹಾಗೂ ಈ ಕಾರ್ತಿಕೇಯ ತಪೋವನಕ್ಕೆ ಅಧಿಪತಿಗಳ ಪರಂಪರೆ ಇತಿಹಾಸ ಪೂರ್ವಕಾಲದಿಂದಲೂ ಅಭಿವೃದ್ಧಿಯಲ್ಲಿದ್ದರೂ ಕೂಡ ಇವರ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ನಮಗೆ ಲಭಿಸುವುದು ರಾಷ್ಟ್ರಕೂಟರ ಕಾಲದಿಂದ ಎಂಬ ವಿಷಯದ ಬಗ್ಗೆ ಹೇಳಲಾಗಿದೆ. ಅಷ್ಟೇ ಅಲ್ಲದೆ ಕಾರ್ತಿಕೇಯ ಒಬ್ಬ ಪುರಾತನ ದೇವತೆಯಾಗಿದ್ದು, ಆತನ ಹಲವು ನಾಮಗಳು ಹಾಗೂ ಲಕ್ಷಣಗಳ ಬಗ್ಗೆ ಕುಮಾರತಂತ್ರ ಮತ್ತು ಶ್ರೀತತ್ವನಿಧಿ ಇತ್ಯಾದಿ ಕೃತಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಇದರ ಜೊತೆಗೆ ಹಿಂದಿನಂತೆಯೇ ಈಗಲೂ ಕೂಡ ಈ

ತಾಲ್ಲೂಕು ಪ್ರದೇಶವು ಕಬ್ಬಿಣ ಗಣಿಗಾರಿಕೆಗೆ ಹೆಚ್ಚು ಪ್ರಖ್ಯಾತಿ ಪಡೆದಿರುವುದರಿಂದ ಈ ತಾಲ್ಲೂಕಿನ ಪ್ರಸ್ತುತ ಕಬ್ಬಿಣ ಗಣಿಗಾರಿಕೆಯ ಇತಿಹಾಸ ಮತ್ತು ಇಲ್ಲಿ ದೊರಕುವ, ಕಬ್ಬಿಣ ಮತ್ತು ಮ್ಯಾಂಗನೀಸ್ -ಆಂಡಲುಸೈಟ್, ಕಾವಿಮಣ್ಣು, ಚಿನ್ನ, ಜೇಡಿಮಣ್ಣು, ಬೆಣಚು ಮತ್ತು ಬೆಣಚುಶಿಲೆ, ಮ್ಯಾಂಗನೀಸ್, ಮ್ಯಾಗ್ನಸೈಟ್, ಲಿಥಿಯಮ್, ಹಸಿರುಕ್ವಾರ್ಟ್ಸ್ ಸೈಟ್ ವಿವಿಧ ಮಾದರಿಯ ಲೋಹಗಳ ಕುರಿತು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

ಅಧ್ಯಾಯ ಆರರಲ್ಲಿ ಈ ತಾಲ್ಲೂಕಿನಲ್ಲಿ ಕಂಡುಬರುವ ಪ್ರಮುಖ ಕಲೆಗಳ ಕುರಿತು ಅಧ್ಯಯನ ನಡೆಸಲಾಗಿದೆ. ಅವುಗಳಲ್ಲಿ ಈ ತಾಲ್ಲೂಕಿನಲ್ಲಿ ಕಂಡುಬರುವ ಇತಿಹಾಸ ಪೂರ್ವ ಕಾಲದ ಗೀರು ಚಿತ್ರಗಳ ಕುರಿತು ಮತ್ತು ಪಾಳೆಗಾರರ ಅವಧಿಯ ಬಯಲುಬಂಡೆ ರೇಖಾಚಿತ್ರಗಳ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಮತ್ತು ಕರ್ನಾಟಕದ ಖ್ಯಾತ ಚಿತ್ರಕಲಾವಿದರಾದ ವಿ.ಟಿ.ಕಾಳೆಯವರ ಚಿತ್ರಕಲೆಯಲ್ಲಿ ಅವರ ಸಾಧನೆ, ಚಿತ್ರಕಲೆಯ ಬಗ್ಗೆ ಅವರು ರಚಿಸಿದ ಕೃತಿಗಳು ಮತ್ತು ಇಲ್ಲಿಯವರೆಗೆ ಅವರು ಎಷ್ಟು ಸಾವಿರಗಳಷ್ಟು ಚಿತ್ರಗಳನ್ನು ಬರೆದಿರುವರು, ಅವುಗಳಲ್ಲಿ ಎಷ್ಟು ವಿಧಗಳಿವೆ ಎಂದು ಮತ್ತು ಅವರು ಒಬ್ಬ ಉತ್ತಮ ಬರಹಗಾರರೂ ಎಂದು ತಿಳಿಸುವುದರ ಜೊತೆಗೆ ಅವರ ಪುತ್ರರಾದ ಕಾಶಿನಾಥ ಕಾಳೆ ಅವರು ಚಿತ್ರಕಲೆಯಲ್ಲಿ ಬಣ್ಣದ ಬಳಕೆ ಹೇಗೆ ಮಾಡಬೇಕು ಎಂಬ ಕುರಿತು ತಿಳಿಸಿ ಬರೆದಿರುವ ಚಿತ್ರಕಲೆಯಲ್ಲಿ ಬಣ್ಣದ ಬಳಕೆ ಎಂಬ ಕೃತಿಯ ಬಗ್ಗೆ ವಿವರವಾಗಿ ಪರಿಚಯಿಸಲಾಗಿದೆ. ಇವುಗಳ ಜೊತೆಗೆ ಈ ತಾಲ್ಲೂಕಿನಲ್ಲಿ ಪ್ರಸ್ತುತ ದಿನಗಳಲ್ಲಿ ಹೆಸರು ಮಾಡಿದ ಸಂಡೂರಿನ ಶ್ರೀಲಕ್ಷ್ಮೀ ಕರಕುಶಲ ಕಲಾಕೇಂದ್ರದಲ್ಲಿಯ ಕನ್ನಡಿ ಕಲೆ, ಕಸೂತಿ ಕಲೆ, ಬಿದಿರು ಬೆತ್ತದ ಕಲೆ, ಶಿಲ್ಪಕಲೆಗಳ ಬಗ್ಗೆ ಹೇಳಲಾಗಿದೆ. ಹಾಗೂ ಈ ತಾಲ್ಲೂಕಿನಲ್ಲಿ ಕಂಡುಬರುವ ಬುರ್ರಕಥಾ ಕಲೆ, ಯಕ್ಷಗಾನ ಕಲಾವಿದರ, ತೊಗಲುಗೊಂಬೆ ಆಟಗಾರರ ಬಗ್ಗೆಯೂ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಈ ತಾಲ್ಲೂಕಿನಲ್ಲಿ ಕಾಣಸಿಗುವ ತೀರ್ಥಕ್ಷೇತ್ರಗಳು ಮತ್ತು ಮಠಮಾನ್ಯಗಳ ಬಗ್ಗೆ ವಿವರಿಸಲಾಗಿದೆ. ಸಂಡೂರು ಪ್ರದೇಶವು ಧಾರ್ಮಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದ ಪ್ರದೇಶವಾಗಿದ್ದು, ಇಂದಿಗೂ ಈ ಪ್ರದೇಶದಲ್ಲಿ ಕಂಡುಬರುವ ತೀರ್ಥಕ್ಷೇತ್ರಗಳಿಗೆ ತಮ್ಮದೇ ಆದ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಗಳಿವೆ. 'ತೀರ್ಥ' ಎಂಬುದಕ್ಕೆ ಪವಿತ್ರ ಜಲ, ಪುಣ್ಯಕ್ಷೇತ್ರ ಎಂಬ ಅರ್ಥಗಳಿವೆ. ಈ ತಾಲ್ಲೂಕು ಗಿರಿಕಂದರಗಳಿಂದ ಕೂಡಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಅನೇಕ ಹಳ್ಳಕೊಳ್ಳಗಳಿಂದ ಕೂಡಿದ ಈ ಪ್ರದೇಶದಲ್ಲಿ ಅನೇಕ ಸ್ಥಳಗಳು ಔಷಧಿಗುಣವನ್ನೊಂದಿದ ತೀರ್ಥಕ್ಷೇತ್ರಗಳು ಮತ್ತು ಪವಿತ್ರ ಸ್ಥಳಗಳೆಂದು ಕರೆಸಿಕೊಳ್ಳುತ್ತಿವೆ. ಅವುಗಳಲ್ಲಿ ಇಂದಿಗೂ ಭಕ್ತರಿಗೆ ಪೂಜನಿಯವಾಗುಳಿದಿರುವ ಪ್ರಮುಖ ತೀರ್ಥಕ್ಷೇತ್ರಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಅವುಗಳ

ಜೊತೆಗೆ ಅಲ್ಲಿನ ಮಠಗಳು ವೀರಶೈವ ಧರ್ಮ ಪ್ರಚಾರಕ್ಕೆಂದು ಸ್ಥಾಪನೆಯಾಗಿದ್ದು, ಅವುಗಳಲ್ಲಿ ಕೆಲವು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಕಾರ್ಯಾಚರಣೆಯಲ್ಲಿ ತೊಡಗಿದ್ದರೆ. ಉಳಿದವು ಪಾಳುಬಿದ್ದಿವೆ. ಇವುಗಳ ಐತಿಹಾಸಿಕ ಮಹತ್ವವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿಕೊಂಡು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎಂಟನೆ ಅಧ್ಯಾಯವು ಒಟ್ಟು ಪ್ರಬಂಧದ ತಿರುಳನ್ನು ಒಳಗೊಂಡಿದ್ದು ಮೇಲಿನ ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಾಂಶವನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡಲಾಗಿದೆ. ಮುಖ್ಯವಾಗಿ ಸಂಡೂರು ತಾಲ್ಲೂಕಿನ ಗತಕಾಲದ ಚರಿತ್ರೆಯನ್ನು ಪುನರಚಿಸುವಲ್ಲಿ ಸಹಾಯಕವಾಗುವ ಮುಖ್ಯ ಅಂಶಗಳಲ್ಲಿ ರಾಜಕೀಯ ಹಿನ್ನೆಲೆ, ಶಾಸನಗಳು, ವಾಸ್ತುಶಿಲ್ಪಗಳನ್ನು ಪ್ರಮುಖವಾದ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಅವುಗಳ ಜೊತೆಗೆ ಗಣಿಗಾರಿಕೆಯ ಇತಿಹಾಸ ಮತ್ತು ಇಲ್ಲಿನ ವಿವಿಧ ಮಾದರಿಯ ಕಲೆಗಳ ಹಾಗೂ ತೀರ್ಥಕ್ಷೇತ್ರಗಳ ಜೊತೆಗೆ ಮಠ-ಮಾನ್ಯಗಳ ಇತಿಹಾಸವನ್ನು ಕುರಿತು ವಿಶ್ಲೇಷಣೆಯನ್ನು ಈ ಸಮಾರೋಪದಲ್ಲಿ ಕೈಗೊಳ್ಳಲಾಗಿದೆ. ಇಂತಹ ಪ್ರಮುಖ ಮತ್ತು ಪ್ರಾಕೃತಿಕ ಸೌಂದರ್ಯದ ಪರಿಸರವು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ, ಮನುಷ್ಯನ ಹಣದಾಸೆಗೆ ಬಲಿಯಾಗಿ ಅವನತಿಯತ್ತ ಸಾಗುತ್ತಿರುವ ಬಗ್ಗೆ ವಿಶೇಷವಾಗಿ ಗಮನಿಸಲಾಗಿದೆ. ಅನುಬಂಧದಲ್ಲಿ ಈ ತಾಲ್ಲೂಕಿನ ದೇವಾಲಯಗಳು, ಶಾಸನಗಳು, ಕೋಟೆಗಳ ನಕ್ಷೆಗಳನ್ನು ಹಾಗೂ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿರುವ ಛಾಯಾಚಿತ್ರಗಳನ್ನು ಮತ್ತು ಗ್ರಂಥಋಣ ಭಾಗದಲ್ಲಿ ಈ ಅಧ್ಯಯನಕ್ಕೆ ಬಳಸಿಕೊಂಡಿರುವ ಆಕರ ಗ್ರಂಥಗಳನ್ನು ಕೊಡಲಾಗಿದೆ.

ಅಡಿ ಟಿಪ್ಪಣಿಗಳು

೧. ಕ.ಪು.ನೆ, ಶಿವತಾರಕ್ ಕೆ.ಬಿ., ೨೦೦೧

೨. ಪ್ರ.ಕ.ಸಂ.-೫, ಹು.ಶ್ರೀ.ಜೋ, ೧೯೪೩

೩. ಕ.ಪು.ನೆ, ಶಿವತಾರಕ್ ಕೆ.ಬಿ., ೨೦೦೧

೪. ಇಂ.ಆ.ರಿ, ೧೯೮೭-೮೮, ಡಬ್ಲ್ಯೂ.ವಿ.ಎಸ್.ನರಸಿಂಹಮ್

೫. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸಂಭಾಪೂರ ಜಿ.ಎಚ್., ಪುರಾಣಗಳಲ್ಲಿ ಸ್ಕಂದಜನ್ಮ ವೃತ್ತಾಂತಗಳು, ೧೯೯೧

೬. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಡಾ.ಮೃತ್ಯುಂಜಯ ರುಮಾಲೆ, ಸಂಡೂರು; ಒಂದು ಪರಿಚಯ, ೧೯೯೧.

೭. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಅಪ್ಪನ ಗೌಡ ಎಸ್ .ಎಂ., ಬಳ್ಳಾರಿ ಜಿಲ್ಲೆ ಖನಿಜ ಸಂಪತ್ತು, ೧೯೯೧

೮. ಇಂ.ಆ.ರಿ, ೧೯೯೨-೯೩

೯. ಇಂ.ಆ.ರಿ. ೧೯೯೩-೯೪

೧೦. ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಅ.ಸುಂದರ, ೧೯೯೪

೧೧. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಡಾ.ಎ.ವೃಷಬೇಂದ್ರಾಚಾರ್, ಸೊಂಡೂರಿನ ಶ್ರೀಕುಮಾರಸ್ವಾಮಿ, ೧೯೯೪

೧೨. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಡಾ. ಮೃತ್ಯುಂಜಯ ರುಮಾಲೆ, ಸೊಂಡೂರಿನ ವಿರಕ್ತಮಠ, ೧೯೯೪

೧೩. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಡಾ.ಮೃತ್ಯುಂಜಯ ಹೊರಕೇರಿ, ಪೂಜ್ಯ ಶ್ರೀಮಲ್ಲಿಕಾರ್ಜುನ ದೇವರು, ೧೯೯೪.

೧೪. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಬಾಲರಾಜ ಹೆಚ್., ಯಶವಂತನಗರ ಶ್ರೀ ಸಿದ್ಧರಾಮೇಶ್ವರರು, ೧೯೯೪

೧೫. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ನಾಗಯ್ಯ ಜೆ.ಎಂ., ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ೧೯೯೪

೧೬. ಕ.ಇ.ದ.ಸಂ-೧೦, ನಾಗಯ್ಯ ಜೆ.ಎಮ್., ವಡ್ಡಾರಾದನೆ ಸೂಚಿಸುವ ಬಸದಿ ಮತ್ತು ಸಂಡೂರು, ೧೯೯೫

೧೭. ಕ.ಇ.ದ.ಸಂ-೧೦, ಸುಂದರ.ಅ, ಶ್ರೀಮದ್ರಾಮಾಯಣದ, ಕಾರ್ತಿಕೇಯವನವು ಸೊಂಡೂರಿನ ಕುಮಾರಸ್ವಾಮಿ, ಬೆಟ್ಟವೆ ?, ೧೯೯೫

೧೮. ಕ.ಇ.ದ.ಸಂ-೧೦, ನಾಗಭೂಷಣ ಎನ್.ಎಂ., ಸೊಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ೧೯೯೫

೧೯. ವಿ.ಅ.ಸಂ.೨, ನರಸಿಂಹಮ್, ಡಬ್ಲ್ಯೂ.ವಿ.ಎಸ್, ಜೋಗದ ತಾಮ್ರ ಶಾಸನ, ೧೯೯೭

೨೦. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ೧೯೯೭

೨೧. ಇನ್ಸ್‌ಸ್ಕ್ರಿಪ್ಷನ್ಸ್ ಆಫ್ ಬಳ್ಳಾರಿ ಡಿಸ್ಟ್ರಿಕ್ಟ್-ಸಂಪುಟ-II, ಪಾಟೀಲ್ ಸಿ.ಎಸ್., ೧೯೯೭

೨೨. ಕ.ವಿ.ವಿ.ಶಾ.ಸಂ-I, ಬಳ್ಳಾರಿ ಜಿಲ್ಲೆ, ೧೯೯೮

೨೩. ಬ.ಜಿ.ಸ್ವಾ.ಹೋ., ಬಿ.ಶೇಷಾದ್ರಿ, ೧೯೯೮

೨೪. ಕ.ದೇ.ಕೋ.(ಬ.ಜಿ.) ಸುರೇಶ್ ಕೆ.ಎಂ., ೧೯೯೯

೨೫. ಕರ್ನಾಟಕ ಕೋಟೆಗಳು, ಪಾಟೀಲ ಸಿ.ಎಸ್., ೧೯೯೯

೨೬. ಕರ್ನಾಟಕ ಚರಿತ್ರೆ ಮಾಲೆ ಸಂಪುಟ-೧, ಅ.ಸುಂದರ, ೨೦೦೧

೨೭. ಕ.ಪು.ನೆ., ಶಿವತಾರಕ್ ಕೆ.ಬಿ., ೨೦೦೧

೨೮. ಕ.ಇ.ದ.ಸಂ.-೧೭, ಪುರುಷೋತ್ತಮರೆಡ್ಡಿ, ಸಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ, ೨೦೦೨

೨೯. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಜಗದೀಶ ಕೆರೆನಳ್ಳಿ, ಸಂಡೂರು ತಾಲ್ಲೂಕಿನ ಭೌಗೋಳಿಕ ಪರಿಚಯ, ೨೦೦೪

೩೦. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಗಿರಿಜಾ, ಸಂಡೂರು ತಾಲ್ಲೂಕಿನ ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ, ೨೦೦೪

೩೧. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಡಾ.ಎ.ವೃಷಬೇಂದ್ರಾಚಾರ್, ಸಂಡೂರು ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ-ಘೋರ್ಪಡೆಯವರ ಕಾಲ, ೨೦೦೪

೩೨. ಲೋಹಾದ್ರಿ ಮಡಿಲು ಸ್ಮರಣ ಸಂಚಿಕೆ, ಡಾ.ಕೆ.ರವೀಂಧ್ರನಾಥ, ಸಂಡೂರು ತಾಲ್ಲೂಕಿನ ಶಾಸನಗಳು, ೨೦೦೪

೩೩. ವಿ.ಅ.ಸಂ-೧೧, ಗಿರಿಜಾ, ಸಾಳ್ವ ನರಸಿಂಹನ ಕಾಲದ ವ್ಯಾಸರಾಯರ ಮಠದ ಅಪ್ರಕಟಿತ ಶಾಸನ, ೨೦೦೫

೩೪. ವಾಲ್ಮೀಕಿ ಸಿರಿ, ಗಿರಿಜಾ, ಸಂಡೂರು ತಾಲ್ಲೂಕಿನ ಪಾಳೆಗಾರರ ಕಾಲದ ಸ್ಮಾರಕಗಳು, ೨೦೦೬

ಅಧ್ಯಾಯ ೨

ಇತಿಹಾಸ

೨.೧. ಭೌಗೋಳಿಕ ಹಿನ್ನೆಲೆ

೨.೨. ಪೂರ್ವೇತಿಹಾಸ

೨.೩. ಇತಿಹಾಸ

೨

ಇತಿಹಾಸ

೨.೧. ಭೌಗೋಳಿಕ ಹಿನ್ನೆಲೆ

ಸಂಡೂರು ಪರಿಸರವು ಬಳ್ಳಾರಿ ಜಿಲ್ಲೆಯ ಕಾಶ್ಮೀರವೆಂದು ಕರೆಸಿಕೊಂಡ ಸುಂದರ ಪ್ರಕೃತಿಯ ಪರಿಸರವಾಗಿದೆ. ಬಳ್ಳಾರಿ ಜಿಲ್ಲೆಯ ಮಧ್ಯಭಾಗದಲ್ಲಿರುವ ಈ ತಾಲ್ಲೂಕು ಅಪರೂಪದ ಬೆಟ್ಟಗುಡ್ಡ, ಅರಣ್ಯವನ್ನು ಹೊಂದಿದೆ. ಸಂಡೂರಿನ ಸುತ್ತಲೂ ಸುತ್ತುವರಿದ ರಾಮನಮಲೈ, ದೋಣಿಮಲೈ, ಶೇಷಗಿರಿಬೆಟ್ಟ, ತಿಮ್ಮಪ್ಪನಬೆಟ್ಟ, ದೇವಗಿರಿಬೆಟ್ಟ ಮೊದಲಾದ ಬಹಳ ಎತ್ತರವಾದ ಬೆಟ್ಟಗಳು ಕೋಟೆಯಂತೆ ರಕ್ಷಣೆ ನೀಡಿದೆ. ಈ ಬೆಟ್ಟಗಳ ಸಂದುಗೊಂದಿನಲ್ಲಿ ಈ ಪಟ್ಟಣವು ನೆಲೆಸಿರುವ ಕಾರಣ ಈ ಪ್ರದೇಶವನ್ನು "ಸಂದೂರು" ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ಇದೇ ಸಂಡೂರು ಆಗಿದೆ. ಸಂಡೂರು ಒಂದು ಕಣಿವೆ ಪ್ರದೇಶವಾಗಿದ್ದು, ಅಪಾರವಾದ ಖನಿಜ ಸಂಪತ್ತನ್ನು, ಪ್ರಾಕೃತಿಕ ಸೌಂದರ್ಯವನ್ನು ಮತ್ತು ಈ ಜಿಲ್ಲೆಯಲ್ಲಿಯೇ ಅಪರೂಪವಾದ ಹಿತಕರ ಹವಾಗುಣವನ್ನು ಹೊಂದಿದೆ. ಈ ಪ್ರದೇಶದ ಸುತ್ತಲೂ ದೊಡ್ಡ ದೊಡ್ಡ ಬೆಟ್ಟಗಳು, ಸಣ್ಣ ಸಣ್ಣ ಝರಿಗಳು ಹಳ್ಳಕೊಳ್ಳಗಳಿಂದ ಕೂಡಿದ ಅನೇಕ ನೀರಿನ ಸೆಲೆಗಳು ಹಾಗೂ ಅಪರೂಪದ ಹಲವು ವಿಧದ ಅದಿರಿನ ನಿಕ್ಷೇಪಗಳಿವೆ.

೮೨ ಗ್ರಾಮಗಳನ್ನೊಳಗೊಂಡ ಈ ತಾಲ್ಲೂಕು ಬಳ್ಳಾರಿ ಜಿಲ್ಲೆಯಲ್ಲಿಯೇ ವಿಶಿಷ್ಟವಾದುದಾಗಿದೆ. ವಿವಿಧ ಬುಡಕಟ್ಟುಗಳ ಮತ್ತು ಜನಾಂಗಗಳಿಗೆ ಸೇರಿದ ಇಲ್ಲಿನ ಒಟ್ಟು ಜನಸಂಖ್ಯೆ ೧೯೯೧-೯೨ರ ಜನಗಣತಿಯ ಪ್ರಕಾರ ೧,೫೬,೪೧೯ ರಷ್ಟಿದೆ. ಭೌಗೋಳಿಕವಾಗಿ ೬೪.೩೫೬ ಹೆಕ್ಟೇರ್‌ಗಳಷ್ಟು ವಿಸ್ತಾರವಾಗಿದ್ದು, ಇದರಲ್ಲಿ ೧೯೪೨೬ ಹೆ.ಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಈ ತಾಲ್ಲೂಕಿನ ವ್ಯವಸಾಯ ಯೋಗ್ಯ ಪ್ರದೇಶ ಕೇವಲ ೩೯೦೦೦ ಹೆ.ಗಳಷ್ಟಿದೆ ಎಂದು ವ್ಯವಸಾಯ ಇಲಾಖೆಯ ಅಂಕಿ-ಅಂಶಗಳಿಂದ ತಿಳಿದುಬಂದಿದೆ.[೧]

ಪ್ರಾಕೃತಿಕವಾಗಿ ಇಲ್ಲಿಯ ನೆಲ ಕೆಂಪು ಬಣ್ಣದ ಮರಳು ಮಿಶ್ರಿತ ಫಲವತ್ತಾದ ಭೂ ಪ್ರದೇಶ ವಾಗಿದೆ. ಜೋಳ, ಸಜ್ಜೆ, ನವಣೆ, ರಾಗಿ, ಭತ್ತ ಮುಂತಾದವುಗಳು ಎರೆ ಮತ್ತು ಮರಳು ಮಿಶ್ರಿತ ಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯುವ ಮುಖ್ಯ ಆಹಾರ ಬೆಳೆಗಳಾಗಿವೆ. ಇವುಗಳಲ್ಲದೆ ಹೆಸರು, ಉದ್ದು,

ತೊಗರಿ ಮುಂತಾದ ಕಾಳುಗಳನ್ನು ಬೆಳೆಯಲಾಗುತ್ತಿದೆ. ಕೆಂಪು ಮತ್ತು ಎರೆ ಮಣ್ಣಿನಲ್ಲಿ ಈರುಳ್ಳಿ, ಶೇಂಗಾ, ಸೂರ್ಯಕಾಂತಿ ಮತ್ತಿತರ ವಾಣಿಜ್ಯ ಬೆಳೆಗಳನ್ನು ಹಾಗೂ ತರಕಾರಿಗಳನ್ನು ಬೆಳೆಯಲಾಗುತ್ತಿದೆ.

ಈ ಪ್ರದೇಶವು ಬಳ್ಳಾರಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು ಉತ್ತಮ ನೆಲ-ಜಲ ಪಡೆದುಕೊಂಡಿದೆ. ಮಳೆಯಿಂದಾಗಿ ಈ ಪ್ರದೇಶದ ವಿವಿಧ ಕಡೆಗಳಲ್ಲಿ ಸಣ್ಣ-ಪುಟ್ಟ ಕೆರೆಗಳು ತುಂಬುತ್ತವೆ. ಈ ಭಾಗದ ಕೆರೆಗಳಲ್ಲಿ ನಾರಿಹಳ್ಳಕ್ಕೆ ಅಡ್ಡಲಾಗಿ ಕಟ್ಟಲಾಗಿರುವ ದರೋಜಿ ಕೆರೆ ಪ್ರಮುಖವಾದುದು. ಈ ಕೆರೆ ಕರ್ನಾಟಕದ ದೊಡ್ಡಕೆರೆಗಳಲ್ಲಿ ಒಂದಾಗಿದೆ. ಈ ಕೆರೆಯಲ್ಲಿ ಶೇಖರಣೆಯಾದ ನೀರು ಕಾಲುವೆಗಳ ಮೂಲಕ ೧೫೨೧ ಹೆ.ನಷ್ಟು ಕೃಷಿ ಚಟುವಟಿಕೆಗೆ ಮತ್ತು ಜನ ಜಾನುವಾರುಗಳಿಗೆ ದೈನಂದಿನ ಉಪಯೋಗಕ್ಕೆ ಯೋಗ್ಯವಾಗಿದೆ. ಇನ್ನುಳಿದಂತೆ ಸುತ್ತಲೂ ದೊಡ್ಡ ದೊಡ್ಡ ಬೆಟ್ಟ-ಗುಡ್ಡಗಳಿರುವುದರಿಂದ ಮತ್ತು ಸಣ್ಣ ಸಣ್ಣ ಝರಿಗಳಿಂದ ಕೂಡಿದ ಹಳ್ಳಗಳು ಒಂದು ಕಡೆ ಕೂಡಿ ತಾಲ್ಲೂಕಿನ ಪ್ರಮುಖ ಜಲ ಮೂಲವಾದ ನಾರಿಹಳ್ಳದಲ್ಲಿ ವಿಲೀನವಾಗುತ್ತವೆ.[೨] ೧೮೮೯ರಲ್ಲಿ ಈ ನಾರಿಹಳ್ಳವನ್ನು ಕಂಡ ಬ್ರಿಟಿಷ್ ಅಧಿಕಾರಿ ಬ್ರೂಸ್‌ಫೂಟ್ ಸಂಡೂರನ್ನು ಈ ರೀತಿ ವರ್ಣಿಸಿದ್ದಾರೆ. "ಅಗಲ ಕಿರಿದಾದ ಅತಿ ಉದ್ದವಿರುವ ಕಣಿವೆಯಲ್ಲಿ ಎತ್ತರದ ಬೆಟ್ಟಗಳು ವಾಯುವ್ಯದಿಂದ ಆಗ್ನೇಯ ದಿಕ್ಕಿನವರೆಗೆ ಸಮಾನಾಂತರವಾಗಿವೆ. ಅವುಗಳಲ್ಲಿ ಲಂಬವಾಗಿ ಒಂದು ಸಣ್ಣ ನದಿ (ನಾರಿಹಳ್ಳ) ಮಧ್ಯದಲ್ಲಿ ಒಂದು ಊರು" ಎಂದು ಅಂದಿನ ಸಂಡೂರನ್ನು ಪರಿಚಯಿಸುತ್ತ, ನಾರಿಹಳ್ಳವನ್ನು ಒಂದು ಸಣ್ಣ ನದಿಗೆ ಹೋಲಿಸಿದ್ದಾರೆ.[೩]

ದೋಣಿಮಲೈ ಕಬ್ಬಿಣದ ಅದಿರಿನ ನಿಗಮ ಸ್ಥಾಪನೆಯ ಉದ್ದೇಶದಿಂದಲೇ ನಾರಿಹಳ್ಳಕ್ಕೆ ಅಣೆಕಟ್ಟು ಕಟ್ಟಲಾಯಿತು. ಆ ಕಂಪನಿಯ, ಗಣಿಕಾರ್ಮಿಕರ ನಿತ್ಯ ಉಪಯೋಗಕ್ಕೆ ಈ ನಾರಿಹಳ್ಳದ ನೀರನ್ನೇ ಉಪಯೋಗಿಸಲಾಗುತ್ತಿದೆ. ಅಷ್ಟೇ ಅಲ್ಲದೆ ಸಂಡೂರು, ತಾರಾನಗರ, ಗೌರೀಪುರ, ಗಂಗಲಾಪುರ, ನಾಗಲಾಪುರ, ತಾಳೂರು, ಬನ್ನಿಹಟ್ಟಿ ಹಳ್ಳಿಗಳಿಗೆ ಕುಡಿಯುವ ನೀರು ನೀಡುವ ಈ ಡ್ಯಾಂ ೨೫೫.೦೮ ಹೆಕ್ಟೇರ್ ಜಲಾವೃತ ಪ್ರದೇಶವನ್ನು ಹೊಂದಿದೆ.[೪] ಈ ಅಣೆಕಟ್ಟು ಸು.೨೯೫ ಮೀ.ಉದ್ದ, ೩೦.೯೨ ಮೀ. ಇದೆ. ೮೦೦ ಹೆ.ಗಳಷ್ಟು ಕಾಲುವೆಗಳ ಮೂಲಕ ಕೃಷಿಗೂ ಉಪಯೋಗಿಸಲಾಗುತ್ತಿದೆ. ಈ ನೀರಿನ ಶೇಖರಣೆಯಿಂದಾಗಿ ಸುತ್ತಮುತ್ತಲಿನ ಭೂಮಿ ಮತ್ತು ಕೊಳವೆ ಬಾವಿಗಳಲ್ಲಿ ನೀರಿನ ಅಂತರ ಸೆಲೆಯ ಪ್ರಮಾಣ ಹೆಚ್ಚಿದೆ. ಇವುಗಳಿಂದ ಸ್ಥಳೀಯ ಕೃಷಿಗೆ ಅನುಕೂಲಕರವೂ ಆಗಿದೆ.

ಒಟ್ಟಿನಲ್ಲಿ ಜನರಿಗೂ, ಪ್ರಾಣಿ-ಪಕ್ಷಿಗಳಿಗೂ, ಉದ್ದಿಮೆಗಳಿಗೂ ಇಲ್ಲಿಯ ಜಲಸಂಪತ್ತು ವರದಾನವಾಗಿದೆ. ಕೃಷಿ ಇಲಾಖೆಯವರ ಮಳೆ ಮಾಪನ ಕೇಂದ್ರದ ಮಾಹಿತಿಯ ಪ್ರಕಾರ ವರ್ಷದಿಂದ ವರ್ಷಕ್ಕೆ ಮಳೆ ಪ್ರಮಾಣ ಇಲ್ಲಿ ಕಡಿಮೆಯಾಗುತ್ತಾ ಬಂದಿರುವುದನ್ನು ಕಾಣಬಹುದು. ಇದಕ್ಕೆ ಇಲ್ಲಿನ ಪರಿಸರ ನಾಶವೇ ಕಾರಣವೆನ್ನಬಹುದು.[೫]

ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರು ತಾಲ್ಲೂಕಿನ ಬೆಟ್ಟ-ಗುಡ್ಡಗಳ ಅರಣ್ಯವನ್ನು ಬಿಟ್ಟರೆ ಉಳಿದೆಡೆ ಗಿಡ ಮರಗಳು ಕಡಿಮೆ. ಇದನ್ನು ಹುಲ್ಲುಗಾವಲು ಪ್ರದೇಶ ಎಲೆ ಉದುರುವ ಕಾಡು ಎಂದು ಗುರುತಿಸಲಾಗಿದೆ. ಈ ಗುಡ್ಡಗಾಡು ಪ್ರದೇಶವು ಇತಿಹಾಸ ಕಾಲದಿಂದಲೂ ಅನೇಕ ರಾಜಕೀಯ ಶಕ್ತಿಗಳಿಗೆ ಆಶ್ರಯ ನೀಡಿದೆ. ನಿಡಿದಾದ ಗುಡ್ಡಗಳು, ವಿವಿಧ ಜಾತಿಯ ಮರಗಳು ಸು.೨೦೦೦ಕ್ಕೂ ಹೆಚ್ಚು ಹೂ ಸಸ್ಯಗಳು ಹಾಗೂ ೨೦,೦೦೦ ಸಾವಿರದಷ್ಟು ಔಷಧೀಯ ಗಿಡಗಳು ಮತ್ತು ನಾನಾ ತರದ ಬಳುಕುವ ತರುಲತೆಗಳೂ ಇಲ್ಲಿವೆ. ಈ ತಾಲ್ಲೂಕಿನ ಯಶವಂತನಗರದ ಹತ್ತಿರ ಔಷಧಿ ಸಸ್ಯಗಳ ಸಂರಕ್ಷಣಾ ಕೇಂದ್ರವನ್ನು ತೆರೆಯಲಾಗಿದೆ. ಸಾಮಾನ್ಯವಾಗಿ ಈ ಕಾಡಿನಲ್ಲಿ ದಿಂಡಿನ, ಹುಣಸೆ, ಬೇವು, ಶ್ರೀಗಂಧ, ಈಚಲು, ಬಿಳಿಜಾಲಿ, ಬೀಟೆ, ಬಾಗೆ, ಮೊಸಬಾಳೆ, ತರೇದ, ತಂಡರಿಸೆ, ತೇಗ, ಕತ್ತಾಳೆ ಮುಂತಾದ ಮರಗಳು ಹೆಚ್ಚಾಗಿ ಕಂಡುಬರುತ್ತವೆ.[೬]

ಸಂಡೂರು ವಿಸ್ತಾರದಿಂದ ಕೂಡಿದ ದೊಡ್ಡ ಕಾಡು. ತಗ್ಗು-ತಗ್ಗುಗಳಲ್ಲಿ ನಿಲ್ಲುವ ನೀರಿನ ಅನುಕೂಲ ಮತ್ತು ಗೆಡ್ಡೆ ಗೆಣಸುಗಳಿಂದ ಯಥೇಚ್ಛವಾದ ಆಹಾರ ದೊರೆಯುವುದರಿಂದ ಹಾಗೂ ಒಳ್ಳೆಯ ಹವಮಾನ ಇರುವುದರಿಂದ ಈ ಪ್ರದೇಶವು ಜೀವ ಸಂಕುಲಕ್ಕೆ ಅಪೂರ್ವ ತಾಣವಾಗಿದೆ. ಈ ಪ್ರದೇಶದ ಅರಣ್ಯ ಮತ್ತು ಬೆಟ್ಟಗುಡ್ಡಗಳಲ್ಲಿ ಚಿರತೆ, ಕರಡಿ, ನರಿ, ಮೊಲ, ಕಾಡುಹಂದಿ, ಮಂಗ ಮುಂತಾದ ಪ್ರಾಣಿಗಳು, ಎತ್ತು, ಎಮ್ಮೆ, ಹಸು ಮುಂತಾದ ಸಾಕು ಪ್ರಾಣಿಗಳು, ಕೋಗಿಲೆ, ಕೌಜುಕ, ಗೂಬೆ, ಗುಬ್ಬಿ, ಬಾವಲಿ, ಬೆಳವ, ರತ್ನಪಕ್ಷಿ, ಪಾರಿವಾಳ, ನವಿಲು ಮುಂತಾದ ನೂರಾರು ಜಾತಿಯ ಪಕ್ಷಿಗಳು ಮತ್ತು ಅದೆಷ್ಟೋ ನಮ್ಮ ಕಣ್ಣಿಗೆ ಗೋಚರಿಸದ ಜೀವ ವೈವಿಧ್ಯಗಳು ಇಲ್ಲಿವೆ. ನಮ್ಮ ರಾಷ್ಟ್ರ ಪಕ್ಷಿಯಾದ ನವಿಲು ಅತಿ ಹೆಚ್ಚಾಗಿ ಕಂಡು ಬರುವುದು ಇಲ್ಲಿನ ಜೀವ ವೈವಿಧ್ಯದ ವಿಶೇಷಗಳಲ್ಲಿ ಒಂದಾಗಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ಗಣಿಗಾರಿಕೆ ಮತ್ತು ವೇಗವಾಗಿ ಬೆಳೆಯುತ್ತಿರುವ ಉದ್ಯಮಗಳು ಹಾಗೂ ಸರಕು ಸಾಗಾಣಿಕೆಗಾಗಿ ಉತ್ತಮ ಸಾರಿಗೆ ವ್ಯವಸ್ಥೆಯ ನಿರ್ಮಾಣದ ಕಾರಣದಿಂದಾಗಿ, ರಸ್ತೆಯ ಅಗಲೀಕರಣದ ಹೆಸರಿನಲ್ಲಿ ಇಲ್ಲಿನ ಪರಿಸರವನ್ನು ನಾಶ ಮಾಡಲಾಗುತ್ತಿದೆ.

ಕರ್ನಾಟಕದ ಪ್ರಸ್ಥಭೂಮಿಯಲ್ಲಿ ಸಂಡೂರು ಗುಡ್ಡಗಳ ಈಶಾನ್ಯಕ್ಕೆ ಇರುವ ಬಯಲು ನಾಡು ೩೦೦ ರಿಂದ ೪೫೦ ಮೀಟರ್ ಔನ್ನತ್ಯದ ತುಲನಾತ್ಮಕವಾಗಿ ಕಡಿಮೆ ಎತ್ತರದ ಪ್ರದೇಶವಾಗಿದೆ. ಈ ಸಂಡೂರು ವಲಯಗಳ ಶಿಲೆಗಳು ಬಾಬಾಬುಡನ್ ವರ್ಗಕ್ಕೆ ಸೇರಿದವುಗಳು. ಸಂಡೂರು ಬೆಟ್ಟಗಳ ಮೇಲೆ ಜಂಬಿಟ್ಟಿಗೆಯು ಕಬ್ಬಿಣದ ರಚನೆಯ ಮೇಲ್ಪದರಾಗಿ ಕಂಡು ಬಂದು ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರುಗಳ ಸಮೃದ್ಧ ಗಣಿಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದ್ದು, ಗ್ರೆನಾಯಿಟ್, ಸಿಸ್ಟ್, ಸ್ಯಾಂಡ ಸ್ಟೋನ್, ಜಾಸ್ಪರ್ ಮುಂತಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ, ಬಂಗಾರ ಮತ್ತು ತಾಮ್ರದ ಅದಿರಿನಿಂದ ಕೂಡಿದ ಶಿಲೆಗಳಿವೆ. ಸಂಡೂರು, ಕೂಡ್ಲಿಗಿ ಪ್ರದೇಶದಲ್ಲಿ ಅರಣ್ಯ ಹೆಚ್ಚಾಗಿದ್ದು ಉಳಿದ ಭಾಗಗಳಲ್ಲಿ ಅಲ್ಲಲ್ಲಿ ವಿರಳವಾಗಿ ಕಂಡುಬರುತ್ತದೆ. ಇದರ ಒಟ್ಟು ವಿಸ್ತೀರ್ಣ ೬೦೭.೪೪ ಚ.ಕಿ.ಮೀ. ಇದೆ.[೭]

ಸಂಡೂರು, ತಾರಾನಗರ, ದೇವಗಿರಿ ಪ್ರದೇಶಗಳು ಗಿರಿ ಕಂದರಗಳಿಂದ ಕೂಡಿದ್ದು ಸಮುದ್ರದ ಪಾತಳಿಯಿಂದ ಸು.೩೫೦೦ ಫೂಟು ಎತ್ತರದಲ್ಲಿವೆ. ಭೂವೈಜ್ಞಾನಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸಿಗುವ ಶಿಲೆಗಳನ್ನು ಮುಖ್ಯವಾಗಿ ಸಿಸ್ಟೋಸ್ ಮತ್ತು ಗ್ರೆನೈಟಿಕ್‌ಗಳೆಂದು ವಿಂಗಡಿಸಲಾಗಿದೆ. ಪ್ರಮುಖವಾಗಿ ಈಗ ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಕಬ್ಬಿಣ ಹಾಗೂ ಮ್ಯಾಂಗನೀಸ್ ನಿಕ್ಷೇಪಗಳು ಶಿಲೆಗಳಲ್ಲಿ ದೊರೆತರೆ ಉಳಿದವು ಗ್ರಾನೈಟಿಕ್ ಶಿಲೆಗಳಲ್ಲಿ ದೊರೆಯುತ್ತವೆ.[೮]

ಸಂಡೂರು ಸುತ್ತಮುತ್ತ ಹಾಗೂ ನಂದಿಹಳ್ಳಿಯಿಂದ ಹೊಸಪೇಟೆಯವರೆಗೆ ಸು.೪೦ ಕಿ.ಮೀ. ಉದ್ದ ಹಾಗೂ ೧೫-೨೦ ಕಿ.ಮೀ ಅಗಲವುಳ್ಳ ಹಾಗೂ ಎತ್ತರವಾದ ಪರ್ವತಗಳಲ್ಲಿ ದೊರೆಯುವ ಐರನ್ ಫಾರ್ಮೇಶನ್ ಎಂಬ ಕಲ್ಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಅದಿರು ಹೆಮಟೈಟು ರೂಪದಲ್ಲಿದ್ದು ಉತ್ತಮ ದರ್ಜೆಗೆ ಸೇರಿದ ಅದಿರಾಗಿದೆ. ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳು ಮ್ಯಾಂಗನೀಸ್ ಫೇರಸ್ ಫಿಲೈಟ್ ಎಂಬ ಕಲ್ಲುಗಳಲ್ಲಿ ದೊರೆಯುತ್ತವೆ. ಈ ನಿಕ್ಷೇಪಗಳು ದೇವಗಿರಿ, ಸುಬ್ರಾಯನಹಳ್ಳಿ ಮತ್ತು ರಾಮಘಡ ವ್ಯಾಪ್ತಿಗೆ ಸೇರಿರುತ್ತದೆ. ಈ ಅದಿರಿನ ವಿಶೇಷ ಗುಣ ಎಂದರೆ ನಿಗದಿತ ಅಂಶಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಂಜಕ ಹಾಗೂ ಗಂಧಕಗಳನ್ನು ಹೊಂದಿರುವುದು. ಈ ಗುಣಕ್ಕಾಗಿಯೇ ಜಗತ್ತಿನ ಮ್ಯಾಂಗನೀಸ್ ಅದಿರಿನ ಮಾರುಕಟ್ಟೆಯಲ್ಲಿ ಸಂಡೂರಿನ ಮ್ಯಾಂಗನೀಸ್ ಅದಿರಿಗೆ ವಿಶೇಷ ಬೇಡಿಕೆ ಇದೆ.[೯]

ಮುಖ್ಯವಾಗಿ ಸಂಡೂರಿನ ಬೆಟ್ಟಗಳು ಶ್ರೀಮಂತ ಸಂಪನ್ಮೂಲ ಕೇಂದ್ರಗಳು. ಕಣಿವೆ, ಕಂದರಗಳ ಮಧ್ಯೆಯೂ ಈ ನಗರ ತನ್ನ ಸುತ್ತಮುತ್ತಲೂ ಕಪ್ಪು ಬಂಗಾರದ ನಿಕ್ಷೇಪವನ್ನೇ ಹೊಂದಿದೆ. ೩,೨೦೦ ರಿಂದ ೩,೬೦೦ ಅಡಿಗಳೆತ್ತರದವರೆಗಿನ ಈ ನಿಧಿಗರ್ಭದ ಬೆಟ್ಟಗಳು ಸಂಡೂರನ್ನು ಆವರಿಸಿಕೊಂಡಿವೆ. ಪ್ರಮುಖವಾಗಿ ೩,೪೨೧ (ಸಮುದ್ರ ಮಟ್ಟದಿಂದ) ಅಡಿ ಎತ್ತರದ ದೋಣಿಮಲೈ ಮತ್ತು ೩,೬೦೦ ಅಡಿ ಎತ್ತರದ ಕುಮಾರಸ್ವಾಮಿ ಬೆಟ್ಟಗಳು ಸಂಡೂರು ಕೇಂದ್ರದ ಎರಡು ಧ್ರುವಗಳಂತಿವೆ.

೨.೨. ಪೂರ್ವೇತಿಹಾಸ

ಕರ್ನಾಟಕದ ನೆಲವು ಪ್ರಾಕ್-ಪ್ರಾಚೀನ ಮಾನವನ ಬಹುಕಾಲದ ವಸತಿಯಾಗಿತ್ತು. ಕ್ರಿ.ಶ.೧೯ನೆಯ ಶತಮಾನದ ಕೊನೆಯ ಭಾಗದಿಂದ ಈವರೆವಿಗೆ ಕರ್ನಾಟಕದಲ್ಲಿ ಪ್ರಾಚೀನ ಶಿಲಾಯುಗ, ನೂತನ

ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಹಲವಾರು ನೆಲೆಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳ ಶೋಧ ಮತ್ತು ಉತ್ಖನನಗಳಿಂದ ದೊರೆತ ಪುರಾತತ್ವ ವಸ್ತುಗಳಿಂದ ಕರ್ನಾಟಕದಲ್ಲಿ ಜನ ವಸತಿಯು ಸುಮಾರು ೫೦ ಲಕ್ಷ ವರ್ಷಗಳ ಹಿಂದಿನಿಂದಲೂ ಇದೆ ಎಂದು ತಿಳಿದುಬರುತ್ತದೆ. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಮಾನವನ ನೆಲೆಯಾಗಿರುವ ಕರ್ನಾಟಕದಲ್ಲಿ ರಾಬರ್ಟ್ ಬ್ರೂಸ್‌ಫೂಟ್, ಕೆ.ಆರ್.ಯು. ಟಾಡ್, ಮಾರ್ಟಿಮರ್ ವ್ಹೀಲರ್ ಮುಂತಾದ ಪಾಶ್ಚಾತ್ಯ ಸಂಶೋಧಕರು ಮತ್ತು ಸಂಪತ್ ಅಯ್ಯಂಗಾರ್, ಡಾ.ಎಂ.ಎಚ್.ಕೃಷ್ಣ, ಡಾ.ಅ.ಸುಂದರ ಮುಂತಾದ ಭಾರತೀಯ ಸಂಶೋಧಕರು ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆ ಹಚ್ಚಿ ಉತ್ಖನನ ಮಾಡಿ, ಅನೇಕ ಹೊಸ ವಿಷಯಗಳನ್ನು ಬೆಳಕಿಗೆ ತಂದಿರುವುದೇ ಅಲ್ಲದೆ, ಇನ್ನೂ ಅನೇಕ ಪ್ರಾಗೈತಿಹಾಸಿಕ ನೆಲೆಗಳಿರುವ ಸುಳಿವು ನೀಡಿದ್ದಾರೆ.[೧೦]

ಇತಿಹಾಸ ಪೂರ್ವಕಾಲದಲ್ಲಿ ಸಂಡೂರು ಸುತ್ತಮುತ್ತಲಿನ ಪ್ರದೇಶಗಳಾದ ಕೊಪ್ಪಳ, ಕುರುಗೋಡು, ಕಲ್ಕಂಬ, ತೆಕ್ಕಲಕೋಟೆ, ಸಂಗನಕಲ್ಲು, ಕಪ್ಪಗಲ್ಲು, ತೋರಣಗಲ್ಲು, ರಾಂಪುರ, ಅಶೋಕನ ಸಿದ್ಧಾಪುರ, ಜಟಿಂಗರಾಮೇಶ್ವರ, ಮೊಣಕಾಲ್ಮೂರು, ಗುಡೆಕೋಟೆಗಳು ಆದಿ ಮಾನವನ ನಿವಾಸಗಳಾಗಿದ್ದವು. ಹಾಗೂ ಸಿಡೇಗಲ್ಲು, ವಿಭೂತಿಗುಡ್ಡ, ತೋರಣಗಲ್ಲುಗಳು ಕಬ್ಬಿಣಯುಗದ ತಾಣಗಳಾಗಿವೆ.[೧೧]

ಪೂರ್ವ ಶಿಲಾಯುಗ (Palaeolithic Age)

ಪೂರ್ವ ಶಿಲಾಯುಗದ ಕಾಲದಲ್ಲಿ ಮಾನವ ನಾವಿನ್ಯ ರಹಿತ ಶಿಲಾಯುಧಗಳನ್ನು ಬಳಸುತ್ತಿದ್ದನು. ಅಲ್ಲದೆ ಪ್ರಕೃತಿಯಲ್ಲಿ ಆಹಾರವನ್ನು ಯಾವ ರೀತಿ ಪಡೆಯುತ್ತಿದ್ದನೋ ಅದೇ ರೀತಿ ಬಳಸುತ್ತಿದ್ದನೇ ವಿನಃ ಅದನ್ನು ತನ್ನ ಅವಶ್ಯಕತೆಗೆ ತಕ್ಕಂತೆ ಸಿದ್ಧಪಡಿಸಿಕೊಳ್ಳುತ್ತಿರಲಿಲ್ಲ. ಪ್ರಾಣಿಗಳ ಚರ್ಮ ಅಥವಾ ತೊಗಟೆಯನ್ನು ಉಡುಪನ್ನಾಗಿ ಮಾಡಿಕೊಂಡಿದ್ದನು. ಹೆಚ್ಚು-ಕಡಿಮೆ ಅವನ ಜೀವನ ಪ್ರಾಣಿಗಳ ರೀತಿಯಲ್ಲಿತ್ತು.[೧೨]

ಕರ್ನಾಟಕದಲ್ಲಿ ಆದಿ ಹಳೆಯ ಶಿಲಾಯುಗ ಕಾಲದಿಂದಲೂ ಮಾನವನ ಚಟುವಟಿಕೆಗಳನ್ನು ಗುರುತಿಸಲಾಗಿದೆ. ಅದರಲ್ಲೂ ಬಳ್ಳಾರಿ ಜಿಲ್ಲೆಯು ಆಗಿನ ಮದ್ರಾಸ್ ಪ್ರಾಂತ್ಯದ ಇತರೆ ಜಿಲ್ಲೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳನ್ನು ಮತ್ತು ಅವಶೇಷಗಳನ್ನು ಹೊಂದಿದೆ ಎಂದು ೧೯೦೮ರ ಭಾರತದ ಇಂಪೀರಿಯಲ್ ಗೆಜೆಟಿಯರ್ ತಿಳಿಸುತ್ತದೆ. ರಾಬರ್ಟ್ ಬ್ರೂಸ್‌ಫೂಟ್‌ನು ಈ ಜಿಲ್ಲೆಯ ಪ್ರಮುಖ ಪ್ರಾಗೈತಿಹಾಸಿಕ ನೆಲೆಗಳನ್ನು ಸರ್ವೇಕ್ಷಣೆ ಮಾಡಿದ್ದಾನೆ. ಈತ ಸುಮಾರು ೭೭ ನೆಲೆಗಳನ್ನು ಗುರುತಿಸಿ ಅವುಗಳಲ್ಲಿ ೩೬ ನೆಲೆಗಳು ಪ್ರಮುಖವಾಗಿವೆ ಎಂದು ತಿಳಿಸುತ್ತಾನೆ.[೧೩]

ಸಂಡೂರು ತಾಲ್ಲೂಕಿನ ದರೋಜಿ, ಜೋಗ, ಕುರೆಕುಪ್ಪೆ ಬೆಟ್ಟಗಳು ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿದ್ದವೆಂದು ಮತ್ತು ಈ ಸಂಸ್ಕೃತಿಗೆ ಸಂಬಂಧಿಸಿದ ಶಿಲಾಯುಧ ಅವಶೇಷಗಳು

ಪತ್ತೆಯಾಗಿರುವವೆಂದು ತಿಳಿದುಬರುತ್ತದೆ. ಇದೇ ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ಈ ಸಂಸ್ಕೃತಿಯ ಕೈಗೊಡಲಿಯ ಉಪಕರಣ ದೊರತಿದೆ.[೧೪] ಆದಿ ಹಳೆಯ ಶಿಲಾಯುಗದ ಉಪಕರಣಗಳು ಹೆಚ್ಚಾಗಿ ಅಶ್ಯೂಲ್ ಮಾದರಿಯಲ್ಲಿವೆ. ಇವು ಕೈಗೊಡಲಿ, ಸೀಳುಗತ್ತಿ, ಮಚ್ಚುಗತ್ತಿ, ಕೊರೆಗ ದುಂಡಾದ ಚಪ್ಪಟೆ ಉಪಕರಣ ಮೊದಲಾದವುಗಳಾಗಿವೆ. ಇವುಗಳಲ್ಲಿ ಅತ್ಯಂತ ವೈಶಿಷ್ಟ್ಯ ಪೂರ್ಣವಾದ ಉಪಕರಣವೆಂದರೆ ಕೈಗೊಡಲಿ.[೧೫]

ಈ ಶಿಲಾಯುಧ ಅವಶೇಷಗಳನ್ನು ಬೆಣಚು ಮತ್ತು ಹಿಮಟೈಟ್ ಶಿಲೆಗಳಿಂದ ಮಾಡಲಾಗಿದೆ.[೧೬] ಈ ತಾಲ್ಲೂಕಿನ ಮೇಲ್ಕಂಡ ಗ್ರಾಮಗಳು ಈ ಸಂಸ್ಕೃತಿಯ ನೆಲೆಗಳಾಗಿದ್ದವೆಂದು ಮತ್ತು ಈ ಸಂಸ್ಕೃತಿಯ ಅವಶೇಷಗಳು ಹಾಗೂ ಉಪಕರಣಗಳು ಈ ಪ್ರದೇಶದಲ್ಲಿ ದೊರೆತಿರುವುದರಿಂದ ಮತ್ತು ಈ ಪ್ರದೇಶವು ದಟ್ಟವಾದ ಕಾಡು ಹಾಗೂ ಉತ್ತಮವಾದ ನೆಲ-ಜಲವನ್ನು ಹೊಂದಿದ್ದು ಮಾನವನು ವಾಸಿಸಲು ಯೋಗ್ಯವಾದ ಪ್ರದೇಶವಾಗಿದ್ದರಿಂದ ಈ ಪರಿಸರದಲ್ಲಿ ಹಳೆಯ ಶಿಲಾಯುಗದ ಕಾಲದಿಂದಲೂ ಮಾನವನ ಅಸ್ತಿತ್ವವಿತ್ತೆಂದು ಸ್ಪಷ್ಟವಾಗುತ್ತದೆ.

ಮಧ್ಯ ಶಿಲಾಯುಗ (mesolithic Age)

ಹಳೆಯ ಶಿಲಾಯುಗವನ್ನು ಸೂಕ್ಷ್ಮ ಶಿಲಾಯುಗ ಹಿಂಬಾಲಿಸಿತು. ಈ ಯುಗದಲ್ಲಿ ತಯಾರಿಸಲ್ಪಟ್ಟ ಆಯುಧಗಳು ಆಕಾರದಲ್ಲಿ ಬಹಳಷ್ಟು ಚಿಕ್ಕವಾಗಿವೆ. ಉದಾಹರಣೆಗೆ ಕೆಲವು ಆಯುಧಗಳು ೫.ಮಿ.ಮೀ.ನಿಂದ ೫.ಸೆಂ.ಮೀ ಉದ್ದ ಹಾಗೂ ೩.ಮಿ.ಮೀ.ನಿಂದ ೭.ಸೆಂ.ಮೀ.ವರೆಗೆ ಅಗಲವಾಗಿವೆ. ಆದ್ದರಿಂದ ಮಧ್ಯ ಶಿಲಾಯುಗವನ್ನು ಸೂಕ್ಷ್ಮ ಶಿಲಾಯುಗವೆಂದು ಕರೆಯಲಾಗಿದೆ.[೧೭]

ಈ ತಾಲ್ಲೂಕಿನ ಕುರೆಕುಪ್ಪೆ ಬೆಟ್ಟ, ಕೋಡಾಳು, ರಾಜಾಪುರ, ತೋರಣಗಲ್ಲು, ಮಲ್ಲಾಪುರ ಗ್ರಾಮಗಳು ಸೂಕ್ಷ್ಮ ಶಿಲಾಯುಗದ ನೆಲೆಗಳಾಗಿದ್ದವೆಂದು ಮತ್ತು ಅಪ್ಪಲಾಪುರದಲ್ಲಿ ಈ ಸಂಸ್ಕೃತಿಯ ಕೆಲವು ಸೂಕ್ಷ್ಮ ಶಿಲೋಪಕರಣಗಳು ದೊರೆತಿವೆ ಎಂದು ತಿಳಿದುಬರುವುದು ಅಲ್ಲದೆ ಅಯ್ಯನಹಳ್ಳಿ ರಾಂಪುರ(ಕೆರೆ)ದಲ್ಲಿಯೂ ಈ ಸಂಸ್ಕೃತಿಯ ವಿವಿಧ ಮಾದರಿಯ ಉಪಕರಣಗಳು ದೊರೆತಿವೆ. ಮೇದರ ಹಳ್ಳಿಯಲ್ಲಿಯೂ ಈ ಸಂಸ್ಕೃತಿಯ ಕೆಲವು ಉಪಕರಣಗಳು ದೊರೆತಿದ್ದು ಅವು ನೀಳಗೆರೆಗಳುಳ್ಳ ಮೂಲ ಶಿಲಾಗಟ್ಟಿಗಳು ಚರ್ಟ್ ಶಿಲೆಯಲ್ಲಿ ದೊರೆತಿವೆ. ಯಶವಂತನಗರದಲ್ಲಿ ಈ ಸಂಸ್ಕೃತಿಯ ಉಪಕರಣಗಳು ಅಲ್ಲಲ್ಲಿ ದೊರೆತಿವೆ. ಆದರೆ ಇದು ಈ ಸಂಸ್ಕೃತಿಯ ನಿರ್ದಿಷ್ಟ ನೆಲೆಯಾಗಿದ್ದಿಲ್ಲವೆಂದು ತಿಳಿದುಬರುತ್ತದೆ.[೧೮] ಈ ಸೂಕ್ಷ್ಮ ಶಿಲಾಯುಧಗಳನ್ನು ಚರ್ಟ್, ಜಾಸ್ಪರ್, ಅಗೇಟ್ ಚಾಲ್ಸಿಡನಿ, ಕ್ರಿಸ್ಟಲ್ ಮುಂತಾದ ಅರೆ ಪ್ರಶಸ್ತ ಶಿಲೆಗಳಿಂದ ಹರಿತವಾದ ಅಲಗುಗಳು ಮತ್ತು ಅರ್ಧ ಚಂದ್ರಾಕೃತಿಯ ಹೆರೆಯುವ ಹಾಗೂ ಕೊರೆಯುವ ಮೊನೆಯುಳ್ಳ ಆಯುಧಗಳನ್ನು ಗಾತ್ರದಲ್ಲಿ ಸೂಕ್ಷ್ಮವಾಗಿಯೂ ಮತ್ತು ಹರಿತವಾಗಿಯೂ

ಮಾಡುತ್ತಿದ್ದರು. ಈ ಕಾಲದಲ್ಲಿ ಮಾನವನು ಮೀನುಗಾರಿಕೆಯನ್ನು ಮತ್ತು ಬೇಟೆಯನ್ನು ಪ್ರಮುಖ ವೃತ್ತಿಯನ್ನಾಗಿ ಮಾಡಿಕೊಂಡಿದ್ದನು.[೧೯]

ನವ ಶಿಲಾಯುಗ (Neolithic Age)

ಮಾನವ ಆಯುಧೋಪಕರಣಗಳನ್ನು ಉಜ್ಜಿ ನಯಗೊಳಿಸಿ ಅದರ ಸೌಂದರ್ಯವನ್ನು ವೃದ್ಧಿಸಿದನು. ಅಲ್ಲದೆ ಹೆಚ್ಚು ಉಪಯೋಗವಾಗುವಂತೆ ಮಾಡಿಕೊಂಡು ಉಪಯೋಗಿಸಲು ಆರಂಭಿಸಿದ್ದರಿಂದ ಈ ಯುಗವನ್ನು ನವ ಶಿಲಾಯುಗವೆಂದು ಕರೆಯಲಾಗಿದೆ. ಈ ಹಂತದಲ್ಲಿ ಮಾನವನು ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ನೆಲೆಸಿ ಬೇಸಾಯ ಹಾಗೂ ಪಶುಪಾಲನೆಯನ್ನು ಆರಂಭಿಸಿ, ಆಹಾರ ಉತ್ಪಾದನೆಯಲ್ಲಿ ತೊಡಗಿ, ನಿಸರ್ಗವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ಕಾಣುತ್ತೇವೆ.[೨೦]

ಈ ತಾಲ್ಲೂಕಿನ ಕುರೆಕುಪ್ಪೆ ಬೆಟ್ಟ, ಇಂಗಳ್ಗಿ, ಲಿಂಗದಹಳ್ಳಿ ಗ್ರಾಮಗಳಲ್ಲಿ ನೂತನ ಶಿಲಾಯುಗದ ಬೂದಿ ದಿಬ್ಬಗಳು ದೊರೆತಿವೆ. ತೋರಣಗಲ್ಲಿನಲ್ಲಿಯೂ ಈ ಸಂಸ್ಕೃತಿಯ ಮಡಕೆಯ ಭಾಗಗಳು ಬೂದಿಯಲ್ಲಿ ದೊರೆತಿದ್ದು ಬೂದಿದಿಬ್ಬಗಳು ಹಾಳಾಗಿವೆ. ದರೋಜಿಯಲ್ಲಿ ಈ ಸಂಸ್ಕೃತಿಯ ಉಜ್ಜಿ ನಯಗೊಳಿಸಿದ ಶಿಲೋಪಕರಣ ಮತ್ತು ನೀಳ ಚಕ್ಕೆಯ ಉಪಕರಣಗಳು ದೊರೆತಿವೆ. ರಾಜಾಪುರದಲ್ಲಿಯೂ ಈ ಸಂಸ್ಕೃತಿಯ ಉಜ್ಜಿನಯಗೊಳಿಸಿರುವ ಕೊಡಲಿಯ ತುಂಡೊಂದು ದೊರೆತಿದ್ದು ಮಡಕೆಯ ಭಾಗ ದೊರೆತಿದೆ. ಹಾಗೂ ಬಂಡೆಯ ಚಿತ್ರಗಳು ದೊರೆತಿವೆ.[೨೧]

ತಾಮ್ರ ಶಿಲಾಯುಗ (Chalcolithic Age)

ನೂತನ ಶಿಲಾಯುಗ ಸಂಸ್ಕೃತಿಯ ನಂತರ ವಿಕಾಸಗೊಂಡ ಹಂತ ಶಿಲಾ ತಾಮ್ರಯುಗ. ಮಾನವನು ಕಲ್ಲಿಗೆ ಬದಲಿಯಾಗಿ ತಾಮ್ರವನ್ನು ಆಯುಧೋಪಕರಣಗಳನ್ನು ಮಾಡಲು ಬಳಸಲಾರಂಭಿಸಿದ್ದರಿಂದ ಈ ಕಾಲವನ್ನು ತಾಮ್ರ ಶಿಲಾಯುಗವೆಂದು ಕರೆಯಲಾಗಿದೆ.[೨೨] ಸಂಡೂರು ತಾಲ್ಲೂಕಿನ ಲಕ್ಷ್ಮೀಪುರವು ಶಿಲಾ ತಾಮ್ರಯುಗದ ನೆಲೆಯಾಗಿದ್ದು, ದರೋಜಿಯಲ್ಲಿ ಈ ಸಂಸ್ಕೃತಿಯ ಬೂದಿದಿಬ್ಬ ದೊರೆತಿದೆ. ಬೈರನಾಯಕನ ಹಳ್ಳಿ, ರಾಜಾಪುರದಲ್ಲಿಯೂ ಈ ಸಂಸ್ಕೃತಿಯ ಗೀರು ಚಿತ್ರಗಳು ದೊರೆತಿವೆ.[೨೩] ಈ ಪ್ರದೇಶವು ಶಿಲಾ-ತಾಮ್ರಯುಗದ ನೆಲೆಯಾಗಿದ್ದರೂ ಈ ತಾಲ್ಲೂಕಿನ ಯಾವುದೇ ಪ್ರದೇಶಗಳಲ್ಲಿ ತಾಮ್ರದ ಆಯುಧಗಳು ಇದುವರೆಗೂ ದೊರಕಿಲ್ಲ.

ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ (Megalithic Age)

ಶಿಲಾ-ತಾಮ್ರಯುಗದ ಸಂಸ್ಕೃತಿಯ ನಂತರ ಈ ಪ್ರದೇಶದಲ್ಲಿ ಕಬ್ಬಿಣಯುಗ ಅಥವಾ ಬೃಹತ್ -ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬರುತ್ತವೆ. ಈ ಕಾಲದಲ್ಲಿ ಮಾನವನು ಮೊದಲ ಬಾರಿಗೆ

ಕಬ್ಬಿಣದ ಉಪಯೋಗವನ್ನು ಕಂಡುಕೊಳ್ಳುತ್ತಾನೆ. ಕಬ್ಬಿಣದ ಆಯುಧಗಳನ್ನು ಹಾಗೂ ಸಮಾಧಿಗಳ ರಚನೆಗೆ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿರುವುದರಿಂದ ಈ ಕಾಲದ ಸಂಸ್ಕೃತಿಯನ್ನು ಕಬ್ಬಿಣದ ಯುಗ ಅಥವಾ ಬೃಹತ್ ಶಿಲಾಸಂಸ್ಕೃತಿ ಎಂದು ಕರೆಯಲಾಯಿತು.[೨೪]

ಈ ತಾಲ್ಲೂಕಿನ ಮಲ್ಲಾಪುರ ಗ್ರಾಮವು ಈ ಸಂಸ್ಕೃತಿಯ ಗೋರಿಯ ನೆಲೆಯಾಗಿದ್ದು, ಕಂಡಿ ಕೋಣೆ ಗೋರಿಗಳು ದೊರಕಿವೆ. ಹಾಗೂ ರಾಜಾಪುರ, ಬೈರನಾಯಕನಹಳ್ಳಿಗಳೂ ಸಹ ಈ ಸಂಸ್ಕೃತಿಯ ನೆಲೆಗಳಾಗಿದ್ದು, ಗೀರು ಚಿತ್ರಗಳು ದೊರೆತಿವೆ.[೨೫] ಈ ಸಂಸ್ಕೃತಿಯ ಜನರು ದೊಡ್ಡ ದೊಡ್ಡ ಕಲ್ಲು ಗುಂಡುಗಳನ್ನು ಚಪ್ಪಡಿಗಳನ್ನೂ ನಿರ್ದಿಷ್ಟ ಸ್ಥಳಕ್ಕೆ ಸಾಗಿಸಿ ನಿರ್ಮಾಣ ಕುಶಲತೆಗೆ ಏನು ಕಡಿಮೆಯಿಲ್ಲದ ವಿವಿಧ ಪ್ರಕಾರಗಳ ಕಲ್ಗೋರಿಗಳನ್ನು ಕಟ್ಟಿದ್ದರೂ ಕೂಡ ಅವರ ವಾಸದ ಮನೆಗಳ ನಿರ್ಮಿತಿಯ ಬಗ್ಗೆ ಕುರುಹುಗಳು ಸಿಕ್ಕಿಲ್ಲವೆಂದೇ ಹೇಳಬಹುದು.[೨೬]

ಕರ್ನಾಟಕದಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಶಿಲಾ-ಸಮಾಧಿಗಳು ಕಂಡುಬರುತ್ತವೆ. ಅವುಗಳಲ್ಲಿ ಶಿಲಾವರ್ತುಲಗಳು, ಒರಟು ಕಲ್ಲು ಬಂಡೆಗಳಿಂದ ನಿರ್ಮಿತವಾದ ಶಿಲಾ ತೊಟ್ಟಿಗಳು, ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದ ಶಿಲಾ ತೊಟ್ಟಿಗಳು, ಸಮಾಧಿ ಗುಂಡುಗಳು ಮುಖ್ಯವಾಗಿವೆ. ಇವುಗಳಲ್ಲಿ ಮೃತರ ಅವಶೇಷಗಳು, ಮಡಿಕೆಗಳು, ಆಹಾರ ಪದಾರ್ಥಗಳು ಮತ್ತು ಅವರು ಉಪಯೋಗಿಸುತ್ತಿದ್ದ ಕಬ್ಬಿಣದ ಆಯುಧೋಪಕರಣಗಳನ್ನು ಇಟ್ಟು ಸಮಾಧಿ ಮಾಡುತ್ತಿದ್ದರು. ಈ ಜನರು ಕಪ್ಪು ಮತ್ತು ಕೆಂಪು ಮಡಿಕೆಗಳನ್ನು ಕಬ್ಬಿಣದ ಆಯುಧಗಳನ್ನು ಬಳಸುತ್ತ ಸತ್ತವರನ್ನು ವಿಶಿಷ್ಟ ರೀತಿಯ ಸಮಾಧಿಗಳಲ್ಲಿ ಹೂಳುತ್ತಿದ್ದರಿಂದ ಪ್ರಾಕ್ತನ ಶಾಸ್ತ್ರಜ್ಞರು ಇವರ ಸಂಸ್ಕೃತಿಯನ್ನು ಬೃಹತ್-ಶಿಲಾ ಸಮಾಧಿ ಸಂಸ್ಕೃತಿ ಎಂದು ಕರೆದಿದ್ದಾರೆ. ಕಪ್ಪು ಮತ್ತು ಕೆಂಪು ಮಡಿಕೆಗಳು ಹಾಗೂ ಕಬ್ಬಿಣದ ವಸ್ತುಗಳನ್ನು ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳೆಂದು ಪರಿಗಣಿಸಲಾಗಿದೆ.[೨೭]

ಸಂಡೂರು ಪರಿಸರದ ಸಿಡೇಗಲ್ಲು, ವಿಭೂತಿಗುಡ್ಡ, ತೋರಣಗಲ್ಲು ಮತ್ತು ಬ್ರಹ್ಮಗಿರಿಯಲ್ಲಿ ನಡೆದ ಉತ್ಖನನದಲ್ಲಿ ಕಲ್ಗೋರಿಗಳು ಪತ್ತೆಯಾಗಿದ್ದು, ಅದರ ಜೊತೆಯಲ್ಲಿ ಈಟಿ, ಭರ್ಜಿ, ಕತ್ತಿ, ಬಾಣದ ಮೊನೆಗಳು ಅಪಾರ ಸಂಖ್ಯೆಯಲ್ಲಿ ದೊರೆತಿವೆ. ಈ ಭಾಗವು ಪ್ರಾಕ್ ಶಾಸ್ತ್ರಜ್ಞರ ಪ್ರಕಾರ ಬೃಹತ್ ಶಿಲಾಯುಗದ ಅಂದರೆ ಲೋಹಯುಗದ ಸಂಸ್ಕೃತಿಯ ತಾಣವಾಗಿತ್ತು. ಈ ಲೋಹ ಸಂಸ್ಕೃತಿಯು ಕ್ರಿ.ಪೂ.೧೨೦೦ ರಿಂದ ೨೦೦ ರವರೆಗೆ ಅಸ್ತಿತ್ವದಲ್ಲಿತ್ತು ಎಂಬುದು ಸಂಶೋಧಕರ ಅನಿಸಿಕೆ. ಅದರಲ್ಲೂ ಮುಖ್ಯವಾಗಿ ಸಂಡೂರಿನ ಕಾರ್ತಿಕೇಯ ವನ (ಕುಮಾರಸ್ವಾಮಿ ಬೆಟ್ಟ) ದ ಪರಿಸರವು ಕ್ರಿ.ಪೂ.೯೦೦ ರಿಂದ ೫೦೦ ರ ಅವಧಿಯಲ್ಲಿ ಕಬ್ಬಿಣದ ಕಾರ್ಯಾಗಾರಕ್ಕೆ ಪ್ರಸಿದ್ಧಿಯನ್ನು ಪಡೆದಿತ್ತು. ಈ ಅವಧಿಯಲ್ಲಿ ದೊರೆತ ಕಬ್ಬಿಣದ ಉಪಕರಣಗಳನ್ನು ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಿ ಅದರಿಂದ ತಿಳಿದುಬಂದ

ಸಂಗತಿಯಿಂದ ಈ ಉಪಕರಣಗಳು ಈ ಪ್ರದೇಶದ ಕಬ್ಬಿಣದ ಅದಿರನ್ನು ಸಂಗ್ರಹಿಸಿ ಮತ್ತು ಸಂಸ್ಕರಿಸಿ ಮಾಡಿದ ಕಬ್ಬಿಣದ ಲೋಹದಿಂದ ಮಾಡಿದವುಗಳಾಗಿವೆ ಎಂಬ ಸತ್ಯಾಂಶವನ್ನು ಶೋಧಕರು ಶೋಧಿಸಿದ್ದಾರೆ. ಈ ಅವಧಿಯಲ್ಲಿ ನೆಲಸಿದ್ದ ಜನವಸತಿಯಲ್ಲಿ ಒಂದು ಗುಂಪಿನವರು ಕುಮಾರಸ್ವಾಮಿಯ ಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪವನ್ನು ಗುರುತಿಸಿ ಮತ್ತು ಸಂಗ್ರಹಿಸಿ ಈ ಲೋಹದ ನಾನಾ ಪ್ರಕಾರದ ಉಪಕರಣಗಳನ್ನು ಮತ್ತು ಶಸ್ತ್ರಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರಾಗಿದ್ದರೆಂದು ಹೇಳಲು ದೊರೆತ ವರ್ಣಚಿತ್ರಗಳು ಸಾಕ್ಷಿಯಾಗಿವೆ.[೨೮]

ಇತಿಹಾಸ ಆರಂಭಯುಗ

ಬೃಹತ್ ಶಿಲಾಯುಗ ಸಂಸ್ಕೃತಿಯ ನಂತರ ಈ ಪ್ರದೇಶದಲ್ಲಿ ಇತಿಹಾಸ ಆರಂಭಯುಗದ ಅವಶೇಷಗಳು ಕಂಡುಬರುತ್ತವೆ. ಮಾನವನು ಜೀವನದ ವಿವಿಧ ಸಂಸ್ಕೃತಿಗಳ ಹಂತದಿಂದ ಲಿಪಿಯ ಬಳಕೆಗೆ ಬಂದ ಹಂತವನ್ನು ಇತಿಹಾಸ ಆರಂಭಯುಗವೆಂದು ಗುರುತಿಸಬಹುದಾಗಿದೆ.[೨೯] ಸಂಡೂರು ತಾಲ್ಲೂಕಿನ ಕಾರ್ತಿಕೇಯ ಕ್ಷೇತ್ರದ ಜೋಗಿಕೊಳ್ಳದಲ್ಲಿ ಇತಿಹಾಸ ಆರಂಭಯುಗದ ಇಟ್ಟಿಗೆ ಕಟ್ಟಡದ ಅವಶೇಷಗಳು ದೊರೆತಿವೆ.[೩೦] ಇವು ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ದೇವಾಲಯದ ಅವಶೇಷಗಳು ಮತ್ತು ಕಲ್ಲಿನ ಕಂಬಗಳಾಗಿದ್ದು, ಇತ್ತೀಚೆಗೆ ಕಂಡುಬಂದಿವೆ. ಇಲ್ಲಿ ದೊರೆತ ಇಟ್ಟಿಗೆಗಳು ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ ಇಟ್ಟಿಗೆಗಳನ್ನು ಹೋಲುತ್ತವೆ. ಇವುಗಳ ಅಳತೆ ಒಂದು ಅಡಿ ಎಂಟೂವರೆ ಇಂಚು ಉದ್ದ ಎಂಟೂವರೆ ಇಂಚು ಅಗಲ ಹಾಗೂ ನಾಲ್ಕು ಇಂಚು ದಪ್ಪವಾಗಿವೆ. ಇಲ್ಲಿ ನಿರ್ಮಿಸಲ್ಪಟ್ಟಿದ್ದ ದೇವಾಲಯ ಕ್ರಿ.ಶ.೧-೨ನೇ ಶತಮಾನಕ್ಕೆ ಸಂಬಂಧಪಟ್ಟಿರಬೇಕು. ಈ ಅವಶೇಷಗಳ ಅಡಿಯಲ್ಲಿ ಕಲ್ಲಿನಿಂದ ಕೆತ್ತಲ್ಪಟ್ಟ ಸ್ತ್ರೀ ದೇವತೆಯ ವಿಗ್ರಹ ದೊರೆತಿದೆ.[೩೧] ಹಾಗೂ ಜೋಗದ ಗುಡ್ಡದಲ್ಲಿ ಶಿಲಾಯುಗದ ಮಾನವ ಬದುಕಿದ ಬಗ್ಗೆ ಕುರುಹುಗಳು ದೊರಕಿವೆ. ಇಲ್ಲಿ ಮೂಲತಃ ವಾಸವಾಗಿದ್ದ ಜನರು "ದ್ರಾವಿಡ ಜನಾಂಗದವರು". ವೇದ ಕಾಲದಲ್ಲಿ ಬಳಕೆಯಿದ್ದ "ಶಿಶ್ನಾರಾಧನೆ"ಯನ್ನು ನಡೆಸುತ್ತಿದ್ದ ಜನರು ಇಲ್ಲಿ ವಾಸವಾಗಿದ್ದರು. ಶಿಶ್ನಾರಾಧನೆಯ ನಂತರದ ಹಂತದ ಊರ್ಧ್ವಮುಖ ಯೋನಿಪೀಠ ರಹಿತ ಲಿಂಗಗಳು ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿವೆ. ಇವು ಯೋನಿ ಪೀಠಯುಕ್ತ ಲಿಂಗಗಳಿಗಿಂತಲೂ ಪ್ರಾಚೀನ.[೩೨] ಹಾಗೂ ತೋರಣಗಲ್ಲಿನಲ್ಲಿಯೂ ಈ ಹಂತದ ಮಡಕೆ ಭಾಗಗಳು ಬೂದಿಯಲ್ಲಿ ದೊರೆತಿವೆ.[೩೩]

ಸಂಡೂರಿನ ಇತಿಹಾಸವು ಶಿಲಾಯುಗದ ಮಾನವನಿಂದ ಪ್ರಾರಂಭವಾಗಿತ್ತು ಎಂಬುದಕ್ಕೆ ಇಲ್ಲಿ ದೊರೆತ ಇತಿಹಾಸ ಪೂರ್ವ ಕಾಲದ ಅವಶೇಷಗಳೇ ಆಧಾರವಾಗಿವೆ. ಹಾಗೂ ಶಿಲಾಯುಗದ ಮಾನವನಿಗೆ ಬೇಕಾಗುತ್ತಿದ್ದ ಕುಡಿಯುವ ನೀರು, ದಟ್ಟವಾದ ಅರಣ್ಯ, ಬೇಟೆಯಾಡಲು ಪ್ರಾಣಿಗಳು ಯಥೇಚ್ಛವಾಗಿ ಸಿಗುತ್ತಿದ್ದರಿಂದ ಶಿಲಾಯುಗದ ಮಾನವ ಇಲ್ಲಿ ವಾಸಿಸುತ್ತಿದ್ದ ಎಂದು ಈ ಎಲ್ಲಾ ಹಿನ್ನೆಲೆಯಿಂದ

ಸಂಡೂರಿನ ಪರಿಸರವು ಇತಿಹಾಸ ಪೂರ್ವ ಕಾಲದ ಮಾನವನ ನೆಲೆಯಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.

೨.೩. ಇತಿಹಾಸ

ಈ ಅಧ್ಯಯನದಲ್ಲಿ ಸಂಡೂರು ತಾಲ್ಲೂಕಿನ ಪ್ರಾದೇಶಿಕ (ಸ್ಥಳೀಯ) ಇತಿಹಾಸವನ್ನು ವಿವಿಧ ಆಕರಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಸ್ಥಳೀಯ ಇತಿಹಾಸವು ಚರಿತ್ರೆಯ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಶಾಸ್ತ್ರದ ಬೆಳವಣಿಗೆಯ ಪರಿಣಾಮವಾಗಿ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟಿದ್ದ ಸ್ಥಳೀಯ ಇತಿಹಾಸಕ್ಕೆ ಇಂದಿನ ದಿನಗಳಲ್ಲಿ ಹೆಚ್ಚಿನ ಮಹತ್ವ ದೊರಕಿದೆ. ಭಾರತೀಯ ಸಂದರ್ಭದಲ್ಲಿ ಸ್ಥಳೀಯ ಇತಿಹಾಸವನ್ನು ಮುಖ್ಯವೆಂದು ಪರಿಗಣಿಸುವುದು ಅತ್ಯವಶ್ಯಕವಾಗಿದೆ. ನಮ್ಮ ನಾಡಿನ ಇತಿಹಾಸವು ಹಲವಾರು ಪ್ರದೇಶಗಳ, ಪ್ರಾಂತಗಳ, ರಾಜ್ಯಗಳ, ಸಂಸ್ಥೆಗಳ ಹಾಗೂ ಜನಾಂಗಗಳ ಕಥೆಯಾಗಿದೆ. ವಿವಿಧ ಪ್ರದೇಶಗಳ ಜನರ ಜೀವನ ವಿಧಾನ ಭಿನ್ನ ಭಿನ್ನವಾದ ಧರ್ಮ, ಗುಂಪು, ಸಮುದಾಯಗಳು ಮತ್ತು ಇವುಗಳಿಂದ ಕೂಡಿ ನಾಡಿನ ಇತಿಹಾಸ ಬೆಳೆದಿದೆ. ಭೌಗೋಳಿಕ ವೈಲಕ್ಷಣಗಳ ಪರಿಣಾಮವಾಗಿ ಪ್ರತ್ಯೇಕವಾಗಿ ಉಳಿದ-ಬೆಳೆದ ರಾಜ್ಯಗಳ ಸಂಸ್ಕೃತಿಗೆ ರಂಗುರಂಗಿನ ಎಳೆಗಳನ್ನು ಎಚ್ಚರಿಕೆಯಿಂದ ಪೋಣಿಸಿದಾಗ ಇತಿಹಾಸದ ವರ್ಣಮಯ ಚಿತ್ರ ಮೂಡುತ್ತದೆ.[೩೪] ಈ ಹಿನ್ನೆಲೆಯಲ್ಲಿ ಸಂಡೂರು ತಾಲ್ಲೂಕಿನ ವಿವಿಧ ಪ್ರದೇಶಗಳ ವೈವಿಧ್ಯ ಪೂರ್ಣವಾದ ಆಕರಗಳನ್ನು ಸಂಗ್ರಹಿಸಿ ಈ ಸ್ಥಳೀಯ ಇತಿಹಾಸದ ಸ್ಪಷ್ಟ ಚಿತ್ರಣವನ್ನು ನೀಡುವ ಪ್ರಯತ್ನ ಇದಾಗಿದೆ.

ಈ ಪ್ರದೇಶವು ಇತಿಹಾಸ ಪೂರ್ವಕಾಲ ಮತ್ತು ಪುರಾಣಗಳ ಕಾಲದಿಂದಲೂ ತನ್ನದೇ ಆದ ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಹಾಗೂ ಈ ಪ್ರದೇಶದ ಸುತ್ತಮುತ್ತಲಿರುವ ಗ್ರಾಮಗಳಿಗೆ, ಕ್ಷೇತ್ರಗಳಿಗೆ ಮತ್ತು ಕೊಳ್ಳಗಳಿಗೆ, ತೀರ್ಥಗಳಿಗೆ ತಮ್ಮದೇ ಆದ ಪೌರಾಣಿಕ ಹಿನ್ನೆಲೆಗಳಿವೆ.

'ಸಂಡೂರು' ಸ್ಥಳನಾಮದ ಉತ್ಪತ್ತಿಯನ್ನು ಕುರಿತು ಹಲವಾರು ಅಭಿಪ್ರಾಯಗಳನ್ನು ಕಾಣುತ್ತೇವೆ. ಸ್ಕಂದಪುರಾಣದ ಉಲ್ಲೇಖದಂತೆ ಸ್ಕಂದನಿರುವ ಪುರವಾದುದರಿಂದ "ಸ್ಕಂದಪುರ"ವೆನಿಸಿಕೊಂಡಿದೆ. ಇದರ ಜೊತೆಗೆ "ಸುಂದರಪುರ"ವೆಂಬ ಹೆಸರು ಇದರ ಪ್ರಾಚೀನ ಸರಣಿಯಲ್ಲಿ ಬರುತ್ತದೆ. ಆದರೆ 'ಸಂಡೂರು' ಶಬ್ದದ ಮೂಲರೂಪ "ಸಂದೂರು" ಆಗಿದ್ದು, ಬೆಟ್ಟ-ಗುಡ್ಡಗಳ ಸಂದುಗಳಲ್ಲಿರುವ ಊರು ಎಂಬ ಕಾರಣದಿಂದ ಈ ಹೆಸರು ಬಂದಿದೆ. ಈ ಸಂದು+ಊರು=ಸಂದೂರು ಎಂಬುದು ಇಂದು ಸಂಡೂರು ಆಗಿ ಪರಿವರ್ತನೆಗೊಂಡಿದೆ. 'ಸಂದು' ಎಂಬುದು ನಿರ್ದಿಷ್ಟ ಆಕೃತಿಮಾ ಇದು ಈ ಊರಿನ ವಿಶೇಷವನ್ನು ತಿಳಿಸುತ್ತದೆ. 'ಊರು' ಎಂಬುದು ವಾರ್ಗಿಕ ಆಕೃತಿಮಾ. ಇದು ಸಾಮಾನ್ಯ ವಾಚಕ. ಭೂಗೋಳ ಶಾಸ್ತ್ರಜ್ಞ ಮೇಕಲಿನ್‌ನ ಹೇಳಿಕೆಯ ಪ್ರಕಾರ ಸಂಡೂರು ಸಂದು (ಈ ಪ್ರದೇಶವು ಹೆಚ್ಚಾಗಿ ಕಂಡಿ, ಗಂಡಿ,

ಕಣಿವೆಗಳಿಂದ ಕೂಡಿದೆ) ಊರು ಎಂಬುದಾಗಿತ್ತು ಎಂದು ತಿಳಿದುಬರುತ್ತದೆ. ಈ ಸಂದೂರು ಎಂಬುದು ಸ್ಥಳೀಯರ ಬಾಯಿಯಲ್ಲಿ ಸಂಡೂರು > ಸ್ವಂಡೂರು > ಸೊಂಡೂರು ಎಂದಾಗಿದೆ.[೩೫]

ಕೆಲವರ ಹೇಳಿಕೆಯಂತೆ ಸಂದುಗಳಿಂದ ಕಿರಿದಾದ ಓಣಿಗಳಿಂದ ಸಂಡೂರು ಕೂಡಿರುವುದರಿಂದ ಈ ಊರಿಗೆ 'ಸಂದೂರು' ಎಂಬ ಹೆಸರು ಬಂದಿತೆಂದು ಮತ್ತೆ ಕೆಲವರ ಹೇಳಿಕೆಯಂತೆ ಈ ಊರಿಗೆ ಕಣಿವೆಗಳ ಮೂಲಕ ಪ್ರವೇಶವಿರುವುದರಿಂದ ಸಂದೂರು ಎಂಬ ಹೆಸರು ಬಂದಿದ್ದು ಬ್ರಿಟಿಷರ ಇಂಗ್ಲೀಷ್ ಭಾಷೆಯಿಂದಾಗಿ "ಸಂಡೂರು" ಆಯಿತೆಂದು ಹೇಳುತ್ತಾರೆ. ಈ ಹೇಳಿಕೆಗಳಷ್ಟೇ ಅಲ್ಲದೆ ಈ ಪ್ರದೇಶದಲ್ಲಿ ಕಂಡುಬರುವ ಶಾಸನಗಳ ಉಲ್ಲೇಖದಂತೆ ಗಮನಿಸುವುದಾದರೆ ಕುಮಾರಸ್ವಾಮಿ ಬೆಟ್ಟದಲ್ಲಿಯ ಪಾರ್ವತಿ ದೇವಾಲಯದ ಕ್ರಿ.ಶ.೧೨೦೬ರ ಹೊಯ್ಸಳ ೨ನೇ ವೀರ ಬಲ್ಲಾಳನ ಶಾಸನದಲ್ಲಿ ಮೊಟ್ಟ ಮೊದಲ ಬಾರಿಗೆ 'ಸಂಡೂರಿನ' ಉಲ್ಲೇಖವಿರುವುದನ್ನು ಕಾಣುತ್ತೇವೆ. ವಿಜಯನಗರ ಅವಧಿಯ ಕೆಲವು ಶಾಸನಗಳಲ್ಲಿ 'ಸೊಂಡೂರು' ಸ್ಥಳನಾಮ ಉಲ್ಲೇಖ ಕಾಣಸಿಗುತ್ತವೆ. ಇದರಿಂದ ಕ್ರಿ.ಶ.೧೨೦೬ಕ್ಕಿಂತ ಹಿಂದಿನಿಂದಲೇ ಸೊಂಡೂರು ಸ್ಥಳನಾಮದ ಪಟ್ಟಣವಿತ್ತೆಂದು ತಿಳಿದುಬರುತ್ತದೆ. ಈ ಶಾಸನಗಳ ಆಧಾರಗಳನ್ನು ಹೊರತುಪಡಿಸಿದರೆ[೩೬] ಈ ಊರಿನ ನಿಜ ನಿಷ್ಪತ್ತಿಯನ್ನು ಕುರಿತು ವಿವೇಚಿಸಿದಾಗ "ಸಂಡೂರು" ಎಂಬುದು ದೇವತೆಯ ಹೆಸರಿನಿಂದಾಗಿ ಬಂದುದು. ಕುಮಾರಸ್ವಾಮಿ ದೇವಾಲಯದ ಪಕ್ಕದಲ್ಲಿರುವ ಪಾರ್ವತಿ ದೇವಾಲಯವು ಕುಮಾರಸ್ವಾಮಿ ದೇವಾಲಯಕ್ಕಿಂತಲೂ ಪುರಾತನವಾದುದಾಗಿದೆ. ಇದು ಕ್ರಿ.ಶ.೪-೫ನೇ ಶತಮಾನದಲ್ಲಿ ಕಟ್ಟಲ್ಪಟ್ಟಿರಬೇಕು.

ಈ ದೇವಾಲಯದ ಹೆಬ್ಬಾಗಿಲದ ಗೋಡೆಯ ಮೇಲಿನ ಶಾಸನದ ಲಿಪಿಗಳು ಕದಂಬರ ಕಾಲದಲ್ಲಿ ಬಳಸುತ್ತಿದ್ದ ಲಿಪಿಗಳನ್ನು ಹೋಲುತ್ತವೆ. ಇಷ್ಟು ಪ್ರಾಚೀನವಾದ ಈ ದೇವತೆಯ ಮೂಲ ಹೆಸರು "ಚಂಡಿ" ಇರಬೇಕು. ಈ ದೇವಾಲಯದ ಗೋಪುರದ ಮೇಲೆ ಚಂಡಿಯ ಸವೆದ ಮೂರ್ತಿ ಇಂದಿಗೂ ಸ್ಪಷ್ಟವಾಗಿ ಕಾಣುತ್ತದೆ. ಈ "ಚಂಡಿ" ದೇವತೆಯಿಂದಾಗಿ "ಸಂಡೂರು" ಎಂದು ಹೆಸರು ಬಂದಿದೆ. ಚಂಡಿ+ಊರು=ಚಂಡಿಯೂರು>ಚಂಡೂರು>ಸಂಡೂರು ಆಗಿದೆ. ಇಲ್ಲಿ 'ಚ'ಕಾರ 'ಸ' ಕಾರವಾಗಿ ಚಂಡೂರು ಎಂಬುದು ಸಂಡೂರು ಆಗಿ ಪರಿವರ್ತನೆಗೊಂಡಿರಬೇಕು.

'ಚಂಡಿ' ದೇವತೆಯ ಆರಾಧನೆ ಸಾಮಾನ್ಯವಾಗಿ ಕಾಡು, ಗುಡ್ಡಗಳಿಂದ ಕೂಡಿರುವ ಏಕಾಂತ ಪ್ರದೇಶದಲ್ಲಿ ನಡೆಯುತ್ತಿತ್ತು. ಹಿಂದೆ ಸಂಡೂರಿನ ಪ್ರದೇಶ ಕಾಪಾಲಿಕರಿಂದ ಕೌಳರಿಂದ ಕೂಡಿತ್ತು. ಭೈರವ ತೀರ್ಥದ ಹೆಸರೇ ಸೂಚಿಸುತ್ತದೆ. ಅದೊಂದು ಕಾಪಾಲಿಕರ ಕ್ಷೇತ್ರವಾಗಿತ್ತೆಂದು, ಇಂದಿಗೂ ಇಲ್ಲಿಯ ಕೊಳ್ಳಗಳ ಪ್ರದೇಶದಲ್ಲಿ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ಪ್ರಾಚೀನ ದೇವಾಲಯಗಳಿದ್ದು, ಅಲ್ಲಿ ದೇವತೆಯ ಆರಾಧನೆ ನಡೆಯುವುದನ್ನು ಕಾಣಬಹುದು. ಹೀಗಾಗಿ 'ಚಂಡಿ' ದೇವತೆಯ ಹೆಸರಿನಿಂದ 'ಸಂಡೂರು' ಎಂಬ ಹೆಸರು ಈ ಊರಿಗೆ ಬಂದಿತು.[೩೭]

ಈ ಪ್ರದೇಶವು ಅನೇಕ ರಾಜಕೀಯ ವಂಶಗಳ ಆಳ್ವಿಕೆಗೆ ಒಳಪಟ್ಟಿದ್ದನ್ನು ಕಾಣುತ್ತೇವೆ. ಅವುಗಳಲ್ಲಿ ಈ ಜಿಲ್ಲೆಯ ಹಾಗೂ ಕನ್ನಡ ನಾಡನ್ನು ಆಳಿದ ಪ್ರಸಿದ್ಧ ರಾಜ ಮನೆತನಗಳಾದ ನಂದರು, ಮೌರ್ಯರು, ಗುಪ್ತರು, ಶಾತವಾಹನರು, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಪಾಂಡ್ಯ, ಕಲ್ಯಾಣ ಚಾಲುಕ್ಯ, ಕಲಚೂರಿ, ಸೇವುಣ, ಸಿಂಧರ ಆಳ್ವಿಕೆಯ ಪರಿಧಿಗೆ ಒಳಪಟ್ಟಿದ್ದು,[೩೮] ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಸಂಡೂರಿಗೆ ಸಮೀಪವಿರುವ ಹೊಸಮಲೆದುರ್ಗ (ರಾಮನದುರ್ಗ, ರಾಮಘಡ)ವು ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನ ಆಳ್ವಿಕೆಗೂ ಒಳಪಟ್ಟಿತ್ತು. ಕುಮಾರರಾಮನು ದೆಹಲಿ ಸುಲ್ತಾನನೊಂದಿಗೆ ಹೋರಾಡುತ್ತ ತನ್ನ ಪ್ರಾಣವನ್ನೇ ಕೊಡುತ್ತಾನೆ. ಈ ಯುದ್ಧದಿಂದ ಕಂಪಿಲರಾಯನೂ ಮರಣಿಸಿದ್ದರಿಂದ ಕಂಪಿಲರಾಯನ ರಾಜ್ಯನಾಶವಾಯಿತು. ಮುಂದೆ ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಮೇಲೆ ಸಂಡೂರಿನ ಪ್ರದೇಶವು ಇವರ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರ ಸಾಮ್ರಾಜ್ಯ ಪತನಾನಂತರ ಈ ಪ್ರದೇಶವು ಜರಿಮಲೆ ಪಾಳೆಗಾರರ ಆಳ್ವಿಕೆಗೆ ಒಳಪಟ್ಟಿತು. ನಂತರ ಬಿಜಾಪುರ ಸುಲ್ತಾನನಿಂದ ಶಿವಾಜಿಯ ಆಳ್ವಿಕೆಗೆ ಒಳಪಟ್ಟಿತು.[೩೯] ಶಿವಾಜಿಯ ನಂತರ ಈತನ ಸೇನಾನಿ ಸಂತಾಜಿ ಘೋರ್ಪಡೆಯ ವಂಶಸ್ಥನಾದ ಸಿದ್ಧೋಜಿರಾವ್ ಘೋರ್ಪಡೆಯವರ ಆಳ್ವಿಕೆಗೊಳಪಟ್ಟಿತು. ಕ್ರಿ.ಶ.೧೭೭೫-೭೬ರಲ್ಲಿ ಸಂಡೂರು ಹೈದರಾಲಿಯ ಆಳ್ವಿಕೆಗೆ ಒಳಪಟ್ಟಿತಾದರೂ ೧೭೯೨ರಲ್ಲಿ ಟಿಪ್ಪುಸುಲ್ತಾನನಿಗೂ ಮತ್ತು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಗೂ ನಡೆದ ಒಪ್ಪಂದದಂತೆ ಸಂಡೂರಿನ ಅಧಿಕಾರ ಪುನಃ ಘೋರ್ಪಡೆಯವರಿಗೆ ಲಭ್ಯವಾಯಿತು. ಹಾಗೂ ಕ್ರಿ.ಶ.೧೮೧೭ರಲ್ಲಿ ಬೆಸ್ಸಿನ್ ಒಪ್ಪಂದದ ಪ್ರಕಾರ ಸಂಡೂರು ಬ್ರಿಟಿಷರ ವಶವಾಗಿದ್ದು ಕ್ರಿ.ಶ.೧೮೧೮ರಲ್ಲಿ ಪುನಃ ಸಂಡೂರಿನ ಅಧಿಕಾರವನ್ನು ಘೋರ್ಪಡೆ ವಂಶದವರಿಗೆ ವಹಿಸಿಕೊಡಲಾಯಿತು.[೪೦]

ಹೀಗೆ ಸಂಡೂರಿನ ಪ್ರದೇಶವು ಈ ಎಲ್ಲಾ ರಾಜ ಮನೆತನಗಳ ಒಂದಿಲ್ಲೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದ್ದನ್ನು ಕುರಿತು ಈ ಅಧ್ಯಾಯದಲ್ಲಿ ಆಯಾ ರಾಜ ಮನೆತನಗಳ ಇತಿಹಾಸವನ್ನು ವಿವರವಾಗಿ ಹೇಳಲು ಪ್ರಯತ್ನಿಸಲಾಗಿದೆ.

೧. ನಂದರು

ಬಳ್ಳಾರಿ ಜಿಲ್ಲೆಯ ಈ ವಿಭಾಗವನ್ನು ನಂದರು (ಸು.ಕ್ರಿ.ಪೂ.೪.ನೆಯ ಶತಮಾನ) ಆಳಿದ್ದರೆಂಬುದಕ್ಕೆ ನಮಗೆ ಪರೋಕ್ಷ ಮಾಹಿತಿಗಳು ಲಭಿಸುತ್ತವೆ. ಪ್ರಾಚೀನ ಕೃತಿಗಳ ಹೇಳಿಕೆಯ ಪ್ರಕಾರ ನಂದರು ತಮ್ಮ ಎಲ್ಲಾ ಶತ್ರುಗಳನ್ನು ಸೋಲಿಸಿ ಭಾರತ ದೇಶದ ಚಕ್ರಾಧಿಪತ್ಯವನ್ನು ವಹಿಸಿಕೊಂಡರು. ಇದರ ಜೊತೆಗೆ ಕನ್ನಡದ ಪ್ರಾಚೀನ ಶಾಸನಗಳಿಂದ (೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ) "ಕುಂತಲನಾಡು" ಎಂದು ಪ್ರಸಿದ್ಧಿ ಪಡೆದಿದ್ದ ಈ ಕರ್ನಾಟಕವನ್ನು ಆಳುತ್ತಿದ್ದುದಾಗಿ ಉಲ್ಲೇಖ

ಸಿಗುತ್ತದೆ. ಅಂದರೆ ಕುಂತಲನಾಡಿನ ಸುಮಾರು ಮುಕ್ಕಾಲು ಭಾಗ ಪ್ರದೇಶ ಅವರ ವಶದಲ್ಲಿತ್ತು ಎಂಬ ಶಿಕಾರಿಪುರದ ಶಾಸನದ ಹೇಳಿಕೆಯ ಆಧಾರದ ಮೇಲೆ ಬಳ್ಳಾರಿ ಜಿಲ್ಲೆಯ ಸಂಡೂರಿನ ಪ್ರದೇಶ ಅದನ್ನೊಳಗೊಂಡಿರಬಹುದು ಎಂದು ಪರೋಕ್ಷ ಮಾಹಿತಿಯಿಂದ ಊಹಿಸಬಹುದಾಗಿದೆ.[೪೧]

೨. ಮೌರ್ಯರು

ಕ್ರಿ.ಪೂ.೩ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಅಧಿಕಾರಕ್ಕೆ ಬಂದ ಮೌರ್ಯರು ದಕ್ಷಿಣ ಭಾರತದ ಕೆಲವು ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು. ಇವರ ಕಾಲದ ಅಶೋಕನ ಶಾಸನಗಳು ಸಂಡೂರು ನೆರೆಯ ಸೀಮೆಗಳಾದ ಕೊಪ್ಪಳ, ಗವಿಮಠ, ಮಸ್ಕಿ, ನಿಟ್ಟೂರು, ಅಶೋಕನ ಸಿದ್ಧಾಪುರ, ಜಟ್ಟಿಂಗರಾಮೇಶ್ವರ, ಬ್ರಹ್ಮಗಿರಿಗಳಲ್ಲಿ ದೊರಕಿರುವುದರಿಂದ ಸಂಡೂರು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದು ಬರುವುದು.[೪೨] ಬ್ರಹ್ಮಗಿರಿ ಶಾಸನದ ಉಲ್ಲೇಖದಂತೆ ಇದು (ಇಸಿಲಾ) ಸಾಮ್ರಾಜ್ಯದ ದಕ್ಷಿಣ ಗಡಿಯಾಗಿದ್ದು ಇಸಿಲಾವನ್ನು ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡು ಮಹಾಮಾತ್ರರನ್ನು ಅಲ್ಲಿ ನೇಮಿಸಿದ್ದನು.[೪೩]

ಮೌರ್ಯರ ಕಾಲದಲ್ಲಿ ಸಂಡೂರಿನ ಕುಮಾರಸ್ವಾಮಿಯ ಆರಾಧನೆಯು ಅಭಿವೃದ್ಧಿ ಹೊಂದುತ್ತಾ ಬಂದಂತೆ ಕಾಣುತ್ತದೆ. ಭಾರತಕ್ಕೆ ದಂಡೆತ್ತಿ ಬಂದಿದ್ದ ಅಲೆಕ್ಸಾಂಡರ್ ಹಲವಾರು ರಾಷ್ಟ್ರಗಳಲ್ಲಿ ವಿಖ್ಯಾತನಾದ ಈತನು "ದೇವ ಕುಮಾರ"ನೆಂದು ಗ್ರೀಸ್ ಮತ್ತು ಪರ್ಶಿಯಾಗಳಲ್ಲಿ ಪ್ರತೀತಿ ಇತ್ತು. ಪರ್ಶಿಯನ್ ಮತ್ತು ಅರೇಬಿಯನ್ ಜನ ಈತನನ್ನು 'ಇಸ್ಕಂದರ'ನೆಂದು ಕರೆದಿದ್ದು, ಭಾರತದಲ್ಲಿ 'ಸ್ಕಂದ'ನೆಂದು ಸಂಸ್ಕೃತ ರೂಪ ತಳೆಯಿತು. ಚಂದ್ರಗುಪ್ತ ಮೌರ್ಯ ಹುಡುಗನಾಗಿದ್ದಾಗ ಅಲೆಕ್ಸಾಂಡರ್‌ನನ್ನು ಕಂಡು ಅವನ ಬಗ್ಗೆ ಭಕ್ತಿ ಭಾವನೆ ತಳೆದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಪತಂಜಲಿ 'ಶಿವಸ್ಕಂದೋ ವಿಶಾಖ ಇತಿ.... ಮೌಯೆಶ್ವರ್ಹಿ ಕಣ್ಯಾರ್ಥಿ ಭಿರರ್ಚಾ ಕಲ್ಪಿತಾ' ಎಂದು ಹೇಳುತ್ತಾನೆ. ಮೌರ್ಯರಿಗೂ ನವಿಲಿಗೂ (ಮೋರಿಯ) ಗೋತ್ರ ಸಂಬಂಧವಿದ್ದಿತು. ಹೀಗಾಗಿ ಅವರ ದೇವತೆ ಸ್ಕಂದ ಮಯೂರ ವಾಹನನಾದ.[೪೪]

೩. ಶಾತವಾಹನರು

ದಕ್ಷಿಣ ಭಾರತವನ್ನಾಳಿದ ಶಾತವಾಹನರು ಸುಮಾರು ಕ್ರಿ.ಪೂ.೨೨೦ ರಿಂದ ಕ್ರಿ.ಶ.೨೩೦ ರವರೆಗೆ ರಾಜ್ಯವಾಳಿದ ಬಗ್ಗೆ ತಿಳಿದು ಬರುತ್ತದೆ.[೪೫] ಅಶೋಕನ ಶಾಸನಗಳು ಶಾತವಾಹನರನ್ನು 'ಆಂಧ್ರಭೃತ್ಯರು' ಎಂದು ಉಲ್ಲೇಖಿಸಿವೆ. 'ಭೃತ್ಯ' ಎಂಬ ಪದಕ್ಕೆ ಸಾಮಾನ್ಯವಾಗಿ 'ಸೇವಕ' ಎಂಬ ಅರ್ಥವಿದ್ದರೂ ಇಲ್ಲಿ 'ಆಧೀನರು' ಎಂದು ಪರಿಗಣಿಸುವುದೆ ಸೂಕ್ತ. ಅಂದರೆ ಆಂಧ್ರವನ್ನಾಳಿದವರು ಅಥವಾ ಆಂಧ್ರ ರಾಜರುಗಳಿಗೆ ಕೆಲಕಾಲ ಸಾಮಂತರಾಗಿದ್ದರೆಂದು ತಿಳಿಸುತ್ತವೆ. ಇದರಿಂದ ವ್ಯಕ್ತವಾಗುವುದೇನೆಂದರೆ

ಶಾತವಾಹನರು ಮೌರ್ಯರ ಅಧೀನ ಅರಸರಾಗಿದ್ದರೆಂದೂ ಮೌರ್ಯರ ಪತನಾನಂತರ ಸ್ವತಂತ್ರ ಅರಸರಾದರೆಂದೂ ತಿಳಿದು ಬರುತ್ತದೆ.[೪೬]

ಶಾತವಾಹನರ ಆಡಳಿತಕ್ಕೆ ಈ ಪ್ರದೇಶ ಸೇರಿದ್ದಿರಬಹುದಾದರೂ ಅವರು ಹಾಕಿಸಿರುವ ಶಾಸನಗಳಾವುವು ಇದುವರೆಗೆ ಈ ಭಾಗದಲ್ಲಿ ದೊರೆತಿಲ್ಲ. ಮೌರ್ಯರ ನಂತರ ಅಧಿಕಾರಕ್ಕೆ ಬಂದ ಇವರು ಇಲ್ಲಿ ಕುಮಾರಸ್ವಾಮಿಗಾಗಿ ದೇವಾಲಯವನ್ನು ನಿರ್ಮಿಸಿರಬಹುದು.[೪೭] ಇವರ ಕಾಲದಲ್ಲಿ ಇದೊಂದು ಒಳನಾಡಿನ ಒಂದು ಮುಖ್ಯ ಕೇಂದ್ರವಾಗಿತ್ತು. ಕುಮಾರಸ್ವಾಮಿಬೆಟ್ಟ ಶಕ್ತಿ ಕೇಂದ್ರವಾಗಿತ್ತು. ಈಗಿರುವ ಪಾರ್ವತಿ ದೇವಾಲಯ ಶಾತವಾಹನರ ಕಾಲದಿಂದಲೇ ಅಭಿವೃದ್ಧಿ ಹೊಂದುತ್ತ ಬಂದಿತೆಂದು ವಿದ್ವಾಂಸರ ಅಭಿಪ್ರಾಯ.[೪೮]

ಕರ್ನಾಟಕದ ಬಳ್ಳಾರಿ ಪ್ರದೇಶವೇ ಶಾತವಾಹನರ ಮೂಲ ನಿವಾಸವೆಂದು ಅನೇಕ ಇತಿಹಾಸಕಾರರು ಭಾವಿಸಿದ್ದಾರೆ. ಆದರೆ ಕೆಲವು ಇತಿಹಾಸಕಾರರು ಕರ್ನಾಟಕ ಶಾತವಾಹನರ ಮೂಲ ನಿವಾಸವೆಂಬುದನ್ನು ಒಪ್ಪದಿದ್ದರೂ ಕರ್ನಾಟಕದಲ್ಲಿ ಶಾತವಾಹನರ ಆಳ್ವಿಕೆಯಿದ್ದಿತೆಂಬುದರಲ್ಲಿ ಮಾತ್ರ ಯಾವ ಸಂದೇಹವೂ ಇಲ್ಲ.[೪೯]

ಆಂಧ್ರ ಪ್ರದೇಶದ ಸ್ವಲ್ಪ ಭಾಗವು ಸೇರಿದಂತೆ ಬಳ್ಳಾರಿ ಪ್ರದೇಶವನ್ನು 'ಶಾತವಾಹನೀಹಾರ' ಮತ್ತು ಆ ಭಾಗದ ರಾಜ್ಯವನ್ನು 'ಶಾತವಾಹನೀರಾಷ್ಟ್ರ'ವೆಂದು ಕರೆಯಲಾಗಿತ್ತು. ಕರ್ನಾಟಕದ ಬಳ್ಳಾರಿ ಆಂಧ್ರ ಪ್ರದೇಶದ ಭಾಗವನ್ನು ಸ್ಪಷ್ಟವಾಗಿ 'ಶಾತವಾಹನೀಹಾರ ಮತ್ತು ರಾಷ್ಟ್ರವೆಂದು' ಕರೆದಿರುವುದರಿಂದ ಈ ಪ್ರದೇಶದಿಂದಲೇ ರಾಜಕೀಯ ಚಟುವಟಿಕೆಗಳು ಆರಂಭವಾಗಿರಬಹುದೆಂಬ ಅನುಮಾನಕ್ಕೆ ಹೆಚ್ಚು ಬಲ ಇದೆ. ಈ ಪ್ರದೇಶದಿಂದ ಪಶ್ಚಿಮದ ಕಡೆಗೆ ವಿಸ್ತರಿಸಿದರೆಂದು ಹೇಳುವುದು ಸರಿ ಎಂದು ಕಾಣುತ್ತದೆ. ವಾಸಿಷ್ಠಪುತ್ರ ಪುಳಮಾವಿಯ ಕಾಲದ ಶಾಸನ ಬಳ್ಳಾರಿ ಜಿಲ್ಲೆಯ ಮ್ಯಾಕೆದೋಣೆಯಲ್ಲಿ ದೊರೆತಿದೆ. ಹಾಗೂ ಗೌತಮಿಪುತ್ರ ಶಾತಕರ್ಣಿ ಮತ್ತು ವಾಸಿಷ್ಠಪುತ್ರ ಪುಳಮಾವಿಯ ಶಾಸನಗಳು ಮತ್ತು ಶಾಸನ ರಹಿತ ದುಃಖಿತ ಅರಮನೆ ವಾಸಿಗಳಿಂದ ಸುತ್ತುವರೆಯಲ್ಪಟ್ಟ ಮರಣಶಯ್ಯೆಯಲ್ಲಿರುವ ಗೌತಮಿಪುತ್ರ ಶಾತಕರ್ಣಿ ಚಿತ್ರ ಫಲಕವು ಈ ನೆಲೆಯಲ್ಲಿ ದೊರಕಿರುವುದು ಅರ್ಥಗರ್ಭಿತ. ಈ ಸ್ಥಳದ ದಕ್ಷಿಣಕ್ಕೆ ಹಿರೇಹಡಗಲಿಯಿದೆ. ಇಲ್ಲಿಯ ಶಾಸನವು 'ಶಾತವಾಹನಿಹಾರ' 'ಶಾತವಾಹನರಾಷ್ಟ್ರ' ಎಂದು ಉಲ್ಲೇಖಿಸಿರುವುದು ಈ ಸಂದರ್ಭದಲ್ಲಿ ಗಮನಾರ್ಹ.[೫೦] ಹಾಗೂ ಈ 'ಶಾತವಾಹನಿಹಾರ' ಮತ್ತು 'ಶಾತವಾಹನೀರಟ್ಟ' ಅಂದರೆ ಶಾತವಾಹನಿ ಪ್ರದೇಶ ಎಂಬ ಪದಗಳ ಅರ್ಥದ ಆಧಾರದ ಮೇಲೆ ಅವರು ಕನ್ನಡ ಪ್ರದೇಶದವರೆಂದು ಅದು ಬಳ್ಳಾರಿ ಪ್ರದೇಶವೆಂದು ಗುರುತಿಸುತ್ತಾರೆ. ಈ ಪದಗಳು ಮೇಲೆ ತಿಳಿಸಿದಂತೆ ಮ್ಯಾಕೆದೋಣಿ ಮತ್ತು ಹಿರೇಹಡಗಲಿ ಶಾಸನಗಳಲ್ಲಿ ಕಂಡುಬರುತ್ತವೆ. ಇವರ ಕಾಲಕ್ಕೆ

ಸೇರಬಹುದಾದ ಸಂಡೂರು ತಾಲ್ಲೂಕಿನ ದೇವಗಿರಿ, ಚೋರನೂರು, ಅಗ್ರಹಾರ (ಗೇಣಿಕಟ್ಟೆ) ಗ್ರಾಮಗಳಲ್ಲಿ ಇವರ ಕಾಲದ ಅವಶೇಷಗಳು ದೊರೆಯುತ್ತವೆ. ಇದರಿಂದಾಗಿ ಸಂಡೂರು ಪರಿಸರವೂ ಸಹ ಶಾತವಾಹನರ ಕಾಲದ ಪ್ರಮುಖ ಪಟ್ಟಣವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.[೫೧]

೪. ಕದಂಬರು

ಕ್ರಿ.ಶ.೪ ರಿಂದ ೬.ನೆಯ ಶತಮಾನದವರೆಗೆ ಆಡಳಿತ ನಡೆಸಿದ ಬನವಾಸಿಯ ಕದಂಬರ ಅರಸುಮನೆತನ ಈ ನಾಡಿಗೆ ಮಹತ್ವದ್ದು.[೫೨] ಬನವಾಸಿ ಕದಂಬರ ಕಾಲದಲ್ಲಿ ಸಂಡೂರು ಪ್ರದೇಶವು ಕದಂಬರ ಸಾಮಂತರಾದ ಉಚ್ಚಂಗಿದುರ್ಗದ[೫೩] (ಬಳ್ಳಾರಿ ಜಿಲ್ಲೆಯ ನೈಋತ್ಯ ಗಡಿ) ನೊಳಂಬರ ಆಡಳಿತಕ್ಕೊಳಪಟ್ಟ ಒಂದು ಪ್ರಮುಖ ಕೇಂದ್ರವಾಗಿತ್ತು.[೫೪] ಇದು ಕದಂಬರ ೧೨,೦೦೦ ಗ್ರಾಮಗಳಲ್ಲಿ ಒಂದು. ಕದಂಬರ ನಾಡಿನ ಪೂರ್ವದಿಕ್ಕಿನ ಈ ಭಾಗಕ್ಕೆ ಇದು ರಾಜಧಾನಿಯಾಗಿತ್ತು.[೫೫] ಇವರ ರಾಜ್ಯವು ಪಶ್ಚಿಮ ತೀರದಿಂದ ಬಳ್ಳಾರಿ ಪ್ರದೇಶದವರೆಗೂ ಹಬ್ಬಿತ್ತು.[೫೬] ರವಿವರ್ಮನ ಗುಡ್ನಾಪುರ ಶಾಸನವು ಅವನ ಆಳ್ವಿಕೆಯ ಕೆಲವು ವಿವರಗಳನ್ನು ತಿಳಿಸುತ್ತದೆ. ಇವನು ಬಳ್ಳಾರಿ ಜಿಲ್ಲೆಯಲ್ಲಿರುವ ಉಚ್ಚಂಗಿ(ಉತ್ತಂಗಿ)ಯನ್ನು ಮತ್ತೊಂದು ಉಪ-ರಾಜಧಾನಿಯನ್ನಾಗಿ ಮಾಡಿದನು. ಹದಿನೆಂಟು ಮಾಂಡಲೀಕರ ಅಧಿಪತಿ ಗಂಗ, ಪಲ್ಲವ, ಕೊಂಗಳ್ವ, ಪೂನ್ನಾಟ, ಆಳುವ ರಾಜರಿಂದ ಕಪ್ಪ ಕಾಣಿಕೆಗಳನ್ನು ಪಡೆಯುತ್ತಿದ್ದವ ಎಂದೂ ಇವನು ವರ್ಣಿತನಾಗಿದ್ದಾನೆ.[೫೭] ಮಯೂರವರ್ಮ ತನ್ನ ಚಂದ್ರವಳ್ಳಿ ಶಾಸನದಲ್ಲಿ ಸತಹನಿ-ರಾಷ್ಟ್ರದಲ್ಲಿನ ಸೇಂದ್ರಕ ವಿಷಯದವರೆಗೂ ಆಳಿದನೆಂಬ ಉಲ್ಲೇಖವಿದೆ. ಇದಕ್ಕೆ ಸಾಕ್ಷಿಯಾಗಿ ಉಚ್ಚಂಗಿಯಲ್ಲಿರುವ ಬೆಟ್ಟದ ಕೋಟೆಯೇ ಸ್ಮಾರಕವಾಗಿದೆ. ಇದರ ಜೊತೆಗೆ ನಮಗೆ ದೊರಕುವ ವಿಷಯವೆಂದರೆ ಸಂಡೂರಿನ ಅದರಲ್ಲೂ ವಿಶೇಷವಾಗಿ ಪ್ರಸಿದ್ಧ ಕಾರ್ತಿಕೇಯ ದೇವಸ್ಥಾನವನ್ನೊಳಗೊಂಡ ಬಹುಭಾಗ ಕದಂಬರ ಕಾಲದಲ್ಲೂ ನಂತರ ಕನ್ನಡ ನಾಡಿನ ಅವರ ಯಶಸ್ವಿ ಉತ್ತರಾಧಿಕಾರಿಗಳಾದ ಚಾಲುಕ್ಯರ ಕಾಲದಲ್ಲೂ ಮಹತ್ವ ಪಡೆದಿತ್ತು. ಕುಮಾರಸ್ವಾಮಿಯ ಈ ಬೆಟ್ಟ ಅಂದಿಗಾಗಲೇ ಸ್ವಾಮಿಮಲೈ, ಸಾವಿಮಲೈ ಎಂದೆನಿಸಿಕೊಂಡಿತ್ತು.[೫೮] (ಸು.೭ನೇ ಶತಮಾನಕ್ಕೆ) ಹಾಗೂ ಸಂಡೂರು ಪ್ರದೇಶದಲ್ಲಿ ಇವರ ಕಾಲದಲ್ಲಿ ನಿರ್ಮಿತವಾದ ಕೆಲವು ದೇವಾಲಯದ ಅವಶೇಷಗಳಿವೆ. ಅಲ್ಲದೆ ಕೆಲವು ಮೂರ್ತಿ ಶಿಲ್ಪಗಳೂ ಸಿಕ್ಕಿವೆ. ಕದಂಬರು ಸಪ್ತಮಾತೃಕೆಯರ ಮತ್ತು ಕುಮಾರಸ್ವಾಮಿಯ ಆರಾಧಕರಾಗಿದ್ದರು.[೫೯]

ತಾಳಗುಂದ ಸ್ಥಂಭಲೇಖದ ಉಲ್ಲೇಖದಂತೆ ದೇವಸಾನಿಯಾದ ಸಾಕ್ಷಾತ್ ಷಣ್ಮುಖನೇ ಮಯೂರಶರ್ಮನಿಗೆ ಪಟ್ಟಾಭಿಷೇಕ ಮಾಡಿದನೆಂದು ತಿಳಿದುಬರುವುದು. ಎಂದರೆ ಷಣ್ಮುಖನ ವರ ಪ್ರಸಾದದಿಂದ ಮಯೂರಶರ್ಮನಿಗೆ ಜಯವೂ ರಾಜ್ಯ ಲಾಭವೂ ದೊರಕಿರಬಹುದೆಂದು ಊಹಿಸಬಹುದಾಗಿದೆ. ಕದಂಬ ಸಾಮ್ರಾಟರು ಈ ಮಹಾಸೇನನ ಪರಮಭಕ್ತರಾಗಿದ್ದರೆಂದು ಅನೇಕ ಶಾಸನಗಳಲ್ಲಿ

ಹೇಳಲ್ಪಟ್ಟಿರುವುದು. ದೇವಸೇನಾನಿಗೆ ಷಣ್ಮುಖ, ಕಾರ್ತಿಕೇಯ, ಸುಬ್ರಹ್ಮಣ್ಯ, ಕುಮಾರ, ಷಡಾನನ, ಸ್ವಾಮಿಮಹಾಸೇನ ಮೊದಲಾದ ಹೆಸರುಗಳಿರುವವು. ಕದಂಬ ಅರಸರ ವಂಶ ಪಾರಂಪರ್ಯವಾಗಿ ಬಂದ ಮನೆಯ ದೇವರಾದ ಕುಮಾರಸ್ವಾಮಿಯ ವರ ಪ್ರಸಾದದಿಂದ ಧ್ರುವದೇವಿಯ ಗರ್ಭದಲ್ಲಿ ಜನಿಸಿರುವ ರಾಜಕುಮಾರನಿಗೆ ಆ ದೇವರ ಹೆಸರಿನಲ್ಲಿ ಕುಮಾರಗುಪ್ತನೆಂದೆ ನಾಮಕರಣ ಮಾಡಿದಂತೆ ವ್ಯಕ್ತವಾಗುವುದು. ಸಂಡೂರು ಪ್ರದೇಶದಲ್ಲಿಯ ಕುಮಾರಸ್ವಾಮಿ ದೇವಾಲಯವು ಕದಂಬರ ಕಾಲದಲ್ಲೇ ಪ್ರಾಮುಖ್ಯತೆ ಪಡೆದಿತ್ತು. ಬಾದಾಮಿಯ ಚಾಲುಕ್ಯರ ಪ್ರಾಬಲ್ಯದಿಂದಾಗಿ ಕದಂಬರು ಅವರ ಸಾಮಂತರಾಗಿ ಮುಂದುವರಿಯುತ್ತಾರೆ.[೬೦]

೫. ಗಂಗರು

ಕನ್ನಡ ನಾಡಿನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಗಂಗರ ಆಳ್ವಿಕೆಗೂ ಈ ಪ್ರದೇಶ ಒಳಪಟ್ಟಿತ್ತು. ಈ ಸಂಡೂರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಗಂಗ ದೊರೆ ಇಮ್ಮಡಿ ಮಾರಸಿಂಹ (೯೬೩-೯೭೪) ನೊಳಂಬ ರಾಜ್ಯವನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಿಸುತ್ತ ಬಂದನು. ಈತನ ಸೇನಾಧಿಪತಿ ಚಾವುಂಡರಾಯ ಉಚ್ಚಂಗಿದುರ್ಗವನ್ನು ವಶಪಡಿಸಿಕೊಂಡು ಪುನಃ ರಾಷ್ಟ್ರಕೂಟ ದೊರೆ "ಖೊಟ್ಟಿಗ"ನಿಗೆ ರಾಜಧಾನಿ ಮಾನ್ಯಖೇಟ (ಇಂದಿನ ಮಳಖೇಡ, ಗುಲಬರ್ಗಾ ಜಿಲ್ಲೆಯಲ್ಲಿದೆ ಇದು ರಾಷ್ಟ್ರಕೂಟರ ರಾಜಧಾನಿಯಾಗಿತ್ತು)ವನ್ನು ಕೊಡಿಸಿ ಅದರಲ್ಲಿ ಸೊಂಡೂರು ಮತ್ತು ಮಂಚಾಲೆ (ಆದವಾನಿ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಮಂತ್ರಾಲಯ)ಗಳನ್ನು ಸೇರಿಸಿದ ಆ ಕಾಲಕ್ಕಾಗಲೇ ಈ ಎರಡೂ ಕ್ಷೇತ್ರಗಳು ನಾಡಿನ ನಾನಾ ಭಾಗಗಳಿಂದಲೂ ಪ್ರವಾಸಿಗರನ್ನು ಆಕರ್ಷಿಸುವ ತೀರ್ಥಕ್ಷೇತ್ರಗಳೆನಿಸಿ ಕೊಂಡಿದ್ದವು.[೬೧] (ಸು.೧೦.ನೇ. ಶತಮಾನದಲ್ಲಿ)

೬. ಬಾದಾಮಿ ಚಾಲುಕ್ಯರು

ಕುಮಾರಸ್ವಾಮಿ ದೇವಾಲಯವಿರುವ ಸಂಡೂರಿನ ಪ್ರದೇಶವು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಪ್ರಮುಖವಾಗಿತ್ತು.[೬೨] ಬಾದಾಮಿ ಚಾಲುಕ್ಯರ ರಾಜಾಡಳಿತವೇ ಕರ್ನಾಟಕದ ರಾಜಕೀಯ ಇತಿಹಾಸದ ಆರಂಭವೆಂದರೆ ಅಸಂಗತವಾಗದು. ಬನವಾಸಿ ಕದಂಬರಿಂದ ಬಾದಾಮಿಯನ್ನು ವಶಪಡಿಸಿಕೊಂಡು ಅದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ರಾಜ ಶಾಸನಗಳಲ್ಲಿ ಕನ್ನಡವನ್ನು ಬಳಸಿ ಜನರ ಭಾಷೆಗೆ ಆಡಳಿತದಲ್ಲಿ ಸ್ಥಾನ ಕಲ್ಪಿಸಿದ ಮೊದಲಿಗರು ಬಾದಾಮಿ ಚಾಲುಕ್ಯರು.[೬೩]

ಬಾದಾಮಿ ಚಾಲುಕ್ಯರ ಕಾಲದಲ್ಲಿ ಕುಮಾರಸ್ವಾಮಿಯ ಆರಾಧನೆ ವಿಶೇಷವಾದ ಮಹತ್ವ ಪಡೆದುಕೊಂಡಿತು ಎಂಬುದಕ್ಕೆ ಸಂಡೂರಿನ ಕುಮಾರಸ್ವಾಮಿ ದೇವಾಲಯದ ಸಮುಚ್ಚಯದ ಪಾರ್ವತಿ ದೇವಾಲಯದ ಶಾಸನ ಮತ್ತು ಲಿಪಿ ಹಾಗೂ ಶಿಲ್ಪಗಳ ಆಧಾರದ ಮೇಲೆ ಹೇಳಬಹುದಾಗಿದೆ.

ಕುಮಾರಸ್ವಾಮಿಯು ಚಾಲುಕ್ಯರ ಯುದ್ಧ ದೇವತೆಯಾಗಿದ್ದ.[೬೪] ಇದು ಕದಂಬರ ಕಾಲದಲ್ಲೇ ಪ್ರಖ್ಯಾತಿ ಪಡೆದಿತ್ತು.[೬೫] ಇವರ ಕಾಲದ ಕೊನೆಯ ಅವಧಿಯಲ್ಲಿ ಕಟ್ಟಿರಬಹುದಾದ ಪಾರ್ವತಿ ದೇವಸ್ಥಾನ ಕುಮಾರಸ್ವಾಮಿಬೆಟ್ಟದ ಕುಮಾರಸ್ವಾಮಿ ದೇವಾಲಯದ ಪಕ್ಕದಲ್ಲಿದೆ.[೬೬] ಇವರ ಕಾಲದಲ್ಲಿ ಕಟ್ಟಲ್ಪಟ್ಟ ದುರ್ಗಾ ದೇವಾಲಯವೊಂದು ಕುಮಾರಸ್ವಾಮಿಬೆಟ್ಟದಲ್ಲಿದೆ.[೬೭] ಕುಮಾರಸ್ವಾಮಿಬೆಟ್ಟದ ಪಾರ್ವತಿ ದೇವಾಲಯವು ಇವರ ಶೈಲಿಯ ವಾಸ್ತುಶಿಲ್ಪ ವಿಮಾನ ಶೈಲಿಯಲ್ಲಿದೆ. ದ್ವಾರ ಬಾಗಿಲು ಇಕ್ಕೆಲಗಳಲ್ಲಿ ಶಂಖ ಲಿಪಿಯ ಶಿಲಾ ಶಾಸನಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಾಚೀನವಾದ ಸುಂದರ ವಾಸ್ತುಶಿಲ್ಪವುಳ್ಳ ದೇವಾಲಯ ಇದಾಗಿದೆ. ಸುತ್ತಮುತ್ತಲಿನ ಸೀಮೆಗಳು ನೊಳಂಬವಾಡಿ ಭಾಗಗಳಾಗಿ ಬಾದಾಮಿ ಚಾಲುಕ್ಯರ ಆಡಳಿತಕ್ಕೊಳಪಟ್ಟಿದ್ದವು.[೬೮] ಇವರ ಕಾಲದ ಬಾದಾಮಿಯ ಮೊದಲನೆಯ ಗುಹೆಯ ಪ್ರವೇಶದಲ್ಲಿ ಕುಮಾರಸ್ವಾಮಿಯ ಉಬ್ಬುಶಿಲ್ಪ ಮತ್ತು ಐಹೊಳೆಯ ಹುಚ್ಚಮಲ್ಲಿ ದೇವಾಲಯದ ಮುಖಮಂಟಪದ ಭುವನೇಶ್ವರಿಯ ಭಾಗದಲ್ಲಿ ನವಿಲು ವಾಹನನಾದ ಕುಮಾರಸ್ವಾಮಿಯು ಶತ್ರುಗಳನ್ನು ಸಂಹರಿಸುತ್ತಿರುವ ಶಿಲ್ಪವಿದೆ. ಅಲ್ಲದೆ ಅವರು ಸಂಡೂರು ಕುಮಾರಸ್ವಾಮಿ ಕ್ಷೇತ್ರಕ್ಕೆ ಹೆಚ್ಚು ಗಮನಹರಿಸಿದರು.[೬೯] ಹಾಗೂ ಕರ್ನಾಟಕದ ದೇವಾಲಯಗಳ ಹಲವು ಬಗೆಯ ಪ್ರಯೋಗಗಳು ಇವರ ಕಾಲದಲ್ಲಿ ನಡೆದವು. ಅಲ್ಲದೆ ಮುಂದಿನ ವಾಸ್ತು ಶೈಲಿಗೆ ಒಂದು ಮಾದರಿಯನ್ನು ಹಾಕಿಕೊಟ್ಟರು. ಇವರ ಕಾಲದ ಧಾರ್ಮಿಕ ವಾಸ್ತುಶಿಲ್ಪಗಳಲ್ಲಿ ಗುಹೆಗಳು ಮತ್ತು ಕಟ್ಟಡಗಳೆಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಇವು ಹೆಚ್ಚಾಗಿ ಬಾದಾಮಿ ಮತ್ತು ಐಹೊಳೆ ಹಾಗೂ ಪಟ್ಟದಕಲ್ಲುಗಳಲ್ಲಿ ಕೇಂದ್ರಿಕೃತವಾಗಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳ ಲಕ್ಷಣಗಳಲ್ಲಿ ಚೌಕಾಕಾರದ ಗರ್ಭಗೃಹ ಮತ್ತು ಚಿಕ್ಕ ಮುಖಮಂಟಪ ಮತ್ತು ಅದಕ್ಕೆ ಪ್ರದಕ್ಷಿಣಾ ಪಥವನ್ನೊಳಗೊಂಡಿರುವಂಥವು. ಗಜಪೃಷ್ಠಾಕಾರ ಹಾಗೂ ತ್ರಿಕೂಟಾಚಲದ ತಲವಿನ್ಯಾಸದಲ್ಲಿರುವ ಇನ್ನೊಂದು ಪ್ರಕಾರದವು.

ಚಾಲುಕ್ಯರು ಈ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದ್ದರೂ ಅವರ ಕಾಲದ ವಾಸ್ತುಶಿಲ್ಪ ಇಲ್ಲಿ ವಿರಳ. ವಿನಯಾದಿತ್ಯನ ಕ್ರಿ.ಶ.೬೮೭ರ ತಾಮ್ರ ಪಟದಲ್ಲಿ ''ಪಂಪಾ ತಟ ಮಧಿವಸಾತಿ ವಿಜಯಸ್ಕಂದಾವರ'' ಎಂದಿದೆ. ಇದರಿಂದ ವಿಜಯ ಬೀಡಾರವನ್ನು ಪಂಪಾನದಿಯ ದಡದ ಮೇಲೆ ಬಿಟ್ಟಿದ್ದಾಗಿ ತಿಳಿಯುತ್ತದೆ. ಕುರುಗೋಡಿನ ಶಾಸನವೊಂದು ಸತ್ಯಾಶ್ರಯನನ್ನು ಹೆಸರಿಸುತ್ತದೆ. ಹಾಗೂ ಉತ್ತಂಗಿಯ ವಿಷ್ಣು ಶಿಲ್ಪ, ಕುಮಾರಸ್ವಾಮಿಬೆಟ್ಟದ ಪಾರ್ವತಿ ದೇವಾಲಯಗಳು ಇಲ್ಲಿ ಕಂಡುಬರುವ ಇವರ ಕಾಲದ ಗುರುತುಗಳಾಗಿವೆ.[೭೦]

೨. ರಾಷ್ಟ್ರಕೂಟರು

ರಾಷ್ಟ್ರಕೂಟರು ಈ ಪ್ರದೇಶದ ಅಧಿಕಾರವನ್ನು ಪಡೆದ ಮೇಲೆ ಕುಮಾರಸ್ವಾಮಿ ದೇವಾಲಯದ ಅಭಿವೃದ್ಧಿ ಗಮನಾರ್ಹವಾಗಿ ಬೆಳವಣಿಗೆಯಾಯಿತು. ಅವರು ಪಾರ್ವತಿ ದೇವಾಲಯ ಮತ್ತು ಕುಮಾರಸ್ವಾಮಿ ದೇವಾಲಯಗಳ ನಿರ್ವಹಣೆಗಾಗಿ ಅನೇಕ ರೀತಿಯ ದಾನಗಳನ್ನು ನೀಡಿರುವರು. ಪಾರ್ವತಿ ದೇವಾಲಯ

ದಲ್ಲಿರುವ ಇಮ್ಮಡಿ ಬಲ್ಲಾಳನ ಅವಧಿಯ ಕ್ರಿ.ಶ.೧೨೦೬ರ ಶಾಸನದಲ್ಲಿ ಅರಸನ ಆಜ್ಞೆಯಂತೆ ರಾಷ್ಟ್ರಕೂಟರ ಅರಸನಾದ ಮೂರನೆ ಕೃಷ್ಣನ ಅವಧಿಯಲ್ಲಿ ನೀಡಲಾಗಿದ್ದ ದಾನವು ನಿಂತು ಹೋಗಿದ್ದರಿಂದ ಅದನ್ನು ಬಲ್ಲಾಳನ ಮಂತ್ರಿ ಮಹಾದೇವ ದಂಡನಾಯಕನು ದೇವಾಲಯದ ಸ್ಥಾನಿಕ ವಿಷ್ಣುಕರ ಬ್ರಹ್ಮಚಾರಿಗೆ ದತ್ತಿಯನ್ನು ನವೀಕರಿಸುತ್ತಾನೆ.[೭೧]

ಸಂಡೂರಿನ ಕಾರ್ತಿಕೇಯಸ್ವಾಮಿ ದೇವಾಲಯ ಮತ್ತು ಮಂಚಾಳೆಯ ಯಲ್ಲಮ್ಮನ ದೇಗುಲ ರಾಷ್ಟ್ರಕೂಟರ ೩ನೇ ಕೃಷ್ಣನ ಬೇಡಿಕೆಯ ಮೇರೆಗೆ ಅವನ ಸಾಮಂತ ಅರಸ ಕನ್ನನು ಕ್ರಿ.ಶ.೯೬೩ರಲ್ಲಿ ದತ್ತಿ ಕೊಟ್ಟಿದ್ದು ಸಂಡೂರಿನ ಕುಮಾರಸ್ವಾಮಿಬೆಟ್ಟದ ಪಾರ್ವತಿದೇವಿ ದೇವಾಲಯದ ಶಾಸನದಿಂದ ಗೊತ್ತಾಗುವುದು. ಆಗ ಮಂಚಾಳೆ ಯಲ್ಲಮ್ಮ ದೇವತೆ ಸಿಂಧವಾಡಿ ಸಾವಿರಕ್ಕೆ ಒಳಪಟ್ಟಿತ್ತು. ರಾಷ್ಟ್ರಕೂಟರ ಕೃಷ್ಣನು ಕುಮಾರಸ್ವಾಮಿ ದೇವನಿಗೆ ಕೆರೆಯಪಳ್ಳಿಯನ್ನು ಸೇವೆಗೆ ದತ್ತಿಕೊಟ್ಟನು. ಆಗ ಅದರ ಹೆಸರು 'ತಟಾಕ' ಎಂದಿದೆ. ಬಹುಶಃ ಈಗ ಅದು ತಾರಾನಗರವಾಗಿರಬೇಕು.[೭೨]

ಈ ರಾಷ್ಟ್ರಕೂಟರ ಶಾಸನಗಳು ಸಂಡೂರಿನ ನೆರೆಯ ಪ್ರದೇಶಗಳಾದ ಕೊಳಗಲ್ಲು, ಕುಡತಿನಿಗಳಲ್ಲಿ ಕಂಡುಬರುತ್ತವೆ. ರಾಷ್ಟ್ರಕೂಟರ ಅರಸ ೩ನೇ ಕೃಷ್ಣನ ಹಾಗೂ ಕೊಟ್ಟಿಗನ ಕಾಲದ ಕುಡತಿನಿ ಮತ್ತು ಕೊಳಗಲ್ಲಿನ ಶಾಸನಗಳಲ್ಲಿ "ಕೊಳಗಲ್ಲಿನ ಪ್ರಭುಗದಾಧರನು ಕಾರ್ತಿಕೇಯ ತಪೋವನದ ಅಧಿಕಾರಿಯಾಗಿದ್ದನು. ಆತನು ಕೊಳಗಲ್ಲು ಮತ್ತು ಕುಡತಿನಿಗಳಲ್ಲಿ ಸ್ಕಂದದೇವನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆ.[೭೩] ಈ ಆಧಾರಗಳಿಂದ ರಾಷ್ಟ್ರಕೂಟರು ಈ ಪ್ರದೇಶವನ್ನು ಆಳ್ವಿಕೆ ನಡೆಸಿದ್ದಲ್ಲದೆ ಧರ್ಮ, ಸಾಹಿತ್ಯ, ಕಲೆಗಳಿಗೆ ಪ್ರೋತ್ಸಾಹಕೊಟ್ಟರೆಂದು ಹೇಳಬಹುದಾಗಿದೆ.

೯. ನೊಳಂಬರು

ನೊಳಂಬರು ಪಾರಂಪರಿಕವಾಗಿ ಬಂದ ನೊಳಂಬವಾಡಿ ೩೨೦೦೦ದ ಅರಸರು.[೭೪] ಮೊದಲಿಗೆ ನೊಳಂಬರು ಸಾಮಂತರಾಗಿ ಅಥವಾ ಪಲ್ಲವರ ಶಾಖೆಯಾಗಿ ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾಂತ್ಯವೊಂದನ್ನು ಈ ಭಾಗದಲ್ಲಿ ಸ್ಥಾಪಿಸಿ ಆಳಲು ಪ್ರಾರಂಭಿಸಿದರು. ಆ ರಾಜ್ಯವೆ ನೊಳಂಬವಾಡಿ ೩೨,೦೦೦[೭೫] ಸಂಡೂರು ನೊಳಂಬವಾಡಿ ೩೨,೦೦೦ದಲ್ಲಿ ಸೇರಲಾಗಿತ್ತು.[೭೬] ಇವರ ಆಳ್ವಿಕೆ ಮೂರು ಶತಮಾನಗಳ ಕಾಲ ನಿರಂತರವಾಗಿ ಮುಂದುವರೆಯಿತು. ಬಳ್ಳಾರಿ ಪ್ರದೇಶವು ನೊಳಂಬವಾಡಿಯ ಒಂದು ಭಾಗವಾಗಿತ್ತು.[೭೭] ಇವರು ಆರಂಭದಲ್ಲಿ ಹೇಮಾವತಿ (ಹೆಂಜೇರು)ಯನ್ನು ರಾಜಧಾನಿಯಾಗಿ ಹೊಂದಿದ್ದರೂ ಮುಂದೆ ಕಂಪಿಲೆ (ಹೊಸಪೇಟೆ ತಾ.)ಯನ್ನು ರಾಜಧಾನಿಯನ್ನಾಗಿ ಆರಿಸಿದರು.[೭೮] ಒಟ್ಟಿನಲ್ಲಿ ಉಚ್ಚಂಗಿ (ಹರಪನಹಳ್ಳಿ ತಾ.) ಹೆಂಜೇರು ಅಥವಾ ಹೇಮಾವತಿ (ಮಡಕಶಿರಾ.ತಾ) ಮತ್ತು ಕಂಪಿಲಿ (ಹೊಸಪೇಟೆ.ತಾ) ವಿವಿಧ ಕಾಲದಲ್ಲಿ ಇವರ ರಾಜಧಾನಿಗಳಾಗಿದ್ದವು.[೭೯]

೯. ಸಿಂಧರು

ಸಿರುಗುಪ್ಪ, ಹೊಸಪೇಟೆ, ಬಳ್ಳಾರಿ, ಸಂಡೂರು ತಾಲ್ಲೂಕುಗಳ ಹಾಗೂ ಆಂಧ್ರ ಪ್ರದೇಶದ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳ ಕೆಲವು ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಶಾಸನಗಳಲ್ಲಿ 'ಸಿಂದವಾಡಿ ನಾಡು' ಎಂದು ಕರೆಯಲಾಗಿದೆ. ಈ ಪ್ರದೇಶವನ್ನು ಬಹು ಹಿಂದಿನಿಂದ ಸಿಂದವಂಶದ ಅರಸರು ಆಳುತ್ತ ಬಂದಿದ್ದರಿಂದ ಇದಕ್ಕೆ ಈ ಹೆಸರು ಪ್ರಾಪ್ತವಾಗಿದೆ. ೨ನೇ ವೀರಬಲ್ಲಾಳ ಕ್ರಿ.ಶ.೧೨೦೬ರಲ್ಲಿ ಹಂಪೆಯ ಮಧುವನದಲ್ಲಿದ್ದು ಆಳುತ್ತಿದ್ದುದನ್ನು ಸಂಡೂರಿನ ಶಾಸನ ತಿಳಿಸುತ್ತದೆ. ಮುಂದೆ ಈ ಸಿಂದ ಮನೆತನದವರು ಏನಾದರೆಂಬುದು ತಿಳಿದುಬರುವುದಿಲ್ಲ.[೮೦] ಹಾಗೂ ಅಕಾಲವರ್ಷ ಶುಭತುಂಗ ಭಟಾರ (ಕೃಷ್ಣ II) ಆಳುತ್ತಿದ್ದುದನ್ನು ಬಳ್ಳಾರಿಗೆ ಸಮೀಪವಿರುವ ಮಂಚಳಾ ಗ್ರಾಮದ ಶಾಸನ ಹೇಳುತ್ತದೆ.[೮೧] ಈತನ ಸಾಮಂತ 'ಶ್ರೀಮತು ಕಣ್ಣಂ' ಸಿಂದವಾಡಿ ಸಾವಿರ ವಿಭಾಗವನ್ನು ಆಳುತ್ತಿರುವಾಗ ದಾನಕೊಟ್ಟ ಅಸ್ಪಷ್ಟ ಮಾಹಿತಿ ಇದೆ. (ಈ ೨ನೇ ಕೃಷ್ಣನು ಸಂಡೂರಿನ ಸಮೀಪವಿರುವ ಕುಮಾರಸ್ವಾಮಿ ದೇವರಿಗೆ ದತ್ತಿ ಬಿಟ್ಟುದನ್ನು ಸಂಡೂರಿನ ಶಾಸನ ತಿಳಿಸುತ್ತದೆ. ೨ನೇ ಕೃಷ್ಣನ ಕಾಲಕ್ಕಾಗಲೇ ಸಂಡೂರಿನ ಷಣ್ಮುಖಸ್ವಾಮಿ ದೇವಾಲಯ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಹೀಗಾಗಿ ಕೃಷ್ಣನು ಭಕ್ತಿ ಪೂರ್ವಕವಾಗಿ ದೇವರ ನೈವೇದ್ಯಕ್ಕೆ ಪ್ರೀತ ತಟಾಕ ಅಂದರೆ ಕೆರೆಯಪಳ್ಳಿ ಈಗಿನ ಕೆರ್ನಳ್ಳಿ ಗ್ರಾಮವನ್ನು ದಾನ ಬಿಡುತ್ತಾನೆ.[೮೨]

೧೦. ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಈ ಪ್ರದೇಶ ಸಂಪೂರ್ಣವಾಗಿ ಸೇರಿತ್ತು. ಇವರ ಸಾಮಂತರಾದ ಪಾಂಡ್ಯರು ಮಹಾಮಂಡಳೇಶ್ವರರಾಗಿ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದಿಂದ ನೊಳಂಬವಾಡಿ ೩೨,೦೦೦ವನ್ನು ಆಳಿದರು. ಸಂಡೂರು ನೊಳಂಬವಾಡಿಯಲ್ಲಿ ಸೇರಲಾಗಿತ್ತು. ತುಂಗಭದ್ರ ನದಿಯ ಉತ್ತರಕ್ಕೆ ಕುರುಗೋಡು ಸಿಂಧರು ಆಡಳಿತ ಮಾಡುತ್ತಿದ್ದರು.[೮೩]

ಕಲ್ಯಾಣ ಚಾಲುಕ್ಯರು ಕುಮಾರಸ್ವಾಮಿಯ ಆರಾಧನೆಯನ್ನು ಮುಂದುವರಿಸಿಕೊಂಡು ಬಂದರು. ಇವರ ಕಾಲದಲ್ಲಿ ಕುಡತಿನಿಯ ಕುಮಾರಸ್ವಾಮಿ ಸಂಡೂರಿನ ಕುಮಾರಸ್ವಾಮಿ ದೇವಾಲಯಗಳನ್ನು ಪುನಃ ನಿರ್ಮಾಣ ಮಾಡಲಾಯಿತು. ಕ್ರಿ.ಶ.೧೦೯೯ರ ಮುದನೂರು (ಸುರಪುರ ತಾ. ಗುಲ್ಬರ್ಗ ಜಿ.) ಗ್ರಾಮದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯ ಮುದನೂರು ಊರೊಡೆಯ ಪ್ರಮುಖವಾಗಿ ಐನೂರು ಮಹಾಜನರು ಕುಮಾರಸ್ವಾಮಿ ದಂಡನಾಯಕ ಪ್ರತಿಷ್ಠಾಪಿಸಿದ ಕುಮಾರಸ್ವಾಮಿ ದೇವರಿಗೆ ಅಂಗ ಭೋಗ, ರಂಗಭೋಗ, ನೈವೇದ್ಯ, ನಂದಾದೀವಿಗೆ ಹಾಗೂ ಜೀರ್ಣೋದ್ಧಾರ ಕಾರ್ಯಗಳು ನಿರಂತರವಾಗಿ

ನಡೆಯಲು ದಾನ ಬಿಟ್ಟ ಉಲ್ಲೇಖವಿದೆ. ಈ ಗ್ರಾಮದ (ಕ್ರಿ.ಶ.೧೯೦೮) ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸ ತ್ರಿಭುವನಮಲ್ಲದೇವರ ಆಳ್ವಿಕೆಯ ಕಾಲದಲ್ಲಿ ಲೋಕ್ಕಿಪೊನ್ನದ ಬದಲಾಗಿ ಅದರ ಸಮತೂಕದ ನವಿಲಚ್ಚಿನ ಪೊನ್ನವೆಂಬ ಬಂಗಾರದ ನಾಣ್ಯಗಳನ್ನು ಅಚ್ಚು ಹಾಕಲು ಪ್ರಾರಂಭಿಸಿದರು. ಮತ್ತು ಶ್ರೀಸ್ವಾಮಿಗೆ ವರ್ಷಕ್ಕೆ ೧೨ ಪೊನ್ನುಗಳನ್ನು ಕೊಡುತ್ತಾರೆ. ಕುರುಗೋಡು ಮತ್ತು ಕುಡುತಿನಿ ಗ್ರಾಮಗಳಲ್ಲಿ ನವಿಲಪೊನ್ನ ಎಂಬ ನಾಣ್ಯ ಹಾಗೂ ನವಿಲುಕೋಲು ಎಂಬ ಅಳತೆ ಬಳಕೆಯಲ್ಲಿದ್ದವು.

ಚಾಲುಕ್ಯರ ಕಾಲದಲ್ಲಿ ಕೆಲವು ಶೈವ ದೇವಾಲಯಗಳಲ್ಲಿ ಕುಮಾರಸ್ವಾಮಿಯ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಕುಮಾರಸ್ವಾಮಿಯ ಆರಾಧನೆ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿತು. ಸಂಡೂರು ಮತ್ತು ಕುಡತಿನಿಗಳಲ್ಲಿಯ ಕುಮಾರಸ್ವಾಮಿಯ ಕ್ಷೇತ್ರಗಳು ಪ್ರಮುಖ ಯಾತ್ರಾಸ್ಥಳಗಳಾಗಿದ್ದವು.[೮೪]

ಇವರ ಕಾಲದಲ್ಲಿ ಕುಮಾರಸ್ವಾಮಿ ದೇವಾಲಯಗಳನ್ನು ವೇಸರ ಶೈಲಿಯಲ್ಲಿ ಕಟ್ಟಲಾಗಿದೆ. ಕುಮಾರಸ್ವಾಮಿ ದೇವಾಲಯ ಕಲ್ಯಾಣ ಚಾಲುಕ್ಯರ ಶೈಲಿಯ ೧೧ನೇ ಶತಮಾನದ ಶೈಲಿಯಲ್ಲಿ ಕಟ್ಟಲಾಗಿದೆ. ಇದರಿಂದ ಇವರ ಕಾಲದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಅಲ್ಲದೆ ಕುಮಾರಸ್ವಾಮಿ ಮೂರ್ತಿಶಿಲ್ಪ ಸಹ ಕಲ್ಯಾಣ ಚಾಲುಕ್ಯರ ಕಾಲದ ಶೈಲಿಯಲ್ಲಿದೆ. ಇದರಿಂದ ಈ ಪ್ರದೇಶ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಸೇರಿದ್ದು, ಇಲ್ಲಿನ ಕಲೆ, ಸಾಹಿತ್ಯ, ಧರ್ಮ, ಸಾಂಸ್ಕೃತಿಕ ಬೆಳವಣಿಗೆಗೆ ಕಲ್ಯಾಣ ಚಾಲುಕ್ಯರು ಪ್ರೋತ್ಸಾಹ ನೀಡಿದ್ದಾರೆಂದು ಹೇಳಬಹುದು.[೮೫] ಹಾಗೂ ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲ ಜಯಸಿಂಹನ ಹಲವಾರು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿದ್ದು, ಅವುಗಳಲ್ಲಿ ಒಂದಾದ ಸಂಡೂರು ತಾಲ್ಲೂಕಿನ ಚೋರುನೂರು ಬಗ್ಗೆ ಉಲ್ಲೇಖವಿದೆ. ಸೋಗಿಯ ಶಾಸನ ಜಗದೇಕಮಲ್ಲನು ಚೋರುನೂರಿನಿಂದ ಆಳುತ್ತಿದ್ದನೆಂದು ಹೇಳುತ್ತದೆ. ಈ ಚೋರುನೂರು ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮವೇ ಆಗಿದೆ.[೮೬]

೧೧. ಪಾಂಡ್ಯರು

ಪಾಂಡ್ಯರು ಅನೇಕ ಶಾಸನಗಳಲ್ಲಿ ಉಚ್ಚಂಗಿಯ ಪಾಂಡ್ಯರೆಂದೇ ಹೆಸರಾಗಿದ್ದಾರೆ. ಉಚ್ಚಂಗಿದುರ್ಗ ಮತ್ತು ನೊಳಂಬವಾಡಿ ಹಾಗೂ ದೊರವಾಡಿಗಳನ್ನು ವಶಪಡಿಸಿಕೊಂಡಾಗ ಪಾಂಡ್ಯರ ಆಡಳಿತಕ್ಕೆ ಸೊಂಡೂರು ಸೇರಿರಬೇಕು. ಇವರ ಕಾಲದಲ್ಲಿ ಕುಮಾರಸ್ವಾಮಿ ದೇವಾಲಯ ತುಂಬಾ ಪ್ರಸಿದ್ಧಿ ಪಡೆದಿತ್ತು.[೮೭] ಇವರು ಚಾಲುಕ್ಯರ ಸಾಮಂತರಾಗಿ ನೊಳಂಬವಾಡಿಯನ್ನು ಆಳುತ್ತಿದ್ದರು.[೮೮] ಕ್ರಿ.ಶ.೧೧೪೮ರ ಉರುವಾಯಿ ಶಾಸನದ ಪ್ರಕಾರ ದೋರವಾಡಿ ನಾಡಿನ ವಿಚಾರ ಬರುತ್ತದೆ. ಸಂಡೂರಿನ ಕಾರ್ತಿಕೇಯ ಸ್ವಾಮಿ ದೇವಾಲಯದ ಪ್ರದೇಶಕ್ಕೆ ದೋರವಾಡಿ ನಾಡೆಂದು ಕರೆಯಲಾಗಿದೆ. ಚಾಲುಕ್ಯರಿಗೆ ಸಾಮಂತ ಅರಸರಾದ ಪಾಂಡ್ಯರು ಉಚ್ಚಂಗಿ ಮುಖ್ಯಪಟ್ಟಣದಿಂದ ನೊಳಂಬವಾಡಿಯನ್ನು ಆಳುತ್ತಿದ್ದರು. ಇವರಲ್ಲಿ ಪ್ರಮುಖ ಅರಸರೆಂದರೆ ವೀರ ಪಾಂಡ್ಯನು ಇವನು 'ಮಲ್ಯೆ' ಪ್ರದೇಶವನ್ನು ವಶಪಡಿಸಿಕೊಂಡಿದ್ದನು.[೮೯]

೧೨. ಹೊಯ್ಸಳರು

ಕಲ್ಯಾಣ ಚಾಲುಕ್ಯರ ನಂತರ ಕ್ರಿ.ಶ.೧೧೦೮ರಲ್ಲಿ ಅಧಿಕಾರಕ್ಕೆ ಬಂದ ಹೊಯ್ಸಳರು ೧೩೪೨ರವರೆಗೆ ಆಳ್ವಿಕೆ ನಡೆಸಿದರು. ಇವರು ಕ್ರಿ.ಶ.೧೧೩೫ರಲ್ಲಿ ಉಚ್ಚಂಗಿ ಕೋಟೆಯನ್ನು ಮುತ್ತಿ ನೊಳಂಬವಾಡಿ ೩೨,೦೦೦ವನ್ನು ಒಳಗೊಂಡಂತೆ ತುಂಗಭದ್ರಾ ನದಿವರೆಗಿನ ಪ್ರದೇಶವನ್ನು ಆಕ್ರಮಿಸಿದರು. ಅಷ್ಟೇ ಅಲ್ಲದೆ ಕೊಂಕಣದಿಂದ ಸಾವಿಮಲೆ (ಸಂಡೂರು ಪ್ರದೇಶ)ವರೆಗಿನ ಸಾಕಷ್ಟು ವಿಸ್ತಾರವಾದ ಪ್ರದೇಶದ ಸ್ವಾಮಿಯಾಗಿದ್ದ ಎರೆಯಗಂಗನ ರಾಜ್ಯಕ್ಕೆ ಆತನ ಮಗ ಒಂದನೇಯ ಬಲ್ಲಾಳ ಉತ್ತರಾಧಿಕಾರಿಯಾದನು. ಇದು ಬಹುದೊಡ್ಡ ಪ್ರದೇಶವಾಗಿದ್ದರೂ ಬಲ್ಲಾಳನ ಪೂರ್ವಜರು ಅದನ್ನು ಸಾಮಂತರಾಗಿಯೇ ಪಡೆದುಕೊಂಡಿದ್ದರು.[೯೦] ಇವರ ಕಾಲದ ಶಾಸನಗಳಲ್ಲಿ ಒಂದು ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದಲ್ಲಿಯೂ ಮತ್ತು ಮೂರು ಕುಡತಿನಿಗಳಲ್ಲಿಯೂ ಇವೆ.[೯೧] ೨ನೆಯ ವೀರಬಲ್ಲಾಳನ ಕ್ರಿ.ಶ.೧೨೦೬ರ ಶಾಸನದಲ್ಲಿ ಕುಮಾರಸ್ವಾಮಿ ದೇವಾಲಯದ ದಾನವನ್ನು ಮಹದೇವ ದಂಡನಾಯಕನು ನವೀಕರಿಸಿದ ವಿಷಯವಿದೆ.[೯೨] ರಾಷ್ಟ್ರಕೂಟರ ಮೂರನೇ ಕೃಷ್ಣನು ಕುಮಾರಸ್ವಾಮಿಗೆ ಕೆರೆಯಪಳ್ಳಿ ಗ್ರಾಮವನ್ನು ದಾನ ಬಿಟ್ಟದ್ದನ್ನು ಗಮನಿಸಿದರೆ, ಗಧಾದರನು ಇದೆ ಅವಧಿಯಲ್ಲಿ ಅಲ್ಲೂ ಕುಮಾರಸ್ವಾಮಿಯ ದೇವಾಲಯವನ್ನು ಕಟ್ಟಿಸಿದಂತೆ ಕಾಣುತ್ತದೆ. ಸಂಡೂರು ಕುಮಾರಸ್ವಾಮಿ ದೇವರಿಗೆ ಈ ಹಿಂದೆ ೩ನೇ ಕೃಷ್ಣನ ಕಾಲದಲ್ಲಿ ಬಿಟ್ಟ ಕೆರೆಯಪಳ್ಳಿ ಗ್ರಾಮದತ್ತಿ ನಿಂತು ಹೋಗಲು ವೀರಬಲ್ಲಾಳನ ಆಜ್ಞೆಯಂತೆ ಪ್ರಧಾನಮಂತ್ರಿ ಮಹಾದೇವ ದಂಡನಾಯಕನು ಅದರ ಸ್ಥಾನಿಕ ವಿಷ್ಣುಕರ ಬ್ರಹ್ಮಚಾರಿಗೆ ಪುನಃ ದತ್ತಿ ಬಿಡುತ್ತಾನೆ.

ಕ್ರಿ.ಶ.೧೨೧೮ರಲ್ಲಿ ತಲರ(ತಾಳೂರು)ದಲ್ಲಿ ಯಗವಟ್ಟಿಯ ಬೊಮ್ಮಗವುಡನು ಈಶ್ವರ ದೇವಾಲಯವನ್ನು ಕಟ್ಟಿಸುತ್ತಾನೆ. ಈ ದೇವಾಲಯವನ್ನು ಕಟ್ಟಿಸಿದ ಬೊಮ್ಮೊಜನಿಗೆ ಭೂದಾನ ನೀಡಿದನು. ಇದು ಸಂಡೂರಿನ ಸಮೀಪದಲ್ಲಿದೆ. ಬಳ್ಳಾರಿ ಜಿಲ್ಲೆಯ ಕುರುಗೋಡು ಮತ್ತು ಕಂಪಲಿ ಸ್ಥಳಗಳಲ್ಲಿ ದೊರೆತ ೧೨೧೭ ಮತ್ತು ೧೨೧೯ರ ಶಾಸನದ ಪ್ರಕಾರ ಬಲ್ಲಾಳನು ಸ್ವಾಮಿ ಕಾರ್ತಿಕೇಯ ತಪೋವನಕ್ಕೆ ದತ್ತಿಯನ್ನು ಕೊಟ್ಟು ತೆಲ್ಲಿಗೆಯನ್ನು ಸ್ಥಾಪಿಸಿದ್ದಾನೆ.[೯೩]

ಕ್ರಿ.ಶ.೧೨೨೪ರಲ್ಲಿ ವೀರಬಲ್ಲಾಳನ ದಂಡನಾಯಕ ಅಮಿತಯ್ಯನೆಂಬುವನು ಶ್ರೀಪುರದಲ್ಲಿ ತ್ರಿಕೂಟ ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಅಮೃತೇಶ್ವರ, ವಾಮೇಶ್ವರ, ಲಕ್ಷ್ಮೀನಾರಾಯಣ ದೇವರುಗಳನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲದೆ ಈ ದೇವಾಲಯದ ಪೂಜಾಕಾರ್ಯಕ್ಕಾಗಿ ಕೊಂಡಕಸಿಪುರವೆಂಬ ಗ್ರಾಮದಾನ ನೀಡುತ್ತಾನೆ.[೯೪]

ಕಾರ್ತಿಕೇಯ ತಪೋವನಾಧಿಪತಿ ವಿಷ್ಣುಕರ ಬ್ರಹ್ಮಚಾರಿಯ ಉಲ್ಲೇಖ ಕುಡತಿನಿಯ ಶಾಸನದಲ್ಲಿಯೂ ಇದೆ. ಇವರ ಕಾಲದಲ್ಲಿ ಕಾರ್ತಿಕೇಯನ ಕ್ಷೇತ್ರ ಮತ್ತಷ್ಟು ಪ್ರಚಾರಕ್ಕೆ ಬಂತು. ಈ ಅನೇಕ ಆಧಾರಗಳಿಂದ

ಹೊಯ್ಸಳ ಅರಸರು ಸಂಡೂರು ಪ್ರದೇಶದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ಉತ್ತಮ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ.

೧೩. ಕುಮ್ಮಟದ ನಾಯಕರು

ಕರ್ನಾಟಕದ ಚರಿತ್ರೆಗೆ ವಿಶಿಷ್ಟ ಕೊಡುಗೆಯನ್ನು ನೀಡಿದ ಕುಮ್ಮಟ ಅರಸರ ಇತಿಹಾಸವು ಸಂಡೂರು ತಾಲ್ಲೂಕಿನ ಚರಿತ್ರೆಯಲ್ಲಿಯೂ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದಿದೆ.

ಮುಮ್ಮಡಿ ಮನೆತನದ ಇತಿಹಾಸವನ್ನು ಅರಿಯಲು ಶಾಸನಗಳು, ಕನ್ನಡ ಸಾಹಿತ್ಯ ಕೃತಿಗಳು ಜಾನಪದ ಕಥೆಗಳು ಮತ್ತು ಕೈಫಿಯತ್ತುಗಳು ಆಧಾರವಾಗಿವೆ. ಕುಮಾರರಾಮನನ್ನು ಕುರಿತಂತೆ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಕುಮಾರರಾಮಯ್ಯನ ಚರಿತೆ, ನಂಜುಂಡ ಕವಿಯ ಕುಮಾರರಾಮ ಚರಿತೆ, ಮಹಾಲಿಂಗ ಸ್ವಾಮಿಯ ಬಾಲರಾಮನ ಸಾಂಗತ್ಯಗಳು ಹುಟ್ಟಿಕೊಂಡಿವೆ. ಡಾ.ಜಿ.ವರದರಾಜರಾವ್ ಅವರು 'ಕುಮಾರರಾಮನ ಸಾಂಗತ್ಯಗಳು' ಎಂಬ ಶೀರ್ಷಿಕೆಯಲ್ಲಿ ಸಾಂಗತ್ಯಗಳನ್ನು ಅಧ್ಯಯನ ಮಾಡಿ ಪಿಎಚ್.ಡಿ. ಮಹಾಪ್ರಬಂಧ ರಚಿಸಿದ್ದು, ಅದು ಪ್ರಕಟಗೊಂಡಿದೆ. ಕರ್ನಲ್ ಮೆಕೆಂಝಿ ಸಂಗ್ರಹಿಸಿದ್ದ ಕೈಫಿಯತ್ತುಗಳನ್ನು ಡಾ.ಎಂ.ಎಂ.ಕಲಬುರ್ಗಿಯವರು ಸಂಪಾದಿಸಿ 'ಕರ್ನಾಟಕದ ಕೈಫಿಯತ್ತುಗಳು' ಎಂದು ಪ್ರಕಟಿಸಿದ್ದಾರೆ. ಅವುಗಳಲ್ಲಿ ಅಂತಾಪುರ ಕೈಫಿಯತ್ತು, ಕೈಫಿಯತ್ತು ಕುರುಗೋಡು ತಾಲ್ಲೂಕೆ ಬಳ್ಳಾರಿ, ಕೈಫಿಯತ್ತು ಭಟ್ಟರಹಳ್ಳಿ, ತಾಲ್ಲೂಕು ಕಂಪಲಿ ಕೈಫಿಯತ್ತು, ದರೋಜಿ ಗ್ರಾಮದ ಕೈಫಿಯತ್ತು ಹಾಗೂ ಮೈ.ಹ.ರಾಮಶರ್ಮರ ರಣಧೀರ ರಾಮನಾಥ ಗ್ರಂಥದಲ್ಲಿಯೂ ಅಷ್ಟೇ ಅಲ್ಲದೆ, ಡಾ.ಸಿ.ಎಸ್.ಪಾಟೀಲರು 'Vijayanagara : Progress of research 1987-88' ಕೃತಿಯಲ್ಲಿ ಈ ಅರಸರಿಗೆ ಸಂಬಂಧಿಸಿದ Mummadi Singa, Kampila and Kumara rama ಮತ್ತು Kumata ಎಂಬ ಎರಡು ಉಪಯುಕ್ತ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವಲ್ಲದೆ ಈ ಅರಸರ ಆಳ್ವಿಕೆಯ ಕುರಿತು ಅನೇಕ ಲೇಖನಗಳು ಪ್ರಕಟವಾಗಿವೆ. ಈ ಎಲ್ಲಾ ಆಧಾರದಿಂದ ಮುಮ್ಮಡಿ ಮನೆತನದ ಅರಸರ ಇತಿಹಾಸವನ್ನು ಈ ರೀತಿ ಚಿತ್ರಿಸಬಹುದು.

ಬಳ್ಳಾರಿ ಜಿಲ್ಲೆಯಲ್ಲಿಯ ರಾಯದುರ್ಗದ ನೆರೆಹೊರೆಯ ಪ್ರದೇಶವನ್ನು ಜನರು ಮಲೆಪ್ರಾಂತ್ಯ ಅಥವಾ ಮಲೆಪಂಕ್ತಿ ದೇಶವೆಂದು ಕರೆಯುತ್ತಿದ್ದರು.[೯೫] ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಎಂಬ ಗ್ರಂಥದಲ್ಲಿ ಈ ಮಲೆಪ್ರಾಂತ್ಯಕ್ಕೆ 'ಅರ್ಧಮತಿ' ಎಂದರೆ 'ಅರಣ್ಯಪಂಥಿ' ಎಂದು ಉಲ್ಲೇಖಿಸಿದೆ. ಈ ಅರ್ಧಮತಿಯೇ ಮುಂದೆ ಅರಣ್ಯಪಂಥಿ > ಮಲೆಪ್ರಾಂತ್ಯ ಅಥವಾ ಮಲೆಪಂಕ್ತಿಯಾಗಿರಬೇಕು. ಈ ಮಲೆ ಪಂಕ್ತಿ ದೇಶದ ತಿಪ್ಪಸಮುದ್ರ ಎಂಬ ಗ್ರಾಮದಲ್ಲಿ ಮುಮ್ಮಡಿ ಸಿಂಗೆಯನಾಯಕನು ಜನಿಸಿದನು. ಈತನಿಗೆ 'ಮುಮ್ಮಡಿ' ಎಂಬ ಬಿರುದಿತ್ತು.[೯೬] ಇಲ್ಲಿ 'ಮುಮ್ಮಡಿ' ಎಂಬ ಶಬ್ದ ಹಿಡಿದು ಈ ವಂಶದಲ್ಲಿ ಹಿಂದೆ

ಆಳಿದ್ದಿರಬಹುದಾದ ಇಮ್ಮಡಿ ಅಥವಾ ಮೊದಲನೆಯಸಿಂಗೆಯ ನಾಯಕನೆಂಬ ಪೂರ್ವಜರು ಆಡಳಿತ ನಡೆಸಿರಬೇಕೆಂದು ತೋರುತ್ತದೆ. ಈತನು ಬೇಡರ ಜಾತಿಯವನು. ಈತನ ಕುಲದೇವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಾಪುರ ಬಳಿಯಿರುವ ಜಟಾಂಗಿರಾಮೇಶ್ವರ. ಈ ಮುಮ್ಮಡಿ ಸಿಂಗನು ಮೊದಲು ನಾಡ ತಳವಾರನಾಗಿದ್ದನು.[೯೭]

ಕಲ್ಯಾಣಚಾಲುಕ್ಯ ದೊರೆ ೬ನೆಯ ವಿಕ್ರಮಾದಿತ್ಯನ ಸಮರ್ಥ ಮಹಾಮಂಡಳೇಶ್ವರರಾಗಿ ಸೇವುಣರು ಕರ್ನಾಟಕದ ಹಾಗೂ ಮಹಾರಾಷ್ಟ್ರಗಳ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿದ್ದರು. ಕ್ರಿ.ಶ.೧೩೧೮ರಲ್ಲಿ ಸೇವುಣ ರಾಜ್ಯ ತನ್ನ ಅವಸಾನವನ್ನು ಕಂಡುಕೊಂಡಿತು. ಅವಸಾನದ ಜೊತೆ ಅಸ್ತಿತ್ವದ ನೆಲೆಯನ್ನು ಕಳೆದುಕೊಂಡ ಸೇವುಣ ರಾಜ್ಯ ದೆಹಲಿಯ ಒಂದು ಪ್ರಾಂತ್ಯವಾಗಿ ಉಳಿದುಕೊಂಡಿತು. ಕರ್ನಾಟಕದಲ್ಲಿ ಈ ಸಂಧಿಯನ್ನು ಸದುಪಯೋಗಪಡಿಸಿಕೊಂಡು ಕುಮ್ಮಟದುರ್ಗವನ್ನು ತಮ್ಮ ರಾಜಧಾನಿಯನ್ನಾಗಿಸಿಕೊಂಡು ಕಂಪಿಲಿಯನ್ನು ಸಮರ್ಥರಾಜ್ಯವನ್ನಾಗಿ ಮಾರ್ಪಡಿಸಿದವರು ಈ ಮರುಳೆಯ ಮನೆತನದವರು. ಕಾಲದಿಂದ ಕಾಲಕ್ಕೆ ಹತ್ತಾರು ಕೈಗಳ ಅಧಿಕಾರಕ್ಕೆ ಸಿಕ್ಕಿ ಈ ಪ್ರದೇಶ ಸೇವುಣ ಹಾಗೂ ಹೊಯ್ಸಳ ಸೀಮೆಗಳ ನಡುವಿನ ತಡೆರಾಜ್ಯವಾಗಿ ಅಧಿಕ ಮಹತ್ವ ಪಡೆಯಿತು.[೯೮] ಬಲ್ಲಕುಂದೆ ಮೂನ್ನೂರು ಪ್ರಾಂತದ ದೊರವಡಿ (ಈಗಿನ ಬಳ್ಳಾರಿ ಜಿಲ್ಲೆಯ ದರೋಜಿ ಅಥವಾ ದೋಅಬ್) ಅನ್ನು ತನ್ನ ಪ್ರಬಲ ಕೋಟೆಯನ್ನಾಗಿ ರೂಪಿಸಿ ಕೊಂಡಿದ್ದರೂ, ಪರಾಕ್ರಮಿಯಾಗಿದ್ದ ಮುಮ್ಮಡಿಸಿಂಗೆಯನಾಯಕನು (೧೨೮೦-೧೩೦೦) ಸದ್ದುಗದ್ದಲವಿಲ್ಲದೆ, ಸೀಮಿತವಾಗಿ ತನ್ನ ಪಾಳೆಯ ಪಟ್ಟನ್ನು ಹರಿಹರದವರೆಗಿನ ಚಿತ್ರದುರ್ಗ ಜಿಲ್ಲೆಯ ಭಾಗಗಳನ್ನೊಳಗೊಂಡಂತೆ ಸಾದ್ಯಂತವಾಗಿ ವಿಸ್ತರಿಸಿದ್ದ.[೯೯]

ಕೈಫಿಯತ್ತಿನ ಹೇಳಿಕೆಯಂತೆ ಜಿ.ವರದರಾಜರಾಯರು ಮಾಹಿತಿಯನ್ನು ಸಂಗ್ರಹಿಸಿ ಹೇಳಿರುವ ಪ್ರಕಾರ ಮುಮ್ಮಡಿ ಸಿಂಗೆಯನೆಂಬಾತನು ತನ್ನ ದಾಯಾದಿಗಳ ಕಾಟವನ್ನು ತಡೆಯಲಾಗದೆ ರಾಜ್ಯವನ್ನೆಲ್ಲ ಅವರಿಗೆ ಹಂಚಿಕೊಟ್ಟು ತಾನೂ ದೇವಗಿರಿಯ ರಾಮದೇವರಾಯನನ್ನು ಆಶ್ರಯಿಸಿದನು ಎಂದಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳಲ್ಲಿಯ 'ಪುವ್ವಲ ಅರಸರು' ಎಂಬ ಲೇಖನದಲ್ಲಿ ಮುಮ್ಮಡಿಸಿಂಗನು ಮೊದಲು ದೇವಗಿರಿಯಲ್ಲಿದ್ದನು ಎಂದು ತಿಳಿಸುತ್ತದೆ. ಅದು ಸಂಡೂರು ದೇಶದಲ್ಲಿರುವ ಕುಮಾರಸ್ವಾಮಿ ಬೆಟ್ಟವೇ ಈ ದೇವಗಿರಿಯಾಗಿದೆ ಎಂದಿದ್ದಾರೆ.[೧೦೦] ಪಾಂಚಾಳಗಂಗನ ಚೆನ್ನರಾಮನ ಸಾಂಗತ್ಯವು ಮುಮ್ಮಡಿಸಿಂಗನು ದೇವಗಿರಿಯಿಂದ 'ಹನೆಯದೆರೆ'ಗೆ (ಚಿತ್ರದುರ್ಗ ಜಿ. ಮೊಳಕಾಲ್ಮೂರು ತಾ.) ಬಂದು ಅಲ್ಲಿ ತನ್ನ ವಾಸ್ತವ್ಯ ಕಟ್ಟುತ್ತಾನೆ ಎಂದು ತಿಳಿಸುತ್ತದೆ. ರಣಧೀರ ರಾಮನಾಥ ಗ್ರಂಥದಲ್ಲಿ ಮುಮ್ಮಡಿ ಸಿಂಗನಿಗೆ ದಾಯಾದಿಗಳು ಅನೇಕರು ಒಮ್ಮೆ ಇವರೊಳಗೆ ತಮ್ಮ ಆಸ್ತಿಯ ವಿಚಾರವಾಗಿ ಬಲವಾದ ಕಲಹವು ತಲೆದೂರಿತು ಆದ್ದರಿಂದ ಮುಮ್ಮಡಿಸಿಂಗನು ದಯಾದಿಗಳ ಕಾಟ ತಡೆಯಲಾಗದೆ ಅವರಿಗೆ ಎಲ್ಲಾ ಆಸ್ತಿಯನ್ನು ಹಂಚಿ ತಾನು ಸ್ವದೇಶವನ್ನು ಬಿಟ್ಟು

ಪರಿವಾರ ಸಹಿತ ದೂರದಲ್ಲಿದ್ದ ದೇವಗಿರಿಗೆ ಹೊರಟು ಹೋದನು ಎಂದಿದೆ. ಆದರೆ ಸೇವುಣರ ಆಳ್ವಿಕೆಗೆ ಒಳಪಟ್ಟ ದೇವಗಿರಿಯ ಪ್ರದೇಶವು ಈಗಿನ ಮಹಾರಾಷ್ಟ್ರದಲ್ಲಿದೆ. ೯ನೆಯ ಶತಮಾನದಲ್ಲಿ ಈ ದೇವಗಿರಿ ಪ್ರದೇಶಕ್ಕೆ ಈಗಿನ ಮಹಾರಾಷ್ಟ್ರದ ಅರ್ಥ ಇರಲಿಲ್ಲ.[೧೦೦] ಅಂದರೆ ರಣಧೀರ ರಾಮನಾಥ ಗ್ರಂಥದಲ್ಲಿಯ ಹೇಳಿಕೆಯಂತೆ ಸಿಂಗನು ಸ್ವದೇಶ ಬಿಟ್ಟು ಪರಿವಾರ ಸಹಿತ ದೂರದಲ್ಲಿದ್ದ ದೇವಗಿರಿಗೆ ಹೋದನು ಎಂಬುದನ್ನು ಗಮನಿಸಿದರೆ ಇಂದಿನ ಮಹಾರಾಷ್ಟ್ರದಲ್ಲಿಯ ದೇವಗಿರಿಯ ಪ್ರದೇಶಕ್ಕೆ ಹೋಗಿ ಅಲ್ಲಿ ರಾಮದೇವರಾಯನನ್ನು ಆಶ್ರಯಿಸಿದನು ಎಂಬ ಹೇಳಿಕೆ ಸತ್ಯಕ್ಕೆ ಹತ್ತಿರವಾದದೆಂದು ಊಹಿಸಬಹುದಾಗಿದೆ.

ಒಟ್ಟಿನಲ್ಲಿ ಮೇಲಿನ ಕೈಫಿಯತ್ತು, ಸಾಂಗತ್ಯ, ಗ್ರಂಥಗಳ ಹೇಳಿಕೆಯನ್ನು ಗಮನಿಸುವುದರಿಂದ ಮುಮ್ಮಡಿಸಿಂಗನು ಆಶ್ರಯಿಸಿದ ರಾಮದೇವರಾಯನ ದೇವಗಿರಿ ಪ್ರದೇಶ, ಸಂಡೂರು ಪ್ರದೇಶದ ದೇವಗಿರಿಯೋ? ಅಥವಾ ಈಗಿನ ಮಹಾರಾಷ್ಟ್ರದಲ್ಲಿರುವ ದೇವಗಿರಿಯೋ? ಎಂಬ ಬಗ್ಗೆ ಅನುಮಾನ ಉಂಟಾಗುತ್ತದೆ.

ಪಾಂಚಾಳಗಂಗನ ಚೆನ್ನರಾಮ ಸಾಂಗತ್ಯವು ಸಿಂಗನು ದೇವಗಿರಿಯಿಂದ 'ಹನೆಯದೆರೆಗೆ' ಬಂದು ಅಲ್ಲಿ ತನ್ನ ವಾಸ್ತವ್ಯ ಕಟ್ಟುತ್ತಾನೆ. ರಾಯದುರ್ಗದ ಅರಸನನ್ನು ಕಂಡು ಆತನ ದಳವಾಯಿಯಾಗುತ್ತಾನೆ ಎಂದು ತಿಳಿಸುತ್ತದೆ.[೧೦೧] ಹಾನೆಯದೆರೆ ಎಂಬ ಪ್ರಾಂತ್ಯವು ಆಗ ರಾಯದುರ್ಗದ ಮಲ್ಲರಾಜನೆಂಬುವನ ಅಧಿಕಾರಕ್ಕೆ ಒಳಪಟ್ಟಿತ್ತು.[೧೦೨] ಇದರಿಂದ ವ್ಯಕ್ತವಾಗುವುದೇನೆಂದರೆ ಸಿಂಗನು ಮೊದಲು ದೇವಗಿರಿಯಲ್ಲಿ ತನ್ನ ಆಳ್ವಿಕೆಯನ್ನು ಆರಂಭಿಸಿ ಸ್ವಲ್ಪ ಕಾಲದಲ್ಲಿಯೇ ನಿಡುಗಲ್ಲಿನ ಚೋಳ ಮಹಾರಾಜನಾದ ಮಲ್ಲದೇವನಿಂದ ಹನೆಯಕೋಟೆ ಮತ್ತು ಸುತ್ತಲು ೨೦ ಹಳ್ಳಿಗಳ ರಾಜ್ಯವನ್ನು ಪಡೆದನೆಂದು ತಿಳಿದುಬರುತ್ತದೆ.[೧೦೩] ಈ ಹನೆಯದೆರೆಯಲ್ಲಿ ೧೨-೧೩ನೆಯ ಶತಮಾನದಲ್ಲಿ ಕಟ್ಟಲ್ಪಟ್ಟ ಕೋಟೆಯೂ ಇದೆ. ಇದನ್ನು ಚೋಳ ಬಮ್ಮದೇವನಲ್ಲಿ ಮಂತ್ರಿಯಾಗಿದ್ದ ಬೀಚನು ಕಟ್ಟಿಸಿದ್ದಾನೆಂದು ಶಾಸನಗಳ ಆಧಾರದಿಂದ ಡಾ.ಚೆನ್ನಬಸಪ್ಪ ಪಾಟೀಲರು ತಿಳಿಸುತ್ತಾರೆ.[೧೦೪] ಒಟ್ಟಿನಲ್ಲಿ ಯಾದವ ರಾಮದೇವರಾಯನಲ್ಲಿ ಆಶ್ರಯ ಪಡೆದ ಮುಮ್ಮಡಿಸಿಂಗೆಯನಾಯಕ ಯಾದವರು ಸುಲ್ತಾನರಿಗೆ ಸೋತು ಹೋದ ನಂತರ ಮರಳಿ ರಾಯದುರ್ಗಕ್ಕೆ ಬಂದು ಒಂದು ಸಣ್ಣ ಪಾಳೆಯ ಪಟ್ಟನ್ನು ಕಟ್ಟಿಕೊಂಡಂತೆ ಚೆನ್ನರಾಮ ಸಾಂಗತ್ಯ ವಿವರಿಸಿದೆ. ಕಾಲಾಂತರದಲ್ಲಿ ದೊರವದಿಯಲ್ಲಿ ನೆಲೆಸಿ ಕುಮ್ಮಟದುರ್ಗವನ್ನು ಕೈವಶ ಮಾಡಿಕೊಂಡಿರಬೇಕೆಂದು ಶಾಸನಗಳ ಊಹೆಯಾಗಿದೆ.[೧೦೫] ಹೀಗೆ ಮುಮ್ಮಡಿಸಿಂಗನು ಮುಂದೆ ತನ್ನ ಸ್ವಬಾಹು ಬಲದಿಂದ ಸುತ್ತಣ ರಾಜ್ಯವನ್ನೇ ವಿಸ್ತರಿಸಿ ದೇವವಾಡಿಯನ್ನು ರಾಜಧಾನಿ ಮಾಡಿಕೊಂಡನು.[೧೦೬] ದೇವಗಿರಿಯಿಂದ ಹನೆಯದೆರೆಗೆ ಬಂದು ಅಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಂಡು ನಂತರ ದೊರವಡಿ ವಿಭಾಗವನ್ನು ತನ್ನ ವಶಕ್ಕೆ ತೆಗೆದುಕೊಂಡು ಈ ದೊರವಡಿಯನ್ನು ಕೇಂದ್ರಸ್ಥಳವನ್ನಾಗಿಸಿಕೊಂಡು ಆಳುತ್ತಾನೆ.[೧೦೭] ಹನೆಯದೆರೆ ಮತ್ತು ದೊರವಾಡಿಗಳು ರಾಜಧಾನಿಗಳಾಗಿದ್ದುವೆಂದು ತಿಳಿದುಬರುವುದು.[೧೦೮] ಇದರ ಜೊತೆಗೆ ರಣಧೀರ ರಾಮನಾಥ

ಗ್ರಂಥದ ಉಲ್ಲೇಖದಂತೆ ರಾಯದುರ್ಗವು ಅವನ ಮತ್ತೊಂದು ರಾಜಧಾನಿಯಾಗಿತ್ತೆಂದು, ಅದೇ ಅವನ ಮೊದಲ ರಾಜಧಾನಿಯಾಗಿದ್ದಿರಬೇಕು ಎಂದು ತಿಳಿದುಬರುತ್ತದೆ.[೧೧೦] ಮುಂದೆ ಕುಮ್ಮಟವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಪ್ರಾರಂಭಿಸುತ್ತಾನೆ.[೧೧೧] ಕ್ರಿ.ಶ.೧೨೮೭ರಲ್ಲಿ ಕುಮ್ಮಟದಲ್ಲಿದ್ದನೆಂದು ಲಕ್ಷ್ಮೇಶ್ವರ ಶಾಸನದಿಂದ ತಿಳಿಯುತ್ತದೆ.[೧೧೨] ಹಾಗೂ ಈ ಸಮಯಕ್ಕೆ ಮುಮ್ಮಡಿ ಸಿಂಗೆಯನಾಯಕನಿಗೆ ಕುಮ್ಮಟವು ರಾಜಧಾನಿಯಾಗಿತ್ತು.[೧೧೩] ಈ ಕುಮ್ಮಟದುರ್ಗವು ಕರ್ನಾಟಕದ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದ್ದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಒಟ್ಟಿನಲ್ಲಿ ಹೇಳುವುದಾದರೆ ಇತ್ತೀಚಿನ ಸಂಶೋಧನೆಗಳಿಂದ ಕುಮ್ಮಟದುರ್ಗವು ಮುಮ್ಮಡಿಸಿಂಗನ ನಿಜವಾದ ರಾಜಧಾನಿಯಾಗಿತ್ತೆಂಬುದು ಸುಸ್ಪಷ್ಟವಾಗಿದೆ.[೧೧೪]

ಮುಮ್ಮಡಿಸಿಂಗನ ವಂಶಾವಳಿಯ ಬಗ್ಗೆ ಶಾಸನ, ಕಾವ್ಯ, ಗ್ರಂಥಗಳಿಂದ ಈ ರೀತಿ ತಿಳಿದುಕೊಳ್ಳಬಹುದಾಗಿದೆ. ಮುಮ್ಮಡಿಸಿಂಗನು ಮುಮ್ಮಡಿ ಮನೆತನದ ಮೂಲ ಪುರುಷ. ಈತನ ಪತ್ನಿಯ ಹೆಸರನ್ನು 'ರಣಧೀರ ರಾಮನಾಥ' ಗ್ರಂಥವು 'ಮಾರಾಂಬಿಕೆ' ಎಂದು ತಿಳಿಸುತ್ತದೆ. ಆದರೆ ಕ್ರಿ.ಶ.೧೩೨೭ರ ಹೊಸಮಲೆ ಶಾಸನದಲ್ಲಿ ಈ ಹೆಸರನ್ನು 'ಮಾದನಾಯಕಿತಿ' ಎಂದು ಉಲ್ಲೇಖಿಸಿದೆ. ಆದ್ದರಿಂದ ಇಲ್ಲಿ ಹೊಸಮಲೆ ಶಾಸನದ ಉಲ್ಲೇಖದಂತೆ ಹೇಳುವುದಾದರೆ ಈ ಮಾರಾಂಬಿಕೆ ಎಂಬ ಹೆಸರೇ ಬಹುಶಃ ಮುಂದೆ ಮಾದಾಂಬಿಕೆ ಅಥವಾ ಮಾದನಾಯಕಿತಿಯಾಗಿ ಬಳಕೆಯಾಗಿದ್ದಿರಬೇಕೆಂದು ಊಹಿಸಬಹುದಾಗಿದೆ.[೧೧೫]

ಮುಮ್ಮಡಿಸಿಂಗನಿಗೆ ಕಂಪಿಲರಾಯನೆಂಬ ಮಗನಿದ್ದನು. (ಕ್ರಿ.ಶ.೧೩೦೦-೧೩.೨೭) ಈತನು ಸೇವುಣ ದೊರೆ ರಾಮಚಂದ್ರನ ನಿಕಟವರ್ತಿಯಾಗಿ, ಆತ್ಮೀಯನಾಗಿ ಹಲವಾರು ಬಾರಿ ರಣಾಂಗಣದಲ್ಲಿ ಹೊಯ್ಸಳನನ್ನು ಎದುರಿಸಿದ್ದನು. ಸ್ನೇಹಿತ ಸೇವುಣ ದೊರೆಯ ಮರಣ ಕಂಪಿಲನಿಗೆ ರಾಜ್ಯ ವಿಸ್ತರಣೆಗೆ ಅವಕಾಶ ಮಾಡಿ ಕೊಟ್ಟಿತು. ಈತನು ಕರ್ನಾಟಕದಲ್ಲಿ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳ ಮತ್ತು ಆಂಧ್ರ ಪ್ರದೇಶದಲ್ಲಿ ಅನಂತಪುರ ಜಿಲ್ಲೆಯ ಭಾಗಗಳನ್ನು ತನ್ನ ಕೈವಶ ಮಾಡಿಕೊಂಡು ಅಧಿಕಾರದ ಮುದ್ರೆಯೊತ್ತಿದ್ದ.[೧೧೬] ಕಂಪಿಲರಾಯನ ಪತ್ನಿ ಕನಕಗಿರಿಯ ಪಾಳೆಗಾರ ಗುಜ್ಜಲ ಕಾಟನಾಯಕನ ಮಗಳಾದ ಹರಿಯಮ್ಮನನ್ನು ಮದುವೆಯಾಗಿದ್ದ. ಈಕೆಯಲ್ಲದೆ ಕನ್ನಾಜಿ, ಹಂಪಾಜಿ, ಸಿಂಗಾಜಿ, ಸಿರಮಣಿ, ರತ್ನಾಜಿ ಎಂಬ ಐದು ಜನ ಪತ್ನಿಯರಿದ್ದರು. ಕಂಪಿಲರಾಯನ ಮಗ ಕುಮಾರರಾಮನು ಜಟಿಂಗರಾಮೇಶ್ವರನ ವರದಿಂದ ಜನಿಸಿದನು.[೧೧೭] ಕುಮಾರರಾಮನ ಆಳ್ವಿಕೆಯ ಕಾಲ ಕ್ರಿ.ಶ.೧೩.೨೭. ದಿಲ್ಲಿ ಸುಲ್ತಾನನಿಗೆ ಸಿಂಹ ಸ್ವಪ್ನವಾಗಿ ಮೆರೆದ ಈ ಗಂಡುಗಲಿಯ ಬಗ್ಗೆ ನಂಜುಂಡ ಕವಿ ಕುಮಾರರಾಮನನ್ನು, 'ಅರ್ಜುನನ ಅವತಾರ'ವೆಂದು ರಾಮನಾಥ ಚರಿತವಲ್ಲಿ ವರ್ಣಿಸಿದರೆ, ಕವಿ ಪಾಂಚಾಳಗಂಗನು

ಕುಮಾರರಾಮನು 'ಜಟ್ಟಾಂಗಿರಾಮನ ಅವತಾರ'ವೆಂದು ತನ್ನ ಚೆನ್ನರಾಮನ ಸಾಂಗತ್ಯದಲ್ಲಿ ಹೊಗಳಿರುವನು. ಕವಿ ಮಹಾಲಿಂಗಸ್ವಾಮಿಯು ಕುಮಾರರಾಮನನ್ನು 'ಪರಶುರಾಮನ ಅವತಾರ'ವೆಂದು ತನ್ನ ಬಾಲರಾಮನ ಸಾಂಗತ್ಯದಲ್ಲಿ ಕರೆದಿರುವನು. ಈ ಮೂರು ಕಾವ್ಯಗಳು ಐತಿಹಾಸಿಕ ದೃಷ್ಟಿಯಿಂದ ತುಂಬ ಮೌಲ್ಯ ಮುಕ್ತ ಕೃತಿಗಳೆನಿಸಿವೆ.[೧೧೮]

ಕಂಪಿಲರಾಯನ ಮಗ ಕುಮಾರರಾಮನು ಪ್ರಾಪ್ತ ವಯಸ್ಕನಾಗಲು ಕಂಪಿಲನು ಈತನಿಗೆ ಐದು ಕನ್ಯೆಯರನ್ನು ತಂದು ಲಗ್ನ ಮಾಡಿದನು. ಅವರಲ್ಲಿ ಹಿರಿಯಮ್ಮ ಮತ್ತು ಮರಿಯಮ್ಮ ಎಂಬಿಬ್ಬರ ಹೆಸರು ಮಾತ್ರ ತಿಳಿದುಬರುತ್ತದೆ.[೧೧೯] ಕಂಪಿಲನ ಬೇರೊಬ್ಬ ಪತ್ನಿಯಲ್ಲಿ ಜನಿಸಿದ ಭೈರವ ಅಂದರೆ ಅಣ್ಣ ಭೈರವ ಮತ್ತು ಹರಿಯಮ್ಮನ ಸಾಕು ಮಗನಾದ ಕಾಟಣ್ಣ ಎಂಬಿಬ್ಬರು ಮಲ ಸಹೋದರರು ಮತ್ತು ಮಾರಮ್ಮ ಹಾಗೂ ಸಿಂಗಮ್ಮ ಎಂಬ ಇಬ್ಬರು ಸಹೋದರಿಯರಿದ್ದರು. ಅಲ್ಲದೆ ಎಪ್ಪತ್ತೇಳು ಸಮವಯಸ್ಕರಾದ ಮನ್ನೆಯರ ಬಾಲಕರು ರಾಮನಾಥನಿಗೆ ಆ ಮರಣಾಂತ ಜೀವದ ಗೆಳೆಯರಾಗಿದ್ದರು. ಈತನು ಹದಿನಾರು ವರ್ಷ ತುಂಬುವ ಹೊತ್ತಿಗೆ ಅಸಮ ವೀರನಾಗಿದ್ದನು ಎಂದು ತಿಳಿದುಬರುತ್ತದೆ.[೧೨೦]

ಹಂಪಿಯ ಹೇಮಕೂಟದಲ್ಲಿಯ ಪ್ರಸನ್ನ ವಿರೂಪಾಕ್ಷ ದೇವಸ್ಥಾನದ ಬಳಿಯಲ್ಲಿಯ ಶಾಸನದ ಉಲ್ಲೇಖದಂತೆ ಕಂಪಿಲರಾಯನು ಮುಮ್ಮಡಿಸಿಂಗೆಯನಾಯಕ - ಮಾದನಾಯಕಿತಿಯರ ಪುತ್ರನೆಂದು ಹೇಳಲಾಗಿದೆ. ಈ ವೀರ ಕಂಪಿಲರಾಯನು ತಮ್ಮ ತಾಯಿ ಮಾದನಾಯಕಿತಿ ಮತ್ತು ತಂದೆ ಸಿಂಗೆಯ ನಾಯಕ, ಪೆರಮೆಯನಾಯಕ ಇವರಿಗೆ ಪುಣ್ಯವಾಗಲಿಯೆಂದು ಶಿವಾಲಯ ಮಾಡಿಸುತ್ತಾನೆ ಎಂದಿದೆ. ಇಲ್ಲಿಯ ಪೆರಮೆಯನಾಯಕ ಯಾರೆಂದು ತಿಳಿದುಬರುವುದಿಲ್ಲ. ಬಹುಶಃ ಈ ವ್ಯಕ್ತಿಯು ಕಂಪಿಲರಾಯನ ಅಜ್ಜನಾಗಿರಬೇಕು. ಒಟ್ಟಿನಲ್ಲಿ ಈ ಶಾಸನದ ಹೇಳಿಕೆಯಂತೆ ಇವರ ವಂಶಾವಳಿಯನ್ನು ಹೀಗೆ ನಿರೂಪಿಸಬಹುದು.

ಪೆರುಮೆಯನಾಯಕ

|

ಮುಮ್ಮಡಿಸಿಂಗೆಯನಾಯಕ + ಮಾದನಾಯಕಿತಿ

|

ಕಂಪಿಲರಾಯ + ಹರಿಯಾಲದೇವಿ

|

ಕುಮಾರರಾಮ[೧೨೧]

ಸಂಡೂರು ತಾಲ್ಲೂಕಿನ ರಾಮಘಡದ ಕ್ರಿ.ಶ.೧೫೨೭ರ ಶಾಸನದ ಉಲ್ಲೇಖದಂತೆ ಮುಮ್ಮಡಿ ಸಿಂಗೆಯನಾಯಕನ ವಂಶಾವಳಿಯನ್ನು ಹೀಗೆ ನೋಡಬಹುದು.

ಮುಮ್ಮಡಿ ಸಿಂಗೆಯನಾಯಕ-ಮಾದನಾಯಕಿತಿ

|

ಕಂಪಿಲರಾಯ ಅಥವಾ ಖಂಡೆರಾಯ-ಗುಜಲಹರಿಯಾಲದೇವಿ

|

ಕುಮಾರರಾಮನಾಥ

ಹೀಗೆ ಈ ಉಪಲಬ್ಧ ಶಾಸನದ ಆಧಾರದಂತೆ ಈ ವಂಶದ ಮೂಲ ಪುರುಷ ಸಿಂಗೆಯನಾಯಕನೆ ಎಂದು ತಿಳಿದುಬರುತ್ತದೆ.[೧೨೨] ಮುಮ್ಮಡಿ ಸಿಂಗೆಯನಾಯಕ ಅವನ ಮಗ ಕಂಪಿಲರಾಯ ಅಥವಾ ಖಂಡೇರಾಯ ಮತ್ತು ಕಂಪಿಲರಾಯನ ಮಗ ಕುಮಾರರಾಮ ಇವರು ಶಾಸನೋಕ್ತರಾದ ಈ ವಂಶದ ವ್ಯಕ್ತಿಗಳು.[೧೨೩] ಶಾಸನಗಳಲ್ಲಿ ಕುಮಾರರಾಮನನ್ನು 'ರಾಮನಾಥ' ಎಂದು ಕರೆದರೆ ಜನಪದರಲ್ಲಿ ಕುಮಾರರಾಮನೆಂದೇ ಪ್ರಸಿದ್ಧನಾಗಿರುವುದನ್ನು ಕಾಣುತ್ತೇವೆ.[೧೨೪]

ಶಾಸನಗಳಷ್ಟೇ ಅಲ್ಲದೆ ಕಾವ್ಯಗಳು ಹಾಗೂ ಭಟ್ಟರಹಳ್ಳಿ, ಅಂತಾಪುರ, ಕಂಪಲಿ, ದರೋಜಿ, ಕುರುಗೋಡು ತಾಲ್ಲೂಕುಗಳ ಕೈಫಿಯತ್ತುಗಳಲ್ಲಿಯು ಈ ಅರಸರ ವಂಶಾವಳಿಯ ಬಗ್ಗೆ ಉಲ್ಲೇಖವಿದೆ. ಈ ಎಲ್ಲಾ ಉಪಲಬ್ಧ ಆಧಾರಗಳಿಂದ ಈ ವಂಶದ ಪ್ರಥಮ ದೊರೆ ಮುಮ್ಮಡಿಸಿಂಗೆಯನಾಯಕನೇ ಎಂದು ತಿಳಿದು ಬರುತ್ತದೆ.

ಸಂಡೂರಿನ ಈ ಪ್ರದೇಶಕ್ಕೆ ರಾಮಘುಡ ಎಂದು ಹೆಸರು ಬರಲು ಕಾರಣ ಕಂಪಿಲನ ಮೊದಲ ಹೆಂಡತಿಯ ಮಗನಾದ ಕುಮಾರರಾಮನನ್ನು, ಆತನ ಮಲತಾಯಿಯಾದ ರತ್ನಾಜಿಯು ಅವನನ್ನು ಮೋಹಿಸಿದಾಗ ಅದನ್ನು ಕುಮಾರರಾಮ ಪ್ರತಿಭಟಿಸುತ್ತಾನೆ. ಅತೃಪ್ತಳಾದ ರತ್ನಾಜಿ ತನ್ನ ಪತಿಗೆ ಸಲ್ಲದ ಮಾತನ್ನು ಹೇಳಿ ಕುಮಾರರಾಮನ ಶಿರಚ್ಛೇದವಾಗಬೇಕೆಂದು ಬಯಸುತ್ತಾಳೆ. ಆಗ ಬುದ್ಧಿವಂತ ಮಂತ್ರಿ ಬೈಚಪ್ಪನಾಯಕನು ಕುಮಾರರಾಮನನ್ನು ಕರೆದು ತಂದು ಈ ಬೆಟ್ಟದಲ್ಲಿ ಅಡಗಿಸಿಟ್ಟು ಅವನ ಶಿರಚ್ಛೇದನ ಮಾಡಿರುವುದಾಗಿ ಹೇಳುತ್ತಾನೆ. ಹೀಗೆ ಕುಮಾರರಾಮನನ್ನು ತಂದು ಇಲ್ಲಿ ಅಡಗಿಸಿಟ್ಟಿದ್ದರಿಂದ ಈ ಬೆಟ್ಟಕ್ಕೆ 'ರಾಮಘುಡ' ಎಂಬ ಹೆಸರು ಬಂದಿದೆ.

ಜಟಂಗಿರಾಮೇಶ್ವರ ಬೆಟ್ಟದಲ್ಲಿಯೂ ಇದೆ ವಿಷಯದ ಬಗ್ಗೆ ಮಾಹಿತಿ ದೊರೆಯುತ್ತದೆ. ವೀರಭದ್ರ ದೇವಾಲಯದ ಹಿಂಬದಿಯಲ್ಲಿರುವ ಬಂಡೆಗಲ್ಲಿನ ಕೆಳಭಾಗದಲ್ಲಿ ಒಂದು ಗುಹೆಯಿದೆ. ಇದನ್ನು ಕುಮಾರರಾಮನ ಗರಡಿ ಮನೆಯೆಂದೇ ಕರೆಯುವರು. ಈ ಕುಮಾರರಾಮನ ಗರಡಿ ಮನೆಗೆ ವಿಶೇಷವಾದ ಮಹತ್ವವಿದೆ.[೧೨೫] ಭಟ್ಟರಹಳ್ಳಿಯ ಕೈಫಿಯತ್ತಿನಲ್ಲಿ ಈ ಗುಹೆಯನ್ನು ಉಲ್ಲೇಖಿಸಲಾಗಿದೆ. ಕುಮಾರರಾಮನ ತಲೆ ಕಡಿದು ತರಬೇಕೆಂಬ ಕಂಪಿಲರಾಯನ ಆಜ್ಞೆಯನುಸಾರ ಮಂತ್ರಿ ಬೈಚಪ್ಪನು ತನ್ನ ಮನಸ್ಸಿನಲ್ಲಿ ಯೋಚನೆ ಮಾಡಿದ್ದು, 'ಕೊಮಾರ ರಾಮನಾವೊಂದು ಸ್ಥಳದಲ್ಲಿಯಿಟ್ಟು' ಯೀತನ ಪ್ರಾಣ

ತಪ್ಪಿಸಬೇಕೆಂದು ಗುಮ್ಮಟದ ಬಳಿಯಾ ಜಟಂಗೀಶ್ವರ ಗುಡಿಯ ಬಳಿ ನೆಲಮಾಳಿಗೆ ಮಾಡಿ ಪ್ರಕಟವಾಗದಂತೆ ಯಿಡಬೇಕೆಂದು ಯೋಚನೆ ಮಾಡಿ ಅದೇ ಪ್ರಕಾರ ನೆಲಮಾಳಿಗೆ ಮಾಡಿಸಿ ಅಲ್ಲಿ ಕುಮಾರರಾಮನ ಯಿನ್ನೂ ಕೆಲವು ಮಂದಿನಾ ಕುಮಾರರಾಮನ ಸಂಗಡಯಿಟ್ಟನು ಎಂದು ಹೇಳಿದೆ.[೧೨೬] ಭಟ್ಟರಹಳ್ಳಿಯ ಕೈಫಿಯತ್ತಿನಲ್ಲಿ ಹೇಳಿರುವಂತೆ ಈ ನೆಲಮಾಳಿಗೆಯಲ್ಲಿದ್ದ ಇತರರೆಂದರೆ ಕುಮಾರರಾಮನೊಂದಿಗೆ ಆತನ ಅಣ್ಣ ಕಾಟಣ್ಣ ಲಿಂಗ, ಕೊಳಿಯನಾಗ, ಶಿಂಗಯ್ಯ, ಮುಮ್ಮಡಿಯಪ್ಪ ಇದ್ದರು. ಈ ನೆಲ ಮಾಳಿಗೆಯನ್ನು ಉಪ್ಪಾರ ಸಿಂಗಯ್ಯನೆಂಬುವವನು ತೋಡಿಸಿದನೆಂದು ಇದೇ ಕಾವ್ಯದಿಂದ ತಿಳಿದುಬರುತ್ತದೆ.[೧೨೭] ನಂಜುಂಡ ಕವಿಯ ರಾಮನಾಥ ಚರಿತದಲ್ಲೂ ಕುಮಾರರಾಮನನ್ನು ನೆಲಮಾಳಿಗೆಯಲ್ಲಿ ಇಟ್ಟ ವಿಷಯ ತಿಳಿದುಬರುತ್ತದೆ.[೧೨೮]

ಒಟ್ಟಿನಲ್ಲಿ ರತ್ನಾಜಿಯ ಕುತಂತ್ರದಿಂದ ಕಂಪಿಲರಾಯನು ಮಗನ ಶಿರಚ್ಛೇದವಾಗುವಂತೆ ಆಜ್ಞೆ ಮಾಡುತ್ತಾನೆ. ಆದರೆ ಮಂತ್ರಿ ಬೈಚಪ್ಪ ಕುಮಾರರಾಮನ ಜೀವ ಉಳಿಸುವ ಸಲುವಾಗಿ ಅಡಗಿಸಿಟ್ಟ ಸ್ಥಳಗಳ ಕುರಿತು ರಾಮಘಡ ಮತ್ತು ಜಟಂಗಿರಾಮೇಶ್ವರ ಈ ಎರಡೂ ಬೆಟ್ಟಗಳಲ್ಲಿ ಈ ಒಂದೇ ವಿಷಯದ ಬಗ್ಗೆ ಮಾಹಿತಿ ಲಭ್ಯವಿದೆ. ರಾಮಘಡದಲ್ಲಿ ಇಂದಿಗೂ ಕುಮಾರರಾಮನ ಕಾಲದಲ್ಲಿಯ ಕೋಟೆ-ಕೊತ್ತಲ, ಸ್ಮಾರಕ ಇತ್ಯಾದಿ ಸಾಮಾಗ್ರಿಗಳು ಇರುವ ಬಗ್ಗೆ ನಮಗೆ ಸ್ಪಷ್ಟ ಮಾಹಿತಿ ಲಭಿಸುತ್ತದೆ. ಆದ್ದರಿಂದ ಕುಮಾರರಾಮನನ್ನು ಅಡಗಿಸಿಟ್ಟ ಬೆಟ್ಟ ರಾಮಘಡವೇ ಆಗಿರಬೇಕು ಎಂದು ಹೇಳಬಹುದು. ಆದರೆ ಜಟಂಗಿರಾಮೇಶ್ವರದಲ್ಲಿಯ ಕುಮಾರರಾಮನ ಗರಡಿಮನೆಯೇ ಕುಮಾರರಾಮನನ್ನು ಅಡಗಿಸಿಟ್ಟ ಬೆಟ್ಟ ಎಂಬುದಕ್ಕೆ ಯಾವುದೇ ಐತಿಹಾಸಿಕ ಆಕರಗಳು ಲಭಿಸುವುದಿಲ್ಲ. ಕೈಫಿಯತ್ತು, ಸಾಂಗತ್ಯ, ಕಾವ್ಯಗಳಲ್ಲಿ ತಿಳಿಸುವಂತೆ ಕುಮಾರರಾಮನು ಜಟಂಗಿರಾಮೇಶ್ವರನ ವರದಿಂದ ಜನಿಸಿದನು ಎಂಬುದನ್ನು ಹೊರತುಪಡಿಸಿದರೆ ಇಲ್ಲಿ ನಮಗೆ ಸಿಗುವ ಆಕರ ಎಂದರೆ ಕುಮಾರರಾಮನ ಗರಡಿ ಮನೆಯೊಂದೆ.

ಇಲ್ಲಿ ಸ್ಪಷ್ಟವಾಗಿ ಗಮನಿಸಬಹುದು ಕುಮಾರರಾಮನನ್ನು ಅಡಗಿಸಿಟ್ಟ ಸ್ಥಳಕ್ಕೆ 'ಕುಮಾರರಾಮನ ಗರಡಿಮನೆ' ಎಂದಿರುವುದನ್ನು. ಇಲ್ಲಿ 'ಗರಡಿಮನೆ' ಎಂದರೆ ಕುಸ್ತಿಪಟುಗಳಿಗಾಗಿ ನಿರ್ಮಿಸಿದ ಮನೆ ಎಂಬ ಅರ್ಥ ಬರುತ್ತದೆ. ಬಹುಶಃ ಇದು ಕುಮಾರರಾಮನ ಕಾಲದಲ್ಲಿ ಕುಸ್ತಿಪಟುಗಳಿಗಾಗಿ ನಿರ್ಮಿಸಲಾದ ಗರಡಿಮನೆಯಾಗಿದ್ದಿರಬೇಕು. ಆದರೆ ಸ್ಥಳೀಯರು ಅದನ್ನು ಇಂದು ಕುಮಾರರಾಮನನ್ನು ಅಡಗಿಸಿಟ್ಟ ಬೆಟ್ಟ ಅಥವಾ ಗುಹೆ ಇದೆ ಎಂದು ನಂಬಿರಬೇಕು.

ಕಂಪಿಲರಾಯ ಮತ್ತು ಆತನ ಪುತ್ರ ಕುಮಾರರಾಮ ಅನೇಕ ಯುದ್ಧಗಳನ್ನು ಮಾಡಿರುವುದರ ಕುರಿತು ಶಾಸನ ಮತ್ತು ಕಾವ್ಯಗಳಿಂದ ತಿಳಿದು ಬರುತ್ತದೆ. ವೀರಬಲ್ಲಾಳನ ಊರು ಕೇರಿಗಳನ್ನು ಕೊಳ್ಳೆ ಹೊಡೆದುದರಿಂದ ಅವನೊಡನೆ ವೈರತ್ವವು ಬೆಳೆಯಿತು. ಬೊಲ್ಲನೆಂಬ ಕುದುರೆಯನ್ನು ಹಿಡಿದು ತಂದುದರಿಂದ ಪ್ರತಾಪರುದ್ರನೊಡನೆ ಹಗೆತನವನ್ನು ಕಟ್ಟಿಕೊಂಡಂತಾಯಿತು. ಬಹದ್ದೂರ್ ಖಾನನಿಗೆ ಆಶ್ರಯ ಕೊಟ್ಟುದ್ದರಿಂದ ಸುಲ್ತಾನನೊಡನೆ ವಿರೋಧ ಕಟ್ಟಿಕೊಳ್ಳಬೇಕಾಯಿತು.[೧೨೯]

ಕುಮ್ಮಟದ ನಾಯಕರ ಆಳ್ವಿಕೆಗೊಳಪಟ್ಟಿದ್ದ ಸಂಡೂರು ತಾಲ್ಲೂಕಿನ ದೊರವಡಿ ಮತ್ತು ಹೊಸಮಲೆದುರ್ಗಗಳ ಕುರಿತು ಹಾಗೂ ಈ ಪಟ್ಟಣಗಳಲ್ಲಿ ಜರುಗಿದ ಯುದ್ಧಗಳ ವಿಷಯಕ್ಕೆ ಮಾತ್ರ ಹೆಚ್ಚು ಒತ್ತು ನೀಡಲಾಗಿದ್ದು ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಸಂಡೂರು ತಾಲ್ಲೂಕಿನ ರಾಮಘಡದ ಕ್ರಿ.ಶ.೧೩೨೩ರ ವೀರಗಲ್ಲು ಶಾಸನವು ಹೊಯ್ಸಳರ ಮತ್ತು ಕುಮ್ಮಟ ಅರಸರ ಸಂಬಂಧವನ್ನು ಕುರಿತು ಮಹತ್ವದ ಬೆಳಕು ಚಲ್ಲುತ್ತದೆ. ಕಂಪಿಲನ ರಾಜಧಾನಿ ಕುಮ್ಮಟದುರ್ಗವಾಗಿದ್ದರೂ ಸಂಡೂರು-ಹೊಸಪೇಟೆ ಮಾರ್ಗ ಮಧ್ಯೆ ಹಬ್ಬಿರುವ ಬೆಟ್ಟದ ಮೇಲೆ ಮತ್ತೊಂದು ಭದ್ರವಾದ ಕೋಟೆಯನ್ನು ಕಟ್ಟಿ ಅದಕ್ಕೆ ಹೊಸಮಲೆದುರ್ಗವೆಂಬ ಹೆಸರನ್ನು ಇಡುತ್ತಾನೆ. ಇದನ್ನು ಈಗ ರಾಮಘಡವೆಂದು ಕರೆಯುತ್ತಾರೆ. ಜನರು ಆಡುಮಾತಿನಲ್ಲಿ ರಾಮನಮಲ್ಲೆ ಗುಡ್ಡವೆಂದು ಕರೆಯುತ್ತಾರೆ.[೩೦] ಇದರಿಂದ ವ್ಯಕ್ತವಾಗುವುದೇನೆಂದರೆ ಕುಮ್ಮಟದುರ್ಗ ಮತ್ತು ಹೊಸಮಲೆದುರ್ಗಗಳು ಕಂಪಿಲರಾಯನ ರಾಜಧಾನಿಗಳಾಗಿದ್ದವು[೩೧] ಎಂಬುದು. ಕ್ರಿ.ಶ.೧೩೨೩ರ ವೀರಗಲ್ಲು ಶಾಸನದಲ್ಲಿ "ಶ್ರೀವೀರ ಕಂಪಿಲದೇವನ ಮೇಲೆ ಬಲ್ಲಾಳರಾಯನು (ದಂಡೆತ್ತಿ) ಬಂದಲಿ ಯಿಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು" ಎಂದು ಉಲ್ಲೇಖವಿದೆ.[೩೨] ಅಂದರೆ ಹೊಯ್ಸಳ ವೀರ ಬಲ್ಲಾಳನು ತಾನೇ ಸೈನ್ಯ ಸಮೇತನಾಗಿ ಮತ್ತೊಮ್ಮೆ ದೊರವಡಿಗೆ ಬಂದು ಕಂಪಿಲರಾಯನೊಂದಿಗೆ ಯುದ್ಧ ಮಾಡುತ್ತಾನೆ. ಈ ಯುದ್ಧದಲ್ಲಿ ಇವರೀರ್ವರು ನೇರವಾಗಿ ಭಾಗವಹಿಸಿದುದನ್ನು ಈ ಶಾಸನವು ತಿಳಿಸುತ್ತದೆ.[೩೩] ಹೀಗೆ ಕಂಪಿಲನು ರಕ್ಷಣೆಯ ಮತ್ತು ಸೌಲಭ್ಯದ ದೃಷ್ಟಿಯಿಂದ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಿರಿದುರ್ಗವನ್ನು ನಿರ್ಮಿಸಿ, ಅದನ್ನು ಹೊಸಮಲೆದುರ್ಗವೆಂದು ಕರೆದು ತನ್ನ ಮತ್ತೊಂದು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ತಿಳಿದುಬರುತ್ತದೆ.[೩೪]

ಸೇವುಣ ರಾಮಚಂದ್ರನ ಮರಣ ನಂತರ ಕಂಪಿಲದೇವನು ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಅನಂತಪುರ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡಂತೆ ತನ್ನ ಸಣ್ಣ ರಾಜ್ಯವನ್ನು ಸರಿಸಮವಾಗಿ ವಿಸ್ತರಿಸಿದ. ಇವನು ಕ್ರಿ.ಶ.೧೩೧೪ರಲ್ಲಿ ಅಲ್ಲಾವುದೀನ್ ಖಿಲ್ಜಿಯ ಸೇನಾನಿಯಾದ ಮಲಿಕ್ ಕಾಪೂರನ ದಾಳಿಯನ್ನು ಎದುರಿಸಬೇಕಾಯಿತು. ಕ್ರಿ.ಶ.೧೩೨೦ರಲ್ಲಿ ಮೂರನೆಯ ಬಲ್ಲಾಳನು ಈ ಪ್ರದೇಶದ ಸಮೀಪವಿರುವ ದೊರವಾಡಿಯಲ್ಲಿ ಕಂಪಿಲದೇವನನ್ನು ಸೋಲಿಸಿ ದೊರವಾಡಿ ಮತ್ತು ಕಂಪಿಲಿಗಳನ್ನು ವಶಪಡಿಸಿಕೊಂಡನೆಂದು ತಿಳಿದುಬರುತ್ತದೆ. ಇದಕ್ಕೆ ಆಧಾರ ಮೂರನೇ ಬಲ್ಲಾಳನು ಕ್ರಿ.ಶ.೧೩೨೦ರಲ್ಲಿ ಹಂಪೆಯ ಹೊಸಪಟ್ಟಣದಲ್ಲಿದ್ದನೆಂದು ಶಾಸನವೊಂದು ತಿಳಿಸುತ್ತದೆ. ಬಲ್ಲಾಳನು ಕಂಪಿಲನನ್ನು ಸೋಲಿಸಿದರೂ ಯಾವುದೇ ಪ್ರದೇಶವನ್ನು ಪಡೆಯಲಾಗಲಿಲ್ಲವೆಂದು ಪಿ.ಬಿ.ದೇಸಾಯಿಯವರು ಅಭಿಪ್ರಾಯ ಪಡುತ್ತಾರೆ. ಮತ್ತೊಂದೆಡೆ ಕುಮ್ಮಟರು ಕಾಕತೀಯ ಪ್ರತಾಪರುದ್ರನ ಆಕ್ರಮಣವನ್ನು ಎದುರಿಸಬೇಕಾಯಿತು. ಹೀಗೆ ಕುಮ್ಮಟ ರಾಜ್ಯದ ಕತೆಯು ಶೌರ್ಯ ಸಾಹಸಗಳ

ನಿರೂಪಣೆಯಾಗಿದೆ. ಕಂಪಿಲದೇವನು ದಕ್ಷಿಣ ಭಾರತದಲ್ಲಿ ಬೆಳೆಯುತ್ತಿದ್ದ ವಿದೇಶಿ ಶಕ್ತಿಯ ಪ್ರಬಲ ವಿರೋಧಿಯಾಗಿದ್ದನು. ಕ್ರಿ.ಶ.೧೩೧೪-೧೫ರ ಮಲ್ಲಿಕ್ ಕಾಫೂರನ ದಂಡೆಯಾತ್ರೆಯು ಯಶಸ್ವಿಯಾಗಲಿಲ್ಲ. ನಂತರದ ಕಾಲದಲ್ಲಿ ಮಹಮದ್ ಬಿನ್ ತುಗಲಕ್‌ನ ಅಧಿಕಾರಿಗಳ ಕಪ್ಪಕಾಣಿಕೆಗಳ ಬೇಡಿಕೆಯನ್ನು ತಿರಸ್ಕರಿಸಿದನು. ಅಲ್ಲಿಂದ ಮುಂದೆ ೧೦ ವರ್ಷಗಳಲ್ಲಿ ಈ ರಾಜ್ಯವು ಅಭಿವೃದ್ಧಿ ಸಾಧಿಸಿದರೂ[೧೩೫] ಕೊನೆಗೆ ದೆಹಲಿಯ ಸುಲ್ತಾನನ ದಾಳಿಗೆ ಕುಮ್ಮಟದುರ್ಗ, ಹೊಸಮಲೆದುರ್ಗ ಮತ್ತು ದೊರವಡಿ ಕೋಟೆಗಳು ನೆಲಕಚ್ಚಿದವು.[೧೩೬]

ಒಟ್ಟಾರೆಯಾಗಿ ಹೇಳುವುದಾದರೆ ದೆಹಲಿ ಸುಲ್ತಾನನೊಡನೆ ರಾಜಿ ಮಾಡಿಕೊಳ್ಳದೆ ತನ್ನ ಪ್ರಾಣವನ್ನೇ ಅರ್ಪಿಸಿದ ರಾಮನಾಥನು ತನ್ನ ಶೌರ್ಯ, ಪರಾಕ್ರಮ ಮತ್ತು ಆದರ್ಶ ಗುಣಗಳಿಂದಾಗಿ ಜನತೆಯ ಪಾಲಿಗೆ ದೈವಾಂಶ ಸಂಭೂತವಾಗಿ ಗೋಚರಿಸಿದ ಇದು ಅವನ ಆರಾಧನೆಗೆ ದಾರಿ ಮಾಡಿಕೊಟ್ಟಿತು.[೧೩೭]

ಕುಮಾರರಾಮನ ಸೋಲು ಹಾಗೂ ಮರಣಕ್ಕೆ ಕಾರಣಳಾದ ದಿಲ್ಲಿಯ ಸುಲ್ತಾನನ ಸೇನೆಯ ನಾಯಕಿಯ ಬಗ್ಗೆ ಒಂದು ಪರ್ಶಿಯನ್ ಮೂಲದಿಂದ ದೊರೆತ ಮಾಹಿತಿಯ ಆಧಾರದಂತೆ ಇದನ್ನು ಈಟನ್ ಎಂಬ ಅಮೇರಿಕನ್ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಸೋಲ್ಲಾಪುರ ಜಿಲ್ಲೆಯ ಸಾಗರ್ ಎಂಬ ಊರಲ್ಲಿ ನೆಲೆನಿಂತ ಸೂಫಿ ಸಂತನೆನಿಸಿದ ಶೇಕ್‌ಸರ್‌ಮಸ್ತನ ವಿಚಾರ ತಾರಿಖ್-ಯಿ-ಔಲಿಯ ಎಂಬ ಗ್ರಂಥದಲ್ಲಿ ಹೇಳಿದೆ. ಅದರಂತೆ 'ಕುಮಾರಾಮ್'ನ ವಿರುದ್ಧ ನಡೆದ ಹೋರಾಟದಲ್ಲಿ ಈ ಸರ್‌ಮಸ್ತ್ ಮುಖ್ಯ ಪಾತ್ರವಹಿಸಿದ ಅವನ ಮಗಳು ಕುಮಾರರಾಮನನ್ನು ಕೊಂದಳು ಎಂದು ಮೇಲೆ ಹೇಳಿದ ಕೃತಿ ತಿಳಿಸುತ್ತದೆ. ಅಲ್ಲದೆ ಕುಮಾರರಾಮನು ಉಗ್ರ ಮುಸ್ಲಿಂ ದ್ವೇಷಿಯಾಗಿದ್ದ ಎಂದು ಈ ಸಂತರ ಕಥಾನಕದಲ್ಲಿ ಬಣ್ಣಿಸಿದೆ.[೧೩೮] ಆದರೆ ರಾಮಶರ್ಮರ ಹೇಳಿಕೆಯಂತೆ ಸುಲ್ತಾನನ ಸೇನಾನಾಯಕರು ಅನೇಕ ಬಾರಿ ಕುಮ್ಮಟಕ್ಕೆ ಮುತ್ತಿಗೆ ಹಾಕಿದರೂ ಅದನ್ನು ಜಯಿಸಲಾಗಲಿಲ್ಲ. ಆದರೆ ಮಾತಂಗಿ ಎಂಬ ಸುಲ್ತಾನನ ರಾಣಿವಾಸದ ದ್ವಾರಪಾಲಕಿಯಾದ ಒಬ್ಬ ಹೆಂಗಸು ಕುಮ್ಮಟವನ್ನು ಜಯಿಸಿ ಕುಮಾರರಾಮನ ಶಿರವನ್ನು ತೆಗೆದುಕೊಂಡು ಹೋದ ಬಗ್ಗೆ ತಿಳಿದುಬರುತ್ತದೆ. ಒಟ್ಟಾರೆಯಾಗಿ ಕುಮಾರರಾಮನು ಹೆಂಗೊಲೆಗೆ ಹೇಸಿ ಬಿಟ್ಟಿದ್ದರಿಂದ ಅವನು ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು.

೧೪. ವಿಜಯನಗರದ ಅರಸರು

ಕುಮ್ಮಟದುರ್ಗ ಮತ್ತು ಹೊಸಮಲೆದುರ್ಗಗಳಿಗೆ ತಾಕಿದ ಜ್ವಾಲೆಯಿಂದ ವಿಜಯನಗರದಂಥಾ ಬಲಿಷ್ಠ ಸಾಮ್ರಾಜ್ಯವು ೧೩೩೬ರಲ್ಲಿ ಅಂದರೆ ಮೇಲಿನ ರಾಜಧಾನಿಗಳು ಪತನಗೊಂಡ ಕೇವಲ ಒಂಭತ್ತು ವರುಷಗಳ ತರುವಾಯ ಉದಯಿಸಿತು. ಹುಲ್ಲೂರು ಶ್ರೀನಿವಾಸ ಜೋಯಿಸರು, ಕುಮಾರರಾಮನ

ಆಸ್ಥಾನದಲ್ಲಿದ್ದ ಭಂಡಾರಿ ಹರಿಹರ ಬುಕ್ಕರೇ ವಿಜಯನಗರ ಸಾಮ್ರಾಜ್ಯದ ಸ್ಥಾಪಕರು; ಕುಮ್ಮಟ ರಾಜ್ಯದ ವಿನಾಶವೇ ವಿಜಯನಗರದ ಮೂಲವೆಂಬುದು ಕುಮಾರರಾಮನ ಸಾಂಗತ್ಯಗಳಿಂದ ವ್ಯಕ್ತವಾಗುತ್ತವೆಂದು ಬರೆದಿದ್ದಾರೆ. 'ಕುಮ್ಮಟದುರ್ಗ' ಎಂಬ ಇನ್ನೊಂದು ಸಂಪ್ರಬಂಧ ಪ್ರಕಟಿಸಿರುವ (ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್; ೧೯೮೭-೮೮) ಚೆನ್ನಬಸಪ್ಪ ಪಾಟೀಲರು, ಕಂಪಿಲನು ಕುಮ್ಮಟದುರ್ಗವನ್ನು ತನ್ನ ವಶದಲ್ಲಿರಿಸಿಕೊಂಡಿದ್ದು ೨೫ ವರ್ಷಗಳಷ್ಟು ಅಲ್ಪಕಾಲಾವಧಿಗೆ ಮಾತ್ರ ಎಂದು ತೋರಿಸಿದ್ದಾರೆ. ಕುಮ್ಮಟವು ಕ್ರಿ.ಶ.೧೩೨೬-೨೭ರಲ್ಲಿ ಪತನಗೊಂಡಿತು. ಒಂಭತ್ತು ವರುಷಗಳ ತರುವಾಯ ವಿಜಯನಗರವು ಕುಮ್ಮಟ ಮತ್ತು ಹೊಸಮಲೆದುರ್ಗಗಳ ಮಧ್ಯದ ಭೂಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರಿಂದ ತಿಳಿದುಬರುವುದೇನೆಂದರೆ ಕಂಪಿಲನ ಸಂಸ್ಥಾನದೊಡನೆ ನಿಕಟ ಸಂಬಂಧ ಹೊಂದಿದವರೇ ವಿಜಯನಗರದ ಸ್ಥಾಪನೆಯಲ್ಲಿಯೂ ಪ್ರಮುಖ ಪಾತ್ರವಹಿಸಿರಬೇಕು ಎಂದು ತಿಳಿದುಬರುತ್ತದೆ.[೧೩೯]

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸಂಡೂರು ವಿಶೇಷ ಪಾತ್ರವಹಿಸಿತ್ತು.[೧೪೦] ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ಪಟ್ಟಣವಾಗಿತ್ತು ಹಾಗೂ ಈ ತಾಲ್ಲೂಕಿನ ಸುತ್ತಮುತ್ತಲಿನ ಕೆಲವು ಗ್ರಾಮಗಳಲ್ಲಿ ಅವರ ಕಾಲದ ಶಾಸನಗಳು ಕಂಡುಬರುತ್ತವೆ. ಸಂಡೂರು ಪಟ್ಟಣದ ಮಧ್ಯದಲ್ಲಿ ತಾರಕೇಶ್ವರ ದೇವಸ್ಥಾನದ ಸಮೀಪದಲ್ಲಿ ಕೃಷ್ಣದೇವರಾಯನ ಅವಧಿಯ ಕ್ರಿ.ಶ.೧೫೪೪ರ ಶಿಲಾಶಾಸನವಿದೆ.[೧೪೧] ರಾಮಘಡದಲ್ಲಿಯೂ ಕೃಷ್ಣದೇವರಾಯನ ಶಾಸನವಿದೆ. ಕುಮಾರರಾಮನ ಸ್ಮರಣೆಗಾಗಿ ಬೈಚಪ್ಪನಾಯಕ ಕಟ್ಟಿಸಿದ ಕುಮಾರರಾಮನ ದೇವಸ್ಥಾನವನ್ನು ಶ್ರೀಕೃಷ್ಣದೇವರಾಯ ದುರಸ್ತಿ ಮಾಡಿಸಿದನೆಂದು ತಿಳಿದುಬರುತ್ತದೆ.[೧೪೨]

ಕ್ರಿ.ಶ.೧೫೨೩ರ ಕುರೆಕುಪ್ಪೆಯ ಸಂಸ್ಕೃತ ಶಾಸನ ಮತ್ತು ಇನ್ನೊಂದು ಕನ್ನಡ ಶಾಸನಗಳಲ್ಲಿ ಕೃಷ್ಣರಾಯನ ಉಲ್ಲೇಖವಿದ್ದು ಹೆಗ್ಗರಸನ ಮಗ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಊರಿಗೆ ಅನಂತಸೇತು ಎಂದು ಹೆಸರಿಸಿದ್ದುದನ್ನು ಉಲ್ಲೇಖಿಸಿದೆ. ಹಾಗೂ ಕುರೆಕುಪ್ಪೆ ಗ್ರಾಮದ ಬೆನಕರಸನು ವಿರೂಪಾಕ್ಷ ದೇವಾಲಯ ಕಟ್ಟಿಸಿ ಬಸವಾದೀಕ್ಷಿತರ ಭೂಮಿಯನ್ನು ಕ್ರಯವಾಗಿ ಪಡೆದು ದೇವರ ಕಾರ್ಯಕ್ಕೆ ದತ್ತಿ ಬಿಡುತ್ತಾನೆ.[೧೪೩]

ಕ್ರಿ.ಶ.೧೫೩೯ರ ಅನೇಕ ಶಾಸನಗಳು ಗಮನಾರ್ಹವಾದವು. ಸಂಡೂರು ತಾಲ್ಲೂಕಿನ ಚಿಕ್ಕ ಕೆರೆಯಾಗಿನಹಳ್ಳಿಯ ಶಾಸನವು ವಿಜಯನಗರದ ಅರಸ ಅಚ್ಯುತರಾಯನ ಕೈಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನ ವಂಶಾವಳಿಯ ಕುರಿತು ಉಲ್ಲೇಖ ನೀಡುತ್ತದೆ.[೧೪೪] ಕ್ರಿ.ಶ.೧೫೪೪ರ ಯಳಪೆ ಮತ್ತು ಸಂಡೂರು ಶಾಸನಗಳಲ್ಲಿ ನಾಯಿಂದರಿಗೆ ತೆರಿಗೆ ವಿನಾಯ್ತಿ ನೀಡಿದ ಉಲ್ಲೇಖವಿದೆ.[೧೪೫]

ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ವ್ಯಾಪಾರ ಕೇಂದ್ರವೆಂದು ವರ್ಣಿಸಲಾಗಿದೆ. ಬಹುಶಃ ಯುದ್ಧ ಸಾಮಾಗ್ರಿಗಳಾದ ಆಯುಧಗಳ ತಯಾರಿಕೆ ಮತ್ತು ಮಾರಾಟವಿರಬಹುದು. ಏಕೆಂದರೆ

ಇಲ್ಲಿನ ಅನೇಕ ಪ್ರದೇಶಗಳಲ್ಲಿ ಕುಲುಮೆಗಳಿದ್ದು, ಬೆಟ್ಟಗಳೋಪಾದಿಯಲ್ಲಿ ಬೂದಿ ತುಂಬಿದ ತಾಣಗಳಿವೆ. ಇವು ಕಬ್ಬಿಣ ತಯಾರಿಸುವ ಕೇಂದ್ರಗಳಾಗಿರಬಹುದು. ಈ ಪ್ರದೇಶ ವಿಜಯನಗರದ ರಾಜಧಾನಿಗೆ ರಕ್ಷಣೆ ಒದಗಿಸಿತ್ತು. ಯುದ್ಧ ಸಾಮಾಗ್ರಿಗಳನ್ನು ತಯಾರಿಸುವ ರಹಸ್ಯ ಕೇಂದ್ರಗಳಾಗಿದ್ದವು. ಇಲ್ಲಿ ಹೆಚ್ಚು ಹುಲ್ಲುಗಾವಲಿದ್ದುದರಿಂದ ಕುದುರೆ, ಆನೆಗಳ ಸೈನ್ಯದ ವಿಶ್ರಾಂತಿ ತಾಣಗಳಿರಬಹುದು. ಅರಣ್ಯದಿಂದ ಕಟ್ಟಿಗೆ ಮತ್ತು ಗಣಿಗಳಲ್ಲಿ ಕಬ್ಬಿಣ ಸಿಗುತ್ತಿದ್ದರಿಂದ ಆಯುಧ ತಯಾರಿಕೆ ಕೇಂದ್ರಗಳು ಸೇನೆ ವಿಶ್ರಾಂತಿಗೆ ಸ್ಥಳಗಳಾದವು.[೧೪೬]

ಒಟ್ಟಿನಲ್ಲಿ ಸಂಡೂರು ಪ್ರದೇಶವು ವಿಜಯನಗರ ಸಾಮ್ರಾಜ್ಯದ ಒಂದು ಪ್ರಮುಖ ಪಟ್ಟಣವಾಗಿ, ವ್ಯಾಪಾರ ಕೇಂದ್ರವಾಗಿತ್ತು. ೧೩೩೬ ರಿಂದ ೧೫೬೫ರವರೆಗೆ ವಿಜಯನಗರ ಅರಸರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ.೧೫೬೫ರ ತಾಳಿಕೋಟೆ ಯುದ್ಧದ ನಂತರ ಈ ಸಾಮ್ರಾಜ್ಯ ಪತನ ಹೊಂದಿತು. ನಂತರ ಸೇನಾನಿಗಳು ಸಾಮಂತರು ಬೇರೆ ಬೇರೆ ಭಾಗಗಳನ್ನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು.

೧೫. ಪಾಳೆಯಗಾರರು

ವಿಜಯನಗರ ಸಾಮ್ರಾಜ್ಯದಲ್ಲಿ ವಿವಿಧ ಗಾತ್ರಗಳ ಸಣ್ಣ ಪುಟ್ಟ ರಾಜ್ಯಗಳನ್ನು ಆಳುತ್ತಿದ್ದ ಮುಖಂಡರುಗಳಿಗೆ ಪಾಳೆಯಗಾರರೆಂಬ ಹೆಸರಿದ್ದಿತು.[೧೪೭] ಈ 'ಪಾಳೆಗಾರ' ಎಂಬ ಪದ ಪ್ರಯೋಗ ೧೭-೧೮ನೆಯ ಶತಮಾನದ ನಂತರ ಬಳಕೆಯಾಗಿದೆ. ವಿಜಯನಗರ ಸಾಮ್ರಾಜ್ಯ ತುಂಬಾ ವಿಸ್ತಾರವಾಗಿದ್ದರಿಂದ ಎಲ್ಲಾ ಭಾಗಗಳ ಮೇಲೆ ತಾವೇ ನೇರವಾಗಿ ಆಳ್ವಿಕೆ ನಡೆಸುವುದು ತೊಂದರೆಯಾಗುತ್ತಿತ್ತು. ಹೀಗಾಗಿ ಆಡಳಿತದ ಉಸ್ತುವಾರಿ ನೋಡಿಕೊಳ್ಳಲು, ಕಂದಾಯ ವಸೂಲಿ ಮಾಡಲು ಮತ್ತು ಶಾಂತಿ ಸುವ್ಯವಸ್ಥೆಗಳನ್ನು ನೋಡಿಕೊಳ್ಳಲು ಯುದ್ಧ ಸಂದರ್ಭದಲ್ಲಿ ಸಹಾಯ ಮಾಡುವುದು ಮೊದಲಾದ ಗುರಿ-ಉದ್ದೇಶಗಳಿಗಾಗಿ ಬಲಿಷ್ಟ ಹಾಗೂ ಅತೀ ಪ್ರಭಾವವುಳ್ಳ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಬರ್ಟನ್ ಸ್ಟೇನ್ ವಿಜಯನಗರ ಸಾಮ್ರಾಜ್ಯವು ಸಣ್ಣ ಸಣ್ಣ ಸಂಸ್ಥಾನ ಮತ್ತು ರಾಜ್ಯಗಳಲ್ಲಿ ವಿಭಾಗಗೊಂಡಿದ್ದು ಮತ್ತು ಅವುಗಳ ಮೇಲೆ ಇವರು ಪ್ರಭುತ್ವ ಹೊಂದಿದ್ದರೆಂದು 'ಸೆಗ್ಮೆಂಟರಿಸ್ಟೇಟ್' ಸಿದ್ಧಾಂತವನ್ನು ಮಂಡಿಸುತ್ತಾನೆ. ಇಂತಹ ಅಧೀನರಾದ ಸಾಮಂತರು ಮತ್ತು ಸೈನಿಕರು ಹಾಗೂ ದಂಡನಾಯಕರು, ನಾಯಕರು (ಕೇಂದ್ರಿಕರಣ ಮತ್ತು ವಿಕೇಂದ್ರಿಕರಣವನ್ನು ಗಮನಿಸಬಹುದು) ವಿಜಯನಗರದ ಅವನತಿ ನಂತರ ಕ್ರಮೇಣ ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಮುಂದೆ ಬಂದು ಪಾಳೆಗಾರರೆನಿಸಿಕೊಂಡರು. ವಿಜಯನಗರ ಸಾಮ್ರಾಜ್ಯದ ಪತನದ ತರುವಾಯ ರಾಜ್ಯಾಡಳಿತದಲ್ಲಿ ಬಹುಖ್ಯಾತಿ ಪಡೆದವರು ಪಾಳೆಗಾರರಾದರು.[೧೪೮]

ಕರ್ನಾಟಕದ ಬಗೆಗೆ ಹೇಳುವುದಾದರೆ ವಿಜಯನಗರದ ಚಕ್ರವರ್ತಿಗಳು ತಮ್ಮ ಶತ್ರುಗಳನ್ನು ಸದೆ ಬಡೆಯಲು ಹೋದಾಗ ಸಾಮಂತ ದೊರೆಗಳು ಅವರ ನೆರವಿಗೆ ಸೈನ್ಯ ಸಮೇತ ಹೋಗಿ, ಒಂದೊಂದು

ಸ್ಥಳದಲ್ಲಿ ಇಳಿದು ಕೊಳ್ಳುತ್ತಿದ್ದುದರಿಂದ ಅವರಿಗೆ ಪಾಳೆಯಗಾರರೆಂಬ ಹೆಸರು ಬಂದಿರಬಹುದು. ಪಾಳೆಗಾರರ ಅಧೀನದಲ್ಲಿಯ ಭೂಪ್ರದೇಶಕ್ಕೆ 'ಪೊಲ್ಲಂ' ಎಂಬ ಹೆಸರಿದ್ದುದರಿಂದ ಇವರಿಗೆ ಪಾಳೆಯಗಾರರೆಂಬ ಹೆಸರಿದ್ದಿತು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ವಿಜಯನಗರದ ಅರಸರು ನೀಡಿದ ಪ್ರೋತ್ಸಾಹದ ಪರಿಣಾಮವಾಗಿ ಅನೇಕ ಪಾಳೆಯ ಪಟ್ಟುಗಳು ಪ್ರಾಬಲ್ಯಕ್ಕೆ ಬಂದವು.[೧೪೯]

ವಿಜಯನಗರದ ಅವನತಿಯೇ ಜನಸಾಮಾನ್ಯರ ಆಳ್ವಿಕೆಗೆ ನಾಂದಿ ಹಾಡಿದಂತೆ ಪಾಳೆಯ ಪಟ್ಟುಗಳು ಉದಯಿಸಿದವು. ವಿಜಯನಗರದಲ್ಲಿ ಸೈನ್ಯ ಹಾಗೂ ವಿವಿಧ ಹುದ್ದೆಗಳಲ್ಲಿ ಅಮರನಾಯಕ ಮತ್ತು ನಾಯಕರಾಗಿ ಕಾರ್ಯನಿರ್ವಹಿಸಿದವರು ಪಾಳೆಯಗಾರರೆಂದು ಸ್ವತಂತ್ರರಾದರು. ವಿಜಯನಗರದ ತರುವಾಯ ಬಳ್ಳಾರಿ ಜಿಲ್ಲೆ ಸೇರಿದಂತೆ ಅನೇಕ ಭಾಗಗಳಲ್ಲಿ ಸಣ್ಣ-ಪುಟ್ಟ ಸಂಸ್ಥಾನಗಳು ಜನ್ಮ ತಾಳಿದವು. ಅವು ಒಬ್ಬೊಬ್ಬ ಪಾಳೆಗಾರ ಮತ್ತು ಮುಖಂಡ ಹಾಗೂ ದೊರೆಯನ್ನು ಮಾಡಿಕೊಂಡು ಆಳ್ವಿಕೆ ನಡೆಸಿದ್ದು ಇತಿಹಾಸ.[೧೫೦] ಇದೆ ರೀತಿ ಸಂಡೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಸಣ್ಣ-ಪುಟ್ಟ ಪಾಳೆಗಾರ ಸಂಸ್ಥಾನಗಳು ಆಳ್ವಿಕೆ ನಡೆಸಿದ್ದು ಗಮನಾರ್ಹ. ಅದಕ್ಕೆ ಆಧಾರವೆಂಬಂತೆ ಇಂದಿಗೂ ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪಾಳೆಯಗಾರರ ಕಾಲದಲ್ಲಿ ಕಟ್ಟಲ್ಪಟ್ಟ ಕೋಟೆ-ಕೊತ್ತಲಗಳು, ಬುರುಜು ಇತ್ಯಾದಿ ಅವಶೇಷಗಳು ಇರುವುದನ್ನು ಕಾಣುತ್ತೇವೆ. ಇಲ್ಲಿ ಬೆಳಕಿಗೆ ಬಂದಿರುವ ಹಾಗೂ ಇನ್ನೂ ಬೆಳಕಿಗೆ ಬಾರದಿದ್ದ ಕೆಲವು ಪಾಳೆಗಾರರ ಇತಿಹಾಸದ ಬಗ್ಗೆ ಪ್ರಥಮ ಬಾರಿಗೆ ಪರಿಚಯಿಸಲಾಗುತ್ತಿದೆ.

೧೬. ಗುಡೇಕೋಟೆ ಪಾಳೆಗಾರರು

ಸುತ್ತಮುತ್ತಲೂ ಗುಡ್ಡಗಳು ಇದ್ದು, ಗುಡ್ಡದ ಮೇಲೆ ಕೋಟೆ ಇರುವುದಕ್ಕಾಗಿ ಇದನ್ನು ಗುಡೇಕೋಟೆ ಎಂದು ಕರೆಯುವರು. ಆದರೆ ಈ ಕುರಿತು ಏಕಾಭಿಪ್ರಾಯವಿಲ್ಲ. ಗುಡಿಯಕೋಟೆ>ಗುಡಿಗಳ ಕೋಟೆ>ಗುಡೇಕೋಟೆ ಎಂದು ಮತ್ತು ಬಹಳಷ್ಟು ಗುಡಿಗೋಪುರಗಳಿಂದ ಕೂಡಿರುವುದಕ್ಕೂ ಹಾಗೂ ಗುಡ್ಡದ ಮೇಲೆ ಕೋಟೆ ಕಟ್ಟಿಸಿರುವುದರಿಂದಲೂ ಇದಕ್ಕೆ ಗುಡೇಕೋಟೆ ಎಂಬ ಹೆಸರು ಬಂದಿರಬೇಕು. ರಾಬರ್ಟ್ ಬ್ರೂಸ್‌ಪೂಟ್‌ನು ಈ ಕೋಟೆಯ ಬಗೆಗೆ ಹಲವು ವಿವರಗಳನ್ನು ನೀಡಿದ್ದು, ಇಡೀ ದಕ್ಷಿಣ ಭಾರತದಲ್ಲಿಯೇ ಈ ಕೋಟೆಗೆ ಬಳಸಿರುವ ಕಲ್ಲುಗಳಷ್ಟು ಗಾತ್ರದ ಕಲ್ಲುಗಳನ್ನು ನಾನು ಎಲ್ಲಿಯೂ ನೋಡಿಲ್ಲವೆಂದು ಹೇಳಿದ್ದಾನೆ.

ಜಟ್ಟಂಗಿರಾಮೇಶ್ವರನು ಈ ಪಾಳೆಗಾರರ ಕುಲದೈವ.[೧೫೧] ಸಂಡೂರಿನ ಸ್ವಾಮಿಮಲೆಯ ಕುಮಾರಸ್ವಾಮಿಯ ಉಲ್ಲೇಖವು ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕಾಣುತ್ತೇವೆ. ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ಈ ಪಾಳೆಗಾರರ ಮನೆತನದ ಕೆಲವು ಶಾಸನಗಳು ದೊರಕಿವೆ. (ಬಳ್ಳಾರಿ, ಚಿತ್ರದುರ್ಗ) ೧ನೇ ಕೃಷ್ಣನ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಇದು ಸಂಡೂರಿನ ಕುಮಾರಸ್ವಾಮಿ ಮಂದಿರವು

ರಾಷ್ಟ್ರಕೂಟರ ಶೈಲಿಯಲ್ಲಿದೆ. ಈ ಅವಧಿಯಲ್ಲಿ ನೊಳಂಬವಾಡಿಯು ಈ ಅರಸರ ಆಳ್ವಿಕೆಯ ಪರಿಧಿಗೆ ಒಳಪಟ್ಟಿದ್ದು ತಿಳಿದುಬರುವುದು. ಈ ಆಧಾರದಿಂದ ಈ ಗ್ರಾಮವು ಇದರ ಆಳ್ವಿಕೆಗೊಳಪಟ್ಟಿತ್ತೆಂದು ತಿಳಿಯುತ್ತದೆ.

ಪ್ರಸ್ತುತ ಗುಡೇಕೋಟೆ ಪ್ರದೇಶವು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿಭಾಗದಲ್ಲಿದೆ. ಈ ಎರಡೂ ಜಿಲ್ಲೆಗಳಲ್ಲಿಯೂ ಹೊಯ್ಸಳರ ಅವಧಿಯ ಅನೇಕ ಶಾಸನಗಳು ದೊರಕಿವೆ. ಗುಡೇಕೋಟೆಯ ಸಮೀಪದಲ್ಲಿರುವ ಸಿದ್ದಾಪುರ(ಮೊಳಕಾಲ್ಮೂರು.ತಾ) ಗ್ರಾಮದಲ್ಲಿಯೂ ಹೊಯ್ಸಳರ ಅವಧಿಗೆ ಸಂಬಂಧಿಸಿದ (೧೨೧೫) ವೀರಗಲ್ಲು ಇದ್ದು ಅದು ಆ ಅವಧಿಯ ಸಾಮಾಜಿಕ ಪದ್ಧತಿಯನ್ನು ಸಾರುತ್ತದೆ. ಆ ಅವಧಿಯಲ್ಲಿ ಕಂಪ್ಲಿಯು ನೊಳಂಬವಾಡಿ ಪ್ರಾಂತ್ಯದ ರಾಜಧಾನಿಯಾಗಿತ್ತು. ೨ನೇ ಬಲ್ಲಾಳನು ನೊಳಂಬವಾಡಿಯನ್ನು ಅನೇಕ ಬಾರಿ ವಶಪಡಿಸಿಕೊಂಡಿದ್ದನು. ಅಲ್ಲದೆ ತುಂಗಭದ್ರ ನದಿಯನ್ನು ಉತ್ತರದ ಗಡಿಯಾಗಿ ಮಾಡಿಕೊಂಡಿದ್ದನು. ಈ ಮೇಲ್ಕಂಡ ಅಂಶಗಳನ್ನು ಗಮನಿಸುವುದರಿಂದ ಗುಡೇಕೋಟೆ ಪ್ರದೇಶವು ಹೊಯ್ಸಳರ ಆಳ್ವಿಕೆಗೊಳಪಟ್ಟಿತ್ತೆಂದು ತೋರುವುದು. ಗುಡೇಕೋಟೆ ಪಾಳೆಗಾರರು ಕುಮಾರರಾಮನ ವಂಶದವರು ಎಂದು ಹೇಳಿಕೊಂಡಿದ್ದಾರೆ. ಈ ಗುಡೇಕೋಟೆಯ ಗಡಿಯಾಂಕ ಭೀಮನು ಕುಮಾರರಾಮನ ಸ್ನೇಹಿತನಾಗಿದ್ದನು ಎಂದು ತಿಳಿದು ಬರುವುದು. ಇದನ್ನು ಗಮನಿಸಿದಾಗ ಗುಡೇಕೋಟೆ ಪ್ರದೇಶವು ಕುಮ್ಮಟದುರ್ಗದ ಅರಸರ ಆಡಳಿತಕ್ಕೊಳಪಟ್ಟಿತ್ತೆಂದು ಗುರುತಿಸಬಹುದು. ಈ ಗುಡೇಕೋಟೆ ಪ್ರದೇಶವು ಕೋಗಳಿನಾಡಿಗೆ ಸೇರಿತ್ತು. ಆ ನಂತರ ವಿಜಯನಗರ ಸಾಮ್ರಾಜ್ಯದ ಒಂದು ಸಣ್ಣ ಪ್ರಾಂತ್ಯವಾಗಿತ್ತು. ವಿಜಯನಗರದ ಅರಸರಿಂದ ನಿಯೋಜಿಸಲ್ಪಟ್ಟ ಪ್ರತಿನಿಧಿ ಇಲ್ಲಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಅಷ್ಟೇ ಅಲ್ಲದೆ ಈ ಪ್ರದೇಶವನ್ನು ಕೃಷ್ಣದೇವರಾಯನ ಅವಧಿಯಲ್ಲಿ ಗುಡೇಕೋಟೆ ಸೀಮೆಗೆ ಕೊಟ್ಟಂತ ವಿಷಯವು ಕೈಫಿಯತ್ತುಗಳಿಂದ ತಿಳಿಯುವುದು. ಮುಂದೆ ೧೫೬೫ರ ಅವಧಿಯಲ್ಲಿ ನಡೆದ ತಾಳಿಕೋಟೆ ಕದನದ ನಂತರ ಈ ಪ್ರದೇಶವು ಬಿಜಾಪುರದ ೧ನೇ ಅಲಿ ಅದಿಲ್ ಷಾ(೧೫೬೮)ಗೆ ಸೇರುವುದು. ಆನಂತರದಲ್ಲಿ ಈ ಪಾಳೆಗಾರರು ರಾಜಕೀಯ ಪ್ರಾಬಲ್ಯವನ್ನು ಬೆಳೆಸಿಕೊಂಡು ಆದಿಲ್ ಷಾಗಳಿಗೆ ಆಧೀನರಾಗಿ ಈ ಭಾಗದಲ್ಲಿ ಆಳ್ವಿಕೆ ನಡೆಸುವರು. ಬಿಜಾಪುರ ಸುಲ್ತಾನನು ಕ್ರಿ.ಶ.೧೬೪೦ರಲ್ಲಿ ಈ ಪ್ರದೇಶವನ್ನು ಶಿವಾಜಿಗೆ ಬಳುವಳಿಯಾಗಿ ನೀಡಿದ ವಿಚಾರ ಇತಿಹಾಸದಿಂದ ತಿಳಿಯುವುದು.

ಚೋರುನೂರು ಗ್ರಾಮದ ವಿರಕ್ತಮಠದ ಆವರಣದಲ್ಲಿರುವ ಕ್ರಿ.ಶ.೧೭ನೆಯ ಶತಮಾನದ ಈ ಶಾಸನವು ಗುಡೇಕೋಟೆ ಸಂಡೂರು ಭಾಗದ ಜನರಿಗೆ ರಾಜಪ್ಪನಾಯಕನ ಆಜ್ಞೆಯ ಮೇರೆಗೆ ಬಮ್ಮಿನಾಯಕನು ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ ವಿಧಿಸಬಾರದೆಂದು ತಿಳಿಸುತ್ತಾನೆ. ಇದೇ ಗ್ರಾಮದ ಹನುಮಂತ ದೇವಾಲಯದ ಮುಂದಿರುವ ಕ್ರಿ.ಶ.೧೮೯೦ರ

ಶಾಸನವು ಗುಡೇಕೋಟೆ ಮತ್ತು ಸಂಡೂರಿನ ಇಮ್ಮಡಿ ರಾಜಪ್ಪನಾಯಕ ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆ ಹೊರಡಿಸಿ ಅದರಂತೆ ಗುಡೇಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿ ಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ. ಈ ಮೇಲ್ಕಂಡ ಎರಡು ಶಾಸನಗಳು ಗುಡೇಕೋಟೆಯ ಪಾಳೆಗಾರನಾದ ಇಮ್ಮಡಿ ರಾಜಪ್ಪನಾಯಕ ಆ ಭಾಗದ ಜನತೆಗೆ ನೀಡಿದ ಆಶ್ವಾಸನೆಯ ವಿಚಾರವನ್ನು ಉಲ್ಲೇಖಿಸುವವು.

ಶಿವಾಜಿಯ ನಿಧನ ನಂತರ ಕ್ರಿ.ಶ.೧೬೮೦ರ ವೇಳೆಗೆ ಇಡೀ ದಕ್ಷಿಣ ಭಾರತವು ಔರಂಗಜೇಬನ ವಶವಾಯಿತು. ಆದರೆ ದಕ್ಷಿಣ ಭಾರತದ ಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಸಾಧಿಸುವುದು ಔರಂಗಜೇಬನಿಗೆ ಅಸಾಧ್ಯವಾಯಿತು. ಈತನ ಆಳ್ವಿಕೆಯ ಅವಧಿಯಲ್ಲಿ ಈ ಪ್ರದೇಶದ ಪಾಳೆಗಾರರು ಹೆಚ್ಚು ಪ್ರಬಲರಾದರು. ಈ ಪಾಳೆಗಾರರು ಸು.೨೦೦ ವರ್ಷಗಳ ಕಾಲ ತಮ್ಮ ಆಳ್ವಿಕೆ ನಡೆಸಿದ್ದಾರೆ.

ಮೈಸೂರಿನ ಹೈದರಾಲಿಯು ಗುಡೆಕೋಟೆ ಮೇಲೆ ಆಕ್ರಮಣ ನಡೆಸಿ ತನ್ನದಾಗಿಸಿಕೊಂಡನು. ಮುಂದೆ ಈತನ ಪುತ್ರ ಟಿಪ್ಪುಸುಲ್ತಾನ್ ೧೭೮೬ರಲ್ಲಿ ಆದವಾನಿ, ಹರಪನಹಳ್ಳಿ ಮುಂತಾದ ಪಾಳೆಗಾರರನ್ನು ಸೋಲಿಸಿ ತನ್ನ ರಾಜ್ಯದಲ್ಲಿ ಸೇರಿಸಿಕೊಂಡನು. ಒಟ್ಟಾರೆಯಾಗಿ ಈ ಪ್ರದೇಶವು ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಹೈದರ್-ಟಿಪ್ಪುರವರ ವಶದಲ್ಲಿತ್ತು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಹೈದರಾಬಾದಿನ ನಿಜಾಮ ಹಾಗೂ ಮರಾಠರು ಒಪ್ಪಂದ ಮಾಡಿಕೊಂಡು ಒಟ್ಟಾಗಿ ಟಿಪ್ಪುವಿನ ಮೇಲೆ ಕ್ರಿ.ಶ.೧೭೯೨ರಲ್ಲಿ ದಾಳಿ ನಡೆಸಿದರು. ಈ ಕದನದಲ್ಲಿ ಟಿಪ್ಪು ಸೋತನು. ಇದರಿಂದಾಗಿ ಹರಪನಹಳ್ಳಿ, ಸಂಡೂರು, ರಾಯದುರ್ಗ ಆಯಾ ಪಾಳೆಯಗಾರರಿಗೆ ಇಂತಿರುಗಿಸಲ್ಪಟ್ಟವು. ಉಳಿದ ಪ್ರದೇಶವು ನಿಜಾಮನ ವಶವಾಯಿತು. ನಂತರ ೧೭೯೯ರಲ್ಲಿ ಟಿಪ್ಪುಸುಲ್ತಾನನ ಮೇಲೆ ಬ್ರಿಟಿಷರು ದಾಳಿ ನಡೆಸಿದರು. ಈ ದಾಳಿಯಲ್ಲಿ ಹೋರಾಡುತ್ತಾ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಮಡಿದನು. ದಾಳಿಯ ನಂತರದ ಒಪ್ಪಂದದಂತೆ ಗುಡೇಕೋಟೆ ಪ್ರದೇಶವು ಹೈದರಾಬಾದಿನ ನಿಜಾಮನ ವಶವಾಯಿತು.

ಗುಡೆಕೋಟೆ ಪ್ರದೇಶವು ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಹೈದರಾಬಾದ್ ನಿಜಾಮನ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ.೧೮೦೦ರಲ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಹೈದರಾಬಾದ್ ನಿಜಾಮನು ಈ ಪ್ರದೇಶವನ್ನು ಸಂಭಾವನೆ ಬಾಬ್ತು ಬ್ರಿಟಿಷರಿಗೆ ಕಾಣಿಕೆ ನೀಡಿದನು. ಮುಂದೆ ಬ್ರಿಟಿಷರು ಈ ಪ್ರದೇಶವನ್ನು ಬಳ್ಳಾರಿ ಜಿಲ್ಲೆಗೆ ಸೇರಿಸಿ, ನಂತರ ಕೂಡ್ಲಿಗೆ ತಾಲ್ಲೂಕಿಗೆ ಸೇರಿಸಿದರು. ಬಳ್ಳಾರಿ ಜಿಲ್ಲೆಯನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡರು. ಬಳ್ಳಾರಿ ಜಿಲ್ಲೆಯು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಾಗ ಅದರ ಮೊದಲ ಕಲೆಕ್ಟರ್ ಆಗಿ ಥಾಮಸ್ ಮನ್ರೋ ಅಧಿಕಾರ ವಹಿಸಿಕೊಂಡನು. ಈ ಪ್ರದೇಶದಲ್ಲಿಯ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಬಂಡಾಯಗಳನ್ನೆಲ್ಲಾ ಹತ್ತಿಕ್ಕುವುದರ ಮೂಲಕ

ಆಡಳಿತದಲ್ಲಿ ಏಕರೂಪತೆಯನ್ನು ಜಾರಿಗೆ ತಂದನು. ಸು.೧೪೭ ವರ್ಷಗಳ ಕಾಲ ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ಆಳಿದರು. ಕ್ರಿ.ಶ.೧೮೦೦ ರಿಂದ ೧೮೫೮ರವರೆಗೆ ಈಸ್ಟ್ ಇಂಡಿಯಾ ಕಂಪನಿಯೂ ಆನಂತರ ಬ್ರಿಟಿಷ್ ಚಕ್ರಾಧಿಪತ್ಯವು ಬಳ್ಳಾರಿ ಜಿಲ್ಲೆಯನ್ನು ಆಳಿತು. ಸ್ವಾತಂತ್ರ್ಯಗಳಿಸಿದ ನಂತರ ೧೯೪೭ರಲ್ಲಿ ಬಳ್ಳಾರಿ ಪ್ರದೇಶವು ಮೈಸೂರು ರಾಜ್ಯಕ್ಕೆ ಸೇರಿತ್ತು. ಗುಡೇಕೋಟೆಯು ೧೯೫೩ರಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗಳ ಅಧಿಕಾರ ವಿಕೇಂದ್ರೀಕರಣಗಳಿಂದ ಫಲಿತಾಂಶವನ್ನು ಕಂಡುಕೊಂಡು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ. ಗುಡೆಕೋಟೆ ಪಾಳೆಯಗಾರರ ಕುರಿತು ಹಿರೇಹಾಳು, ದರೋಜಿ, ಅಂತಾಪುರ, ಶ್ರೀ ಕೊಮಾರದೇವರ ಕ್ಷೇತ್ರದ ಕೈಫಿಯತ್ತುಗಳಲ್ಲಿ ಕೆಲವು ವಿಚಾರಗಳು ಕಾಣಸಿಗುತ್ತವೆ.

ಜರಿಮಲೆ ಪಾಳೆಯಗಾರರು

ಜರಿಮಲೆ ಪಾಳೆಯಗಾರಿಕೆಯನ್ನು ಸ್ಥಾಪಿಸಿದವನು ಪೆನ್ನಪ್ಪನೆಂಬುವನು. ಈತನು ವಿಜಯನಗರದ ಅರಸ ಅಚ್ಯುತರಾಯನಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದಕ್ಕಾಗಿ ಈತನಿಗೆ ಜರಿಮಲೆ ರಾಜ್ಯವು ಬಹುಮಾನವಾಗಿ ದೊರಕಿತು.[೧೫] ವಿಜಯನಗರ ಪತನವಾದ ನಂತರ ಈ ಅರಸ ಸ್ವತಂತ್ರನಾದನು. ಇವರು ಮೊದಲು ಕಂಚಿದೇಶದ ನಿವಾಸಿಗಳು. ಸು.೬೦೦-೭೦೦ ವರ್ಷಗಳ ಹಿಂದೆಯೇ ಉತ್ತರದ ಕಡೆಗೆ ಹೊರಟರು. ಮುಂದಿನ ರಾಜ್ಯವೇ ಮೈಸೂರು. ಹಾದಿಯಲ್ಲಿ ಒಂದು ಆಕಳು ಅವರಿಗೆ ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡು ಮಾಯವಾಯ್ತು. ಆಗ ಅವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗಂಗಮ್ಮನ ಹಳ್ಳಿ ದೋಣಿ ಗುಡ್ಡದವರೆಗೆ ಆ ಆಕಳಿನ ಹೆಜ್ಜೆಯನ್ನು ಅನುಸರಿಸಿ ಬಂದರು. ಆ ಬೆಟ್ಟವನ್ನು ಮೇಲೆತ್ತಿ ನೋಡಲು ಸುತ್ತಮುತ್ತ ಹಾಸಿದ ಮರಗಳ ಕಾಡು ಕಾಣಿಸಿತು. ಅಲ್ಲಿಂದ ಜಾಗಟೆಯ ನಾದ ಕೇಳಿ ಬರುತ್ತಿತ್ತು. ಆ ಶಬ್ದವನ್ನು ಅನುಸರಿಸಿ ಈ ಭೂಪರು ಅಲ್ಲಿಗೆ ಹೋಗಿ ನೋಡಲಾಗಿ, ಮಹಾಯೋಗಿ ವರೇಣ್ಯರ ಶಿಬಿರ ಕಾಣಿಸಿತು. ಸ್ವಾಮಿಗಳು ಒಳಗೆ ಪೂಜೆ ಮಾಡುತ್ತಿದ್ದರು. ಇವರು ಹೊರಗೆ ಸ್ವಾಮಿಗಳ ಅಜ್ಞೆಗಾಗಿ ಕಾಯುತ್ತಿದ್ದರು. ಸ್ವಾಮಿಗಳ ದರ್ಶನ ಪೂಜೆಯ ನಂತರ ಆಯಿತು. ಗುರುಗಳ ಜೊತೆಗೆ ಮಾತನ್ನಾಡುತ್ತಿದ್ದಾಗ ಪಕ್ಕದಲ್ಲಿ ಇದ್ದ ಸುರಭಿ (ಆಕಳು, ಕಾಮಧೇನು) ಕೆಚ್ಚಲಿನಿಂದ ಹಾಲನ್ನು ತನ್ನಷ್ಟಕ್ಕೆ ತಾನೇ ಸುರಿಯಲಾರಂಭಿಸಿತು, ಅದಕ್ಕಾಗಿ ಆ ಸ್ಥಳಕ್ಕೆ ಸುರಭಿ-ಸಿರಬಿ-ಚಿರಬಿ ಎಂಬ ಅಬಿದಾನವಾಯ್ತು. ಕೂಡ್ಲಿಗೆ ತಾಲ್ಲೂಕಿನಲ್ಲಿ ಇಂದಿಗೂ ಈ ಗ್ರಾಮವಿದೆ.

ಈ ಏಳು ಮಂದಿ ವೀರರು ಸ್ವಾಮಿಗಳ ಆದೇಶದಂತೆ ಚಳ್ಳಕೆರೆ ತಾಲ್ಲೂಕಿನ ಮಳೆಭೂಪ ಸಮುದ್ರ ಎಂಬ ಗ್ರಾಮಕ್ಕೆ ಬಂದು ನೆಲೆಸಿದರು. ಆ ಗ್ರಾಮದ ಕಾಡಿನಲ್ಲಿ ಬಿಳಿ ಹಂದಿ ದಾರಿಯಲ್ಲಿ ಹೋಗುವವರಿಗೆ ಬಹಳ ತೊಂದರೆ ಕೊಡುತ್ತಿತ್ತು. ಅದಕ್ಕೆ ಬೇಸರಗೊಂಡ ಜನರು ಆ ಗ್ರಾಮದ ಮುಖಂಡ ಭೈಯಪ್ಪನಿಗೆ

ತಿಳಿಸಿದರು. ಭೈಯಪ್ಪ ಅಂಥ ಬಲಿಷ್ಠವಾದ ಹಂದಿಯನ್ನು ಕಂಚಿ ದೇಶದ ವೀರರೇ ಎದುರಿಸಲು ಸಮರ್ಥರೆಂದು ತಿಳಿಸಿದನು.

ಗ್ರಾಮದ ಮುಖ್ಯಸ್ಥರೆಲ್ಲಾ ಕೂಡಿ ಆ ವೀರರಲ್ಲಿ ಬೇಡಿಕೊಂಡರು. ಶಿವತತ್ವ ಬೋದನಾರ್ಥವಾಗಿ ಪ್ರವಾಸದಲ್ಲಿದ್ದ ಶ್ರೀಮರುಳ ಸಿದ್ಧಾರ್ಯರನ್ನು ಪುನಃ ಸಂದರ್ಶಿಸಿ, ಅವರ ಆಶೀರ್ವಾದ ಪಡೆದರು. ಆ ಏಳು ಮಂದಿ ವೀರರು ಶ್ರೀಗುರುವರೇಣ್ಯರು ಅಪ್ಪಣೆ ಕೊಡಿಸಿದಂತೆ ಬೇಟೆಗೆ ಹೊರಟರು. ಆ ಏಳು ಮಂದಿ ಪಾಳೆಗಾರರ ಹೆಸರು ಹೀಗಿವೆ :

೧. ಸಿದ್ದಪ್ಪ ನಾಯ್ಕ ೨. ಲಿಂಗಳನಾಯ್ಕ ೩. ಓಬಳನಾಯ್ಕ ೪. ಮಲ್ಲಿಕಾರ್ಜುನ ನಾಯ್ಕ ೫,೬,೭ ನಾಯ್ಕರ ಹೆಸರು ತಿಳಿದುಬಂದಿಲ್ಲ. ಈ ಏಳು ಮಂದಿ ನಾಯಕರು ಏಳು ನಾಯಿಗಳೊಂದಿಗೆ ಮಳೆಭೂಪ ಸಮುದ್ರದಿಂದ ಬಿಳಿಹಂದಿಯನ್ನು ಬೆನ್ನಟ್ಟಿ ಹೋದರು. ಸಂಡೂರು ತಾಲ್ಲೂಕಿನ 'ನೀರ್ಕಲ್ ಕೆರೆಹಳ್ಳಿ' (ಚಿಕ್ಕಕೆರೆನಹಳ್ಳಿ) ಎನ್ನುವ ಗ್ರಾಮದವರೆಗೆ ಆ ಬಿಳಿಹಂದಿ ಓಡಿ ಬಂದಿತು. ಅಲ್ಲೊಂದು ಬೆಟ್ಟದ ಪಕ್ಕದಲ್ಲಿ ಒಂದು ಹಳ್ಳವಿತ್ತು. ಆ ಹಳ್ಳದಲ್ಲಿ ಹಂದಿಸ್ನಾನ ಮಾಡಿ ಬೆಟ್ಟದ ದೊಡ್ಡ ಗುಂಡಿನ ಬದಿ ಮಲಗಿತು.

ಈ ಏಳು ನಾಯ್ಕರುಗಳಲ್ಲಿ ಒಬ್ಬನಾದ ಭೂಮರಾಜು ಎನ್ನುವವ ಆ ಹಂದಿಗೆ ಭರ್ಜಿ ಹಾಕಿದನು. ಆಗ ಸಿಂಹದಂತಹ ಗರ್ಜನೆಯನ್ನು ಆ ಹಂದಿ ಮಾಡಿತು. ಭಯಂಕರವಾದ ಈ ಗರ್ಜನೆಗೆ ಪಕ್ಕದಲ್ಲಿದ್ದ ಗುಂಡು ಸಿಡಿದು ಹೋಯಿತು. ಆ ಗುಂಡನ್ನು ಇಂದಿಗೂ ಹಂದಿ ವಡೆದ ಕಲ್ಲು ಎನ್ನುವರು. ಆ ಹಂದಿ ಅಲ್ಲಿಂದ ಹೊರಟು ಮುಂದೆ ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿ ಎಂಬ ಊರಿನ ಕಡೆಗೆ ಓಡಲಾರಂಭಿಸಿತು. ಇವರು ಅದನ್ನು ಬೆನ್ನತ್ತಿದರು. ಬೇಟೆಯಾಡುತ್ತ ಅವರು ಬೆಂದು ಬಸವಳಿದರು. ತುಂಬಾ ಬಾಯಾರಿಕೆಯಾಯಿತು. ಈಗಿನ ಉಜ್ಜಯಿನಿಯ ದೇವಾಲಯದ ಸ್ಥಳದಲ್ಲಿ ಬಾರಿ ಪೆಳೆ ಬೆಳೆದಿತ್ತು. ಆ ಹಂದಿಯು ಅಲ್ಲಿದ್ದ ಪೊದೆಯಲ್ಲಿ ಹೊಕ್ಕು ಬಯಲಾಯ್ತು, ಧಣಿದ ನಾಯಕರುಗಳು ಅಲ್ಲಿಯೇ ಮರದ ನೆರಳಲ್ಲಿ ತಂಗಿದರು.

ಆ ಪೊದೆಯಲ್ಲಿ ಭೂಮರಾಜುವಿನ ನಾಯಿ ಹೊಕ್ಕು ಬಂದಿತು. ನಾಯಿಯ ಮೈ ರಾಡಿಯಾಗಿರುವುದನ್ನು ಭೂಮರಾಜು ಪರಿಶೀಲಿಸಿದ. ನಾಯಿಯ ಮೈ ಮೇಲಿನ ರಾಡಿಯನ್ನು ನೋಡಿ ಈ ಪೊದೆಯಲ್ಲಿ ನೀರಿರಬೇಕೆಂದು ಭೂಮರಾಜು ಊಹಿಸಿದನು. ದಟ್ಟವಾಗಿ ಬೆಳೆದಿದ್ದ ಪೊದೆಯನ್ನು ಕಡಿದು ದಾರಿ ಮಾಡಿಕೊಂಡು ಒಳಹೊಕ್ಕನು. ಅಲ್ಲಿ ಒಂದು ಜಲಸ್ಥಾನ ಕಾಣಿಸಿತು. ಅದೇ ಮರುಳ ಸಿದ್ದೇಶ್ವರ ಲಿಂಗದ ಇಂದಿನ ಮೂಲ ಪೀಠವಾಗಿದೆ. ಬಾಯಾರಿ ಬಂದಿದ್ದ ಭೂಮರಾಜ ಸಂತೋಷದಿಂದ ಅಲ್ಲಿರುವ ಕುಣಿಯಿಂದ ನೀರನ್ನು ಬೊಗಸೆ ಕೈಗಳಿಂದ ಬೇಗ ಬೇಗನೆ ಕುಡಿದು ದಾಹ ಪರಿಹಾರಿಸಿಕೊಂಡನು. ತಲೆ ಎತ್ತಿ ಮೇಲೆ ನೋಡಲು ಎದುರುಗಡೆಗೆ ವಟವೃಕ್ಷದ ಟೊಂಗೆಯಲ್ಲಿ ತೊಟ್ಟಿಲೊಂದು ನೇತಾಡುತ್ತಿತ್ತು.

ತೇಜಸ್ವಿಯಾದ ಮಹಾಸ್ವಾಮಿಗಳು ಆ ತೊಟ್ಟಿಲಿನಲ್ಲಿ ಕುಳಿತು ಕೈಯಲ್ಲಿ ಮಾವಿನ ಹಣ್ಣನ್ನು ತಿನ್ನುತ್ತಿರುವರು. ಹಣ್ಣು ಪೂರ್ತಿಯಾಗಿ ಕೈಯಲ್ಲಿ ಗೊಟ್ಟ-ಗೊರಟ (ಚತುಷ್ಕ ಬೀಜ) ಮಾತ್ರ ಉಳಿದಿದೆ. ಆ ದಿವ್ಯ ಪುರುಷನಿಗೆ ಭೂಮರಾಜು ನಮಸ್ಕರಿಸಿದನು. ಗುರುಗಳು ಕೈಯಲ್ಲಿದ್ದ ಆ ಮಾವಿನ ಬೀಜವನ್ನೇ ಅವನ ಸೆರಗಿನಲ್ಲಿಟ್ಟು ರಾಜನಾಗು ಎಂದು ಆಶೀರ್ವದಿಸಿ ಕಳಿಸಿದರು.

ಆ ಸ್ಥಳದಲ್ಲಿಯೇ ಭೂಗತವಾಗಿದ್ದ ತಮ್ಮ ಮಠವನ್ನು ಜೀರ್ಣೋದ್ಧಾರ ಮಾಡಿರೆಂದು ಗುರುಗಳು ಆಜ್ಞೆ ಮಾಡಿದರು. ಅಂದು ಅವರು ಆಶೀರ್ವಾದಿಸಿ ಕೊಟ್ಟ ಮಾವಿನ ಗೊಟ್ಟಕ್ಕೆ ಬಂಗಾರದ ಕವಚವನ್ನು ಹಾಕಿ ವಂಶಪರಂಪರೆಯಾಗಿ ಈ ಪಾಳೆಗಾರರ ಮನೆತನದಲ್ಲಿ ಉಳಿಸಿಕೊಂಡು ಬಂದಿರುವರು. ಗುರುಗಳು ಸಹ ಭೂಮರಾಜನ ಸಮೇತ ಮುಂದೆ ಹಾಗೆಯೇ ದಯಮಾಡಿಸಿದರು. ಅವರು ಬಂದದ್ದು ಇಂದಿನ ಜರಿಮಲೆ ಬೆಟ್ಟಕ್ಕೆ. ಇದು ಕೂಡ್ಲಿಗಿ ತಾಲ್ಲೂಕಿನಲ್ಲಿದೆ. ಕೂಡ್ಲಿಗಿಯಿಂದ ೧೦ ಮೈಲು ದೂರದಲ್ಲಿದೆ. ಗುರುಗಳ ಇಚ್ಛೆಯಂತೆ ಈ ಸ್ಥಳಕ್ಕೆ ಜರಿಮಲೆ ಎಂದೇ ಹೆಸರಿಟ್ಟು ತಮ್ಮ ಪಾಳೆಯಪಟ್ಟನ್ನು ನಿರ್ಮಿಸಿದರು. ಈ ಪಾಳೆಯಪಟ್ಟಿಗೆ ಭೂಮರಾಜನೇ ಪಾಳೇಗಾರನಾದ. ಸ್ವಾಮಿಗಳು ಅಂದು ಸೂಚಿಸಿದ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿದರು.

ಚಿತ್ರದುರ್ಗದ ಮೇಲೆ ಶ್ರೀರಂಗಪಟ್ಟಣದ ಹೈದರಾಲಿಯು ಯುದ್ಧವನ್ನು ಸಾರಿದನು. ಚಾಣಾಕ್ಷನಾದ ಮತ್ತು ದೂರದರ್ಶಿಯಾದ ದಿವಾನ್ ಪೂರ್ಣಯ್ಯನು ಕದನದಲ್ಲಿ ಗೆಲ್ಲಲು ಜರಿಮಲೆ ಅರಸರ ಸಹಾಯ ಪಡೆಯುವಂತೆ ಸಲಹೆ ನೀಡಿದನಂತೆ. ಹೈದರಾಲಿಗೆ ಈ ಸಲಹೆ ಸರಿಕಂಡದ್ದರಿಂದ ಜರಿಮಲೆ ದೊರೆಗಳ ಸಹಾಯಕ್ಕಾಗಿ ಬಂದವನು ಅರೂದಿ ದಿಬ್ಬದ ಗ್ರಾಮದ ಸಮೀಪ ಠಾಣ್ಯ ಹೂಡಿದನು. ಈತನ ಅಭಿಮತವನ್ನು ಪರಿಚಾರಕರು ಓಲೆಗಳ ಮೂಲಕ ಅರಸುಗಳಿಗೆ ತಿಳಿಸಿದರು. ಅರಸರುಗಳು ಕದನದಲ್ಲಿ ಸಹಾಯ ಮಾಡಲು ಒಪ್ಪಿದರು. ಜರಿಮಲೆ ಪಾಳೆಗಾರರ ಸಹಾಯದಿಂದ ಹೈದರಾಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡನು. ಇಂಥ ಬಲಿಷ್ಠರಾದ ವೀರರನ್ನು ಹಾಗೆ ಬಿಟ್ಟರೆ ಪಾಳೆಗಾರರೆಂಬ ಅಭಿಮಾನದಿಂದ ತನಗೆ ತೊಂದರೆ ಮಾಡುವರೆಂದು ಹೈದರಾಲಿ ಇವರನ್ನು ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ಈ ಏಳು ಮಂದಿ ನಾಯಕರನ್ನು ಸೆರೆಯಲ್ಲಿಟ್ಟನು. ಅಂದಿನ ಕರಾರಿನ ಹಾಗೆ ಇಂದಿನವರೆಗೂ ಹೈದರಾಲಿ ಆದಿಯಾಗಿ ಈ ಮನೆತನದವರಿಗೆ ಮಾಸಾಶನ ರೂ.೧೩೩.೩ ಪೈಸೆ ಬರುವುದು. ಇದಕ್ಕೆ ಆಧಾರ ಅವರಲ್ಲಿರುವ ತಾಮ್ರ ಶಾಸನಗಳೇ ಪ್ರಮುಖವಾಗಿವೆ. ಆನೆಗೊಂದಿ ಅರಸರು ಈ ನಾಯಕರಿಗೆ ಸಂಬಂಧಿಗಳಾಗಿದ್ದಂತೆ ತಿಳಿದುಬರುವುದು.

ಈ ಪಾಳೆಗಾರಿಕೆಯು ಅವನತಿ ಹೊಂದಲು ಕಾರಣಗಳನ್ನು ಆ ಮನೆತನದ ಸಿದ್ಧಪ್ಪನಾಯಕ (ಈಗಿನ ಅರಸ) ಈ ರೀತಿ ತಿಳಿಸುವರು.

ಜರಿಮಲೆ ಪಾಳೆಗಾರರಿಂದಲೇ, ಹೈದರಾಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡನು. ಅದರ ಸವಿನೆನಪಿಗಾಗಿ ಜರಿಮಲೆಯ ನಾಲ್ಕು ಮಂದಿ ಭೂಪರಿಗೆ ಮೈಸೂರು ಸಂಸ್ಥಾನದ ೧೩೩ ಹಳ್ಳಿಗಳನ್ನು

ಜಹಗೀರಾಗಿ ಹಂಚಿದಂತೆ ತಿಳಿದುಬರುವುದು. ಅವುಗಳೆಂದರೆ : ಸಂಡೂರು, ಗುಡೇಕೋಟೆ, ವೀರನದುರ್ಗ (ಕೂಡ್ಲಿಗಿ ತಾಲ್ಲೂಕು) ಭೈರದೇವರ ಗುಡ್ಡ (ಉಜ್ಜಯಿನಿ ಸಮೀಪ) ಗೂಡ ಗೂಪಾಲನೆಂಬ ಸಿಪಾಯಿ ಪ್ರತಿದಿನ ಆನೆಗೊಂದಿ ರಾಜ್ಯದಿಂದ ಕಮಲದ ಹೂವನ್ನು ಪೂಜೆಗಾಗಿ ತಂದು ಕೊಡುತ್ತಿದ್ದನು. ಅರಸರಿಗೆ ಈತನ ಕೆಲಸ ಬಹಳ ಮೆಚ್ಚುಗೆಯಾಗಿ, ನಿನಗೆ ಏನಾದರೂ ವರ ಬೇಕೆಂದರೆ ಕೇಳು ಎಂದರು. ಆ ಸಿಪಾಯಿ ಮೊದಲಿಗೆ ಬೇಡವೆಂದು, ನಂತರ ಕೆಲ ಮಂದಿ ಕುತಂತ್ರಿಗಳು ಕಿವಿಯೂದಿದ್ದರಿಂದ ಮೂರು ಮುಕ್ಕಾಲುಗಳಿಗೆ ನಿಮ್ಮ ದರಬಾರಿನ ಅಧಿಪತ್ಯವನ್ನು ನನಗೆ ಕೊಡಬೇಕೆಂದು ಕೇಳಿದನಂತೆ. ಅದಕ್ಕೆ ಅರಸರು ಆಗಲಿ ಎಂದರು. ಆ ಸಮಯಕ್ಕೆ ಅವನ ಹುಚ್ಚು ಕಾರಭಾರ ನಡೆದು ಸಂಸ್ಥಾನ ನಾಶವಾಯಿತು ಎಂದು ಈಗಿನ ಪಾಳೆಗಾರರು ತಿಳಿಸುತ್ತಾರೆ. ಮಾವಿನ ಗೊರಟಕ್ಕೆ ಮಾಡಿಸಿದಂತ ಚಿನ್ನದ ಹೊದಿಕೆ, ಸುರಗಿ, ರುದ್ರಾಕ್ಷಿ, ವಿಚಿತ್ರವಾದ ಆಯುಧಗಳು ಮತ್ತು ಮರುಳಸಿದ್ದೇಶ್ವರ ಲಿಂಗದ ಮೂರ್ತಿ ಮುಂತಾದುವು ಇವರ ಮನೆತನದಲ್ಲಿ ಇಂದಿಗೂ ಉಳಿದು ಬಂದಿವೆ.

ವಡ್ಡು-ದರೋಜಿ ಪಾಳೆಯಗಾರರು

ವಡ್ಡು-ದರೋಜಿ ಗ್ರಾಮಗಳು ಸಂಡೂರು ತಾಲ್ಲೂಕಿನಲ್ಲಿರುವ ಪ್ರಾಚೀನ ಗ್ರಾಮಗಳಾಗಿವೆ. ವಿಜಯನಗರೋತ್ತರದ ಅವಧಿಯ ಪಾಳೆಯಪಟ್ಟುಗಳಲ್ಲಿ ಈ ಎರಡು ಗ್ರಾಮಗಳ ಪ್ರಾದೇಶಿಕ ಚರಿತ್ರೆಯು ಮಹತ್ವದ್ದಾಗಿತ್ತು. ಈ ಪ್ರದೇಶಗಳಲ್ಲಿ ಕುಮಾರರಾಮನ ವಂಶಸ್ಥರು ಆಳ್ವಿಕೆ ನಡೆಸಿರುವುದು ಗಮನಾರ್ಹ. ಹೊಸಪೇಟೆ-ಬಳ್ಳಾರಿ ರಸ್ತೆಯ ಎಡ ಭಾಗದಲ್ಲಿ ದರೋಜಿ ಗ್ರಾಮವಿದ್ದರೆ, ತೋರಣಗಲ್ಲಿಗೆ ಹತ್ತಿರದಲ್ಲಿ ಹಾಗೂ ಹೊಸಪೇಟೆ-ಬಳ್ಳಾರಿ ರಸ್ತೆಯ ಬಲಭಾಗಕ್ಕೆ ವಡ್ಡು ಗ್ರಾಮ ಕಾಣಸಿಗುತ್ತದೆ.

ಈ ಮೇಲ್ಕಂಡ ಎರಡು ಗ್ರಾಮಗಳ ಪಾಳೆಗಾರಿಕೆಯ ಕುರಿತಂತೆ ಹೆಚ್ಚಿನ ಆಕರಗಳು ಲಭಿಸುವುದಿಲ್ಲ. ಆದರೆ ದೊರೆತ ಅಲ್ಪ ಮಾಹಿತಿಯಲ್ಲಿಯೇ ಈ ಅರಸರ ಇತಿಹಾಸವನ್ನು ಈ ರೀತಿ ಚಿತ್ರಿಸಬಹುದು. ವಡ್ಡರು ಇಳಿದ ಕಾರಣ ದರೋಜಿ ಕೆರೆ ಹುಟ್ಟಿ ಒಳಗೆ ಎರಡು ಹರದಾರಿ ಮೇಲೆ ದಕ್ಷಿಣಕ್ಕೆ ವಡ್ಡು ಎಂದು ಹೆಸರಿಟ್ಟು ಗ್ರಾಮ ಕಟ್ಟಿಸಿ ಹನುಮಂತ ದೇವರ ಪ್ರತಿಷ್ಠಾಪನೆ ಮಾಡಿ ಹೋಗಲಾಗಿ ವೊಡ್ಡರು ಇಳಿದು ಇದ್ದ ಕಾರಣ ವಡ್ಡು ಎಂದು ಹೆಸರಾಯಿತೆಂದು ತಿಳಿದು ಬರುವುದು.[೧೫೩]

ವಡ್ಡು ಗ್ರಾಮ ನಿರ್ಮಾಣವಾದ ನಂತರ ಬೊಮ್ಮಂತ ರಾಜನ ಏಳು ಜನ ಮಕ್ಕಳ ಪೈಕಿ ಕೊನೆಯವನಾದ ಚಿನ್ನಯರಾಜ ವಡ್ಡು-ದರೋಜಿ ಗ್ರಾಮಗಳಲ್ಲಿ ಆಳ್ವಿಕೆ ನಡೆಸಿದ ವಿವರವಿದೆ. ವಡ್ಡು-ದರೋಜಿಯನ್ನು ಚಿನ್ನಯ ರಾಜನು ಆಳುವಾಗ ಸಂಡೂರಿನಲ್ಲಿನ ತ್ರಿಶಂಕುರಾಯ ಕಟ್ಟಿಸಿದ ಕೆರೆ (ಸೋಮನಹಳ್ಳಿ ಕೆರೆ) ಕೋಡಿ ಬಿದ್ದಾಗ ನಾರಿಹಳ್ಳ ಗಂಡಿ ಆಚೆಗೆ ಹೊರಗಂಡಿಯಿಂದ ನರಸಿಂಹಗಂಡಿಗೆ ಮೂರು ಹರದಾರಿ ಬಂನಹಳ್ಳಿ(ಬೂವನಹಳ್ಳಿ) ಆ ಕೆರೆ ಒಡೆದು, ದರೋಜಿ ಕೆರೆ ಒಡೆದು ಹೋಗಿತ್ತು.

ಕೆರೆ ಒಡೆದಾಗ ಅದರ ಮೇಲೆ ಹಳ್ಳದರಾಯನೆಂಬ (ಹನುಮಂತ ದೇವರು) ದೇವರು ಹಳ್ಳದ ಪಕ್ಕದಲ್ಲಿತ್ತು. ಚಿನ್ನಯರಾಜನಿಗೆ ಸ್ವಪ್ನದಲ್ಲಿ ತಿಳಿದ ಸಂಗತಿಯನ್ನು ಹೋಗಿ ನೋಡಲಾಗಿ ಅಲ್ಲಿ ದೇವರಿತ್ತು. ಅದಕ್ಕೆ ಹಳ್ಳದರಾಯನೆಂದು ಹೆಸರಿಟ್ಟು ಪಕ್ಕದಲ್ಲಿರುವ ಮಡುವಿಗೆ ಹಳ್ಳದರಾಯನ ಮಡುವು ಎಂದು ಕರೆಯಲಾಯಿತು. ಇಂದಿಗೂ ಈ ದೇವಸ್ಥಾನವನ್ನು ನಾವು ಇಲ್ಲಿ ಇರುವುದನ್ನು ಕಾಣುತ್ತೇವೆ.

ಬೇಡರ ಮರುಳಿನವರ (ಮಳೆಲಾರು) ಚಿನ್ನಯರಾಜನ ಮಗ ಬಸಳನಾಯಕ ವಡ್ಡು-ದರೋಜಿ ಆಳುವಾಗ ಒಂದು ದಿನ ಬೇಟೆಯಾಡುತ್ತಾ ಹೋಗಲಾಗಿ ಪೂರ್ವದಲ್ಲಿ ನೇಮಿಯವರ ಸರದಾರ ಕಟ್ಟಿಸಿದ್ದ ಕೆರೆಯು ಒಡೆದು ಬಹಳ ದಿವಸವಾಗಿತ್ತು. ಇವನು ಜೀರ್ಣೋದ್ಧಾರ ಮಾಡಿದನು. ಬಸಳನಾಯಕನ ವಡಕು ಬಸವಣ್ಣ ದೇವರ ಗುಡಿಗೆ ಪೂರ್ವ ಭಾಗಕ್ಕಿತ್ತು. ಇವರು ಆಳ್ವಿಕೆ ನಡೆಸುತ್ತಿದ್ದಾಗ ಮೊಗಲರು ಆಕ್ರಮಿಸಿದ್ದರಿಂದ ಮರುಳನವರ ಪಾಳೆಯಗಾರರು ಗುಡೇಕೋಟೆ, ಜರಿಮಲೆ, ಬಾಣರಾವಿ, ವಡ್ಡು ಇತರೆಡೆಗಳಲ್ಲಿದ್ದರು.

ಈ ರಾಜ್ಯಕ್ಕೆ ಕೃಷ್ಣರಾಯ, ಅಚ್ಯುತರಾಯ ಮತ್ತು ಅಳಿಯರಾಮರಾಯರ ಆನಂತರ ಆನೆಗೊಂದಿ ಅರಸರ ಪ್ರೋತ್ಸಾಹವಿದ್ದಂತೆ ತಿಳಿದುಬರುತ್ತದೆ. ಮೊಗಲರು, ಚಿತ್ರದುರ್ಗದ ಅರಸರು, ಹೈದರಾಲಿ ಮತ್ತು ಘೋರ್ಪಡೆ ಮೊದಲಾದವರು ಈ ರಾಜ್ಯವನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ಕಾಣುತ್ತೇವೆ.

ಟಿಪ್ಪುಸುಲ್ತಾನನು ಆದವಾನಿ, ಆನೆಗೊಂದಿ, ಕನಕಗಿರಿಗಳಿಗೆ ಮುತ್ತಿಗೆ ಹಾಕಿದ ನಂತರ ಈ ಕಡೆ ಬರಲಾರಂಭಿಸಿದ. ಆ ಸಮಯದಲ್ಲಿ ದರೋಜಿ ಕೆರೆಯೊಳಗೆ ಇಳಿದು ಕೊಂಡಿದ್ದರಿಂದ ಆನೆಗೊಂದಿ, ಕನಕಗಿರಿ, ಸೀಮೆಗಳನ್ನು ಜಹಗಿರಿಯಾಗಿ ಬಬರ ಜಂಗಗೆ ಕೊಟ್ಟರು. ಹರಪನಹಳ್ಳಿಗೆ ಹೋಗುವಾಗ ಈ ಕೆರೆ ವಡಕು ಬಿದ್ದು ಸಂಡೂರು ಹಳ್ಳ, ಬ್ರಂಹ್ಮಸಮುದ್ರಹಳ್ಳ, ಆವಿನಮಡುವಿನ ಹಳ್ಳಗಳು ಕೂಡಿ ಕೆರೆ ವಡಕು ಬಂದಿದ್ದರಿಂದ ಜಹಗೀರಿದಾರ ಬಬರ ಜಂಗಗೆ ಕೆರೆ ಕಟ್ಟಿಸಲು ಹೇಳುವನು. ಆ ಅಧಿಕಾರಿ ರಾಮಾಜಿ ಕಿಲ್ಲೆದಾರ ಪಿರಖಾನಗೆ ಈ ಕೆರೆಯನ್ನು ಸುಂದರವಾಗಿ ಕಟ್ಟಿಸುವಂತೆ ಟಿಪ್ಪು ಹೇಳಿ ಹರಪನಹಳ್ಳಿಗೆ ಸೈನ್ಯದೊಂದಿಗೆ ಹೋದ ಸಂಗತಿ ತಿಳಿದುಬರುತ್ತದೆ. ಸ್ಥಳೀಯರು ಸಹ ಇದನ್ನೇ ಹೇಳುತ್ತಾರೆ. ಆದರೆ ವಾಸ್ತವವಾಗಿ ಈ ಕೆರೆಯನ್ನು ಚಿನ್ನಯರಾಜನೇ ಕಟ್ಟಿಸಿರಬೇಕು ಎನಿಸುವುದು. ಒಡೆದ ಈ ಕೆರೆಯನ್ನು ತರುವಾಯ ಜೀರ್ಣೋದ್ಧಾರ ಕಾಮಗಾರಿ ಕೆಲಸ ಮಾಡಿಸಿರಬೇಕು. ಆನೆಗೊಂದಿ ಅರಸ ತಿರುಮಲರಾಯರು ಕೃಷ್ಣಾನದಿ ಕಡೆಯಿಂದ ಒಂದು ಕೆರೆಯನ್ನು ಪೂರ್ಣಗೊಳಿಸಿ ಮೂರು ವರ್ಷ ಆಳಿದರು. ಆಗ ಸ್ಥಳೀಯ ರಾಜನ ಬಗ್ಗೆ ವಿವರ ಸಿಗಲಿಕ್ಕಿಲ್ಲ ಎಂದು ಕಾಣುತ್ತದೆ.

ನಾರಿಹಳ್ಳ, ಆವಿನಮಡುವಿನಹಳ್ಳ, ವಡ್ರಹಳ್ಳಿಯ ಬ್ರಹ್ಮಂಸಮುದ್ರಹಳ್ಳ ಈ ಮೂರು ಹಳ್ಳಗಳಿಗೆ ತುಂಗಭದ್ರಾ ಸೇತುವೆ ಪೂರ್ವದಲ್ಲಿ ವಡಕಿನ ಬಾಯೊಳಗೆ ದರೋಜಿ ಹತ್ತಿರ ವಡ್ಡು ಕಟ್ಟುತ್ತಾರೆ. ಹೀಗೆ

ಆನೆಗೊಂದಿಯ ತಿಮ್ಮಪ್ಪರಾಜ ಒಂದು ವರ್ಷ ಆಳಿದ ನಂತರ ಮಹಮದಲಿ ಬೇಗ ಅಮಲದಾರನು ಹಜಾರುಯಿಂದಾ ದರೋಜಿ ಕೆರೆ ಕಾಮಗಾರಿ ಒಳಗೆ ೧೭೭೫ ರಾಕ್ಷಸ ಸಂವತ್ಸರದಲ್ಲಿ ಪೂರೈಕೆಯಾಯಿತು.

ಹಿರೇವೆಂಕಟಪತಿರಾಯರ ಕಾಲದಲ್ಲಿ ಮರುಳನವರ ವಂಶದ ಅಳಿಯ ಮೆದಿಕೆರೆನಾಯಕ ವಡ್ಡುಗೆ ನೆಲೆಯೂರಿದ ದರೋಜಿಗೆ ಆನಂತರ ಬಂದಾಗ ಆನೆಗೊಂದಿ ದೊರೆಯ ಸಲಹೆಯಂತೆ ಮದಕರಿ ಚಿತ್ರದುರ್ಗಕ್ಕೆ ವಾಪಸ್ಸಾದ. ಈ ಸಂದರ್ಭದಲ್ಲಿ ಚಿನ್ನಯರಾಜನ ಆಳ್ವಿಕೆಯಲ್ಲಿ ಅವನ ರಾಜ್ಯಕ್ಕೆ (ವಡ್ಡು-ದರೋಜಿ) ಈ ಹಳ್ಳಿಗಳು ಸೇರಿದ್ದವು. ಅವುಗಳೆಂದರೆ ತೋರಣಗಲ್ಲು, ಗೋನಾಹಳ್ಳಿ, ಗಂಗಲಾಪುರ, ಬವನಹಳ್ಳಿ, ಶ್ರೀರಂಗಾಪುರ, ಗಾದಿಗನೂರು, ಕುರೆಕುಪ್ಪೆ, ಗೌರಿಪುರ, ವೇಮನಹಳ್ಳಿ, ಬಸಾಪುರ, ಧರ್ಮಸಾಗರ, ತಾಳೂರು, ಬನ್ನಿಹಟ್ಟಿ, ಇಂಗಳಗಿ, ಕೋಟಗನ ಹಾಳ, ನಾಗಲಾಪುರ ಮತ್ತು ಜೋಗ ಇತ್ಯಾದಿ. ಈ ವಡ್ಡಿನ ಗಡಿ ಪ್ರದೇಶಗಳು: ಇಂದ್ರ ದಿಕ್ಕಿಗೆ ಹತ್ತಿಗನಾಳು (ಮೇರೆ), ಆಗ್ನೇಯಕ್ಕೆ ಕರಡಿಕೊಳಲು, ಯಮ-ಮಾಗವಗೊಳ, ಪಿಚಲಕುಂಟೆ, ವರುಣ-ಆನೆಗುಂಡು, ನೈಋತ್ಯಕ್ಕೆ ತಾಳೂರು, ವಾಯುವ್ಯ ದಿಕ್ಕಿಗೆ ಬಸಾಪುರ, ಕುಬೇರ ದಿಕ್ಕಿಗೆ ಕುರೆಕುಂಪೆ ಮತ್ತು ಈಶಾನ್ಯಕ್ಕೆ ತೋರಣಗಲ್ಲುಗಳಿವೆ.

ವಡ್ಡು ಗ್ರಾಮದ ಪಕ್ಕದಲ್ಲಿ ನಾರಿಹಳ್ಳ ಹರಿಯುತ್ತದೆ. ಇದು ನರಸಿಂಹದೇವರ ಗಂಡಿಯಿಂದ ಸೊಂಡೂರು ಮೂಲಕ ಭೀಮನಗಂಡಿ, ಎತ್ತಿನಹಟ್ಟಿ, ಬಳಸಿಕೊಂಡು ಗೌರೀಪುರದ ಬಳಿಯಿಂದ ದರೋಜಿ ಕೆರೆಯನ್ನು ಸೇರುತ್ತದೆ. ಇಂದು ವಡ್ಡು ಗ್ರಾಮ ಹಾಳಾದ ಪಟ್ಟಣವಾಗಿದೆ. ಅಳಿದುಳಿದ ಕೋಟೆಯ ಅವಶೇಷಗಳು ತಾಳೂರು ಗ್ರಾಮದ ರಸ್ತೆ ಭಾಗದಲ್ಲಿ (ಹೊಲಬು) ಕಂಡುಬರುತ್ತವೆ.

ಚಿನ್ನಯರಾಜನ ನಂತರ ವಡ್ಡುವಿನ ಇತಿಹಾಸದಲ್ಲಿ ಸಮರ್ಥ ಅರಸ ಬರಲಿಲ್ಲ. ಚಿನ್ನಯರಾಜನ ವಂಶವು ರಾಮಪ್ಪನಾಯಕನಿಗೆ ಕೊನೆಯಾಯಿತು. ತರುವಾಯ ಸಂಡೂರಿನ ಬಿಸಾಳನಾಯಕ ಎತ್ತಿನಹಟ್ಟಿಯನ್ನು ಜಹಗೀರು ಕೊಟ್ಟನು. ಇದನ್ನು ವಾಪಸ್ಸು ಪಡೆದಾಗ ರಾಮಪ್ಪನಾಯಕನಿಗೆ ಆನೆಗೊಂದಿ ನರಪತಿಗಳಾದ ವೆಂಕಟಪತಿರಾಯರ ಬಳಿಗೆ ಹೋದಾಗ ಗಾದಿಗನೂರು, ಗುಂದಿಗೇರಿ, ವದ್ದಿಗೇರಿ, ಕಾಕುಬಾಳುಗಳನ್ನು ಉಂಬಳಿ ಕೊಡುತ್ತಾನೆ. ಇವನ ಮಗ ಅಪ್ಪನಾಯಕ ಅಧಿಕಾರದಲ್ಲಿದ್ದನು. ಇವನ ಸಾಧನೆಗಳ ಬಗೆಗೆ ತಿಳಿದುಬಂದಿಲ್ಲ. ಅಪ್ಪನಾಯಕನ ಮಗ ಜೆಟೆಂಗನಾಯಕ ಅಧಿಕಾರಕ್ಕೆ ಬಂದ. ಇವನು ಕಂಪ್ಲಿಯಲ್ಲಿ ತಳವಾರಿಕೆ ಮಾಡುತ್ತಿದ್ದ. ಈ ಅರಸ ಮಡಿದಾಗ ಮಗ ಬಸಾಳನಾಯಕ ತಳವಾರಿಕೆ ಜವಾಬ್ದಾರಿ ವಹಿಸಿಕೊಳ್ಳುವನು. ವಡ್ಡಿನ ಗೌಡ, ಶಾನಭೋಗ ಹನುಮಂತಗೌಡ, ಮೊದಲಾದವರು ಕೈಫಿಯತ್ತಿನ ವಿವರವನ್ನು ನೀಡಿದ್ದಾರೆ.

ಇಂದು ವಡ್ಡಿನಲ್ಲಿ ಅನೇಕ ಪ್ರಾಚ್ಯಾವಶೇಷಗಳು (ಕೋಟೆ) ಕಂಡುಬರುವವೆ ಹೊರತು ಚರಿತ್ರೆ ಮಸುಕಾಗಿದೆ. ಈ ಗ್ರಾಮದಲ್ಲಿ ಏಳು ಹುಡೆವು ಬುರುಜುಗಳಲ್ಲದೆ ಕೋಟೆ-ಪೇಟೆಗಳಿದ್ದವು. ಇರುವ

ಸುರಂಗಮಾರ್ಗ ಮುಚ್ಚಿ ಹೋಗಿದೆ. ಇಲ್ಲಿಗೆ ಹತ್ತಿರದಲ್ಲಿದ್ದ ಬರ್ಮಪ್ಪ ಎಂದು ಹೇಳುವ ವೀರಗಲ್ಲಿದೆ. ಬಹುಶಃ ಇದು ವಡ್ಡು-ದರೋಜಿಯನ್ನು ಆಳಿದ ಪಾಳೆಯಗಾರ ಚಿನ್ನಯರಾಜನ ಸ್ಮಾರಕವೇ ಆಗಿರಬೇಕು. ಒಟ್ಟಿನಲ್ಲಿ ವಡ್ಡು ಮತ್ತು ದರೋಜಿಗಳನ್ನು ವಿಜಯನಗರ ಅವಧಿಯ ನಂತರ ಆನೆಗೊಂದಿ ಅರಸರ ಅಧೀನದಲ್ಲಿದ್ದುಕೊಂಡು ಆಳ್ವಿಕೆ ನಡೆಸಿದಂತ ಬೇಡ ನಾಯಕರುಗಳಲ್ಲಿ ಬೊಮ್ಮಂತರಾಜನ ವಂಶಸ್ಥರು ತಮ್ಮ ರಾಜಕೀಯ ನೆಲೆಗಳನ್ನಾಗಿ ಮಾಡಿಕೊಂಡು ಬಳ್ಳಾರಿಯ ಪಶ್ಚಿಮ ಭೂಭಾಗದ ಮೇಲೆ ಒಡೆತನ ಸ್ಥಾಪಿಸಿದ್ದರು. ವಿಜಯನಗರೋತ್ತರ ಸಂದರ್ಭದಲ್ಲಿ ಇಂಥ ಸಂಸ್ಥಾನಿಕರು ಮತ್ತು ಕಿರುಪಾಳೆಯಗಾರರು ನಿರ್ಣಾಯಕ ಪಾತ್ರವಹಿಸಿದ್ದು ಗಮನಾರ್ಹ.

ಹೈದರಾಲಿ ಮತ್ತು ಟಿಪ್ಪುಸುಲ್ತಾನ

ಕ್ರಿ.ಶ.೧೬೭೮ರಲ್ಲಿ ಬಳ್ಳಾರಿ ಸುತ್ತಮುತ್ತ ಪ್ರದೇಶ ಬಿಜಾಪುರ ಸುಲ್ತಾನನಿಂದ ಶಿವಾಜಿಯ ಆಳ್ವಿಕೆಗೆ ಒಳಪಟ್ಟಿತು. ಈ ಪ್ರದೇಶದ ಸುತ್ತಮುತ್ತ ಇದ್ದ ಪಾಳೆಗಾರರ ಸಹಾಯದಿಂದ ಬಿಜಾಪುರ ಸುಲ್ತಾನನ ವಶದಲ್ಲಿದ್ದ ಈ ಪ್ರದೇಶವನ್ನು ಶಿವಾಜಿ ವಶಪಡಿಸಿಕೊಂಡು ತನ್ನ ವಿಸ್ತರಣಾ ಮಾರ್ಗವನ್ನು ಸ್ವಚ್ಛ ಮಾಡಿಕೊಂಡ. ಆದರೂ ಕೆಲವು ಭಾಗ ಸುಲ್ತಾನನ ಆಧೀನದಲ್ಲಿತ್ತು. ಮುಂದೆ ೧೬೮೭ರಲ್ಲಿ ಔರಂಗಜೇಬನ ಕಾಲದಲ್ಲಿ ಈ ಭಾಗ ಮರಾಠರ ವಶವಾಯಿತು. ಮುಂದೆ ಕ್ರಿ.ಶ.೧೭೬೮ರಲ್ಲಿ ಹೈದರಾಲಿ ಜಸಂತ್‌ಜಂಗ್‌ನನ್ನು ಸೋಲಿಸಿ ಬಳ್ಳಾರಿಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡನು.[೧೫೪] ೧೭೮೬ರಲ್ಲಿ ಈತನ ಮಗ ಟಿಪ್ಪುಸುಲ್ತಾನನು ರಾಜ್ಯವನ್ನು ವಿಸ್ತರಿಸುತ್ತಾ ಆದವಾನಿಯನ್ನು ವಶಪಡಿಸಿಕೊಂಡನು.[೧೫೫] ನಂತರ ಮೈಸೂರು ದುರ್ಬಲಗೊಂಡಾಗ ಅದನ್ನು ಕಾಪಾಡಲು ಬಂದ ಹೈದರಾಲಿ ಮತ್ತು ಆತನ ಮಗ ಟಿಪ್ಪು ಸುಲ್ತಾನರ ರಾಜ್ಯದಲ್ಲಿ ಸಂಡೂರು ಇತ್ತು ಎಂಬುದಕ್ಕೆ ಕ್ರಿ.ಶ.೧೭೬೮ರಲ್ಲಿ ಬಳ್ಳಾರಿಯನ್ನು ಪ್ರವೇಶಿಸಿದ ಹೈದರಾಲಿಯಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಟಿಪ್ಪುಸುಲ್ತಾನನಿಂದ ಸಂಪೂರ್ಣಗೊಂಡ ಸಣ್ಣಕೋಟೆ (ಕೃಷ್ಣಾನಗರದಲ್ಲಿ)ಯೊಂದು ಇಂದಿಗೂ ಇರುವುದನ್ನು ಕಾಣುತ್ತೇವೆ.[೧೫೬] ಹೈದರಾಲಿ ಮತ್ತು ಟಿಪ್ಪುವಿನ ಅವಧಿಯು (೧೭೬೨-೧೭೯೯) ಕರ್ನಾಟಕದ ಬಹುಭಾಗಕ್ಕೆ ಒಂದು ರೀತಿಯ ಏಕತೆಯನ್ನು ತಂದು ಕೊಡುವುದರಲ್ಲಿ ಸಫಲವಾಗಿತ್ತು.[೧೫೭]

ಬ್ರಿಟಿಷರ ಆಳ್ವಿಕೆ (ಆಗಮನ)

೧೭೯೦ರಲ್ಲಿ ಬ್ರಿಟಿಷರ ಆಗಮನ ಸಂಡೂರಿಗೆ ಮೊಟ್ಟ ಮೊದಲ ಬಾರಿಗೆ ಆಯಿತು. ಅಂದಿನ ಭಾರತದ ಗವರ್ನರ್ ಜನರಲ್‌ನಾಗಿದ್ದ ಲಾರ್ಡ್‌ಕಾರ್ನ್‌ವಾಲಿಸ್ ಹಾಗೂ ಮರಾಠರು ಮತ್ತು ನಿಜಾಮರೊಡನೆ ಕೂಡಿ ಟಿಪ್ಪುಸುಲ್ತಾನನ ವಿರುದ್ಧ ಕರಾರು ಒಪ್ಪಂದ ಮಾಡಿಕೊಂಡನು. ಆ ಕರಾರು ಏನೆಂದರೆ ಟಿಪ್ಪು ಸಂಪಾದಿಸಿಕೊಂಡಿರುವಂತಹ ರಾಜ್ಯಗಳ ಮೇಲೆ ಈ ಮೂವರೂ ಸೇರಿ ಹೋರಾಟ

ಮಾಡಿ ಜಯಿಸಿಕೊಂಡ ಭಾಗಗಳನ್ನು ಸಮವಾಗಿ ಹಂಚಿಕೊಳ್ಳಬೇಕಾಗಿತ್ತು ಎನ್ನುವಂತದ್ದು. ಅದೇ ರೀತಿಯಾಗಿ ೧೭೯೨ರಲ್ಲಿ ಟಿಪ್ಪುಸುಲ್ತಾನನು ಸೋತಾಗ ಒಪ್ಪಂದದಂತೆ ಸಂಡೂರಿನ ಸೇನಾಪತಿ ಸಂಡೂರಿಗೆ ಒಡೆಯನಾದ.[೧೫೮] ಕ್ರಿ.ಶ.೧೮೧೭ರಲ್ಲಿ ಬೆಸ್ಸಿನ್ ಒಪ್ಪಂದದಂತೆ ಸಂಡೂರು ಬ್ರಿಟಿಷ್‌ರ ವಶಕ್ಕೊಳಪಟ್ಟಿದ್ದರೂ ಸಹ ಕ್ರಿ.ಶ.೧೮೧೮ರಲ್ಲಿ ಪುನಃ ಘೋರ್ಪಡೆ ವಂಶದವರಿಗೆ ಸಂಡೂರಿನ ಅಧಿಕಾರವನ್ನು ಬಿಟ್ಟುಕೊಡಲಾಯಿತು.[೧೫೯]

ಪೇಶ್ವೆಗಳು

ಘೋರ್ಪಡೆ ಅರಸು ಮನೆತನ

ಸಂಡೂರಿನ ಘೋರ್ಪಡೆ ರಾಜಮನೆತನ ಸಂಸ್ಥಾನವಾಗಿ ಚರಿತ್ರೆಯ ಸಂದರ್ಭದಲ್ಲಿ ಸಂಡೂರಿನ ಪಾಳೆಗಾರರೆಂದೇ ಪ್ರಸಿದ್ಧಿ ಪಡೆದಿರುವರು. ಇವರ ಮೂಲ ಪುರುಷ ಸುಜನಸಿಂಗ್ ಅಥವಾ ಸಜ್ಜನಸಿಂಗ್ ಎಂದು ಇತಿಹಾಸದ ಮೂಲಗಳು ತಿಳಿಸುತ್ತವೆ. ಈತನು ರಾಜಸ್ಥಾನದಲ್ಲಿ ಆಳುತ್ತಿದ್ದ ಸಿಸೋದಿಯ ವಂಶದವನು.[೧೬೦] ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ ೧೩೩೩ರಲ್ಲಿ ಚಿತ್ತೋರನ್ನು ಆಕ್ರಮಿಸಿ ವಶಪಡಿಸಿಕೊಂಡಾಗ ಅಲ್ಲಿಂದ ದಕ್ಷಿಣದ ಕಡೆಗೆ ವಲಸೆ ಬಂದ ಈತ ಮಹಾರಾಷ್ಟ್ರದಲ್ಲಿ ನೆಲೆಸಿದನು. ೧೩೫೦ರಲ್ಲಿ ಈತನು ಮರಣಿಸಿದ ನಂತರದ ತಲೆಮಾರಿನವರು ಆಗ ದಕ್ಷಿಣ ಭಾರತದಲ್ಲಿ ತಲೆಯೆತ್ತಿದ್ದ ಬಹಮನಿ ಸುಲ್ತಾನರ ಆಶ್ರಯದಲ್ಲಿ ಸೇನಾಪತಿಗಳಾಗಿ ಸೇವೆಗೈಯುತ್ತಾ ಬಂದರು. ಅವರಲ್ಲಿ ೪-೫ ತಲೆಮಾರುಗಳ ನಂತರ ಇಂದ್ರಸೇನನ ಹೆಸರು ಮುಖ್ಯವಾಗುತ್ತದೆ. ಆತನಿಗೆ ಇಬ್ಬರು ಮಕ್ಕಳು ಕರಣಸಿಂಗ್ ಮತ್ತು ಶುಭಕೃಷ್ಣ.

ಕರಣಸಿಂಗ್ ದೇವಗಿರಿ ಭಾಗದಲ್ಲಿದ್ದ. ಮಹಾರಾಷ್ಟ್ರದಲ್ಲಿದ್ದ ವಿಶಾಲಗಡವು ಬಹಮನಿ ಸುಲ್ತಾನನಿಗೆ ಒಂದು ಆಹ್ವಾನವಾಗಿತ್ತು. ಆತನು ೧೪೫೩ರಲ್ಲಿ ಅದನ್ನು ಮುತ್ತಿಗೆ ಹಾಕಿ ಜಯಿಸದೆ ಹೋಗಿದ್ದನು. ನಂತರ ೧೪೭೦ ರಲ್ಲಿ ಆತನ ಮಂತ್ರಿ ಮಹಮ್ಮದ್ ಗವಾನನು ತನ್ನ ಸೇವೆಯಲ್ಲಿದ್ದ ಕರಣಸಿಂಗ್ ಮತ್ತು ಆತನ ಮಗ ಭೀಮಸಿಂಗ್ ಇವರೊಡನೆ ಆ ಕೋಟೆಯನ್ನು ಮತ್ತೆ ಮುತ್ತಿದ. ಆಗ ಕರಣಸಿಂಗ್ ಮತ್ತು ಭೀಮಸಿಂಗರು 'ಉಡ'ದ ಸಹಾಯದಿಂದ ಆ ಅಭೇದ್ಯ ಕೋಟೆಯನ್ನು ಹತ್ತಿ ಅದನ್ನು ಪ್ರವೇಶಿಸಿ ಬಾಗಿಲನ್ನು ತೆರೆದು ತಮ್ಮ ಸೈನ್ಯ ಒಳ ಬರಲು ಅವಕಾಶ ಮಾಡಿಕೊಟ್ಟು ವಿಜಯಕ್ಕೆ ಕಾರಣ ಕರ್ತರಾದರು. ಆ ಪ್ರಯತ್ನದಲ್ಲಿ ತಂದೆ ಕರಣಸಿಂಗ್ ಮಡಿದನು. ಮಗನಾದ ಭೀಮಸಿಂಗ್ ಬಹುಮನಿ ಸುಲ್ತಾನನು ೧೪೭೧ರಲ್ಲಿ ಸನದನ್ನು ನೀಡಿ 'ರಾಜಾ ಘೋರ್ಪಡೆ ಬಹದ್ದೂರ್' ಎಂಬ ಪದವಿಯನ್ನಿತ್ತು ಮುಧೋಳದೊಡನೆ ಸುತ್ತಲಿನ ಅಳ ಹಳ್ಳಿಗಳನ್ನು ಜಹಗೀರಾಗಿ ಕೊಟ್ಟು ಗೌರವಿಸಿದನು. ಹೀಗಾಗಿ ಇವರ ವಂಶ ಘೋರ್ಪಡೆ (ಘೋರ್ಪಡೆ ಎಂದರೆ 'ಉಡ' ಎಂದು ಅರ್ಥ) ಎಂದೇ ಅಂದಿನಿಂದ ಪ್ರಸಿದ್ಧವಾಯಿತು.

ಮುಂದೆ ಘೋರ್ಪಡೆ ವಂಶವನ್ನು ಕ್ರಿ.ಶ.೧೬೦೦ರ ಸು.ನಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಶಿವಾಜಿಯ ತಂದೆ ಶಾಹಜಿ ಬಿಜಾಪುರ ಸುಲ್ತಾನರಲ್ಲಿ ಕೆಲಸ ಮಾಡುತ್ತಿದ್ದು ಆತನ ಹತ್ತಿರ ಘೋರ್ಪಡೆ ವಂಶ ಮಹಲೋಜಿ ಅಥವಾ ಮಾಲೋಜಿಯು ಸೇನಾಪತಿಯಾಗಿದ್ದ ಎಂದು ತಿಳಿದುಬರುತ್ತದೆ. ಮುಂದೆ ಬಹಿರ್ಜಿ ಹಿಂದೂರಾಯರ್ನೇ ಸಂಡೂರಿನ ಘೋರ್ಪಡೆಯ ಮನೆತನದ ಸ್ಪಷ್ಟವಾದ ಪೂರ್ವಜ. ಬಹಿರ್ಜಿ ಹಿಂದೂರಾವ್ ಘೋರ್ಪಡೆ ಕೊಂಕಣ ಗೋವಾಗಳಲ್ಲಿ ಹಿಡಿತ ಹೊಂದಿದ್ದ. ಸಂಡೂರು ಗುತ್ತಿಗಳೂ ಆತನ ವಶದಲ್ಲಿದ್ದವು. ಪೋರ್ಚುಗೀಸರ ಗೆಳೆತನವನ್ನು ಸಂಪಾದಿಸಿದ್ದ. ಆತನ ಮುದ್ರೆಯಲ್ಲಿ "ಮಾಮಲಾ ಕತ್ಮದಾರ್ ಶಂಶೇರ್ ಬಹದ್ದೂರ್ ಹಿಂದೂರಾವ್ ಘೋರ್ಪಡೆ ಛತ್ರಪತಿಯ ಸೇನಾಪತಿ" ಎಂದು ಲಿಖಿತವಾಗಿತ್ತು. ತನ್ನ ಮಾತಿನಂತೆಯೇ ಕತ್ತಿಯಲ್ಲೂ ಖಂಡಿತವಾದಿ ಎಂದು ಪ್ರಸಿದ್ಧನಾಗಿದ್ದ. ಆತನ ಇಷ್ಟ ದೇವತೆ ಷಣ್ಮುಖನಾಗಿದ್ದ. ಬಹಿರ್ಜಿ ಹಿಂದೂರಾಯನು ತೀರಿದ ನಂತರ ಮಗ ಸಿದ್ದೋಜಿರಾವ್ ಘೋರ್ಪಡೆಯು ಜರ್ಮಲಿ ಪಾಳೆಗಾರರು ವಶಪಡಿಸಿಕೊಂಡಿದ್ದ ಸಂಡೂರು ಕಣಿವೆ ಪ್ರದೇಶವನ್ನು ೧೭೧೩ರಲ್ಲಿ ಮತ್ತೆ ವಶಪಡಿಸಿಕೊಂಡನು. ಅವರು ಮತ್ತೆ ೧೭೨೮ರಲ್ಲಿ ಅಕ್ರಮಿಸಿದಾಗ ಸೋಲಿಸಿ ಕಳಿಸಿದ ಗುತ್ತಿಯಂತೂ ಆತನ ವಶದಲ್ಲೇ ಇತ್ತು. ಸಿದ್ದೋಜಿ ೧೭೩೧ರಲ್ಲಿ ತೀರಿದ ಮೇಲೆ ಅತನ ಮಗ ಮುರಾರಿರಾವ್ ಘೋರ್ಷಡೆ ಗುತ್ತಿ-ಸಂಡೂರು ಪ್ರದೇಶದ ಆಡಳಿತ ವಹಿಸಿಕೊಂಡ. ಆತನ ಸಹೋದರ ದೌಲತ್‌ರಾವ್ ಗಜೇಂದ್ರಗಡದಲ್ಲಿ ಆಡಳಿತ ವಹಿಸಿಕೊಂಡ. ಕ್ರಿ.ಶ.೧೭೭೫-೭೬ರ ದಾಳಿಯಲ್ಲಿ ಹೈದರಾಲಿಯು ಗುತ್ತಿಯನ್ನು ಹಿಡಿದು ಮುರಾರಿರಾಯನನ್ನು ಕೊಪ್ಪಳ ದುರ್ಗಕ್ಕೆ ಕಳಿಸಿದನು. ಅವನು ಕಾರಾಗೃಹದಲ್ಲಿಯೇ ಕಾಲವಾದನು. ಮುರಾರಿರಾವ್‌ಗೆ ಇದ್ದ ಇಬ್ಬರು ಪುತ್ರರು ತಂದೆ ಮರಣಕ್ಕಿಂತ ಮೊದಲೇ ಮಡಿದರು.

ಒಟ್ಟಿನಲ್ಲಿ ೧೭೩೧ ರಿಂದ ೧೭೭೭ರವರೆಗೆ ಸಂಡೂರು ಗುತ್ತಿಗಳನ್ನಾಳಿದ ಮುರಾರಿರಾಯನು ಘೋರ್ಪಡೆ ವಂಶದಲ್ಲೇ ಅತ್ಯಂತ ಶಕ್ತಿಶಾಲಿ ಅಧಿಪತಿ ಎನ್ನಬಹುದು. ಗುತ್ತಿಯನ್ನೇ ಕೇಂದ್ರವನ್ನಾಗಿ ಮಾಡಿಕೊಂಡ ಈತನ ನೆನಪನ್ನು ಗುತ್ತಿಕೋಟೆ ಮಾಡಿಕೊಡುವಂತಿದೆ. ಈತನು 'ಗುತ್ತಿ ಪಣಮ್' ಎಂಬ ಸ್ವಂತ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದಿದ್ದ. ರಣ ತಾಂತ್ರಿಕವಾದ ಅಭೇದ್ಯವಾದ ಕೋಟೆ ಗುತ್ತಿಯದಾಗಿದ್ದರೆ, ಪ್ರಕೃತಿ ವರದಾನವಾಗಿ ಸುತ್ತುವರಿದ ಲೋಹಾದ್ರಿಯೇ ಅಭೇದ್ಯ ಕೋಟೆಯಾಗಿತ್ತು ಸಂಡೂರಿಗೆ. ಈತನ ಅಶ್ವಸೈನ್ಯ ಮತ್ತು ಪದಾತಿಸೈನ್ಯ ಸಾಹಸಗಳಿಗೆ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದವು. ಮುರಾರಿರಾಯನಿಗೆ ಮಕ್ಕಳಿಲ್ಲದ್ದರಿಂದ ತನ್ನ ಚಿಕ್ಕಜ್ಜ ದತ್ತವಾಡದ ಮಾಲೋಜಿರಾಯನ ಮರಿ ಮೊಮ್ಮಗ ಶಿವರಾಯನನ್ನು ದತ್ತು ತೆಗೆದುಕೊಂಡಿದ್ದ. ಆತನು ಸಂಡೂರಿಗೆ ಬಂದು ನೆಲೆಸಿದನು. ಆ ವೇಳೆಗಾಗಲೇ ಟಿಪ್ಪುಸುಲ್ತಾನನು ಬಳ್ಳಾರಿ ಮತ್ತು ಸಂಡೂರಿನ ಕೃಷ್ಣಾನಗರ ಕೋಟೆಗಳನ್ನು ಕಟ್ಟಿಸಿದ್ದನು. ಟಿಪ್ಪುವನ್ನು ಸಂಡೂರಿನಿಂದ ಹೊರಗಟ್ಟುವ ಯುದ್ಧದಲ್ಲಿ ೧೭೮೫ರಲ್ಲಿ ಮಡಿದನು. ಆಗ ಆತನ ತಮ್ಮ

ವೆಂಕಟರಾಯ ಶಿವರಾಯನ ಮಗ ೨ ವರ್ಷದ ಸಿದ್ದೋಜಿಯನ್ನು ರಕ್ಷಿಸುತ್ತ ಟಿಪ್ಪುವಿನೊಡನೆ ಒಪ್ಪಂದ ಮಾಡಿಕೊಂಡನು. ಈ ಮಗು ಸಿದ್ದೋಜಿಯೂ ತನ್ನ ೧೩ನೇ ವಯಸ್ಸಿನಲ್ಲೇ ತೀರಿಕೊಂಡನು. ಮತ್ತೊಮ್ಮೆ ದತ್ತವಾಡದಿಂದಲೇ ಖಂಡೇರಾಯನ ಮಗ ೨ನೇ ಶಿವರಾಯನನ್ನು ಸಂಡೂರಿಗೆ ದತ್ತು ತೆಗೆದುಕೊಳ್ಳಲಾಯಿತು. ಈತನೂ ವೆಂಕಟರಾಯನೂ ಸೇರಿ ಸಂಡೂರನ್ನು ಪ್ರಬಲಗೊಳಿಸಿದರು.

ಕ್ರಿ.ಶ.೧೭೯೦ರಲ್ಲಿ ಟಿಪ್ಪುವಿನ ಸೈನ್ಯವನ್ನು ಸೋಲಿಸಿ ಪುನಃ ಸಂಡೂರು ಸಂಸ್ಥಾನವನ್ನು ತನ್ನ ಸ್ವಾಧೀನಕ್ಕೆ ಪಡೆದನು. ಕ್ರಿ.ಶ.೧೭೯೨ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಟಿಪ್ಪು ಸುಲ್ತಾನನಿಗೂ ಶಾಂತಿ ಒಪ್ಪಂದವಾಗಿ ಘೋರ್ಪಡೆ ವಂಶದವರಿಗೆ ಈ ಸಂಸ್ಥಾನ ಉಳಿಯಿತು. ಕ್ರಿ.ಶ.೧೭೯೬ರಲ್ಲಿ ಸಿದ್ದೋಜಿರಾವನು ಕಾಲವಾದನು. ಆಗ ಸಂಬಂಧಿಯಾದ ಖಂಡೇರಾವನ ಹಿರಿಯ ಪುತ್ರ ಶಿವರಾವನು ಮಡಿದ ಅರಸನ ಪತ್ನಿಗೆ ದತ್ತು ಪುತ್ರನಾದನು. ಇವನು ಕ್ರಿ.ಶ.೧೮೦೦ರವರೆಗೂ ಸಂಡೂರಿನ ಅರಸನಾಗಿದ್ದನು. ನಂತರ ಬಂದವರು ಬ್ರಿಟೀಷರೊಡನೆ ಮಧುರ ಸಂಬಂಧವನ್ನು ಹೊಂದಿದ್ದು ಕ್ರಿ.ಶ.೧೯೪೭ರವರೆಗೂ ಸಂಡೂರಿನ ಅರಸನಾಗಿ ಮುಂದುವರಿದರೂ ಅವರಲ್ಲಿ ೧೮೪೦ರಲ್ಲಿ ಶಿವರಾಯನು ತೀರಿಕೊಂಡನು. ಆದರೆ ಆತನಿಗೆ ಮಕ್ಕಳಿಲ್ಲದ್ದರಿಂದ ಆತನ ತಮ್ಮ ಭುಜಂಗರಾಯನ ಮಗ ವೆಂಕಟರಾಯ ಅಧಿಕಾರ ವಹಿಸಿಕೊಂಡನು. ಈ ವೆಂಕಟರಾಯನು ೧೮೬೧ರಲ್ಲಿ ಮರಣಿಸಿದ ನಂತರ ಅವನ ಮಗ ಶಿವಷಣ್ಮುಖರಾಯ ಅಧಿಕಾರ ವಹಿಸಿಕೊಂಡನು. ಇಂಗ್ಲೀಷ್ ಸರಕಾರದಿಂದ ‘ರಾಜಾ’ ಎಂಬ ಅಭಿದಾನ ದೊರೆಯಿತು. ದತ್ತು ಅಧಿಕಾರವು ಮಾನ್ಯ ಮಾಡಲ್ಪಟ್ಟಿತು. ಶಿವಷಣ್ಮುಖರಾಯನ ನಂತರ ಆತನ ತಮ್ಮ ೧೮೭೮ರಲ್ಲಿ ರಾಜನಾದನು. ಆತನ ತರುವಾಯ ೧೮೯೩ರಲ್ಲಿ ರಾಮಚಂದ್ರ ವಿಠಲರಾವನ ಮಗ ವೆಂಕಟರಾವ್‌ನು ಅರಸನಾದನು. ವೆಂಕಟರಾವ್ ೧೯೨೭ರಲ್ಲಿ ತೀರಿದಾಗ ಆತನಿಗೆ ಮಕ್ಕಳಿರಲಿಲ್ಲ. ಆಗ ಮತ್ತೊಮ್ಮೆ ಘೋರ್ಪಡೆ ವಂಶದ ಶಾಖೆ ಬದಲಾಯಿತು. ಇಲ್ಲಿಯವರೆಗೆ ಆಳಿದ ಶಾಖೆ ಬದಲಾಗಿ ೧೫೦ ವರ್ಷಗಳ ಹಿಂದೆ ಗುತ್ತಿ-ಸಂಡೂರು-ಗಜೇಂದ್ರಗಡಗಳನ್ನಾಳಿದ್ದ ಮುರಾರಿರಾವ್ ಘೋರ್ಪಡೆಯ ತಲೆಮಾರಿನ ಗಜೇಂದ್ರಗಡದ ಶಾಖೆಗೆ ಬದಲಾಯಿತು. ಗುತ್ತಿಯ ಮುರಾರಿರಾವ್ ಘೋರ್ಪಡೆಯ ತಮ್ಮ ದೌಲತ್‌ರಾವ್ ಗಜೇಂದ್ರಗಡದಲ್ಲಿದ್ದು ಆತನ ವಂಶ ಅಲ್ಲೇ ಮುಂದುವರಿದ್ದಿತ್ತು. ಆ ವಂಶದ ಭುಜಂಗರಾವ್ ತಾರಾಬಾಯಿಯವರ ಮಗ ಶ್ರೀಯಶವಂತರಾವ್ ಘೋರ್ಪಡೆಯವರು ೧೯೨೮ರಲ್ಲಿ ಸಂಡೂರಿನ ಸಂಸ್ಥಾನದ ರಾಜರಾಗಿ ಅಧಿಕಾರ ವಹಿಸಿಕೊಂಡರು. ಇವರ ನಂತರ ಇವರ ಹಿರಿಯ ಮಗ ಎಂ.ವೈ.ಘೋರ್ಪಡೆಯವರು ಅಧಿಕಾರ ಸ್ವೀಕರಿಸಿದರು. ೧೯೫೪ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿ ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ಪ್ರಾರಂಭಿಸಿ ಕರ್ನಾಟಕ ಸರಕಾರದ ಮಾನ್ಯಮಂತ್ರಿಗಳಾಗಿ ದೀರ್ಘಕಾಲ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ೧೯೬೭ ರಿಂದ ೧೯೭೨ರವರೆಗೆ ನಿರಂತರವಾಗಿ ಈ ಕ್ಷೇತ್ರದ ವಿಧಾನ ಸಭಾಸದಸ್ಯರಾಗಿ ಆಯ್ಕೆಯಾಗಿ ೧೯೭೨ ರಿಂದ ೧೯೭೭ರವರೆಗೆ ಅರ್ಥ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ೧೯೮೬ರಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. ೧೯೯೦ ರಿಂದ ಕರ್ನಾಟಕದ ಗ್ರಾಮೀಣಾಭಿವೃದ್ಧಿ

ಪಂಚಾಯತ್ ರಾಜ್ಯಗಳ ಮಂತ್ರಿಗಳಾಗಿ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಇಂದು ರಾಜಕೀಯ ಕ್ಷೇತ್ರದಿಂದ ದೂರವಾದ ಇವರು ಸಂಡೂರಿನಲ್ಲಿಯೇ ತಮ್ಮ 'ಸೊಂಡೂರು ರೇಷಿಡೆನ್‌ಷಿಯಲ್ ಸಂಸ್ಥೆ' ಪದವಿ ಪೂರ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಾ ತಮ್ಮ ಕೊನೆಯ ಜೀವನವನ್ನು ಸಾಗಿಸುತ್ತಿದ್ದಾರೆ.[೯೧]

ಘೋರ್ಪಡೆ ಮಹಾರಾಜರ ವಂಶಾವಳಿ

ಬೈರ್ ಜಿ (ಹಿಂದೂರಾವ್)
(ಗುತ್ತಿ ಸಂಸ್ಥಾನ ಸ್ಥಾಪಕ-ಗಜೇಂದ್ರ ಗಡದ ಮನೆ)

ಮುರಾರಿರಾವ್
(ರಣರಂಗದಲ್ಲಿ ಮಡಿದನು)

ಸಿದ್ದೋಜಿರಾವ್
(ಸಂಡೂರನ್ನು ಗೆದ್ದುಕೊಂಡವನು)

ಮುರಾರಿರಾವ್
(ಇವನನ್ನು ಗುತ್ತಿಯ ಮುಖ್ಯಸ್ಥನೆಂದು ನಾಮಕರಣ ಮಾಡಲಾಯಿತು)

ಶಿವರಾವ್

ಸಿದ್ದೋಜಿರಾವ್

ಶಿವರಾವ್

ವೆಂಕಟರಾವ್

ಶಿವಷಣ್ಮುಖರಾವ್
(ಗಂಡು ಸಂತಾನವಿಲ್ಲದೆ ಮರಣ)

ವಿಠ್ಠಲರಾವ್
(೧೮೭೯ ಅಣ್ಣನ ನಿಧನ ನಂತರ ಪಟ್ಟಕ್ಕೆ ಬಂದನು)

ವೆಂಕಟರಾವ್
(೧೮೯೨-೧೯೨೭)

ಯಶವಂತರಾವ್
(೩-೧೧-೧೯೦೮ರಂದು ಜನನ, ೧೯೨೮ ಜೂನ್ ವೆಂಕಟರಾವ್ ನಿಧನ ನಂತರ ಪಟ್ಟಕ್ಕೆ ಬಂದನು)

ಸಂಡೂರು-ದೇಶೀಯ ಸಂಸ್ಥಾನ

ಭಾರತವು ೧೫-೮-೧೯೪೭ರಲ್ಲಿ ಸ್ವತಂತ್ರಗಳಿಸಿದರೂ ಸಹ ಸಂಡೂರು ಸಂಸ್ಥಾನಕ್ಕೆ ಮಾತ್ರ ಸ್ವತಂತ್ರ ಲಭಿಸಿರಲಿಲ್ಲ. ಆಗ ಈ ಸಂಸ್ಥಾನವು ೩೩ ಹಳ್ಳಿಗಳ ವ್ಯಾಪ್ತಿಯನ್ನು ಹಾಗೂ ಕೇವಲ ೧೫

ಸಾವಿರ ಜನಸಂಖ್ಯೆಯನ್ನು ಒಳಗೊಂಡಿತ್ತು. ಈ ಸಂಸ್ಥಾನವನ್ನು ಪ್ರವೇಶಿಸಲು ಅಂದು ಕೇವಲ ಎರಡು ಮಾರ್ಗಗಳಿದ್ದವು. ಅವು ಎಂದರೆ ಗಂಡಿನರಸಿಂಹಸ್ವಾಮಿ ಮಾರ್ಗ ಮತ್ತೊಂದು ಬಳ್ಳಾರಿ ಮಾರ್ಗ.

ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಬಿ.ಕೇಶವರಾಯರ ಹೇಳಿಕೆಯಂತೆ ಸ್ವಾತಂತ್ರ್ಯ ಚಳುವಳಿಯ ಅವಧಿಯಲ್ಲಿ ಸಂಡೂರು ಸಂಸ್ಥಾನದಿಂದ ಹೊರಕ್ಕೆ ಅಥವಾ ಹೊರಗಡೆಯಿಂದ ಸಂಸ್ಥಾನದೊಳಗೆ ಯಾರೂ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಗಿತ್ತು. ಮಹಾರಾಜರ ಸರಕಾರವು ದಮನಕಾರಿ ನೀತಿಗಳನ್ನು ಅನುಸರಿಸುತ್ತಿದ್ದರೂ ಆಳ್ವಿಕೆಯ ಸುದ್ದಿಯೂ ಹೊರಗೆ ಹೋಗುವಂತಿರಲಿಲ್ಲ. ಬ್ರಿಟೀಷ್ ಕರ್ನಾಟಕದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಸಂಸ್ಥಾನದ ಪ್ರಜೆಗಳು ಭಾಗವಹಿಸುವಂತಿರಲಿಲ್ಲ. ಡಾ.ಎಸ್.ಬಿ.ಷರಾಫ್‌ರ ನೇತೃತ್ವದಲ್ಲಿ ಸಂಡೂರು ಅರಸರ ವಿರುದ್ಧ ೧೯೩೦-೩೧ರಲ್ಲಿ ಚಳುವಳಿ ನಡೆಸಲಾಯಿತು. ಇದರ ಪರಿಣಾಮ ಷರಾಫರು ಸಂಸ್ಥಾನದ ಜೈಲುವಾಸ ಅನುಭವಿಸಬೇಕಾಯಿತು.

ಇಡೀ ಭಾರತದಲ್ಲಿ ಸಂಸ್ಥಾನಿ ಅರಸರ ಆಡಳಿತದ ವಿರುದ್ಧ ನಡೆಯುತ್ತಿದ್ದ ಆಂದೋಳನವು ಸಂಡೂರು ಸಂಸ್ಥಾನಕ್ಕೂ ಹರಡಿತು. ಸಂಡೂರು ಸಂಸ್ಥಾನದ ಮಹಾರಾಜರ ಆಳ್ವಿಕೆಯ ವಿರುದ್ಧ ಯತ್ನಟ್ಟಿ (ತಾರಾನಗರ) ಮತ್ತು ಹೊಸಳ್ಳಿ(ಭುಜಂಗನಗರ)ಗಳಲ್ಲಿ ಜನರು ಸಿಡಿದೆದ್ದರು. ಇಡೀ ಸಂಸ್ಥಾನದಲ್ಲಿ ಈ ಎರಡು ಗ್ರಾಮಗಳು ಮಹಾರಾಜರಿಗೆ ತಲೆನೋವಾಗಿದ್ದವು. ೧೯೩೭ರಲ್ಲಿ ಕುಮಾರಸ್ವಾಮಿ ದೇವಸ್ಥಾನದ ೧೩ ಗ್ರಾಮಗಳಿಗೆ ಸೇರಿದ್ದ ಜಮೀನನ್ನು (ಸು.೪೦೦೦ ಎಕರೆ) ಮಹಾರಾಜರು ತಮ್ಮದೆಂದು ಘೋಷಿಸಿ ಕೊಂಡಾಗ ಯತ್ನಟ್ಟಿಯ ಎಂ.ಶರಭಯ್ಯನವರು ರೈತರನ್ನು ಸಂಘಟಿಸಿ ಆಂದೋಳನ ನಡೆಸಿದ್ದಕ್ಕಾಗಿ ಜೇಲು ಶಿಕ್ಷೆ ಅನುಭವಿಸಿದರು.

ಒಟ್ಟಿನಲ್ಲಿ ಈ ಸಂಸ್ಥಾನದ ಮಹಾರಾಜರ ವಿರುದ್ಧ ಹೋರಾಟ ನಡೆಸುತ್ತಿದ್ದ ಮನೆತನಗಳೆಂದರೆ ಷರಾಫ್ ಮನೆತನ ಮತ್ತು ಬೋಜ ಮನೆತನ ಹಾಗೂ ಪೋತನೀಸ್ ಮನೆತನಗಳು. ಈ ಮನೆತನಗಳ ಹಿರಿಯರೆಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಕೊಟ್ಟೂರು ಮತ್ತು ಕೂಡ್ಲಿಗಿಗಳಲ್ಲಿ ನಡೆಯುತ್ತಿದ್ದ ಸಭೆ-ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಸಂಸ್ಥಾನದಿಂದ ಹೊರಗೆ ಮತ್ತು ಸಂಸ್ಥಾನದೊಳಗೆ ಪ್ರವೇಶ ಸಂಚಾರಕ್ಕೆ ನಿಷೇಧ ಹೇರಲಾಗಿದ್ದರಿಂದ ಯಜಮಾನ್ ಶಾಂತರುದ್ರಪ್ಪನವರು ಬಳ್ಳಾರಿ ಭಾಗದಿಂದಲೇ ಹೋರಾಟ ನಡೆಸಿದರು. ಕ್ರಾಂತಿಕಾರಿ ಕರಪತ್ರಗಳನ್ನು ಸಂಸ್ಥಾನದೊಳಗೆ ಹಂಚಿದರು. ಇಂತಹ ವಿದ್ರೋಹದಲ್ಲಿ ನಿರತರಾಗಿದ್ದ ಶಾಂತರುದ್ರಪ್ಪನವರಿಗೆ ಹಣ-ಅಧಿಕಾರದ ಆಮಿಷಗಳನ್ನು ತೋರಿಸಿ ಬಾಯಿ ಮುಚ್ಚಿಸಲು ಮಹಾರಾಜರು ಪ್ರಯತ್ನಿಸಿದರು.

ಭಾರತದ ಗಣರಾಜ್ಯದಲ್ಲಿ ಸಂಡೂರು ಸಂಸ್ಥಾನವನ್ನು ವಿಲೀನಗೊಳಿಸಲಿಕ್ಕಾಗಿ ನಡೆದ ಹೋರಾಟದಲ್ಲಿ ಭಾಗವಹಿಸಿದ ಈ ತಾಲ್ಲೂಕಿನ ಹೋರಾಟಗಾರರಲ್ಲಿ ಪ್ರಮುಖರಾದ ಯತ್ನಟ್ಟಿ(ತಾರಾನಗರ)ಯ ಯಜಮಾನ್ ಶಾಂತರುದ್ರಪ್ಪ, ಅಂಗಡಿ ಶರಭಯ್ಯ, ಉಳ್ಳಾಗಡ್ಡಿ ಕರಿಯಪ್ಪ, ಬಾವಿಕಟ್ಟೆ ಮರಿಬಸಪ್ಪ, ಕೃಷ್ಣನಗರದ

ಎಲಿಗಾರ ತಿಮ್ಮಪ್ಪ, ಭುಜಂಗನಗರದ (ಹೊಸಳ್ಳಿ) ಗುರುಶಾಂತಯ್ಯ, ಅರಳುಕಲ್ ಕುಮಾರಪ್ಪ, ನಾಗಲಾಪುರದ ಸಿದ್ಧರಾಮಯ್ಯ, ಎಸ್.ವೈ.ಸೋಮನಗೌಡರು, ನಾಗನಗೌಡ, ಪೋತನೀಸ್ ರಾಮರಾಯ, ಮಹಾಲಿಂಗಪ್ಪ, ಕಾಳೆ ಸುಬ್ಬಣ್ಣ, ಬೋಜ ಅಡಿವೆಪ್ಪ ಗಿರಿಮಲ್ಲಪ್ಪ ಇವರೆಲ್ಲರೂ ಸಂಡೂರು ಮಹಾರಾಜರಿಗೆ ಸೇರಿದ್ದ 'ಸಂಡೂರು ಸ್ಟೇಟ್ ಸೇಲ್'ನಲ್ಲಿ ಶಿಕ್ಷೆ ಅನುಭವಿಸಿದರು. ಅಂತು ೧೯೪೮ರಲ್ಲಿ ಸಂಸ್ಥಾನದಲ್ಲಿ ಪ್ರಜಾಪರಿಷತ್ತು ಜಾರಿಗೆ ಬಂದಿತು. ಅದರ ಅಧಿವೇಶನ ಯತ್ನಟ್ಟಿಯಲ್ಲಿ ಜರುಗಿತು. ಕರ್ನಾಟಕ ರಾಜ್ಯದ ಧುರೀಣರುಗಳಾದ ಕೊಲ್ಲಾಪುರದ ರತ್ನಪ್ಪ ಕುಂಬಾರ, ತಲ್ಲೂರು ರಾಯನಗೌಡ, ಶಾಂತಿನಾಥ ಇಂಗಳೆ, ಮಹದೇವಪ್ಪ ಪಟ್ಟಣ, ಬಳ್ಳಾರಿ ಯಜಮಾನ್ ಶಾಂತರುದ್ರಪ್ಪ ಮುಂತಾದವರು ಅಧಿವೇಶನದಲ್ಲಿ ಭಾಗವಹಿಸಿದ್ದರು. ಸಂಡೂರು ಸಂಸ್ಥಾನವು ಭಾರತದಲ್ಲಿ ವಿಲೀನವಾಗಬೇಕೆಂದು ಯತ್ನಟ್ಟಿಯಲ್ಲಿ ನಡೆದ ಪ್ರಜಾಪರಿಷತ್ ನಿರ್ಣಯ ಮಾಡಿತು. ಈ ಎಲ್ಲಾ ಬೆಳವಣಿಗೆಗಳ ನಡುವೆ ಸರ್ದಾರ್ ಪಟೇಲರ ನೀತಿಗನುಗುಣವಾಗಿ ಸಂಡೂರು ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ಏಪ್ರಿಲ್ ೧, ೧೯೪೯ರಂದು ವೀಲಿನ ಒಪ್ಪಂದಕ್ಕೆ ಸಹಿಹಾಕಿತು.[೧೬೨] ಆಗ ಸಂಡೂರಿಗೆ ಕೂಡ್ಲಿಗಿ ತಾಲ್ಲೂಕಿನ ಚೋರನೂರು ಮತ್ತು ಹೊಸಪೇಟೆ ತಾಲ್ಲೂಕಿನ ತೋರಣಗಲ್ಲು ಎರಡು ಹೋಬಳಿಗಳನ್ನು ಸೇರಿಸಿ ೧೯೫೦ರಲ್ಲಿ ತಾಲ್ಲೂಕು ಕೇಂದ್ರವನ್ನಾಗಿ ಮಾಡಲಾಯಿತು.[೧೬೩]

ಈ ಸಂಸ್ಥಾನವು ಭಾರತದ ಗಣರಾಜ್ಯದಲ್ಲಿ ವಿಲೀನಗೊಂಡ ನಂತರ ಅದು ಯಾವ ಪ್ರಾಂತಕ್ಕೆ ಸೇರಬೇಕೆಂಬ ಪ್ರಶ್ನೆ ಉದ್ಭವವಾಯಿತು. ಆಗ ಮಹಾರಾಜರು ಈ ಸಂಸ್ಥಾನವನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸುವ ಬದಲಾಗಿ ಮೈಸೂರು ಪ್ರಾಂತಕ್ಕೆ ಸೇರಿಸಬೇಕೆಂಬುದಾಗಿ ತಿಳಿಸಿ ಅದಕ್ಕೆ ಈ ಕಾರಣಗಳನ್ನು ಮುಂದಿಟ್ಟರು. ಸಂಡೂರು ಮತ್ತು ಮೈಸೂರು ಸಂಸ್ಥಾನಗಳ ಗಡಿಗಳು ಪರಸ್ಪರ ಹೊಂದಿಕೊಂಡಿದ್ದು, ಈ ಎರಡೂ ಸಂಸ್ಥಾನಗಳ ಪ್ರಜೆಗಳ ನಡುವೆ ಭಾಷಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ. ಹಾಗೂ ಖನಿಜ ಸಂಪತ್ತಿಗೆ ಸಂಬಂಧಿಸಿದಂತೆ ಈ ಎರಡೂ ಸಂಸ್ಥಾನಗಳ ಪರಸ್ಪರ ಗಣಿಗಾರಿಕೆ ಅಭಿವೃದ್ಧಿಪಡಿಸಬಹುದು ಎಂದು. ಒಟ್ಟಿನಲ್ಲಿ ಸಂಡೂರು ಸಂಸ್ಥಾನವು ಭಾರತದ ಗಣರಾಜ್ಯಕ್ಕೂ, ನಂತರ ಮೈಸೂರು ಪ್ರಾಂತಕ್ಕೂ ಸೇರಿಕೊಂಡು ಇಂದು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ.[೧೬೪]

ಸಂಡೂರಿನ ಮಹಾರಾಜರು ತಮ್ಮ ಪ್ರಜೆಗಳಿಗೆ ಯಾವುದೇ ರೀತಿಯ ಸ್ವತಂತ್ರವನ್ನು ನೀಡಿರಲಿಲ್ಲ. ಅವರ ಬೇಡಿಕೆಗಳನ್ನು ಈಡೇರಿಸದೆ ಅವರನ್ನು ಶೋಷಣೆಗೊಳಪಡಿಸುತ್ತಿದ್ದರು ಮತ್ತು ಸಂಸ್ಥಾನದ ನಿಯಮಗಳ ವಿರುದ್ಧ ಬಂಡೆದ್ದ ಪ್ರಜೆಗಳನ್ನು ಶಿಕ್ಷಿಸುತ್ತಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಂದಿನ ಬ್ರಿಟೀಷ್ ಆಡಳಿತಾಧಿಕಾರಿಗಳಿಗೆ ನಿಷ್ಠೆಯಿಂದ ಇದ್ದಂತಹ ಅನೇಕ ಸಂಸ್ಥಾನಿಕರಿಗೆ ಅದು ಅನಿವಾರ್ಯವಾಗಿರಬೇಕು ಎಂದು ಎನಿಸದಿರದು. ಅದರಂತೆಯೇ ಘೋರ್ಪಡೆ ಸಂಸ್ಥಾನಿಕರು ಸಹ ಆ ಕಾಲದ ಬ್ರಿಟೀಷ್ ಆಡಳಿತ ನಿಯಮಗಳಿಗೆ ಬದ್ಧರಾಗಿದ್ದರು. ಇದರಿಂದಾಗಿ ದೇಶಭಕ್ತಿ ಸ್ಥಳೀಯರಿಂದ,

ಗಾಂಧಿವಾದಿಗಳಿಂದ ಆಗಾಗ ಆಕ್ಷೇಪಗಳಿಗೆ ಒಳಗಾಗುತ್ತಿದ್ದರು. ಸಾರ್ವಜನಿಕರು ಅನೇಕ ಅನುಮಾನಗಳಿಂದ ನೋಡ ತೊಡಗಿದರು. ಇದು ಅವರ ಮತ್ತು ಮನೆತನದವರ ನಡುವಿನ ಅಂತರವನ್ನು ಹೆಚ್ಚಿಸಲು ಕಾರಣವಾಯಿತು.

ಅಡಿಟಿಪ್ಪಣಿಗಳು

೧. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಸಂಡೂರು ತಾಲ್ಲೂಕಿನ ಭೌಗೋಳಿಕ ಪರಿಚಯ, ಜಗದೀಶ ಕೆರೆನಳ್ಳಿ, ಪು.೧

೨. ಅದೇ, ಪು.೧

೩. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೪

೪. ಅದೇ, ಪು.೧೧

೫. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಸಂಡೂರು ತಾಲ್ಲೂಕಿನ ಭೌಗೋಳಿಕ ಪರಿಚಯ, ಜಗದೀಶ ಕೆರೆನಳ್ಳಿ, ಪು.೧,೨

೬. ಅದೇ, ಪು.೨

೭. ಸಂ.ಪ.ಕಾ.ತ,ಚೌ.ಅ. ವಾಸುದೇವ ಬಡಿಗೇರ, ಪು.೧,೨

೮. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು, ಎಸ್.ಎಂ.ಅಪ್ಪನಗೌಡರು, ಪು.೬೬

೯. ಅದೇ, ಪು.೬೬,೬೭

೧೦. ಶಿಲ್ಪಕಲಾ ಪ್ರಪಂಚ, ಆರ್.ವೆಂಕಟೇಶಮೂರ್ತಿ, ಪು.೯೮

೧೧. ಸೊ.ಇ. ಮತ್ತು ಸಾ.ಪ., ಎಸ್.ಎಂ.ನಾಗಭೂಷಣ, ಕ.ಇ.ದ., ಪು.೧೭೭

೧೨. ಭಾರತದ ಇತಿಹಾಸ (ಆರಂಭದಿಂದ ಕ್ರಿ.ಶ.೧೫೨೬ರ ವರೆಗೆ), ಟಿ.ಜಿ.ಚಂದ್ರಶೇಖರಪ್ಪ, ಪು.೧೧

೧೩. ಹೊ.ತಾ.ದ., ಸಿ. ಮಹದೇವ, ಪು.೬

೧೪. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೨, ೩೬೩

೧೫. ಅದೇ, ಪು.೧೧

೧೬. ಹೊ.ತಾ.ದ., ಸಿ.ಮಹದೇವ, ಪು.೬

೧೭. ಭಾರತದ ಇತಿಹಾಸ (ಆರಂಭದಿಂದ ಕ್ರಿ.ಶ.೧೫೨೬ರ ವರೆಗೆ), ಟಿ.ಜಿ.ಚಂದ್ರಶೇಖರಪ್ಪ, ಪು.೧೨

೧೮. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೧, ೩೬೨, ೩೬೪, ೩೬೩, ೨೬೧

೧೯. ಹೊ.ತಾ.ದ., ಸಿ.ಮಹದೇವ, ಪು.೨

೨೦. ಭಾರತದ ಇತಿಹಾಸ (ಆರಂಭದಿಂದ ಕ್ರಿ.ಶ.೧೫೨೬ರ ವರೆಗೆ), ಟಿ.ಜಿ.ಚಂದ್ರಶೇಖರಪ್ಪ, ಪು.೧೩

೨೧. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೧, ೩೬೨, ೩೬೫

೨೨. ಭಾರತದ ಇತಿಹಾಸ (ಆರಂಭದಿಂದ ಕ್ರಿ.ಶ.೧೫೨೬ರ ವರೆಗೆ), ಟಿ.ಜಿ.ಚಂದ್ರಶೇಖರಪ್ಪ, ಪು.೧೫

೨೩. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೩, ೩೬೪, ೩೬೫

೨೪. ಹೊ.ತಾ.ದ., ಸಿ.ಮಹದೇವ, ಪು.೧೦

೨೫. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೩, ೩೬೪

೨೬. ಹೊ.ತಾ.ದ., ಸಿ.ಮಹದೇವ, ಪು.೧೦,೧೧

೨೭. ಅದೇ, ಪು.೧೦,೧೧

೨೮. ದಶಮಾನ, ನೆನಪಿನ ಸಂಚಿಕೆ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆ, ಸಿ.ನಾಗಭೂಷಣ, ಪು.೩೪, ೩೫

೨೯. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೨೦, ೨೧

೩೦. ಅದೇ, ಪು.೩೬೧

೩೧. ವ.ಸೂ.ಬ. ಮತ್ತು ಸೊಂ, ಜೆ.ಎಂ.ನಾಗಯ್ಯ, ಕ.ಇ.ದ., ಪು.೧೮೪

೩೨. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ಜೆ.ಎಂ.ನಾಗಯ್ಯ, ಪು.೪೦

೩೩. ಕ.ಪು.ನೆ., ಕೆ.ಬಿ.ಶಿವತಾರಕ್, ಪು.೩೬೨

೩೪. ಕ.ವಿ.ವಿ.ವಿ.ಕೋಶ-೪, ಚರಿತ್ರೆ, ತಂಬಂಡ ವಿಜಯ್ ಪೊಣಚ್ಚ್, ಪು.೩೯.

೩೫. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೪

೩೬. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ಜೆ.ಎಂ.ನಾಗಯ್ಯ, ಪು.೩೯

೩೭. ಅದೇ, ಪು.೩೯

೩೮. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೪

೩೯. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ಜೆ.ಎಂ.ನಾಗಯ್ಯ, ಪು.೪೧

೪೦. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೬

೪೧. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ಜೆ.ಎಂ.ನಾಗಯ್ಯ, ಪು.೪೧,೪೨

೪೨. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೪೩. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೬

೪೪. ಸಂ.ಪ.ಕಾ.ತ-ಚಾ.ಅ, ವಾಸುದೇವ ಬಡಿಗೇರ, ಪು.೯

೪೫. ಅದೇ, ಪು.೯

೪೬. ಹೊ.ತಾ.ದ., ಸಿ. ಮಹದೇವ ಮತ್ತು ಇತರರು, ಪು.೧೨

೪೭. ಇತಿಹಾಸ ಕೋಶ (ಭಾಗ-೧, ಪ್ರಾಚೀನ ಕರ್ನಾಟಕ), ಲಕ್ಷ್ಮಣ ಅಳವಂಡಿ, ಪು.೭

೪೮. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೯

೪೯. ಸೊಂ.ಇ. ಮತ್ತು ಸಾಂ.ಪ, ಎಂ.ಎನ್.ನಾಗಭೂಷಣ, ಕ.ಇ.ದ. ಪು.೧೭೭

೫೦. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೯

೫೧. ಕ.ರಾ.ಗ್ಯಾ., ಭಾಗ-೧, ಸೂರ್ಯನಾಥ ಯು.ಕಾಮತ್, ಪು.೧೬೪, ೧೬೫

೫೨. ಹೊ.ತಾ.ದ., ಸಿ. ಮಹದೇವ, ಪು.೧೨, ೧೩

೫೩. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೭

೫೪. ಪ್ರಾ.ಕ.ರಾ., ಎನ್.ಎಸ್.ರಾಮಪ್ರಸಾದ್, ಪು.೬

೫೫. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೫೬. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೭

೫೭. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೫೮. ಹೊ.ತಾ.ದ., ಸಿ. ಮಹದೇವ, ಪು.೧೪

೫೯. ಕ.ರಾ.ಗೆ., ಭಾಗ-೧, ಸೂರ್ಯನಾಥ ಕಾಮತ್, ಪು.೧೬೮

೬೦. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೬೧. ಸಂ.ಪ.ಕಾ.ತ - ಚಾ.ಅ. - ವಾಸುದೇವ ಬಡಿಗೇರ, ಪು.೧೦

೬೨. ಹು.ಶ್ರೀ.ಜೋ.ಸಂ.ಲೇ, ಸಂ.ಲಕ್ಷ್ಮಣ್ ತೆಲಗಾವಿ, ಪು.೩೮

೬೩. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೬೪. ಬ.ಜಿ.ಸಾಂ.ದ (ಸಂ.ಲೇ), ಕುಂಬಾಸ, ಪು.೧೧

೬೫. ಪ್ರಾ.ಕ.ರಾ., ಎಸ್.ಎನ್.ರಾಮಪ್ರಸಾದ್, ಪು.೭, ೯

೬೬. ಸಂ.ಪ.ಕಾ.ತ-ಚಾ.ಅ, ವಾಸುದೇವ ಬಡಿಗೇರ, ಪು.೧೦

೬೭. ಹೊ.ತಾ.ದ., ಸಿ. ಮಹದೇವ, ಪು.೧೫

೬೮. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ್, ಕ.ಇ.ದ, ಪು.೧೭೭

೬೯. ಹೊ.ತಾ.ದ., ಸಿ. ಮಹದೇವ, ಪು.೧೫

೭೦. ಸೊಂ.ಇ. ಮತ್ತು ಸಾಂ.ಪ, ಎನ್.ಎಂ. ನಾಗಭೂಷಣ್, ಕ.ಇ.ದ, ಪು.೧೭೭

೭೧. ಬ.ಜಿ.ಶಾ.ಸಂ-೧, ಸಂಡೂರು, ಶಾ.ಸಂ.೭, ಕ್ರಿ.ಶ.೧೨೦೬

೭೨. ಬ.ಜಿ.ಸಾಂ.ದ (ಸಂ.ಲೇ), ಕುಂಬಾಸ, ಪು.೮

೭೩. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೦

೭೪. ಕ.ವಿ.ವಿ.ಶಾ.ಸಂ.-೨, ದೇವರಕೊಂಡರೆಡ್ಡಿ, ಪು.xxviii

೭೫. ಹೊ.ತಾ.ದ., ಸಿ. ಮಹದೇವ, ಪು.೧೬

೭೬. ಸೊಂ.ಇ ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಪು.೧೭೭

೭೭. ಹೊ.ತಾ.ದ., ಸಿ. ಮಹದೇವ, ಪು.೧೬

೭೮. ಕ.ವಿ.ವಿ.ಶಾ.ಸಂ-೨, ದೇವರಕೊಂಡರೆಡ್ಡಿ, ಪು.xxviii

೭೯. ಹೊ.ತಾ.ದ., ಸಿ. ಮಹದೇವ, ಪು.೧೬

೮೦. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೯೭, ೧೦೯

೮೧. ಅದೇ, ೫೫, ೮೯೩-೯೪, ಮಂಚಾಳ, ಆದೋನಿ ತಾಲ್ಲೂಕು, ಅನಂತಪುರ ಜಿಲ್ಲೆ

೮೨. ಬ.ಜಿ.ಸಾಂ.ಇ. ಜೆ.ಎಂ.ನಾಗಯ್ಯ, ಪು.೩೩, ೩೪

೮೩. ಸೊಂ.ಇ ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೭

೮೪. ಸಂ.ಪ.ಕಾ.ತ.ಚಾ.ಅ, ವಾಸುದೇವ ಬಡಿಗೇರ, ಪು.೧೧

೮೫. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೭, ೧೭೮

೮೬. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೮

೮೭. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೫

೮೮. ಹೊ.ತಾ.ದ., ಸಿ. ಮಹದೇವ, ಪು.೨೦

೮೯. ಬ.ಜಿ.ಸಾಂ.ದ (ಸಂ.ಲೇ), ಕುಂಬಾಸ, ಪು.೧೧

೯೦. ಕ.ರಾ.ಗೆ, ಭಾಗ-I, ಸೂರ್ಯನಾಥ್ ಯು.ಕಾಮತ್, ಪು.೨೦೯

೯೧. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೨

೯೨. ಬ.ಜಿ.ಶಾ.ಸಂ-೧, ಸಂಡೂರು, ಶಾ.ಸಂ.೭,

೯೩. ಬ.ಜಿ.ಶಾ.ಸಂ.-೧, ಕುರುಗೋಡು ೭ ಕಂಪಲಿ-೪೨

೯೪. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೨

೯೫. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೨

೯೬. ವಿ.ಅ.ಸಂ.-೧, ಸಂ.ಡಿ.ವಿ.ದೇವರಾಜ್, ಪು.೮೧

೯೭. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೮೧

೯೮. ಸಂಸ್ಕೃತಿ ಸಂಶೋಧನೆ, ಚೆನ್ನಕ್ಕ ಪಾವಟೆ, ಪು.೧೭೯, ೧೮೦

೯೯. ಕ.ರಾ.ಗೆ., ಭಾಗ-I, ಸೂರ್ಯನಾಥ, ಯು.ಕಾಮತ್, ಪು.೨೧೫

೧೦೦. ಹು.ಶ್ರೀ.ಜೋ.ಸಂ.ಲೇ, ಸಂ.ಲಕ್ಷ್ಮಣ್ ತೆಲಗಾವಿ, ಪು.೫೨೪

೧೦೧. ಕ.ಸೇ.ಇ., ಎ.ವಿ.ನರಸಿಂಹಮೂರ್ತಿ, ಪು.೧೩

೧೦೨. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೬

೧೦೩. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೩, ೪

೧೦೪. ಹು.ಶ್ರೀ.ಜೋ.ಸಂ.ಲೇ, ಸಂ.ಲಕ್ಷ್ಮಣ್ ತೆಲಗಾವಿ, ಪು.೫೨೪

೧೦೫. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೬, ೧೧೭

೧೦೬. ಸಂಸ್ಕೃತಿ ಸಂಶೋಧನೆ, ಚೆನ್ನಕ್ಕ ಪಾವಟೆ, ಪು.೧೮೬

೧೦೭. ಹು.ಶ್ರೀ.ಜೋ.ಸಂ.ಲೇ, ಸಂ: ಲಕ್ಷ್ಮಣ್ ತೆಲಗಾವಿ, ಪು.೫೨೪

೧೦೮. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೭

೧೦೯. ವಿ.ಅ.ಸಂ-೩, ಸಂ:ಎಲ್.ಎಂ.ಶಿವಶಂಕರ್, ಪು.೯೪

೧೧೦. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೪

೧೧೧. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೭

೧೧೨. ವಿ.ಅ.ಸಂ-೩, ಸಂ:ಎಲ್.ಎಂ.ಶಿವಶಂಕರ್, ಪು.೯೪

೧೧೩. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೮

೧೧೪. ಹೊ.ತಾ.ದ., ಸಿ. ಮಹದೇವ, ಪು.೨೩, ೨೪

೧೧೫. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೪

೧೧೬. ಸಂಸ್ಕೃತಿ ಸಂಶೋಧನೆ, ಚೆನ್ನಕ್ಕ ಪಾವಟೆ, ಪು.೧೮೦

೧೧೭. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೫

೧೧೮. ಸಂಸ್ಕೃತಿ ಸಂಶೋಧನೆ, ಚೆನ್ನಕ್ಕ ಪಾವಟೆ, ಪು.೧೭೯

೧೧೯. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೪,೫,೬,೮

೧೨೦. ಅದೇ, ಪು.೫, ೬

೧೨೧. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೧೫

೧೨೨. ಕ.ವಿ.ವಿ.ಶಾ.ಸಂ-೧, ಸಂಡೂರು, ಕ್ರಿ.ಶ.೧೫೨೭, ಪು.೨೦೨

೧೨೩. ವಿ.ಅ.ಸಂ-೧, ಸಂ:ಡಿ.ವಿ.ದೇವರಾಜ್, ಪು.೮೦

೧೨೪. ವಿ.ಅ.ಸಂ-೭, ಕೆ.ಆರ್.ರಾಮಕೃಷ್ಣ, ಪು.೭೦

೧೨೫. ಜ.ರಾ.ಸಾಂ.ದ., ಎಸ್.ವೈ.ಸೋಮಶೇಖರ್, ಪು.೫೨

೧೨೬. ಅದೇ, ಪು.೫೨, ೫೩

೧೨೭. ಅದೇ, ೫೩

೧೨೮. ಅದೇ, ೫೩

೧೨೯. ರಣಧೀರ ರಾಮನಾಥ, ಮೈ.ಹ.ರಾಮಶರ್ಮ, ಪು.೩೬

೧೩೦. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೨೦

೧೩೧. ವಿ.ಅ.ಸಂ.೩, ಎಂ.ಎಲ್.ಶಿವಶಂಕರ್, ಪು.೯೪

೧೩೨. ಹೊ.ತಾ.ದ., ಸಿ. ಮಹದೇವ, ಪು.೨೬

೧೩೩. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೨೪

೧೩೪. ಕ.ಕು.ರಾ.ಪಂ, ೧೯೯೬

೧೩೫. ಹೊ.ತಾ.ದ., ಸಿ. ಮಹದೇವ, ಪು.೨೪, ೨೫

೧೩೬. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೩೯

೧೩೭. ವಿ.ಅ.ಸಂ-೭, ಸಂ:ಕೆ.ಆರ್.ರಾಮಕೃಷ್ಣ, ಪು.೭೩

೧೩೮. ವಿ.ಅ.ಸಂ.ಲ., ಸಂ:ಡಿ.ವಿ.ದೇವರಾಜ್, ಪು.೮೩

೧೩೯. ಹು.ಶ್ರೀ.ಜೋ.ಸಂ.ಲೇ, ಸಂ:ಲಕ್ಷ್ಮಣ್ ತೆಲಗಾವಿ, ಪು.೫೭೭

೧೪೦. ಸೊಂ.ಇ. ಮತ್ತು ಸಾಂ.ಪ., ಎನ್.ಎಂ.ನಾಗಭೂಷಣ, ಕ.ಇ.ದ., ಪು.೧೭೮

೧೪೧. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೨

೧೪೨. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೮

೧೪೩. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೨

೧೪೪. ಬ.ಜಿ.ಶಾ.ಸಂ-೧., ಸಂಡೂರು, ಪು.೨೦೧

೧೪೫. ಅದೇ, ಪು.೨೧೬

೧೪೬. ಸೊಂ.ಇ. ಮತ್ತು ಸಾಂ.ಪ, ಎನ್.ಎಂ.ನಾಗಭೂಷಣ, ಕ.ಇ.ದ, ಪು.೧೭೮

೧೪೭. ಕ.ಪಾ.ಮತ್ತು ಒ.ಇ., ಎ.ಎಸ್.ನಂಜುಂಡಸ್ವಾಮಿ, ಪು.೧

೧೪೮. ಬ.ಜಿ.ಪಾ, ವಿರೂಪಾಕ್ಷಿ ಪೂಜಾರಹಳ್ಳಿ, ಪು.೧೭

೧೪೯. ಕ.ಪಾ ಮತ್ತು ಒ.೯, ಎ.ಎಸ್.ನಂಜುಂಡಸ್ವಾಮಿ, ಪು.೧,೨,೩

೧೫೦. ಬ.ಜಿ.ಪಾ, ವಿರೂಪಾಕ್ಷಿ ಪೂಜಾರಹಳ್ಳಿ, ಪು.೫, ೮, ೯

೧೫೧. ಸಂ.ಪ.ಶಾ ಮತ್ತು ಉ.ದೇ., (ಎಂ.ಫಿಲ್.ಅಪ್ರಕಟಿತ ಕೃತಿಯನ್ನು ಬಳಸಿಕೊಳ್ಳಲಾಗಿದೆ) ಗಿರಿಜಾ, ಪು.೪೦

೧೫೨. ಅದೇ ಕೃತಿಯನ್ನು ಬಳಸಿಕೊಳ್ಳಲಾಗಿದೆ, ಪು.೪೪

೧೫೩. ಕರ್ನಾಟಕದ ಕೈಫಿಯತ್ತುಗಳು, ಎಂ.ಎಂ.ಕಲ್ಬುರ್ಗಿ, ಪು.೪೮೯

೧೫೪. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೭.

೧೫೫. ಅದೇ, ಪು.೬

೧೫೬. ಅದೇ, ಪು.೬, ೭

೧೫೭. ಕ.ರಾ.ಗೇ, ಭಾಗ-I, ಸೂರ್ಯನಾಥ ಯು.ಕಾಮತ್, ಪು.೮೭

೧೫೮. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಸೊಂಡೂರು : ಒಂದು ಪರಿಚಯ, ಮೃತ್ಯುಂಜಯ ರುಮಾಲೆ, ಪು.೬

೧೫೯. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂಡೂರು ಕೆಲವು ಐತಿಹಾಸಿಕ ಘಟನೆಗಳು, ಜೆ.ಎಂ.ನಾಗಯ್ಯ, ಪು.೪೧.೪೨

೧೬೦. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಸಂಡೂರು ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ, ಘೋರ್ಪಡೆಯವರ ಕಾಲ, ಎ.ವೃಷಭೇಂದ್ರಾಚಾರ್, ಪು.೮

೧೬೧. ಅದೇ, ಲೇಖನವನ್ನು ಬಳಸಿಕೊಳ್ಳಲಾಗಿದೆ.

೧೬೨. ಬ.ಜಿ.ಸ್ವಾ.ಹೋ., ಸಂ: ಬಿ.ಶೇಷಾದ್ರಿ, ಪು.೧೩೩

೧೬೩. ಚರಿತ್ರೆ ಅಧ್ಯಯನ, ಸಂ:ಪ್ರೊ.ಲಕ್ಷ್ಮಣ್ ತೆಲಗಾವಿ, ಪು.೭೨

೧೬೪. ಬ.ಜಿ.ಸ್ವಾ.ಹೋ, ಸಂ:ಬಿ. ಶೇಷಾದ್ರಿ, ಪು.೧೩೩

ಅಧ್ಯಾಯ ೩

ಶಾಸನಗಳು

೩

ಶಾಸನಗಳು

೩.೧. ದಾನ ಶಾಸನಗಳು

ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಪುನಾರ್ರಚಿಸುವಲ್ಲಿ ಐತಿಹಾಸಿಕ ಮೂಲ ದಾಖಲೆಗಳಲ್ಲಿ ಒಂದಾದ ಶಾಸನಗಳಿಗೆ ಮಹತ್ವದ ಸ್ಥಾನವಿದೆ.[೧] ಈ 'ಶಾಸನ' ಎಂಬ ಶಬ್ದ ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ಬಂದಿದ್ದು, ಅಪ್ಪಣೆ ಮಾಡು; ಘೋಷಣೆಯನ್ನು ಹೊರಡಿಸು ಎನ್ನುವ ಅರ್ಥವನ್ನು ಕೊಡುತ್ತದೆ.[೨] ಇಂಗ್ಲೀಷಿನ Inscription ಪದಕ್ಕೆ ಸಂವಾದಿಯಾಗಿ ನಮ್ಮಲ್ಲಿ 'ಶಾಸನ' ಪದವನ್ನು ಬಳಸಲಾಗುತ್ತಿದೆ. ಪ್ರಾರಂಭದಲ್ಲಿ 'ರಾಜನ ಆಜ್ಞೆ' ಎಂಬರ್ಥವನ್ನು ಪಡೆದಿದ್ದ ಈ ಶಾಸನಗಳು ಕಾಲ ಕ್ರಮೇಣದಲ್ಲಿ ಬಹುಕಾಲ ಉಳಿಯಬಲ್ಲ ಬರಹದ ದಾಖಲೆಗಳು ಎಂಬ ಅರ್ಥವನ್ನು ಪಡೆದವು.[೩]

ಶಾಸನಗಳಲ್ಲಿರುವ ವಿಷಯ ವೈವಿಧ್ಯತೆಯಿಂದ ಆಡಳಿತಗಾರರು, ಭೂವಿವರಣೆ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಅಧ್ಯಯನ ನಡೆಸಲು ಬಹಳ ಸುಲಭವಾಗಿದೆ. ಶಾಸನಗಳಲ್ಲಿರುವ ವಿವರಗಳಿಂದ ಅನೇಕ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶವಿದೆ.

ಈ ಶಾಸನಗಳು ರಾಜನ ಸಹಿ, ಮುದ್ರೆ, ದಿನಾಂಕಗಳೊಂದಿಗೆ ಅಧಿಕೃತವಾಗಿ ಪ್ರಕಟಗೊಂಡ ಇವು ಶಿಲೆ, ತಾಮ್ರ, ಕಬ್ಬಿಣ ಇತ್ಯಾದಿ ಮಾಧ್ಯಮಗಳಲ್ಲಿ ಬರೆದಿರುವ ರಾಜಾಜ್ಞೆಗಳಾಗಿದ್ದಂತೆ ರಾಜರಲ್ಲದವರನ್ನು ಕುರಿತು ಬರೆಯಿಸಿದಾಗಲೂ ಅವು ಶಾಸನಗಳೆಂದೇ ಕರೆಯಿಸಿಕೊಂಡವು. ವೀರರ, ಮಹಾಸತಿಯರ, ಸನ್ಯಾಸಿಗಳು ಮುಂತಾದವರ ಮರಣ ವೃತ್ತಾಂತವನ್ನು ಉಲ್ಲೇಖಿಸುವ ಸ್ಮಾರಕ ಶಿಲ್ಪಗಳು ಸಹ ಶಾಸನ ಪರಂಪರೆಗೆ ಸೇರಿದವುಗಳಾಗಿವೆ. ಹೀಗೆ ಪ್ರಭುತ್ವ ಪರಿಸರದಲ್ಲಿ ಬೆಳೆದು ಬಂದ ಲಿಖಿತ ದಾಖಲೆಗಳೆನಿಸಿದವು ಈ ಶಾಸನಗಳು.[೪]

ಸಂಡೂರು ತಾಲ್ಲೂಕಿನ ಶಾಸನಗಳನ್ನೇ ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಿದಾಗ ನಮಗೆ ಇಲ್ಲಿ ದಾನ ಶಾಸನಗಳೇ ಅಧಿಕವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರ, ನಿರ್ಮಾಣ ಕಾರ್ಯ, ನಿತ್ಯದ ಪೂಜಾಕಾರ್ಯಕ್ಕಾಗಿ ಗ್ರಾಮ, ಭೂಮಿ, ಕಾಸು, ಗದ್ಯಾಣ ಮತ್ತು ತೆರಿಗೆಗಳನ್ನು ದಾನವಾಗಿ ನೀಡಿರುವರು. ಹಾಗೆಯೇ ಅಗ್ರಹಾರ, ಕೆರೆ, ಬಾವಿ, ಹೊಂಡ ಇತ್ಯಾದಿ

ಸಾಮಾಜಿಕ ಕಾರ್ಯಗಳಿಗಾಗಿ ದಾನ ನೀಡಿರುವ ವಿವರಗಳೂ ಇವೆ. ಹೀಗೆ ಅನೇಕ ಉದ್ದೇಶಗಳಿಗಾಗಿ ಕೊಟ್ಟ ದಾನಗಳ ಕುರಿತು ಈ ಶಾಸನಗಳಲ್ಲಿ ವಿವರಣೆಗಳಿವೆ. ಹಾಗೂ ಯುದ್ಧದಲ್ಲಿ ಹೋರಾಡಿ ಜಯಗಳಿಸಿದ ಮತ್ತು ಹೋರಾಡಿ ಮಡಿದ ವೀರರ ಸ್ಮರಣೆಗಾಗಿ ನಿಲ್ಲಿಸಿದ ಸ್ಮಾರಕ ಶಾಸನಗಳನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಕನ್ನಡ, ಸಂಸ್ಕೃತ, ಉರ್ದು, ಪರ್ಶಿಯನ್, ತೆಲುಗು ಭಾಷೆಯಲ್ಲಿರುವ ಶಾಸನಗಳು ದೊರಕಿದ್ದರೂ ಕನ್ನಡ ಭಾಷೆಯ ಶಾಸನಗಳೇ ಅಧಿಕವಾಗಿವೆ. ಹೆಚ್ಚಿನ ಪಾಲು ಮೂರು-ನಾಲ್ಕು ಸಾಲಿನ ತುಂಡು ಶಾಸನಗಳೇ ಆಗಿವೆ.

ಈ ತಾಲ್ಲೂಕಿನ ಶಾಸನಗಳ ಕುರಿತು ಮಾಹಿತಿಯನ್ನು ಎಪಿಗ್ರಾಫಿಯ ಇಂಡಿಕಾದ ವಾರ್ಷಿಕ ವರದಿ-೧೯೨೨-೨೩, ೧೯೩೯-೧೯೪೪ ಮತ್ತು ೧೯೭೪-೭೫, ಸೌತ್ ಇಂಡಿಯಾ ಇನ್ಸ್‌ಸ್ಕ್ರಿಪಶನ್ಸ್ ಸಂಪುಟ-IX, ಭಾಗ-II, ಸಂಪುಟ-XXVII.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-I (ಬಳ್ಳಾರಿ ಜಿಲ್ಲೆ), ಕರ್ನಾಟಕ ಶಾಸನಗಳ ಸಂಪುಟ-II, ಬಳ್ಳಾರಿ ಜಿಲ್ಲೆಯ ಶಾಸನಗಳು, ವಿಜಯನಗರ ಅಧ್ಯಯನ ಸಂಪುಟ-೨, ವಿಜಯನಗರದ (ಹಂಪೆಯ) ಶಾಸನಗಳು ಸಂಪುಟ-I, ವಿಜಯನಗರ ಪ್ರೋಗ್ರೆಸ್ ರೀಸರ್ಚ್ ೧೯೮೮-೯೧. ಈ ಎಲ್ಲ ಗ್ರಂಥಗಳಲ್ಲಿ ಪ್ರಕಟವಾಗಿರುವ ಈ ತಾಲ್ಲೂಕಿಗೆ ಸಂಬಂಧಿಸಿದ ಶಾಸನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಹಾಗೂ ಕ್ಷೇತ್ರಕಾರ್ಯ ಕೈಗೊಂಡ ನಂತರ ಒಂದು ಕೂಟ ತಾಮ್ರ ಶಾಸನ, ಒಂದು ಬೆಳ್ಳಿಯ ಮುದ್ರೆ ಉಂಗುರ, ಮತ್ತೊಂದು ತಾಮ್ರದ ಮುದ್ರೆ ಹಾಗೂ ಒಂದು ಶಿಲಾಶಾಸನ ಮತ್ತು ಐದು ತುಂಡು ಶಿಲಾಶಾಸನಗಳು ಲಭಿಸಿವೆ. ಅವುಗಳನ್ನು ಇದರಲ್ಲಿ ಪ್ರಥಮ ಬಾರಿಗೆ ಚರ್ಚಿಸಲಾಗಿದೆ. ಹೀಗೆ ಈ ತಾಲ್ಲೂಕಿನಲ್ಲಿ ಕಂಡುಬರುವ ಒಟ್ಟು ೯೭ ಶಾಸನಗಳು ಈ ತಾಲ್ಲೂಕಿನ ಇತಿಹಾಸ ರಚನೆಯಲ್ಲಿ ಮಹತ್ವದ ಬೆಳಕನ್ನು ಬೀರುವ ಪ್ರಮುಖ ದಾಖಲೆಗಳಾಗಿವೆ.

ಶೈವ ದಾನ ಶಾಸನಗಳು

ಶಿವಲಿಂಗ ಅಥವಾ ಶೈವಪಂಥದ ದೇವಾಲಯಗಳ ನಿತ್ಯದ ಪೂಜೆಗಾಗಿ ಕೆಲವು ತೆರಿಗೆಗಳನ್ನು, ಭೂಮಿಗಳನ್ನು, ತೋಟಗಳನ್ನು, ಗ್ರಾಮಗಳನ್ನು ಹಾಗೂ ದೇವಾಲಯಗಳ ಜೀರ್ಣೋದ್ಧಾರಕ್ಕೆ, ನಿರ್ವಹಣೆಗೆ ನೀಡಿದಂತಹ ದಾನಗಳ ಕುರಿತು ಮಾಹಿತಿಯನ್ನು ನೀಡುವ ಶಾಸನಗಳನ್ನು ಶೈವ ದಾನಶಾಸನಗಳು ಎಂದು ಇಲ್ಲಿ ಪರಿಗಣಿಸಲಾಗಿದೆ. ಹೀಗೆ ಶೈವ ದೇವಾಲಯಗಳಿಗೆ ನೀಡಿದಂತಹ ಅನೇಕ ದಾನ-ದತ್ತಿಗಳ ಬಗ್ಗೆ ಮಾಹಿತಿಯನ್ನು ನೀಡುವ ಶಾಸನಗಳನ್ನು ಸಂಡೂರು ತಾಲ್ಲೂಕಿನಲ್ಲಿ ಕಾಣುತ್ತೇವೆ. ಮತ್ತು ಅವುಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಈ ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಬಲಭಾಗದಲ್ಲಿಯ ಕ್ರಿ.ಶ.೮ನೇ ಶತಮಾನದ ಶಾಸನವು[೮] ಈ ತಾಲ್ಲೂಕಿನ ಪ್ರಾಚೀನ ಶಾಸನವಾಗಿದೆ. ಇದು ಬಹುಶಃ ಈ

ದೇವಾಲಯವನ್ನು ನಿರ್ಮಿಸಿದ ಜೇನಾಲಯನ್‌ನ ಹೆಸರನ್ನು ಉಲ್ಲೇಖಿಸುತ್ತಿರಬಹುದು. ಇದೇ ದೇವಾಲಯದ ಬಲಭಾಗದ ಪಟ್ಟಿಕೆಯಲ್ಲಿ ಕೇವಲ 'ಶ್ರೀ' ಎಂಬ ಒಂದೇ ಒಂದು ಅಕ್ಷರ ಕಾಣಸಿಗುತ್ತದೆ. ಉಳಿದ ಅಕ್ಷರಗಳನ್ನು ಅಳಿಸಿರುತ್ತಾರೆ. ಇದೇ ದೇವಾಲಯದ ಬಲಭಾಗದ ಗೋಡೆಯಲ್ಲಿನ ದೇವಕೋಷ್ಠದ ಪ್ರತಿಮೆಯ ಮೇಲಿನ ಶಾಸನವು ಕೇವಲ 'ಶ್ರೀ ಜೇಲಯನ್'ನ ಉಲ್ಲೇಖ ಮಾತ್ರ ನೀಡುವುದು. ಒಟ್ಟಿನಲ್ಲಿ ಮೇಲಿನ ಈ ತುಂಡು ಶಾಸನಗಳ ಲಿಪಿಯ ಮತ್ತು ಶಿಲ್ಪಗಳ ಆಧಾರದ ಮೇಲೆ ಈ ಭಾಗದಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆ ಇತ್ತೆಂಬುದು ದೃಢವಾಗುತ್ತದೆ.

ಇದೇ ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಎಡ ಬದಿಯ ಕಟ್ಟೆಯ ಲಿಂಗದ ಪೀಠದಲ್ಲಿನ ಕ್ರಿ.ಶ.೧೦೪೫[೬] ರ ಈ ಶಾಸನವು ಓರ್ವ್ವೆಯ ಹಂಪಾಚಾರಿಯ ಮೊಮ್ಮಗ ಅಕ್ಕಸಾಲೆ ಚನಯಾಚಾರಿಯ ಮಗ ಧರ್ಮಾಂಬುದಿಯು ನವಿಲನ್ನು(ವಿಗ್ರಹ) ಪ್ರತಿಷ್ಠೆ ಮಾಡಿದನು ಎಂದು ಉಲ್ಲೇಖಿಸುವ ಈ ಶಾಸನವು ಈ ತಾಲ್ಲೂಕಿನ ಪ್ರಥಮ ಶೈವ ದಾನ ಶಾಸನವಾಗಿದೆ.

ಕುಮಾರಸ್ವಾಮಿ ದೇವಾಲಯದ ಪ್ರವೇಶದ ಎಡ ಹಸ್ತಿಹಸ್ತದಲ್ಲಿಯ ಕ್ರಿ.ಶ.೧೦೭೪ರ ಶಾಸನವು[೭] ಶ್ರೀ ಸ್ವಾಮಿದೇವರ ದೇಗುಲದ ಕೆಲಸ ಮಾಡಿದವರಿಗೆ ಪಂಚಮಹಾಶಬ್ದ ವ್ರತಜಪನಿಯಮ ಹೋಮ ಸಂಯುಕ್ತ ಶ್ರೀಸ್ವಾಮಿದೇವರ ತಪೋವನಾಧಿಪತಿಗಳಾದ ಗಧಾಧರರಸರು ಮೀಳ್ಮಲೆಯ ಕಗಿನ್ನಪುರದ ಮರಿಯೊಳಗೆ ಕಲ್ಕುಟಿಗ ಬೂಮವಳ ಬಿಯಳಚಟ್ಟ ಬೆನಗಬೋವ ಆಳ್ವಲಂತರುವರಿಗೆ ಮತ್ತರಾರು ವತ್ಸ(ಮಗ) ಕಮ್ಮಾರನಾಯಕನಿಗೆ ಮತ್ತರಾರು ಭೂಮಿದಾನ ನೀಡಿದ ಉಲ್ಲೇಖವಿದೆ.

ಪಾರ್ವತಿ ದೇವಾಲಯದ ಮಂಟಪದಲ್ಲಿಯ ಕ್ರಿ.ಶ.೧೨೦೬ರ ಶಾಸನವನ್ನು[೮] ಕರ್ನಾಟಕ ಶಾಸನಗಳು ಸಂಪುಟ-೨, ಬಳ್ಳಾರಿ ಜಿಲ್ಲೆಯ ಶಾಸನಗಳು ಎಂಬ ಗ್ರಂಥದಲ್ಲಿ ಕುಮಾರಸ್ವಾಮಿ ದೇವಾಲಯದ ಮಂಟಪದಲ್ಲಿರುವ ಶಾಸನ ಎಂದು ತಪ್ಪಾಗಿ ದಾಖಲಿಸಲಾಗಿದೆ. ಈ ಶಾಸನವನ್ನು ೨ನೇ ವೀರಬಲ್ಲಾಳನ ಆಜ್ಞೆಯಂತೆ ಅವನ ದಂಡನಾಯಕನಾದ ಮಹದೇವ ದಂಡನಾಯಕನು ಹಿಂದೆ ರಾಷ್ಟ್ರಕೂಟ ವಂಶದ ಕೃಷ್ಣರಾಜನು ಸ್ವಾಮಿದೇವರಿಗೆ ನೀಡಿದ್ದ ಕೆರೆಯಪಳ್ಳಿ (ಈಗಿನ ಕೆರ್ನಳ್ಳಿ) ಗ್ರಾಮವನ್ನು ಪುನರ್ದತ್ತಿಯಾಗಿ ನೀಡಿದ ಸಂದರ್ಭದಲ್ಲಿ ಆ ದತ್ತಿಯನ್ನು ಈ ಸ್ಥಳದ ವಿಷ್ಣುಕರ ಬ್ರಹ್ಮಚಾರಿ ಸ್ವೀಕರಿಸುವಂತೆ ಮಾಡಿ ದಾನ ನೀಡಿದ ವಿಷಯವನ್ನು ಈ ಶಾಸನ ಉಲ್ಲೇಖಿಸುತ್ತದೆ.

ತಾಳೂರು ಗ್ರಾಮದ ನಾರಿಹಳ್ಳದ ದಡದಲ್ಲಿರುವ ಪಾಳು ಶಿವಾಲಯದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೨೧೮ರ ಶಾಸನವು[೯] ಹೊಯ್ಸಳ ವೀರಬಲ್ಲಾಳನ ಅವಧಿಯದು. ಇದು ಶ್ರೀಮತು ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಹೊಯ್ಸಳ ವೀರ ಬಲ್ಲಾಳನ ರಾಜ್ಯದ ಬಹುಧಾನ್ಯ ಸಂವತ್ಸರದ ಜೇಷ್ಠ ಬ.೧೫ ಶ್ರೀಮನ್ಮಹಾನಾಳು ಪ್ರಭು ಯಗವಟ್ಟಿಯ ಬೊಮ್ಮಗವುಡನು ತಲರದಲ್ಲಿ ಈಶ್ವರ ದೇವರ

ದೇವಾಲಯವನ್ನು ನಿರ್ಮಿಸಿ, ಆ ದೇವಾಲಯವನ್ನು ನಿರ್ಮಿಸಿದ ಬೋಮ್ಮೋಜನಿಗೆ ಭೂಮಿದಾನ ನೀಡಿದಂತ ವಿಷಯವನ್ನು ಉಲ್ಲೇಖಿಸುವುದು.

ಸುಬ್ಬರಾಯನಹಳ್ಳಿ ಗ್ರಾಮದ ಬಳಿಯಿರುವ ನವಿಲುತೀರ್ಥದ ದೇವಾಲಯದಲ್ಲಿಯ ತ್ರುಟಿತವಾದ ಶಾಸನವು ಹರಿಹರನ ಮಗ ಬುಂಕಣರಾಯರ ಉಲ್ಲೇಖವನ್ನು ನೀಡುತ್ತದೆ. ಹಾಗೂ ವಿರೂಪಣ್ಣನು ಸ್ವಾಮಿದೇವರಿಗೆ ಏನೋ ಮಾಡಿಸಿದಂತೆ ತಿಳಿಸುವುದು.[೧೦] ಇದೇ ಶಾಸನ ಪಾಠವನ್ನು ಕರ್ನಾಟಕ ಶಾಸನಗಳು ಸಂಪುಟ-೨, ಬಳ್ಳಾರಿ ಜಿಲ್ಲೆಯ ಶಾಸನಗಳು ಎಂಬ ಗ್ರಂಥದಲ್ಲಿ ಅರಸನ ಸಾಮಂತನು ಸ್ವಾಮಿದೇವರ ದೇವಸ್ಥಾನದ ಹತ್ತಿರ ಎರಡು ಗುಡಿಗಳ ಮಧ್ಯದ ಕಲ್ಲು ಹಾಸಿನ ಕಾಲುದಾರಿ ಕಟ್ಟಿಸಿದ್ದನ್ನು ತಿಳಿಸುವುದು. ಹಾಗೂ ಪ್ರಧಾನಿ ಶಂಕರಸ, ವಿಠಪ ಎಂಬ ವ್ಯಕ್ತಿಯ ಹೆಸರುಗಳನ್ನು ಉಲ್ಲೇಖಿಸುತ್ತದೆ. ಮತ್ತು ಇದರಲ್ಲಿ ಶಕ ೧೩೦೮ ಎಂದು ಕ್ರಿ.ಶ.೧೩೮೬ ಡಿಸೆಂಬರ್ ೧೩ ಗುರುವಾರಕ್ಕೆ ಸರಿಹೊಂದುವುದೆಂದು ಕಾಲದ ಉಲ್ಲೇಖವನ್ನು ನೀಡಲಾಗಿದೆ.[೧೧] ಇದೇ ದೇವಾಲಯದ ಬಳಿಯ ಮತ್ತೊಂದು ಶಾಸನವು[೧೨] ಬುಕ್ಕರಾಯನು ದೇವಸ್ಥಾನದ ಮಂಟಪವನ್ನು ಮತ್ತು ಹೊಂಡ(ಕೊಳ)ವನ್ನು ನಿರ್ಮಿಸಿದನೆಂದು ಉಲ್ಲೇಖಿಸುವುದು.

ಕುರೆಕುಪ್ಪೆ ಗ್ರಾಮದ ಈಶ್ವರ ದೇವಸ್ಥಾನದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನವು ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಶ್ರೀಕೃಷ್ಣರಾಯ ಮಹಾರಾಯರು ಆಳ್ವಿಕೆ ಮಾಡುತ್ತಿರುವಾಗ ಹಸ್ತಿನಾವತಿಯ ವಳಿತದ ಸ್ವಾಮಿ ಆರುಂಬಾಡವಾದ ದೊರವದಿಯ (ಈಗಿನ ದರೋಜಿ) ವೇಂಠೆಯಕ್ಕೆ ಸಲ್ಲುವ ಅನಂತಸೇತುವೆಂದು ಪ್ರತಿನಾಮವಾದ ಕುರೆಯಕುಪ್ಪೆಯೆಂಬ ಸರ್ವಮಾನ್ಯವಾದ ಅಗ್ರಹಾರದಲ್ಲಿ ವಸಿಷ್ಟ ಗೋತ್ರದ ದ್ರಾಹ್ಯಾಯಣ ಸೂತ್ರದ ಸಾಮಶಾಖೆಯ ಸಂಗಮೇಶ್ವರದ ಹೆಗ್ಗರಸರ ಮಕ್ಕಳು ಘಳಿಯಾರದ ಬಾಗಿಲ ಬೆನಕರಸನೂ ವಿರೂಪಾಕ್ಷ ದೇವರಿಗೆ ದೇವಾಲಯವನ್ನು ಕಟ್ಟಿಸಿ ವಿರೂಪಾಕ್ಷ ದೇವರ ಪ್ರತಿಷ್ಠೆಯನ್ನು ಮಾಡಿ ಆ ದೇವರ ನೈವೇದ್ಯ, ಪೂಜೆ ಪುನಸ್ಕಾರ, ನಿತ್ಯ ಸೇವೆಗಳಿಗೆ ಬಸವಾದಿಕ್ಷೀತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ದೇವಕಾರ್ಯಕ್ಕೆ ದಾನ ನೀಡಿದ ವೃತ್ತಿ ೧ ರಲ್ಲಿ ಪುಷ್ಪ ಫಲೋಹಾರಗಳಿಗೆ ತೋಟವಾಗಿ ಮಾಡಿಸಿ ಮಾವು, ಹಲಸು, ನೇರಿಲೆ, ಸಂಪಿಗೆ ಮುಂತಾದ ನಾನಾ ವೃಕ್ಷಗಳನ್ನು ನೆಡಿಸಿ ಸಮರ್ಪಿಸಿದ ಕ್ಷೇತ್ರನಾಗುಳ ಅಗ್ರಹಾರದ ಮಹಾಜನರು ವಿಶೇಷ ಪೂಜೆಗಾಗಿ ಧಾರಾ ಪೂರ್ವಕವಾಗಿ ಸಮರ್ಪಿಸಿದ ವೃತ್ತಿ ೧ ಉಭಯವೃತ್ತಿ ೨ ತೋಟದ ಕ್ಷೇತ್ರ ನಾಗುಳವನೂ ಶ್ರೀವಿರೂಪಾಕ್ಷ ದೇವರು ಶ್ರೀಕಾರ್ಯಕ್ಕೆ ದಾನ ನೀಡಿದರು.[೧೩] ಇದೇ ದೇವಾಲಯದ ಬಲಭಾಗದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನವು ಪಕ್ಕದ ಕಂಬದಲ್ಲಿ ಬರೆದ ಕನ್ನಡ ಭಾಷೆಯ ಶಾಸನದ ನಕಲು ಸಂಸ್ಕೃತದಲ್ಲಿ ಅದೇ ಕಾಲದ ಅದೇ ವಿಷಯವನ್ನು ಕುರಿತು ಬರೆಯಲಾಗಿದೆ.[೧೪]

ಸಂಡೂರು ಗ್ರಾಮದ ತಾರಕೇಶ್ವರ ದೇವಾಲಯದ ಮುಂದೆ ಬಿದ್ದಿರುವ ಕ್ರಿ.ಶ.೧೫೪೪ರ ಶಾಸನವು[೧೫] ಸದಾಶಿವದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ರಾಮರಾಜನು ಸೊಂಡೂರು ಸೀಮೆಗೆ ಸಲ್ಲುವ ನಾಯಿಂದರಿಗೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ದಾಖಲಿಸುತ್ತದೆ.

ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕ್ರಿ.ಶ.೧೫೪೭ರ ಶಾಸನವು[೧೬] ಹರವಣ್ಣನು ಗೌಡ ಮತ್ತು ಸೇನಬೋವ ಹಾಗೂ ಗ್ರಾಮದ ಜನರ ಒಪ್ಪಿಗೆ ಪಡೆದು ಆವಿನಮಡುವಿನ ಸೀಮೆಯಲ್ಲಿರುವ ಅಂತಾಪುರದ ಶಿಥಿಲವಾಗಿದ್ದ ಮಲ್ಲಿಕಾರ್ಜುನ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದನ್ನು ತಿಳಿಸುತ್ತದೆ. ಹಾಗೂ ತಿಮ್ಮದಾಸರಿ ಎಂಬ ವ್ಯಕ್ತಿಯ ಹೆಸರನ್ನು ಉಲ್ಲೇಖಿಸುತ್ತದೆ.

ಚೋರುನೂರು ಗ್ರಾಮದ ವೀರಭದ್ರ ದೇವಸ್ಥಾನದಲ್ಲಿಯ ಕ್ರಿ.ಶ.೧೫೫೦ರ ಶಾಸನವು ರಾಜಾಧಿರಾಜ ರಾಜಪರಮೇಶ್ವರ ಶ್ರೀಮಲ್ಲಪ-ನಾಯಕನ ಕಾರ್ಯ ಕರ್ತನಾದ ಬ್ರಂಹರಾವುತನು ಚೊರಮನೂರ ಗೌಡ, ಸೇನಬೋವ, ಬಡಗಿ ಮತ್ತು ಕಮ್ಮಾರರಿಗೆ ಮೂರು ಅಳತೆ ಕಾಳುಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲದೆ ಅವರು ಒಂದು ವರ್ಷಕ್ಕೆ ಮೂರು ವರಹಗಳ ತೆರಿಗೆ ನೀಡಬೇಕೆಂದೂ ತಿಳಿಸುತ್ತದೆ.[೧೭]

ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಬಿದ್ದಿರುವ ಮತ್ತೊಂದು ಕ್ರಿ.ಶ.೧೫೫೧ರ ಶಾಸನವು[೧೮] ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜನ ಮಗ ತಿಮ್ಮರಾಜನು ಹಿರಿಯ ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವು ಕೆರೆಯ ಕೆಳಗೆ ಒಂದು ತೋಟದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಗ್ರಾಮದ ಇದೇ ದೇವಾಲಯದ ಹತ್ತಿರ ನಿಲ್ಲಿಸಿದ ಕ್ರಿ.ಶ.೧೫೫೩ರ ಶಾಸನವು[೧೯] ಉಟಗಲ ತಿಮ್ಮರಸನು ಸದಾಶಿವರಾಯ, ರಾಮರಾಜ ಮತ್ತು ತಿರುಮಲರಾಜರಿಗೆ ಪುಣ್ಯವಾಗಲೆಂದು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ನಿರಂತರ ದೀಪ ಉರಿಸಲು ಕೆಲವು ತೆರಿಗೆಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಇದೇ ಗ್ರಾಮದ ಇದೇ ದೇವಾಲಯದ ಹತ್ತಿರ ಬಿದ್ದಿರುವ ತ್ರುಟಿತವಾದ ಕ್ರಿ.ಶ.೧೬ನೇ ಶತಮಾನದ[೨೦] ಶಾಸನವು ತಿಮ್ಮರಸಯ್ಯ ಎಂಬ ವ್ಯಕ್ತಿ ಈ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ನಂದಾದೀಪಕ್ಕೆ ಎರಡು ಹಣವನ್ನು ನೀಡಿದಂತೆ ತಿಳಿಸುವುದು.

ಶಂಕರಪುರ ಅಥವಾ ಗಂಡಿ ಬಸಾಪುರ ಗ್ರಾಮದ ಗಂಡಿ-ಬಸಪ್ಪನ ದೇವಸ್ಥಾನದ ಮುಂದೆ ಸು.೨೦ ಗಜಗಳ ಅಂತರದಲ್ಲಿಯ ಬಂಡೆಯ ಮೇಲಿನ ಶಾಸನವು ೧೬ನೇ ಶತಮಾನದ್ದಾಗಿದ್ದು[೨೧], ಇದು ರಂಗ ಸಮುದ್ರದ ಮೊಗದವರ ಭಿಕ್ಷಾಮಠಕ್ಕೆ ಭೂಮಿ (ವಿವರಗಳಿಲ್ಲ) ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಬಲಗಡೆಯ ಪಟ್ಟಿಕೆಯಲ್ಲಿನ ಶಾಸನವು ೧೨ನೇ ಶತಮಾನದ ಲಿಪಿಯಲ್ಲಿದ್ದು[೨೨] ಅದು ಚಗನಕೇರಿಯ ಹವಿಮಯ್ಯನ ಮಗ ಕಾವಯ್ಯ ದೇಸಿದಾಸಿ ಎಂಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ. ಹಾಗೂ ಮಡಿದ ವಿಷಯವನ್ನು ತಿಳಿಸುವುದು.

ತುಂಬರಗುದ್ದಿಯ ಗ್ರಾಮದ ಶಿವ ದೇವಸ್ಥಾನದಲ್ಲಿ ನಿಲ್ಲಿಸಿದ ಶಾಸನವು ದುರಬಿ ನರಸಪ್ಪನು ತುಂಬರಗುದ್ದಿಯ ಕಲ್ಲಯ್ಯ ದೇವರಿಗೆ ದೀಪ ಉರಿಸಲು ತೆರಿಗೆಯಲ್ಲಿ ಪ್ರತಿದಿನ ಮೂರು ಕಾಸುಗಳನ್ನು ಮಾನ್ಯವಾಗಿ ದಾನ ನೀಡಿದ್ದನ್ನು ದಾಖಲಿಸುವುದು.[೨೩] ಇದೇ ತಾಲ್ಲೂಕಿನ ನಾಗಲಾಪುರ ಗ್ರಾಮದಲ್ಲಿಯ ಶಮಿಮರದ ಕೆಳಗೆ ನಿಲ್ಲಿಸಿದ ಶಾಸನವು ಜಿಲ್ಲೇಳ ಗೋಪಯದೇವ-ಮಹಾಅರಸು ಕಣುವೆಯ ಔಭಳೇಶ್ವರ ದೇವರಿಗೆ ನಾಗಲಾಪುರದಲ್ಲಿ ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.[೨೪]

ಸುಬ್ಬರಾಯನಹಳ್ಳಿ ಬಳಿಯ ನವಿಲುತೀರ್ಥದ ಸಮೀಪದ ಶಾಸನವು ನವಿಲುತೀರ್ಥದ ದೇವಸ್ಥಾನದ ಮಂಟಪವನ್ನು ಮತ್ತು ಹೊಂಡ(ಕೊಳ)ವನ್ನು ಬುಕ್ಕರಾಯನು ಮಾಡಿಸಿದನೆಂದು ಉಲ್ಲೇಖಿಸುತ್ತದೆ.[೨೫] ಸಂಡೂರು ಗ್ರಾಮದ ಪಿ.ಡಬ್ಲ್ಯೂ.ಡಿ ಕಛೇರಿಯ ಹತ್ತಿರ ಬಿದ್ದಿರುವ ಶಾಸನವು ಶಿವಪುರದ ಶ್ರೀ ಕಾಶಿವಿಶ್ವೇಶ್ವರನನ್ನು ಉಲ್ಲೇಖಿಸುವುದು.[೨೬] ಇದೇ ತಾಲ್ಲೂಕಿನ ಹಿರೇಹಾಳುವಿನ ಗ್ರಾಮದ ಪಶ್ಚಿಮದ ಕೆರೆಯ ಕಡೆಗೆ ಇರುವ ಶಾಸನದಲ್ಲಿ ಅಮಿತಯ್ಯ ದಣ್ಣನಾಯಕ, ಕಾಲೆಯ್ಯ ನಾಯಕಣ್ಣ, ಸಾವಿದೇವ, ಹಿರಿಯ ಸಾವಿದೇವ ಮತ್ತು ಇತರ ನಾಯಕರುಗಳು ಹಿರೇಹಾಳುವಿನ ಸ್ವಾಮಿದೇವರಿಗೆ ಭೂಮಿದಾನ ನೀಡಿದಂತೆ ತಿಳಿದು ಬರುತ್ತದೆ.[೨೭] ಇದೇ ತಾಲ್ಲೂಕಿನ ಕಳಿಂಗೇರಿ ಗ್ರಾಮದ ಹತ್ತಿರ (ಕಳಿಂಗೇರಿ ಮತ್ತು ಹಿರೇಹಾಳು ಗ್ರಾಮಗಳ ಮಧ್ಯದ ಮಾರ್ಗದಲ್ಲಿರುವ ಒಂದು ಮಸೀದಿಯ ಹತ್ತಿರದ ಬಂಡೆಯ ಶಾಸನ) ಇರುವ ಶಾಸನವು ಈ ಭೂಮಿಯು ವಾಮರಸ ಅಮಿತಯ್ಯ-ದಣ್ಣಾಯಕನ ದಾನ ಎಂದು ತಿಳಿಸುವುದು.[೨೮] ಈ ಮೇಲ್ಕಂಡ ಆರು ಶಾಸನಗಳಲ್ಲಿ ಕಾಲದ ಉಲ್ಲೇಖವಿಲ್ಲ. ಆದರೆ ಈ ಶಾಸನಗಳ ಲಿಪಿಯ ಆಧಾರದಿಂದ ಇವು ಸು.೧೨ನೇ ಶತಮಾನಕ್ಕೆ ಸೇರಿದವುಗಳಂತೆ ಕಂಡುಬರುತ್ತವೆ.

ಸಂಡೂರಿನ ಪಿ.ಡಬ್ಲ್ಯೂ.ಡಿ ಕಛೇರಿಯ ಬಳಿಯಿರುವ ೧೪ನೇ ಶತಮಾನದ[೨೯] ಶಾಸನವು ಪ್ರಜೆಗಳು ಮೂಲಸ್ಥಾನ ಮಲ್ಲಿಕಾರ್ಜುನ ದೇವರಿಗೆ ಪ್ರತಿಯೊಬ್ಬರಿಗೆ ಒಂದು ವೀಸದಂತೆ ದಾನ ನೀಡಿದ ಉಲ್ಲೇಖವಿದ್ದಂತೆ ತೋರುತ್ತದೆ. ಇದೇ ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದಲ್ಲಿನ ಜಾಗಟೆಯ ಮೇಲಿನ ಕ್ರಿ.ಶ.೧೪೩೦ರ ಶಾಸನವು ಕುಮಾರಸ್ವಾಮಿ ದೇವರಿಗೆ ಗುಹೇಶ್ವರ ದುರ್ಗದ ಅಭುವನ ಗೋತ್ರದ ಕಂಚುಗಾರ ಬಟ್ಲಬಸವನ ಪೌತ್ರಹಾವಂಣನ...ಪ್ಪ ಸಿಂಗಪ್ಪ... ಸಹ ತಮ್ಮ ಭಕ್ತಿಯಿಂದ ೫೬ ಸೇರು ತೂಕದ (ಗಡಿಯಾರ) ಜಾಗಟೆ ನೀಡಿದನು. ಹಾಗೂ ಕ್ರಿ.ಶ.೧೪೫೮[೩೦]ರಲ್ಲಿ ಸಣ್ಣ ಬಸಪ್ಪನ ಪುತ್ರ ಸಕ್ರಪ್ಪ ಮತ್ತು ಕುಮಾರಪ್ಪನವರು ೪೧ ಸೇರು ತೂಕದ

ಸಲಾಕಿ(ಸರಪಳಿ) ಮಾಡಿಸಿ ಕೊಟ್ಟಿರುತ್ತಾರೆ. ಹಾಗೂ ಇದು ಈ ತಾಲ್ಲೂಕಿನ ಕೊನೆಯ ಶೈವ ದಾನ ಶಾಸನವಾಗಿದೆ ಎಂದು ತಿಳಿದುಬರುವುದು.

ವೈಷ್ಣವ ದಾನ ಶಾಸನಗಳು

ವೈದಿಕ ಮತದ ದೇವಾಲಯಗಳ ಪೂಜೆ ಪುನಸ್ಕಾರಗಳಿಗಾಗಿ, ಹಾಗೂ ಜೀರ್ಣೋದ್ಧಾರ ಇತ್ಯಾದಿ ಕಾರ್ಯಗಳಿಗಾಗಿ ಅರಸರು, ಅಧಿಕಾರಿಗಳು, ಸಾಮಂತರುಗಳು ನೀಡಿದಂತಹ ದತ್ತಿ ದಾನಗಳ ಬಗ್ಗೆ ಮಾಹಿತಿಯನ್ನು ನೀಡುವ ಶಾಸನಗಳಿಗೆ ವೈಷ್ಣವ ದಾನ ಶಾಸನಗಳೆಂದು ಇಲ್ಲಿ ಪರಿಗಣಿಸಲಾಗಿದೆ. ಈ ತಾಲ್ಲೂಕಿನಲ್ಲಿ ಕಂಡು ಬರುವ ಇಂತಹ ವೈಷ್ಣವ ದಾನ ಶಾಸನಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಹಳೆದರೋಜಿ ಗ್ರಾಮದ ಬೆಟ್ಟದ ಮೇಲಿನ ರಾಮಲಿಂಗೇಶ್ವರ ದೇವಾಲಯದ ಅರೆಗಂಬದ ಮೇಲಿನ ಕ್ರಿ.ಶ.೧೧೦೫ ರ ಶಾಸನವು[೨೧] ಮಹಾಮಂಡಲೇಶ್ವರ ಕಾಚರಸನು ದೊರವಡಿಯ ಕೋಟೆಯಲ್ಲಿರುವ ರಾಮೇಶ್ವರ ದೇವರಿಗೆ ಭೂಮಿದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇದರಿಂದ ವ್ಯಕ್ತವಾಗುವುದೇನೆಂದರೆ ೧೨ನೆಯ ಶತಮಾನದ ವೇಳೆಗಾಗಲೇ ಈ ಪ್ರದೇಶದಲ್ಲಿ ಕೋಟೆ ಇದ್ದು, ಅದರಲ್ಲಿ ಈ ರಾಮಲಿಂಗೇಶ್ವರ ದೇವಾಲಯ ಇತ್ತು ಎಂಬ ಕುರಿತು ಸ್ಪಷ್ಟವಾದ ಮಾಹಿತಿ ತಿಳಿದುಬರುವುದು. ಹಾಗೂ ಈ ಶಾಸನವು ಈ ತಾಲ್ಲೂಕಿನ ಪ್ರಥಮ ವೈಷ್ಣವ ದಾನ ಶಾಸನವಾಗಿದೆ.

ರಾಮಘಡದ ರಾಮದೇವರ ದೇವಾಲಯದ ಮುಂಭಾಗದ ಗೋಡೆಗೆ ಒರಗಿಸಿರುವ ಕ್ರಿ.ಶ.೧೫೨೭ರ ಶಾಸನವು[೨೨] ಶ್ರೀಕೃಷ್ಣದೇವ ಮಹಾರಾಯರೂ ರಾಜ್ಯವಾಳುತ್ತಿರುವಾಗ ಹೊಸಮಲೆಯ ದುರ್ಗದ ಮುತಯ ಮುಂಮಡಿಸಿಂಗನ ಮಗ ಖಂಡೆಯರಾಯ ಕಂಪಿಲರಾಯನ ಪಟ್ಟಕ್ಕೆ ಸಲ್ಲುವ ರಾಣೀವಾಸದ ವೀರ ಗುಜಲ ಹರಿಯಾಲದೇವಿಯರ ಪುತ್ರ ಹೊಸಮಲೆಯ ರಾಮನಾಥ ಒಡೆಯರು ಛಪ್ಪನ ದೇಶದ (ಐವತ್ತಾರು ದೇಶದ) ರಾಯರಗಂಡ ಆತನ ಮನೆಯ ಹಾಡುಗಾರ (ಅಧಿಕಾರಿ) ಸೋಮಣಯ್ಯ ವಿಜಯನಗರದ ಹೂವಿನ ಬಾಗಿಲ ಹನುಮಂತ ದೇವರ ಪೂಜಾರಿ ರಾಮಣನು ಆತನ ಮಗ ಸೋಮಣಯನು ಶಿಷ್ಯ ರಾಮನಾಥನ ಕೋನೇರಿ ನಾಯಕನ ಮಗಳು ಕಾಟಿನಾಯಕ ಒಡೆಯ ಹಳದ ರಾಮನಾಥನ ಗೋಪಾಯಿ ಆಕೆಯ ತಮ್ಮ ರಾಮನಾಥ ದೇವರ ತೂಳದ ರಾಮಣನು ಹೊಸಮಲೆದುರ್ಗದ ರಾಮನಾಥ ದೇವರ ದೇವಾಲಯವನ್ನು ಕಟ್ಟಿಸುತ್ತಾಳೆ. ಹಾಗೂ ಗಂಟೆ, ಜೇಗಟೆ, ಹರಿವಾಣ(ತಟ್ಟೆ), ಚೆಂಬು ಮೇಲೆ ಹೊನ್ನನು ಸಮರ್ಪಿಸಿ, ರಾಮನಾಥನ ಕಾಲದ ಪೂರ್ವದ ಛಪ್ಪನ್ನಸಮಂದಿ (ಐವತ್ತಾರು ಜನ) ವೀರರಿಗೆ ವೀರಸ್ವರ್ಗ ಪ್ರಾಪ್ತವಾಗಲಿ ಎಂದು ಈ ದೇವಾಲಯವನ್ನು ಕಟ್ಟಿಸುತ್ತಾಳೆ.

ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆ ದಂಡೆಯ ಹತ್ತಿರವಿರುವ ಕ್ರಿ.ಶ.೧೫೩೯ರ ಶಾಸನವು[೨೩] ಅಚ್ಯುತರಾಯನ ಕೈಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ತಂದೆ ತಿಮ್ಮರಸಯ್ಯ,

ತಾಯಿ ಹಿರಿಯ ಲಕ್ಕರಸಮ್ಮ, ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ ತನ್ನ ತಮ್ಮ ಕೃಷ್ಣಪ್ಪ, ತನ್ನ ಮಗ ಶಿಂಗಾಲಯ್ಯ ಮುಂತಾದವರಿಗೆ ಪುಣ್ಯವಾಗಬೇಕೆಂದು ಗೋಪಿನಾಥ ದೇವಾಲಯ ಬಾಚೇಶ್ವರ, ಅಂಮೇಶ್ವರ, ಕೃಷ್ಣೇಶ್ವರ ಮೊದಲಾದ ದೇವಾಲಯಗಳನ್ನು ಶಿಂಗಾಲಯ್ಯನ ಹೆಸರಿನಲ್ಲಿ ಶಿಂಗಾಲಯ್ಯನ ಬಾವಿಯನ್ನು ತೋಡಿಸುತ್ತಾನೆ. ಈತನು ಅಚ್ಯುತಮ್ಮ ಸಮುದ್ರ, ಬಾಚಸಮುದ್ರ, ರಾಮ ಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪೆದ್ದಲಕ್ಕಸಮುದ್ರ, ಲಿಂಗಾಲಯ ತಟಾಕ, ವೆಂಕಟಯ್ಯ ತಟಾಕ, ಪೆದತಿಮ್ಮ ಸಮುದ್ರ ಮತ್ತು ಚಿನಬಾಚಸಮುದ್ರವೇ ಮೊದಲಾದವು ಇವರೆಲ್ಲರ ಹೆಸರಿನಲ್ಲಿ ಸುಮಾರು ೧೬ ಕೆರೆಗಳನ್ನು ಕಟ್ಟಿಸುತ್ತಾನೆ. ಇವನ ಕೈಕೆಳಗೆ ಅಧಿಕಾರಿ ನಮಶ್ಶಿವಾಯ ಎಂಬುವವನು ತಿಂಮಲಾಪುರದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸುತ್ತಾನೆ. ಈ ಬಯಕಾರ ರಾಮಪ್ಪ ಸದಾಶಿವದೇವರಾಯನ ಕಾಲದಲ್ಲೂ ಇದ್ದು ಅನೇಕ ಕೆರೆಗಳನ್ನು ಕಟ್ಟಿಸುತ್ತಾನೆ. ತನ್ನ ಹೆಸರಿನಲ್ಲಿ ತನ್ನ ಹೆಂಡತಿಯ ಹೆಸರಿನಲ್ಲಿ ನೆಡು ತೋಪುಗಳನ್ನು ಹಾಕಿಸುತ್ತಾನೆ.

ಕೊಡಾಳು ಗ್ರಾಮದ ಹನುಮಂತರಾಯ ದೇವಸ್ಥಾನದ ಪ್ರಾಕಾರದ ಗೋಡೆಯಲ್ಲಿ ಕಟ್ಟಿರುವ ಒಡೆದ ಕಲ್ಲಿನ ಮೇಲಿನ ಕ್ರಿ.ಶ.೧೫೫೨ರ ಶಾಸನವು[೩೪] ಅರಸ ಸದಾಶಿವರಾಯನಿಗೆ ಪುಣ್ಯವಾಗಲೆಂದು ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ. ರಾಮರಾಜ ವಿಠಲೇಶ್ವರದೇವ ಮಹಾ ಅರಸುವಿನ ಉಲ್ಲೇಖವಿದೆ.

ಹುಲಿಗುಂಟ ಗ್ರಾಮದ ಕೆರೆಯ ದಂಡೆಯಲ್ಲಿ ಕಟ್ಟಿದ ಒಂದು ಕಲ್ಲಿನ ಮೇಲಿನ ಕ್ರಿ.ಶ.೧೫೫೬ರ ಶಾಸನವು[೩೫] ಬಯಕಾರ ರಾಮಪ್ಪಯ್ಯನು ತನ್ನ ಮಗಳು ಅಚ್ಚುತಮ್ಮಳಿಗೆ ಪುಣ್ಯವಾಗಲೆಂದು ಬಾಲಕೃಷ್ಣ ದೇವರ ದೇವಸ್ಥಾನ ಕಟ್ಟಿಸಿದ್ದನ್ನು ಮತ್ತು ಅಚ್ಚುತಾಪುರವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಬನ್ನಿಹಟ್ಟಿ ಗ್ರಾಮದ ಹನುಮಂತ ದೇವಸ್ಥಾನದ ಮುಂದೆ ನಿಲ್ಲಿಸಿದ ಶಾಸನವು ಪ್ರಾರ್ಥನೆಯಿರುವ ಭಾಗ ಮತ್ತು ದಿನಾಂಕ ಕ್ರಿ.ಶ.೧೫೭೨ರ ಭಾಗ ಮಾತ್ರ ಉಳಿದಿದ್ದು, ಉಳಿದ ಭಾಗ ನಾಶವಾಗಿದೆ.[೩೬] ಇದೇ ತಾಲ್ಲೂಕಿನ ಚೋರುನೂರು ಗ್ರಾಮದ ಹನುಮಂತ ದೇವಸ್ಥಾನದ ಮುಂದೆ ನಿಲ್ಲಿಸಿದ ಕ್ರಿ.ಶ.೧೬೯೦ರ ಶಾಸನವು[೩೭] ಗುಡೆಕೋಟೆ ಮತ್ತು ಸಂಡೂರಿನ ಇಮ್ಮಡಿ-ರಾಜಪ-ನಾಯಕನು ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಅದರ ಪ್ರಕಾರ ಗುಡೆಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುವುದು.

ತುಂಬರಗುದ್ದಿ (ಯರ್ರಯ್ಯನಹಳ್ಳಿಯ ಉಪಗ್ರಾಮ) ಆಂಜನೇಯನ ದೇವಸ್ಥಾನದ ಮುಂದೆ ನಿಲ್ಲಿಸಿದ ಶಾಸನವು[೩೮] ದರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ

ಮೂರು ಕಾಸನ್ನು ದಾನ ನೀಡಿದ್ದನ್ನು ತಿಳಿಸುವುದು. ಇದೇ ತಾಲ್ಲೂಕಿನ ಜಿಗಿನಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಮುಂದಿರುವ ತ್ರುಟಿತವಾದ ಶಾಸನವು[೩೯] ದಳವಾಯಿ ಬರಿಮಿನಾಯಿಕನು ಜಿಗುನೆಹಳ್ಳಿಯಲ್ಲಿ ಭೂಮಿದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಸೋವೇನಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿನ ಶಾಸನವು ಚೋರಮನೂರು ಸೀಮೆಯ ಶಿಲ್ಪಿಗಳಾದ ಮಾರೋಜ ಮತ್ತು ಮಲೋಜರು ಸೋವೇನಹಳ್ಳಿ ಗ್ರಾಮದಲ್ಲಿ ಕಲ್ಲಿನ ಕಂಬ ನಿಲ್ಲಿಸಿದ್ದನ್ನು ತಿಳಿಸುವುದು.[೪೦] ಇದೇ ದೇವಾಲಯದ ಇದೇ ಪೀಠದ ಮೇಲೆ ಇದೇ ಮುಖದಲ್ಲಿನ ಹಾಳಾಗಿರುವ ಶಾಸನವು ಹೊರಮಲೆ ಸೀಮೆಯ ಮಾರೋಜನು ಅದೇ ಕಂಬವನ್ನು (ಬಹುಶಃ ಮೇಲಿನ ಶಾಸನದ ದಾನಿಯ ಸಹಯೋಗದೊಂದಿಗೆ) ನಿಲ್ಲಿಸಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.[೪೧] ಇದೇ ದೇವಾಲಯದ ಇದೇ ಪೀಠದ ಮೇಲೆ ಉತ್ತರ ಮುಖದಲ್ಲಿನ ಶಾಸನವು ಚಪ್ಪರಹಳ್ಳಿ ಮತ್ತು ಅಣ್ಣೆಕುಂಟೆ ಗ್ರಾಮಗಳನ್ನು ಮರೋಜನಿಗೆ ಶಿಲ್ಪಿ ಉದ್ಯೋಗಕ್ಕಾಗಿ ವಂಶಪಾರಂಪರ್ಯವಾಗಿ ದಾನ ನೀಡಿದ್ದನ್ನು ಉಲ್ಲೇಖಿಸುವುದು.[೪೨] ಅದೇ ಪೀಠದ ಮೇಲೆ ಅದೇ ಮುಖದಲ್ಲಿಯ ಶಾಸನವು ಮಾರೋಜ ಮತ್ತು ಮಾಳೋಜರು (ಅದೇ ಸ್ಥಳದಲ್ಲಿ) ಬಸವರಾಜ ದೇವಸ್ಥಾನವನ್ನು ಕಟ್ಟಿದ್ದನ್ನು ದಾಖಲಿಸುತ್ತದೆ.[೪೩]

ಅಂಕಮನಹಾಳು ಗ್ರಾಮದ ಪಶ್ಚಿಮಕ್ಕೆ ಪಾಳು ಬಿದ್ದ ದೇವಸ್ಥಾನದ ಮುಂದೆ ನಿಲ್ಲಿಸಿರುವ ಶಾಸನವು ಯೆರೋಜನ ಮಗ ತಿಮ್ಮಣನು ಅಂಕಮನಹಾಳಿನ ತಿರುವೆಂಗಳನಾಥ ದೇವರಿಗೆ ಗರುಡ-ಗಂಭವನ್ನು ಮತ್ತು ತಿಮ್ಮೊಜನ ಮಗ ಕೊಂಡಯ್ಯನು ದೀಪಮಾಲೆ - ಕಂಬವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ[೪೪]. ಇದೇ ತಾಲ್ಲೂಕಿನ ತುಂಬರಗುದ್ದಿ ಗ್ರಾಮದ (ಯರ್ರಯ್ಯನ ಹಳ್ಳಿಯ ಉಪಗ್ರಾಮ) ಆಂಜನೇಯ ದೇವಾಲಯದ ಎದುರುಗಡೆ ಇರುವ ಶಾಸನವು ದುರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ ೨ ಕಾಸನ್ನು ದಾನ ನೀಡಿದ್ದನ್ನು ತಿಳಿಸುವುದು.[೪೫] ಈ ಮೇಲ್ಕಂಡ ಎಂಟು ಶಾಸನಗಳಲ್ಲಿ ಕಾಲದ ಉಲ್ಲೇಖವನ್ನು ನೀಡಿಲ್ಲ. ಆದರೆ ಈ ಶಾಸನಗಳ ಲಿಪಿಯನ್ನು ಗಮನಿಸಿದರೆ ಇವು ಸು.೧೬-೧೭ನೆಯ ಶತಮಾನದವು ಎಂದು ತಿಳಿದು ಬರುವುದು. ಇದೇ ತಾಲ್ಲೂಕಿನ ಜಯಸಿಂಗಪುರ ಗ್ರಾಮದ ಮಾರುತಿ ದೇವಸ್ಥಾನದ ಕೈಪಿಡಿ ಗೋಡೆಯ ಮೇಲೆ ಇಟ್ಟಿರುವ ಕ್ರಿ.ಶ.೧೭ನೇ ಶತಮಾನದ ಶಾಸನವನ್ನು ವ್ಯವಸ್ಥಿತವಾಗಿ ಬರೆದಿಲ್ಲ. ಬಹುಶಃ ಈ ಶಾಸನದಲ್ಲಿ ಆಂಜನೇಯ ದೇವರಿಗೆ ಭೂಮಿದಾನ ನೀಡಿದ ಉಲ್ಲೇಖವಿರಬಹುದು.[೪೬] (ವಿವರಗಳು ಶಾಸನದಲ್ಲಿ ಸ್ಪಷ್ಟವಾಗಿಲ್ಲ) ಈ ತಾಲ್ಲೂಕಿನ ವೈಷ್ಣವ ಶಾಸನಗಳಲ್ಲಿ ಇದು ಬಹುಶಃ ಕೊನೆಯದಾಗಿರಬೇಕು.

ಇಸ್ಲಾಂ ದಾನ ಶಾಸನಗಳು

ಇಸ್ಲಾಂ ಧರ್ಮದ ಮಸೀದಿಯ ಜೀರ್ಣೋದ್ಧಾರ, ನಿರ್ವಹಣೆ ಹಾಗೂ ಇನ್ನಿತರ ಇಸ್ಲಾಂ ಧರ್ಮದ ಧಾರ್ಮಿಕ ಕಾರ್ಯಗಳಿಗಾಗಿ ನೀಡಿದಂತ ದಾನಗಳನ್ನು ಕುರಿತ ವಿಷಯವನ್ನು ಉಲ್ಲೇಖಿಸುವ ಶಾಸನಗಳನ್ನು ಇಲ್ಲಿ ಇಸ್ಲಾಂ ದಾನ ಶಾಸನಗಳು ಎಂದು ಪರಿಗಣಿಸಲಾಗಿದೆ. ಈ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಕ್ರಿ.ಶ.೧೯ನೇ ಶತಮಾನದ ಅವಧಿಯಲ್ಲಿ ಬರೆಸಲ್ಪಟ್ಟ ಇಸ್ಲಾಂ ಧರ್ಮದ ಶಾಸನಗಳನ್ನು ಕಾಣುತ್ತೇವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಸಂಡೂರು ತಾಲ್ಲೂಕಿನ ದರೋಜಿ ಗ್ರಾಮದ ಮಸೀದಿಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲಿನ ೧೯ನೆಯ ಶತಮಾನದ ಪರ್ಶಿಯನ್ ಭಾಷೆಯ ಶಾಸನವು ಕಟ್ಟಡ(ಮಸೀದಿ)ವನ್ನು ಟಿಪ್ಪು ಸುಲ್ತಾನನ ಕಾಲದಲ್ಲಿ ಕಟ್ಟಲಾಗಿದೆ ಎಂದು ಉಲ್ಲೇಖಿಸುತ್ತದೆ.[೪೭] ಇದೇ ಗ್ರಾಮದ ಕೆರೆಯ ದಂಡೆಯ ಮೇಲೆ ನಿಲ್ಲಿಸಿದ ಪರ್ಶಿಯನ್ ಭಾಷೆಯ ಮತ್ತೊಂದು ಶಾಸನವು, ಇಲ್ಲಿಯ ಕೆರೆಯ ನೀರನ್ನು ಬಾಯಾರಿ ಬಂದ ಪ್ರಯಾಣಿಕರಿಗೆ ಗುರು ಮುಹಮ್ಮದನ ಹೆಸರಿನಲ್ಲಿ ಹಂಚಬೇಕು ಎಂದು ತಿಳಿಸುವುದು.[೪೮] ಇದೇ ತಾಲ್ಲೂಕಿನ ಕೃಷ್ಣಾನಗರ ಗ್ರಾಮದ ಕೋಟೆಯಲ್ಲಿಯ ಮಸೀದಿಯ ಪೂರ್ವದ ಗೋಡೆಯ ಬಲಗಡೆಯ ಕಲ್ಲಿನ ಮೇಲಿನ ಶಾಸನವು ಪರ್ಶಿಯನ್ ಭಾಷೆಯದ್ದಾಗಿದೆ. ಇದರಲ್ಲಿ 'ಮಸ್ಜಿದ್-ಇ-ಹಸನ್' (ಬಲವಾದ ಮಸೀದಿ) ಎಂದು ಬರೆಯಲಾಗಿದೆ.[೪೯] ಇದೇ ತಾಲ್ಲೂಕಿನ ದರೋಜಿ ಗ್ರಾಮದ ಮಸೀದಿಯ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲಿನ ಕ್ರಿ.ಶ.೧೯ನೆಯ ಶತಮಾನದ ಅರೇಬಿಕ್ ಭಾಷೆಯ ಈ ಶಾಸನದಲ್ಲಿ ಕುರಾನಿನ ಒಂದು ಭಾಗವಿದ್ದು ನಾಲ್ಕು ಖಲೀಫರ ಹೆಸರುಗಳಿವೆ.[೫೦]

ಜೈನ ಶಾಸನಗಳು

ಜೈನ ಸನ್ಯಾಸಿಗಳು ನಿಸಿದಿ ವ್ರತವನ್ನಾಚರಿಸಿ ಮರಣವನ್ನೊಂದಿದ ಸಂದರ್ಭದಲ್ಲಿ ಅವರ ಸ್ಮರಣೆಗಾಗಿ ಹಾಕಿಸಿದ ಶಾಸನಗಳನ್ನು ನಿಸಿದಿ ಶಾಸನಗಳೆಂದು ಕರೆಯುತ್ತಾರೆ. ಈ ತಾಲ್ಲೂಕಿನಲ್ಲಿ ನಮಗೆ ಒಂದೇ ಒಂದು ಜೈನ ಶಾಸನ ಕಾಣಸಿಗುತ್ತದೆ. ಅದರ ಬಗ್ಗೆ ಈ ಕೆಳಗಿನಂತೆ ಚರ್ಚಿಸಲಾಗಿದೆ.

ಈ ತಾಲ್ಲೂಕಿನ ಹಳೆದರೋಜಿ ಗ್ರಾಮದ ರಾಮಲಿಂಗೇಶ್ವರ ಬೆಟ್ಟದಲ್ಲಿ ಈ ಹಿಂದೆ ಸಿ.ಎಸ್. ಪಾಟೀಲರು ಕ್ಷೇತ್ರಕಾರ್ಯಕೈಗೊಂಡ ಸಂದರ್ಭದಲ್ಲಿ ಒಂದು ಶಾಸನ ಸಹಿತವಾದ ನಿಸಿದಿ ಶಿಲೆಯನ್ನು ಅಸ್ಪಷ್ಟವಾಗಿದೆ ಎಂದು 'ದೊರವಡಿ' ಎಂಬ ತಮ್ಮ ಲೇಖನದಲ್ಲಿ ಗುರುತಿಸಿರುವರು. ಆದರೆ ನಾನು ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಪುನಃ ಕ್ಷೇತ್ರಕಾರ್ಯಕೈಗೊಂಡ ಸಂದರ್ಭದಲ್ಲಿ ಈ ಶಾಸನದ ಪಾಠವನ್ನು ಓದಿ ಬರೆದುಕೊಂಡು ಬರಲಾಯಿತು. ಮೂರು ಸಾಲಿನ ಈ ಶಾಸನವು 'ಶ್ರೀ ಕೆಸೆಣಿದೇವ' ಎಂಬುವನ ಮಗನಾದ ಮಲಪ ಎಂಬ ಜೈನ ಸನ್ಯಾಸಿಯು ನಿಸಿದಿ ವ್ರತವನ್ನಾಚರಿಸಿ ಮರಣವನ್ನೊಂದಿದ

ಸಂದರ್ಭದಲ್ಲಿ ಅವನ ಸ್ಮರಣಾರ್ಥವಾಗಿ ಈ ನಿಸಿದಿ ಶಿಲೆಯನ್ನು ಹಾಕಿಸಿದಂತೆ ತಿಳಿದು ಬರುವುದು. ಈ ನಿಸಿದಿ ಶಿಲೆಯು ಮೂರು ಹಂತದಾಗಿದ್ದು, ಕೆಳಗಿನ ಹಂತದಲ್ಲಿ ಕ್ರಿ.ಶ.೧೩ನೆಯ ಶತಮಾನದ ಲಿಪಿಯನ್ನೊಳಗೊಂಡ ಮೂರು ಸಾಲಿನ ಶಾಸನವನ್ನು ಕಂಡರಿಸಲಾಗಿದೆ. ಎರಡನೆಯ ಹಂತದಲ್ಲಿ ಅಂಜಲಿ ಮುದ್ರೆಯಲ್ಲಿ ಕುಳಿತ ಮಲಪನ ಶಿಲ್ಪವಿದೆ. ಮೂರನೆಯ ಹಂತದಲ್ಲಿ ಸಮಭಂಗಿಯಲ್ಲಿ ನಿಂತ ತೀರ್ಥಂಕರನ ಶಿಲ್ಪವಿದೆ.

೩.೨. ಸಾಮಾಜಿಕ ಕಾರ್ಯಗಳಿಗೆ ದಾನ

೧. ಅಗ್ರಹಾರಗಳು

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಅಗ್ರಹಾರಗಳೂ ಬಹು ವಿಶಿಷ್ಟವಾದ ಸ್ಥಾನವನ್ನು ಅಲಂಕರಿಸಿವೆ. ಅಗ್ರಹಾರವು, ಅಗ್ರ-(ಶ್ರೇಷ್ಠ) + ಆಹಾರ-(ಸ್ಥಳ) ಎಂಬೆರಡು ಸಮಾಸ ಪದವಾಗಿದ್ದು; ಅದು ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿನ ಶ್ರೇಷ್ಠರೆಂದರೆ ಚಾತುರ್ವರ್ಣದಲ್ಲಿ ಅಗ್ರರಾದ ಬ್ರಾಹ್ಮಣರು. ಅವರಿಗೆ ದತ್ತಿಯಾಗಿ ಬಿಟ್ಟು ಕೊಟ್ಟ ಊರುಗಳೇ ಅಗ್ರಹಾರಗಳು.[೫೧] ಇಂತಹ ಅಗ್ರಹಾರಗಳು ಸಂಡೂರು ತಾಲ್ಲೂಕಿನಲ್ಲಿಯೂ ಕಾಣಸಿಗುತ್ತದೆ. ಅವುಗಳು ಇದ್ದ ಕುರಿತು ಶಾಸನಗಳು ಉಲ್ಲೇಖ ನೀಡುತ್ತವೆ.

ಸಂಡೂರು ತಾಲ್ಲೂಕಿನ ಕುರೆಕುಪ್ಪೆ ಗ್ರಾಮದ ಈಶ್ವರ ದೇವಾಲಯದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನದಲ್ಲಿ ಶ್ರೀಮನ್ಮಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀಕೃಷ್ಣರಾಯ ಮಹಾರಾಯರು ಆಳ್ವಿಕೆ ಮಾಡುತ್ತಿರುವಾಗ ಹಸ್ತಿನಾವತಿಯ ವಳಿತದ ಸ್ವಾಮಿ ಆರುಂಬಾಡವಾದ ದೊರವದಿಯ ವೇಂಠೆಯಕ್ಕೆ ಸಲ್ಲುವ ಅನಂತಸೇತುವೆಂದು ಪ್ರತಿನಾಮವಾದ ಕುರೆಕುಪ್ಪೆಯೆಂಬ ಸರ್ವಮಾನ್ಯವಾದ ಅಗ್ರಹಾರದಲ್ಲಿ ವಸಿಷ್ಟಗೋತ್ರದ ದ್ರಾಹ್ಯಾಯಣ ಸೂತ್ರದ ಸಾಮಶಾಖೆಯ ಸಂಗಮೇಶ್ವರದ ಹೆಗ್ಗರಸರ ಮಕ್ಕಳು ಘಳಿಯಾರದ ಬಾಗಿಲ ಬೆನಕರಸನೂ ವಿರೂಪಾಕ್ಷ ದೇವರಿಗೆ ದೇವಾಲಯವನ್ನು ಕಟ್ಟಿಸಿ ವಿರೂಪಾಕ್ಷದೇವರ ಪ್ರತಿಷ್ಠೆಯನ್ನು ಮಾಡಿ ಆ ದೇವರ ನೈವೇದ್ಯ ಪೂಜೆ ಪುನಸ್ಕಾರ ನಿತ್ಯ ಸೇವೆಗಳಿಗೆ ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ದೇವಕಾರ್ಯಕ್ಕೆ ದಾನ ನೀಡಿದ ವೃತ್ತಿ-೧ರಲ್ಲಿ ಪುಷ್ಪ ಫಲೋಪಾಹಾರಗಳಿಗೆ ತೋಟವಾಗಿ ಮಾಡಿಸಿ ಮಾವು, ಹಲಸು, ನೇರಿಲೆ, ಸಂಪಿಗೆ ಮುಂತಾದ ನಾನಾ ವೃಕ್ಷಗಳನ್ನು ನೆಡಿಸಿ ಸಮರ್ಪಿಸಿದ ಕ್ಷೇತ್ರ ನಾಗುಳ ಅಗ್ರಹಾರದ ಮಹಾಜನರು ವಿಶೇಷ ಪೂಜೆಗಾಗಿ ಧಾರಾಪೂರ್ವಕವಾಗಿ ಸಮರ್ಪಿಸಿದ ವೃತ್ತಿ-೧, ಉಭಯ ವೃತ್ತಿ-೨ ತೋಟದ ಕ್ಷೇತ್ರ ನಾಗುಳವನೂ ಶ್ರೀ ವಿರೂಪಾಕ್ಷ ದೇವರ ಶ್ರೀಕಾರ್ಯಕ್ಕೆ ದಾನ ನೀಡಿದರು ಎಂದು ದಾಖಲಿಸಿದೆ.[೫೨] ಇದೇ ದೇವಾಲಯದ ಮಂಟಪದಲ್ಲಿಯ ಮತ್ತೊಂದು ಕಂಬದಲ್ಲಿಯ ಸಂಸ್ಕೃತ ಶಾಸನವು ಪಕ್ಕದ ಕಂಬದಲ್ಲಿಯ ಕನ್ನಡ ಶಾಸನದ ನಕಲು ಆಗಿದೆ.[೫೩]

ಇದೇ ತಾಲ್ಲೂಕಿನ ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆ ಕಟ್ಟೆಯ ಬಳಿಯಿರುವ ೧೫೩೯ರ ಶಾಸನವು ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಇದ್ದ ಬಯಕಾರ ರಾಮಪ್ಪಯ್ಯನು ಚಿನತಿಮಾಪುರವೆಂದು ಪ್ರತಿನಾಮವಾದ ಮಗಿಮಾವಿನಹಳ್ಳಿ ಅಗ್ರಹಾರ ಹಾಗೂ ಅಚ್ಯುತಮಾಪುರವೆಂದು ಪ್ರತಿನಾಮವಾದ ಹುಲಿಗುಂಟಾ ಅಗ್ರಹಾರ ಹಾಗೂ ತಿಮ್ಮಪುರ ಎಂಬ ಅಗ್ರಹಾರಗಳನ್ನು ಪೆದತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳನ್ನು ಈ ದೇವಾಲಯಗಳ ಪೂಜೆ ಪುನಸ್ಕಾರಕ್ಕಾಗಿ ಹೊಳಗುಂದಿಯನ್ನು ದಾನ ನೀಡಿದಂತೆ ತಿಳಿದುಬರುವುದು.[೫೪]

ತಾರಾನಗರ ಗ್ರಾಮದ ನಾರಿಹಳ್ಳ ಯೋಜನೆಯ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ತಾಮ್ರ ಶಾಸನವು ಪೊನ್ನಗುಂದೆ-೩೦ರಲ್ಲಿರುವ ಗಂಜಿಯಪಾಲ ಗ್ರಾಮದಲ್ಲಿಯ ೩೦೦ ನಿವರ್ತ್ತನ ಭೂಮಿಯನ್ನು ಮಕರ ಸಂಕ್ರಾಂತಿಯಂದು, ಗೃಹಾಮಾತ್ಯ ಮುದ್ದಿಮಾರ್ಯನಿಗೆ ವಿಲ್ವೊಲ-ವಿಷಯದೊಳಗಿನ ಪೊನ್ನಗುಂದ-೩೦ ರೊಳಗಿನ ವೇಹೂರ ಅಗ್ರಹಾರದಲ್ಲಿಯ ತ್ರೈಪುರುಷ ದೇವಾಲಯದಲ್ಲಿ ನಡೆಯುವ ಪೂಜೆ, ಪುನಸ್ಕಾರಗಳಿಗೆ, ಜೀರ್ಣೋದ್ಧಾರಕ್ಕೆ ಮತ್ತು ಅದೇ ದೇವಸ್ಥಾನದಲ್ಲಿಯ ೨೦೦ ವಿದ್ಯಾರ್ಥಿ ಮತ್ತು ವಿವಿಧ ಶಾಸ್ತ್ರಗಳ ೫ ಶಿಕ್ಷಕರ ಭೋಜನಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ.[೫೫] ಇದೇ ಸ್ಥಳದಲ್ಲಿ ದೊರೆತ ಮತ್ತೊಂದು ತಾಮ್ರ ಶಾಸನವು, ಪೆಸಳ ಹನುಮ ಅಥವಾ ಅಮಿತಯ್ಯ - ದಂಡಾನಾಯಕನು ಕಲ್ಕಣಿ ನಾಡಿನಲ್ಲಿರುವ ಶ್ರೀಪುರ ಅಗ್ರಹಾರವನ್ನು ಹೊಯ್ಸಳ ಅರಸ ವೀರಬಲ್ಲಾಳನಿಂದ ೨೦ ಗದ್ಯಾಣಗಳ ತೆರಿಗೆ ಕೊಡಲು ಒಪ್ಪಿದ ನಂತರ, ಕಟ್ಟುಗುತ್ತಗೆ ಪಿಂಡದಾನವಾಗಿ ಪಡೆದದ್ದನ್ನು ತಿಳಿಸುತ್ತದೆ. ಈತನು ಗ್ರಾಮದ ಮಧ್ಯದಲ್ಲಿ ತ್ರಿಕೂಟ ದೇವಸ್ಥಾನ ಕಟ್ಟಿಸಿ ಅಮೃತೇಶ್ವರ, ವಾಮೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠಾಪಿಸಿದನು. ಈತನು ದೇವಸ್ಥಾನದ ಜೀರ್ಣೋದ್ಧಾರ ಮತ್ತು ದೇವರ ಸೇವೆಗೆ ಕೊಂಡಕ-ಸೀವೂರ ಗ್ರಾಮವನ್ನು ಅರಸನ ಮುಖಾಂತರ ವಜ್ರೇಶ್ವರ ಮತ್ತು ಸೋಮನಾಥ ದೇವರ ಸನ್ನಿಧಿಯಲ್ಲಿ ನೀಡಿದನು ಎಂದು ಉಲ್ಲೇಖಿಸುವುದು.[೫೬]

೨. ಗ್ರಾಮ ನಿರ್ಮಾಣ

ದೇವಾಲಯಗಳ ಪೂಜೆ ಪುನಸ್ಕಾರಕ್ಕಾಗಿ, ಜೀರ್ಣೋದ್ಧಾರಕ್ಕಾಗಿ, ದೇವಾಲಯದ ಕೆಲಸ ಮಾಡಿದ್ದಕ್ಕಾಗಿ, ವಿದ್ಯಾರ್ಥಿ ಮತ್ತು ಶಿಕ್ಷಕರ ಭೋಜನಕ್ಕೆ, ದೇವರ ಅಂಗರಂಗ ಭೋಗಕ್ಕೆ, ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ಹೀಗೆ ಅನೇಕ ಕಾರಣಗಳಿಗಾಗಿ ಗ್ರಾಮಗಳನ್ನು ದಾನ ನೀಡುತ್ತಿದ್ದ ಬಗ್ಗೆ ಶಾಸನಗಳು ದಾಖಲಿಸುತ್ತವೆ. ಇಂತಹ ಗ್ರಾಮ ದಾನದ ಉಲ್ಲೇಖ ನೀಡುವ ಶಾಸನಗಳು ಸಂಡೂರು ತಾಲ್ಲೂಕಿನಲ್ಲಿ ಇದ್ದು ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮದ ನಾರಿಹಳ್ಳ ಯೋಜನೆ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ಕ್ರಿ.ಶ.೧೦೪೭ರ ತಾಮ್ರ ಶಾಸನವು[೫೭] ಈ ತಾಲ್ಲೂಕಿನಲ್ಲಿ ಕಾಣಸಿಗುವ ಮೊದಲ ಗ್ರಾಮದಾನದ ಉಲ್ಲೇಖವನ್ನು ನೀಡುವ ಶಾಸನವಾಗಿದೆ. ಇದರಲ್ಲಿ ಪೊನ್ನುಗುಂದೆ-೩೦ ರಲ್ಲಿರುವ ಗಂಜಿಯಪಾಲ ಎಂಬ ಗ್ರಾಮದಲ್ಲಿಯ ೩೦೦ ನಿವರ್ತ್ತನ ಭೂಮಿಯನ್ನು ಮಕರ ಸಂಕ್ರಾಂತಿಯಂದು ವಸಿಷ್ಠಗೋತ್ರದ ಬಹ್ವೃಚ ಶಾಖಾದ ಬ್ರಹ್ಮಚಾರಿಯಾದ ಸಾಯಿಮಾರ್ಯನ ಮೊಮ್ಮಗನೂ, ಕೇಸಿಮಾರ್ಯನ ಮಗನು ಆದ ಗೃಹಾಮಾತ್ಯ ಮುದ್ದಿಮಾರ್ಯನಿಗೆ ವಿಲ್ವೊಲ-ವಿಷಯದೊಳಗಿನ ಪೊನ್ನಗುಂದೆ - ೩೦ ರೊಳಗಿನ ವೇಹೂರ ಗ್ರಾಮದಲ್ಲಿ ಮುದ್ದಿಮಾರ್ಯನಿಂದಲೇ ನಿರ್ಮಿತವಾದ ತ್ರೈಪುರುಷ ದೇವಾಲಯದ ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಅರ್ಚನೆ ಮುಂತಾದ ಪೂಜೆ, ಪುನಸ್ಕಾರಗಳಿಗೆ, ಜೀರ್ಣೋದ್ಧಾರಕ್ಕೆ ಹಾಗೂ ಅದೇ ದೇವಸ್ಥಾನದಲ್ಲಿ ೨೦೦ ವಿದ್ಯಾರ್ಥಿಗಳು ಮತ್ತು ವಿವಿಧ ಶಾಸ್ತ್ರಗಳ ಐದು ಶಿಕ್ಷಕರ ಭೋಜನಕ್ಕೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಹಾಗೂ ಈ ಶಾಸನದಲ್ಲಿ ವೇಹೂರ ಗ್ರಾಮದ ಮೇರೆಯನ್ನು ಸೂಚಿಸಲಾಗಿದೆ. ಈ ಗ್ರಾಮದ ಪೂರ್ವದಲ್ಲಿ ಅರ್ಜುನ ವೃಕ್ಷ ತಟಾಕದ ಪೂರ್ವ ದಿಕ್ಕಿಗೆ ಕುವ್ವ(ಬ್ಬ) ಕಂಥಾರಿಕ ಸಮೀಪ ನಿಖಾತ ಪಾಷಾಣಃ, ಆಗ್ನೇಯಕ್ಕೆ ಮಹಾನಿಖಾತ ಪಾಷಾಣ, ದಕ್ಷಿಣಕ್ಕೆ ಕಂಥಾರಿಕಗುಲ್ಮ ಸಮೀಪ ನಿಖಾತ ಪಾಷಾಣ, ನೈಋತ್ಯಕ್ಕೆ ಖದಿರ ವಾಟಿಕಾ ಸೀಮೆ, ಪಾಷಾಣ ಪುಂಜಃ, ಪಶ್ಚಿಮಕ್ಕೆ ವೇಹೂರು ಗ್ರಾಮ ಸೀಮೆ, ವಾಯುವ್ಯಕ್ಕೆ ಆದಿತ್ಯೋಪಾಧ್ಯಯ ತಟಾಕ, ಉತ್ತರಕ್ಕೆ ವೇಹೂರ ಗ್ರಾಮದ ಸಂಗಮಗ್ರಾಮ, ಈಶಾನ್ಯಕ್ಕೆ ಕೃಷ್ಣ ಬವ್ವುಲಾ ಸಮೀಪ ನಿಖಾತ ಪಾಷಾಣ ಮುಂತಾದವುಗಳು ಪೂರ್ವ ಪ್ರಸಿದ್ಧವಾಗಿದ್ದವು ಎಂದು ಉಲ್ಲೇಖಿಸುವುದು.

ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಮಂಟಪದಲ್ಲಿರುವ ಶಾಸನವನ್ನು "ಕರ್ನಾಟಕ ಶಾಸನಗಳು ಸಂಪುಟ-೨, ಬಳ್ಳಾರಿ ಜಿಲ್ಲೆಯ ಶಾಸನಗಳು" ಎಂಬ ಗ್ರಂಥದಲ್ಲಿ ಕುಮಾರಸ್ವಾಮಿ ದೇವಸ್ಥಾನದ ಮಂಟಪದಲ್ಲಿ ನಿಲ್ಲಿಸಿದ ಶಾಸನ ಎಂದು ತಪ್ಪಾಗಿ ಉಲ್ಲೇಖಿಸಲಾಗಿದೆ. ಕ್ರಿ.ಶ.೧೨೦೭ರ ಈ ಶಾಸನವು ಯಾದವ ವಂಶದ ಸ್ತುತಿಯಿಂದ ಪ್ರಾರಂಭವಾಗಿದೆ. ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕ ಯಾದವ ಕುಲಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ ಮಲೆ ರಾಜರಾಜಂ ಮಲಪರೊಳುಗಂಡ ಕದನ ಪ್ರಚಂಡನ ಸಹಾಯ ಶೌರ್ಯ್ಯ ಶನಿವಾರ ಸಿದ್ಧಿ ಗಿರಿದುರ್ಗಮಲ್ಲ ನಿಶ್ಶಂಕ ಪ್ರತಾಪ ಚಕ್ರವರ್ತಿ ಹೊಯ್ಸಳರಾಯ ವೀರಬಲ್ಲಾಳದೇವ ಅಖಂಡ ಭೂಮಂಡಳ ನಿಜಭುಜದಂಡ ಮಂಡಿತ ಮಂಡಳ ಆಗ್ರಾದಿನುಂಡಿಗೆ ಸಾಧ್ಯಂ ಮಾಡಿ ತುಂಗಾಭದ್ರನದಿ ತೀರದ ಮಧುವನದ ನೆಲೆ ವೀಡಿನಲ್ಲಿದ್ದು ರಾಜ್ಯಭಾರ ಮಾಡುತ್ತಿದ್ದಾಗ, ವೀರಬಲ್ಲಾಳ ದೇವನ ಆಜ್ಞೆಯ ಮೇರೆಗೆ ಆತನ ಮಹಾ ಪ್ರಧಾನ ಮತ್ತು ಸೇನಾಪತಿಯಾದ ಮಹಾದೇವದಂಡನಾಯಕನು ಕ್ರೋಧನ ಸಂವತ್ಸರದ ಫಾಲ್ಗುಣ ಮಾಸದ ಬಹುಳ ಅಮಾವಾಸ್ಯೆ, ವಡ್ಡವಾರದ ಸೂರ್ಯಗ್ರಹಣಕ್ಕೆ ಸರಿಯಾದ ಕ್ರಿ.ಶ.೧೨೦೭ ಶನಿವಾರದಂದು

ಹಿಂದೆ ರಾಷ್ಟ್ರಕೂಟ ವಂಶದ ಕೃಷ್ಣರಾಜನು ಸ್ವಾಮಿದೇವರಿಗೆ ನೀಡಿದ್ದ ಕೆರೆಯಪಳ್ಳಿ ಗ್ರಾಮವನ್ನು ಪುನರ್ದತ್ತಿಯಾಗಿ ನೀಡುತ್ತಾನೆ. ಈ ಗ್ರಾಮ ದತ್ತಿಯನ್ನು ಆ ಸ್ಥಳದ ವಿಷ್ಣುಕರ ಬ್ರಹ್ಮಚಾರಿಯು ಗುಹೇಶ್ವರನಿಗೆ ನೈವೇದ್ಯಾರ್ತ್ಥವಾಗಿ ಸ್ವೀಕರಿಸಿದನು. ಈ ವಿಷ್ಣುಕರ ಬ್ರಹ್ಮಚಾರಿ ಪಡೆದ ಈ ಗ್ರಾಮದ ಮೇರೆಯನ್ನು ಈ ಶಾಸನದಲ್ಲಿ ಸೂಚಿಸಿ ಅದರ ಮಧ್ಯದ ಪ್ರದೇಶವೆಲ್ಲ ಕುಮಾರಸ್ವಾಮಿಯದೆಂದು ಹೇಳುತ್ತದೆ. ಕೆರೆಯಪಳ್ಳಿಯ ಪಶ್ಚಿಮಕ್ಕೆ ಆ ಊರಿನಿಂದ ಹೊಂನ್ನೊರೆಯಪಳ್ಳಿಗೆ ಹೋಗುವ ಕಾಲ್ದಾರಿಯಿಂದ ದಕ್ಷಿಣಕ್ಕೆ ಇರುವ ಬೆಳ್ಳುಪ್ಪೆವರೆಗೆ ಈ ಕುಪ್ಪೆಯಿಂದ ಉತ್ತರಕ್ಕೆ ಲಚ್ಚೆಯನ ಕಟ್ಟೆ ಈ ಊರಿನ ಉತ್ತರ ಸೀಮಾ ಪ್ರಮಾಣ ಸಂಡೂರಿನಿಂದ ದಕ್ಷಿಣಕ್ಕೆ ಇರುವ ಒರವಿನಕುಪ್ಪೆ, ಈ ಕುಪ್ಪೆಯಿಂದ ಪೂರ್ವಕ್ಕೆ ಕಡವಿನಬೆಂಚೆ, ಈ ಊರ ಪೂರ್ವಸೀಮಾ ಪ್ರಮಾಣ ದಕ್ಷಿಣ ಮುಂತಾಗಿ ಹಬ್ಬಿದ ದೇವಗಿರಿ. ಈ ಎಲ್ಲಾ ಭೂ ಭಾಗ ಕುಮಾರಸ್ವಾಮಿ ದೇವಾಲಯಕ್ಕೆ ಸಂಬಂಧಪಟ್ಟದ್ದು. ಇದನ್ನು ಯಾರಾದರೂ ಅಪಹರಿಸಿ ಸ್ವಾರ್ಥಕ್ಕೆ ಬಳಸಿಕೊಂಡವರು ಗೋವುಗಳನ್ನು ಮತ್ತು ಬ್ರಾಹ್ಮಣರನ್ನು ಕೊಂದ ಪಾಪಿಗಳು ಅಂತವರು ನರಕಕ್ಕೆ ಹೋಗುವರೆಂದು ಶಾಸನ ಎಚ್ಚರಿಸಿದೆ. ಒಟ್ಟಾರೆಯಾಗಿ ವೀರಬಲ್ಲಾಳನ ಆಜ್ಞೆಯ ಮೇರೆಗೆ ಆತನ ಮಹಾಪ್ರಧಾನ ಮತ್ತು ಸೇನಾಪತಿಯಾದ ಮಹಾದೇವ-ದಂಡನಾಯಕನು ರಾಷ್ಟ್ರಕೂಟ ವಂಶದ ಕೃಷ್ಣರಾಜನು ವಿಶೇಷ ಭಕ್ತಿ ಸಮೇತ ಷಣ್ಮುಖ ದೇವರ ನಿತ್ಯ ಸೇವೆಗೆ ನೈವೇದ್ಯಾರ್ತ್ಥವಾಗಿ ನೀಡಿದ್ದ ಪ್ರೀತ ತಟಾಕ ಎಂಬ ಗ್ರಾಮವನ್ನು ಪುರ್ನದತ್ತಿ ಮಾಡಿಕೊಡುತ್ತಾನೆ. ಈ ಗ್ರಾಮವನ್ನು ಶಾಸನದಲ್ಲಿ 'ಕೆರೆಯಪಳ್ಳಿ' ಎಂದು ಉಲ್ಲೇಖಿಸಿದೆ. ಇಂದು ಅದೇ ಗ್ರಾಮವನ್ನು 'ಕೆರ್ನಳ್ಳಿ' ಎಂದು ಕರೆಯಲಾಗುತ್ತಿದೆ. ಈ ಗ್ರಾಮದಿಂದ ಅರಸರಿಗೆ ಸಲ್ಲುತ್ತಿದ್ದ ತೆರಿಗೆ, ಆಯ ಮೊದಲಾದವು ಕುಮಾರಸ್ವಾಮಿ ದೇವಾಲಯಕ್ಕೆ ಸಲ್ಲುವಂತೆ ಮಾಡಿ ಈ ಗ್ರಾಮವನ್ನು ಪುರ್ನದತ್ತಿ ಮಾಡಿಕೊಡುತ್ತಾನೆ.[೫೯] ಹೀಗೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ಕ್ಷೇತ್ರ ಪವಿತ್ರ ಕ್ಷೇತ್ರವಾಗಿ ಮುಂದುವರೆದುಕೊಂಡು ಬಂದಿದೆ. ಹಾಗೂ ರಾಷ್ಟ್ರಕೂಟರ IIನೆಯ ಕೃಷ್ಣನ ಕಾಲಕ್ಕಾಗಲೇ ಸಂಡೂರಿನ ಷಣ್ಮುಖಸ್ವಾಮಿ ದೇವಾಲಯ ಅತ್ಯಂತ ಪ್ರಸಿದ್ಧಿ ಪಡೆದಿತ್ತು ಎಂಬುದು ಈ ಶಾಸನದಿಂದ ವ್ಯಕ್ತವಾಗುತ್ತದೆ.

ಇದೇ ಸ್ಥಳದಲ್ಲಿ ದೊರೆತ ಮತ್ತೊಂದು ಕ್ರಿ.ಶ.೧೨೨೪ರ ತಾಮ್ರ ಶಾಸನವು[೬೦] ಹೊಯ್ಸಳ ವಂಶಾವಳಿಯಿಂದ ಪ್ರಾರಂಭವಾಗುತ್ತದೆ. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ದ್ವಾರವತಿ ಪುರವರಾಧೀಶ್ವರ ಯಾದವ ಕುಳಾಂಬರದ್ಯುಮಣಿ ಸಮ್ಯಕ್ತ್ವ ಚೂಡಾಮಣಿ ಮಲೆ ರಾಜರಾಜನ ಅಪ್ರಮೀತ ತೇಜ ಮಲಪರೊಳುಗಂಡ ಗಂಡಭೇರುಂಡನ ಸಹಾಯ ಶೂರ ಮಂದರ ಧೀರ ಶನಿವಾರ ಸಿದ್ಧಿ ಶರಣಾಗತವಾರ್ದ್ಧಿ ಗಿರಿದುರ್ಗಮಲ್ಲ ವೈರಿಸಿರಸೆಲ್ಲ ಚಲದಂಕ ರಾಮನ ಅಹಿತ ಗಜಭೀಮ ಚೋಳರಾಯ ರಾಜ್ಯ ಉದ್ಧಾರಕ ಮಗರಾಧಿರಾಯ ಸೈನ್ಯ ಸಂಹಾರಕ ಚೂಳನಲ್ಲೂರಪುರ ಕಾಲಗ್ನಿರುದ್ರ ಆಳೂರ್ತ್ತಳದುರ್ಗನೀರ ದಲಯಾ ನಿಳ ದ್ರವಿಳ ಮಂಡಲ ನಿರ್ದ್ಧೂಮಧಾಮ ಬಾಣಾದವರೆಯ

ಗಜಘುಟಾ ಸಹಿತ ಸಪ್ತಾಂಗ ಗ್ರಹಣ ಭುಜ ಬಳಮಲ ನಿಶ್ಶಂಕ ಪ್ರತಾಪ ಚಕ್ರವರ್ತಿ ಹೊಯ್ಸಳ ಶ್ರೀವೀರ ನರಸಿಂಹದೇವರು ಹಿಂದೆ (ಪೂರ್ವ) ದಿಗ್ವಿಜಯದಲ್ಲಿ ಸಾಧಿಸಿದ ಆನೆ, ಕುದುರೆ, ರತ್ನ, ವಸ್ತು ವಿಸ್ತಾರಿತ ವಿಜಯಲಕ್ಷ್ಮಿ ವಿಳಾಸ ಸಮೇತ ನಿಜರಾಜಧಾನಿಯಾದ ದೋರಸಮುದ್ರದ ನೆಲೆವೀಡಿನಲ್ಲಿ ವಿನೋದದಿಂದ ರಾಜ್ಯವಾಳುತ್ತಿರಲು ತತ್ಪಾದಪದ್ಮೋಪ ಜೀವಿ ಶ್ರೀಮನ್ಮಹಾ ಪ್ರಧಾನಯಾದವರಾಯ ದಕ್ಷದಕ್ಷಿಣ ಭುಜದಂಡ ಪಗೆಮೆಚ್ಚೆಗಂಡರಾಯ ನರಸಿಂಹ ಪೆಸಳ ಹನುಮನು ವೀರ ವಿಜಯಲಕ್ಷ್ಮೀ ನಿತ್ಯ ನಿವಾಸನ ಅಮಿತಯ್ಯ ದಂಡನಾಯಕನು ಶ್ರೀವೀರ ಬಲ್ಲಾಳದೇವರ ಶ್ರೀಹಸ್ತದಿಂದ ದಾರಾ ಪೂರ್ವಕವಾಗಿ ಕಟ್ಟುಗುತ್ತಗೆ ಪಿಂಡಾದಾನ ಗದ್ಯಾಣ-೨೦ರ ಮೊದಲ ತಿರುವಂತು ಬಿಡಿಸಿದ ಕಲ್ಕಣಿ ನಾಡೊಳಗಿನ ಅಗ್ರಹಾರವಾದ ಶ್ರೀಪುರದ ಮಧ್ಯದಲ್ಲಿ ಕಟ್ಟಿಸಿದ ತ್ರಿಕೂಟ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ಶ್ರೀಮದಮೃತೇಶ್ವರದೇವರ, ವಾಮೇಶ್ವರದೇವರ, ಲಕ್ಷ್ಮೀನಾರಾಯಣ ದೇವರ ಅಂಗಭೋಗಕ್ಕೆ ರಂಗ ಪೂಜೆಗೆ ನಿತ್ಯ ನೈವೇದ್ಯಕ್ಕೆ ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕೆ ಎಂದೆಂದಿಗೂ ಸಲ್ಲುವಂತೆ ಪಾದಪೂಜೆಯನ್ನು ಮಾಡಿ ಶ್ರೀವೀರನಾರಸಿಂಹ ದೇವರ ಶ್ರೀಹಸ್ತದಿಂದ ಶ್ರೀವಜ್ರೇಶ್ವರ ದೇವರ ಸನ್ನಿಧಾನದಲ್ಲಿ ಶಕ ವರ್ಷ ೧೧೪೬ನೆಯ (೧೨೨೪) ತಾರಣ ಸಂವತ್ಸರದ ಪುಷ್ಯ ಶುದ್ಧ ಏಕಾದಶಿಯ ಆದಿತ್ಯವಾರದ ಉತ್ತರಾಯಣದ ಸಂಕ್ರಮಣದ ದಿನದಂದು ಕೊಂಡುಕಸೀವುರ ಎಂಬ ಗ್ರಾಮವನ್ನು ಸರ್ವಬಾಧಾ ಪರಿಹಾರಕ್ಕಾಗಿ ದಾನ ಬಿಟ್ಟ ಉಲ್ಲೇಖವಿದೆ.

ಈ ಗ್ರಾಮದ ಚತುಸ್ಸೀಮೆಯ ಪೂರ್ವದ ಹಂದಿಗೊಳದಿಂದ ದಕ್ಷಿಣದ ಹೊಂನರಳಿವರೆಗೆ, ಪಶ್ಚಿಮದ ಹಾದರಿಯೊಬ್ಬೆಯ ತವಸಿಯಲ್ಲಿಂದ ದಕ್ಷಿಣದ ಮರಗೂರ ದೇವದಾನದ ಕಲಲ್ಲಿಯವರೆಗೆ ಪಶ್ಚಿಮದ ಹುಂಗಿಯ ಕೆರೆಯ ಕೀಳ್ಬಯಲ ಮೂತೆ ವುಣಿಸೆಯಲ್ಲಿಂದ ಬಡುವಲಗುಂಡುಗಲ್ಲಿನವರೆಗೆ ಪಶ್ಚಿಮದ ಹೆರಗಿನ ಬಟ್ಟೆಯೊಳಗಣ ಸಾತಿಸೆಟ್ಟಿಯ ಕೊಳನಲ್ಲಿಂದಾ ಬಟ್ಟೆಯ ತಿಪ್ಪೂರ ಬಟ್ಟೆಯ ಕೂಡಲಲ್ಲಿಯವರೆಗೆ ಬಡಗಲರೆಯ ಮೇಗಣ ಬಿಲ್ವಾಣೆಯಲ್ಲಿಂದ ಬಡಗನಾಡು ಪಿರ್ದ್ದದ ರಾಸಿಗಲ್ಲಿನವರೆಗೆ, ಮೂಡಲ ಆನೆಗಲ್ಲಲ್ಲಿಂದ ಈಶಾನ್ಯದಡ್ಡಗಲ್ಲಿಯವರೆಗಿನ ಈ ಚತುಸ್ಸೀಮೆಯ ಒಳಗಿನ ಗ್ರಾಮದೊಳಗೆ ಡಣ್ಣಾಯಕರ ಪ್ರಭು ಸಾನಿಧ್ಯದಲ್ಲಿ ವೆಗ್ಗಡೆಯ ಹಳ್ಳಿಯನ್ನು ಡಣ್ಣಾಯಕನ ಕೆರೆಯನ್ನು ಎಂದೆಂದಿಗೂ ಮಾನ್ಯವಾಗಿ ಮಹಾಜನಗಳು ಈ ಧರ್ಮವು ಉತ್ತರೋತ್ತರಾಭಿ ವರ್ಧಮಾನವಾಗಿ ಸಲ್ಲಲ್ಲಿ ಎಂದು ಈ ಗ್ರಾಮವನ್ನು ದಾನಕೊಟ್ಟಂತೆ ತಿಳಿಸುವುದು.

ಹಂಪೆಯ ರಾಮಚಂದ್ರ (ಹಜಾರರಾಮ) ದೇವಸ್ಥಾನದಲ್ಲಿ ಈಶಾನ್ಯ ದಿಕ್ಕಿನ ಮಂಟಪದ ದಕ್ಷಿಣ ಗೋಡೆಯ ಮೇಲೆ (ನಕಾಶೆ NRX). ಕ್ರಿ.ಶ.೧೫೧೩ರ[೬೧] ವಿಜಯನಗರದ ಕೃಷ್ಣರಾಯನ ಆಳ್ವಿಕೆಯಲ್ಲಿ ಅರಸನು ತನ್ನ ತಂದೆ ನರಸಣ ನಾಯಕವೊಡೆಯ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ರಾಮಚಂದ್ರದೇವರ ಸೇವೆಗೆ ಕಳಸಾಪುರ ಮಾಗಣಿಯಲ್ಲಿ ವೊಳಕೋಟೆ ಗ್ರಾಮ, ಸೊಂಡೂರು ಸೀಮೆಯಲ್ಲಿ

ತಾಳೂರು ಗ್ರಾಮ, ನಾರಿಯ ಸೀಮೆಯಲ್ಲಿ ಯಿಟ್ಟಿಗೆ ಗ್ರಾಮ, ಔಬಲದೇವ ಕಣಿವೆಯ ಹತ್ತಿರ ಮುದ್ದಾಪುರ ಗ್ರಾಮ, ಕೊಪಣ ಸೀಮೆಯಲ್ಲಿರುವ ಕುಟಕನಹಳ್ಳಿ ಮತ್ತು ನಾರಿಯ ಸೀಮೆಯಲ್ಲಿರುವ ಜಾಯನೂರ ಗ್ರಾಮಗಳನ್ನು ದಾನ ಮಾಡಿದನೆಂದು ತಿಳಿಸುವುದು.

ಹಂಪೆಯ ಕೃಷ್ಣ ದೇವಸ್ಥಾನದ ಮುಂದಿರುವ ಈ (NLN) ಶಾಸನವು ಕ್ರಿ.ಶ.೧೫೫೧ರ[೬೨] ವಿಜಯನಗರದ ಕೃಷ್ಣರಾಯನ ಆಳ್ವಿಕೆಯಲ್ಲಿ ಈಶ್ವರ ಸಂವತ್ಸರ, ಮಾರ್ಗಶಿರ ಬಹುಳ ೫ ರಂದು ರಾಯದುರ್ಗ ಸೀಮೆಯಲ್ಲಿರುವ ಬ್ರಹ್ಮಸಮುದ್ರ ಗ್ರಾಮವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ದೇವರ ಪ್ರತಿಷ್ಠಾಕಾಲದಲ್ಲಿ ಕೊಟ್ಟ ಮುದಲಾಪುರ ಗ್ರಾಮವನ್ನು ಪ್ರಮಾಧಿ ಸಂವತ್ಸರ, ಕಾರ್ತಿಕ ಶುದ್ಧ ೧೧ ರಂದು ತಿರುಮಲದೇವಿ ಪಟ್ಟಣ ಮಾಗಣೆಗೆ ಸೇರಿಸಿದ ವಿಷಯವನ್ನು ತಿಳಿಸುತ್ತದೆ. ಈ ಗ್ರಾಮದ ಬದಲಾಗಿ ರಾಮಾಪುರ ಗ್ರಾಮವನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ತೊಗಲಗಲ್ಲು ಗ್ರಾಮವನ್ನು ಅನಂತಶಯನ ದೇವರಿಗೆ ಪುನಃ ದಾನ ಕೊಟ್ಟಿದ್ದನ್ನು ಮತ್ತು ಮೊದಲು ಅನಂತಶಯನ ದೇವರಿಗೆ ದಾನ ಕೊಟ್ಟ ಸೊಂಡೂರು ಸೀಮೆಯೊಳಗಿನ ಬೂದಿಗುಪ್ಪೆ ಗ್ರಾಮವನ್ನು ನಂತರ ಬಾಲಕೃಷ್ಣ ದೇವರಿಗೆ ದಾನ ಕೊಟ್ಟಿದ್ದನ್ನು ತಿಳಿಸುವುದು. ಅನೇಕ ಬ್ರಾಹ್ಮಣರಿಗೆ ಭೂಮಿದಾನ ಮಾಡಿದ ವಿಷಯದ (ವಿವರಗಳಿವೆ) ದಾಖಲೆಯೂ ಇದೆ. ಅಲ್ಲದೆ ಕೃಷ್ಣದೇವಸ್ಥಾನದ ಮುಂದೆ ಸಣ್ಣ ಗುಡಿಯ ಗೋಡೆಯ ಮೇಲಿನ ಶಾಸನದಲ್ಲಿ ತಿಳಿಸಿದ ಗ್ರಾಮಗಳನ್ನೇ ದಾನ ಮಾಡಿದ ವಿಷಯದ ಬಗ್ಗೆಯೂ ಈ ಶಾಸನ ಉಲ್ಲೇಖಿಸಿದೆ.

ಸೋವೇನಹಳ್ಳಿ ಗ್ರಾಮದ ಹನುಮಂತ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಮೇಲೆ ಉತ್ತರ ಮುಖದಲ್ಲಿನ ಶಾಸನವು[೬೩] ಚಪ್ಪರಹಳ್ಳಿ ಮತ್ತು ಅಣ್ಣಿಕುಂಟೆ ಗ್ರಾಮಗಳನ್ನು ಮಾರೋಜನಿಗೆ ಶಿಲ್ಪಿ ಉದ್ಯೋಗಕ್ಕಾಗಿ ವಂಶ ಪಾರಂಪರ್ಯವಾಗಿ ದಾನ ನೀಡಿದ್ದನ್ನು ಉಲ್ಲೇಖಿಸುವುದು.

ಬೊಮ್ಮಗಟ್ಟ ಗ್ರಾಮದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾದ ಕ್ರಿ.ಶ.೧೪೯೦ರ ಕಾಲಾವಧಿಯ ಕೂಟ ತಾಮ್ರಶಾಸನವು ದಾಸ ಶ್ರೇಷ್ಠರಾದ ವ್ಯಾಸರಾಯರ ಇತಿಹಾಸದ ಬಗ್ಗೆ ಮಾಹಿತಿಯನ್ನೊದಗಿಸುತ್ತದೆ. ಈ ಶಾಸನವು ದಾನ ಶಾಸನವಾಗಿದ್ದು, ಈ ದಾನವನ್ನು ವ್ಯಾಸರಾಯರು ಹಂಪಿಯಲ್ಲಿದ್ದಾಗ ವಿಜಯನಗರ ರಾಜ್ಯಕ್ಕೆ ಸಲ್ಲುವ ಸೊಂಡೂರು ಪ್ರಾಂತ್ಯದ ತುಂಬರಗುದ್ದಿಗೆ ವ್ಯಾಸರಾಯಪುರವೆಂದು ಹೆಸರು ಬದಲಾಯಿಸಿ ವ್ಯಾಸರಾಯರಿಗೆ ದಾನ ನೀಡಿದ ವಿವರವಿದೆ. ಈ ದಾನವನ್ನು ನೀಡಿದ ಸಾಳ್ವ ಮನೆತನದ ಒಂದನೇ ನರಸಿಂಹನನ್ನು ಶಾಸನವು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀಸಾಳೋನರಸಿಂಗರಾಯ ಎಂದು ಉಲ್ಲೇಖಿಸಿದೆ. ಹಾಗೂ ವ್ಯಾಸರಾಯರನ್ನು ಹಲವು ಬಿರುದುಗಳಿಂದ ಸ್ತುತಿಸಿದೆ.

ವ್ಯಾಸರಾಯರ ಮಠಕ್ಕೆ ಈ ಗ್ರಾಮವನ್ನು ದಾನ ನೀಡುವುದರ ಜೊತೆಗೆ ದೊಡ್ಡಕೆರೆಯನ್ನು ಕಟ್ಟಿಸಿ ಗ್ರಾಮದ ಗವುಡ ಶಾನಭೋಗ ಮತ್ತು ಸಮಸ್ತ ಪ್ರಜೆಗಳಿಗೆ ಅರ್ಪಿಸಲಾಗಿದೆ. ಈ ಕೆರೆಯ ಹಿಂದೆ ಗ್ರಾಮದ

ಉತ್ಪತ್ತಿಯನ್ನು ಅನೇಕ ಕುಲಕಸುಬಿನವರಿಗೆ ಅಂದರೆ, ನಾಲ್ಕು ಯತ್ತಿನ ಗಳೆವು ೧ಕ್ಕೆ ನಿತ್ಯಗುತ್ತಿಗೆಗಳ ಬೇಡಿಕೆ ಗ ೧೯ ಲಕ್ಕಯ್ಯ ಗೆ ೫ದ ಪ್ರಕಾರ ಪ್ರಜೆಗಳಿಗೆ ಮತ್ತು ವ್ಯಾಸರಾಯರ ಮಠದ ದಾಸೋಹಕೆ ಒಂದು ಖಂಡುಗ ದವಸ, ಗಳೆ ೧ ಕೊಟ್ಟು ನಡೆಸುವವರಿಗೆ, ಚಕ್ಕು ಬಂದಿಯನ್ನು ಮಾಡಿಕೊಟ್ಟ ಮಾನ್ಯದ ವಿವರ ಸಾದರ ಚಿಕಂಣ, ಗವುಡನ ಕುಮಾರ ನಾರಾಯಣನಿಗೆ ನಾಲ್ಕು ಯತ್ತಿನ ಗಳೆವು ೨, ವೆಂಕರಸ್ಯನ ಕುಮಾರ ತಿಂಮರಸಯಗೆ ನಾಲ್ಕು ಯತ್ತಿನ ಗಳೆ ೨, ತಳವಾರ ಮುಡಿಗೊಂಡಲ ಚೆಂಗಿನಾಯ್ಕಗೆ ನಾಲ್ಕು ಯತ್ತಿನ ಗಳೆ ೨, ಕಂಮಾರ ಮಲೊಜಗೆ ಗಳೆ ೧, ಬಡಗಿ ದೊರೊಜಗೆ ಗಳೆ ೧, ಅಕ್ಕ ಸಾಲಿಗ ವೊರೊಜಗೆ ಗಳೆ ೦೧೧, ಬಾರಿಕ ಕೊಂಡಗೆ ಗಳೆ ೧, ಅಗಸ ನಾಗರಾಜಗೆ ಗಳೆ ೦೧೧, ಕ್ಷೌರಿಕ ತಿಪ್ಪಗೆ ಗಳೆ ೦೧೧, ಬೇಗಾರ ತಿಮ್ಮಗೆ ಗಳೆ ೧, ಕುಂಬಾರ ತಿಮ್ಮಗೆ ೦೧೧, ಮಾದಿಗ ಯಲ್ಲಜಗಲಿಗೆ ಗಳೆ ೧ ಈ ಎಲ್ಲಾ ಕುಲಕಸುಬಿನ ಜನಾಂಗದವರಿಗೆ ಇಂತಿಷ್ಟು ಆದಾಯವನ್ನು ನೀಡಲಾಗಿದ್ದು ಇದಕ್ಕೆ ಯಾರಾದರೂ ತಪ್ಪಿದರೆ ಮಾತಂಗ, ಮಾಲ್ಯವಂತ, ಋಷ್ಯಶೃಂಗ, ಕಿಷ್ಕಿಂದ, ಪಂಪಾಕ್ಷೇತ್ರ ಈ ಪಂಚಕೋಶ ಮಧ್ಯದಲ್ಲಿ ಗೋವು ಬ್ರಾಹ್ಮಣರ ಕೊಂದ ಪಾಪಕ್ಕೆ ಹೋಗುವರೆಂದು ತಿಳಿಸಿರುವುದು ವಿಶೇಷವಾಗಿದೆ. ಕೊನೆಯಲ್ಲಿ ಹೆಚ್ಚು ಶಾಸನಗಳಲ್ಲಿ ಕಂಡುಬರುವಂತೆ 'ಸ್ವದತ್ತಾಂ ಪರದತ್ತಾಂ' ಎಂಬ ಶಾಪಾಶಯದಿಂದ ಶಾಸನವು ಮುಕ್ತಾಯವಾಗಿದೆ.

ಸಾಳುವ ನರಸಿಂಹನ ಅವಧಿಯ ಶಾಸನಗಳು ಹೆಚ್ಚು ದೊರೆತಿಲ್ಲ. ಈ ಶಾಸನದಲ್ಲಿ ಕಾಲವನ್ನು ಶಕ ೧೨೫೬ ಎಂದಿದ್ದು, ಕ್ರಿ.ಶ.೧೩೩೪ ಆಗುತ್ತದೆ. ಆದರೆ ಈ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿರಲಿಲ್ಲ. ಸಾಳುವ ನರಸಿಂಹನು ವಿಜಯನಗರ ಸಾಮ್ರಾಜ್ಯವನ್ನು ಆಳಿದ್ದು ಕೇವಲ ೧೪೮೫ ರಿಂದ ೧೪೯೧ರವರೆಗೆ ಆರು ವರ್ಷಗಳು ಮಾತ್ರ. ಈ ಶಾಸನದ ತೇದಿಯು ಅನುಮಾನಾಸ್ಪದವಾಗಿರುವುದರಿಂದ ಸಂವತ್ಸರದ ಆಧಾರದಿಂದ ಮಾತ್ರ ಇದರ ಕಾಲವನ್ನು ಕ್ರಿ.ಶ.೧೪೯೦ ಎಂದು ನಿರ್ಧರಿಸಬೇಕಾಗುತ್ತದೆ. ಶಾಸನದಲ್ಲಿ ಬಳಸಿರುವ ಲಿಪಿ, ಶ್ಲೋಕದಿಂದ ಶಾಪಾಶಯದವರೆಗೂ ಕನ್ನಡ ಭಾಷೆಯಲ್ಲಿದೆ. ಇದರ ಲಿಪಿಯನ್ನು ಗಮನಿಸಿದರೆ ಸು.ನೂರೈವತ್ತು ವರ್ಷಗಳಷ್ಟು ಹಿಂದೆ ಬರೆಸಲ್ಪಟ್ಟ ಲಿಪಿಯಂತೆ ಕಾಣಿಸುತ್ತವೆ. ಶಾಸನ ಬಳಸಲ್ಪಟ್ಟ ಲೋಹದ ಹಲಗೆಯ ಸ್ವರೂಪವನ್ನು ಗಮನಿಸಿದರೂ ಸಹ ಸು.ನೂರು ವರ್ಷಗಳಷ್ಟು ಹಿಂದಿನದಾಗಿ ಕಂಡುಬರುತ್ತದೆ.

ಒಟ್ಟಾರೆಯಾಗಿ ಈ ಶಾಸನವು ಸಾಳ್ವ ನರಸಿಂಗರಾಯನ ಹಾಗೂ ವ್ಯಾಸರಾಯರ ಕುರಿತು ಮಹತ್ವದ ಬೆಳಕನ್ನು ಬೀರುವ ದಾನ ಶಾಸನವಾಗಿದ್ದರೂ, ಈ ಶಾಸನ ಉಲ್ಲೇಖದ ಕಾಲದ ಪ್ರಕಾರ ಕ್ರಿ.ಶ.೧೩೩೪ ಆಗುತ್ತದೆ. ಈ ಶಾಸನದ ಸ್ವರೂಪ, ಬಳಸಿರುವ ಲಿಪಿ, ವ್ಯಾಕರಣ ದೋಷ, ಭಾಷೆ, ಶಾಪಾಶಯದ ನಂತರ ಶ್ರೀ ವಿರೂಪಾಕ್ಷ ಎಂಬ ಸಹಿ ಇಲ್ಲದಿರುವುದು, ಶಾಸನದ ಮೇಲ್ಭಾಗದಲ್ಲಿ ಯಾವ ಧರ್ಮದ ಚಿಹ್ನೆಗಳಿಲ್ಲದಿರುವುದು ಕೂಡ ಈ ಶಾಸನ ಕೂಟ ಶಾಸನವಾಗಿರಬೇಕು ಎಂಬ ಅನುಮಾನ ಉಂಟು ಮಾಡುತ್ತದೆ.

ಇದು ಕೂಟ ಶಾಸನವಾದರೂ ಸಹ ಇದರ ಸೃಷ್ಟಿಯ ಹಿಂದಿನ ಲಾಭ ಯಾರಿಗೆ? ಎಂಬುದು ಕುತೂಹಲ ಮೂಡಿಸುತ್ತದೆ. ಕೆರೆ ಕಟ್ಟಿಸಿ ದಾನ ನೀಡಿದ ವಿಷಯವಿದೆ. ಆದರೆ ಗೌಡ-ಶಾನಭೋಗರು ದಾನ ಸ್ವೀಕರಿಸಿದ್ದಾರೆ. ದಾನದ ವಿಷಯದಲ್ಲಿ ಅನೇಕ ಕುಲಕಸುಬಿನವರಿಗೆ ದಾನ ನೀಡಿದೆ. ಮಠದ ಗುರುಗಳ ಹೆಸರನ್ನು ಇಡಲಾಗಿದೆ. ಹೀಗಾಗಿ ಮಠ, ಗುರುಗಳು ಮತ್ತು ಗೌಡ ಶಾನಭೋಗರ ನಡುವೆ ಯಾರಿಗೆ ಇದರಿಂದ ಲಾಭವಾಗಿದೆಯೆಂದು ಯೋಚಿಸಿದರೆ ಇದರಿಂದ ಗೌಡ-ಶಾನುಭೋಗರ ವಂಶದವರೆ ಈ ಕೆಲಸ ಮಾಡಿರಬೇಕೆಂದು ಅನುಮಾನ ಉಂಟಾಗುತ್ತದೆ.

೩. ತೋಟದಾನ

ಸಂಡೂರು ತಾಲ್ಲೂಕಿನಲ್ಲಿ ಕಾಣಸಿಗುವ ದೇವಾಲಯಗಳ ನಿತ್ಯದ ಪೂಜೆ ಪುನಸ್ಕಾರಗಳಿಗಾಗಿ ಮತ್ತು ಇತರ ಸೇವೆಗಳಿಗಾಗಿ ನೀಡಿದಂತ ತೋಟದಾನಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಇದೇ ತಾಲ್ಲೂಕಿನ ಕುರೆಕುಪ್ಪೆ ಗ್ರಾಮದ ಈಶ್ವರ ದೇವಾಲಯದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನವು[೬೯] ಈ ತಾಲ್ಲೂಕಿನ ತೋಟದಾನದ ಉಲ್ಲೇಖವನ್ನು ನೀಡುವ ಮೊದಲ ಶಾಸನವಾಗಿದೆ. ಇದು ಕೃಷ್ಣರಾಯನ ಆಳ್ವಿಕೆಯಲ್ಲಿ ಅನಂತಸೇತುವೆಂದು ಪ್ರತಿನಾಮವಾದ ಕುರೆಕುಪ್ಪೆಯಲ್ಲಿ ವಸಿಷ್ಠಗೋತ್ರದ ದ್ರಾಹ್ಯಾಯಣ ಸೂತ್ರದ ಸಾಮಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಆ ದೇವರ ನೈವೇದ್ಯ ಪೂಜೆ ಪುನಸ್ಕಾರ ನಿತ್ಯ ಸೇವೆಗಳಿಗೆ ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ಆ ಜಾಗದಲ್ಲಿ ಮಾವು, ಹಲಸು, ನೇರಿಲೆ, ಸಂಪಿಗೆ, ಮುಂತಾದ ಮರಗಳನ್ನು ನೆಡಿಸಿ ತೋಟವಾಗಿ ಮಾರ್ಪಡಿಸಿ ದೇವಕಾರ್ಯಕ್ಕೆ ಈ ತೋಟವನ್ನು ದಾನ ನೀಡಿರುವುದು ಮಹತ್ವದ ವಿಷಯವಾಗಿದೆ.

೪. ಬಾವಿ ನಿರ್ಮಾಣ

ಹಿಂದೆ ಅಧಿಕಾರಿಗಳು, ಸಾಮಂತರುಗಳು ನಿತ್ಯದ ಬಳಕೆಗಾಗಿ ಕುಡಿವ ನೀರಿನ ಬಾವಿಗಳನ್ನು ತೋಡಿಸಿ, ಅವುಗಳನ್ನು ತಮ್ಮ ಹೆಸರಿನಲ್ಲಿ ಸಮಾಜದ ಕಾರ್ಯಕ್ಕಾಗಿ ಬಳಕೆಯಾಗಲಿ ಎಂಬ ಉದ್ದೇಶದಿಂದ ದಾನ ನೀಡುವ ಸಂದರ್ಭದಲ್ಲಿ ಶಾಸನಗಳನ್ನು ಬರಿಸಿ ದಾನ ನೀಡುತ್ತಿದ್ದರು. ಇಂತಹ ಶಾಸನಗಳು ಈ ತಾಲ್ಲೂಕಿನಲ್ಲಿಯೂ ಕಾಣುತ್ತೇವೆ. ಅವುಗಳಲ್ಲಿ ಒಂದಾದ ಈ ತಾಲ್ಲೂಕಿನ ಚಿಕ್ಕಕೆರೆ ಯಾಗಿನಹಳ್ಳಿ ಗ್ರಾಮದ ಕೆರೆಕಟ್ಟೆಯ ಬಳಿ ಇರುವ ಕ್ರಿ.ಶ.೧೫೪೯ರ ಶಾಸನವು[೬೬] ಅಚ್ಯುತದೇವರಾಯನ ಕೈಕೆಳಗಿನ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ಮಗನಾದ ಶಿಂಗಾಲಯ್ಯನ ಹೆಸರಿನಲ್ಲಿ ಬಾವಿ ತೋಡಿಸಿದ ಉಲ್ಲೇಖ ನೀಡುವುದು.

೫. ಕೆರೆ ನಿರ್ಮಾಣ

ಕೆರೆಗಳನ್ನು ಹಿಂದೆ ಸಾಗರ, ಸಮುದ್ರಕ್ಕೆ ಹೋಲಿಸುತ್ತಿದ್ದರು. ಇವು ಗ್ರಾಮದ ಜನ ಜಾನುವಾರುಗಳಿಗೆ, ವ್ಯವಸಾಯಕ್ಕೆ, ನಿತ್ಯದ ಹಲವಾರು ಚಟುವಟಿಕೆಗಳಿಗೆ ತುಂಬ ಉಪಯುಕ್ತವಾಗಿದ್ದು, ಈ ರೀತಿಯ ಕೆರೆಗಳನ್ನು ನಿರ್ಮಿಸುವುದರಿಂದ ಅಂತರ್ ಜಲ ಹೆಚ್ಚುವುದು ಎಂಬ ಕಾರಣದಿಂದಲೂ, ಪ್ರತಿ ಗ್ರಾಮಗಳಲ್ಲಿ ಒಂದು ಕೆರೆಯನ್ನು ಸಾಮಾನ್ಯವಾಗಿ ನಿರ್ಮಿಸುತ್ತಿದ್ದುದನ್ನು ಕಾಣುತ್ತೇವೆ. ಇಂತಹ ಶಾಸನೋಲ್ಲೇಖಿತ ಕೆರೆಗಳನ್ನು ಈ ತಾಲ್ಲೂಕಿನಲ್ಲಿಯೂ ಕಾಣುತ್ತೇವೆ. ಅವುಗಳಲ್ಲಿ ಶಾಸನೋಲ್ಲೇಖಿತ ಮೊದಲ ಕೆರೆ ಎಂದರೆ ಕ್ರಿ.ಶ.೧೫೩೯ರ ಅವಧಿಯ[೬೨] ವಿಜಯನಗರದ ಅಧಿಕಾರಿ ಬಯಕಾರ ರಾಮಪ್ಪಯ್ಯನಿಂದ ನಿರ್ಮಿಸಲ್ಪಟ್ಟ ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆಯಾಗಿದೆ. ಈ ಅವಧಿಯ (ಕ್ರಿ.ಶ.೧೫೩೯) ಅನೇಕ ಶಾಸನಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. ಚಿಕ್ಕಕೆರೆಯಾಗಿನಹಳ್ಳಿ, ಪೋತಲಕಟ್ಟೆ, ಚಿಲಕನಹಟ್ಟಿ, ಹಾರುವನಹಳ್ಳಿ ಹಾಗೂ ಚಿನತಿಮಾಪುರವೆಂದು ಪ್ರತಿನಾಮವಾದ ಮಗಿಮಾವಿನಹಳ್ಳಿ ಅಗ್ರಹಾರ, ಅಚ್ಯುತಮಾಪುರವೆಂದು ಪ್ರತಿನಾಮವಾದ ಹುಲಿಕುಂಟಾ ಅಗ್ರಹಾರ, ತಿಮ್ಮಪುರ ಅಗ್ರಹಾರ ಈ ಮುಂತಾದ ಗ್ರಾಮಗಳಲ್ಲಿನ ಶಾಸನಗಳು ತಿಳಿಸುವಂತೆ ಅಚ್ಯುತರಾಯನ ಕೈ ಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ತಂದೆ ತಿಮ್ಮರಸಯ್ಯ, ತಾಯಿ ಹಿರಿಯ ಲಕ್ಕರಸಮ್ಮ, ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ ತನ್ನ ತಮ್ಮ ಕೃಷ್ಣಪ್ಪ, ತನ್ನ ಮಗ ಶಿಂಗಾಲಯ್ಯ ಮುಂತಾದವರಿಗೆ ಪುಣ್ಯವಾಗಬೇಕೆಂದು ಗೋಪಿನಾಥ ದೇವಾಲಯ ಬಾಚೇಶ್ವರ, ಅಂಮೇಶ್ವರ, ಕೃಷ್ಣೇಶ್ವರ ಮೊದಲಾದ ದೇವಾಲಯಗಳನ್ನು ಶಿಂಗಾಲಯ್ಯನ ಹೆಸರಿನಲ್ಲಿ ಶಿಂಗಾಲಯ್ಯನ ಬಾವಿಯನ್ನು ತೋಡಿಸುತ್ತಾನೆ.

ಈತನು ಅಚ್ಯುತಮ್ಮಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪೆದ್ದಲಕ್ಕಸಮುದ್ರ, ಲಿಂಗಾಲಯ ತಟಾಕ, ವೆಂಕಟಯ್ಯ ತಟಾಕ, ಪೆದತಿಮ್ಮಸಮುದ್ರ ಮತ್ತು ಚಿನಬಾಚಸಮುದ್ರವೇ ಮೊದಲಾದವು ಇವರೆಲ್ಲರ ಹೆಸರಿನಲ್ಲಿ ಸು.೧೬ ಕೆರೆಗಳನ್ನು ಕಟ್ಟಿಸುತ್ತಾನೆ. ಇವನ ಕೈಕೆಳಗೆ ಅಧಿಕಾರಿ ನಮಶ್ಶಿವಾಯ ಎಂಬುವವನು ತಿಂಮಲಾಪುರದಲ್ಲಿ ಮಲ್ಲಿಕಾರ್ಜುನಾ ದೇವಾಲಯವನ್ನು ಕಟ್ಟಿಸುತ್ತಾನೆ. ಈ ಬಯಕಾರ ರಾಮಪ್ಪ ಸದಾಶಿವದೇವರಾಯನ ಕಾಲದಲ್ಲೂ ಇದ್ದು ಅನೇಕ ಕೆರೆಗಳನ್ನು ಕಟ್ಟಿಸುತ್ತಾನೆ. ತನ್ನ ಹೆಸರಿನಲ್ಲಿ ತನ್ನ ಹೆಂಡತಿಯ ಹೆಸರಿನಲ್ಲಿ ನೆಡು ತೋಪುಗಳನ್ನು ಹಾಕಿಸುತ್ತಾನೆ.

ಹೀಗೆ ಬಳ್ಳಾರಿ ಜಿಲ್ಲೆಯ ಈಗಿನ ಸಂಡೂರು ತಾಲ್ಲೂಕು, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಹೊಸಪೇಟೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಇಂದಿಗೂ ಇವನು ಕಟ್ಟಿಸಿದ ಕೆರೆ ಹಾಗೂ ದೇವಾಲಯಗಳನ್ನು ಕಾಣಬಹುದಾಗಿದೆ. ಈತನು ಸಂಗೀತದ ಮೇಲೆ ಒಂದು ಕೃತಿಯನ್ನು ರಚಿಸಿದ್ದು ತಿಳಿದುಬರುತ್ತದೆ. ಇದೇ ಶಾಸನವು ಮುಂದುವರಿದು ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ನೀಡಿದ್ದು ಅದರಂತೆ

ಕೊಂಡವೀಟಿಯ ಸಿಂಗಯ ಇವನ ಮಗ ಭಾವಯ ಮಂತ್ರಿ ಇವನ ಮಗ ರಾಮಮಂತ್ರಿ ಇವನ ಪತ್ನಿ ತೆಲಗಮಾಂಬ, ಇವರ ಮಗ ಪೆದತಿಮ್ಮಯ್ಯ, ಪತ್ನಿ ಲಕ್ಕಾಂಬಿಕ, ಇವರ ಮಗನೇ ರಾಮಪ್ಪಯ್ಯ ಹಾಗೂ ತಿಮ್ಮಮಂತ್ರಿ, ಸುರೀಂಧ್ರ, ಭಾಸ್ಕರ, ಚಮೂಪತಿ ಮತ್ತು ಭಾವಯ ಇವನ ಚಿಕ್ಕಪ್ಪಂದಿರಾಗಿದ್ದು, ರಾಜನ ಕೈ ಕೆಳಗೆ ಅನೇಕ ಹುದ್ದೆಗಳನ್ನು ಹೊಂದಿದ್ದ ವಿಷಯದ ಕುರಿತು ಉಲ್ಲೇಖ ನೀಡುವುದು.

ಇದೇ ತಾಲ್ಲೂಕಿನ ಹುಲಿಕುಂಟಾ ಗ್ರಾಮದ ಕೆರೆಯನ್ನು ಸಹ ಇದೇ ಅವಧಿಯಲ್ಲಿ ಈ ಅಧಿಕಾರಿಯಿಂದಲೇ ನಿರ್ಮಿಸಲ್ಪಟ್ಟಿದೆ. ಇದರ ನಂತರದ ಅವಧಿಯ ಕೆರೆ ಎಂದರೆ ಈ ತಾಲ್ಲೂಕಿನ ದರೋಜಿ ಗ್ರಾಮದ ಕೆರೆಯಾಗಿದೆ. ಈ ಗ್ರಾಮದ ಕೆರೆಯ ದಂಡೆಯ ಮೇಲೆ ನಿಲ್ಲಿಸಿದ ಪರ್ಶಿಯನ್ ಭಾಷೆಯ ಶಾಸನವು ಕೆರೆಯ ನೀರನ್ನು ಬಾಯಾರಿ ಬಂದ ಪ್ರಯಾಣಿಕರಿಗೆ ಗುರು ಮುಹಮ್ಮದ್‌ನ ಹೆಸರಿನಲ್ಲಿ ಹಂಚಬೇಕು ಎಂದು ತಿಳಿಸುತ್ತದೆ.[೬೮] ಆದರೆ ಈ ದರೋಜಿಯ ಕೆರೆಯನ್ನು ಸಿಂಗೆಯನಾಯಕನು ಅಥವಾ ಸಿಂಗನೆಂಬ ಸರದಾರನು ಕಟ್ಟಿಸಿದ್ದುದಾಗಿ ಕೈಫಿಯತ್ತು ಉಲ್ಲೇಖಿಸುತ್ತದೆ. ಆದ್ದರಿಂದ ಇದನ್ನು ಸಿಂಗನಕೆರೆ ಎಂಬ ವಾಡಿಕೆ ಇದೆ. ಸಿಂಗನು ಕಟ್ಟಿಸಿದ ಈ ಕೆರೆಯ ಉಲ್ಲೇಖ ದರೋಜಿಯ ಕೈಫಿಯತ್ತಿನಲ್ಲಿದೆ.[೬೯] ದರೋಜಿ ಕೆರೆಯ ಏರಿಯ ಮೇಲಿರುವ ಪರ್ಶಿಯನ್ ಭಾಷೆಯ ಶಾಸನದಲ್ಲಿ "ಸಬೀಲ್-ಇ-ಮುಹಮ್ಮದಿ" ಎಂದಿದೆ. ಇದರ ಅರ್ಥ ಮಹಮ್ಮದೀಯರ ಅರವಟ್ಟಿಗೆ ಎಂದು.[೭೦]

ಈ ಕೆರೆಗೆ ಗ್ರಾಮ ನಾಮವಾದ ದರೋಜಿಯಿಂದ ದರೋಜಿ ಕೆರೆಯೆಂದು ಕರೆಯಲಾಗುತ್ತಿದೆ. ಈ ಕೆರೆಯನ್ನು ಯಾರು ನಿರ್ಮಿಸಿದರು ಎಂಬುದರ ಕುರಿತು ಖಚಿತವಾದ ಮಾಹಿತಿಯು ದೊರೆಯುವುದಿಲ್ಲ. ಸ್ಥಳೀಯರ ನಂಬಿಕೆಯಂತೆ ಈ ಕೆರೆಯನ್ನು ಟಿಪ್ಪುಸುಲ್ತಾನನು ಕಟ್ಟಿಸಿದ.

ದರೋಜಿ ಗ್ರಾಮದ ಕೈಫಿಯತ್ತು ಈ ಕೆರೆಯನ್ನು ಯಾರು ನಿರ್ಮಿಸಿದರು ಎನ್ನುವ ಕುರಿತು ಕೆಲವು ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಸದರಿ ಕೈಫಿಯತ್ತು ಕೆರೆಯನ್ನು ಕುರಿತು ಅನೇಕ ವಿವರಗಳನ್ನು ನೀಡಿರುವುದು ಗಮನಾರ್ಹ. ಕಂಪಿಲರಾಯನ ಪುತ್ರ ಕುಮಾರರಾಮನು ಈ ಪ್ರದೇಶದಲ್ಲಿ ಆಳುತ್ತಿರುವಾಗ ಸುಲ್ತಾನರು (ಪಾಛೆಯರು) ಸು.ಹನ್ನೆರಡು ಲಕ್ಷ ಫೌಜು ತೆಗೆದುಕೊಂಡು ದಾಳಿ ಮಾಡಿ ಕುಮಾರರಾಮನನ್ನು ಕೊಂದು ರಾಜ್ಯ ತಮ್ಮದಾಗಿಸಿಕೊಂಡು ತಮ್ಮ ದೇಶಕ್ಕೆ ಹಿಂತಿರುಗುವಾಗ ಗೆದ್ದ ರಾಜ್ಯದಲ್ಲಿ ಅವರ ಗುರುತು ಇರಬೇಕೆಂದು ಸರದಾರರನ್ನು ಕರೆಸಿ ಅವರ ಪಾಲಿನ ಭೂ ಪ್ರದೇಶಗಳಲ್ಲಿ ಒಂದು ಕೆರೆಯನ್ನು ನಿರ್ಮಿಸಲು ಅಪ್ಪಣೆ ಮಾಡುತ್ತಾನೆ. ಆ ಕೆರೆಗಳು ಸಮುದ್ರಕ್ಕೆ ಹೋಲುವಂತಹವುಗಳಾಗಿ ಇರಬೇಕು ಎಂದು ಸಹ ತಿಳಿಸುತ್ತಾನೆ.

ಅವರ ಆದೇಶದಂತೆಯೇ ಮೂವರು ಸರದಾರರು ಮೂರು ಕೆರೆಗಳನ್ನು ದರೋಜಿಯ ಹತ್ತಿರದಲ್ಲಿಯೇ ನಿರ್ಮಿಸುತ್ತಾರೆ. ಸಿಂಗಸರದಾರನು ಸಿಂಗನ ಕೆರೆಯನ್ನು ನಿರ್ಮಿಸಿದನೆಂದು ತಿಳಿದುಬರುವುದು.

ಹಗಲಾಭತ್ತಾಖಾನನು ನಿರ್ಮಿಸಿದ ಕೆರೆಗೆ ಹಗಲಾಭತ್ತಾನ ಕೆರೆ ಎಂದು ಕರೆಯುವರು. ಆದರೆ ಈ ಕೆರೆಯು ಹಗಲಭತ್ತಾ ಖಾನನಿಂದ ನಿರ್ಮಿಸಿದ್ದಲ್ಲ ಎಂಬ ವಿಷಯವನ್ನು ಇತ್ತೀಚಿನ ಸಂಶೋಧನೆಯ ಮೂಲಕ ಸ್ಪಷ್ಟಪಡಿಸಲಾಗಿದೆ. ಕಮಲಾಪುರದ ದಕ್ಷಿಣ ದಿಕ್ಕಿಗೆ ಸು.೩ ಮೈಲುಗಳಷ್ಟು ದೂರದಲ್ಲಿ ಎರಡು ಗುಡ್ಡಗಳಿಗೆ ವಿಜಯನಗರ ಕಾಲದಲ್ಲಿ ಅಡ್ಡಲಾಗಿ ನಿರ್ಮಿಸಿರುವ ಹಗಲು ಬತ್ತನ ಕೆರೆಯನ್ನು 'ಹಂಪಿ ಪರಿಸರದ ಕೆರೆಗಳು' ಎಂಬ ಗ್ರಂಥದಲ್ಲಿ ಕೈಫಿಯತ್ತನ್ನು ಆಧರಿಸಿ ಹೇಳಿರುವಂತೆ, ಇದು ಹಗಲಾ ಭತ್ತಾಖಾನನಿಂದ ನಿರ್ಮಿಸಲ್ಪಟ್ಟ ಕೆರೆಯಾದ್ದರಿಂದ ಇದಕ್ಕೆ ಹಗಲಾ ಭತ್ತಾನ ಕೆರೆ ಎಂಬ ಹೆಸರು ಬಂದಿದೆ ಎಂದು ಉಲ್ಲೇಖಿಸಲ್ಪಟ್ಟಿದೆ. ಆದರೆ ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರವಾಚಕರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರ ಮರು ಸಂಶೋಧನೆಯ ಪ್ರತಿಫಲವಾಗಿ ಈ ಕೆರೆಯು ಹಗಲಾಭತ್ತಾಖಾನ ಎಂಬ ವ್ಯಕ್ತಿಯಿಂದ ನಿರ್ಮಿಸಲ್ಪಟ್ಟದ್ದಲ್ಲ. ಇದು ವಿಜಯನಗರ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಕೆರೆಯಾಗಿದ್ದು, ಈ ಕೆರೆಗೆ ಈ ಹೆಸರು ಬರಲು ಕಾರಣ ಎಷ್ಟೇ ಮಳೆ ಸುರಿದರೂ ಒಂದೇ ಹಗಲಿಗೆ ಈ ಕೆರೆ ಬತ್ತಿ ಹೋಗುವುದರಿಂದ ಇದಕ್ಕೆ ಹಗಲ ಬತ್ತಕೆರೆ ಎಂಬ ಹೆಸರು ರೂಢಿಯಲ್ಲಿ ಬಂದಿದೆ ಎಂಬುದು ಸ್ಥಳೀಯರ ಹೇಳಿಕೆ. ಹಾಗೂ ಸ್ಥಳ ಪರಿಶೀಲನೆಯ ಆಧಾರದಿಂದ ಈ ಕೆರೆಯ ನಿಜನಾಮ ಹಗಲು ಬತ್ತಕೆರೆ ಎಂಬುದನ್ನು ಸ್ಪಷ್ಟಪಡಿಸಿರುವರು(ವಿಜಯಕರ್ನಾಟಕ, ೧೯.೦೫.೦೭, ಪು.೩) ಮತ್ತು ಇನ್ನೊಂದು ಕೆರೆಗೆ ಖಾನ್ ಕೆರೆಯೆಂದು ಹೆಸರಿಸಿದ್ದಾರೆ. ಮೂರನೆಯ ಕೆರೆಯನ್ನು ಬಾಹಾಳ ಸರದಾರ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ಕೆರೆಯು ಸಮುದ್ರದಂತೆಯಿದ್ದುದಕ್ಕೆ 'ದರಿಯಾ ತಲಾಬ' ಎಂದು ಹೆಸರಿಸಿದ್ದಾರೆ. ಈ 'ದರಿಯಾ ತಲಾಉ' ಎಂದರೆ ನೀರಿರುವ ಕೆರೆಯೆಂದು ಪರ್ಶಿಯನ್ ಮತ್ತು ಹಿಂದಿ ಭಾಷೆಗಳಲ್ಲಿ ಅರ್ಥ. ಕನ್ನಡದಲ್ಲಿ ದರಿಯ ಕೆರೆಯೆಂದು ಕರೆಯಲ್ಪಟ್ಟು ನಂತರದಲ್ಲಿ ದರೋದಿಯಾಗಿ ಆ ನಂತರ ದರೋಜಿಯಾಯಿತು ಎಂದು ಕೈಫಿಯತ್ತು ತಿಳಿಸುತ್ತದೆ. ಈ ಕೆರೆಯ ಕೋಡಿಯು ಪಶ್ಚಿಮಕ್ಕೆ ಇದ್ದುದಾಗಿ ತಿಳಿಸುತ್ತಾ, ಅಲ್ಲಿ ವೀರಭದ್ರ ದೇವಾಲಯವಿರುವುದನ್ನು ಉಲ್ಲೇಖಿಸುತ್ತದೆ. ಇಂದಿಗೂ ಅಲ್ಲಿ ಒಂದು ವೀರಭದ್ರ ದೇವಾಲಯವಿದ್ದು ಅದನ್ನು ಕೋಡಿ ವೀರಭದ್ರ ದೇವಾಲಯವೆಂದು ಜನರು ಕರೆಯುತ್ತಾರೆ. ಈ ಕೆರೆಯು ಒಮ್ಮೆ ಒಡೆದು ಹೋದುದರ ಉಲ್ಲೇಖವು ಕೈಫಿಯತ್ತಿನಲ್ಲಿದೆ. ಬಹುಶಃ ಸಂಡೂರು ಪ್ರದೇಶದಲ್ಲಿ ಹೆಚ್ಚು ಮಳೆಯಾಗಿ ಅಲ್ಲಿರುವ ಕೆಲವು ಕೆರೆಗಳು ಒಡೆದು ಆ ನೀರು ಈ ಕೆರೆಗೆ ಹರಿದು ಬಂದು ದರೋಜಿ ಕೆರೆಯು ಒಡೆದಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಈ ಕೆರೆಯು ಒಡೆದ ನಂತರ ಅದನ್ನು ಸರಿಪಡಿಸಲು ಸಾಕಷ್ಟು ಕಾಲವಾಯಿತು ಎನ್ನುವುದು ಕೈಫಿಯತ್ತಿನಿಂದ ತಿಳಿದು ಬರುವ ಸಂಗತಿಯಾಗಿದೆ. ಈ ಕೆರೆಯನ್ನು ಕಟ್ಟಿಸುವುದರಲ್ಲಿ ಟಿಪ್ಪುಸುಲ್ತಾನನು ಸಹಾಯ ಮಾಡಿರುವುದು ಸ್ಪಷ್ಟವಾಗುವುದು. ಇವುಗಳಲ್ಲದೇ ಇನ್ನೆರಡು ವಿಚಾರಗಳು ಸಹ ತಿಳಿದುಬರುವವು. ಅವುಗಳೆಂದರೆ, ಈ ಕೆರೆಯು ಒಡೆದ ಕಾರಣ ಹಳೆ ದರೋಜಿ ಗ್ರಾಮವು ಕೊಚ್ಚಿಕೊಂಡು ಹೋಗಿರಬಹುದು. ಮತ್ತೊಂದು

ವಿಷಯವೆಂದರೆ ಕೆರೆಯನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಪಶ್ಚಿಮದ ಕೋಡಿಯ ಎತ್ತರವನ್ನು ತಗ್ಗಿಸಿರುವುದು. ಬಹುಶಃ ಇದಕ್ಕೆ ಮುಂಚಿತವಾಗಿಯೇ ಕೋಡಿಯು ಎತ್ತರವಾಗಿದ್ದು, ಕೆರೆಯಲ್ಲಿ ಈಗಿರುವಂತ ನೀರು ಸಂಗ್ರಹ ಸಾಮರ್ಥ್ಯಕ್ಕಿಂತ ಹೆಚ್ಚಾಗಿತ್ತೆಂದು ಸುಲಭವಾಗಿ ಊಹಿಸಬಹುದಾಗಿದೆ. ದರೋಜಿ ಕೆರೆಗೆ ನಾಲ್ಕು ತೂಬುಗಳಿದ್ದು ಅವುಗಳಲ್ಲಿ ಮೂರು ಮಾತ್ರವೇ ಕಾರ್ಯ ನಿರ್ವಹಿಸುತ್ತಿದ್ದವೆಂದು ಕೈಫಿಯತ್ತಿನಲ್ಲಿ ಉಲ್ಲೇಖವಾಗಿದೆ. ಇಂದಿಗೂ ಮೂರು ತೂಬುಗಳು ಮಾತ್ರವೇ ಕಾರ್ಯನಿರ್ವಹಿಸುತ್ತಿವೆ. ಮಾಗಣಿಗಳಿಗೆ ದರೋಜಿ ಕೆರೆಯಿಂದ ಎಷ್ಟು ನೀರು ಉಣಿಸುತ್ತಿದ್ದವು ಎಂಬುದನ್ನು ಮಾಗಣಿಗಳು ಹೆಸರಿನೊಂದಿಗೆ ಕೈಫಿಯತ್ತು ನೀಡಿದೆ.

ಟಿಪ್ಪುವಿನ ಸೇನಾಪಡೆಯು ಮರಾಠರೊಂದಿಗೆ ಯುದ್ಧ ಮಾಡುವಾಗ ಸು.ಮೂವತ್ತು ಸಾವಿರ ಸೈನಿಕರು ಈ ಕೆರೆಯು ಬತ್ತಿದ್ದಾಗ ಅದರಲ್ಲಿ ಅಡಗಿಕೊಂಡಿದ್ದರು ಎಂದು ಜನಪದ ನಂಬಿಕೆಯಿರುವುದು. ಈ ಕೆರೆಯು ಟಿಪ್ಪುವಿನ ಕಾಲದಲ್ಲಿ ಒಣಗಿತ್ತು ಮತ್ತು ಕೆರೆಯ ಭಾಗದಲ್ಲಿ ಮೂವತ್ತು ಸಾವಿರ ಸೈನಿಕರು ಅಡಗಿಕೊಳ್ಳುವಷ್ಟು ವಿಸ್ತಾರವಾಗಿತ್ತೆಂಬ ಎರಡು ಅಂಶಗಳು ತಿಳಿದುಬರುತ್ತವೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಈ ಕೆರೆಯನ್ನು ಟಿಪ್ಪುಸುಲ್ತಾನನ ಕಾಲದಲ್ಲಿ (೧೭-೧೮ ನೆಯ. ಶ) ಅಥವಾ ಅದಕ್ಕೂ ಮುಂಚೆ ನಿರ್ಮಿಸಿರುವ ಸಾಧ್ಯತೆಗಳಿವೆ. ಈ ಕೆರೆಯ ಏರಿಯು ಸು.೩.೫ ಕಿ.ಮೀ. ಉದ್ದ ಮತ್ತು ೪೫ ಅಡಿಗಳಷ್ಟು ಎತ್ತರವಿದೆ. ದರೋಜಿ ಕೆರೆಯು ಸು.೨೦೦೦ಕ್ಕೂ ಹೆಚ್ಚು ಎಕರೆಗಳಿಗೆ ನೀರುಣಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಕೆರೆಗೆ ನಾರಿಹಳ್ಳದಿಂದ ನೀರು ಹರಿದು ಬರುತ್ತವೆ.

ಕ್ರಿ.ಶ.೧೮೫೧ರಲ್ಲಿ ಬಂದ ಪ್ರವಾಹದಿಂದ ಸಂಪೂರ್ಣವಾಗಿ ನಾಶವಾಗಿ ಅದನ್ನು ಎರಡು ವರ್ಷಗಳಲ್ಲಿ ಅಂದರೆ ಕ್ರಿ.ಶ.೧೮೫೩ ರಿಂದ ಪುನರ್‌ನಿರ್ಮಾಣ ಮಾಡಲಾಯಿತು ಎಂಬುದಾಗಿ ದರೋಜಿ ಕೆರೆ ಕೋಡಿಯ ಸಮೀಪದಲ್ಲಿ ದೊರೆತ ಒಂದು ಶಾಸನವು ಉಲ್ಲೇಖಿಸುತ್ತದೆ. ಇದೇ ಶಾಸನವು ಪ್ರವಾಹಕ್ಕೆ ಕಾರಣವನ್ನು ತಿಳಿಸುವುದು ವಿಶೇಷವಾದ ಸಂಗತಿಯಾಗಿದೆ. ಈ ಕೆರೆಯ ಮೇಲಣ ಭಾಗದಲ್ಲಿ ಇರುವ ಆವಿನಮಡುವಿನ ಕೆರೆಯು ತುಂಬಿ ಒಡೆಯಲಾಗಿ ಆ ಕೆರೆಯ ನೀರು ದರೋಜಿ ಕೆರೆಗೆ ನುಗ್ಗಿ ಬಂದು ಕೆರೆ ಒಡೆಯಲು ಕಾರಣವಾಯಿತೆಂದು ತಿಳಿಸುವುದು. ಇದಲ್ಲದೆ ದರೋಜಿ ಗ್ರಾಮವು (ಅಂದರೆ ಹಳೆದರೋಜಿ ಗ್ರಾಮ) ಸಹ ನಾಶವಾಯಿತೆಂದು ತಿಳಿದು ಬರುತ್ತದೆ.[೨೧]

೬. ಇತರೆ

ದೇವಾಲಯದ ಇತರ ಕಾರ್ಯಗಳಿಗಾಗಿ ಅಂದರೆ ಇಲ್ಲಿ ದೇವಾಲಯದ ಮೆಟ್ಟಿಲುಗಳನ್ನು ನಿರ್ಮಿಸಲು, ಕಂಬಗಳನ್ನು ನಿಲ್ಲಿಸಲು, ಎರಡು ದೇವಾಲಯಗಳ ಮಧ್ಯದ ಕಲ್ಲು ಹಾಸಿನ ಕಾಲು ದಾರಿ ಹಾಳಾದಾಗ ಅದನ್ನು ಪುನಃ ಜೀರ್ಣೋದ್ಧಾರ ಮಾಡಿಸುವುದು ಹೀಗೆ ದೇವಾಲಯದಲ್ಲಿನ ಅಂಗ

ರಂಗಭೋಗದ ಕಾರ್ಯಗಳನ್ನಷ್ಟೇ ಅಲ್ಲದೇ ದೇವಾಲಯದ ಇತರ ಕಾರ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಅಂತಹ ಕೆಲಸವನ್ನು ನಿರ್ವಹಿಸಿದ ವ್ಯಕ್ತಿಗೆ ಕೆಲವು ದಾನಗಳನ್ನು ನೀಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಹಾಕಿಸಿದಂತಹ ಶಾಸನಗಳನ್ನು ಈ ತಾಲ್ಲೂಕಿನಲ್ಲಿ ಕಾಣುತ್ತೇವೆ ಅವುಗಳು ಇಂತಿವೆ.

ಈ ತಾಲ್ಲೂಕಿನ ಸುಬ್ಬರಾಯನಹಳ್ಳಿ ಗ್ರಾಮದ ಬಳಿಯ ನವಿಲುಸ್ವಾಮಿ ದೇವಸ್ಥಾನದ ಮುಂದೆ ಬಿದ್ದಿರುವ ಕ್ರಿ.ಶ.೧೩೮೭ರ ಹಾಳಾಗಿರುವ ಶಾಸನವು[೬೨] ಅರಸನ ಸಾಮಂತನು ಸ್ವಾಮಿದೇವರ ದೇವಸ್ಥಾನದ ಹತ್ತಿರ ಎರಡು ಗುಡಿಗಳ ಮಧ್ಯದ ಕಲ್ಲು ಹಾಸಿನ ಕಾಲುದಾರಿ ಕಟ್ಟಿಸಿದ್ದನ್ನು ತಿಳಿಸುತ್ತದೆ. ಮತ್ತು ಪ್ರಧಾನಿ ಶಂಕರಸ ವಿಠಪನ ಉಲ್ಲೇಖವನ್ನು ನೀಡುತ್ತದೆ. ಈ ಶಾಸನವು ಈ ತಾಲ್ಲೂಕಿನ ಇತರ ವಿಷಯವನ್ನು ಉಲ್ಲೇಖಿಸುವ ಮೊದಲ ಶಾಸನವಾಗಿದೆ.

ಇದೇ ತಾಲ್ಲೂಕಿನ ಸೋವೇನಹಳ್ಳಿ ಗ್ರಾಮದ ಹನುಮಂತನ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿನ ಶಾಸನವು[೬೩] ಚೋರಮನೂರು ಸೀಮೆಯ ಶಿಲ್ಪಿಗಳಾದ ಮಾರೋಜ ಮತ್ತು ಮಲ್ಲೋಜರು ಸೋವೀನಹಳ್ಳಿ ಗ್ರಾಮದಲ್ಲಿಯ ಕಲ್ಲಿನ ಕಂಬ ನಿಲ್ಲಿಸಿದ್ದನ್ನು ತಿಳಿಸುವುದು. ಇದೇ ಪೀಠದ ಮೇಲೆ, ಇದೇ ಮುಖದಲ್ಲಿನ ಹಾಳಾಗಿರುವ ಶಾಸನವು[೬೪] ಹೊರಮಲೆ ಸೀಮೆಯ ಮಾರೋಜನು ಅದೇ ಕಂಬವನ್ನು (ಬಹುಶಃ ಮೇಲಿನ ಶಾಸನದ ದಾನಿಯ ಸಹಯೋಗದೊಂದಿಗೆ) ನಿಲ್ಲಿಸಿದ್ದನ್ನು ಉಲ್ಲೇಖಿಸುವಂತೆ ತೋರುತ್ತದೆ.

ಇದೇ ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದ ಮೇಲಿನ ಕುಮಾರಸ್ವಾಮಿ ದೇವಸ್ಥಾನದ ಪೂರ್ವದಿಕ್ಕಿನ ಗೋಡೆಯಲ್ಲಿ ಕಟ್ಟಿದ ಕಲ್ಲಿನ ಮೇಲಿನ ಶಾಸನವು[೬೫] ಚಗನಕೇರಿಯ ಹಂಪಮಯ್ಯನ ಮಗ ಕಾಚಯ್ಯ ದೇಶಿಗನು (ದೇವಸ್ಥಾನದ) ಉತ್ತರ ದಿಕ್ಕಿಗೆ ಮೆಟ್ಟಿಲುಗಳನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.

೩.೩. ದಾನದ ಹಲವು ವಿಧಗಳು

ಈ ತಾಲ್ಲೂಕಿನ ಕೆಲವು ಶಾಸನಗಳಲ್ಲಿ ವಿವಿಧ ಬಗೆಯ ನಾಣ್ಯಗಳನ್ನು ದೇವಾಲಯದ ಪೂಜಾಕಾರ್ಯಗಳಿಗಾಗಿ ಊರಿನ ಹಿರಿಯರು ಮತ್ತು ಸಾರ್ವಜನಿಕರು ದಾನ ಬಿಟ್ಟ ಉಲ್ಲೇಖವನ್ನು ನೀಡುತ್ತವೆ. ಅವುಗಳು ಇಂತಿವೆ.

ಗದ್ಯಾಣ

'ಗದ್ಯಾಣ' ಎಂದರೆ ಚಿನ್ನದ ನಾಣ್ಯ, ಪೊನ್ ಅಥವಾ ಪೊಂಗದ್ಯಾಣ ಎಂದೂ ಕರೆಯಲ್ಪಡುತ್ತಿತ್ತು. ಇದು ಒಂದು 'ವರಹ'ಕ್ಕೆ ಸಮಾನವಾದ ಚಿನ್ನದ ನಾಣ್ಯವಾಗಿತ್ತು.[೬೬] ಗದ್ಯಾಣದ ಉಲ್ಲೇಖವನ್ನು ನೀಡುವ ಈ ತಾಲ್ಲೂಕಿನ ಶಾಸನವೆಂದರೆ ಚೋರುನೂರು ಗ್ರಾಮದ ವೀರಭದ್ರ ದೇವಸ್ಥಾನದ ಒಳಗಿರುವ

ಕ್ರಿ.ಶ.೧೫೫೦ರ ಶಾಸನವಾಗಿದೆ.[೭೭] ವಿಜಯನಗರದ ಸದಾಶಿವದೇವರಾಯನ ಅವಧಿಯಲ್ಲಿ ಚೋರಮನೂರು ಗವುಡ, ಶ್ಯಾನಬೋವ, ಬಡಗಿ, ಕಮ್ಮಾರರಿಗೆ ವರ್ಷಕ್ಕೆ ಮೂರು ಗದ್ಯಾಣಗಳನ್ನು ಬಿಟ್ಟಂತೆ ಉಲ್ಲೇಖವನ್ನು ನೀಡುತ್ತದೆ.

ವೀಸ

'ವೀಸ' ಎಂದರೆ ಒಂದು ನಾಣ್ಯದ ಬೆಲೆ ಇರಬೇಕು.[೭೮] ವೀಸದ ಉಲ್ಲೇಖವನ್ನು ನೀಡುವ ಈ ತಾಲ್ಲೂಕಿನ ಶಾಸನವೆಂದರೆ ಸಂಡೂರು ಗ್ರಾಮದ ಪಿ.ಡಬ್ಲ್ಯೂ.ಡಿ ಕಛೇರಿಯ ಹತ್ತಿರ ಬಿದ್ದಿರುವ ೧೬ನೆಯ ಶತಮಾನದ ಹಾಳಾಗಿರುವ ಶಾಸನವು[೭೯] ಪ್ರಜೆಗಳು ಮೂಲಸ್ಥಾನ ಮಲ್ಲಿಕಾರ್ಜುನ ದೇವರಿಗೆ ಪ್ರತಿಯೊಬ್ಬರಿಗೆ ಒಂದು ವೀಸದಂತೆ ದಾನ ನೀಡಿದ ಉಲ್ಲೇಖವಿದ್ದಂತೆ ತೋರುತ್ತದೆ.

ಕಾಸು

'ಕಾಸು' ಎಂದರೆ ತಾಮ್ರದ ಚಿಕ್ಕ ನಾಣ್ಯ.[೮೦] ಕಾಸಿನ ಉಲ್ಲೇಖವನ್ನು ನೀಡುವ ಈ ತಾಲ್ಲೂಕಿನ ಶಾಸನವೆಂದರೆ ತುಂಬರಗುದ್ದಿಯ(ಯರ್ರಯ್ಯನಹಳ್ಳಿ ಉಪಗ್ರಾಮ) ಗ್ರಾಮದ ಹನುಮಂತರಾಯ ದೇವಸ್ಥಾನದ ಮುಂದೆ ನಿಲ್ಲಿಸಿದ ಶಾಸನವಾಗಿದೆ.[೮೧] ದುರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ ನೈವೇದ್ಯಕ್ಕೆ ಮೂರು ಕಾಸನ್ನು, ಈ ಮೂರು ಕಾಸು ಸುಂಕವನ್ನು ಮಾನ್ಯ ರೂಪದಲ್ಲಿ ದಾನ ನೀಡಿದ ಉಲ್ಲೇಖವಿದೆ. ಇದೇ ಗ್ರಾಮದ ಶಿವ ದೇವಸ್ಥಾನದಲ್ಲಿ ನಿಲ್ಲಿಸಿದ ಶಾಸನವು.[೮೨] ದರುಬಿ ನರಸಪ್ಪನು ತುಂಬರಗುತ್ತಿಯ ಕಲ್ಲಯ್ಯ ದೇವರಿಗೆ ದೀಪ ಉರಿಸಲು ತೆರಿಗೆಯಲ್ಲಿ ಪ್ರತಿದಿನ ಮೂರು ಕಾಸುಗಳನ್ನು ಮಾನ್ಯವಾಗಿ ದಾನ ನೀಡಿದ್ದನ್ನು ದಾಖಲಿಸುತ್ತದೆ.

೩.೪. ತೆರಿಗೆ ದಾನ

ಸಿದ್ಧಾಯ

'ಸಿದ್ಧಾಯ' ಎಂದರೆ ನಿಯಮಿತವಾಗಿ ಕೊಡಬೇಕಾದ ನಿರ್ದಿಷ್ಟ ಹಣ ಅಥವಾ ಧಾನ್ಯ ರೂಪದ ಕರಕ್ಕೆ ಸಿದ್ಧಾಯ ಎನ್ನುವರು.[೮೩] ಸಂಡೂರು ಗ್ರಾಮದ ಪಿ.ಡಬ್ಲ್ಯೂ.ಡಿ. ಕಛೇರಿಯ ಹತ್ತಿರ ಬಿದ್ದಿರುವ ಕ್ರಿ.ಶ.೧೫೪೪ರ ಶಾಸನವು[೮೪] ಸಿದ್ಧಾಯದ ಉಲ್ಲೇಖವನ್ನು ನೀಡುತ್ತದೆ. ಮಹಾಮಂಡಲೇಶ್ವರ ರಾಮರಾಜದೇವ ಮಹಾ ಅರಸನು, ಅರಸನ ಆಜ್ಞೆಯ ಮೇರೆಗೆ ಚಿಪ್ಪಗೇರಿಯ ತಿಮ್ಮೋಜ ಮತ್ತು ಕೊಂಡೋಜರ ನಾಯಕತ್ವದಲ್ಲಿ ಸೀಮೆಯ ನಾವಿದರಿಗೆ ಮತ್ತು ಸೊಂಡೂರು ಸೀಮೆಯ ನಾವಿದ ಸಿವನೋಜನಿಗೆ ಸಿದ್ಧಾಯ ಮತ್ತು ಕಾಣಿಕೆ ತೆರಿಗೆಗಳ ರಿಯಾಯಿತಿ ನೀಡಿದ್ದನ್ನು ತಿಳಿಸುತ್ತದೆ.

ಕೌಲು

'ಕೌಲು' ಎಂಬುದು ಯಾವ ಮಾದರಿಯ ತೆರಿಗೆಯಾಗಿತ್ತು ಎಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಈ ತಾಲ್ಲೂಕಿನ ಚೋರುನೂರು ಗ್ರಾಮದ ವಿರಕ್ತಮಠದ ಮೊಗಶಾಲೆಯಲ್ಲಿ ಕಟ್ಟಿರುವ ಕಲ್ಲಿನ ಮೇಲಿನ ಕ್ರಿ.ಶ.೧೭ನೆಯ ಶತಮಾನಕ್ಕೆ ಸೇರಿರಬಹುದಾದ ಶಾಸನದಲ್ಲಿ[೮೫] 'ಕೌಲು'ವಿನ ಉಲ್ಲೇಖವಿದೆ. ಗುಡೇಕೋಟೆ ಮತ್ತು ಸೊಂಡೂರಿನ ರಾಜಶ್ರೀ ರಾಜಪನಾಯಕನ ಆಜ್ಞೆಯ ಮೇರೆಗೆ ಬಮ್ಮಿನಾಯಕ ಹೊರಮಲೆ ಸೀಮೆಯ ಜನರಿಗೆ ಒಂದು ಕೌಲು ನೀಡಿ ದೇಶದ ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲ ತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ(ಮೃತನ ಗಾಣಿಗೆ) ವಿಧಿಸಬಾರದೆಂದು ತಿಳಿಸಿರುವ ಕುರಿತು ಉಲ್ಲೇಖವಿದೆ.

೩.೫. ಭೂಮಿದಾನದ ಶಾಸನಗಳು

ದೇವಾಲಯದ ಪೂಜೆ ಪುನಸ್ಕಾರಗಳಿಗಾಗಿ, ಜೀರ್ಣೋದ್ಧಾರಕ್ಕಾಗಿ, ಹೀಗೆ ಅನೇಕ ಕಾರ್ಯಗಳಿಗಾಗಿ ಭೂಮಿದಾನ ನೀಡಿದಂತ ವಿಷಯವನ್ನು ಉಲ್ಲೇಖಿಸುವ ಅನೇಕ ಶಾಸನಗಳು ಈ ತಾಲ್ಲೂಕಿನಲ್ಲಿ ಕಂಡುಬರುತ್ತವೆ. ಅವುಗಳ ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಈ ತಾಲ್ಲೂಕಿನ ಭೂಮಿದಾನದ ಉಲ್ಲೇಖವನ್ನು ನೀಡುವ ಮೊದಲ ಶಾಸನವೆಂದರೆ ಕುಮಾರಸ್ವಾಮಿ ದೇವಾಲಯದ ಪ್ರವೇಶದ ಎಡ ಹಸ್ತಿಹಸ್ತದಲ್ಲಿನ ಕ್ರಿ.ಶ.೧೦೭೪ರ ಶಾಸನವಾಗಿದೆ.[೮೬] ಈ ಶಾಸನವು ಶ್ರೀ ಸ್ವಾಮಿದೇವರ ತಪೋವನಾಧಿಪತಿಗಳಾದ ಗಧಾದರರಸರು ಕಲ್ಕುಟಿಗರಾದ ಬಿಯಳಚಟ್ಟಿ, ಬೆನಗಬೋವ ಕಮ್ಮಾರ ನಾಯಕರಿಗೆ ಸ್ವಾಮಿದೇವರ ದೇಗುಲದ ಕೆಲಸ ಮಾಡಿದ್ದಕ್ಕೆ ಭೂದಾನ ನೀಡಿದಂತೆ ತಿಳಿಸುವುದು.

ದರೋಜಿ ಗ್ರಾಮದ ಬೆಟ್ಟದ ಮೇಲಿನ ರಾಮಲಿಂಗೇಶ್ವರ ದೇವಾಲಯದ ಅರೆಗಂಬದಲ್ಲಿರುವ ಕ್ರಿ.ಶ.೧೧೦೫ರ ಶಾಸನವು[೮೭] ಮಹಾಮಂಡಲೇಶ್ವರ ಕಾಚರಸನು ದೊರವಡಿ ಕೋಟೆಯಲ್ಲಿರುವ ರಾಮೇಶ್ವರ ದೇವರಿಗೆ ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ. ದೊರವಡಿಯಲ್ಲಿ ೧೩ನೆಯ ಶತಮಾನಕ್ಕಾಗಲೇ ಕೋಟೆಯಿತ್ತು. ಅದು ಈ ರಾಮಲಿಂಗೇಶ್ವರ ದೇವಾಲಯದ ಪ್ರದೇಶವೇ ಆಗಿತ್ತು ಎಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ತಾಳೂರು ಗ್ರಾಮದ ನಾರಿಹಳ್ಳದ ದಂಡೆಯ ಮೇಲಿರುವ ದೇವಸ್ಥಾನದ ಮಂಟಪದ ಕಂಬದ ಮೇಲಿನ ಕ್ರಿ.ಶ.೧೨೧೮ರ ಶಾಸನವು[೮೮] ಹೊಯ್ಸಳ ೨ನೇ ವೀರ ಬಲ್ಲಾಳನ ಅವಧಿಯದಾಗಿದ್ದು, ಇದು ಯಗುವಟ್ಟಿಯ ಮಹಾನಾಳ್ ಪ್ರಭು ಬೊಮ್ಮ-ಗವುಡನು ಬೊಮ್ಮೋಜನಿಗೆ ತಲರದಲ್ಲಿ ಈಶ್ವರ ದೇವಸ್ಥಾನ ಕಟ್ಟಿದ್ದಕ್ಕಾಗಿ ಭೂಮಿದಾನ ನೀಡಿದ್ದನ್ನು ದಾಖಲಿಸುತ್ತದೆ.

ತಾರಾನಗರ ಗ್ರಾಮದ ನಾರಿಹಳ್ಳ ಯೋಜನೆ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ಕ್ರಿ.ಶ.೧೩ನೆಯ ಶತಮಾನದ ತಾಮ್ರ ಶಾಸನವು[೮೯] ಖೋಟಾ-ಕಂಧಾರಪುರದಿಂದ ಹೊರಡಿಸಲ್ಪಟ್ಟಿದೆ. ಮತ್ತು ಕರಡಿಕಲ್ಲು-೩೦ರಲ್ಲಿ ಭೂಮಿದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಹಂಪೆಯ ರಾಮಚಂದ್ರ (ಹಜಾರರಾಮ) ದೇವಸ್ಥಾನದಲ್ಲಿ ಮುಖ್ಯ ಗುಡಿಯ ಮಂಟಪದ ದಕ್ಷಿಣ ಅಧಿಷ್ಠಾನದ ಮೇಲಿನ (ನಕಾಶೆ NRW) ಕ್ರಿ.ಶ.೧೫೨೧ರ ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಯೇರುವ ಸಿಂಹಾಸನಾಧೀಶ್ವರ ಕಾಶ್ಯಪ ಗೋತ್ರದ ಮಹಾಮಂಡಲೇಶ್ವರ ಚಿಕತಿಮ್ಮಯದೇವ ಮಹಾ ಅರಸನ ಮಗ ತಿಮ್ಮರಾಜನು ರಾಮಚಂದ್ರದೇವರ ಅಮೃತಪಡಿ ಸೇವೆಗೆಂದು ಕೃಷ್ಣದೇವರಾಯನು ದಾನ ಮಾಡಿದ ಸೊಂಡೂರು ಸೀಮೆಯಲ್ಲಿನ ತಾಳೂರು ಗ್ರಾಮದಲ್ಲಿಯ ಒಡೆದು ಹೋದ ಕೆರೆಯನ್ನು ದೊಡ್ಡ ಕೆರೆಯಾಗಿ ನಿರ್ಮಿಸಿ, ದೇವರ ಗುಡಿಯ ಮುಂದೆ ಉತ್ಸವ ಮಂಟಪ ಕಟ್ಟಿಸಿದನೆಂದು ತಿಳಿಸುತ್ತದೆ. ಅಲ್ಲದೆ ರಾಮಚಂದ್ರ ದೇವಸ್ಥಾನದ ಕಾರ್ಯಕರ್ತ ಕರಣಿಕ ಮಂಗರಸನನ್ನೊಳಗೊಂಡು ಕೆಲವು ವ್ಯಕ್ತಿಗಳು (ಹೆಸರುಗಳಿವೆ) ಕೆರೆಗೆ ಭೂಮಿಯನ್ನು ದಾನ ಮಾಡಿದರೆಂದು ತಿಳಿಸುತ್ತದೆ. ತಿಮ್ಮರಾಜ ತನ್ನ ತಂದೆ ಚಿಕ್ಕತಿಮ್ಮರಾಜ ಒಡೆಯ ಮತ್ತು ತಾಯಿ ಕೋನಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ಅದೇ ದೇವಸ್ಥಾನದಲ್ಲಿ ಉತ್ಸವಗಳನ್ನಾಚರಿಸಲು ಭೂಮಿಯಿಂದ ಬರುವ ಆದಾಯದ ಒಂದು ಭಾಗವನ್ನು ದಾನ ಮಾಡಿದನೆಂದು ತಿಳಿಸುತ್ತದೆ.[೯೦]

ಕುರೆಕುಪ್ಪೆ ಗ್ರಾಮದ ಈಶ್ವರ ದೇವಸ್ಥಾನದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನವು[೯೧] ಕುರೆಕುಪ್ಪೆ ಗ್ರಾಮದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ದೇವರ ಕಾರ್ಯಕ್ಕೆ ದತ್ತಿ ಬಿಟ್ಟಂತೆ ದಾಖಲಿಸಿದೆ.

ಆವಿನಮಡುಗು ಗ್ರಾಮದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾದ ಈ ಗ್ರಾಮದ ಕೆರೆಯ ಕೆಳಭಾಗದ ಬಂಡೆಯ ಮೇಲಿನ ಅಪ್ರಕಟಿತ ಶಾಸನ ಇದಾಗಿದೆ. ಈ ಶಾಸನದ ಬಗ್ಗೆ ಡಾ.ಸಿ.ಎಸ್ .ಪಾಟೀಲರು ಬಳ್ಳಾರಿ ಜಿಲ್ಲೆ ಶಾಸನ ಸಂಪುಟ-IIರಲ್ಲಿ ಗುರುತಿಸಿದ್ದಾರಾದರು, ಇದರ ಪೂರ್ಣಪಾಠವನ್ನು ನೀಡಿರಲಿಲ್ಲ. ಕ್ಷೇತ್ರಕಾರ್ಯದಿಂದ ಈ ಶಾಸನ ಪಾಠವನ್ನು ಬರೆದುಕೊಂಡು ಬರಲಾಯಿತು.

ವಿಜಯನಗರ ಸಾಮ್ರಾಜ್ಯದ ಸದಾಶಿವದೇವರಾಯನ ಅವಧಿಯ ಈ ಶಾಸನವು ಮಹಾಮಂಡಳೇಶ್ವರ ರಾಮರಾಜ ತಿಮ್ಮರಾಜನ ಪುತ್ರ ವಿಠಲರಾಜನ ಇತಿಹಾಸದ ಬಗ್ಗೆ ಬೆಳಕು ಬೀರುವ ಇದು ದಾನ ಶಾಸನವಾಗಿದೆ. ಈ ದಾನವನ್ನು ಕೊಟ್ಟವನು ವಿಠಲರಾಜ ಮಹಾದೇವ ಅರಸು. ಕ್ರಿ.ಶ.೧೫೫೧ರ ಕಾಲಾವಧಿಯ ಈ ಶಾಸನದ ಉಲ್ಲೇಖದಂತೆ ಶ್ರೀಮದ್ ರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಶ್ರೀ ಸದಾಶಿವದೇವ ಮಹಾರಾಯರು ವಿದ್ಯಾನಗರದಲ್ಲಿ ರತ್ನ ಸಿಂಹಾಸನರೂಢರಾಗಿ ಪೃಥ್ವಿ ಸಾಮ್ರಾಜ್ಯವನ್ನು

ಆಳುತ್ತಿರುವ ಸಂದರ್ಭದಲ್ಲಿ ಆತನ ಕೈ ಕೆಳಗೆ ಮಹಾಮಂಡಲೇಶ್ವರನಾಗಿದ್ದಂತ ರಾಮರಾಜ ತಿಮ್ಮರಾಜನ ಮಗ ವಿಠಲರಾಜದೇವನು ಆವಿನಮಡುವಿನ ಸೀಮೆಗೆ ಸೇರಿದ ಹಿರಿಯ ಅನಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವಿನ ಕೆರೆಯ ಕೆಳಗಿನ ಸ್ಥಾವರರೊಳಗಣ ತಿಪ್ಪಯ್ಯ ಮತ್ತು ಬಸವಯ್ಯನವರಿಂದ ವಿರುಪಣಗಳು ಕ್ರಯವಾಗಿ ಪಡೆದುಕೊಂಡು ಕೊಟ್ಟ ದಾನದ ಹೊಲ ೧೩ ಮತ್ತರು ಹಾಗೂ ತೋಟ ೩ ಮತ್ತರು ಎಂದು ತಿಳಿಸುತ್ತದೆ.

ದಾನಕೊಟ್ಟ ಹೊಲದ ಮೇರೆಯ ವಿವರವನ್ನು ಈ ರೀತಿ ಉಲ್ಲೇಖಿಸಿದೆ. ಮೂಡಲಿನಲ್ಲಿ ಬೂಳಪನ ವಿರುಪಣನ ಹೊಲದ ಮೇರೆ, ತೆಂಕಲಿನಲ್ಲಿ ವಿರುಪಣನ ಸಿವನಪನ ಹೊಲ ಮೇರೆ, ಪಡುವಲಿನಲ್ಲಿ ಹಿರೆಯ ಕಾಲುವೆ ಮೇರೆ, ಬಡಗಲಿನಲ್ಲಿ ಬೊಳಪನ ಮಗ ಬದ್ರಪನ ಹೊಲ ಮೇರೆ ಎಂದು ತಿಳಿಸುತ್ತ ಈ ಭೂಮಿ ಮತ್ತು ಸೀಮೆಯ ಒಳಗಿನ ತೆಂಗು, ಹಲಸು, ಮಾವು, ನಿಂಬೆ, ಹೆರಳೆ ಆ ಊರ ಫಲಗಳನ್ನು ಅನಂತಾಪುರದ ಮಲ್ಲಿಕಾರ್ಜುನ ದೇವರ ಅಮೃತಪಡಿಗೆ ಆ ಚಂದ್ರಾರ್ಕಸ್ತಾಯಿಯಾಗಿರುವಂತೆ ದ್ವಾದಸೆಯ ಪುಣ್ಯಕಾಲದಲ್ಲಿ ಈ ತೋಟದ ವಕಲುಪಾಲು ಹಾಗೂ ರಾಜಪಾಲು ಸಹಿತವಾಗಿ ಮಲ್ಲಿಕಾರ್ಜುನ ದೇವರಿಗೆ ವಿಠಲರಾಜ ಅಯ್ಯನವರು ಸರ್ವಮಾನ್ಯವಾಗಿ ಧಾರೆಯೆರೆದು ಕೊಟ್ಟ ವಿಷಯವನ್ನು ಶಾಸನ ಉಲ್ಲೇಖಿಸುತ್ತದೆ.

ಶಂಕರಪುರ ಅಥವಾ ಗಂಡಿ ಬಸಾಪುರ ಗ್ರಾಮದ ಗಂಡಿ-ಬಸಪ್ಪನ ದೇವಸ್ಥಾನದ ಮುಂದೆ ಸು.೨೦ ಗಜಗಳ ಅಂತರದಲ್ಲಿಯ ಕ್ರಿ.ಶ.೧೬ನೆಯ ಶತಮಾನದ್ ಹಾಳಾಗಿರುವ ಶಾಸನವು ರಂಗ ಸಮುದ್ರದ ಮೊಗದವರ ಭಿಕ್ಷಾಮಠಕ್ಕೆ ಭೂಮಿ(ವಿವರಗಳಿಲ್ಲ) ದಾನ ನೀಡಿದ್ದನ್ನು ಉಲ್ಲೇಖಿಸುವಂತೆ ತೋರುವುದು.

ಜಯಸಿಂಘಪುರ ಗ್ರಾಮದ ಮಾರುತಿ ದೇವಸ್ಥಾನದ ಕೈಪಿಡಿ ಗೋಡೆಯ ಮೇಲೆ ಇಟ್ಟಿರುವ ಕ್ರಿ.ಶ.೧೭ನೆಯ ಶತಮಾನದ್ ಹಾಳಾಗಿರುವ ಶಾಸನವನ್ನು ವ್ಯವಸ್ಥಿತವಾಗಿ ಬರೆದಿಲ್ಲ. ಇದು ಬಹುಶಃ ಹನುಮಂತ ದೇವರಿಗೆ ಭೂಮಿದಾನ ನೀಡಿದ ಉಲ್ಲೇಖವಿರಬಹುದು(ವಿವರಗಳು ಸ್ಪಷ್ಟವಾಗಿಲ್ಲ). ಈ ತಾಲ್ಲೂಕಿನ ಜಿಗಿನಹಳ್ಳಿ ಗ್ರಾಮದ ಹನುಮಂತ ದೇವಸ್ಥಾನದ ಮುಂದೆ ನಿಲ್ಲಿಸಿರುವ ತ್ರುಟಿತ ಶಾಸನವು ಸಹ ಲಿಪಿಯ ಶೈಲಿಯಿಂದ ಗಮನಿಸುವುದಾದರೆ ಕ್ರಿ.ಶ.೧೭ನೆಯ ಶತಮಾನವೆಂದು ಕಂಡುಬರುತ್ತದೆ. ಇದು ದಳವಾಯಿ ಬರಿಮಿನಾಯಕನು ಜಿಗುನೆಹಳ್ಳಿಯಲ್ಲಿ ಭೂಮಿದಾನ ನೀಡಿದ್ದನ್ನು ದಾಖಲಿಸುವಂತೆ ತೋರುತ್ತದೆ.

ಹನುಮನಹಳ್ಳಿ ಗ್ರಾಮದ ಒಂದು ಹೊಲದಲ್ಲಿ ಬಿದ್ದಿರುವ ಶಾಸನವು. ಮಾನ್ಯ ಭೂಮಿಯು ಹನುಮಾ ಮಾದಯ ಗಿಡಯ ಮುಂತಾದವರಿಗೆ ಸೇರಿದ್ದೆಂದು ತಿಳಿಸುತ್ತದೆ. ಇದೇ ತಾಲ್ಲೂಕಿನ ಹಿರೇಹಾಳು (ಕಲಿಂಗೇರಿಯ ಸಮೀಪ) ಗ್ರಾಮದ ಅಂದರೆ ಕಲಿಂಗೇರಿ ಮತ್ತು ಹಿರೇಹಾಳುಗಳ ಮಧ್ಯದ ಮಾರ್ಗದಲ್ಲಿರುವ ಒಂದು ಮಸೀದಿಯ ಹತ್ತಿರದ ಬಂಡೆಯ ಮೇಲಿನ ಶಾಸನವು ಅಲ್ಲಿಯ ಭೂಮಿಯು

ವಾಮರಸ ಅಮಿತಯ್ಯ - ದಣ್ಣಾಯಕನ ಭೂಮಿದಾನ ಎಂದು ಉಲ್ಲೇಖಿಸುತ್ತದೆ. ಇದೇ ಗ್ರಾಮದಲ್ಲಿಯ ಕೆರೆಯ ದಂಡೆಯ ಪಶ್ಚಿಮಕ್ಕೆ ನಿಲ್ಲಿಸಿರುವ ಶಾಸನವು[೯೭] ಅಮಿತಯ್ಯ-ದಣ್ಣಾಯಕ, ಕಲ್ಲೆಯ-ನಾಯಕನ-ಸಾವಿದೇವ, ಹಿರಿಯ ಸಾವಿದೇವ ಮತ್ತು ಇತರ ನಾಯಕರು ಸ್ವಾಮಿದೇವರಿಗೆ ಹಿರಿಹಾಳಿನಲ್ಲಿ (ಶಾಸನದೊರೆತ ಸ್ಥಳ?) ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ. ಈ ಮೇಲ್ಕಂಡ ಮೂರು ಶಾಸನಗಳಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ ಅವುಗಳ ಲಿಪಿಯ ಆಧಾರದಿಂದ ಇವು ಕ್ರಿ.ಶ.೧೭ನೆಯ ಶತಮಾನಕ್ಕೆ ಸೇರಿದವುಗಳೆಂದು ತಿಳಿದುಬರುವುದು.

ನಾಗಲಾಪುರ ಗ್ರಾಮದಲ್ಲಿಯ ಶಮಿ ಮರದ ಕೆಳಗೆ ನಿಲ್ಲಿಸಿರುವ ಶಾಸನವು[೯೮] ಜಿಲ್ಲೇಳ ಗೋಪಯದೇವ-ಮಹಾ-ಅರಸು ಕಣುವೆಯ ಔಭಳೇಶ್ವರ ದೇವರಿಗೆ ನಾಗಲಾಪುರದಲ್ಲಿ ಭೂಮಿದಾನ ನೀಡಿದ್ದನ್ನು ಉಲ್ಲೇಖಿಸುವುದು. ಈ ಶಾಸನವು ಸಹ ಲಿಪಿಯ ಆಧಾರದಿಂದ ಕ್ರಿ.ಶ.೧೭ನೇ ಶತಮಾನದ್ದೆಂದು ತಿಳಿದುಬರುವುದು.

ಸಂಡೂರು ಗ್ರಾಮದ ಪಿ.ಡಬ್ಲ್ಯೂ.ಡಿ ಕಛೇರಿಯ ಹತ್ತಿರವಿರುವ ಕ್ರಿ.ಶ.೧೭೦೩ರ ಶಾಸನದಲ್ಲಿ[೯೯] ಹಿಂದೂರಾಯನ ಗುರುವಾದ ಜಾಮನಗಿರಿ ಭಾವ ಒಂದು ವೃತ್ತಿ ಭೂಮಿಯನ್ನು ಸರ್ವಮಾನ್ಯ ರೂಪದಲ್ಲಿ ರಾಗಪ್ಪನ ಮಗನಾದ ಸರುಭಾಯ್‌ಗೆ ಕೊಟ್ಟ ಉಲ್ಲೇಖವಿದೆ.

ಇದೇ ಗ್ರಾಮದ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕ್ರಿ.ಶ.೧೭೦೮ರ ಶಾಸನವು[೧೦೦] ಹಿರೆಹಿಂದುರಾಯನು ಚಿಕ್ಕ ಸೊಂಡೂರಿನಲ್ಲಿಯ ಭೂಮಿಯನ್ನು ಜಮುನಗಿರಿ ಬಾವಾನಿಗೆ ದಾನ ನೀಡಿದನೆಂದು ತಿಳಿಸುವುದು. ಇದೇ ಗ್ರಾಮದ ಹಳೆಯ ತಾಲ್ಲೂಕು ಕಛೇರಿ ಆವರಣದಲ್ಲಿಯ ಕ್ರಿ.ಶ.೧೭೨೩ರಲ್ಲಿಯ ಶಾಸನವೊಂದರಲ್ಲಿ[೧೦೧] ಹಿಂದೂರಾಯರ ಗುರುವು ಜಂಮ...ಬಾವನು ರಾಮಪ್ಪಯ್ಯನ ಮಗಳು ರುಕ್ಮಾಯ....ಗೆ ಭೂದಾನ? ನೀಡಿದಂತೆ ಉಲ್ಲೇಖಿಸುವುದು.

ಸಂಡೂರು ಗ್ರಾಮದ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಶಾಸನವು[೧೦೨] ಗುಣಾಬಾಯಿಯ ಮಗ ಸುಭಾನಜಿ ಹಿಂದೂರಾವು ಘೋರ್ಪಡೆಯು ಕೃಷ್ಣಾಪುರದ ಕರಿಯಣ್ಣನಿಗೆ ಭೂಮಿಯನ್ನು ಸರ್ವಮಾನ್ಯವಾಗಿ ದಾನ ನೀಡಿದ್ದನ್ನು ತಿಳಿಸುತ್ತದೆ. ದಾನ ನೀಡಿದ ಭೂಮಿಯನ್ನು ದಾನಿಯು ಉಂಬಳಿಯಾಗಿ ಪಡೆದ ಹೊಸಹಳ್ಳಿ ಗ್ರಾಮದಲ್ಲಿತ್ತೆಂದು ಉಲ್ಲೇಖಿಸುವುದು. ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ ಲಿಪಿಯ ಆಧಾರದಿಂದ ಇದು ೧೮ನೆಯ ಶತಮಾನಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ.

ಭುಜಂಗನಗರ ಗ್ರಾಮದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಅಲ್ಲಿಯ ಜನತಾ ಕಾಲೋನಿಯಲ್ಲಿ ಶಾಸನ ಸಹಿತವಾದ ನಾಲ್ಕು ಲಿಂಗಮುದ್ರೆ ಕಲ್ಲುಗಳು ನಮ್ಮ ಗಮನಕ್ಕೆ ಬಂದವು.

ಅವು ಎರಡು ಸಾಲಿನ ನಾಗರಿಲಿಪಿಯಲ್ಲಿವೆ. ಅವನ್ನು ಬರೆದುಕೊಂಡು ಬರಲಾಯಿತು. ಈ ಜನತಾ ಕಾಲೋನಿಯ ಜಾಗಕ್ಕೆ ಹಿಂದೆ ಹೊಸೂರು ಮಾನ್ಯವು ಎಂದು ಕರೆಯುತ್ತಿದ್ದರೆಂದು, ಈ ಜಾಗ ಒಂಬತ್ತು ಎಕರೆ ಇತ್ತೆಂದು ಸ್ಥಳೀಯರು ಹೇಳುತ್ತಾರೆ. ಈ ಲಿಂಗಮುದ್ರೆ ಕಲ್ಲನ್ನು ಒಂಬತ್ತು ಎಕರೆಯ ನಾಲ್ಕು ದಿಕ್ಕುಗಳಲ್ಲಿ ಹಾಕಿಸಲಾಗಿದೆ. ಅವು ಹೀಗಿವೆ. ಕಣ್ಣೂರು ಸಿದ್ಧರಾಮಪ್ಪನವರ ಹೊಲದ ಬಳಿ ಇರುವ ಲಿಂಗಮುದ್ರೆ ಕಲ್ಲಿನ ಶಾಸನ ಪಾಠವು 'ಶ್ರೀಶಿವಪುರಕಾರ ಶ್ರೀ ವಿಶ್ವೇಶ್ವರ ಪ್ರಂತ' ಎಂದು ಉಲ್ಲೇಖಿಸಿದೆ. ಇದೇ ಹೊಲದ ನೇರಕ್ಕೆ ಅಂದರೆ ಈ ಹೊಲದ ಮೇರೆಯಲ್ಲಿ ಒಂದು ಲಿಂಗಮುದ್ರೆಕಲ್ಲು ಇತ್ತು. ಈಗ ಅದು ಆ ಸ್ಥಳದಲ್ಲಿಲ್ಲ. ಇದೇ ಹೊಲದಿಂದ ಸ್ವಲ್ಪ ಅಂತರದಲ್ಲಿ, ಅಂದರೆ ಓಂಕಾರ ಪ್ರೌಢ ಶಾಲೆಯ ಬಳಿ ಒಂದು ಲಿಂಗಮುದ್ರೆಕಲ್ಲು ಇದೆ. ಆದರೆ ಅದರಲ್ಲಿನ ಅಕ್ಷರಗಳು ಸಂಪೂರ್ಣವಾಗಿ ನಾಶವಾಗಿವೆ. ಇದೇ ಲಿಂಗ ಮುದ್ರೆಕಲ್ಲಿನ ನೇರಕ್ಕೆ ಅಂದರೆ ಈ ಓಂಕಾರ ಪ್ರೌಢಶಾಲೆಯಿಂದ ನೇರವಾಗಿ ಅದರ ಮೇರೆಯಲ್ಲಿ ಮತ್ತೊಂದು ಲಿಂಗಮುದ್ರೆಕಲ್ಲು ಇದ್ದು, ಅದರಲ್ಲಿ ಶಾಸನವಿದೆ. ನಾಗರಿಲಿಪಿಯ ಎರಡು ಸಾಲುಗಳಿವೆ. ಇವು ಸಹ ಹಿಂದೆ ನೋಡಿದ ಲಿಂಗಮುದ್ರೆಕಲ್ಲಿನ ಹೇಳಿಕೆಯನ್ನೇ ಪುನಃ ತಿಳಿಸಿವೆ.

ಒಟ್ಟಿನಲ್ಲಿ ಈ ಲಿಂಗಮುದ್ರೆಕಲ್ಲಿನ ಶಾಸನದ ಹೇಳಿಕೆಯಂತೆ ಈ ಜಾಗವನ್ನು ಶ್ರೀ ಶಿವಪುರಕಾರ ಶ್ರೀವಿಶ್ವೇಶ್ವರ ಪ್ರಾಂತಕ್ಕೆ ದಾನವಾಗಿ ಕೊಟ್ಟಿರಬೇಕೆಂದು ಊಹಿಸಬಹುದಾಗಿದೆ. ಆದರೆ ಈ ಭೂಮಿಯನ್ನು ಶ್ರೀವಿಶ್ವೇಶ್ವರ ಪ್ರಾಂತಕ್ಕೆ ದಾನ ಕೊಟ್ಟಿದ್ದೇ ಆಗಿದ್ದಲ್ಲಿ, ಈ ದಾನ ಕೊಟ್ಟ ವ್ಯಕ್ತಿಯಾರೆಂದು ತಿಳಿಸಿಲ್ಲ. ಈ ನಾಲ್ಕು ದಿಕ್ಕಿನಲ್ಲಿ ದೊರೆತ ಲಿಂಗಮುದ್ರೆಕಲ್ಲಿನ ಸ್ಥಳವು ಸು.೯ ಎಕರೆ ಇತ್ತು. ಸ್ಥಳೀಯರ ಹೇಳಿಕೆಯಂತೆ ಈ ಜಾಗಕ್ಕೆ ಹಿಂದೆ ಹೊಸೂರು ಮಾನ್ಯವು ಎಂದು ಕರೆಯುತ್ತಿದ್ದರು. ಆದರೆ ಹೊಸೂರು ಗ್ರಾಮದ ಈ ಭೂಮಿಯನ್ನು ಶಿವಪುರದ ವಿಶ್ವೇಶ್ವರ ಪ್ರಾಂತಕ್ಕೆ ಮಾನ್ಯವಾಗಿ ದಾನ ಬಿಟ್ಟಿರಬೇಕು. ಅದೇ ವಿಷಯವನ್ನು ಶಾಸನಗಳು ಉಲ್ಲೇಖಿಸಿರಬೇಕು.

ಈ ಹೊಸೂರು ಮಾನ್ಯವು ಎಂಬ ಜಾಗವನ್ನು ಘೋರ್ಪಡೆಯವರ ಕಾಲದಲ್ಲಿ ಸರಕಾರದ ವಶಕ್ಕೆ ಕೊಡಲಾಯಿತು. ಈಗ ಈ ಜಾಗಕ್ಕೆ ಜನತಾ ಕಾಲೋನಿ ಎನ್ನುತ್ತಾರೆ. ಭುಜಂಗನಗರಕ್ಕೆ ಹಿಂದೆ 'ಹೊಸೂರು ಮಾನ್ಯವು' ಎಂಬ ಹೆಸರಿತ್ತೆಂದು ಸ್ಥಳೀಯರ ಹೇಳಿಕೆಯಿಂದ ತಿಳಿದು ಬರುತ್ತದೆ. ಇದರಿಂದ ವ್ಯಕ್ತವಾಗುವುದೇನೆಂದರೆ ಈ ಹೊಸೂರು (ಹೊಸ + ಊರು) ಮುಂದೆ ಹೊಸಹಳ್ಳಿ->ಹೊಸಳ್ಳಿ ಎಂದು ಆಗಿರಬೇಕು. ಅದನ್ನೇ ಸ್ಥಳಿಯರು ಇಂದಿಗೂ ಈ ಗ್ರಾಮಕ್ಕೆ ಹೊಸಳ್ಳಿ ಎಂದು ಕರೆಯುತ್ತಾರೆ. ಆದರೆ ಈಗ ಘೋರ್ಪಡೆಯವರು ಈ ಹೊಸಳ್ಳಿ ಗ್ರಾಮಕ್ಕೆ ತಮ್ಮ ವಂಶದಲ್ಲಿ ಒಬ್ಬರಾದ ಭುಜಂಗರಾವ್‌ರವರ ಹೆಸರನ್ನು ಇಟ್ಟು 'ಭುಜಂಗನಗರ' ಎಂದು ಹೆಸರು ಬದಲಾಯಿಸಿರುವುದನ್ನು ಕಾಣುತ್ತೇವೆ.

೩.೬. ಸ್ಥಳೀಯರಿಂದ ದಾನ

ಗ್ರಾಮದಲ್ಲಿ ಜರುಗಿದ ಕೆಲವು ಹತ್ಯೆಗಳಂತಹ ದೃಷ್ಕೃತ್ಯಗಳಿಂದ ಪರಿಹಾರ ಕಂಡುಕೊಳ್ಳುವ ಸಲುವಾಗಿ ಗ್ರಾಮದ ಜನರೆಲ್ಲರು ಸೇರಿ ದಾನವನ್ನು ನೀಡುತ್ತಿದ್ದರು ಎಂಬುದನ್ನು ಶಾಸನಗಳಿಂದ

ತಿಳಿದುಕೊಳ್ಳಬಹುದಾಗಿದೆ. ಅಂತಹ ಸ್ಥಳೀಯರಿಂದ ನೀಡಲ್ಪಟ್ಟ ದಾನ ಶಾಸನವನ್ನು ಈ ತಾಲ್ಲೂಕಿನಲ್ಲಿಯೂ ಕಾಣುತ್ತೇವೆ. ಅಂತಹ ಒಂದು ಶಾಸನ ಈ ತಾಲ್ಲೂಕಿನ ಜೋಗ ಗ್ರಾಮದಲ್ಲಿ ದೊರಕಿದ್ದು, ಅದನ್ನು ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಸಂಡೂರು ತಾಲ್ಲೂಕಿನ ಜೋಗ ಗ್ರಾಮದಲ್ಲಿಯ ಜಂಗಮರ ಮನೆಯಲ್ಲಿ ದೊರೆತ ಕ್ರಿ.ಶ.೧೫೪೫ರ ಅವಧಿಗೆ ಸರಿ ಹೊಂದುವ ಶಾಸನದ ನಕಲನ್ನು ಕ್ರಿ.ಶ.೧೮ನೇ ಶತಮಾನದಲ್ಲಿ ಮರು ನಕಲಿ ಮಾಡಿಸಿರಬಹುದಾದ ಶಾಸನ ಇದಾಗಿರಬೇಕು. ಪ್ರಸ್ತುತ ಶಾಸನವನ್ನು ಸಿದ್ಧ ವೀರಪ್ಪ ಸಂಗನಬಸಪ್ಪ ಎಂಬ ಜಂಗಮನ ಹತ್ಯೆಗೈದ ಸಂದರ್ಭದಲ್ಲಿ ಅದರ ಪರಿಹಾರಕ್ಕಾಗಿ ಹತ್ಯೆಗೈದ ಕುಡುತಿನಿ ತಳವಾರ ಗೊಸ ಪೆಂನ್ನಯ್ಯನ ಪರವಾಗಿ ಅವನ ತಳವಾರಿಕೆಗೆ ಸೇರಿದ ಗ್ರಾಮದ ಜನರು ತಮ್ಮ ರಾಜ್ಯದಲ್ಲಿ ಜರುಗಿದ ಜಂಗಮ ಹತ್ಯೆಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಸೇರಿ ದಾನವನ್ನು ನೀಡಿದರು ಎಂದು ಶಾಸನ ದಾಖಲಿಸುವುದು.[೧೦೩]

ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಪರಿಹಾರಗಳೆಂದರೆ, ದರೋಜಿ ವಳಿತದಲ್ಲಿನ ಹರ್ಲಾಪುರ ಗ್ರಾಮ, ಕುಡತಿನಿಯಲ್ಲಿ ೫ ಖಂಡುಗ ಕೃಷ್ಣ ಭೂಮಿ ಮತ್ತು ಅವುಗಳ ಮಾನ್ಯ, ಪಸಿಗೆ, ಪಳಿಗೆ, ಮಗ್ಗವ ೧ ಟೆಂ ಮದುವೆ ಊಟ ನಾಲ್ಕು ದುಡ್ಡು, ಗಾಣಕೆ ಎಣ್ಣೆ ಮಗೆ ಎರಡು, ಗುಡೇಕೋಟೆ, ಸೊಂಡೂರು ರಾಜ್ಯದ ಒಳಗೆ ಹೇರು ಒಂದಕ್ಕೆ ದುಡ್ಡು, ಮೆಲ್ಲುಗಾಸು, ಹೊರೆಹುಲ್ಲು, ಮೊರಬತ್ತ ಮತ್ತು ಮೇಟಿ ಕೊಳಗ ಇದರೊಂದಿಗೆ ಪ್ರಾಣ ಹತ್ಯೆಗೊಳಗಾದ ಜಂಗಮನ ಪ್ರತಿಮೆಯನ್ನು ಬಂಗಾರದಲ್ಲಿ ಮಾಡಿಸಿ ಅದಕ್ಕೆ ಪ್ರಾಣ ಪ್ರತಿಷ್ಠೆ ಮಾಡಿಸುವ ಸಲುವಾಗಿ ೨೨೦ ವರಾಹ ಮತ್ತು ೨೨೦ ಹಚಡಗಳನ್ನು ನೀಡಿದರು. ಈ ಪರಿಹಾರಗಳು ಬಹುತೇಕವಾಗಿ ವಿಜಯನಗರ ಕಾಲದಲ್ಲಿ ಬಳಕೆಯಲ್ಲಿದ್ದಂತಹ ತೆರಿಗೆಗಳಾಗಿವೆ.

ಈ ಶಾಸನದಲ್ಲಿ ಗೋಸ ಪೆಂನ್ನಯ್ಯನ ತಳವಾರಿಕೆಗೆ ಸೇರಿದ ಗ್ರಾಮಗಳ ಹೆಸರುಗಳನ್ನು ಉಲ್ಲೇಖಿಸುವುದು ಅತ್ಯಂತ ಕುತೂಹಲಕಾರಿಯಾಗಿರುವ ವಿಷಯವಾಗಿದೆ. ಇದರಲ್ಲಿ ಕಂಡುಬರುವ ಅನೇಕ ಗ್ರಾಮನಾಮಗಳು ಇಂದಿನ ಬಳ್ಳಾರಿ ಜಿಲ್ಲೆಯ ಸೊಂಡೂರು, ಹೊಸಪೇಟೆ, ಕೂಡ್ಲಿಗಿ ತಾಲ್ಲೂಕುಗಳಲ್ಲಿ ಇಂದಿಗೂ ಅದೇ ಹೆಸರುಗಳೊಂದಿಗೆ ಇರುವುದು ಗಮನಾರ್ಹ. ಇದರಂತೆಯೇ ವ್ಯಕ್ತಿನಾಮಗಳಿಂದ ತಿಳಿಯಬಹುದಾದ ಅಂಶವೇನೆಂದರೆ, ಉಲ್ಲೇಖಿತ ವ್ಯಕ್ತಿಗಳು ಸಮಾಜದಲ್ಲಿ ಅತ್ಯಂತ ಪ್ರಮುಖರಾಗಿರಬೇಕೆಂದು ಅವರ ಹೆಸರಿನೊಂದಿಗೆ ಬಳಸಿರುವ ಗುಣವಾಚಕಗಳಿಂದ ಅರಿಯಬಹುದಾಗಿದೆ. ಈ ದಾನ ಶಾಸನದಲ್ಲಿ ಕಂಡುಬರುವ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು ಈ ರೀತಿಯಾಗಿವೆ.

ಇದರಲ್ಲಿ ಹಂಪಿಯ ಸ್ಥಳನಾಮಗಳಾದಂತ ಕಿಷ್ಕಿಂದ, ಹಸ್ತಿನಾವತಿ, ಮಾತಂಗ, ಮಾಲ್ಯವಂತ, ಮುನಿಶೃಂಗ, ಹೇಮಕೂಟ ಉಲ್ಲೇಖಗೊಂಡಿದೆ. ವಿದ್ಯಾನಗರದ ಹಿರೇಮಠ ಅದರ ಮಠಾಧಿಪತಿ, ಮಳೆ

ಹಿರೆಸಿದ ವೀರಣ್ಣ ಒಡೆದೇವರು ಮತ್ತು ಹಲವಾರು ವ್ಯಕ್ತಿಗಳ ಹೆಸರುಗಳು ಕಂಡುಬರುತ್ತವೆ. ಚಿಟಿಗ ಸಂಗನ ಬಸವ್ಪನ ಶಿಷ್ಯ ಗಣಪನ್ನ ದೇವರು, ಸೊಂಡೂರು ರಾಜಪ್ಪನಾಯಕರು ಸೊಂಡೂರು ರಾಚನ್ನಗೌಡ, ವಡ್ಡಿನ ಚನಮಲ್ಲಗೌಡ, ಶಾನಭೋಗ ಬಿಸ್ಪಪ್ಪ, ಕುಡತಿನಿ ಗಂಗಣ್ಣಗೌಡ, ಪರ್ವತಗೌಡ, ಮಲ್ಲನಗೌಡ, ಚಿರತನ ಗುಡ್ನದ ತಿಮ್ಮನಗೌಡ, ಶಾನಭೋಗ ವಡಿಯಪ್ಪ, ಕುಡತಿನಿ ತಳವಾರ ಶಿರಿನಾಯಕ, ಬಿಲ್ಲಿನಾಯಕ ದರೋಜಿ ಜಕ್ಕನಗೌಡ, ಪಟ್ಟಣ್ಣಸೆಟ್ಟಿ ರಾಮಿಸೆಟ್ಟಿ ಹೊಂನಹಳಿ ಬಸವನಗೌಡ, ಬಯಲೊದಗೆರೆ ಮಲ್ಲನಗೌಡ ಕಮಲಾಪುರ ಬಸವನಗೌಡ, ಹೊನ್ನಪ್ಪಗೌಡ, ಹೊಸೂರು ಚಿಕ್ಕನಗೌಡ, ಸೊಂಡೂರು ಪಟ್ಟಣಸೆಟ್ಟಿ, ಗುಳಸೆಟ್ಟಿ, ಲಕ್ಕಿಸೆಟ್ಟಿ, ಬಳ್ಳಾರಿ ಚೆಂನ್ನಪ್ಪ ಮತ್ತು ವಾಲೆ ಶಂಕಣ್ಣ ಇವರೆಲ್ಲಾ ಸೇರಿಕೊಟ್ಟದಾನ ಪತ್ರ. ಇದರಲ್ಲಿ ಉಲ್ಲೇಖಿಗೊಂಡ ಗ್ರಾಮಗಳು : ಸಂಡೂರು, ವಡ್ಡು, ಕುಡಿತಿನಿ, ಚಿರತನಗುಡ್ಡ, ದರೋಜಿ, ಹೊಂನಹಳ್ಳಿ, ಬಯಲೊದಗೆರೆ, ಕಮಲಾಪುರ, ಹೊಸೂರು, ಹರ್ಲಾಪುರ, ಗುಡೇಕೋಟೆ ಮತ್ತು ವಿದ್ಯಾನಗರ. ವಡ್ಡಿನ ಶಾನಭೋಗ ಹೊಂಚನ ಕೊಮಲೆ ಮಗ ಬಿಸ್ಪಪ್ಪನ ಸುತ ಎಂಬುವವನು ಈ ದಾನ ಶಾಸನವನ್ನು ಬರೆದನು ಎಂದು ಉಲ್ಲೇಖಿಸುತ್ತದೆ.

೩.೭. ಶಾಸನೋಲ್ಲೇಖಿತ ವಂಶಾವಳಿಗಳು

ಸಂಡೂರು ತಾಲ್ಲೂಕಿನ ಕೆಲವು ಶಾಸನಗಳಲ್ಲಿ ಆಯಾ ಕಾಲದ ಅರಸರ ದೀರ್ಘವಾದ ವಂಶಾವಳಿ ನೀಡಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಕಂಡು ಬರುವ ಮೊದಲ ಶಾಸನವೆಂದರೆ ಕ್ರಿ.ಶ.೧೦೪೭ರ ಕಲ್ಯಾಣ ಚಾಲುಕ್ಯ ಅರಸ ಜಯಸಿಂಹನ ಅವಧಿಯದು. ನಂತರದ್ದು ಎಂದರೆ ಕ್ರಿ.ಶ.೧೨೨೪ರ ಹೊಯ್ಸಳ ಅರಸರ ಕಾಲದ್ದು, ಆನಂತರದ್ದೆಂದರೆ ಕ್ರಿ.ಶ.೧೫೨೭ರ ಮುಮ್ಮಡಿಸಿಂಗನ ಅವಧಿಯದು, ಕೊನೆಯದ್ದೆಂದರೆ ವಿಜಯನಗರದ ಅಧಿಕಾರಿ ಬಯಕಾರ ರಾಮಪ್ಪಯ್ಯನು ಹಾಕಿಸಿರುವ ಕ್ರಿ.ಶ.೧೫೪೯ನೇ ಅವಧಿಯ ಶಾಸನ. ಈ ವಿಷಯಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಈ ತಾಲ್ಲೂಕಿನ ತಾರಾನಗರದ ನಾರಿಹಳ್ಳ ಯೋಜನೆಯಲ್ಲಿಯ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ಕ್ರಿ.ಶ.೧೦೪೭ರ[೧೦೪] ತಾಮ್ರ ಶಾಸನವು ಕಲ್ಯಾಣ ಚಾಲುಕ್ಯರ ದೊರೆ ಜಯಸಿಂಹನ ಮಗನಾದ ತ್ರೈಲೋಕ್ಯಮಲ್ಲದೇವನ ಕಾಲದ್ದಾಗಿದೆ. ಇದು ಚಾಳುಕ್ಯರ ವಂಶಾವಳಿಯನ್ನು ವಿವರವಾಗಿ ನೀಡಿದೆ. ಚಾಲುಕ್ಯ ಅರಸರ ವಂಶಾವಳಿಯನ್ನು ಶಾಸನ ಮತ್ತು ಕಾವ್ಯಗಳಲ್ಲಿ ಪೌರಾಣಿಕ ಹಿನ್ನೆಲೆಯೊಂದಿಗೆ ಹೇಳಲಾಗಿರುವುದನ್ನು ಕಾಣುತ್ತೇವೆ. ಅದರಂತೆಯೇ ಈ ಶಾಸನದಲ್ಲಿಯು ಸಹ ಚಾಲುಕ್ಯರ ವಂಶಾವಳಿಯು ಪೌರಾಣಿಕ ಹಿನ್ನೆಲೆಯೊಂದಿಗೆ ಪ್ರಾರಂಭವಾಗಿದೆ. ಅದನ್ನು ಈ ರೀತಿ ನಿರೂಪಿಸಲಾಗಿದೆ.

ಚಾಳುಕ್ಯರ ವಂಶಾವಳಿ

- ಹಾರೀತ
  - ಜಯಸಿಂಹ
    - ರಣರಾಗ
      - ಪುಲಿಕೇಶಿ
        - ಕೀರ್ತಿವರ್ಮ-I
          - ಸತ್ಯಾಶ್ರಮ
            - ಆದಿತ್ಯವರ್ಮ
              - ವಿಕ್ರಮಾದಿತ್ಯ-I
                - ಯುದ್ಧಮಲ್ಲ
                  - ವಿಜಯಾದಿತ್ಯ
                    - ವಿಕ್ರಮಾದಿತ್ಯ-II
                    - ಕೀರ್ತಿವರ್ಮ-II
                      - ತೈಲಭೂಪ-I
                        - ವಿಕ್ರಮಾದಿತ್ಯ-III
                          - ಭೀಮರಾಜ (ಭೀಮಪರಾಕ್ರಮ)
                            - ಅಯ್ಯಣಾರ್ಯ
                              - ವಿಕ್ರಮಾದಿತ್ಯ-IV + ವೊಂಥಾದೇವಿ*
                                - ತೈಲ-II + ಜಾಕಾವ್ವ
                                  - ಸತ್ಯಾಶ್ರಯ
                                  - ದಶವರ್ಮ + ಭಾಗವತಿದೇವಿ
                                    - ವಿಕ್ರಮಾದಿತ್ಯ
                                    - ಜಯಸಿಂಹ
                                      - ಅಹವಮಲ್ಲದೇವ
        - ಮಂಗಳೇಶ

* ಕೆಲವು ಶಾಸನಗಳಲ್ಲಿ 'ಬೊಂತಾದೇವಿ' ಎಂದು ಉಲ್ಲೇಖಿಸಿರುವುದನ್ನು ಕಾಣುತ್ತೇವೆ (ಐ.ಎ.IV2, ೧೦೭೫-೭೬ ಬಳ್ಳಿಗಾವಿ, ಶಿಕಾರಿಪುರ ತಾ., ಶಿವಮೊಗ್ಗ ಜಿಲ್ಲೆ). ಆದರೆ ಈ ಶಾಸನದಲ್ಲಿ 'ವೊಂಥಾದೇವಿ' ಎಂದು ಉಲ್ಲೇಖವಾಗಿದ್ದನ್ನು ಗಮನಿಸಿದರೆ ಇಲ್ಲಿ ಬ > ವ ಬದಲಾವಣೆಯಿಂದಾಗಿ ಬೊಂಥಾದೇವಿ ಎಂಬುದು ವೊಂಥಾದೇವಿಯಾಗಿ ಬಳಕೆಯಾಗಿರಬೇಕೆಂದು ಊಹಿಸಬಹುದಾಗಿದೆ.

ಈ ಶಾಸನದಲ್ಲಿ ವಿಕ್ರಮಾದಿತ್ಯ-IVನ ಹೆಂಡತಿಯ ಹೆಸರನ್ನು 'ವೊಂಥಾದೇವಿ' ಎಂದು ಉಲ್ಲೇಖಿಸಿದೆ. ಆದರೆ ಕೆಲವು ಶಾಸನಗಳಲ್ಲಿ ಈಕೆಯ ಹೆಸರನ್ನು ಬೊಂತಾದೇವಿ ಎಂದು ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಈ ಶಾಸನವು ಎರಡನೆಯ ತೈಲನ ಹೆಂಡತಿಯ ಹೆಸರನ್ನು ಜಾಕಾವ್ವ ಎಂದು ಹಾಗೂ ದಶವರ್ಮನ ಹೆಂಡತಿಯ ಹೆಸರನ್ನು ಭಾಗವತಿದೇವಿ ಎಂದು ಉಲ್ಲೇಖಿಸಿರುವುದನ್ನು ಕಾಣುತ್ತೇವೆ.

ಮೇಲ್ಕಂಡ ಸ್ಥಳದಲ್ಲಿ ದೊರೆತ ಕ್ರಿ.ಶ.೧೨೨೪ರ[೧೦೫] ಮತ್ತೊಂದು ತಾಮ್ರ ಶಾಸನವು ಹೊಯ್ಸಳ ವಂಶದ ಉಲ್ಲೇಖವನ್ನು ನೀಡುತ್ತದೆ. ಸಳನೆಂಬುವವನಿಂದ ಹೊಯ್ಸಳ ವಂಶ ಸ್ಥಾಪಿತವಾಯಿತು ಎಂದು ತಿಳಿಸುತ್ತ, ಈ ವಂಶದಲ್ಲಿ ಪ್ರಖ್ಯಾತನಾದವನು-

ವಿನಯಾದಿತ್ಯ

|

ಎರೆಯಂಗ

|

ವಿಷ್ಣು

|

ನರಸಿಂಗನಾತ

|

ಬಲ್ಲಾಳ

|

ನೃಸಿಂಹ (ವೀರನಾರಸಿಂಹ)

ಈ ಶಾಸನದಲ್ಲಿ ಕೇವಲ ಈ ಆರು ಅರಸರ ಕುರಿತು ಮಾತ್ರ ಉಲ್ಲೇಖವಿದೆ. ನಂತರ ವೀರ ನರಸಿಂಹದೇವನನ್ನು ಅನೇಕ ಬಿರುದುಗಳಿಂದ ಹೊಗಳಿದ ಭಾಗವಿದೆ. ಆನಂತರ ಕಲ್ಕಣಿನಾಡ ಅಗ್ರಹಾರವಾದ ಶ್ರೀಪುರ ಗ್ರಾಮದಲ್ಲಿ ತ್ರಿಕೂಟೇಶ್ವರ ದೇವಾಲಯ ನಿರ್ಮಿಸಿ, ಕೊಂಡುಕಸೀವುರ ಗ್ರಾಮವನ್ನು ಸರ್ವಬಾಧಾ ಪರಿಹಾರಕ್ಕಾಗಿ ದಾನ ನೀಡಿದ ಹಾಗೂ ಆ ಗ್ರಾಮದ ಮೇರೆಯ ಕುರಿತು ವಿವರಣೆ ನೀಡುತ್ತದೆ.

ಈ ತಾಲ್ಲೂಕಿನ ರಾಮಘುಡದ ರಾಮದೇವರ ದೇವಾಲಯದ ಮುಂಭಾಗದ ಗೋಡೆಗೆ ಒರಗಿಸಿರುವ ಕ್ರಿ.ಶ.೧೫೨೭ರ ಹೊಸಮಲೆ (ರಾಮನಮಲೆ) ಶಾಸನವು ಮುಮ್ಮಡಿಸಿಂಗನ ವಂಶಾವಳಿಯನ್ನು ತಿಳಿಸುತ್ತದೆ.

ಮುಮ್ಮಡಿ ಸಿಂಗೇಯನಾಯಕ
(ಹೆಂಡತಿ-ಮಾದನಾಯಕಿತಿ)
|
ಕಂಪಿಲದೇವ ಅಥವಾ ಖಂಡೇಯರಾಯ
(ಹೆಂಡತಿ-ಗುಜಲಹರಿಯಾಲದೇವಿ)
|
ಕುಮಾರರಾಮನಾಥ

ಈ ಶಾಸನಾಧಾರದಿಂದ ಕುಮ್ಮಟನಾಯಕರ ವಂಶದಲ್ಲಿಯ ಮೂಲಪುರುಷ ಮುಮ್ಮಡಿ ಸಿಂಗೇಯನಾಯಕ ಎಂದು ತಿಳಿದು ಬರುತ್ತದೆ. ಇವನ ಮಗ ಕಂಪಿಲದೇವ ಈತನ ಮಗ ಕುಮಾರರಾಮನಾಥ ಎಂದು ಈ ಮೂವರನ್ನು ಮಾತ್ರ ಗುರುತಿಸಬಹುದಾಗಿದೆ.[೧೦೭] ಮುಮ್ಮಡಿಸಿಂಗೇಯನಾಯಕನ ಹೆಂಡತಿ ಮಾದನಾಯಕತಿ ತಮಗೆ ಹುಟ್ಟಿದ ಗಂಡು ಮಗುವಿಗೆ ಕಂಪಿಲಿಯ ಸೋಮೇಶ್ವರನ ಹೆಸರಿನಲ್ಲಿ ಕಂಪಿಲದೇವನೆಂದು ಹೆಸರಿಡುತ್ತಾರೆ. ಕಂಪಿಲದೇವನಿಗೆ ಖಂಡೇಯರಾಯ ಎಂಬ ಇನ್ನೊಂದು ಹೆಸರಿತ್ತೆಂದು ಈ ಶಾಸನದಿಂದ ತಿಳಿದುಬರುವುದು. ಹಾಗೂ ಈ ಶಾಸನದಲ್ಲಿಯ ಮಾಹಿತಿಯನ್ನಾಧರಿಸಿ ಇಂದಿನ ಸಂಡೂರು ತಾಲ್ಲೂಕಿನ ರಾಮಘಡವೇ ಹೊಸಮಲೆದುರ್ಗವೆಂದು ಮತ್ತು ಇದು ಕಂಪಿಲನ ಇನ್ನೊಂದು ರಾಜಧಾನಿಯಾಗಿತ್ತೆಂದು ವಿದ್ವಾಂಸರು ಗುರುತಿಸಿದ್ದಾರೆ. ಹೀಗೆ ಕಂಪಿಲನು ರಕ್ಷಣೆ ಮತ್ತು ಸೌಲಭ್ಯದ ದೃಷ್ಟಿಯಿಂದ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಿರಿದುರ್ಗವನ್ನು ನಿರ್ಮಿಸಿ ಅದನ್ನು ಹೊಸಮಲೆದುರ್ಗವೆಂದು ಕರೆದು ತನ್ನ ಮತ್ತೊಂದು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ಹೇಳಬಹುದು. ಆದರೂ ಕುಮ್ಮಟದುರ್ಗವೇ ಮುಖ್ಯ ರಾಜಧಾನಿಯಾಗಿತ್ತು. 'ಹೊಸಮಲೆಯ ರಾಮನಾಥ ವೊಡೆಯನ (ಕುಮಾರರಾಮನ) ನೆನಪಿಗೆ, ರಾಮಘಡದಲ್ಲಿ ಕಟ್ಟಿಸಿದ ರಾಮನಾಥ ದೇವಾಲಯದಿಂದಾಗಿ ಹೊಸಮಲೆದುರ್ಗ ನಂತರದ ಕಾಲದಲ್ಲಿ ರಾಮಘಡವೆಂಬ ಹೆಸರನ್ನು ಪಡೆಯಿತೆನ್ನಬಹುದು.

ವಿಜಯನಗರದ ಅರಸ ಶ್ರೀಕೃಷ್ಣದೇವಮಹಾರಾಯನ ಆಳ್ವಿಕೆಯಲ್ಲಿ ಹೊಸಮಲೆದುರ್ಗದ ಮುಮ್ಮಡಿಸಿಂಗನ ಮೊಮ್ಮಗನೂ, ಕಂಪಿಲರಾಯ ಮತ್ತು ಹರಿಯಾಲದೇವಿಯರ ಮಗನೂ ಆದ ರಾಮನಾಥ ಒಡೆಯರು ಛಪ್ಪನ ದೇಶದ ರಾಯರಗಂಡ ಆತನ ಮನೆಯ ಹಾಡುಗಾರ ಸೋಮಣಯ್ಯ ವಿಜಯನಗರದ ಹೂವಿನ ಬಾಗಿಲ ಹನುಮಂತ ದೇವರ ಪೂಜಾರಿ ರಾಮಣನು ಆತನ ಮಗ ಸೋಮಣ ಯನು ಶಿಷ್ಯ ರಾಮನಾಥನ ಕೋನೇರಿನಾಯಕನ ಮಗಳು ಕಾಟಿನಾಯಕ ಒಡೆಯ ಹಳದರಾಮನಾಥನ ಗೋಪಾಯಿ ಆಕೆಯ ತಮ್ಮ ತೂಳದ ರಾಮಣನು ಹೊಸಮಲೆದುರ್ಗದ ರಾಮನಾಥ ದೇವರ ಗುಡಿಯನ್ನು ಕಟ್ಟಿಸಿ ಗಂಟೆ, ಜಾಗಟೆ, ಹರಿವಾಣ, ಚೆಂಬು ಮೇಲೆ ಹೊನ್ನನು ಸಮರ್ಪಿಸಿ ರಾಮನಾಥನ ಕಾಲದ ಪೂರ್ವದ ಛಪ್ಪನ್ನಸಮಂದಿ ವೀರರಿಗೆ ವೀರಸ್ವರ್ಗ ಪ್ರಾಪ್ತವಾಗಲಿ ಎಂದು ಈ ದೇವಾಲಯವನ್ನು ಕಟ್ಟಿಸುತ್ತಾಳೆ.

ಈ ತಾಲ್ಲೂಕಿನ ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆಕಟ್ಟೆಯ ಬಳಿ ಇರುವ ಕ್ರಿ.ಶ.೧೫೩೯ರ ಶಾಸನವು[೧೦೭] ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಕೊಂಡವೀಟಿಯ ಸಿಂಗಯ ಇವನ ಮಗ ಭಾವಯಮಂತ್ರಿ ಇವನ ಮಗ ರಾಮಮಂತ್ರಿ, ಇವನ ಪತ್ನಿ ತೆಲುಗಮಾಂಬ ಇವರ ಮಗ ಪೆದತಿಮ್ಮರಸಯ್ಯ ಪತ್ನಿ ಲಕ್ಕಾಂಬಿಕೆ ಇವರ ಮಗನೇ ರಾಮಪ್ಪಯ್ಯ ಅವನ ಪತ್ನಿ ವೀರಮ್ಮ ಹಾಗೂ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ ತನ್ನ ತಮ್ಮ ಕೃಷ್ಣಪ್ಪ ತನ್ನ ಮಗ ಶಿಂಗಾಲಯ್ಯ ಮತ್ತು ಸುರೀಂದ್ರ, ಭಾಸ್ಕರ, ಭಾವಯ ಮುಂತಾದವರು ಇವನ ಚಿಕ್ಕಪ್ಪಂದಿರಾಗಿದ್ದರೆಂದು ತಿಳಿಸುವುದು.

ಬಯಕಾರ ರಾಮಪ್ಪಯ್ಯನ ವಂಶಾವಳಿ

ಸಿಂಗಯ

ಭಾವಯ ಮಂತ್ರಿ

ರಾಮಮಂತ್ರಿ ಹೆಂಡತಿ ತೆಲುಗಮಾಂಬ

ಹಿರಿಯ ತಿಮ್ಮರಸಯ್ಯ
ಹೆಂ.ಲಕ್ಕಾಂಬಿಕೆ | ಬಾಚರಸ
ಹೆಂ.ಅಂಮಾಜಮ್ಮ | ಸುರೀಂದ್ರ | ಭಾಸ್ಕರ | ಭಾವಯ

ಬಯಕಾರ ರಾಮಪ್ಪಯ್ಯ
ಹೆಂ.ವೀರಮ್ಮ | ಕೃಷ್ಣಪ್ಪ

ಸಿಂಗಾಲಯ್ಯ | ಅಕ್ಕಪ್ಪ | ಲಕ್ಕರಸಮ್ಮ | ಅಚುತಮ್ಮ

೩.೮. ಶಾಸನೋಲ್ಲೇಖಿತ ನಾಡುಗಳು

'ನಾಡು' ಎಂದರೆ ಪ್ರಾಚೀನ ಕಾಲದ ಒಂದು ಆಡಳಿತ ವಿಭಾಗ. ಇದು ಅನೇಕ ಹಳ್ಳಿಗಳನ್ನೊಳಗೊಂಡ ವಿಶಾಲವಾದ ಭೂಪ್ರದೇಶವಾಗಿದ್ದು, ಈ ಆಡಳಿತ ವಿಭಾಗದಲ್ಲಿ ಇಂತಿಷ್ಟೇ ಹಳ್ಳಿಗಳ ವ್ಯಾಪ್ತಿಯನ್ನು ಒಳಗೊಂಡಿರಬೇಕಾದ ನಿರ್ದಿಷ್ಟ ಪ್ರದೇಶವಾಗಿತ್ತು.

ಈ ಶಬ್ದ ಮೊದಮೊದಲು ಪ್ರಾದೇಶಿಕ ವಿಭಾಗವಾಗಿ ನಂತರ ಸ್ವತಂತ್ರ ಊರು ಇಲ್ಲವೆ ಸ್ಥಳನಾಮ ವಾರ್ಗಿಕವಾಗಿ ಬಳಕೆಯಲ್ಲಿ ಬಂದಂತೆ ತೋರುತ್ತದೆ. ದ್ರಾವಿಡ ಭಾಷೆಗಳಾದ ತಮಿಳು ಮತ್ತು ಮಲೆಯಾಳಂನಲ್ಲಿ 'ನಾಟ್ಟು' ಎಂದು, ಕನ್ನಡ, ತುಳು, ತೆಲುಗು ಭಾಷೆಗಳಲ್ಲಿ 'ನಾಡು' ಎಂಬ ರೂಪವಿದ್ದು ಅದು ದೇಶ, ಪ್ರಾಂತ, ಹಳ್ಳಿ, ಸ್ಥಳ, ಭೂಮಿ, ಸಾಗುವಳಿ ಪ್ರದೇಶ ಎಂಬರ್ಥವನ್ನು ಪಡೆದಿದೆ.[೧೦೮]

ಆದರೆ ಶಾಸನಗಳಲ್ಲಿ 'ನಾಡು' ಎಂಬ ಪದವನ್ನು ದೊಡ್ಡ ಹಾಗೂ ಸಣ್ಣ ವಿಭಾಗಗಳಿಗೂ ಬಳಸಲಾಗಿದೆ. 'ನಾಡು' ಎಂಬ ಪದ ದೊಡ್ಡ, ಸಣ್ಣ, ಅತಿಸಣ್ಣ ವಿಭಾಗಗಳಿಗೂ ಬಳಸಿರುವುದರಿಂದ ಅದು ಸ್ಥೂಲವಾಗಿ 'ಪ್ರದೇಶ' ಎಂಬ ಅರ್ಥವನ್ನು ನಿರ್ದೇಶಿಸಲು ಮಾತ್ರ ಬಳಕೆಯಾಗಿದೆ.[೧೦೯]

ಸಂಡೂರು ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಕಲ್ಕಣಿನಾಡು, ದೊರವಡಿ-೭೦, ಸ್ವಾಮಿಮಲೆ(ಮೀಳ್ಮಲೆ)ಯ ಪ್ರದೇಶಗಳು ಬಲ್ಲಕುಂದೆ ನಾಡಿನ ಮೂರುನೂರು ಹಳ್ಳಿಗಳ ವ್ಯಾಪ್ತಿಗೆ ಸೇರಿದ ಪ್ರದೇಶಗಳಾಗಿದ್ದವು ಎಂಬ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕಲ್ಕಣಿನಾಡು

ಸಂಡೂರು ತಾಲ್ಲೂಕಿನ ತಾರಾನಗರದ ನಾರಿಹಳ್ಳದ ಯೋಜನೆಯಲ್ಲಿ ದೊರೆತ ಎರಡನೆಯ ಕ್ರಿ.ಶ.೧೨೨೪ರ ತಾಮ್ರ ಶಾಸನದಲ್ಲಿ ಕಲ್ಕಣಿನಾಡಿನ ಉಲ್ಲೇಖವಿದೆ. "ಕಲ್ಕಣಿನಾಡೊಳಗಣ ಅಗ್ರಹಾರಂ ಶ್ರೀಪುರ" (ಶಿವಪುರ) ಎಂದು ಗ್ರಾಮನಾಮವನ್ನು ಉಲ್ಲೇಖಿಸಿದೆ.[೧೧೦] ಅದೇ ರೀತಿ ಕುರುಗೋಡು ಶಾಸನದಲ್ಲಿ ಅಲ್ಲಿಯ ಸ್ವಯಂಭು ದೇವಾಲಯದ ಸ್ಥಾನಾಚಾರ್ಯರಾದ ಬಾಲ ಶಿವಾಚಾರ್ಯರಿಗೆ ಕೊತ್ತಲಜಿಂತೆ ಗ್ರಾಮವನ್ನು ನೀಡಿದ ಉಲ್ಲೇಖವಿದ್ದು, ಈ ಶಾಸನದಲ್ಲಿಯೂ ಶ್ರೀಪುರ ಎಂಬ ಗ್ರಾಮನಾಮವನ್ನು ಉಲ್ಲೇಖಿಸಲಾಗಿದೆ. ಒಂದು ವೇಳೆ ಮೇಲಿನ ಎರಡು ಶಾಸನಗಳಲ್ಲಿ ಕಂಡು ಬರುವ ಶ್ರೀಪುರ (ಶಿವಪುರ) ಗ್ರಾಮಗಳು ಬಹುಶಃ ಅಭಿನ್ನವಾಗಿರಬೇಕು. ಇದು ನಿಜವಾದರೆ ಕಲ್ಕಣಿನಾಡು ಬಲ್ಲಕುಂದೆಯ ಉಪವಿಭಾಗವೆಂದು ಹೇಳಬೇಕಾಗುತ್ತದೆ. ಈ ವಿಭಾಗವು ಇಂದಿನ ಹೊಸಪೇಟೆ, ಕೂಡ್ಲಿಗಿ ಮತ್ತು ಸೊಂಡೂರು ತಾಲ್ಲೂಕಿನ ಕೆಲವು ಹಳ್ಳಿಗಳ ವ್ಯಾಪ್ತಿ ಪಡೆದಿತ್ತೆಂದು ಸ್ಥೂಲವಾಗಿ ಹೇಳಬಹುದು. ಈ ಶಿವಪುರವು ಪೂರ್ವದಲ್ಲಿ ಹಂದಿಗೊಳ, ದಕ್ಷಿಣದಲ್ಲಿ ಹೊನ್ನಳಿಯ ಮಧ್ಯದಲ್ಲಿದ್ದಿತೆಂದು ಈ ಶಾಸನವು ತಿಳಿಸುತ್ತದೆ. ಅಲ್ಲದೆ ದಣಾಯಕರ ಪ್ರಭುಸಾಮ್ಯಕೆ ವೆಗ್ಗಡೆಯಹಳ್ಳಿ ಮತ್ತು ದಣಾಯಕನ ಕೆರೆಗಳನ್ನು ನೀಡಲಾಗಿತ್ತು. ಕೊತ್ತಲಜಿಂತೆ ಗ್ರಾಮವು ಬಲ್ಲಕುಂದೆ ನಾಡಿನ ಪೂರ್ವ ಸೀಮೆಯಾಗಿದ್ದರೆ ಶಿವಪುರವು ಪಶ್ಚಿಮದ ಸೀಮೆಯಾಗಿರಬೇಕೆಂದು ತಿಳಿದುಬರುತ್ತದೆ.[೧೧೧] ಒಟ್ಟಿನಲ್ಲಿ ಬಲ್ಲಕುಂದೆ ನಾಡಿನ ಉಪವಿಭಾಗಕ್ಕೆ ಸೇರಬಹುದಾದ ಕಲ್ಕಣಿನಾಡು ಎಂಬ ಆಡಳಿತ ವಿಭಾಗವು ಸಂಡೂರು ತಾಲ್ಲೂಕಿನ ಕೆಲವು ಹಳ್ಳಿಗಳ ವ್ಯಾಪ್ತಿಯನ್ನು ಒಳಗೊಂಡ ಪ್ರದೇಶವಾಗಿದ್ದಿತೆಂದು ಈ ಶಾಸನಾಧಾರದಿಂದ ಹೇಳಬಹುದು.

ಸ್ವಾಮಿಮಲೆ(ಮೀಳ್ಮಲೆ)

ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಪ್ರವೇಶದ ಎಡ ಹಸ್ತಿಹಸ್ತದಲ್ಲಿನ ಕ್ರಿ.ಶ.೧೦೭೪ರ ಶಾಸನದಲ್ಲಿ ಮೀಳ್ಮಲೆಯ ಉಲ್ಲೇಖವಿದೆ.[೧೧೨] ಈ ಮೀಳ್ಮಲೆ (ಸ್ವಾಮಿಮಲೆ)ಯು ಇಂದಿನ ಸೊಂಡೂರು ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟವನ್ನೊಳಗೊಂಡ ಪ್ರದೇಶ

ವಾಗಿತ್ತು.[೧೧೩] ಈ ತಾಲ್ಲೂಕಿನ ಸ್ವಾಮಿಹಳ್ಳಿಯೆ ಸ್ವಾಮಿಮಲೆಯ ಮುಖ್ಯ ಪಟ್ಟಣವಾಗಿರಬೇಕು. ಅಂದರೆ ಸ್ವಾಮಿಮಲೆಯ ಮತ್ತೊಂದು ರೂಪವೇ ಸಾವಿಮಲೆಯಾಗಿದೆ. ಆದರೆ ಇದು ಎಷ್ಟು ಹಳ್ಳಿಗಳ ಉಪವಿಭಾಗವಾಗಿತ್ತೆಂಬುದು ಶಾಸನಗಳಿಂದ ತಿಳಿದುಬರುವುದಿಲ್ಲ. ನಾವು ಗಮನಿಸಿದಂತೆ ಕುಮಾರಸ್ವಾಮಿ ಬೆಟ್ಟ, ಕುಡತಿನಿ ಮತ್ತು ಕೊಳಗಲ್ಲುಗಳು ಕಾರ್ತಿಕೇಯ ಸ್ವಾಮಿಯ ತಪೋವನಗಳಾಗಿವೆ. ಈ ಮೂರು ಗ್ರಾಮಗಳ ದೇವಸ್ಥಾನಕ್ಕೆ ಒಬ್ಬರೆ ತಪೋವನಾಧಿಪತಿಗಳು ಪರಂಪರೆಯಾಗಿ ಮುಂದುವರೆದಿದ್ದಾರೆ. ಆದ್ದರಿಂದ ಈ ಸ್ವಾಮಿಮಲೆ(ಮೀಳ್ಮಲೆ)ಯು ಬಲ್ಲಕುಂದೆ ನಾಡಿನ ಉಪವಿಭಾಗವೆಂಬುದು ಸ್ಪಷ್ಟ. ಸೊಂಡೂರು ಮತ್ತು ಅದರ ದಕ್ಷಿಣಕ್ಕಿರುವ ಈ ತಾಲ್ಲೂಕಿನ ಹಳ್ಳಿಗಳು ಇದರಲ್ಲಿ ಸಮಾವೇಶಗೊಂಡಿರಬೇಕು.[೧೧೪]

ಸಂಡೂರಿನ ಕ್ರಿ.ಶ.೧೨೦೬ರ ಶಾಸನದಲ್ಲಿ[೧೧೫] ಉಲ್ಲೇಖಗೊಂಡಿರುವ ಕೆಲವು ಹಳ್ಳಿಗಳು ಬಹುಶಃ ಈ ಸ್ವಾಮಿಮಲೆ (ಮೀಳ್ಮಲೆ)ಯ ವಿಭಾಗದಲ್ಲಿ ಸೇರಿರಬೇಕು. ಅವುಗಳೆಂದರೆ - ಮೀಳ್ಮಲೆ(ಸ್ವಾಮಿಮಲೆ), ಕಗಿನ್ಕಪುರ[೧೧೬] (ಕಾಳಿಂಗೇರಿ), ಕೆರೆಯಪಳ್ಳಿ (ಕೆರೆಯಾಗಿನಹಳ್ಳಿ), ಲಖ್ಖೆಯನಕಟ್ಟೆ (ಲಕ್ಕಲಹಳ್ಳಿ?) ಸೊಂಡೂರು (ಇಂದಿನ ಸಂಡೂರು ಗ್ರಾಮ), ದೇವಗಿರಿ (ಸಂ.ತಾ.ದೇವಗಿರಿ), ಹೊಂನ್ನೊರೆಯಪಳ್ಳಿ, ಬೆಳ್ಳುಗುಪ್ಪೆ, ಒರವಿನ ಕುಪ್ಪೆ, ಕಡುವಿನ ಬೆಂಚೆ.[೧೧೭]

ಒಟ್ಟಾರೆಯಾಗಿ ಗಮನಿಸುವುದಾದರೆ ಈ ತಾಲ್ಲೂಕಿನ ಕ್ರಿ.ಶ.೧೦೬೪ರ ಶಾಸನದಲ್ಲಿ ಉಲ್ಲೇಖಗೊಂಡ ಹಳ್ಳಿಗಳು ಇದೇ ತಾಲ್ಲೂಕಿನಲ್ಲಿ ಕಂಡು ಬರುವ ಗ್ರಾಮಗಳಾಗಿವೆ. ಆದರೆ ಕ್ರಿ.ಶ.೧೨೦೬ರ ಶಾಸನದಲ್ಲಿ ಉಲ್ಲೇಖಗೊಂಡ ಹಳ್ಳಿಗಳಲ್ಲಿ ಕೆಲವು ಗ್ರಾಮಗಳು ಮಾತ್ರ ಇಂದಿಗೂ ಶಾಸನದಲ್ಲಿ ಉಲ್ಲೇಖಗೊಂಡ ಹೆಸರನ್ನೇ ಉಳಿಸಿಕೊಂಡು ಬಂದಿವೆ.

ದೊರವಡಿ-೭೦

ದೊರವಡಿ-೭೦ ಬಲ್ಲಕುಂದೆ ನಾಡಿನ ದೊಡ್ಡ ಉಪವಿಭಾಗಗಳಲ್ಲಿ ಒಂದು. ಇಂದಿನ ಸಂಡೂರು ತಾಲ್ಲೂಕಿನ ಕುಗ್ರಾಮವಾದ ದರೋಜಿಯೇ ಪ್ರಾಚೀನ ದೊರವಡಿ ಎಪ್ಪತ್ತರ ಮುಖ್ಯ ಪಟ್ಟಣವಾಗಿತ್ತು.[೧೧೮] ಒರುವಾಯಿ ಶಾಸನದಲ್ಲಿ 'ದೊರವಡಿಯೆಪ್ಪತ್ತರ ಪ್ರಭುಗಾವುಂಡಗಳುಂ' ಎಂದು ದೊರವಡಿ ವಿಭಾಗದ ಪ್ರಸ್ತಾಪ ಬರುತ್ತದೆ. ಸಂಡೂರು ಬೆಟ್ಟದ ಸಾಲಿನ ಪೂರ್ವ ಮತ್ತು ಉತ್ತರದ ಗ್ರಾಮಗಳು ದೊರವಡಿ ವಿಭಾಗಕ್ಕೆ ಸೇರಿದ್ದವು. ಈ ದೊರವಡಿ ನಾಡಿನಲ್ಲಿ ಪಂಪಾತೀರ್ಥ (ಹಂಪೆ) ಇದ್ದು, ಶಾಸನದಲ್ಲಿ ಈ ವಿಷಯ 'ಬಲ್ಲಕುಂದೆ' ನಾಡೊಳ್ತಳ್ತೊಂದೊಳ್ಗೊಂಬೆನೆ ದೊರವದಿ ನಾಡೆಳೆಯೊಳ್ ರಂಜಿಪುದು ನೋಡೆ ನಾಡುಗಳರಸುಂ ಆ ದೊರವದಿ ನಾಡೊಳ್ಪಂಪಾತೀರ್ತ್ಥಮಿಪ್ಪುದೆನ್ನೆನೆ' ಎಂದು ನಿರೂಪಿತವಾಗಿ ಪಂಪಾತೀರ್ಥದ ವರ್ಣನೆ ಕೊಡಲಾಗಿದೆ. ಯಾದವ ವೀರ ರಾಮದೇವ ಆಳುವಾಗ ಆತನ ಮಹಾಮಂಡಳೇಶ್ವರ ಕನ್ನರ

ದೇವನು ದೊರವಡಿ-೭೦ ಆಳುತ್ತಿದ್ದ. ಈತನು 'ಮುಮ್ಮಡಿಸಿಂಗೆಯನಾಯಕನ ಮೇಲೆ ಯುದ್ಧಕ್ಕೆ ಬರುತ್ತಾನೆ. ಈ ಯುದ್ಧ ದೊರವಡಿಯಲ್ಲಿ ನಡೆಯುತ್ತದೆ. ವಣದೇವರಸ ಹೋರಾಡಿ ಹಲವು ಆಳು, ಕುದುರೆಗಳನ್ನು ಕೊಂದು ಸುರಲೋಕ ಪ್ರಾಪ್ತನಾಗುತ್ತಾನೆ. ಈ ವಿಭಾಗ ಮುಮ್ಮಡಿಸಿಂಗೆಯನಾಯಕ, ಕಂಪಿಲರಾಯ, ಕುಮಾರರಾಮರ ಆಳ್ವಿಕೆಗೆ ಒಳಪಟ್ಟಿತ್ತು. ದೊರವಡಿ ಕೋಟೆ ಬಲಿಷ್ಠವಾಗಿದ್ದುದೂ ಕ್ರಿ.ಶ.೧೧೦೫ರ ಶಾಸನದಿಂದ ತಿಳಿದುಬರುತ್ತದೆ.[೧೯] ಈ ದೊರವಡಿ ನಾಡು ಇಂದಿನ ಸೊಂಡೂರು, ಬಳ್ಳಾರಿ ಮತ್ತು ಹೊಸಪೇಟೆ ತಾಲ್ಲೂಕಿನ ಕೆಲವು ಹಳ್ಳಿಗಳ ವ್ಯಾಪ್ತಿಯನ್ನು ಪಡೆದಿತ್ತೆಂದು ಸ್ಥೂಲವಾಗಿ ಹೇಳಬಹುದು. ವಿಜಯನಗರದ ಅವಧಿಯಲ್ಲಿ ಇದು ಆರು ಗ್ರಾಮಗಳ ಆಡಳಿತಕ್ಕೆ ಸೀಮಿತವಾಗಿತ್ತು. ಕುರೆಯಕುಪ್ಪೆಯು ಅದರಲ್ಲಿಯ ಒಂದು ಅಗ್ರಹಾರವಾಗಿತ್ತು. ಹೀಗೆ ಈ ವಿಭಾಗದಲ್ಲಿ ಹಂಪೆ, ಹೊಸವೂರು(ಹೊ.ತಾ), ದರೋಜಿ, ತಾಳೂರು, ಕುರೆಕುಪ್ಪೆಗಳು ಸೇರಿ ೫ ಹಳ್ಳಿಗಳು ದೊರವಡಿ-೭೦ಕ್ಕೆ ಸೇರಿದವುಗಳಾಗಿದ್ದುವೆಂದು ಗುರುತಿಸಬಹುದು.[೨೦]

೩.೯. ಸ್ಮಾರಕ ಶಾಸನಶಿಲ್ಪಗಳು

ಸ್ಮಾರಕ ಶಿಲೆಗಳು ಮೂಲತಃ ಘಟನೆಯ ದಾಖಲೆಗಳು.[೨೧] ಇವು ಗತಿಸಿ ಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವನ ಸ್ಮರಣೆಗಾಗಿ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು ನಿಗಧಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಈ ಕಾರಣದಿಂದ ಸ್ಮಾರಕಗಳು ಮಾನವನ ಜೀವನ ವಿಧಾನವನ್ನು, ಜೀವನದ ಬಗ್ಗೆ ಅವನಿಗಿರುವ ಧೋರಣೆಯನ್ನೂ, ಅಂದಿನ ಅವನ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಉಳಿಸಿ ಕೊಡುವ ಪುರಾವೆಗಳಾಗಿವೆ.[೨೨] ಹಾಗೂ ಸತ್ತ ವ್ಯಕ್ತಿಯ ನೆನಪನ್ನುಂಟು ಮಾಡಲು ಇರುವ ಸಂಕೇತಗಳಾಗಿವೆ. ಅಲ್ಲದೆ ಆ ವ್ಯಕ್ತಿಯ ಪ್ರಾಚೀನ ಮೌಲ್ಯಗಳನ್ನು ಪ್ರಚುರಗೊಳಿಸುವ ಪ್ರಸಾರ ಫಲಕಗಳೂ ಆಗಿವೆ.[೨೩]

ವೀರಗಲ್ಲು ಮತ್ತು ಮಾಸ್ತಿಕಲ್ಲುಗಳೆರಡೂ ಒಂದೇ ಬಗೆಯ ಸ್ಮಾರಕಗಳು. ವೀರ ತನ್ನ ರಾಜನಿಗಾಗಿ ರಣಾಂಗಣದಲ್ಲಿ ಮಡಿಯುತ್ತಾನೆ. ಸ್ತ್ರೀ ತನ್ನ ಆ ವೀರ ಪತಿಗಾಗಿ ಚಿತೆಯ ಮೇಲೆ ಮಡಿಯುತ್ತಾಳೆ. ಎರಡರ ಮೂಲದಲ್ಲೂ ಕೃತಜ್ಞತೆ, ಸ್ವಾಮಿನಿಷ್ಠೆ, ಅನುಪಮ ತ್ಯಾಗ ಇವೆ. ಅಂತಹ ವೀರ ಮತ್ತು ಮಹಾಸತಿಯರ ಬಗ್ಗೆ ಜನ ಮೆಚ್ಚುಗೆಯಿಂದ ಮತ್ತು ಭಕ್ತಿಯಿಂದ ಅವರ ಚಿತ್ರಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಅವರ ವಿಷಯವನ್ನು ಆ ಕಲ್ಲಿನ ಮೇಲೆ ಬರೆಯಿಸಿದರು. ಅವರ ಹೆಸರು ಈ ಲೋಕದಲ್ಲಿ ಶಾಶ್ವತವಾಗಿ ಉಳಿಯಲೆಂದು ಹಾರೈಸಿದರು. ಯಾವುದೋ ಕಾಲದಲ್ಲಿ ಯಾರೋ ನಿಲ್ಲಿಸಿದ ಆ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು ಇಂದಿಗೂ ಎಷ್ಟೋ ಕಡೆಗಳಲ್ಲಿ ಜನ ಪೂಜಿಸುತ್ತಿರುವುದನ್ನು ನಾವು ನೋಡುತ್ತೇವೆ.[೨೪]. ಹೀಗೆ ಸಮಾಜದಲ್ಲಿ ತಮ್ಮದೇ ಆದ ಮೌಲ್ಯಗಳನ್ನು ಜೀವಂತವಾಗಿಡುವಲ್ಲಿ

ಸ್ಮಾರಕ ಶಿಲೆಗಳು ವಹಿಸಿದ ಪಾತ್ರ ಸ್ಪಷ್ಟವಾಗುತ್ತದೆ.[೧೨೫] ಅವುಗಳಲ್ಲಿ : ೧. ವೀರಗಲ್ಲು ೨. ಮಾಸ್ತಿಕಲ್ಲುಗಳು ೩. ನಿಸದಿಗಲ್ಲುಗಳ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

ವೀರಗಲ್ಲುಗಳು

ವೀರನೊಬ್ಬನ ನೆನಪಿಗಾಗಿ ನಿಲ್ಲಿಸಿದ ಶಿಲೆಯೇ ವೀರ ಶಾಸನ ಅಥವಾ ವೀರಗಲ್ಲು.[೧೨೬] 'ವೀರ' ಎಂಬುದು ಮೂಲತಃ ಸಂಸ್ಕೃತ ಭಾಷೆಯ ಪದವಾಗಿದ್ದು, ಕೆಲವು ಕಡೆ ಇದೇ ಪದ 'ಬೀರ' ಎಂಬುದಾಗಿ ತದ್ಭವ ರೂಪವನ್ನು ಪಡೆದು ಬಳಕೆಯಲ್ಲಿರುವುದೂ ಉಂಟು. 'ವೀರ' ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಇಂಗ್ಲೀಷ್ ಭಾಷೆಯ 'Hero' ಎಂಬ ಪದವನ್ನು ಬಳಸಲಾಗುತ್ತದೆ. ಇದು ಮೂಲತಃ ಗ್ರೀಕ್ ಭಾಷೆಯಿಂದ ಬಂದ ಪದವಾಗಿದೆ. ಈ ಪದವು ವ್ಯಕ್ತಿಯ ಪರಾಕ್ರಮ, ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ.[೧೨೭]

ಧ್ಯಾನ, ದಾನ ಮೊದಲಾದ ಧರ್ಮಮಾರ್ಗಗಳಲ್ಲಿ ನಡೆದ 'ಧರ್ಮವೀರ'ನಿಗೆ ಸಾಧ್ಯವಾಗುವ ಮೋಕ್ಷ ಸಾಧನೆಯು ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬ ಭಾವನೆ ಬೆಳೆದು, ಕೊನೆ ಕೊನೆಗೆ ಯುದ್ಧ ಮಾರ್ಗದಲ್ಲಿ ಮಡಿದ 'ಯುದ್ಧವೀರ'ನಿಗೂ ಸಾಧ್ಯವೆಂಬ ವಿಸ್ತಾರ ಪಡೆಯಿತು.[೧೨೮]

ಊರಿನ ಹಿತಕ್ಕಾಗಿಯೋ, ದುಷ್ಟರ ನಿಗ್ರಹಕ್ಕಾಗಿಯೋ, ಶಿಕ್ಷಣಕ್ಕಾಗಿಯೋ, ಸ್ವಾಮಿನಿಷ್ಠೆಗಾಗಿಯೋ, ಹೋರಾಡಿ ಮಡಿದ ವೀರ ಪುರುಷರ ಸ್ಮಾರಕದ ಶಾಸನ ವೀರಗಲ್ಲುಗಳು.[೧೨೯] ಸತ್ತ ವೀರನ ಹೆಸರು ಶಾಶ್ವತವಾಗಿರಲೆಂಬ ಉದ್ದೇಶದಿಂದ ಜನರು ಅವನ ಹೆಸರಿನಲ್ಲಿ ಸ್ಮಾರಕ ಶಿಲೆ ನೆಡಿಸುತ್ತಿದ್ದರು. ಇವುಗಳ ಸ್ವರೂಪ ಸಾಮಾನ್ಯವಾಗಿ ಮೂರು ಹಂತದ ಚಿತ್ರಗಳಿಂದ ಕೂಡಿರುತ್ತವೆ.[೧೩೦]

ವೀರಗಲ್ಲಿನ ಶಿಲ್ಪವೂ ಪರಾಕ್ರಮದ ಸಂಕೇತದಂತಿದ್ದು, ಹೋರಾಟದಲ್ಲಿ ನಾಯಕನು ಬಿದ್ದಂತೆಯೂ ಸ್ವರ್ಗದಿಂದ ಅಪ್ಸರೆಯರು ಬಂದು ಅವನನ್ನು ವಿಮಾನದಲ್ಲಿಟ್ಟು ವೀರ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ ಸುಂದರ ಶಿಲ್ಪದಿಂದ ವೀರಗಲ್ಲು ಅಲಂಕೃತವಾಗಿರುತ್ತದೆ. ಸಾಮಾನ್ಯ ಗದ್ಯದ ನೇರ ನಿರೂಪಣೆ ವೀರಗಲ್ಲುಗಳ ಬರಹ. ವೀರಗಲ್ಲಿನ ನಾಯಕ ಎದುರಿಸಬೇಕಾಗಿ ಬಂದ ಹೋರಾಟದ ಸ್ವರೂಪ ಮತ್ತು ಅದನ್ನು ಎದುರಿಸಿ 'ಸುರಲೋಕ ಪ್ರಾಪ್ತ'ನಾದ ಬಗೆಯ ಕುರಿತು ನಿರೂಪಣೆ ಇರುತ್ತದೆ.[೧೩೧]

ಸಂಡೂರು ತಾಲ್ಲೂಕಿನಲ್ಲಿ ಅನೇಕ ವೈವಿಧ್ಯಮಯವಾದ ವೀರಗಲ್ಲುಗಳು ದೊರೆತಿವೆ. ಅವುಗಳಲ್ಲಿ ಒಂದು ಹಂತದ, ಎರಡು ಹಂತದ, ಹಾಗೂ ಮೂರು ಹಂತದ ವೀರಗಲ್ಲುಗಳು ಕಂಡುಬಂದರೂ ಈ ತಾಲ್ಲೂಕಿನಲ್ಲಿ ಒಂದು ಹಂತದ ವೀರಗಲ್ಲು ಸ್ಮಾರಕಗಳೇ ಅಧಿಕವಾಗಿ ಕಾಣುತ್ತೇವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಸಂಡೂರು ತಾಲ್ಲೂಕಿನ ಭುಜಂಗನಗರ ಗ್ರಾಮದ ಪುಂಡಿ ಹಿರೆಗೌಡ್ರು ನಾಗಪ್ಪನವರ ಹೊಲದ ಕಣದಲ್ಲಿ ದೊರೆತ ಕ್ರಿ.ಶ.೧೧ನೇ ಶತಮಾನದ್ದಾಗಿದೆ. ಈ ವೀರಗಲ್ಲು ಶಾಸನವು ಚೊರಬೊಲ್ಲಿಯ ಜಕ್ಕ ಗಾವುಡನ ಮಗ ಕಾಳೆಯನು ಹಟ್ಟಿಗೆರೆಯಲ್ಲಿ ನಡೆದ ಒಂದು ದಾಳಿಯಲ್ಲಿ ಹೋರಾಡಿ ಗೆದ್ದ ವಿಷಯವನ್ನು ತಿಳಿಸಿರುವುದು ಈ ವೀರಗಲ್ಲು ಶಾಸನದ ವಿಶೇಷವಾಗಿದೆ. ಆದರೆ ಇದನ್ನು ಯಾವ ಅರಸರ ಆಳ್ವಿಕೆಯ ಕಾಲದಲ್ಲಿ ಬರೆಸಲ್ಪಟ್ಟಿದೆಂದು ತಿಳಿದು ಬರುವುದಿಲ್ಲ.[೧೩೨]

ಈ ವೀರಗಲ್ಲು ಮೂರು ಹಂತದ್ದಾಗಿದ್ದು, ಕೆಳಗಿನ ಹಂತದಲ್ಲಿ ವೀರನು ಬಿಲ್ಲು, ಬಾಣಗಳನ್ನು ಹಿಡಿದು, ಎದುರಿಗಿರುವ ಕುದುರೆಯ ಮೇಲೆ ಕುಳಿತು ಹೋರಾಡುತ್ತಿರುವ ಶತ್ರುವಿನ ಮೇಲೆ ಬಾಣ ಪ್ರಯೋಗ ಮಾಡುತ್ತಿದ್ದಾನೆ. ಎರಡನೆಯ ಹಂತದಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಮೂರನೆಯ ಹಂತದಲ್ಲಿ ವೀರನು ಶಿವಲಿಂಗದ ಬಳಿ ಕುಳಿತು ಧ್ಯಾನಾಸಕ್ತನಾಗಿದ್ದಾನೆ. ಮತ್ತೊಬ್ಬ ಭಕ್ತನು ಪೂಜೆ ಸಲ್ಲಿಸುತ್ತಿದ್ದಾನೆ. ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಈ ತಾಲ್ಲೂಕಿನ ಗೆಂತಿಕಟ್ಟೆ (ಸೋವೇನಹಳ್ಳಿಯ ಉಪಗ್ರಾಮ) ಗ್ರಾಮದಲ್ಲಿಯ ಗಾಳಿಗನ ಕಣ ಎಂದು ಕರೆಯಲ್ಪಡುವ ಕಣದಲ್ಲಿ ದೊರೆತಿರುವ ಈ ವೀರಗಲ್ಲು ಶಾಸನವು, ಕನ್ನಡ ಭಾಷೆಯಲ್ಲಿದೆ. ಈ ಶಾಸನದಲ್ಲಿ 'ಗೊನ್ತಿಕಟ್ಟೆಯ' ಉಲ್ಲೇಖವಿದ್ದು,[೧೩೩] ದಾಳಿಯಾದಂತೆ ತಿಳಿದುಬರುತ್ತದೆ. ಈ ದಾಳಿಯಲ್ಲಿ ಸಾವಿಗ ಎಂಬ ವೀರನು ಮೋರದ ಕೋಟೆಯ ಮೇಲೆ ಮುತ್ತಿಗೆ ಹಾಕಿದ ಸಿಂಗ(?)ನ ಸೈನ್ಯದೊಡನೆ ಹೋರಾಡಿ ಸಾವನ್ನಪ್ಪಿದ್ದನ್ನು ದಾಖಲಿಸುತ್ತದೆ.[೧೩೪] ಈ ವೀರನ ಸ್ಮರಣೆಗಾಗಿ ಈ ವೀರಗಲ್ಲು ಶಾಸನ ನಿಲ್ಲಿಸಿದಂತೆ ತಿಳಿದುಬರುತ್ತದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಗೊನ್ತಿಕಟ್ಟೆ ಎಂಬ ಗ್ರಾಮನಾಮವು ಇಂದು ಗೆಂತಿಕಟ್ಟೆ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ.

ಈ ವೀರಗಲ್ಲು ಎರಡು ಹಂತದ್ದಾಗಿದ್ದು, ಕೆಳಗಿನ ಹಂತದಲ್ಲಿ ವೀರನು ಖಡ್ಗ, ಭರ್ಜಿಯನ್ನು ಹಿಡಿದು ಕುದುರೆ ಮೇಲೆ ಕುಳಿತು ದಾಳಿ ಮಾಡುತ್ತಿರುವ ಶತ್ರುಗಳನ್ನು ಸಂಹರಿಸುತ್ತಿದ್ದಾನೆ. ಆತನ ಕಾಲ ಕೆಳಗೆ ಮಡಿದು ಬಿದ್ದ ಶತ್ರುವಿನ ಶವವಿದೆ. ಮೇಲ್ಭಾಗದಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಎರಡನೆ ಹಂತದಲ್ಲಿ ಇಬ್ಬರು ವೀರರು ಶಿವಲಿಂಗದ ಬಳಿ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಅವರ ಅಕ್ಕ ಪಕ್ಕದಲ್ಲಿ ನಿಂತ ಹಾಗೂ ಕುಳಿತ ನಂದಿ ಮತ್ತು ಸೂರ್ಯ, ಚಂದ್ರರ ಶಿಲ್ಪಗಳಿವೆ. ಒಟ್ಟಿನಲ್ಲಿ ಈ ವೀರಗಲ್ಲಿನ ಶಿಲ್ಪವು ರಣಾಂಗಣದಲ್ಲಿ ಹೋರಾಡುತ್ತಿರುವ ಬೀಭತ್ಸ ದೃಶ್ಯದಿಂದ ನೋಡುಗರ ಗಮನವನ್ನು ಸೆಳೆಯುವ ವಿಶಿಷ್ಟವಾದ ಸ್ಮಾರಕ ಶಿಲೆಯಾಗಿದೆ.

ಇದೇ ತಾಲ್ಲೂಕಿನ ರಾಮಘಡದಲ್ಲಿಯ ಕ್ರಿ.ಶ.೧೩೭೩ರ[೧೩೫] ವೀರಗಲ್ಲು ಶಾಸನವು ಹೊಸಮಲೆದುರ್ಗದ ಅರಸರಿಗೆ ಸಂಬಂಧಿಸಿದ್ದಾಗಿದೆ. ಈ ವೀರಗಲ್ಲು ಶಾಸನವು ಹೊಯ್ಸಳ ವೀರ

ಬಲ್ಲಾಳನು ತಾನೇ ಸೈನ್ಯ ಸಮೇತನಾಗಿ ಮತ್ತೊಮ್ಮೆ ದೊರವಡಿಗೆ ಬಂದು ಕಂಪಿಲರಾಯನೊಂದಿಗೆ ಯುದ್ಧ ಮಾಡುತ್ತಾನೆ. ಈ ಯುದ್ಧದಲ್ಲಿ ಇವರೀರ್ವರು ನೇರವಾಗಿ ಭಾಗವಹಿಸಿದುದನ್ನು ಈ ಶಾಸನ ತಿಳಿಸುತ್ತದೆ. ಈ ಯುದ್ಧದ ವಿವರವನ್ನು "ಶ್ರೀಮತುದುನ್ನುಭಿ ಸಂವತ್ಸರದ ಫಾಲ್ಗುಣ ಸುದ್ಧ ೧೫ ಸೋಮವಾರದಲು ಶ್ರೀವೀರ ಕಂಪಿಲದೇವನ ಮೇಲೆ ಬಲ್ಲಾಳರಾಯನು (ದಂಡೆತ್ತಿ ಬಂದಲಿ) ಯಿಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು ಆ ಸಮರಂಗದ ಕಟ್ಟೆನಲ್ಲಿ ಹೊಕ್ಕು ಆ ಕಂಪಿಲದೇವನು ಬಯಿಚ ಬೋವನ ಕುದುರೆಯನು ಯೇರಿದಡೆ ಆ ಬಯಿಚ ಬೋವನು ಸಮರಂಗದ ಕಟ್ಟಿನಲ್ಲಿ ತಿರಿಗಿ ಹಾರಿ ಹೋಯಿದಾಡಿ ಬಿದ್ದನು" ಎಂದು ತಿಳಿಸುತ್ತದೆ.[೧೬]

ಇಲ್ಲಿಯ ವೀರಗಲ್ಲು ಮೂರು ಹಂತದ್ದಾಗಿದ್ದು, ತುಂಡಾಗಿದೆ. ಕೆಳಗಿನ ಹಂತದಲ್ಲಿ ಹೋರಾಡುತ್ತಿರುವ ದೃಶ್ಯ, ಎರಡನೆಯ ಹಂತದಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಅಪ್ಸರೆಯರು ಕರೆದೊಯ್ಯುತ್ತಿರುವಂತೆಯೂ, ಮೂರನೆ ಹಂತದಲ್ಲಿ ಶಿವಲಿಂಗದ ಬಳಿ ಧ್ಯಾನಾಸಕ್ತನಾದ ವೀರ, ಕುಳಿತ ನಂದಿ ಮತ್ತು ಸೂರ್ಯ, ಚಂದ್ರರ ಶಿಲ್ಪಗಳಿವೆ. ಅಷ್ಟೇ ಅಲ್ಲದೆ ಈ ವೀರಗಲ್ಲಿನ ಅಕ್ಕಪಕ್ಕದಲ್ಲಿ ಅನೇಕ ನಾಗಶಿಲ್ಪಗಳ, ಭಗ್ನಗೊಂಡ ಇತರ ದೇವತಾ ಮೂರ್ತಿ ಶಿಲ್ಪಗಳಿವೆ.

ರಾಮಘಡದ ರಾಮನಾಥ ದೇವಾಲಯದ ಸಭಾಮಂಟಪದಲ್ಲಿರುವ ಒಂದು ಹಂತದ ವೀರಗಲ್ಲು. ವೀರಮುಡಿಯನ್ನು ಕಟ್ಟಿದೆ. ಬಲಗೈಯಲ್ಲಿ ಬಿಲ್ಲು, ಎಡಗೈಯಲ್ಲಿ ಬಾಣವನ್ನು ಹಿಡಿದುಕೊಂಡಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯಿದೆ. ಈ ಶಿಲ್ಪವು ಹೋರಾಟಕ್ಕೆ ಸಿದ್ಧವಾಗಿರುವಂತ ಶೈಲಿಯಲ್ಲಿದೆ.

ಈ ತಾಲ್ಲೂಕಿನ ಕುರೆಕುಪ್ಪೆ ಗ್ರಾಮದ ಹನುಮಂತನ ದೇವಾಲಯದ ಮುಂಭಾಗದಲ್ಲಿಯ ಕಟ್ಟೆಯ ಮೇಲಿನ ವೀರಗಲ್ಲು. ಇದು ಒಂದು ಹಂತದ್ದಾಗಿದೆ. ವೀರನು ಕುದುರೆಯ ಮೇಲೆ ಕುಳಿತಿದ್ದು, ಕೈಯಲ್ಲಿ ಖಡ್ಗ ಹಿಡಿದು ಎದುರಿಗಿರುವ ಕುದುರೆಯ ಮೇಲೆ ಕುಳಿತು ಹೋರಾಡುತ್ತಿರುವ, ಶತ್ರುಗಳ ಜೊತೆ ಹೋರಾಡುತ್ತಿರುವಂತ ದೃಶ್ಯವಿದೆ. ಮೇಲೆ ಸೂರ್ಯ ಮತ್ತು ಚಂದ್ರರ ಮಧ್ಯೆ ಶಿವಲಿಂಗವಿರುವ ಚಿತ್ರವಿದೆ.

ಈ ತಾಲ್ಲೂಕಿನ ಬಂಡ್ರಿ ಗ್ರಾಮದ ಆಂಜನೇಯ ದೇವಾಲಯದ ಪ್ರಾಕಾರದ ಹೊರಗೆ ಇರುವ ವೀರಗಲ್ಲು ಶಿಲ್ಪವು ನೆಲದಲ್ಲಿ ಊತು ಹೋಗಿದೆ. ಇದು ಒಂದು ಹಂತದ ವೀರಗಲ್ಲಾಗಿದ್ದು ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದೆ. ವೀರನು ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಆತನ ಪಕ್ಕದಲ್ಲಿ ಮತ್ತೊಬ್ಬ ವೀರನು ಕಿರುಗತ್ತಿಯನ್ನು ಹಿಡಿದು ನಿಂತಿದ್ದಾನೆ. ಈ ವೀರರು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು ತೊಟ್ಟಿದ್ದಾರೆ. ಕೊರಳಲ್ಲಿ ಸರ ಕೈಯಲ್ಲಿ ಕಡಗವನ್ನು ಧರಿಸಿದ್ದಾರೆ. ಈ ವೀರಗಲ್ಲು ಶಿಲ್ಪಕ್ಕೆ ಬಳಸಿರುವ ಶಿಲೆ ಹಾಗೂ ಶೈಲಿಯನ್ನು ಗಮನಿಸಿದರೆ ಇದು ಪಾಳೆಗಾರರ ಅವಧಿಯದಾಗಿದೆ ಎಂದು ತಿಳಿದು ಬರುತ್ತದೆ.

ಈ ತಾಲ್ಲೂಕಿನ ಬಂಡ್ರಿ ಗ್ರಾಮದ ಆಂಜನೇಯ ದೇವಾಲಯದ ಎದುರುಗಡೆಯ ಕಟ್ಟೆಯ ಮೇಲಿರುವ ವೀರಗಲ್ಲು ಶಿಲ್ಪವು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದೆ. ತಲೆಯಲ್ಲಿ ಕಿರೀಟ, ಕಿವಿಯಲ್ಲಿ ವೃತ್ತಾಕಾರದ ಓಲೆ, ಭುಜಬಂಧಿ, ತೋಳಬಂಧಿ, ಕೈಗಡಗ, ಕಾಲುಗಡಗವನ್ನು, ಅಲಂಕಾರಿಕ ವಸ್ತ್ರವನ್ನು ಧರಿಸಿದ್ದಾನೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಈ ವೀರಗಲ್ಲು ಶಿಲ್ಪವು ೧೬ನೆಯ ಶತಮಾನಕ್ಕೆ ಸೇರಿದ್ದಾಗಿದೆ.

ಈ ತಾಲ್ಲೂಕಿನ ಸುಲ್ತಾನಪುರ ಗ್ರಾಮದ ಪೂರ್ವಕ್ಕೆ ಇರುವ ಒಂದು ಹೊಲದಲ್ಲಿಯ ವೀರಗಲ್ಲು ಶಾಸನವು, 'ಜಯಕಾಮ ಅವನ ಮಗ ಬಿಜಯಿತಿಯ ಎರೆಯಮ ಕಪೇ ಎಂಬುವವನ ಸೈನ್ಯದ ವಿರುದ್ಧ' ಹೋರಾಡಿದಂತೆ ತಿಳಿಸುತ್ತದೆ.[೧೩೭] ೩.೧೧ ಅಡಿ ಉದ್ದ ಮತ್ತು ೨.೩ ಅಡಿ ಅಗಲವಿರುವ ಈ ವೀರಗಲ್ಲಿನ ಶಿಲ್ಪ ವಿಶೇಷವಾಗಿದ್ದು, ಯುದ್ಧದಲ್ಲಿ ಹೋರಾಡುತ್ತಿರುವ ವೀರರು ಮತ್ತು ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆನ್ನುವಂತೆ ಕಂಡರಿಸಲಾಗಿರುವ ಇದು ಎರಡು ಹಂತದ ವೀರಗಲ್ಲು ಶಿಲ್ಪವಾಗಿದೆ.

ಈ ಶಿಲ್ಪದ ವೀರರು ಕೇಶಾಲಂಕಾರ ಮಾಡಿಕೊಂಡಿರುವ, ಮುಡಿಕಟ್ಟಿರುವ, ಕೊರಳಲ್ಲಿ ಮಣಿಹಾರ, ತೋಳಲ್ಲಿ ತೋಳಬಂಧಿ, ಕರ್ಣಾಭರಣ, ಕೈಗಡಗ, ಸೊಂಟಪಟ್ಟಿ ತೊಟ್ಟು ಅಲಂಕಾರಿಕ ಉಡುಗೆಯನ್ನು ಧರಿಸಿರುವುದು ಈ ಶಿಲ್ಪದ ಮತ್ತೊಂದು ವಿಶೇಷ.

ಮೇಲಿನ ಹಂತದಲ್ಲಿ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಅಪ್ಸರೆಯರು ಸಹ ಅಲಂಕಾರಿಕ ವಸ್ತ್ರಾಭರಣ ಧರಿಸಿ, ಕೈಯಲ್ಲಿ ಚಾಮರವನ್ನು ಹಿಡಿದಿದ್ದಾರೆ. ಕಲ್ಲಿನ ತುದಿಯಲ್ಲಿ ಮಧ್ಯಕಾಲೀನ ಕನ್ನಡದ ಲಿಪಿಯಲ್ಲಿ ಶಾಸನವನ್ನು ಕಂಡರಿಸಲಾಗಿದೆ.[೧೩೮]

ಈ ತಾಲ್ಲೂಕಿನ ಚೋರುನೂರು ಗ್ರಾಮದಲ್ಲಿರುವ ವೀರಗಲ್ಲು, ಬೆಣಚು ಶಿಲೆಯಲ್ಲಿ ಕಂಡರಿಸಲ್ಪಟ್ಟಿದ್ದು ಇದರಲ್ಲಿ ಇಬ್ಬರು ವೀರರ ಚಿತ್ರಣವಿದೆ. ಒಬ್ಬ ವೀರನು ಎಡಗೈ ಚಾಚಿದ್ದಾನೆ. ಬಲಗೈಯನ್ನು ಸೊಂಟದ ಮೇಲೆ ಇರುವ ಕಿರುಗತ್ತಿಯ ಮೇಲೆ ಇಟ್ಟಿದ್ದಾನೆ. ಮತ್ತೊಬ್ಬ ವೀರನು ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದು, ಬಾಣ ಪ್ರಯೋಗ ಮಾಡುತ್ತಿರುವನು. ಸೊಂಟದಲ್ಲಿ ಕಿರುಗತ್ತಿ ಇದೆ. ಈ ಶಿಲ್ಪಗಳು ಕಿರೀಟ, ಕರ್ಣಾಭರಣ, ತೋಳಬಂಧಿ, ಕೈಗಡಗ, ಕೊರಳಲ್ಲಿ ಸರಗಳನ್ನು ಧರಿಸಿವೆ. ಇದು ಸು.೧೬ನೆಯ ಶತಮಾನಕ್ಕೆ ಸೇರಿದ್ದಾಗಿದೆ.

ಈ ತಾಲ್ಲೂಕಿನ ತಾಳೂರು ಗ್ರಾಮದ ಹೊರಗೆ ಇರುವ ಈಶ್ವರ ದೇವಾಲಯದ ಆವರಣದ ಬಲಗಡೆಗೆ ಇರುವ ಒಂದು ತುಂಡಾದ ವೀರಗಲ್ಲು ಶಿಲ್ಪವಿದೆ. ಇದು ಮೂರು ಹಂತವನ್ನೊಳಗೊಂಡಿದ್ದು, ಕೆಳಗಿನ ಹಂತದಲ್ಲಿ ವೀರನು ಕುದುರೆಯನ್ನು ಏರಿ ಬಿಲ್ಲು ಹಿಡಿದು ಹೋರಾಡುತ್ತಿರುವ ಭಾಗ ಅರ್ಧ

ತುಂಡಾಗಿದೆ. ಅದರ ಮುಂದಿನ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಅದರ ಮುಂದಿನ ಹಂತದಲ್ಲಿ ವೀರನು ಶಿವನ ಬಳಿ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ಗ್ರಾಮದ ಇದೇ ದೇವಾಲಯದ ಆವರಣದ ಎಡಗಡೆಗೆ ಇರುವ ವೀರಗಲ್ಲು ಶಿಲ್ಪ, ಇದು ಮೂರು ಹಂತವನ್ನೊಂದಿದ್ದು, ಕೆಳಗಿನ ಹಂತದಲ್ಲಿ ವೀರರು ಹೋರಾಡುತ್ತಿರುವ ಹಾಗೂ ಎರಡನೆಯ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆಯೂ ಮತ್ತು ಕೊನೆಯ ಹಂತದಲ್ಲಿ ವೀರನು ಶಿವನ ಸಾನಿಧ್ಯದಲ್ಲಿ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಈ ತಾಲ್ಲೂಕಿನ ಹಳೆದರೋಜಿ ಗ್ರಾಮದ ಈರಣ್ಣನ ಕಟ್ಟೆಯಲ್ಲಿಯ ವೀರಗಲ್ಲು. ಈ ವೀರಗಲ್ಲು ಶಿಲೆಯಲ್ಲಿ ಮೂವರು ವೀರರಿದ್ದಾರೆ. ಇವರು ಮುಡಿಕಟ್ಟಿದ್ದಾರೆ. ಕರ್ಣಾಭರಣ, ಕಂಠಾಭರಣ, ಭುಜಕವಚ, ತೋಳಬಂಧಿ, ಕೈಗಡಗ, ಯಜ್ಞೋಪವೀತ, ಧರಿಸಿದ್ದಾರೆ. ಸೊಂಟದಲ್ಲಿ ಕಿರುಗತ್ತಿಗಳಿವೆ. ಮಧ್ಯದಲ್ಲಿರುವ ವೀರನು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಭರ್ಜಿಯನ್ನು ಹಿಡಿದಿದ್ದಾನೆ. ಬಲಗಡೆಯ ವೀರನು ಎರಡೂ ಕೈಗಳಿಂದ ಖಡ್ಗವನ್ನು ಹಿಡಿದಿದ್ದಾನೆ. ಎಡಗಡೆಯ ವೀರನು ಕೈಯಲ್ಲಿ ಬೆಂಕಿಯ ಜ್ವಾಲೆ(ಪಂಜು)ಯನ್ನು ಹಿಡಿದಿದ್ದಾನೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ಕಟ್ಟೆಯಲ್ಲಿರುವ ಮತ್ತೊಂದು ವೀರಗಲ್ಲಿನಲ್ಲಿ ವೀರನು ಎರಡು ಕೈಗಳಿಂದ ಈಟಿಯನ್ನು ಹಿಡಿದಿದ್ದಾನೆ. ಈತನು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲು ಗಡಗಗಳನ್ನು ಧರಿಸಿಕೊಂಡಿದ್ದು, ಸಮಭಂಗಿಯಲ್ಲಿ ನಿಂತಿದ್ದಾನೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ಕಟ್ಟೆಯಲ್ಲಿರುವ ಇನ್ನೊಂದು ವೀರಗಲ್ಲು ಶಿಲ್ಪದಲ್ಲಿನ ವೀರರು ಮುಡಿಕಟ್ಟಿದ್ದಾರೆ. ಕಿವಿಯಲ್ಲಿ ಓಲೆ, ಕಂಠಾಭರಣ, ಕೈಗಡಗ, ತೋಳಬಂಧಿಗಳನ್ನು ಧರಿಸಿದ್ದಾರೆ. ಬಲಗಡೆಯ ವೀರನು ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ಎಡಗಡೆಯ ವೀರನು ಬಲಗೈಯಲ್ಲಿ ಕಿರುಗತ್ತಿಯನ್ನು ಎತ್ತಿ ಹಿಡಿದಿದ್ದಾನೆ. ಇಬ್ಬರು ವೀರರು ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾರೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ಕಟ್ಟೆಯಲ್ಲಿರುವ ಮತ್ತೊಂದು ವೀರಗಲ್ಲು ಶಿಲ್ಪದಲ್ಲಿ ವೀರನು ಮುಡಿಕಟ್ಟಿದ್ದಾನೆ. ಕರ್ಣಾಭರಣ, ಕಂಠಾಭರಣ, ಕೈಗಡಗ ಧರಿಸಿದ್ದಾನೆ. ಬಲಗೈಯಲ್ಲಿ ಬಾಣವನ್ನು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಅಕ್ಕಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ಕಟ್ಟೆಯಲ್ಲಿರುವ ವೀರಗಲ್ಲಿನ ವೀರನು ಕರ್ಣಾಭರಣ, ಕಂಠಾಭರಣ, ತೋಳಬಂಧಿ, ಕೈಗಡಗ, ಸೊಂಟಪಟ್ಟಿ ಧರಿಸಿದ್ದಾನೆ. ಸೊಂಟಪಟ್ಟಿಯಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಎರಡು ಕೈಗಳಿಂದ ಬಂದೂಕನ್ನು ಹಿಡಿದಿದ್ದಾನೆ.

ಇಲ್ಲೇ ಇರುವ ಮತ್ತೊಂದು ವೀರಗಲ್ಲು ಇದ್ದು, ಇದರಲ್ಲಿನ ವೀರನೂ ಕರ್ಣಾಭರಣ, ಕಂಠಾಭರಣ, ಕೈಗಡಗವನ್ನು ಧರಿಸಿದ್ದು, ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಇದೇ ಸ್ಥಳದ ಮತ್ತೊಂದು ವೀರಗಲ್ಲಿನಲ್ಲಿರುವ ವೀರರು ಮುಡಿಯನ್ನು ಕಟ್ಟಿಕೊಂಡಿದ್ದಾರೆ. ಕರ್ಣಾಭರಣ, ಕಂಠಾಭರಣಗಳನ್ನು ಧರಿಸಿದ್ದಾರೆ. ಇಬ್ಬರು ವೀರರು ಖಡ್ಗವನ್ನು ಹಿಡಿದಿದ್ದಾರೆ.

ಇಲ್ಲಿನ ಮತ್ತೊಂದು ವೀರಗಲ್ಲಿನಲ್ಲಿರುವ ವೀರರು ಮುಡಿಕಟ್ಟಿದ್ದಾರೆ. ಕರ್ಣಾಭರಣ, ಕಂಠಾಭರಣ, ಕೈಗಡಗ ಧರಿಸಿದ್ದಾರೆ. ಬಲಗಡೆಯ ವೀರನು ದಂಡವನ್ನು ಹಿಡಿದಿದ್ದಾನೆ. ಎಡಗಡೆಯ ವೀರನು ಬಲಗೈಯಲ್ಲಿ ಬಾಣವನ್ನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ.

ಮತ್ತೊಂದು ವೀರಗಲ್ಲಿನಲ್ಲಿ ವೀರನು ಮುಡಿಕಟ್ಟಿಕೊಂಡಿದ್ದಾನೆ. ಕರ್ಣಾಭರಣ, ಕಂಠಾಭರಣ, ತೋಳಬಂಧಿ, ಕೈಗಡಗ ಧರಿಸಿದ್ದಾನೆ. ಎತ್ತಿದ ಬಲಗೈಯಲ್ಲಿ ಕಿರುಗತ್ತಿಯನ್ನು ಹಾಗೂ ಎಡಗೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಾನೆ.

ಅದೇ ಸ್ಥಳದ ಮತ್ತೊಂದು ವೀರಗಲ್ಲಿನಲ್ಲಿ ವೀರನು ಮುಡಿಕಟ್ಟಿಕೊಂಡಿದ್ದಾನೆ. ಕರ್ಣಾಭರಣ, ಕಂಠಾಭರಣ, ತೋಳಬಂಧಿ, ಕೈಗಡಗಗಳನ್ನು ಧರಿಸಿದ್ದು, ಬಲಗಡೆಯ ಹೆಗಲ ಮೇಲೆ ದಂಡವನ್ನು ಹೊತ್ತುಕೊಂಡಿದ್ದು, ಎರಡು ಕೈಗಳಿಂದ ಹಿಡಿದಿದ್ದಾನೆ.

ಇದೇ ಕಟ್ಟೆಯಲ್ಲಿನ ಇನ್ನೊಂದು ವೀರಗಲ್ಲಿನಲ್ಲಿ, ವೀರನು ಕರ್ಣಾಭರಣ, ಕೊರಳಾಭರಣಗಳನ್ನು ಧರಿಸಿದ್ದಾನೆ. ಬಲಗೈಯಲ್ಲಿ ಏನೋ ಹಿಡಿದುಕೊಂಡಂತೆ ತೋರುತ್ತದೆ. ಎಡಗೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದಾನೆ.

ಮತ್ತೊಂದು ವೀರಗಲ್ಲಿನಲ್ಲಿ, ಈ ವೀರನು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ ಧರಿಸಿಕೊಂಡಿದ್ದು, ಸೊಂಟದಲ್ಲಿ ಕಿರುಗತ್ತಿಯನ್ನು, ಖಡ್ಗವನ್ನು ಸಿಕ್ಕಿಸಿಕೊಂಡಿದ್ದಾನೆ. ಕೈ ಮುಗಿದು ನಿಂತಿದ್ದಾನೆ.

ಇದೇ ಸ್ಥಳದ ಇನ್ನೊಂದು ವೀರಗಲ್ಲಿನ ವೀರನು ಕರ್ಣಾಭರಣ, ಕಂಠಾಭರಣ, ತೋಳಬಂಧಿ, ಕೈಗಡಗಗಳನ್ನು ಧರಿಸಿದ್ದಾನೆ. ಎತ್ತಿದ ಬಲಗೈಯಲ್ಲಿ ಕಿರುಗತ್ತಿಯನ್ನು ಹಾಗೂ ಎಡಗೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಾನೆ. ಈತನು ಮುಡಿಕಟ್ಟಿಕೊಂಡಿದ್ದಾನೆ.

ಅದರಲ್ಲಿ ಪಕ್ಕದ ವೀರಗಲ್ಲಿನಲ್ಲಿರುವ ವೀರರು ಮುಡಿಕಟ್ಟಿದ್ದಾರೆ. ಕರ್ಣಾಭರಣ, ಕಂಠಾಭರಣ, ಭುಜಕವಚ, ತೋಳಬಂಧಿ, ಕೈಗಡಗಗಳನ್ನು ಧರಿಸಿದ್ದಾರೆ. ಬಲಗಡೆಯ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಎಡಗಡೆಯ ವೀರನು ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಬಲಗೈಯನ್ನು ಹೊಟ್ಟೆಯ ಮೇಲಿಟ್ಟುಕೊಂಡಿದ್ದು, ಎಡಗೈಯನ್ನು ಎದೆಯ ಮೇಲಿಟ್ಟುಕೊಂಡಿದ್ದಾನೆ. ಇವರು ಅಲಂಕಾರಿಕವಾಗಿ ಮುಡಿಯನ್ನು ಕಟ್ಟಿಕೊಂಡಿದ್ದಾರೆ.

ಇದೇ ಸ್ಥಳದ ಇನ್ನೊಂದು ವೀರಗಲ್ಲಿನಲ್ಲಿ ವೀರನು ಮುಡಿಯನ್ನು ಕಟ್ಟಿಕೊಂಡಿದ್ದು, ಕಿವಿಯಲ್ಲಿ ಓಲೆಯನ್ನು, ಕಂಠಾಭರಣ, ತೋಳಬಂಧಿ, ಕೈಗಡಗಗಳನ್ನು ಧರಿಸಿಕೊಂಡಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಬಲಗೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದು ಅದೇ ಕೈಯಲ್ಲಿ ಬಾಣವನ್ನು ಹಿಡಿದು ಕೊಂಡಿದ್ದಾನೆ. ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಅಕ್ಕ ಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇನ್ನೊಂದು ವೀರಗಲ್ಲಿನಲ್ಲಿ ಇಬ್ಬರು ವೀರರಿದ್ದು ಅವರು ಮುಡಿಕಟ್ಟಿದ್ದಾರೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ ಧರಿಸಿದ್ದಾರೆ. ಬಲಗಡೆಯ ವೀರನು ಕೈಯಲ್ಲಿ ದಂಡವನ್ನು ಹಿಡಿದು ನಿಂತಿದ್ದಾನೆ. ಎಡಗಡೆಯ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಿಲ್ಲನ್ನು ಹಿಡಿದು ನಿಂತಿರುವನು.

ಮತ್ತೊಂದರಲ್ಲಿ ಇಬ್ಬರು ವೀರರಿದ್ದಾರೆ. ಇವರು ಮುಡಿಕಟ್ಟಿದ್ದಾರೆ. ಕಿವಿಯಲ್ಲಿ ಓಲೆ, ಕಂಠಾಭರಣ, ತೋಳಬಂಧಿ ಧರಿಸಿದ್ದಾರೆ. ಇಬ್ಬರು ವೀರರು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾರೆ.

ಇದೇ ಕಟ್ಟೆಯಲ್ಲಿಯ ಮತ್ತೊಂದು ವೀರಗಲ್ಲಿನಲ್ಲಿ ವೀರನು ಕರ್ಣಾಭರಣ, ಕೊರಳಾಭರಣ, ಕೈಗಡಗ, ತೋಳಬಂಧಿ, ಕಾಲುಗಡಗ, ಅಲಂಕಾರಿಕವಾಗಿ ದೋತ್ರ ಧರಿಸಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದು, ಎಡಗೈಯನ್ನು ಎದೆಯ ಮೇಲಿಟ್ಟು ಕೊಂಡಿರುವನು. ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ.

ಮತ್ತೊಂದು ವೀರಗಲ್ಲಿನಲ್ಲಿ ಒಂದೇ ಶಿಲೆಯಲ್ಲಿ ಮೂವರು ವೀರರನ್ನು ಕಂಡರಿಸಲಾಗಿದೆ. ಈ ಮೂವರು ವೀರರು ಕರ್ಣಾಭರಣ, ಕಂಠಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಸೊಂಟಪಟ್ಟಿಯಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿರುವರು. ತಲೆಯಲ್ಲಿ ಮುಡಿಯನ್ನು ಕಟ್ಟಿಕೊಂಡಿದ್ದಾರೆ. ಎತ್ತಿದ ಬಲಗೈಯಲ್ಲಿ ಖಡ್ಗವನ್ನು ಹಿಡಿದಿರುವರು.

ಅದೇ ಸ್ಥಳದ ಮತ್ತೊಂದು ವೀರಗಲ್ಲಿನಲ್ಲಿ ಒಂದೇ ಶಿಲೆಯಲ್ಲಿ ಮೂವರು ವೀರರು ಇದ್ದಾರೆ. ಮೊದಲನೆಯವರು ಈಟಿ ಮಾದರಿಯ ಉದ್ದನೆಯ ಆಯುಧವನ್ನು ಹಾಗೂ ಮಧ್ಯದವನ್ನು ಕಿರುಗತ್ತಿಯನ್ನು

ಮತ್ತು ಕೊನೆಯವನು ದಂಡವನ್ನು ಹಿಡಿದುಕೊಂಡಿದ್ದಾನೆ. ಇವರು ಮುಡಿಯನ್ನು ಕಟ್ಟಿಕೊಂಡಿದ್ದು ವಸ್ತ್ರಾಭರಣಗಳನ್ನು ಧರಿಸಿಕೊಂಡಿದ್ದಾರೆ.

ಇದೇ ಗ್ರಾಮದ ಹೊರಗಿನ ಆಂಜನೇಯ ದೇವಾಲಯದ ಬಳಿಯಿರುವ ವೀರಗಲ್ಲು ಶಿಲ್ಪವು ಕಲ್ಯಾಣ ಚಾಲುಕ್ಯರ ಅವಧಿಯದಾಗಿದೆ. ಇದು ಮೂರು ಹಂತದ್ದಾಗಿದ್ದು, ಕೆಳಗಿನ ಹೋರಾಟದ ಹಂತ ಸವೆದಿದೆ. ಎರಡನೆಯ ಹಂತದಲ್ಲಿ ಮಂಟಪವಿದ್ದು ಅದರಲ್ಲಿ ಲಿಂಗದಂತೆ ಕಾಣಿಸುವ ಶಿಲ್ಪವಿದ್ದು, ಚಾಮರವನ್ನು ಬಿಸುತ್ತಿರುವ ಇಬ್ಬರು ಅಪ್ಸರೆಯರು ಮಂಟಪವನ್ನು ಹಿಡಿದಿದ್ದಾರೆ. ಮಂಟಪದ ಮೇಲೆ ಬಲಕ್ಕೆ ಮರ ಹಾಗೂ ಹಾವಿನ ಶಿಲ್ಪವನ್ನು ಕಂಡರಿಸಲಾಗಿದೆ. ಮೇಲಿನ ಹಂತದಲ್ಲಿ ವೀರನ ಜೊತೆಗೆ ಮತ್ತಿಬ್ಬರು ವ್ಯಕ್ತಿಗಳು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾರೆ. ನಿಂತಿರುವ ಒಬ್ಬ ವ್ಯಕ್ತಿ ಲಿಂಗ ಮತ್ತು ನಂದಿಗೆ ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ಇದರ ಅಕ್ಕಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಮಾಸ್ತಿ ಕಲ್ಲುಗಳು

'ಮಾಸ್ತಿ' ಎಂಬುದು ಸಂಸ್ಕೃತದ 'ಮಹಾಸತಿ' ಎಂಬುದರ ಸಂಕ್ಷಿಪ್ತ ರೂಪ. ಗಂಡ ಸತ್ತ ಮೇಲೆ ಅವನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀಯನ್ನು ಮಹಾಸತಿ ಅಥವಾ ಮಾಸ್ತಿ ಎಂದು ಕರೆಯುತ್ತಿದ್ದರು.[೧೩೯] ಮಹಾಸತಿ-ಮಾಸ್ತಿ ಎಂಬುದರ ತದ್ಭವ ರೂಪ. ಮಾಸ್ತಿ ಎರಡು ಬಗೆಯಾಗಿದೆ:

೧. ಸಹಗಮನ - (ಸಹಮರಣ)

೨. ಅನುಗಮನ - (ಅನುಮರಣ)

ಗಂಡನ ಶವದೊಂದಿಗೆ ಚಿತೆಯೇರುವುದು ಸಹಗಮನ, ಗಂಡ ದೂರದ ಸ್ಥಳದಲ್ಲಿ ಮಡಿದರೆ ಅವನ ಪ್ರಿಯ ವಸ್ತುವನ್ನು ಹಿಡಿದು ಚಿತೆಯೇರುವುದು ಅನುಗಮನ.[೧೪೦]

ವೀರಗಲ್ಲುಗಳಂತೆಯೇ ಮಾಸ್ತಿಕಲ್ಲುಗಳನ್ನು ಗುರುತಿಸುವುದು ಬಹು ಸುಲಭ. ಶಸ್ತ್ರಧಾರಿಯಾದ ಪುರುಷ ಮತ್ತು ಅವನ ಜೊತೆ ಇನ್ನೊಬ್ಬ ಸ್ತ್ರೀಯ ಚಿತ್ರವಿದ್ದರೆ, ಅವನು ಹೋರಾಡಿ ಸತ್ತ ವೀರನೆಂದೂ, ಅವಳು ಅವನ ಜೊತೆ ಸಹಗಮನ ಮಾಡಿದ ಅವನ ಹೆಂಡತಿಯೆಂದೂ ತಿಳಿದು ಬರುತ್ತದೆ. ಕೆಲವೊಮ್ಮೆ ಮೂವರು, ನಾಲ್ವರು ಸ್ತ್ರೀಯರ ಚಿತ್ರವಿದ್ದು, ಅವರೆಲ್ಲ ತಮ್ಮ ಗಂಡನ ಸಮೇತ ಸಹಗಮನ ಮಾಡಿರುತ್ತಾರೆ. ಕೆಲವು ಮಾಸ್ತಿಕಲ್ಲುಗಳ ಮೇಲೆ ಬರಿಯ ಸ್ತ್ರೀ ವಿಗ್ರಹವಿರುತ್ತದೆ.[೧೪೧] ಹೀಗೆ ಅಗ್ನಿ ಪ್ರವೇಶದ ಮೂಲಕವೋ, ಸಲ್ಲೇಖನ ವ್ರತದ ಮೂಲಕವೋ, ಸಮಾಧಿ ಪ್ರವೇಶ ಮೂಲಕವೋ ತಮ್ಮನ್ನು ಪತಿಗೆ ಸಮರ್ಪಿಸಿಕೊಂಡ ಮಹಾಸತಿಯರ ಹೆಸರಿನಲ್ಲಿ ನಿಲ್ಲಿಸಿದ ಅನೇಕ ಸ್ಮಾರಕಗಳು ನಮಗೆ ಕಾಣಸಿಗುತ್ತವೆ. ಇಲ್ಲಿ ಒಂದೇ ಚಿತ್ರವಿದ್ದರೆ ಒಬ್ಬಳ, ಒಂದಕ್ಕಿಂತ ಹೆಚ್ಚು ವಿಗ್ರಹಗಳಿದ್ದರೆ ಬಹುಪತ್ನಿಯರ

ಸಹಗಮನವನ್ನು ಸೂಚಿಸುತ್ತವೆ. ಸಹಗಮನ ಹೊಂದಿದ ಸ್ತ್ರೀಯ ಸಂಪೂರ್ಣ ಚಿತ್ರವಿದ್ದರೆ ಒಂದು ಕೈಯಲ್ಲಿ ನಿಂಬೆಹಣ್ಣು ಇರುತ್ತದೆ. ಇನ್ನೊಂದು ಕೈಯಲ್ಲಿ ಕನ್ನಡಿ ಇರಬಹುದು. ಕೆಲವೊಮ್ಮೆ ಬಿಚ್ಚಿದ ಕೂದಲು, ಅದರ ಹಿಂದೆ ಉರಿಯುವ ಜ್ವಾಲೆ ಇರುತ್ತದೆ. ಸೌಭಾಗ್ಯ ಸೂಚಕಗಳಾದ ಓಲೆ, ಕಂಕಣ, ಬಳೆ, ಪೂರ್ಣಕುಂಭ, ತೆಂಗು, ಪದ್ಮಗಳು ಕಂಡುಬರುತ್ತವೆ. ಕೈಯಲ್ಲಿಯ ಲಿಂಬೆ ಅನಿಷ್ಟ ನಿವಾರಕದ ಸೂಚನೆಯಾಗಿರಬೇಕು. ಪತಿಗಾಗಿ ಅಗ್ನಿ ಪ್ರವೇಶ ಗೈದ ಸತಿ ಜನತೆಯ ದೃಷ್ಟಿಯಲ್ಲಿ ದೈವಿ ಸ್ವರೂಪಳಾಗಿ ಮಾರ್ಪಡ ತೊಡಗಿದಾಗ ಅವಳಿಗೆ ಗುಡಿ ಕಟ್ಟಿಸಲ್ಪಟ್ಟು ಪೂಜೆ ಪುನಸ್ಕಾರಗಳು ನೆರವೇರತೊಡಗಿದವು.[೧೪೨]

ಮಾಸ್ತಿಕಲ್ಲುಗಳ ಮೇಲಿರುವ ಶಿವಲಿಂಗದ ಚಿತ್ರವು ಅವರು ಭಗವಂತನ ಸಾನಿಧ್ಯಕ್ಕೆ ಹೋದರೆಂಬುದನ್ನು ಸೂರ್ಯ, ಚಂದ್ರರ ಚಿತ್ರಗಳು ಮಾಸ್ತಿಯರ ಸ್ಮಾರಕಗಳಾದ ಶಿಲೆಗಳು ಶಾಶ್ವತವಾಗಿ ಉಳಿದು ಅವರ ಹೆಸರು ಲೋಕದಲ್ಲಿ ಎಂದೆಂದಿಗೂ ಉಳಿಯಲೆಂಬ ಹಾರೈಕೆಯನ್ನು ಸೂಚಿಸುತ್ತವೆ.[೧೪೩] ಇಂಥ ಒಟ್ಟು ಸ್ಮಾರಕಗಳನ್ನು ಕರ್ನಾಟಕದ ಶಾಸನಗಳು ಮಾಸ್ತಿಕಲ್ಲು, ಮದುವಳಿಗೆ ಕಲ್ಲು, ಸಹಾನುಭೂತಿಕಲ್ಲು, ಬೀರಗಲ್ಲು, ಮಾಸ್ತಿ, ಸತೀಕಲ್ಲು ಎಂದು ಕರೆಯಲಾಗುತ್ತದೆ.[೧೪೪]

ಇಂತಹ ಅನೇಕ ವಿಶಿಷ್ಟವಾದ, ವೈವಿಧ್ಯಮಯವಾದ ಮಾಸ್ತಿ ಹಾಗೂ ವೀರಮಾಸ್ತಿ ಶಿಲೆಗಳು ಸಂಡೂರು ತಾಲ್ಲೂಕಿನಲ್ಲಿ ಕಾಣುತ್ತೇವೆ. ಈ ತಾಲ್ಲೂಕಿನಲ್ಲಿ ಸ್ತ್ರೀ ವಿಗ್ರಹಕ್ಕಿಂತಲೂ ಸ್ತ್ರೀ-ಪುರುಷರ ವಿಗ್ರಹ ಅಧಿಕವಾಗಿ ಕಂಡುಬರುತ್ತವೆ. ಅವುಗಳ ಕುರಿತು ಈ ರೀತಿಯಲ್ಲಿ ಚಿತ್ರಿಸಲಾಗಿದೆ.

ಸಂಡೂರು ತಾಲ್ಲೂಕಿನ ಅಂಕಮ್ಮನಾಳು ಗ್ರಾಮದ ಹೊರಗೆ ಪಶ್ಚಿಮ ದಿಕ್ಕಿಗೆ ಇರುವ ವೀರ-ಮಾಸ್ತಿಗಲ್ಲಿನ ಮಂಟಪವು ಪೂರ್ವಾಭಿಮುಖವಾಗಿದೆ. ಐದುವರೆ ಅಡಿ ಎತ್ತರದ ಮಂಟಪದಲ್ಲಿ ಈ ವೀರ-ಮಾಸ್ತಿಗಲ್ಲನ್ನು ನಿಲ್ಲಿಸಲಾಗಿದ್ದು, ಮಂಟಪವು ಆರು ಸಾದಾ ಕಂಬಗಳಿಂದ ಕೂಡಿದ್ದು, ಮೇಲ್ಛಾವಣಿಯನ್ನು ಹೊಂದಿದೆ. ಮೂರುವರೆ ಅಡಿ ಎತ್ತರವಿರುವ ಈ ವೀರ-ಮಾಸ್ತಿಗಲ್ಲು, ವೀರನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಕಿರುಗತ್ತಿಯನ್ನು ಹಾಗೂ ಸೊಂಟದಲ್ಲಿಯೂ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ತಲೆಯಲ್ಲಿ ವೀರ ಮುಡಿಯನ್ನು ಕಟ್ಟಿಕೊಂಡಿದ್ದು, ಹಣೆಗೆ ಬಟ್ಟೆಯನ್ನು ಕಟ್ಟಿಕೊಂಡಿದ್ದಾನೆ. ಕಿವಿಯಲ್ಲಿ ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಸೊಂಟಪಟ್ಟಿ, ದೊತ್ರಧರಿಸಿದ್ದಾನೆ. ಸ್ತ್ರೀಯು ತುರುಬು ಕಟ್ಟಿ ಕೊಂಡಿದ್ದಾಳೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಬಳೆ, ಕಡಗ, ಸೊಂಟಕ್ಕೆ ಗೆಜ್ಜೆಯ ಡಾಬು, ಕಾಲುಂಗುರ, ಅಲಂಕಾರಿಕ ಉಡುಪು ಧರಿಸಿದ್ದು, ಕೈಮುಗಿದು ನಿಂತಿದ್ದಾಳೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಈ ವೀರ-ಮಾಸ್ತಿಗಲ್ಲನ್ನು ಸ್ಥಳೀಯರು ಮಂಡಕ್ಕಿ, ಬಾಳೆಹಣ್ಣು, ಉತ್ತತ್ತಿ, ಊದಿನ ಕಡ್ಡಿ, ದೀಪದಿಂದ ಪೂಜೆ ಮಾಡಿದರೆ ಮಕ್ಕಳಿಗೆ ಬಂದ ಕಾಯಿಲೆ ವಾಸಿಯಾಗುತ್ತದೆ ಎಂಬುದು ಸ್ಥಳೀಯರ ನಂಬಿಕೆಯಾಗಿದ್ದು, ಅವರು ಈ ವೀರ-ಮಾಸ್ತಿಕಲ್ಲನ್ನು ಇಂದಿಗೂ ಪೂಜಿಸುತ್ತಾರೆ.

ಸಂಡೂರು ತಾಲ್ಲೂಕಿನ ಬೊಮ್ಮಗಟ್ಟದ ಆಂಜನೇಯ ದೇವಾಲಯದ ಬಳಿಯಿರುವ ವೀರ-ಮಾಸ್ತಿಗಲ್ಲಿನ ಶಿಲ್ಪವು ಒಂದು ಗರ್ಭಗೃಹದಲ್ಲಿದೆ. ಅದರಲ್ಲಿ ಹುತ್ತು ಬೆಳೆದಿದ್ದು, ಅದರಲ್ಲಿಯೇ ವೀರಗಲ್ಲು ಶಿಲ್ಪವಿದೆ. ಇದರಲ್ಲಿ ಇಬ್ಬರು ವೀರರ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ಇಬ್ಬರು ವೀರರ ಮಧ್ಯ ಒಂದು ಚಿಕ್ಕ ಸ್ತ್ರೀಯ ಶಿಲ್ಪವನ್ನು ಕಂಡರಿಸಲಾಗಿದ್ದು, ಇದನ್ನು ಗಮನಿಸಿದರೆ ವೀರ ಮತ್ತು ವೀರನ ಮಗ ಯಾವುದೋ ಯುದ್ಧದಲ್ಲಿ ಹೋರಾಡಿ ಮಡಿದಿರಬೇಕು ಆ ಸಂದರ್ಭದಲ್ಲಿ ವೀರನ ಪತ್ನಿ ಸಹಗಮನ ಆಚರಿಸಿರಬೇಕು ಎಂದು ಊಹಿಸಬಹುದಾಗಿದೆ. ಈ ವೀರರು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಭರ್ಜಿಯನ್ನು ಹಿಡಿದಿದ್ದಾರೆ. ವೀರ ಮುಡಿಯನ್ನು ಕಟ್ಟಿದ್ದು ವೀರಗಾಸೆಯನ್ನು ತೊಟ್ಟಿದ್ದಾರೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಸೊಂಟಪಟ್ಟಿಯಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದಾರೆ. ಈ ವೀರಗಲ್ಲು ಒಂದು ಹಂತದಾಗಿದೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಇದೇ ತಾಲ್ಲೂಕಿನ ವಿಠಲಾಪುರದ ಗ್ರಾಮದ ಹೊರಗೆ ಇರುವ ಗುರುಪಾದಪ್ಪನವರ ಹೊಲದಲ್ಲಿರುವ ವೀರ-ಮಾಸ್ತಿಗಲ್ಲು ದಕ್ಷಿಣಾಭಿಮುಖವಾಗಿದೆ. ಇದು ಒಂದೇ ಹಂತವನ್ನು ಹೊಂದಿದೆ. ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಈತನು ಕಿರೀಟ, ಕರ್ಣಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಕೊರಳಾಭರಣ ಧರಿಸಿದ್ದಾನೆ. ಬಲಗೈಯಲ್ಲಿ ಕಿರುಗತ್ತಿ ಹಿಡಿದು ಆ ಕೈಯನ್ನು ಸೊಂಟದ ಮೇಲೆ ಹಿಡಿದಿದ್ದಾನೆ. ಎಡಗೈಯಿಂದ ಕುದುರೆಯ ಲಗಾಮವನ್ನು ಹಿಡಿದಿದ್ದಾನೆ. ಕುದುರೆಯು ಚಲಿಸುವ ಶೈಲಿಯಲ್ಲಿದೆ. ಮುಂದೆ ಚಿಕ್ಕದಾಗಿ ಕಂಡರಿಸಲಾದ ಒಬ್ಬ ಯೋಧನ ಶಿಲ್ಪವಿದೆ. ಕುದುರೆಯ ಹಿಂದೆ ಚಿಕ್ಕದಾಗಿ, ಸರ್ವವಸ್ತ್ರಾಭರಣಗಳಿಂದ ಅಲಂಕೃತವಾಗಿರುವ ಇಬ್ಬರು ನಿಂತಿರುವ ಸ್ತ್ರೀಯರ ಶಿಲ್ಪಗಳಿವೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಈ ವೀರ-ಮಾಸ್ತಿಗಲ್ಲನ್ನು ಗಮನಿಸಿದರೆ ಈತನು ಬಹುಪತ್ನಿ ವ್ರತಸ್ಥನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಈ ತಾಲ್ಲೂಕಿನ ಯಶವಂತನಗರದ ಊರ ಹೊರಗಿರುವ ಈಶ್ವರ ದೇವಾಲಯದ ಮುಂದಿನ ವೀರ-ಮಾಸ್ತಿಗಲ್ಲು. ಈ ಶಿಲ್ಪದಲ್ಲಿ ವೀರನು ಮಧ್ಯದಲ್ಲಿ ನಿಂತಿದ್ದಾನೆ. ಅಕ್ಕಪಕ್ಕದಲ್ಲಿ ಇಬ್ಬರು ಪತ್ನಿಯರಿದ್ದಾರೆ. ವೀರನು ತಲೆಯಲ್ಲಿ ಕಿರೀಟ, ಕಿವಿಯಲ್ಲಿ ವೃತ್ತಾಕಾರದ ಓಲೆಯನ್ನು, ತೋಳಬಂಧಿ, ಕೈಗಡಗ, ಅಲಂಕಾರಿಕ ಉಡುಪನ್ನು ಧರಿಸಿದ್ದಾನೆ. ಬಲಗೈಯನ್ನು ಇಳಿಬಿಟ್ಟಿದ್ದಾನೆ. ಎಡಗೈಯನ್ನು ಮಡಿಚಿಕೊಂಡಿದ್ದಾನೆ. ಇಬ್ಬರು ಸ್ತ್ರೀಯರು ತುರುಬನ್ನು ಕಟ್ಟಿದ್ದಾರೆ. ಕರ್ಣಾಭರಣ ಕೊರಳಾಭರಣ, ಕಾಲಲ್ಲಿ ಗೆಜ್ಜೆ, ಸೊಂಟಪಟ್ಟಿ ಕೈಯಲ್ಲಿ ಬಳೆಯನ್ನು ಮತ್ತು ಅಲಂಕಾರಿಕ ಉಡುಪನ್ನು ಧರಿಸಿದ್ದಾರೆ. ಈ ಶಿಲ್ಪಗಳು ಕೈಮುಗಿದು ನಿಂತಿವೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಈ ಶಿಲ್ಪವನ್ನು ಗಮನಿಸಿದರೆ ವೀರನಿಗೆ ಇಬ್ಬರು ಪತ್ನಿಯರಿದ್ದಂತೆ ತಿಳಿದುಬರುತ್ತದೆ.

ಈ ತಾಲ್ಲೂಕಿನ ಯಶವಂತನಗರದ ಊರ ಹೊರಗಿನ ಈಶ್ವರ ದೇವಾಲಯದ ಮುಂದಿನ ವೀರ-ಮಾಸ್ತಿಗಲ್ಲು ಶಿಲ್ಪ. ಈ ವೀರನು ಕಿರೀಟ, ಕರ್ಣಾಭರಣ, ಕೊರಳಲ್ಲಿ ಸರ, ತೋಳಬಂಧಿ, ಕೈಗಡಗ ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದಾನೆ. ತ್ರಿಭಂಗಿಯಲ್ಲಿ ನಿಂತ ಈ ವೀರನು ಬಲಗೈ ಇಳಿಬಿಟ್ಟಿದ್ದಾನೆ, ಎಡಗೈಯನ್ನು ಮಡಚಿಕೊಂಡಿರುವನು. ಸೊಂಟದಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದಾನೆ. ಸ್ತ್ರೀಯು ತುರುಬನ್ನು ಕಟ್ಟಿದ್ದಾಳೆ. ಕೊರಳಲ್ಲಿ ಸರ, ಕೈಯಲ್ಲಿ ಬಳೆ, ಸೊಂಟದಲ್ಲಿ ಡಾಬು, ಕಾಲಲ್ಲಿ ಗೆಜ್ಜೆ ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದು, ಕೈಮುಗಿದು ನಿಂತಿರುವಳು.

ಈ ತಾಲ್ಲೂಕಿನ ಮೆಟ್ರಿಕಿ ಗ್ರಾಮದ ಹೊರಗೆ ಅಂದರೆ ವಿಠಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಕುಮಾರರಾಮನ ತಂದೆ ತಾಯಿಯಾದ ಕಂಪಿಲರಾಯ, ಹರಿಯಾಲದೇವಿಯರ ದೇವಾಲಯವೆಂದು ಸ್ಥಳೀಯರು ಹೇಳುವ ವೀರ-ಮಾಸ್ತಿಕಲ್ಲನ್ನು ಹೊಂದಿದ ದೇವಾಲಯವಿದೆ. ಇದು ಗರ್ಭಗೃಹ, ತೆರೆದ ಸಭಾಮಂಟಪವನ್ನೊಂದಿದೆ. ಗರ್ಭಗೃಹದಲ್ಲಿ ಇಬ್ಬರು ಶಸ್ತ್ರಧಾರಿಗಳಾದ ಕುದುರೆ ಸವಾರಿ ಮಾಡುತ್ತಿರುವ ವೀರರ ಶಿಲ್ಪಗಳ ಮಧ್ಯೆ ಹರಿಯಾಲದೇವಿ ಎಂದು ಹೇಳುವ ಸ್ತ್ರೀಯ ವಿಗ್ರಹವಿದೆ. ಇದು ಬಲಗೈ ಎತ್ತಿದೆ. ಎಡಗೈಯನ್ನು ಕೆಳಗೆ ಇಳಿ ಬಿಟ್ಟಿದೆ. ತಲೆಯಲ್ಲಿ ತುರುಬು ಕಟ್ಟಿದೆ, ಕೊರಳಹಾರ, ಕರ್ಣಾಭರಣ, ಸೊಂಟಪಟ್ಟಿ, ಬಳೆ, ಮೂಗುತಿ, ಸೀರೆ, ಕುಪ್ಪಸ ಧರಿಸಿದ್ದಾಳೆ. ಹಿಂದೆ ಉರಿಯುತ್ತಿರುವ ಬೆಂಕಿಯ ಜ್ವಾಲೆ ಇದೆ. ಸ್ಥಳೀಯರ ಹೇಳಿಕೆಯಂತೆ ಕುಮಾರರಾಮನ ತಂದೆ ತಾಯಿಯ ಗುಡಿ ಎಂಬಂತೆ, ಇಲ್ಲಿ ತಂದೆ ತಾಯಿಯ ಶಿಲ್ಪವಷ್ಟೇ ಅಲ್ಲದೇ ಇಬ್ಬರು ವೀರರು ಇರುವುದನ್ನು ಗಮನಿಸಿದರೆ ಬಹುಶಃ ಈ ಇಬ್ಬರು ವೀರರಲ್ಲಿ ಒಬ್ಬ ವೀರನು ಕಂಪಿಲರಾಯ ಹಾಗೂ ಮತ್ತೊಬ್ಬ ವೀರ ಬೈಚಪ್ಪನಾಯಕ ಅವರ ಜೊತೆಗೆ ಹರಿಯಾಲದೇವಿ ಈ ಮೂವರ ಶಿಲ್ಪಗಳು ಇವು ಆಗಿರಬೇಕೆಂದು ಊಹಿಸಬಹುದಾಗಿದೆ.

ಈ ಇಬ್ಬರು ವೀರರು ಕರ್ಣಾಭರಣ, ಕೊರಳಾಭರಣ, ಸೊಂಟಪಟ್ಟಿ, ದೋತ್ರವನ್ನು ಧರಿಸಿದ್ದಾರೆ. ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಭರ್ಜಿಯನ್ನು, ಸೊಂಟದಲ್ಲಿ ಕಿರುಗತ್ತಿಯನ್ನು ಹಾಗೂ ಕುದುರೆಯ ಜೂಲದಲ್ಲಿಯೂ ಖಡ್ಗವಿದ್ದು, ಅಕ್ಕ ಪಕ್ಕದಲ್ಲಿ ಚಿಕ್ಕದಾಗಿ ಕಾಣಿಸುವ ಸೈನಿಕರು ರಾಜಛತ್ರಿಯನ್ನು, ಧ್ವಜವನ್ನು ಹಾಗೂ ಆಯುಧಗಳನ್ನು ಹಿಡಿದುಕೊಂಡಿದ್ದಾರೆ. ಪಕ್ಕದಲ್ಲಿ ನಾಯಿಯ ಶಿಲ್ಪವಿದೆ. ಒಂದೊಂದೇ ಶಿಲೆಗಳಲ್ಲಿ ಕಂಡರಿಸಲಾಗಿರುವ ಇಬ್ಬರು ವೀರರ ವೀರಗಲ್ಲಿನಲ್ಲಿ ಆಯುಧ ಧಾರಿಯಾದ ವೀರ, ಸೈನಿಕ ಹಾಗೂ ನಾಯಿಯ ಶಿಲ್ಪಗಳನ್ನು ಕಂಡರಿಸಿರುವುದನ್ನು ಗಮನಿಸಿದರೆ ಬೇಟೆಗೆ ಹೊರಟಂತಹ ಸಂದರ್ಭವನ್ನು ನೆನಪಿಸುವಂತಿದೆ. ತೆರೆದ ಸಭಾಮಂಟಪದಲ್ಲಿ ಎರಡು ಸಾದಾ ಕೆತ್ತನೆಯ ಕಂಬಗಳಿವೆ. ಈ ದೇವಾಲಯವು ಒಂದುವರೆ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಪ್ರಾಕಾರವನ್ನೊಳಗೊಂಡಿದೆ. ತೆರೆದ ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿದ್ದು, ಪ್ರವೇಶದ್ವಾರದ

ಮೇಲ್ಭಾವಣಿಯಲ್ಲಿ ಸುಖನಾಸವಿದೆ. ಅದರಲ್ಲಿಯ ಶಿಲ್ಪಗಳು ಸವೆದಿದ್ದು, ನಂದಿವಾಹನಗಳಿವೆ. ದೇವಾಲಯದ ಎದುರುಗಡೆ ಸಾದಾ ಗರುಡಗಂಭವಿದೆ. ಅಲ್ಲಿ ಕುದುರೆ ಸವಾರರ ಪುಟ್ಟ ಶಿಲ್ಪಗಳಿವೆ.

ಬೊಮ್ಮಗಟ್ಟ ಗ್ರಾಮದ ಒಳಗಿರುವ ವೀರ-ಮಾಸ್ತಿಗಲ್ಲು. ಈ ಶಿಲ್ಪದಲ್ಲಿ ಇಬ್ಬರು ವೀರರಿದ್ದು, ಒಬ್ಬ ವೀರನು ಬಲಗೈಯಿಂದ ಬಾಣವನ್ನು ಹಿಡಿದಿದ್ದು, ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಬಾಣ ಪ್ರಯೋಗಿಸುತ್ತಿದ್ದಾನೆ. ಮತ್ತೊಬ್ಬ ವೀರನು ಎಡಗೈ ಇಳಿಬಿಟ್ಟಿದ್ದು, ಬಲಗೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಾನೆ. ಕೊನೆಯಲ್ಲಿ ಸ್ತ್ರೀಯು ಕೈಮುಗಿದು ನಿಂತಿದ್ದಾಳೆ. ಈಕೆಯು ತುರುಬು ಕಟ್ಟಿದ್ದಾಳೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಬಳೆ, ಪಾದಗೆಜ್ಜೆ ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದಾಳೆ. ವೀರರು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು ತೊಟ್ಟಿದ್ದಾರೆ. ಕೊರಳಹಾರ, ಕರ್ಣಾಭರಣ, ತೋಳಬಂಧಿ, ಕೈಗಡಗ ಕಾಲುಗಡಗ ಧರಿಸಿಕೊಂಡಿದ್ದಾರೆ. ಈ ವೀರ-ಮಾಸ್ತಿಗಲ್ಲಿನಲ್ಲಿ ಇಬ್ಬರು ವೀರರು ಹಾಗೂ ಒಬ್ಬ ಸ್ತ್ರೀ ಇರುವುದನ್ನು ಗಮನಿಸಿದರೆ, ವೀರ ಹಾಗೂ ಆತನ ಮಗ ಹೋರಾಟದಲ್ಲಿ ಮಡಿದಾಗ ವೀರನ ಪತ್ನಿ ಸಹಗಮನ ಮಾಡಿರಬೇಕೆಂದು ಊಹಿಸಬಹುದಾಗಿದೆ.

ಇದೇ ಗ್ರಾಮದ ಇದೇ ಸ್ಥಳದಲ್ಲಿ ಒಬ್ಬ ಮಾಸ್ತಿಯ ಶಿಲ್ಪ ಮಾತ್ರವಿದೆ. ಈ ಶಿಲ್ಪವು ಎರಡು ಕೈಗಳನ್ನು ಎತ್ತಿದ್ದು ಒಂದು ಕೈಯಲ್ಲಿ ನಿಂಬೆಹಣ್ಣು ಹಾಗೂ ಮತ್ತೊಂದು ಕೈಯಲ್ಲಿ ಕಮಲದ ಹೂವನ್ನು ಹಿಡಿದಂತೆ ಇದೆ. ಈ ಶಿಲ್ಪವು ತುರುಬನ್ನು ಕಟ್ಟಿರುವುದು. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಬಳೆಗಳನ್ನು, ಕಾಲುಗಡಗ, ಪಾದ ಗೆಜ್ಜೆಯನ್ನು, ಸೊಂಟಪಟ್ಟಿಯನ್ನು ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದಾಳೆ.

ಬಂಡ್ರಿ ಗ್ರಾಮದ ಆಂಜನೇಯ ದೇವಾಲಯದ ಎದುರುಗಡೆಗಿರುವ ಕಟ್ಟೆಯ ಮೇಲಿನ ವೀರ-ಮಾಸ್ತಿಕಲ್ಲು. ಈ ಶಿಲ್ಪದಲ್ಲಿಯ ವೀರನು ಎಡಗೈಯನ್ನು ಕೆಳಗೆ ಇಳಿ ಬಿಟ್ಟಿದ್ದಾನೆ. ಎತ್ತಿದ ಬಲಗೈಯಲ್ಲಿ ಕಿರುಗತ್ತಿಯನ್ನು ಹಿಡಿದಿದ್ದಾನೆ. ಈತನು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು ತೊಟ್ಟಿದ್ದಾನೆ. ಕೈಗಡಗ ಧರಿಸಿದ್ದಾನೆ. ಈತನ ಇಬ್ಬರು ಸತಿಯರು ಎಡಗೈಯನ್ನು ಕೆಳಗೆ ಇಳಿ ಬಿಟ್ಟಿದ್ದಾರೆ. ಬಲಗೈಯನ್ನು ಎತ್ತಿದ್ದಾರೆ. ಇಬ್ಬರು ತುರುಬನ್ನು ಕಟ್ಟಿದ್ದು, ಕಿವಿಯಲ್ಲಿ ವೃತ್ತಾಕಾರದ ಓಲೆಯನ್ನು, ಕೊರಳಲ್ಲಿ ಸರವನ್ನು, ತೋಳಬಂಧಿಯನ್ನು, ಬಳೆಗಳನ್ನು ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದಾರೆ. ಈ ವೀರ-ಮಾಸ್ತಿಗಲ್ಲನ್ನು ಗಮನಿಸಿದರೆ ಈ ವೀರನು ಬಹು ಪತ್ನಿ ವ್ರತಸ್ಥನೆಂದು ತಿಳಿದುಬರುತ್ತದೆ. ಈ ಶಿಲ್ಪವನ್ನು ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದೆ. ಇದರ ಕಾಲ ಸು.೧೬ನೇ ಶತಮಾನವಾಗಿದೆ. ಇದೇ ಗ್ರಾಮದ ಇದೇ ದೇವಾಲಯದ ಎದುರುಗಡೆಗಿರುವ ಕಟ್ಟೆಯ ಮೇಲಿನ ವೀರಮಾಸ್ತಿಗಲ್ಲು. ಈ ಶಿಲ್ಪದಲ್ಲಿ ಒಬ್ಬ ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ, ಬಲಗೈಯಲ್ಲಿ ಬಾಣಗಳನ್ನು ಹಿಡಿದಿದ್ದಾನೆ. ಮತ್ತೊಬ್ಬ ವೀರನು ಕುದುರೆಯ ಮೇಲೆ ಕುಳಿತಿದ್ದು, ಎಡಗೈನಿಂದ ಕುದುರೆಯ ಲಗಾಮನ್ನು ಹಿಡಿದಿದ್ದು, ಎತ್ತಿದ

ಬಲಗೈಯಲ್ಲಿ ಕಿರುಗತ್ತಿಯನ್ನು ಹಿಡಿದಿದ್ದಾನೆ. ಕುದುರೆಯು ಚಲಿಸುವ ಶೈಲಿಯಲ್ಲಿದೆ. ಮಾಸ್ತಿಯು ಕೈಮುಗಿದು ನಿಂತಿದ್ದಾಳೆ. ಈಕೆಯು ಜಡೆಯನ್ನು ಹಾಕಿಕೊಂಡಿರುವಳು. ಕೊರಳಲ್ಲಿ ಸರ, ಕೈಯಲ್ಲಿ ಬಳೆಯನ್ನು, ಹಾಗೂ ಉಡುಪನ್ನು ಧರಿಸಿದ್ದಾಳೆ. ಈ ವೀರರಲ್ಲಿ ಒಬ್ಬನು ವೀರ ಮುಡಿಕಟ್ಟಿದ್ದು, ವೀರಗಾಸೆ ತೊಟ್ಟಿದ್ದಾನೆ. ಕಿವಿಯಲ್ಲಿ ವೃತ್ತಾಕಾರದ ಓಲೆ, ಕೊರಳಲ್ಲಿ ಸರ, ಕೈಗಡಗ, ಸೊಂಟದಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದಾನೆ. ಕುದುರೆಯ ಮೇಲಿರುವ ವೀರನು ತಲೆಯಲ್ಲಿ ರುಮಾಲನ್ನು, ಕೈಯಲ್ಲಿ ಕಡಗ, ಕಾಲಲ್ಲಿ ಕಡಗವನ್ನು ಧರಿಸಿದ್ದಾನೆ. ಈ ವೀರಗಲ್ಲನ್ನು ಗಮನಿಸಿದರೆ, ಅರಸ ಹಾಗೂ ಆತನ ಬಂಟನು ಯುದ್ಧದಲ್ಲಿ ಹೋರಾಡಿ ಮರಣಿಸಿರಬೇಕು. ಆ ಸಂದರ್ಭದಲ್ಲಿ ಅರಸನ ಪತ್ನಿ ಸಹಗಮನ ಮಾಡಿರಬೇಕು. ಆದ್ದರಿಂದ ಅವರ ಸ್ಮರಣಾರ್ಥವಾಗಿ ಈ ಸ್ಮಾರಕವನ್ನು ನಿಲ್ಲಿಸಿರಬೇಕೆಂದು ಊಹಿಸಬಹುದಾಗಿದೆ. ಈ ಸ್ಮಾರಕವನ್ನು ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದೆ. ಇದರ ಕಾಲ ಸು.೧೬ನೇ ಶತಮಾನವಾಗಿದೆ. ಇದು ಒಂದು ಹಂತದ ವೀರಗಲ್ಲು ಆಗಿದೆ.

ಇದೇ ಗ್ರಾಮದ ಇದೇ ಸ್ಥಳದಲ್ಲಿರುವ ಮತ್ತೊಂದು ವೀರ-ಮಾಸ್ತಿಗಲ್ಲಿನ. ಈ ಶಿಲ್ಪದಲ್ಲಿ ಮೂವರು ವೀರರು ಹಾಗೂ ಒಬ್ಬ ಸ್ತ್ರೀಯ ಶಿಲ್ಪವಿದೆ. ಇದರಲ್ಲಿ ಮುಂದಿನ ವೀರನು ಎರಡು ಕೈಗಳಿಂದ ಖಡ್ಗವನ್ನು ಹಿಡಿದಿದ್ದಾನೆ. ಮತ್ತೊಬ್ಬ ವೀರನು ಎಡಗೈಯಲ್ಲಿ ಬಿಲ್ಲನ್ನು ಎತ್ತಿದ ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಇನ್ನೊಬ್ಬ ವೀರನು ಎಡಗೈಯಲ್ಲಿ ಬಂದೂಕನ್ನು ಹಿಡಿದಿರುವುದು ಈ ಶಿಲ್ಪದ ವಿಶೇಷವಾಗಿದೆ ಹಾಗೂ ಬಲಗೈಯಲ್ಲಿ ಕಿರುಗತ್ತಿಯನ್ನು ಹಿಡಿದು ನಿಂತಿದ್ದಾನೆ. ಸೊಂಟದಲ್ಲಿ ಕಿರುಗತ್ತಿ ಸಿಕ್ಕಿಸಿ ಕೊಂಡಿದ್ದಾನೆ. ಈ ಮೂವರು ವೀರರು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು ತೊಟ್ಟಿರುವರು. ಕಿವಿಯಲ್ಲಿ ವೃತ್ತಾಕಾರದ ಓಲೆಯನ್ನು, ಕೊರಳಲ್ಲಿ ಸರವನ್ನು, ತೋಳಬಂಧಿಯನ್ನು, ಕೈಗಡಗ, ಕಾಲುಗಡಗವನ್ನು ಧರಿಸಿದ್ದಾರೆ. ಸ್ತ್ರೀಯು ತುರುಬನ್ನು ಕಟ್ಟಿದ್ದು, ವೃತ್ತಾಕಾರದ ಓಲೆಯನ್ನು, ಕೊರಳಲ್ಲಿ ಸರವನ್ನು, ತೋಳಬಂಧಿಯನ್ನು, ಬಳೆಯನ್ನು ಹಾಗೂ ಉಡುಪನ್ನು ಧರಿಸಿದ್ದಾಳೆ. ಈ ಶಿಲ್ಪವನ್ನು ಗಮನಿಸಿದರೆ ವೀರ ಮತ್ತು ಅವನ ಜೊತೆಗಾರರು ಯುದ್ಧದಲ್ಲಿ ಹೋರಾಡಿ ಮಡಿದಾಗ, ವೀರನ ಸತಿ ಸಹಗಮನವನ್ನು ಆಚರಿಸಿರಬೇಕು. ಆದ್ದರಿಂದ ಮಾಸ್ತಿಯ ಜೊತೆಗೆ ಈ ಮೂವರು ವ್ಯಕ್ತಿಯ ಶಿಲ್ಪಗಳನ್ನು ಕಂಡರಿಸಿರಬೇಕೆಂದು ಊಹಿಸಬಹುದಾಗಿದೆ. ಇದು ಒಂದು ಹಂತದ ವೀರ-ಮಾಸ್ತಿಗಲ್ಲಾಗಿದ್ದು, ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದೆ. ಇದು ಸು.೧೬ನೇ ಶತಮಾನಕ್ಕೆ ಸೇರಿದ್ದಾಗಿದೆ.

ಚೋರುನೂರು ಗ್ರಾಮದ ಒಳಗೆ ಇರುವ ವೀರ-ಮಾಸ್ತಿಗಲ್ಲಿನ ಶಿಲ್ಪದಲ್ಲಿಯ ವೀರನು ಎಡಗೈಯಿಂದ ಬಿಲ್ಲನ್ನು ಹಾಗೂ ಬಲಗೈಯಿಂದ ಬಾಣವನ್ನು ಹಿಡಿದು ಬಾಣ ಪ್ರಯೋಗಿಸುತ್ತಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಈತನು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು

ತೊಟ್ಟಿದ್ದಾನೆ. ಮಾಸ್ತಿ ಶಿಲ್ಪವು ಬಲಗೈಯಲ್ಲಿ ನಿಂಬೆಹಣ್ಣನ್ನು ಮತ್ತು ಎಡಗೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡಿದ್ದಾಳೆ. ಈಕೆಯು ಅಲಂಕಾರಿಕವಾಗಿ ಜಡೆಯನ್ನು ಹಾಕಿಕೊಂಡಿದ್ದಾಳೆ. ಕಿವಿಯಲ್ಲಿ ವೃತ್ತಾಕಾರದ ಓಲೆಯನ್ನು, ಕೊರಳಲ್ಲಿ ಪದಕ ಸರಗಳನ್ನು, ತೋಳಬಂಧಿ, ಬಳೆಗಳನ್ನು, ಕಾಲಲ್ಲಿ ಗೆಜ್ಜೆಯನ್ನು, ಸೊಂಟಪಟ್ಟಿಯನ್ನು ಧರಿಸಿದ್ದಾಳೆ. ಹಾಗೂ ಅಲಂಕಾರಿಕ ಉಡುಪನ್ನು ಧರಿಸಿದ್ದಾಳೆ. ಇದು ಒಂದು ಹಂತದ ವೀರಗಲ್ಲು ಶಿಲ್ಪವಾಗಿದೆ. ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದೆ. ಇದು ಸು.೧೬ನೇ ಶತಮಾನಕ್ಕೆ ಸೇರಿದ್ದಾಗಿದೆ.

ಇದೇ ಗ್ರಾಮದ ಒಳಗಿರುವ ಇದೇ ಸ್ಮಾರಕದ ಪಕ್ಕದಲ್ಲಿರುವ ಮತ್ತೊಂದು ವೀರಮಾಸ್ತಿಗಲ್ಲಿನ ಶಿಲ್ಪದಲ್ಲಿ ವೀರನು ಅಲಂಕಾರಿಕವಾದ ವೀರ ಮುಡಿಯನ್ನು ಕಟ್ಟಿಕೊಂಡಿದ್ದಾನೆ. ಕಿವಿಯಲ್ಲಿ ಹರಳಿನ ಓಲೆಯನ್ನು, ಕೊರಳಲ್ಲಿ ಕಂಠೀಹಾರ, ಪದಕ ಸರವನ್ನು, ತೋಳಬಂಧಿಯನ್ನು, ಕೈಗಡಗವನ್ನು, ಸೊಂಟಪಟ್ಟಿಯನ್ನು, ಕಾಲಲ್ಲಿ ಕಡಗವನ್ನು ಧರಿಸಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಮತ್ತೊಂದು ಖಡ್ಗವನ್ನು ಹಿಡಿದಿದ್ದು, ಸೊಂಟಕ್ಕೆ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಉಡುಪನ್ನು ಧರಿಸಿದ್ದಾನೆ. ಮಾಸ್ತಿಯು ತುರುಬನ್ನು ಕಟ್ಟಿದ್ದಾಳೆ. ಕಿವಿಯಲ್ಲಿ ಹರಳಿನ ಓಲೆಯನ್ನು, ಬುಗಡೆಯನ್ನು ಹಾಕಿದ್ದಾಳೆ. ಕೊರಳಲ್ಲಿ ಕಂಠೀಹಾರ, ಪದಕ ಸರಗಳನ್ನು, ತೋಳಬಂಧಿಯನ್ನು, ಕೈಯಲ್ಲಿ ಬಳೆಯನ್ನು, ಸೊಂಟದಲ್ಲಿ ಸೊಂಟಪಟ್ಟಿಯನ್ನು ಧರಿಸಿದ್ದಾಳೆ. ಕಾಲಲ್ಲಿ ಗೆಜ್ಜೆ ಹಾಕಿದ್ದಾಳೆ. ಬಲಗೈಯಲ್ಲಿ ನಿಂಬೆಹಣ್ಣನ್ನು ಮತ್ತು ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಈಕೆಯು ಅಲಂಕಾರಿಕ ವಸ್ತ್ರವನ್ನು ಧರಿಸಿದ್ದಾಳೆ. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಇದನ್ನು ಬೆಣಚು ಶಿಲೆಯಲ್ಲಿ ಕಂಡರಿಸಲಾಗಿದ್ದು, ಇದು ಒಂದು ಹಂತದ ವೀರ-ಮಾಸ್ತಿಗಲ್ಲಾಗಿದೆ. ಸು.೧೬ನೇ ಶತಮಾನಕ್ಕೆ ಸೇರಿದ್ದಾಗಿದೆ.

ಇದರ ಬಳಿಯಲ್ಲಿರುವ ಇನ್ನೊಂದು ವೀರ-ಮಾಸ್ತಿ ಶಿಲೆ. ಶಿಲೆಯಲ್ಲಿ ವೀರನು ಕುದುರೆಯ ಮೇಲೆ ಕುಳಿತಿರುವನು. ಎಡಗೈಯಿಂದ ಕುದುರೆಯ ಲಗಾಮನ್ನು ಹಿಡಿದಿದ್ದಾನೆ. ಎತ್ತಿದ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಈತನ ಮುಂದೆ ಇರುವ ಮತ್ತೊಬ್ಬ ವೀರನು ಬಲಗೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ಈ ಇಬ್ಬರು ವೀರರು ವೀರ ಮುಡಿಯನ್ನು ಕಟ್ಟಿದ್ದಾರೆ. ಕೊರಳಾಭರಣಗಳನ್ನು, ತೋಳಬಂಧಿ, ಕೈಗಡಗ ಧರಿಸಿದ್ದು, ಅಲಂಕಾರಿಕ ಉಡುಪನ್ನು ಧರಿಸಿಕೊಂಡಿದ್ದಾರೆ. ಕುದುರೆಯು ಚಲಿಸುವ ಶೈಲಿಯಲ್ಲಿದೆ. ಮಾಸ್ತಿ ಶಿಲ್ಪವು ಬಲಗೈಯಲ್ಲಿ ನಿಂಬೆಹಣ್ಣನ್ನು, ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಈಕೆಯು ತುರುಬನ್ನು ಕಟ್ಟಿದ್ದು, ಕಿವಿಯಲ್ಲಿ ಓಲೆಯನ್ನು ಹಾಕಿಕೊಂಡಿದ್ದಾಳೆ. ಕೊರಳಲ್ಲಿ ಹಾರಗಳನ್ನು, ತೋಳಬಂಧಿಯನ್ನು, ಬಳೆಯನ್ನು ಹಾಕಿಕೊಂಡಿದ್ದಾಳೆ. ಅಲಂಕಾರಿಕ ಉಡುಪನ್ನು ಧರಿಸಿದ್ದಾಳೆ. ಈ ಶಿಲ್ಪವನ್ನು ಗಮನಿಸಿದರೆ, ಅರಸ ಆತನ ಬಂಟನು ಯುದ್ಧದಲ್ಲಿ ಹೋರಾಡಿ ಮಡಿದಾಗ ಅರಸನ ಪತ್ನಿಯು ಸಹಗಮನ

ಮಾಡಿರಬೇಕು. ಆ ಸಂದರ್ಭದಲ್ಲಿ ಅವರ ಸ್ಮಾರಕಾರ್ಥವಾಗಿ ಈ ಶಿಲೆಯನ್ನು ಕಂಡರಿಸಿರಬೇಕೆಂದು ಊಹಿಸಬಹುದಾಗಿದೆ.

ಹಳೆದರೋಜಿಯ ಈರಣ್ಣನ ಕಟ್ಟೆಯಲ್ಲಿಯ ವೀರಮಾಸ್ತಿಗಲ್ಲಿನಲ್ಲಿ. ವೀರನು ಅಲಂಕಾರಿಕವಾಗಿ ಮುಡಿಯನ್ನು ಕಟ್ಟಿಕೊಂಡಿದ್ದಾನೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗವನ್ನು ಧರಿಸಿದ್ದು, ಅಲಂಕಾರಿಕ ಉಡುಪು ಧರಿಸಿಕೊಂಡಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿ ಕೊಂಡಿದ್ದಾನೆ. ಈತನು ಎಡಗೈಯನ್ನು ಎದೆಯ ಮೇಲಿಟ್ಟುಕೊಂಡಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಮಾಸ್ತಿಯು ಅಲಂಕಾರಿಕವಾಗಿ ಮುಡಿಯನ್ನು ಕಟ್ಟಿಕೊಂಡಿದ್ದಾಳೆ. ಕಿವಿಯಲ್ಲಿ ವೃತ್ತಾಕಾರದ ಓಲೆಯನ್ನು ಧರಿಸಿದ್ದಾಳೆ. ಕೊರಳಾಭರಣ, ತೋಳಬಂಧಿ, ಕೈಯಲ್ಲಿ ಬಳೆಯನ್ನು ಧರಿಸಿಕೊಂಡಿದ್ದಾಳೆ. ಅಲಂಕಾರಿಕ ಉಡುಪನ್ನು ಧರಿಸಿದ್ದು, ಎಡಗೈಯಲ್ಲಿ ದರ್ಪಣವನ್ನು(ಕನ್ನಡಿ) ಹಿಡಿದಿದ್ದಾಳೆ. ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರುವಳು.

ಇದೇ ಕಟ್ಟೆಯಲ್ಲಿಯ ಮತ್ತೊಂದು ವೀರಮಾಸ್ತಿಗಲ್ಲಿನಲ್ಲಿ. ವೀರನು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಸೊಂಟಪಟ್ಟಿಯಲ್ಲಿ ಕಿರುಗತ್ತಿಯನ್ನು ಧರಿಸಿದ್ದಾನೆ. ಎತ್ತಿದ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಮಾಸ್ತಿಯು ಸಹ ಸರ್ವಾಲಂಕಾರ ಭೂಷಿತಳಾಗಿದ್ದು, ಎರಡೂ ಕೈಗಳನ್ನು ಎತ್ತಿ ಹಿಡಿದಿದ್ದಾಳೆ. ಬಲಗೈಯು ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಲಿಂಬೆಹಣ್ಣನ್ನು ಹಿಡಿದಿರುವಳು. ಈ ವೀರ ಮತ್ತು ಮಾಸ್ತಿಯರ ಮಧ್ಯದಲ್ಲಿ ಖಡ್ಗವಿದೆ.

ಇದೇ ಸ್ಥಳದ ಇನ್ನೊಂದು ವೀರಮಾಸ್ತಿಶಿಲ್ಪದಲ್ಲಿ ಇಬ್ಬರು ಮಾಸ್ತಿಯರ ಮಧ್ಯದಲ್ಲಿ ವೀರನು ನಿಂತಿದ್ದಾನೆ. ಈತನು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಭುಜಕವಚ, ಕೈಗಡಗ, ಸೊಂಟಪಟ್ಟಿಯಲ್ಲಿ ಕೀರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಮಾಸ್ತಿಯರೂ ಸಹ ಸರ್ವಾಲಂಕಾರ ಭೂಷಿತರಾಗಿದ್ದಾರೆ. ಬಲಗಡೆ ನಿಂತಿರುವ ಮಾಸ್ತಿಯು ಎಡಗೈಯಲ್ಲಿ ಕನ್ನಡಿಯನ್ನು, ಬಲಗೈ ಅಭಯ ಮುದ್ರೆಯಲ್ಲಿದೆ. ಎಡಗಡೆ ನಿಂತಿರುವ ಮಾಸ್ತಿಯು ಬಲಗೈಯಲ್ಲಿ ಏನನ್ನೊ ಹಿಡಿದಿದ್ದು ಎಡಗೈಯನ್ನು ಹೊಟ್ಟೆಯ ಮಧ್ಯಕ್ಕೆ ಹಿಟ್ಟುಕೊಂಡಿದ್ದಾಳೆ.

ನಿಸಿದಿಗಲ್ಲು

ಸಲ್ಲೇಖನ ವ್ರತವನ್ನು ತೆಗೆದುಕೊಂಡು ಪ್ರಾಣತ್ಯಾಗ ಮಾಡಿದ ಜೈನಧರ್ಮಿಯರ ಸ್ಮರಣಾರ್ಥವಾಗಿ ನಿಲ್ಲಿಸಿದ ಶಿಲೆಗಳೆ ನಿಸಿದಿಗಲ್ಲುಗಳು.[೧೪೫] ಇದು 'ಸದ್' ಧಾತುವಿನಿಂದ ವೃತ್ಪನ್ನವಾಗುವ 'ನಿಷತ್ತಿ' 'ನಿಷಾದಿನ್ ' ಪದಗಳಿಗೆ ಕುಳಿತುಕೊಳ್ಳುವಿಕೆ, ವಿಶ್ರಮಿಸುವಿಕೆ ಎಂದು ಅರ್ಥ.[೧೪೬] ಬೋಧಿಸುವ ಗುರು,

ಆಲಿಸುವ ಶಿಷ್ಯ ಇಬ್ಬರ ಮಧ್ಯ ಪುಸ್ತಕ ಹೊತ್ತ ವ್ಯಾಸಪೀಠ. ಈ ಚಿತ್ರವೇ ಸಾಮಾನ್ಯವಾಗಿ ನಿಸಿದಿ ಶಿಲೆಗಳ ಶಿಲ್ಪವಾಗಿದೆ.[೧೪೭]

ಸಂಡೂರು ತಾಲ್ಲೂಕಿನಲ್ಲಿಯೂ ಕೆಲವು ನಿಸಿದಿ ಶಿಲೆಗಳಿರುವುದನ್ನು ಕಾಣುತ್ತೇವೆ. ಆದರೆ ಇವು ಕಾಣಸಿಗುವುದು ತುಂಬ ವಿರಳ. ಇಲ್ಲಿಯ ವೈವಿಧ್ಯ ಪೂರ್ಣವಾದ ನಿಸಿದಿ ಶಿಲೆಗಳು ಎರಡು ಹಾಗೂ ಮೂರು ಹಂತದವುಗಳಾಗಿದ್ದು, ಕೆಲವು ಸ್ಮಾರಕಗಳು ಶಾಸನ ಸಹಿತ ನಿಸಿದಿ ಶಿಲೆಯಾಗಿದ್ದರೆ ಮತ್ತೆ ಕೆಲವು ಶಾಸನ ರಹಿತ ನಿಸಿದಿ ಶಿಲೆಗಳಾಗಿವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ತೋರಣಗಲ್ಲು ಗ್ರಾಮದ ಶಂಕರದೇವರ ಬೆಟ್ಟದ ಮೇಲಿನ 'ತಂಗಮ್ಮನ ಗುಂಡು' ಎಂದು ಕರೆಯುವ ಗುಂಡಿನ ಮೇಲಿನ ಶಾಸನವು[೧೪೮] ಅಕಳಂಕ ದೇವನ ಶಿಷ್ಯ ಬಯಿಚಿ ಸೆಟ್ಟಿಯ ನಿಸಿದಿಯನ್ನು ಉಲ್ಲೇಖಿಸುವುದು.

ಹಳೆದರೋಜಿ ಗ್ರಾಮದ ರಾಮಲಿಂಗೇಶ್ವರ ಬೆಟ್ಟದ ಕೆಳಗಿನ ವೆಂಕಟೇಶ್ವರ ದೇವಾಲಯದ ಬಳಿ ಇರುವ ಶಾಸನವು, 'ಕೆಸೆಣಿ ದವೇಮನುಗನು ಮಲಪನ ನಿಸಿದ್ಧಿ'ಯನ್ನು ಉಲ್ಲೇಖಿಸುವುದು. ಈ ನಿಸಿದಿ ಶಿಲೆಯು ಮೂರು ಹಂತದ್ದಾಗಿದ್ದು ಕೆಳಗಿನ ಹಂತದಲ್ಲಿ ಮೂರು ಸಾಲಿನ ಲಿಪಿಯನ್ನು ಹೊಂದಿವೆ. ಅವು ೧೩ನೆಯ ಶತಮಾನಕ್ಕೆ ಸೇರಿದ ಲಿಪಿಯನ್ನು ಹೋಲುತ್ತವೆ. ಮಧ್ಯದ ಹಂತದಲ್ಲಿ ಅಂಜಲಿ ಮುದ್ರೆಯಲ್ಲಿ ಕುಳಿತ ಭಕ್ತನ ಶಿಲ್ಪವಿದ್ದು, ಮೇಲಿನ ಹಂತದಲ್ಲಿ ಸಮಭಂಗಿಯಲ್ಲಿ ನಿಂತ ತೀರ್ಥಂಕರನ ಶಿಲ್ಪವಿದೆ.

ಇದೇ ಬೆಟ್ಟದಲ್ಲಿ ರಾಮಲಿಂಗೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ಮತ್ತೊಂದು ನಿಸಿದಿ ಶಿಲೆಯು ಕಾಣಸಿಗುತ್ತದೆ. ಇದು ಎರಡು ಹಂತದ್ದಾಗಿದ್ದು, ಕೆಳಗಿನ ಹಂತದಲ್ಲಿ ಧ್ಯಾನಾಸಕ್ತನಾಗಿ ಕುಳಿತ ಭಕ್ತನ ಶಿಲ್ಪವಿದ್ದು, ಮೇಲಿನ ಹಂತದಲ್ಲಿ ಸಮಭಂಗಿಯಲ್ಲಿ ನಿಂತ ತೀರ್ಥಂಕರನ ಶಿಲ್ಪ ಇದೆ.

೩.೧೦. ದಾನಶಾಸನ ಶಿಲ್ಪಗಳು

ಶಾಸನ ಶಿಲ್ಪವು ತಾಂತ್ರಿಕವಾಗಿ ಉಬ್ಬುಶಿಲ್ಪದ ಒಂದು ಪ್ರಕಾರ.[೧೪೯] ಸ್ವರೂಪದ ದೃಷ್ಟಿಯಿಂದ ಶಾಸನದ ತಲೆಯ ಮೇಲೆ ಮತಕ್ಕನುಗುಣವಾಗಿ ಬೇರೆ ಬೇರೆ ಚಿತ್ರಗಳಿರುತ್ತವೆ. ಆದರೆ "ಆಕಳು, ಕರು, ಖಡ್ಗ, ಸೂರ್ಯ, ಚಂದ್ರರ ಚಿತ್ರಗಳು ಸರ್ವಸಾಮಾನ್ಯ." ಕಾಲಾನಂತರದಲ್ಲಿ ಈ ಚಿತ್ರಗಳು ಬರವಣಿಗೆಗಿಂತಲೂ ಪ್ರಭಾವ ಶಾಲಿಯಾದ ಮತ್ತು ಪ್ರಧಾನವಾದ ಸ್ಥಾನವನ್ನು ಪಡೆದವು. ಈ ರೀತಿ ಬರವಣಿಗೆಯೊಂದಿಗೆ ಇರುವ ಶಿಲ್ಪಗಳನ್ನು 'ಶಾಸನ ಶಿಲ್ಪ' ಅಥವಾ 'ದಾನಶಾಸನಶಿಲ್ಪ' ಎಂದು ಕರೆಯುವರು.[೧೫೦]

ಶಾಸನ ಶಿಲ್ಪದಲ್ಲಿ ಸಂಕೇತಗಳಿಗೆ, ಚಿಹ್ನೆಗಳಿಗೆ ಹೆಚ್ಚು ಅವಕಾಶವುಂಟು. ತಾವು ನೀಡಿದ ದಾನವು ಸೂರ್ಯ, ಚಂದ್ರರು ಇರುವವರೆಗೂ ಶಾಶ್ವತವಾಗಿರಲಿ ಎಂಬುದನ್ನು ತಿಳಿಸಲು ಸೂರ್ಯ, ಚಂದ್ರರ

ಶಿಲ್ಪವನ್ನೂ, ಅಪಹರಿಸಿದರೆ ಪಾಪವುಂಟಾಗುತ್ತದೆ ಎಂಬುದನ್ನು ಹಸು, ಕರು, ಕತ್ತಿ ಮತ್ತು ಧಾರ್ಮಿಕ ಚಿಹ್ನೆಗಳನ್ನು ಬಳಸುವುದರ ಮುಖಾಂತರ ಹೆದರಿಸುತ್ತಿದ್ದರು. ಇಂದಿಗೂ ಹಳ್ಳಿಗಳಲ್ಲಿ ಲಭ್ಯವಿರುವ ಸ್ಮಾರಕ ಶಿಲೆಗಳನ್ನು ಗುರುತಿಸುವುದು ಅದರ ಮೇಲಿನ ಚಿತ್ರಗಳಿಂದಲೇ ಹೊರತು ಅದರಲ್ಲಿನ ಬರಹದಿಂದಲ್ಲ. ದಾನ ಶಾಸನಗಳಲ್ಲಿ ಶಿಲ್ಪವು ಹೆಚ್ಚು ಬೆಳವಣಿಗೆಯನ್ನು ಕಾಣದೆ, ಶಾಸನ ಶಿಲೆಯ ಮೇಲ್ತುದಿಗೆ ಮಾತ್ರ ಸೀಮಿತವಾಯಿತು.[೧೫೧]

ಸಂಡೂರು ತಾಲ್ಲೂಕಿನಲ್ಲಿ ಹಲವು ವೈವಿಧ್ಯಮಯ ಚಿತ್ರಣಗಳಿಂದ ಅಲಂಕೃತವಾದ ಶಾಸನ ಶಿಲ್ಪಗಳನ್ನು ಕಾಣುತ್ತೇವೆ. ಶಾಸನ ಶಿಲೆಯ ಮೇಲ್ತುದಿಯಲ್ಲಿ ಕಾಣಬರುವ ಹಸು, ಕರು, ಖಡ್ಗ,, ಸೂರ್ಯ, ಚಂದ್ರ ಇತ್ಯಾದಿ ಧಾರ್ಮಿಕ ಚಿಹ್ನೆಗಳಿಂದ ಕಂಗೊಳಿಸುವ ಶಾಸನ ಶಿಲ್ಪಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಕುಮಾರಸ್ವಾಮಿ ಬೆಟ್ಟದಲ್ಲಿಯ ಪಾರ್ವತಿ ದೇವಾಲಯದ ಒಳಗಿನ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದ್ದು, ಶಾಸನದ ಮೇಲ್ಭಾಗದಲ್ಲಿ ಹಸು, ಕರು, ನವಿಲು, ಖಡ್ಗ ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಸೂರ್ಯ ಮತ್ತು ಚಂದ್ರರ ಶಿಲ್ಪಗಳು, ಈ ಶಾಸನವು ಶಾಶ್ವತವಾಗಿರಲೆಂಬುದನ್ನು, ಹಸು, ಕರು ಶಿಲ್ಪಗಳು, ಈ ಶಾಸನವನ್ನು ನಾಶಪಡಿಸಿದರೆ ಹಸುಗಳನ್ನು ಕೊಂದ ಪಾಪ ಬರುವುದೆಂಬುದನ್ನು ಸಂಕೇತಿಸುತ್ತದೆ. ನವಿಲು ಕುಮಾರಸ್ವಾಮಿಯ ವಾಹನವಾಗಿಯೂ ಹಾಗೂ ಶೈವ ಮತದ ಸಂಕೇತವಾಗಿಯು ಇಲ್ಲಿ ಕಂಡರಿಸಲಾಗಿದೆ.

ಸುಬ್ಬರಾಯನಹಳ್ಳಿ ಬಳಿ ಇರುವ ನವಿಲುಸ್ವಾಮಿಯ ಬೆಟ್ಟದಲ್ಲಿರುವ ನವಿಲುಸ್ವಾಮಿ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವಶಾಸನ ಶಿಲ್ಪವಾಗಿದ್ದು, ಶಾಸನದ ಮೇಲ್ಭಾಗದಲ್ಲಿ ಶಿವಲಿಂಗಮೂರ್ತಿ ಇದ್ದು, ಅಕ್ಕಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳು ಹಾಗೂ ಆಕಳಿನ ಶಿಲ್ಪವಿದ್ದು, ಪೂಜಿಸುತ್ತಿರುವ ಒಬ್ಬ ಯತಿಯ ಶಿಲ್ಪವಿದೆ.

ಇಲ್ಲಿನ ಆಕಳ ಶಿಲ್ಪವು ಈ ಶಾಸನವನ್ನು ಹಾಳು ಮಾಡಿದರೆ ಹಸುವನ್ನು ಕೊಂದ ಪಾಪಕ್ಕೆ ಗುರಿಯಾಗುವರೆಂದು, ಶಿವಲಿಂಗ ಮತ್ತು ಒಬ್ಬ ಭಕ್ತನ ಶಿಲ್ಪವು ಇದು ಶೈವ ಮತದ ಶಾಸನವೆಂದು, ಸೂರ್ಯ ಮತ್ತು ಚಂದ್ರರ ಶಿಲ್ಪಗಳು ಈ ಶಾಸನ ಚಿರಕಾಲವಿರಲೆಂಬ ಸಂಕೇತವಾಗಿ ಕೆತ್ತಲಾಗಿದೆ.

ಗಂತಿಕಟ್ಟೆಯಲ್ಲಿ ದೊರೆತಿರುವ ವೀರಗಲ್ಲು ಶಾಸನವು ಶೈವ ಶಾಸನ ಶಿಲ್ಪವಾಗಿದ್ದು, ಇದು ಎರಡು ಹಂತದ್ದಾಗಿದೆ. ಮೊದಲನೆಯ ಹಂತದಲ್ಲಿ ವೀರರು ಹೋರಾಡುತ್ತಿರುವ ಹಾಗೂ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆಯು, ಎರಡನೆಯ ಹಂತದಲ್ಲಿ ಶಿವಲಿಂಗ, ಸೂರ್ಯ

ಮತ್ತು ಚಂದ್ರರ ಶಿಲ್ಪಗಳಿವೆ. ಅದರ ಅಕ್ಕ ಪಕ್ಕದಲ್ಲಿ ವೀರರು ಶಿವನ ಸಾನಿಧ್ಯದಲ್ಲಿ ಕೈ ಮುಗಿದು ಕುಳಿತಿದ್ದಾರೆ. ಅವರ ಅಕ್ಕ ಪಕ್ಕದಲ್ಲಿ ನಂದಿ ಮತ್ತು ಕರುವಿನ ಶಿಲ್ಪಗಳಿವೆ. ಹಾಗೂ ಅದರ ಪಕ್ಕದ ಕಲ್ಲಿನ ಮೇಲೆ ಶಾಸನವನ್ನು ಕಂಡರಿಸಲಾಗಿದೆ.

ವೀರಗಲ್ಲನ್ನು ನೆಡುತ್ತಿದ್ದ ಮುಖ್ಯ ಉದ್ದೇಶ ವೀರನಾದವನು ಗೆದ್ದರೆ ಇಹಲೋಕದಲ್ಲಿ ಲಕ್ಷ್ಮಿಯೂ, ಸತ್ತರೆ ಸ್ವರ್ಗದಲ್ಲಿ ಸುರಾಂಗನೆಯರೂ ದೊರೆಯುತ್ತಾರೆ ಎಂಬ ನಂಬಿಕೆಯಂತೆ ಈ ವೀರಗಲ್ಲು ಶಾಸನದ ಕೆಳಗಿನ ಹಂತದಲ್ಲಿ ಹೋರಾಡುತ್ತಿರುವ ವೀರ ಮಡಿದಾಗ ಆತನನ್ನು ಸುರಾಂಗನೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಹಾಗೂ ಶೂರನಾದವನು ರಣರಂಗದಲ್ಲಿ ಪ್ರಾಣತ್ಯಾಗ ಮಾಡಿದರೆ ಅವನು ನೇರವಾಗಿ ದೇವರ ಹತ್ತಿರ ಹೋಗುತ್ತಿದ್ದ ಎಂಬ ನಂಬಿಕೆಯಂತೆ, ಶಾಸನದ ಮೇಲ್ಭಾಗದಲ್ಲಿ ಶಿವಲಿಂಗದ ಬಳಿ ಕುಳಿತ ವೀರನನ್ನು, ಈ ಶಾಸನವನ್ನು ನಾಶಪಡಿಸಿದರೆ ಹಸುಗಳನ್ನು ಕೊಂದ ಪಾಪಕ್ಕೆ ಹೋಗುವರೆಂಬುದಕ್ಕೆ ನಂದಿ ಮತ್ತು ಕರುವಿನ ಶಿಲ್ಪವನ್ನು, ಈ ಶಾಸನವು ಶಾಶ್ವತವಾಗಿರಲೆಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಇಲ್ಲಿ ಸಾಂಕೇತಿಕವಾಗಿ ಕಂಡರಿಸಲಾಗಿದೆ.

ರಾಮಘಡದಲ್ಲಿ ದೊರೆತಿರುವ ಈ ವೀರಗಲ್ಲು ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಶಿವಲಿಂಗ, ನಂದಿ ಮತ್ತು ಸೂರ್ಯ, ಚಂದ್ರರ ಶಿಲ್ಪಗಳಿವೆ. ಮಧ್ಯ ಭಾಗದಲ್ಲಿ ಶಾಸನವನ್ನು ಕಂಡರಿಸಲಾಗಿದ್ದು, ಕೆಳಭಾಗದಲ್ಲಿ ಶಾಸನ ಹಾಕಿಸಿದ ವ್ಯಕ್ತಿಯ ಮೂರ್ತಿ ಶಿಲ್ಪವನ್ನು ಕೆತ್ತಲಾಗಿದೆ. ಈ ಶಾಸನ ಶಿಲ್ಪದಲ್ಲಿ ಶಿವಲಿಂಗವು ಶೈವ ಮತದ ಸಂಕೇತವಾಗಿಯೂ, ನಂದಿಯು ಈ ಶಾಸನವನ್ನು ನಾಶಪಡಿಸಿದರೆ ಹಸುವನ್ನು ಕೊಂದ ಪಾಪಕ್ಕೆ ಹೋಗುವರೆಂದು, ಸೂರ್ಯ ಮತ್ತು ಚಂದ್ರರ ಶಿಲ್ಪಗಳು ಈ ಶಾಸನವು ಶಾಶ್ವತವಾಗಿರಲೆಂದು ಹಾಗೂ ಶಾಸನದ ಕೆಳಭಾಗದಲ್ಲಿ ಈ ಶಾಸನವನ್ನು ಹಾಕಿಸಿದ ವ್ಯಕ್ತಿಯ ವಿಗ್ರಹವನ್ನು ಕಂಡರಿಸಿರುವುದು ಇಲ್ಲಿಯ ವಿಶೇಷವಾಗಿದೆ.

ಅಂತಾಪುರದ ಮಲ್ಲಿಕಾರ್ಜುನ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಶೈವ ಮತದ ಸಂಕೇತವಾಗಿ ಶಿವಲಿಂಗ ಮೂರ್ತಿಯು, ಈ ಶಾಸನವು ಶಾಶ್ವತವಾಗಿರಲೆಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು, ಈ ಶಾಸನವನ್ನು ಹಾಳು ಮಾಡಿದರೆ ಹಸುವನ್ನು ಕೊಂದ ಪಾಪಕ್ಕೆ ಹೋಗುವರೆಂಬುದಕ್ಕೆ ಆಕಳ ಶಿಲ್ಪವನ್ನು ಸಾಂಕೇತಿಕವಾಗಿ ಕಂಡರಿಸಲಾಗಿದೆ.

ಚೋರುನೂರು ಗ್ರಾಮದ ವೀರಭದ್ರ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದ್ದು, ಶಾಸನದ ಮೇಲ್ಭಾಗದಲ್ಲಿ ಈ ಶಾಸನವು ಚಿರಕಾಲವಿರಲಿ ಎಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಮತ್ತು ಶೈವ ಮತದ ಸಂಕೇತವಾಗಿ ಶಿವಲಿಂಗದ ಮೂರ್ತಿಯನ್ನು ಕಂಡರಿಸಲಾಗಿದೆ.

ತುಂಬರಗುದ್ದಿಯ ಆಂಜನೇಯ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ತುದಿಯಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಮತ್ತು ಶಿವಲಿಂಗದ ಶಿಲ್ಪವನ್ನು ಕಾಣುತ್ತೇವೆ. ಲಿಂಗದ ಶಿಲ್ಪ ತ್ರುಟಿತವಾಗಿದೆ.

ತಾಳೂರು ಗ್ರಾಮದ ಈಶ್ವರ ದೇವಾಲಯದಲ್ಲಿನ ಕಂಬದಲ್ಲಿಯ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಇದರಲ್ಲಿ ಈ ಶಾಸನವು ಶಾಶ್ವತವಾಗಿರಲೆಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಮಾತ್ರ ಕೆತ್ತಲಾಗಿರುವುದು.

ಕುರೆಕುಪ್ಪೆ ಗ್ರಾಮದ ಪಂಪಾಪತಿ ದೇವಾಲಯದ ಕಂಬದಲ್ಲಿಯ ಶಾಸನವು ಶೈವ ಶಾಸನ ಶಿಲ್ಪವಾಗಿದೆ. ಇದರಲ್ಲಿ ಈ ಶಾಸನವು ಶಾಶ್ವತವಾಗಿರಲೆಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಮಾತ್ರ ಕೆತ್ತಲಾಗಿದೆ.

ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆಯ ಬಳಿಯ ಶಾಸನಶಿಲ್ಪ, ಈ ಶಾಸನವು ಶಾಶ್ವತವಾಗಿರಲಿ ಎಂಬ ಉದ್ದೇಶದಿಂದ ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಮಾತ್ರ ಕಂಡರಿಸಲಾಗಿದೆ.

ಆವಿನಮಡುವಿನ ಗ್ರಾಮದ ಕೆರೆಯ ಬಳಿಯ ಶಾಸನಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಇದರಲ್ಲಿ ಸೂರ್ಯ ಮತ್ತು ಚಂದ್ರ, ಶಿವಲಿಂಗ ಹಾಗೂ ನಂದಿಯ ಶಿಲ್ಪಗಳಿವೆ. ಈ ಶಾಸನವನ್ನು ನಾಶಗೊಳಿಸಿದರೆ ಹಸುವನ್ನು ಕೊಂದ ಪಾಪಕ್ಕೆ ಗುರಿಯಾಗುವರೆಂದು ನಂದಿ ಶಿಲ್ಪವನ್ನು, ಶಿವಲಿಂಗವನ್ನು ಶೈವಮತದ ಸಂಕೇತವಾಗಿಯೂ, ಸೂರ್ಯ ಮತ್ತು ಚಂದ್ರರ ಶಿಲ್ಪವು, ಈ ಶಾಸನವು ಶಾಶ್ವತವಾಗಿರಲೆಂದು ಕೆತ್ತಲಾಗಿದೆ.

ಸುಲ್ತಾನಪುರ ಗ್ರಾಮದ ಒಳಗಿನ ಶಾಸನ ಶಿಲ್ಪವು ಎರಡು ಹಂತದ್ದಾಗಿದೆ. ಕೆಳಗಿನ ಹಂತದಲ್ಲಿ, ರಣರಂಗದಲ್ಲಿ ವೀರನು ಹೋರಾಡಿ ಮಡಿದಾಗ ಅವನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ಸುರಾಂಗನೆಯರ ಚಿತ್ರವನ್ನು, ಮೇಲಿನ ಹಂತದಲ್ಲಿ ಮೂರು ಸಾಲಿನ ಶಾಸನವನ್ನು ಅದರ ಅಕ್ಕಪಕ್ಕದಲ್ಲಿ ಈ ಶಾಸನವು ಚಿರಕಾಲವಿರಲಿಯೆಂದು ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಸಾಂಕೇತಿಕವಾಗಿ ಕಂಡರಿಸಲಾಗಿದೆ.

ಭುಜಂಗನಗರ ಗ್ರಾಮದ ಒಳಗಿನ ಶಾಸನ ಶಿಲ್ಪವು ಮೂರು ಹಂತದ್ದಾಗಿದೆ. ಕೆಳಗಿನ ಹಂತದಲ್ಲಿ ವೀರನು ಹೋರಾಡುತ್ತಿರುವ, ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆಯೂ, ಕೊನೆಯ ಹಂತದಲ್ಲಿ ವೀರನು ಶಿವಲಿಂಗದ ಬಳಿ ಕುಳಿತು ಧ್ಯಾನಾಸಕ್ತನಾಗಿದ್ದಾನೆ. ಈ ಶಾಸನದ ಮಧ್ಯದ ಎರಡು ಪಟ್ಟಿಕೆಗಳಲ್ಲಿ ಶಾಸನವನ್ನು ಕಂಡರಿಸಲಾಗಿದೆ. ಶಿವಲಿಂಗವನ್ನು ಶೈವಮತದ ಸಂಕೇತವಾಗಿ ಕಂಡರಿಸಲಾಗಿದ್ದು, ಸೂರ್ಯ ಮತ್ತು ಚಂದ್ರರನ್ನು ಈ ಶಾಸನವು ಶಾಶ್ವತವಾಗಿರಲೆಂದು ಚಿತ್ರಿಸಲಾಗಿದೆ.

ವಾಮನಮುದ್ರೆ ಶಿಲ್ಪ

ಚಿಕ್ಕ ಅಂತಾಪುರ ಗ್ರಾಮದ ಒಂದು ಹೊಲದಲ್ಲಿಯ ಒಂದು ಶಿಲೆಯ ಮೇಲೆ ಕೊರೆದ ವಾಮನ ಶಿಲ್ಪವಿದೆ. ಈತನು ಕೊಡೆಯನ್ನು ಹಿಡಿದಿರುವನು. ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಇದು ಚಿಕ್ಕ ಅಂತಾಪುರ ಗ್ರಾಮಕ್ಕೆ ಹೋಗುವ ರಸ್ತೆಯ ಬಲಗಡೆಗೆ ಇರುವ ದುರ್ಗಪ್ಪನವರ ಹೊಲ ದಲ್ಲಿದೆ. ಇದು ವಾಮನ ಮುದ್ರೆಕಲ್ಲಾಗಿದ್ದು, ತೀರಾ ಸರಳವಾದ ಗೀರು ಚಿತ್ರ ಹೊಂದಿದೆ.

ಯಂತ್ರಕಲ್ಲು

ಬೊಮ್ಮಗಟ್ಟ ಗ್ರಾಮದ ಒಳಗಿರುವ ಅಗಸೆಯ ಬಾಗಿಲ ಬಳಿ ಸು.ಮೂರು ಅಡಿ ಎತ್ತರದ ಒಂದು, ಮತ್ತೊಂದು ಚಿಕ್ಕ ಶಿಲೆಯ ಯಂತ್ರಕಲ್ಲು ಶಿಲೆಗಳು ಇರುವವು. ಇವುಗಳ ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಬಂಡ್ರಿ ಗ್ರಾಮದ ಬಂಡ್ರಿ ಬಸವೇಶ್ವರ ದೇವಾಲಯದ ಎದುರಿನ ಗರುಡಗಂಭದ ಕಟ್ಟೆಯ ಮೇಲೆ ಒಂದು ಯಂತ್ರಕಲ್ಲು ಶಿಲೆಯಿದೆ. ಇದರ ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಈ ಯಂತ್ರಕಲ್ಲುಗಳನ್ನು ದನಗಳಿಗೆ ಕಾಲು ಬಾಯಿ ರೋಗ ಬಂದಾಗ ಪೂಜಿಸಿದರೆ ಆ ರೋಗ ವಾಸಿಯಾಗುತ್ತದೆಂಬ ನಂಬಿಕೆಯಿದೆ.

೩.೧೧. ಶಾಸನಗಳಲ್ಲಿ ಕಾಲದ ಉಲ್ಲೇಖ

ಶಾಸನಗಳಲ್ಲಿ ಸಂವತ್ಸರದ ಉಲ್ಲೇಖ

ಈ ತಾಲ್ಲೂಕಿನಲ್ಲಿ ಕಂಡುಬರುವ ಶಾಸನಗಳಲ್ಲಿ ನಮೂದಾಗಿರುವ ಕಾಲ, ಸಂವತ್ಸರ, ಮಾಸ, ವಿಶೇಷ ದಿನಗಳ ವಿವರಗಳನ್ನು ಇಲ್ಲಿ ಚರ್ಚೆಗೆತ್ತಿಕೊಳ್ಳಲಾಗಿದೆ. ಅವುಗಳು ಹೀಗಿವೆ.

ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಎಡ ಹಸ್ತಿಹಸ್ತದಲ್ಲಿನ ಕ್ರಿ.ಶ.೧೦೭೪ರ ಶಾಸನದಲ್ಲಿ[೧೫೨] ಆನಂದ ಸಂವತ್ಸರವನ್ನು, ಕ್ರಿ.ಶ.೧೮೩೦ರ ಶಾಸನದಲ್ಲಿ[೧೫೩] ಯಾವ ಸಂವತ್ಸರ ಎಂಬುದು ಸ್ಪಷ್ಟವಿಲ್ಲ, ಕ್ರಿ.ಶ.೧೫೪೭ರ ಶಾಸನದಲ್ಲಿ[೧೫೪] ಪ್ಲವಂಗ ಸಂವತ್ಸರ, ಕ್ರಿ.ಶ.೧೫೫೯ರ ಶಾಸನದಲ್ಲಿ[೧೫೫] ವಿಕಾರಿ ಸಂವತ್ಸರ, ಕ್ರಿ.ಶ.೧೫೫೨ರ ಕೊಡಾಳು ಗ್ರಾಮದ ಶಾಸನದಲ್ಲಿ[೧೫೬] ಪರಿಧಾವಿ ಸಂವತ್ಸರ, ರಾಮಘಡದ ಕ್ರಿ.ಶ.೧೩೨೩ರ ಶಾಸನದಲ್ಲಿ[೧೫೭] ದುಂದುಬಿ ಸಂವತ್ಸರ, ಕ್ರಿ.ಶ.೧೩೮೬ರ ಶಾಸನದಲ್ಲಿ[೧೫೮] ಕ್ಷಯ ಸಂವತ್ಸರ, ಕ್ರಿ.ಶ.೧೭೦೮ರ ಶಾಸನದಲ್ಲಿ[೧೫೯] ಸರ್ವಧಾರಿ ಸಂವತ್ಸರ, ಸಂಡೂರಿನ ಪಿ.ಡಬ್ಲ್ಯೂ.ಡಿ. ಕಛೇರಿ ಹತ್ತಿರ ಬಿದ್ದಿರುವ ೧೮ನೆಯ ಶತಮಾನದ[೧೬೦] ಶಾಸನದಲ್ಲಿ ರುಧಿರೋದ್ಗಾರಿನ್ ಸಂವತ್ಸರ, ಶಂಕರಪುರದ ಗಂಡಿ ಬಸಪ್ಪನ ದೇವಸ್ಥಾನದ ಮುಂದೆ ಸು.೨೦ ಗಜಗಳ ಅಂತರದಲ್ಲಿಯ ಬಂಡೆಯ ಮೇಲಿನ

ಕ್ರಿ.ಶ.೧೬ನೆಯ ಶತಮಾನದ ಶಾಸನದಲ್ಲಿ[೧೬೧] ದುರ್ಮತಿ ಸಂವತ್ಸರ, ಸೋವೇನಹಳ್ಳಿಯ ಹನುಮಂತ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿನ ಶಾಸನದಲ್ಲಿ[೧೬೨] ಶುಭಕೃತ ಸಂವತ್ಸರ, ತಾಳೂರಿನ ಕ್ರಿ.ಶ.೧೨೧೮ರ ಶಾಸನದಲ್ಲಿ[೧೬೩] ಬಹುಧಾನ್ಯ ಸಂವತ್ಸರ, ತಾರಾನಗರದಲ್ಲಿಯ ಕ್ರಿ.ಶ.೧೨೨೪ರ ಶಾಸನದಲ್ಲಿ[೧೬೪] ತಾರಣ ಸಂವತ್ಸರ, ಅದೇ ಸ್ಥಳದಲ್ಲಿ ದೊರೆತ ತ್ರಾಮ ಶಾಸನದಲ್ಲಿ[೧೬೫] ಪರಾಭವ ಸಂವತ್ಸರ, ಅದೇ ಗ್ರಾಮದ ಮುದ್ದಪನ ಬೀಳು ಎಂದು ಕರೆಯುವ ಹೊಲದಲ್ಲಿರುವ ಶಾಸನದಲ್ಲಿ[೧೬೬] ದುರ್ಮುಖಿ ಸಂವತ್ಸರ, ಅಂಕಮ್ಮನಹಾಳು ಗ್ರಾಮದ ಪಶ್ಚಿಮಕ್ಕೆ ಪಾಳು ಬಿದ್ದ ದೇವಸ್ಥಾನದ ಮುಂದಿರುವ ಶಾಸನದಲ್ಲಿ[೧೬೭] ಹಾಗೂ ಹುಲಿಕುಂಟಾ ಗ್ರಾಮದ ಕ್ರಿ.ಶ.೧೫೫೭ರ ಈ ಎರಡೂ ಶಾಸನಗಳಲ್ಲಿ[೧೬೮] ನಳ ಸಂವತ್ಸರ, ಚೋರುನೂರು ಗ್ರಾಮದ ವೀರಭದ್ರ ದೇವಸ್ಥಾನದ ಮುಂದಿರುವ ಕ್ರಿ.ಶ.೧೫೫೦ರ ಶಾಸನದಲ್ಲಿ[೧೬೯] ಸಾಧಾರಣ ಸಂವತ್ಸರ, ರಾಮಘಡದ ರಾಮದೇವರ ದೇವಸ್ಥಾನದ ಮುಂಭಾಗದ ಗೋಡೆಗೆ ನಿಲ್ಲಿಸಿರುವ ಕ್ರಿ.ಶ.೧೫೨೭ರ ಶಾಸನದಲ್ಲಿ[೧೭೦] ಸರ್ವಜಿತ್ ಸಂವತ್ಸರ ಹಾಗೂ ತಾರಾನಗರದ ನಾರಿಹಳ್ಳ ಯೋಜನೆ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ಕ್ರಿ.ಶ.೧೦೪೭ರ[೧೭೦] ತಾಮ್ರ ಶಾಸನ[೧೭೨]ಗಳೆರಡರಲ್ಲಿಯೂ ಸರ್ವಜಿತ್ ಸಂವತ್ಸರ, ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರವಿರುವ ಕ್ರಿ.ಶ.೧೫೫೧ರ [೧೭೩] ಮತ್ತು ಆವಿನಮಡುಗು ಗ್ರಾಮದ ಕೆರೆಯ ಕೆಳಗಿನ ಒಂದು ಗುಂಡಿನ ಮೇಲಿನ ಕ್ರಿ.ಶ.೧೫೫೧ರ ಶಾಸನದಲ್ಲಿಯೂ ವಿರೋಧಿಕೃತ ಸಂವತ್ಸರ, ಸಂಡೂರಿನ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕ್ರಿ.ಶ.೧೭೪೮ರ[೧೭೪] ಶಾಸನದಲ್ಲಿ ವಿಭವ ಸಂವತ್ಸರ, ಅಂತಾಪುರ ಗ್ರಾಮದ ಕ್ರಿ.ಶ.೧೫೫೩ರ ಶಾಸನದಲ್ಲಿ[೧೭೫] ಹಾಗೂ ಚೋರುನೂರು ಗ್ರಾಮದ ಹನುಮಂತ ದೇವಸ್ಥಾನದ ಮುಂದಿರುವ ಕ್ರಿ.ಶ.೧೬೯೦ರ ಶಾಸನದಲ್ಲಿ[೧೭೬] ಮತ್ತು ಗೆಂತಿಕಟ್ಟೆಯ ಗ್ರಾಮದಲ್ಲಿಯ ಗಾಳಿಗನ ಕಣದಲ್ಲಿರುವ ವೀರಗಲ್ಲಿನ ಶಾಸನಗಳಲ್ಲಿ[೧೭೭] ಪ್ರಮಾದೀಚ ಸಂವತ್ಸರವನ್ನು, ತುಂಬರಗುದ್ದಿಯ ಶಿವ ದೇವಸ್ಥಾನದ ಮುಂದಿರುವ ಶಾಸನದಲ್ಲಿ ಮತ್ತು ಅದೇ ಗ್ರಾಮದ ಹನುಮಂತ ದೇವಸ್ಥಾನದ ಮುಂದಿರುವ ಶಾಸನಗಳಲ್ಲಿ[೧೭೮] ಶಾರ್ವರಿ ಸಂವತ್ಸರವನ್ನು, ಬೊಮ್ಮಗಟ್ಟ ಗ್ರಾಮದ ಕ್ರಿ.ಶ.೧೮೯೦ರ ತಾಮ್ರ ಶಾಸನದಲ್ಲಿ ವಿಭವನಾಮ ಸಂವತ್ಸರ, ಸಂಡೂರಿನ ಪಿ.ಡಬ್ಲ್ಯೂ.ಡಿ. ಕಛೇರಿ ಹತ್ತಿರ ಬಿದ್ದಿರುವ ಕ್ರಿ.ಶ.೧೫೪೪ರ ಶಾಸನದಲ್ಲಿ[೧೭೯] ಹಾಗೂ ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದ ಮಂಟಪದ ಕ್ರಿ.ಶ.೧೨೦೭ರ[೧೮೦] ಎರಡೂ ಶಾಸನಗಳಲ್ಲಿ ಕ್ರೋಧಿನ್ ಸಂವತ್ಸರ, ದರೋಜಿ ಗ್ರಾಮದ ಬೆಟ್ಟದ ಮೇಲೆ ರಾಮಲಿಂಗೇಶ್ವರ ಅರೆಗಂಬದಲ್ಲಿಯ ಕ್ರಿ.ಶ.೧೧೦೫ರ ಶಾಸನದಲ್ಲಿ[೧೮೧] ಹಾಗೂ ಕುಮಾರಸ್ವಾಮಿ ಬೆಟ್ಟದ ಮೇಲಿನ ಕುಮಾರಸ್ವಾಮಿ ದೇವಾಲಯದಲ್ಲಿಯ ಪಾತಾಳೇಶ್ವರ ಗುಡಿಯ ಆವರಣದೊಳಗಿನ ಪೀಠದ ಮೇಲಿನ ಕ್ರಿ.ಶ.೧೦೪೫ರ[೧೮೨] ಎರಡೂ ಶಾಸನದಲ್ಲಿಯೂ ಪಾರ್ಥಿವ ಸಂವತ್ಸರ, ನಾಗಲಾಪುರ ಗ್ರಾಮದಲ್ಲಿಯ ಶಮಿ ಮರದ ಕೆಳಗೆ ನಿಲ್ಲಿಸಿದ ಶಾಸನದಲ್ಲಿ[೧೮೩]

ಹಾಗೂ ನವಿಲುಸ್ವಾಮಿ ದೇವಸ್ಥಾನದ ಮುಂದಿರುವ ಶಾಸನಗಳೆರಡರಲ್ಲಿ[೧೮೪] ಸೌಮ್ಯ ಸಂವತ್ಸರ, ಕುರೆಕುಪ್ಪೆ ಗ್ರಾಮದ ಈಶ್ವರ ದೇವಸ್ಥಾನದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನದಲ್ಲಿ[೧೮೫] ಸಂಡೂರಿನ ಪಿ.ಡಬ್ಲ್ಯೂ.ಡಿ. ಕಚೇರಿಯ ಹತ್ತಿರ ಬಿದ್ದಿರುವ ಕ್ರಿ.ಶ.೧೭೦೩ರ[೧೮೬] ಶಾಸನಗಳೆರಡರಲ್ಲಿ ಸ್ವಾಭಾನು ಸಂವತ್ಸರವನ್ನು ಕಾಣುತ್ತೇವೆ.

ಒಟ್ಟಿನಲ್ಲಿ ಇರುವ ೬೦ ಸಂವತ್ಸರಗಳಲ್ಲಿ ನಮಗೆ ಈ ತಾಲ್ಲೂಕಿನ ಶಾಸನಗಳಲ್ಲಿ ಸು.೨೯ ಸಂವತ್ಸರಗಳು ಬಳಕೆಯಾಗಿರುವುದನ್ನು ಕಾಣತ್ತೇವೆ. ಅವುಗಳಲ್ಲಿ ಪ್ರಮಾದಿಚ ಸಂವತ್ಸರ ನಾಲ್ಕು ಕಡೆಗಳಲ್ಲಿ ಬಳಕೆಯಾಗಿದ್ದರೆ, ಕ್ರೋಧಿನ್, ಶಾರ್ವರಿ, ಸ್ವಭಾನು ಸಂವತ್ಸರಗಳು ಮೂರು ಬಾರಿ ಬಳಕೆಯಾಗಿವೆ. ಹಾಗೂ ಪಾರ್ಥಿವ, ಸೌಮ್ಯ, ವಿರೋಧಿಕೃತ, ವಿಭವನಾಮ, ಸರ್ವಜಿತ್, ಸಾಧಾರಣ, ನಳ ಸಂವತ್ಸರಗಳು ಎರಡೆರಡು ಬಾರಿ ಉಲ್ಲೇಖವಾಗಿವೆ. ಉಳಿದಂತೆ ಸರ್ವಧಾರಿ, ರುಧಿರೋದ್ಗಾರಿನ್, ದುರ್ಮುಖಿ, ಶುಭಕೃತ್, ಪರಾಭವ, ಶೋಭನನಾಮ, ದುಂದುಬಿ, ಪ್ಲವಂಗ, ಪರಿಧಾವಿ, ಬಹುಧಾನ್ಯ, ವಿಕಾರಿ, ಆನಂದ, ತಾರಣ ಸಂವತ್ಸರಗಳು ಒಂದೊಂದು ಬಾರಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಶಾಸನಗಳಲ್ಲಿ ಮಾಸಗಳ ಉಲ್ಲೇಖ

ಈ ತಾಲ್ಲೂಕಿನ ಅಂಕಮ್ಮನಹಾಳು ಗ್ರಾಮದ ಪಶ್ಚಿಮಕ್ಕೆ ಪಾಳು ಬಿದ್ದ ದೇವಸ್ಥಾನದ ಮುಂದಿರುವ ಶಾಸನದಲ್ಲಿ[೧೮೭], ಚೋರುನೂರು ಗ್ರಾಮದ ವಿರಕ್ತಮಠದ ಮೊಗಸಾಲೆಯಲ್ಲಿ ಕಟ್ಟಿರುವ ಶಾಸನದಲ್ಲಿ[೧೮೮], ರಾಮಘಡದ ರಾಮದೇವರ ದೇವಸ್ಥಾನದ ಮುಂಭಾಗದ ಗೋಡೆಗೆ ನಿಲ್ಲಿಸಿದ ಕ್ರಿ.ಶ.೧೫೨೭ರ ಶಾಸನದಲ್ಲಿ[೧೮೯], ಸಂಡೂರಿನ ಪಿ.ಡಬ್ಲ್ಯೂ.ಡಿ. ಕಛೇರಿ ಹತ್ತಿರ ಬಿದ್ದಿರುವ ಶಾಸನ[೧೯೦] ಈ ನಾಲ್ಕು ಶಾಸನಗಳಲ್ಲಿ ಆಶ್ವಿಜ ಮಾಸವು ಉಲ್ಲೇಖವಾಗಿದ್ದರೆ, ತುಂಬರಗುದ್ದಿ ಗ್ರಾಮದ ಶಿವ ದೇವಸ್ಥಾನದಲ್ಲಿ ನಿಲ್ಲಿಸಿದ ಶಾಸನದಲ್ಲಿ[೧೯೧], ತಾಳೂರು ಗ್ರಾಮದ ಈಶ್ವರ ದೇವಸ್ಥಾನದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೨೧೮ರ ಶಾಸನದಲ್ಲಿ, [೧೯೨] ಗೆಂತಿಕಟ್ಟೆ ಗ್ರಾಮದ ವೀರಗಲ್ಲು ಶಾಸನದಲ್ಲಿ[೧೯೩], ಈ ಮೂರು ಶಾಸನಗಳಲ್ಲಿ ಜೇಷ್ಠಮಾಸವು ಉಲ್ಲೇಖವಾಗಿದೆ. ತಾರಾನಗರದ ಕ್ರಿ.ಶ.೧೦೪೭ರ ಶಾಸನದಲ್ಲಿ[೧೯೪] ಹಾಗೂ ಅದೇ ಸ್ಥಳದಲ್ಲಿ ದೊರೆತ ಕ್ರಿ.ಶ.೧೨೨೪ರ[೧೯೫] ಶಾಸನಗಳೆರಡರಲ್ಲಿ ಪುಷ್ಯ ಮಾಸ ಬಳಕೆಯಾಗಿದೆ. ತಾರಾನಗರದ ಮುದ್ದಪನ ಬೀಳು ಎಂದು ಕರೆಯುವ ಹೊಲದಲ್ಲಿಯ ಕ್ರಿ.ಶ.೧೫೩೬ರ ಶಾಸನದಲ್ಲಿ[೧೯೬], ಕುಮಾರಸ್ವಾಮಿ ದೇವಾಲಯದ ಜಾಗಟೆಯ ಮೇಲಿನ ಕ್ರಿ.ಶ.೧೮೩೦ರ ಶಾಸನದಲ್ಲಿ[೧೯೭] ಈ ಎರಡು ಶಾಸನದಲ್ಲಿ ಶ್ರಾವಣ ಮಾಸ ಬಳಕೆಗೊಂಡಿದ್ದರೆ, ನವಿಲುತೀರ್ಥದ ಬಳಿಯ ಒಂದು ಶಾಸನದಲ್ಲಿ[೧೯೮], ಶಂಕರಪುರ (ಗಂಡಿ ಬಸಾಪುರ)ದ ಗಂಡಿ ಬಸಪ್ಪನ ದೇವಸ್ಥಾನದ ಹತ್ತಿರವಿರುವ[೧೯೯] ೧೬ನೇ ಶತಮಾನದ ಶಾಸನದಲ್ಲಿ ಮಾರ್ಗಶಿರ ಮಾಸ ಉಲ್ಲೇಖವಾಗಿದೆ. ರಾಮಘಡದ ರಾಮದೇವರ ದೇವಸ್ಥಾನದ ಹತ್ತಿರ

ನಿಲ್ಲಿಸಿದ ವೀರಗಲ್ಲಿನ ಕ್ರಿ.ಶ.೧೩೨೩ರ ಶಾಸನದಲ್ಲಿ[೨೦೦], ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಮಂಟಪದಲ್ಲಿಯ ಕ್ರಿ.ಶ.೧೨೦೮ರ ಶಾಸನದಲ್ಲಿ[೨೦೧] ಫಾಲ್ಗುಣಮಾಸ ಉಲ್ಲೇಖವಾಗಿರುವುದು. ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆದಂಡೆಯ ಹತ್ತಿರ ನಿಲ್ಲಿಸಿದ ಕ್ರಿ.ಶ.೧೫೫೯ರ ಶಾಸನದಲ್ಲಿ[೨೦೨], ಸುಬ್ಬರಾಯನಹಳ್ಳಿ ಬಳಿಯ ನವಿಲುಸ್ವಾಮಿ ದೇವಸ್ಥಾನದ ಮುಂದಿರುವ ಶಾಸನಗಳೆರಡರಲ್ಲಿ ಭಾದ್ರಪದ ಮಾಸ ಬಳಕೆಯಾಗಿದೆ. ಸಂಡೂರು ಗ್ರಾಮದ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕ್ರಿ.ಶ.೧೬೦೪ರ ಶಾಸನದಲ್ಲಿ[೨೦೩], ಅದೇ ಗ್ರಾಮದ ಪಿ.ಡಬ್ಲ್ಯೂ.ಡಿ. ಕಛೇರಿ ಹತ್ತಿರ ಬಿದ್ದಿರುವ ಕ್ರಿ.ಶ.೧೫೪೪ರ ಶಾಸನದಲ್ಲಿ[೨೦೪], ತಾರಾನಗರದ ನಾರಿಹಳ್ಳ ಯೋಜನೆ ಪ್ರದೇಶದಲ್ಲಿ ಭೂಮಿಯನ್ನು ಸಮತಲ ಮಾಡುವಾಗ ದೊರೆತ ತ್ರಾಮ ಶಾಸನದಲ್ಲಿ[೨೦೫] ಚೈತ್ರಮಾಸ, ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಬಿದ್ದಿರುವ ಕ್ರಿ.ಶ.೧೫೫೧ರ ಶಾಸನದಲ್ಲಿ[೨೦೬], ಆವಿನಮಡುಗು ಗ್ರಾಮದ ಕೆರೆಯ ಕೆಳಗೆ ಒಂದು ಗುಂಡಿನ ಮೇಲಿನ ಕ್ರಿ.ಶ.೧೫೫೧ರ ಶಾಸನದಲ್ಲಿ, ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕ್ರಿ.ಶ.೧೫೪೬ರ ಶಾಸನದಲ್ಲಿ[೨೦೭], ನಾಗಲಾಪುರ ಗ್ರಾಮದ ಶಮಿಮರದ ಕೆಳಗೆ ನಿಲ್ಲಿಸಿದ ಶಾಸನದಲ್ಲಿ[೨೦೮], ಈ ನಾಲ್ಕು ಶಾಸನಗಳಲ್ಲಿ ಆಷಾಢ ಮಾಸ ಉಲ್ಲೇಖವಾಗಿರುವುದು. ಅಂತಾಪುರ ಶಿಥಿಲವಾದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ನಿಲ್ಲಿಸಿದ ಕ್ರಿ.ಶ.೧೫೫೩ರ ಶಾಸನದಲ್ಲಿ[೨೦೯], ಚೋರನೂರು ಗ್ರಾಮದ ವೀರಭದ್ರ ದೇವಸ್ಥಾನದಲ್ಲಿ ನಿಲ್ಲಿಸಿದ ಕ್ರಿ.ಶ.೧೫೫೦ರ[೨೧೦] ಶಾಸನದಲ್ಲಿ, ದರೋಜಿ ಬೆಟ್ಟದ ಮೇಲಿನ ರಾಮಲಿಂಗೇಶ್ವರ ದೇವಸ್ಥಾನದ ಅರೆಗಂಭದ ಮೇಲಿನ ಶಾಸನದಲ್ಲಿ[೨೧೧], ಕೋಡಾಳು ಗ್ರಾಮದ ಹನುಮಂತ ದೇವಸ್ಥಾನದ ಪ್ರಾಕಾರದ ಗೋಡೆಗೆ ಕಟ್ಟಿರುವ ಕ್ರಿ.ಶ.೧೫೫೨ರ ಶಾಸನದಲ್ಲಿ[೨೧೨], ಸಂಡೂರಿನ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಶಾಸನದಲ್ಲಿ[೨೧೩], ಸೋವೇನಹಳ್ಳಿ ಗ್ರಾಮದ ಹನುಮಂತ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿನ ಶಾಸನದಲ್ಲಿ[೨೧೪], ಈ ಐದು ಶಾಸನಗಳಲ್ಲಿ ಕಾರ್ತಿಕಮಾಸ ಬಳಕೆಯಾಗಿರುವುದು. ಚೋರುನೂರು ಗ್ರಾಮದ ಹನುಮಂತ ದೇವಸ್ಥಾನದ ಮುಂದಿರುವ ಕ್ರಿ.ಶ.೧೮೯೦ರ ಶಾಸನದಲ್ಲಿ[೨೧೫], ಹುಲಿಕುಂಟಾಗ್ರಾಮದ ಕೆರೆಯ ದಂಡೆಯಲ್ಲಿ ಕಟ್ಟಿರುವ ಕ್ರಿ.ಶ.೧೫೫೮ರ ಶಾಸನದಲ್ಲಿ[೨೧೬], ಕುರೆಕುಪ್ಪೆಯ ಈಶ್ವರ ದೇವಸ್ಥಾನದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನದಲ್ಲಿ[೨೧೭] ಹಾಗೂ ಅದೇ ಮತ್ತೊಂದು ಶಾಸನದಲ್ಲಿ, ಕುಮಾರಸ್ವಾಮಿ ಬೆಟ್ಟದ ಪಾತಾಳೇಶ್ವರ ಗುಡಿಯ ಆವರಣದೊಳಗಿನ ಪೀಠದ ಮೇಲಿನ ಕ್ರಿ.ಶ.೧೦೪೫ರ ಶಾಸನದಲ್ಲಿ[೨೧೮], ಸಂಡೂರಿನ ಸ್ಥಳೀಯ ನ್ಯಾಯಾಲಯದ ಆವರಣದೊಳಗೆ ಬಿದ್ದಿರುವ ಕ್ರಿ.ಶ.೧೬೪೪ರ ಶಾಸನದಲ್ಲಿ[೨೧೯], ಸಂಡೂರಿನ ಪಿ.ಡಬ್ಲ್ಯೂ.ಡಿ ಕಛೇರಿ ಹತ್ತಿರ ಬಿದ್ದಿರುವ ಕ್ರಿ.ಶ.೧೬೦೩ರ ಶಾಸನದಲ್ಲಿ[೨೨೦], ತುಂಬರಗುದ್ದಿಯ ಹನುಮಂತನ ದೇವಸ್ಥಾನದ

ಮುಂದಿರುವ ಶಾಸನದಲ್ಲಿ, ಬೊಮ್ಮಗಟ್ಟ ಗ್ರಾಮದ ಕ್ರಿ.ಶ.೧೪೯೦ರ ಶಾಸನ, ಹೀಗೆ ಇಲ್ಲಿ ಸುಮಾರು ಹನ್ನೊಂದು ಶಾಸನಗಳಲ್ಲಿ ವೈಶಾಖ ಮಾಸ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಒಟ್ಟಿನಲ್ಲಿ ಇರುವ ೧೨ ಮಾಸಗಳಲ್ಲಿ ನಮಗೆ ಈ ತಾಲ್ಲೂಕಿನ ಶಾಸನಗಳಲ್ಲಿ ೧೧ ಮಾಸಗಳು ಬಳಕೆಯಾಗಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ನಾಲ್ಕು ಆಶ್ವಿಜಮಾಸ, ಮೂರು ಜೇಷ್ಠಮಾಸ, ಎರಡು ಪುಷ್ಯಮಾಸ, ಎರಡು ಶ್ರಾವಣಮಾಸ, ಎರಡು ಮಾರ್ಗಶಿರಮಾಸ, ಎರಡು ಫಾಲ್ಗುಣಮಾಸ, ಎರಡು ಭಾದ್ರಪದಮಾಸ, ಮೂರು ಚೈತ್ರಮಾಸ, ನಾಲ್ಕು ಆಷಾಡಮಾಸ, ಐದು ಕಾರ್ತಿಕಮಾಸ ಹಾಗೂ ಹನ್ನೊಂದು ವೈಶಾಖಮಾಸಗಳು ಬಳಕೆಗೊಂಡಿವೆ. ಈ ಎಲ್ಲಾ ಶಾಸನಗಳನ್ನು ಗಮನಿಸಿದರೆ ಹೆಚ್ಚಾಗಿ ವೈಶಾಖಮಾಸ ಬಳಕೆಯಾಗಿರುವುದು ಗಮನಾರ್ಹವಾಗಿದೆ.

ಶಾಸನಗಳಲ್ಲಿ ವಿಶೇಷ ದಿನಗಳು

ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಮಂಟಪದಲ್ಲಿಯ ಕ್ರಿ.ಶ.೧೨೦೬ರ ಶಾಸನದಲ್ಲಿ[೨೨೧] ಶಕ ನೃಪ ವರ್ಷದ ೧೧೨೩ನೆಯ ಕ್ರೋಧನ ಸಂವತ್ಸರದ ಫಾಲ್ಗುಣಮಾಸದ ಬಹುಳ ಅಮಾವಾಸ್ಯೆಯ ವಡ್ಡವಾರದ (ಶನಿವಾರ) ಸೂರ್ಯ ಗ್ರಹಣಕ್ಕೆ ಸರಿಯಾದ ಎಂದು ತಿಳಿಸುತ್ತದೆ. ಇಲ್ಲಿ ವಿಶೇಷವಾಗಿ ಸೂರ್ಯಗ್ರಹಣದ ಸಂದರ್ಭದಲ್ಲಿ ದಾನ ನೀಡಿದ ಉಲ್ಲೇಖವನ್ನು ಈ ಶಾಸನ ತಿಳಿಸುವುದು.

ನಾರಿಹಳ್ಳ(ತಾರಾನಗರ) ಭೂಮಿಯಲ್ಲಿ ದೊರೆತ ಕ್ರಿ.ಶ.೧೨೨೪ರ ಶಾಸನದಲ್ಲಿ[೨೨೨] ಶಕ ವರ್ಷಂ ೧೧೪೬ನೆಯ ತಾರಣ ಸಂವತ್ಸರದ ಪುಷ್ಯ ಮಾಸದ ಶುದ್ಧ ಏಕಾದಶಿಯ ಆದಿತ್ಯವಾರದ ಉತ್ತರಾಯಣ ಸಂಕ್ರಮಣದ ವ್ಯತಿಪಾತದಂದು ಎಂದು ದಾಖಲಿಸಿದೆ. ಇಲ್ಲಿ ಕ್ರಿ.ಶ.೧೨೨೪-೧೨-೨೩ನೇ ತಾರೀಖು ಸೋಮವಾರವಾಗುವುದು. ಆ ದಿನ ಆದಿತ್ಯವಾರವಾಗುವುದಿಲ್ಲ. ಆದರೆ ಸಂಕ್ರಮಣವು ಇದೇ ತಿಂಗಳು ೨೫ರಂದು ಬಂದಿರುವುದು ಗಮನಾರ್ಹ.

ಸುಬ್ಬರಾಯನಹಳ್ಳಿ ಸಮೀಪದ ನವಿಲುಸ್ವಾಮಿ ದೇವಸ್ಥಾನದ ಮುಂದೆ ಬಿದ್ದಿರುವ ಕ್ರಿ.ಶ.೧೩೮೬ರ ಶಾಸನದಲ್ಲಿ[೨೨೩] ಶಕವರ್ಷ ೧೩೦೯ನೆಯ ಕ್ಷಯ ಸಂವತ್ಸರದ ಮಾರ್ಗಶಿರ ಮಾಸದ ಬಹುಳ ೭ರ ಗುರುವಾರದ ಹಸ್ತ ಸಿದ್ಧಿಯೋಗದ ಶಕುನಿ-ಕರಣದ ವಿಶೇಷ ಸಂದರ್ಭದಲ್ಲಿ ದಾನ ಕೊಟ್ಟಿದ್ದು ತಿಳಿದುಬರುವುದು.

ನಾರಿಹಳ್ಳದ ಭೂಮಿಯಲ್ಲಿ ದೊರೆತ ಕ್ರಿ.ಶ.೧೦೪೭ರ ಶಾಸನದಲ್ಲಿ[೨೨೪] ಶಕ ೯೬೯ನೆಯ ಸರ್ವಜಿತ್ ಸಂವತ್ಸರದ ಪುಷ್ಯಮಾಸದ ಶುದ್ಧ ೫ರ ಮಕರ ಸಂಕ್ರಮಣದ ಮಹಾ ಪರ್ವ್ವಣಿಯ ವಿಶೇಷ ದಿನದಂದು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಹಳೆದರೋಜಿ ಬೆಟ್ಟದ ರಾಮಲಿಂಗೇಶ್ವರ ದೇವಸ್ಥಾನದ ಅರೆಗಂಬದ ಮೇಲಿನ ಕ್ರಿ.ಶ.೧೧೦೫ರ ಶಾಸನದಲ್ಲಿ[೨೨೫] ಪಾರ್ಥೀವ ಸಂವತ್ಸರದ ಕಾರ್ತಿಕಮಾಸದ ಶುದ್ಧ ಪಾಡಿಮೆಯ ಬೃಹಸ್ಪತಿವಾರ(ಗುರುವಾರ) ಆಗುವುದು ಎಂದು ತಿಳಿಸುವುದು. ಆದರೆ ಅದು ಗುರುವಾರವಾಗುವುದಿಲ್ಲ. ಕಾರ್ತಿಕಮಾಸದ ಶುದ್ಧ ಪಾಡಿಮೆ ಮಂಗಳವಾರಕ್ಕೆ ಸರಿಯಾಗುವುದು.(ಕ್ರಿ.ಶ.೧೧೦೫-೧೦-೧೦)

ಗೆಂತಿಕಟ್ಟೆಯ ಗಾಳಿಗನ ಕಣದಲ್ಲಿಯ ತ್ರುಟಿತ ವೀರಗಲ್ಲಿನಲ್ಲಿ[೨೨೬] ಪ್ರಮಾದಿ ಸಂವತ್ಸರದ ಜೇಷ್ಠ ಮಾಸದ ಹುಣ್ಣಿಮೆಯ ಮಂಗಳವಾರದಂದು ಧಾಳಿಯಾಗಿದ್ದು, ಆ ಸಂದರ್ಭದಲ್ಲಿ ಮಡಿದ ವೀರನ ಸ್ಮರಣೆಗಾಗಿ ನಿಲ್ಲಿಸಿದ ಶಾಸನ ಎಂದು ತಿಳಿದುಬರುವುದು.

ಹೀಗೆ ಎಲ್ಲಾ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂತೆ ವಿಶೇಷ ದಿನಗಳಾದ ಸೂರ್ಯ ಹಾಗೂ ಚಂದ್ರ ಗ್ರಹಣ, ಉತ್ತರಾಯಣ ಸಂಕ್ರಮಣ, ಹುಣ್ಣಿಮೆ, ಅಮವಾಸ್ಯೆ, ಇಂತಹ ವಿಶೇಷ ದಿನಗಳ ಸಂದರ್ಭದಲ್ಲಿ ಶಾಸನವನ್ನು ಹಾಕಿಸಿದ್ದ ಉಲ್ಲೇಖವನ್ನು ಈ ತಾಲ್ಲೂಕಿನ ಶಾಸನಗಳಲ್ಲಿಯೂ ಕಾಣುತ್ತೇವೆ.

ಶಾಸನಗಳಲ್ಲಿ ಪ್ರತಿನಾಮಕರಣಗೊಂಡ ಗ್ರಾಮಗಳು

ಕುರೆಕುಪ್ಪೆ ಗ್ರಾಮದ ಈಶ್ವರ ದೇವಾಲಯದ ಮಂಟಪದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನದಲ್ಲಿ "....ಆಱುಂಬಾಡವಾದ ದೊರವದಿಯ ವೇಂಠೆಯಕ್ಕೆ ಸಲುವ ಅನಂತಸೇತುವೆಂದು ಪ್ರತಿನಾಮವಾದ ಕುಱಿಯಕುಪ್ಪೆಯೆಂಬ ಸರ್ವಮಾನ್ಯದ ಅಗ್ರಹಾರದಲು" ಎಂದು ದಾಖಲಿಸಿದೆ.[೨೨೭] ಆರು ಬಾಡಗಳನ್ನೊಳಗೊಂಡಂತಹ ದೊರವದಿ (ದರೋಜಿ) ವೇಂಠೆಗೆ ಸೇರಿದ ಕುರೆಕುಪ್ಪೆ ಗ್ರಾಮಕ್ಕೆ ಅನಂತಸೇತು ಎಂಬ ಉಪನಾಮವಿತ್ತೆಂದು ಹಾಗೂ ಇದು ಒಂದು ಅಗ್ರಹಾರವಾಗಿತ್ತೆಂದು ಈ ಶಾಸನದಿಂದ ತಿಳಿದುಬರುವುದು.

ಹಂಪಿಯ ಅಚ್ಯುತರಾಯಸ್ವಾಮಿ ದೇವಾಲಯದ ಎಡಭಾಗದ ಕಡೆಯ ಉತ್ತರಮುಖದ ಗೋಪುರದಲ್ಲಿಯ ಕ್ರಿ.ಶ.೧೫೩೪ರ ಶಾಸನದಲ್ಲಿ "....ಹೊರಮಲೆಯ ನಾಡ ಅಚ್ಯುತರಾಯಪುರವೆಂದು ಪ್ರತಿನಾಮವಾದ ಚೋರಮನೂರ ಸೀಮೆ ಗ್ರಾಮವನೂ...." ಎಂದು ಉಲ್ಲೇಖವಿರುವುದು.[೨೨೮] ಇಂದಿನ ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮಕ್ಕೆ ಹಿಂದೆ ಹೊರಮಲೆಯ ನಾಡ ಅಚ್ಯುತರಾಯಪುರ ಎಂಬ ಉಪನಾಮವಿತ್ತೆಂದು ತಿಳಿದುಬರುವುದು.

ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಬೊಮ್ಮಗಟ್ಟ ಗ್ರಾಮದ ಕ್ರಿ.ಶ.೧೪೯೦ರ ತಾಮ್ರ ಶಾಸನದಲ್ಲಿ ".... ವಿದ್ಯಾನಗರಕ್ಕೆ ಸಲ್ಲುವ ಸೊಂಡೂರು ಮಲೆ ಪ್ರಾಂತ್ಯ ಶ್ರೀ ||೧|| ಸುಕ್ಷೇತ್ರಕ್ಕೆ ಸಂನಿಧಿ ತುಂಬರ ಗುದ್ಧಿಗೆ ಪ್ರತಿನಾಮ ವ್ಯಾಸಾಪುರವೆಂಬ ಗ್ರಾಮವನು..." ಎಂದಿದೆ. ವ್ಯಾಸರಾಯರು ಹಂಪಿಯಲ್ಲಿದ್ದಾಗ

ವಿಜಯನಗರ ರಾಜ್ಯಕ್ಕೆ ಸಲ್ಲುವ ಸೊಂಡೂರು ಪ್ರಾಂತ್ಯದ ತುಂಬರಗುದ್ದಿಗೆ ವ್ಯಾಸರಾಯಪುರವೆಂದು ಹೆಸರನ್ನು ಬದಲಾಯಿಸಿ ವ್ಯಾಸರಾಯರಿಗೆ ಕೆಲವು ದಾನಗಳನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ.

ಶಾಸನಗಳಲ್ಲಿ ಶಾಪಾಶಯಗಳು

ಶಾಸನಗಳಲ್ಲಿ ಕಂಡುಬರುವ ವಿವಿಧ ಮಾದರಿಯ ಶಾಪಾಶಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಮಂಟಪದಲ್ಲಿರುವ ಕ್ರಿ.ಶ.೧೨೦೮ರ ಶಾಸನದಲ್ಲಿ[೨೯]

"...|| ಸಮನಿಕುಮೊಲವಿಂದೀ ಧರ್ಮ್ಮ
ಮನಾರಯ್ದೊಡೆ ಕಡಂಗಿ ಕಿಡಿಸಿದೊಡಾ ಗೋಸ
ಮುದಯಮಂ ದ್ವಿಜರುಮನಳಿದ ಮಹಾಪಾತ
ಕಮನೆಯ್ದುಗುಂ ತತ್ಕ್ಷಣದೊಳ್|| ಸ್ವದತ್ತಾಂ ಪರ
ದತ್ತಾಂ ವಾ ಪಾಲಯನ್ತಿ ವಸುಂಧರಾಯ
ಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ||
ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧ
ರಾಂ ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಠಾಯಾಂಜಾಯ
ತೇ ಕ್ರಿಮಿಃ|| ಗಾ ಮೇಕಾಂ ರತ್ನಿಕಾಮೇಕಾಂ ಭೂ ಮೇ
ರಪ್ಯೇಕಮಂಗುಲಂಹರಂ ನರಕಮಾಪ್ನೋತಿ ಯಾ
ವದಾ ಭೂತ ಸಂಪ್ಲವಂ|| ಶಾಸನ ಮಿದೇವುದೆ
ಲ್ಲಿಯ ಶಾಸನಮಾರಿತ್ತರೇಕೆ ಸಲಿಸುವೆ ನಾನೀ ಶಾಸ
ನ ಮನೆಂಬ ಪಾತಕ ಭಾಸುರತರ ರೌರವಕ್ಕೆ ಗಳಗ
ಳ ನಿಳಿಗುಂ|| ಮಂಗಳ ಮಹಾ ಶ್ರೀ"

ಈ ಧರ್ಮವನ್ನು ಯಾರಾದರೂ ಕೆಡಿಸಿದರೆ ಗೋವುಗಳ ಸಮುದಾಯವನ್ನು ಬ್ರಾಹ್ಮಣರನ್ನು ಕೊಂದ ಪಾಪವು ತತ್ಕ್ಷಣದಲ್ಲಿ ಲಭಿಸುವುದು. ತಾವು ಕೊಟ್ಟಂತ ಅಥವಾ ಪರರು ಕೊಟ್ಟಂತ ಭೂಮಿಯನ್ನು ಯಾರು ಪಾಲಿಸುತ್ತಾರೋ ಅವರು ಆ ಭೂಮಿಯ ಫಲವನ್ನು ಅನುಭವಿಸುವರು. ತಾವು ಕೊಟ್ಟಿದ್ದನ್ನಾಗಲೀ ಅಥವಾ ಪರರು ಕೊಟ್ಟಿದ್ದನ್ನಾಗಲೀ, ಕೊಟ್ಟ ಭೂಮಿಯನ್ನು ಯಾರು ಅಪಹರಿಸುತ್ತಾರೋ ಅಂತವರು ಅರವತ್ತು ಸಾವಿರ ವರ್ಷಗಳು ಕ್ರಿಮಿಗಳಾಗಿ ಜನಿಸುವರು. ಒಂದು ಗೋವನ್ನು, ಒಂದು ರತ್ನವನ್ನು ಮತ್ತು ಒಂದು ಅಂಗುಲದಷ್ಟು ಭೂಮಿಯನ್ನು ಯಾರು ಅಪಹರಿಸುತ್ತಾರೋ ಅವರು ಪ್ರಳಯ ಕಾಲದವರೆಗೆ ನರಕದಲ್ಲಿ ಇರುವರು. ಈ ಶಾಸನವನ್ನು ನಾಶ ಮಾಡುವ ಪಾತಕನು ರೌರವ ನರಕಕ್ಕೆ ಗಳಗಳನೆ ಇಳಿಯುವನು.

ಪ್ರಾರಂಭದಲ್ಲಿ ಎರಡು ಸಾಲು ಕನ್ನಡ ಭಾಷೆಯಲ್ಲಿ ಮತ್ತು ಮಧ್ಯದ ಎಂಟು ಸಾಲು ಸಂಸ್ಕೃತ ಭಾಷೆಯಲ್ಲಿ ಹಾಗೂ ಕೊನೆಯ ಮೂರು ಸಾಲು ಮತ್ತೆ ಕನ್ನಡ ಭಾಷೆಯಲ್ಲಿ ಬರೆದ ದ್ವಿಭಾಷೆಯನ್ನೊಳಗೊಂಡ ಶಾಪಾಶಯ ಭಾಗವನ್ನು ಈ ಶಾಸನದಲ್ಲಿ ಕಾಣುತ್ತೇವೆ.

ನಾರಿಹಳ್ಳ ಯೋಜನೆಯ ಭೂಮಿಯಲ್ಲಿ ದೊರೆತ ಕ್ರಿ.ಶ.೧೦೪೮ರ ತಾಮ್ರಶಾಸನ

"ಕ್ತಾ ರಾಜಭಿಃ ಸಗರಾದ್ಭಿರ್ಯ (ಭಿಃ|ಯ) ಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ

ಫಲಂ (ಲಮ್)|| ಅಪಹರಣೇ ಪಿ ಚ ದೋಷಸ್ತ್ಯೇ ನ್ಯೆರೋಕ್ತಃ| ಸ್ವದತ್ತಂ

ಪರದತ್ತಂ ವಾ ಯೋ ಹರೇತ ವಸುಂಧರಾಂ (ಮ್) || ಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಯಾಂ

ಜಾಯತೇ ಕ್ರಿಮಿಃ | ರಾಮಭದ್ರೇಣಪ್ಯುಕ್ತಂ || ಸಾಮಾನ್ಯೋಯಂ

ಧರ್ಮ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ | ಸರ್ವ್ವಾನೇತಾನ್ಭಾವಿನಃ

ಪಾರ್ಥಿವೆನ್ದ್ರಾನ್ ಭೂಯೋ ಭೂಯೋ ಯಾಚತೇ ರಾಮ

ಭದ್ರಃ|| ಮದ್ವಂಸ(ಶ) ಜಾಃಪರಮಹೀಪತಿವಂಸ(ಶ) ಜಾಶ್ಚಪಾಪಾದಪೇತ ಮನಸೋ ಭುವಿಭಾವಿ

ಭೂಪಾಃ | ಯೇಪಾಲಯಂತಿಮಮ ಧರ್ಮ್ಮಮಿಮಂ

ಸಮಸ್ತಂ ತೇಭ್ಯೋಮಯ ವಿರಚಿತೋಂಜಲಿರೇಷ ಮೂರ್ದ್ಧ್ನಿ|"[೨೩೦]

ಸಗರ ಮೊದಲಾದ ಹಲವಾರು ರಾಜರುಗಳಿಂದ ಈ ಭೂಮಿಯು ಭೋಗಿಸಲ್ಪಟ್ಟಿದೆ. ಹಾಗಾಗಿ ಯಾರಿಗೆ ಯಾವ ರೀತಿಯಾದ ಭೂಮಿಯೋ, ಅವರಿಗೆ ಅದೇ ರೀತಿಯಾದ ಫಲವು ಹಾಗೂ ಅಪಹರಣದಿಂದಲೂ ದೋಷವಿದೆಯೆಂದು ಬೇರೆಯವರಿಂದ ಹೀಗೆ ಹೇಳಲ್ಪಟ್ಟಿದೆ. ತಾವು ಕೊಟ್ಟದ್ದನ್ನಾಗಲೀ ಅಥವಾ ಪರರು ಕೊಟ್ಟದ್ದನ್ನಾಗಲೀ ಕೊಟ್ಟ ಭೂಮಿಯನ್ನು ಯಾರು ಅಪಹರಿಸುತ್ತಾರೋ ಅಂತವರು ಅರವತ್ತು ಸಾವಿರ ವರ್ಷಗಳು ಕೊಳಚೆಯಲ್ಲಿ ಕ್ರಿಮಿಗಳಾಗಿ ಜನಿಸುತ್ತಾರೆ. ರಾಮಭದ್ರನಿಂದ ಈ ರೀತಿಯಾಗಿ ಹೇಳಲ್ಪಟ್ಟಿದೆ. ಈ ಧರ್ಮ ಸೇತುವೆಯೂ ಎಲ್ಲಾ ರಾಜರುಗಳಿಗೆ ಸಾಮಾನ್ಯವಾಗಿದೆ. ನಿಮ್ಮಿಂದಲೂ ಕಾಲಕಾಲಕ್ಕೆ ಇದು ಪಾಲಿಸಲ್ಪಡಬೇಕು. ಈ ಎಲ್ಲಾ ವಿಷಯಗಳನ್ನು ಮುಂದೆ ಬರುವಂತ ರಾಜರುಗಳಲ್ಲಿ ರಾಮಭದ್ರನು ಮತ್ತೆ ಮತ್ತೆ ಪ್ರಾರ್ಥಿಸುತ್ತಿರುವನು. ನನ್ನ ವಂಶದ ರಾಜರುಗಳು ಮತ್ತು ಮುಂದೆ ಬರುವಂತ ಪಾಪ ಕರ್ಮಗಳನ್ನು ಮಾಡಲು ಮನಸ್ಸಿಲ್ಲದಂತ ಯಾವ ರಾಜರುಗಳು ಈ ನನ್ನ ಧರ್ಮವನ್ನು ಪಾಲಿಸಿಕೊಂಡು ಬರುತ್ತಾರೋ ಅಂತವರಿಗೆ ನಾನು ಅಂಜಲಿ ಪೂರ್ವಕವಾಗಿ(ಕೈಜೋಡಿಸಿ) ನಮಸ್ಕರಿಸುತ್ತೇನೆ ಎನ್ನುವಂತ ಶಾಪಾಶಯವಿರುವುದನ್ನು ಈ ಶಾಸನದಲ್ಲಿ ಕಾಣುತ್ತೇವೆ.

ಅದೇ ಸ್ಥಳದಲ್ಲಿ ದೊರೆತ ಕ್ರಿ.ಶ.೧೨೨೪ರ ಮತ್ತೊಂದು ಶಾಸನದಲ್ಲಿ[೨೩೧] ಹಾಗೂ ಈ ತಾಲ್ಲೂಕಿನ ಕುರೆಕುಪ್ಪೆಯ ಈಶ್ವರ ದೇವಾಲಯದ ಮಂಟಪದ ಬಲಭಾಗದ ಕಂಬದಲ್ಲಿಯ ಕ್ರಿ.ಶ.೧೫೨೩ರ ಶಾಸನದಲ್ಲಿ[೨೩೨] ಹಾಗೂ ಸುಬ್ಬರಾಯನಹಳ್ಳಿ ಬಳಿಯ ನವಿಲುತೀರ್ಥದಲ್ಲಿಯ ಶಾಸನದಲ್ಲಿ[೨೩೩]

"ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವಸುಂಧರಂ| ಷಷ್ಠಿ ವರ್ಷ ಸ
ಹಸ್ರಾಣಿ ವಿಷ್ಟಾಯಂ ಜಾಯತೆ ಕ್ರಿಮಿಃ"||

ಅಂದರೆ, ತಾನು ಕೊಟ್ಟ ಅಥವಾ ಬೇರೆಯವರೇ ಕೊಟ್ಟ ದತ್ತಿ, ದಾನಗಳನ್ನು ಯಾವನು ಅಪಹರಿಸುತ್ತಾನೆಯೋ ಅವನು ಅರವತ್ತು ಸಾವಿರ ವರ್ಷಗಳ ಕಾಲ ಕ್ರಿಮಿಯಾಗಿ ಜೀವಿಸುತ್ತಾನೆ[೨೩೪] ಎಂಬ ಶಾಪಾಶಯವು ಮೇಲ್ಕಂಡ ಮೂರು ಶಾಸನಗಳಲ್ಲಿ ಬಳಕೆಯಾಗಿರುವುದು.

ಕುರೆಕುಪ್ಪೆಯ ಈಶ್ವರ ದೇವಾಲಯದ ಮಂಟಪದ ಕಂಬದಲ್ಲಿನ ಕ್ರಿ.ಶ.೧೫೨೩ರ ಶಾಸನದಲ್ಲಿ[೨೩೫] ಮತ್ತು ಚಿಕ್ಕಕೆರೆಯಾಗಿನಹಳ್ಳಿ ಗ್ರಾಮದ ಕೆರೆಯ ಬಳಿಯ ಕ್ರಿ.ಶ.೧೫೩೯ರ ಶಾಸನದಲ್ಲಿ[೨೩೬]

"....ದಾನ ಪಾಲನಯೋರ್ಮ್ಮಧ್ಯೇ ದಾನಾ ಶ್ರೇಯೋ
ನುಪಾಲನಂ ದಾನಾತ್ಸರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ"||

ಅಂದರೆ, ದಾನವನ್ನು ಕೊಡುವುದು ಮತ್ತು ಕೊಟ್ಟ ದಾನವನ್ನು ಪಾಲಿಸುವುದು ಇವುಗಳಲ್ಲಿ ದಾನವನ್ನು ಪಾಲಿಸುವುದೇ ಹೆಚ್ಚು ಶ್ರೇಯಸ್ಕರವಾದುದು. ದಾನವನ್ನಿತ್ತವರು ಸ್ವರ್ಗವನ್ನು ಪಡೆದರೆ, ಅದನ್ನು ಪರಿಪಾಲಿಸಿಕೊಂಡು ಬಂದವರು ಅಚ್ಯುತ ಪದವಿಯನ್ನು ಪಡೆಯುತ್ತಾರೆ[೨೩೭] ಎಂಬ ಮತ್ತೊಂದು ರೀತಿಯ ಶಾಪಾಶಯವು ಮೇಲ್ಕಂಡ ಎರಡು ಶಾಸನಗಳಲ್ಲಿ ಬಳಕೆಯಾಗಿರುವುದು.

ಶಂಕರಪುರ ಅಥವಾ ಗಂಡಿ ಬಸಾಪುರ ಶಾಸನದಲ್ಲಿ[೨೩೮] "....ಎಳುಯೇಳು ಜಲ್ಮಕೆ ಲೋಕ..." ಎಂದಿದ್ದರೆ, ಸಂಡೂರಿನ ಸ್ಥಳೀಯ ನ್ಯಾಯಾಲಯದ ಹತ್ತಿರವಿರುವ ಕ್ರಿ.ಶ.೧೫೪೪ರ ಶಾಸನದಲ್ಲಿ[೨೩೯] "ತಪ್ಪಿಕೊಂಡರೆ ಸಾಲುಂದರ ಮಕ್ಕಳು...." ಎಂದಿದೆ. ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಎಡ ಹಸ್ತಿಹಸ್ತದಲ್ಲಿನ ಕ್ರಿ.ಶ.೧೦೭೪ರ ಶಾಸನದಲ್ಲಿ[೨೪೦] ".....ಆ ಚಂದ್ರಾರ್ಕ ತಾರಂಬರಂ" ಎಂದಿದೆ. ತುಂಬರಗುದ್ದಿಯ ಆಂಜನೇಯ ದೇವಾಲಯದ ಎದುರಿಗೆ ಇರುವ ಶಾಸನದಲ್ಲಿ[೨೪೧] ".... ತಂಮ ತಾಯಿಗೆ ತಪ್ಪಿದವರು." ಎಂದು ಮೇಲ್ಕಂಡ ನಾಲ್ಕು ಶಾಸನಗಳಲ್ಲಿ ಕನ್ನಡ ಭಾಷೆಯ ಶಾಪಾಶಯ ಬಳಕೆಯಾಗಿರುವುದನ್ನು ಕಾಣುವೆವು. ಸಂಡೂರಿನ ಸ್ಥಳೀಯ ನ್ಯಾಯಾಲಯದ ಪ್ರಾಕಾರದಲ್ಲಿಯ ಕ್ರಿ.ಶ.೧೭೪೮ರ ಶಾಸನದಲ್ಲಿ[೨೪೨] ".... ತಪ್ಪಿನವಾರಿಕಿ ಗುರು ದ್ರೋಹಮು" ಎಂಬ ತೆಲುಗು ಭಾಷೆಯ ಶಾಪಾಶಯ ಇರುವುದನ್ನು ಕಾಣುತ್ತೇವೆ.

ಒಟ್ಟಿನಲ್ಲಿ ಈ ತಾಲ್ಲೂಕಿನ ಅನೇಕ ಶಾಸನಗಳಲ್ಲಿ ಹೆಚ್ಚಾಗಿ ಸಂಸ್ಕೃತ ಭಾಷೆಯ ಶಾಪಾಶಯಗಳೇ ಬಳಕೆಯಾಗಿದ್ದರು, ಅಲ್ಲಲ್ಲಿ ಕೆಲವು ಶಾಸನಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಯ ಶಾಪಾಶಯಗಳು ಬಳಕೆಯಾಗಿರುವುದನ್ನು ಕಾಣುತ್ತೇವೆ.

ಶಾಸನಗಳಲ್ಲಿ ಶ್ಲೋಕಗಳು

ಈ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಶೈವ ಮತ್ತು ವೈಷ್ಣವ ಧರ್ಮದ ಶ್ಲೋಕಗಳನ್ನು ಈ ಕೆಳಗಿನಂತೆ ವಿವರಿಸಲಾಗಿರುವುದು.

ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದ ಮಂಟಪದಲ್ಲಿರುವ ಕ್ರಿ.ಶ.೧೨೦೬ರ ಶಾಸನದಲ್ಲಿ[೨೪೩] ಹಾಗೂ ಕ್ರಿ.ಶ.೧೦೪೬ರ ತಾರಾನಗರದ ನಾರಿಹಳ್ಳ ಯೋಜನೆಯಲ್ಲಿ ದೊರೆತ ಶಾಸನದಲ್ಲಿ[೨೪೪]

"ಸ್ವಸ್ತಿ ಶ್ರೀ ಜಯಾಭ್ಯುದಯ ಶ್ಚ| ಬ್ರ
ಹ್ಮ ಸ್ಕಂದಾಯ ನಮಃ|| ಜಯತ್ಯಾ
ವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ನವಂದ
ಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾನ್ತಭುವನಂವಪುಃ"||

ಜಯವನ್ನು ವೃದ್ಧಿಸುವಂತ ಬ್ರಹ್ಮಸ್ಕಂದನಿಗೆ ನಮಸ್ಕಾರಗಳು. ಸಮುದ್ರವನ್ನು ಹೊಕ್ಕು ಕ್ಷೋಭೆಗೊಳಿಸಿ ಅಲ್ಲಿಂದ ಪ್ರಶಾಂತವಾದ ಭೂಮಿಯನ್ನು ತನ್ನ ಬಲ ದಾಡೆಯ ಮೇಲೆ ಹೊತ್ತು ತಂದ ವರಾಹ ರೂಪದ ವಿಷ್ಣುವಿಗೆ ಜಯವಾಗಲಿ[೨೪೫] ಎಂಬಂತ ವೈಷ್ಣವ ಶ್ಲೋಕ ಮೇಲಿನ ಎರಡು ಶಾಸನಗಳಲ್ಲಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಸುಬ್ಬರಾಯನಹಳ್ಳಿ ಬಳಿಯ ನವಿಲುತೀರ್ಥದ ಬಳಿಯ ಶಾಸನದಲ್ಲಿ[೨೪೬] ಮತ್ತು ಬೊಮ್ಮಗಟ್ಟದ ಕ್ರಿ.ಶ.೧೪೯೦ರ ಕಾಲಾವಧಿಯ ತಾಮ್ರಶಾಸನದಲ್ಲಿ

"ಶ್ರೀ ಗಣಾಧಿಪತಯೇ ನಮಃ
...... ಶ್ರೀ ನಮಸ್ತುಂಗ
ಸ್ತಿರಶ್ಚುಂಬಿ ಚಂದ್ರಚಾಮರಚಾರವೇತ್ರಯಿಲೋಕ್ಯ ನಗ
ರಾರಂಭ ಮೂಲ ಸ್ತಂಭಾಯ ಸಂಭವೇ||'

ಶ್ರೀ ಗಣಪತಿಗೆ ನಮಸ್ಕಾರಗಳು. ಚಾಮರದಂತಹ ಬಾಲ ಚಂದ್ರನಿಂದ ಚುಂಚಿತವಾದ ಉತ್ತುಂಗ ಜಟಾಜೂಟವನ್ನುಳ್ಳವನೂ ಮೂರು ಲೋಕಗಳ ರಚನೆಗೆ ಮೂಲಸ್ತಂಭ ರೂಪನೂ ಆದ ಶಂಭುವಿಗೆ ನಮಸ್ಕಾರ.[೨೪೭]ಎಂಬಂತ ಶೈವ ಶ್ಲೋಕ ಮೇಲಿನ ಎರಡು ಶಾಸನಗಳಲ್ಲಿ ಬಳಕೆಗೊಂಡಿರುವುದನ್ನು ಕಾಣುವೆವು.

ರಾಮಘಡದ ಕ್ರಿ.ಶ.೧೫೨೬ರ ಶಾಸನದಲ್ಲಿ[೨೪೮] "ಶ್ರೀ ಗಣಾಧಿಪತಯೇ ನಮಃ || ಶುಭಮಸ್ತು" ಎಂದಿದ್ದರೆ, ಕುರೆಕುಪ್ಪೆಯ ಕ್ರಿ.ಶ.೧೫೨೩ರ ಕನ್ನಡ ಹಾಗೂ ಸಂಸ್ಕೃತದ ಎರಡೂ ಶಾಸನಗಳಲ್ಲಿ[೨೪೯] "ಶ್ರೀ ಗಣಾಧಿಪತಾಯೇಂ ನಮಃ ಶ್ರೀ ಪಂಪಾ ವಿರೂಪಾಕ್ಷಾಯ ನಮಃ" ಎಂದಿದೆ. ಆವಿನಮಡುಗುವಿನ

ಕ್ರಿ.ಶ.೧೫೫೧ರ ಶಾಸನದಲ್ಲಿ "ವಿದ್ಯಾ ಶಂಕರಾಯ ನಮಃ | ಶ್ರೀಗಣಾಧಿಪತಯೆ ನಮಃ | ಶುಭಮಸ್ತು| ವಿರೂಪಾಕ್ಷ ಲಿಂಗಾಯ ನಮಃ ||" ಎಂದಿದೆ. ಒಟ್ಟಿನಲ್ಲಿ ಈ ತಾಲ್ಲೂಕಿನ ಶಾಸನಗಳಲ್ಲಿ ವೈಷ್ಣವ ಮತ್ತು ಶೈವ ಶ್ಲೋಕಗಳು ಬಳಕೆಯಾಗಿದ್ದರು, ಅವುಗಳಲ್ಲಿ ಹೆಚ್ಚಾಗಿ ಶೈವ ಶ್ಲೋಕಗಳ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಸಂಗಾತಿ, ಪ್ರೊ.ಬರಗೂರು ರಾಮಚಂದ್ರಪ್ಪ, ಪು.೧೮೯

೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಎಚ್.ತಿಪ್ಪೇರುದ್ರಸ್ವಾಮಿ, ಪು.೨೩೫

೩. ಶಾಸನಗಳು : ಪ್ರಭುತ್ವ ಮತ್ತು ಜನತೆ, ಬಸವರಾಜ ಸಬರದ, ಪು.೧

೪. ಕರ್ನಾಟಕ ಸಂಗಾತಿ, ಪ್ರೊ.ಬರಗೂರು ರಾಮಚಂದ್ರಪ್ಪ, ಪು.೧೮೯

೫. ಎ ಆರ್ ಎಸ್ ಐ ಇ, ಅನುಬಂಧ-ಬಿ, ೧೯೪೪-೪೫, ಸಂಖ್ಯೆ.೮೪, ಪು.೪೬

೬. ಎ ಆರ್ ಎಸ್ ಐ ಇ, ಅನುಬಂಧ-ಬಿ, ೧೯೪೪-೪೫, ಸಂಖ್ಯೆ.೮೩, ಪು.೪೬

೭. ಬ.ಜಿ.ಶಾ.ಸಂ-೧, ಕ್ರಿ.ಶ.೧೦೭೪, ಪು.೧೯೪

೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ ರ ೭೩೯

೯. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ ರ ೭೪೩

೧೦. ಎ ಆರ್ ಎಸ್ ಐ ಇ, ಸಂ.೭೪೩, ೧೯೨೨

೧೧. ಕ.ಶಾ.ಸಂ-೨, ಬ.ಜಿ.ಶಾ, ಪು.೧೭೨, ೧೭೩

೧೨. ಎ ಆರ್ ಎಸ್ ಐ ಇ, ಸಂಖ್ಯೆ.೭೪೧, ೧೯೨೨

೧೩. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೭

೧೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೮

೧೫. ಎ ಆರ್ ಎಸ್ ಐ ಇ, ಸಂ.ಬಿ.೪೦, ೧೯೪೩

೧೬. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೩

೧೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೦

೧೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೪

೧೯. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೩೨ರ ೧೯೨೨

೨೦. ಎ ಆರ್ ಎಸ್ ಐ ಇ, ಸಂ.೭೩೨ರ ೧೯೨೨

೨೧. ಎ ಆರ್ ಎಸ್ ಐ ಇ, ಅನುಬಂಧ.ಬಿ, ೧೯೪೪-೪೫, ಸಂ.೮೬, ಪು.೪೬

೨೨. ಬ.ಜಿ.ಶಾ.ಸಂ.೧, ಕ್ರಿ.ಶ.೧೭ನೇ ಶತಮಾನ, ಪು.೧೯೫

೨೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೨

೨೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೮

೨೫. ಬ.ಜಿ.ಶಾ.ಸಂ.೧, ಪು.೨೦೦

೨೬. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೧

೨೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೭

೨೮. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೬

೨೯. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೨

೩೦. ಬ.ಜಿ.ಶಾ.ಸಂ.೧, ಕ್ರಿ.ಶ.೧೮೫೪, ಪು.೧೯೫

೩೧. ವಿ ಪಿ ಆರ್, ೧೯೮೮-೯೧, ಪು.೨೪೫, ೨೪೬

೩೨. ಎ ಆರ್ ಎಸ್ ಐ ಇ, ಅನುಬಂಧ-IX.ಬಿ, ೧೯೪೩-೪೫, ಸಂ.ಬಿ.೭೬, ಪು.೧೬

೩೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೩೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೭

೩೫. ಕ.ಶಾ.ಸಂ.೨, ಬ.ಜಿ.ಶಾ, ಕ್ರಿ.ಶ.೧೫೫೬, ಪು.೨೦

೩೬. ಎ ಆರ್ ಎಸ್ ಐ ಇ, ೧೯೪೪-೪೫, ಸಂ.ಬಿ.೭೯

೩೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೮

೩೮. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೩

೩೯. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೫

೪೦. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೧

೪೧. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೨

೪೨. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೩

೪೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೪

೪೪. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೧

೪೫. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೩

೪೬. ಎ ಆರ್ ಎಸ್ ಐ ಇ, ಅನುಬಂಧ-ಬಿ, ೧೯೪೪-೪೫, ಸಂ.೮೨, ಪು.೪೬

೪೭. ವಿ ಪಿ ಆರ್, ೧೯೮೮-೯೧, ಪು.೨೪೬

೪೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೬

೪೯. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೩

೫೦. ವಿ ಪಿ ಆರ್, ೧೯೮೮-೯೧, ಪು.೨೪೬

೫೧. ಕು.ಸಿಂ.ಒಂ.ಅ, ಚೆನ್ನಬಸಪ್ಪ ಹಿರೇಮಠ, ಪು.೧೫೩

೫೨. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೭

೫೩. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೮

೫೪. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೫೫. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೩

೫೬. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೪

೫೭. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೩

೫೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೯

೫೯. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೪೯

೬೦. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೪

೬೧. ಎ ಆರ್ ಎಸ್ ಐ ಇ, ೧೮೪೯, ಸಂ.೨೪

೬೨. ಎ ಆರ್ ಎಸ್ ಐ ಇ, ೧೮೪೯, ಸಂ.೨೬

೬೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೩

೬೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೮

೬೫. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೭

೬೬. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೬೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೬೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೬

೬೯. ಕರ್ನಾಟಕದ ಕೈಫಿಯತ್ತು, ಎಂ.ಎಂ.ಕಲ್ಬುರ್ಗಿ, ಪು.೫೫೦

೭೦. ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು, ಪು.೨೫

೭೧. ಕರ್ನಾಟಕದ ಕೈಫಿಯತ್ತು, ಎಂ.ಎಂ.ಕಲ್ಬುರ್ಗಿ, ಪು.೫೦೮, ೫೦೯, ೫೧೧, ೫೧೭

೭೨. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೪೨

೭೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೧

೭೫. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೪೦

೭೬. ಪ್ರಾ.ಕ.ಅ.ಪಾ.ಪ.ಕೋ., ಶ್ರೀನಿವಾಸರಿತ್ತಿ, ಪು.೧೦೪

೭೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೦

೭೮. ಪ್ರಾ.ಕ.ಆ.ಪಾ.ಪ.ಕೋ, ಶ್ರೀನಿವಾಸ ರಿತ್ತಿ, ಪು.೧೨

೭೯. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೨

೮೦. ಪ್ರಾ.ಕ.ಆ.ಪಾ.ಪ.ಕೋ, ಶ್ರೀನಿವಾಸ ರಿತ್ತಿ, ಪು.೧೦೩

೮೧. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೩

೮೨. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೨

೮೩. ಪ್ರಾ.ಕ.ಆ.ಪಾ.ಪ.ಕೋ, ಶ್ರೀನಿವಾಸ ರಿತ್ತಿ, ಪು.೪೧

೮೪. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೦

೮೫. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೯

೮೬. ಬ.ಜಿ.ಶಾ.ಸಂ-೧, ಕ್ರಿ.ಶ.೧೦೭೪, ಪು.೧೯೪

೮೭. ವಿ ಪಿ ಆರ್ ೧೯೮೮-೯೧, ಪು.೨೪೫, ೨೪೬

೮೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೪೩

೮೯. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೫

೯೦. ಎ ಆರ್ ಎಸ್ ಐ ಇ, ೧೮೮೯, ಸಂ.೨೧

೯೧. ಎ ಆರ್ ಐ ಇ, ೧೯೨೨-೨೩, ಸಂ.೧೯೨೨ರ ೭೨೭

೯೨. ಎ ಆರ್ ಐ ಇ, ೧೯೪೪-೪೫, ಸಂ.ಬಿ.೭೬

೯೩. ಎ ಆರ್ ಐ ಇ, ೧೯೪೪-೪೫, ಸಂ.ಬಿ.೮೨

೯೪. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೫

೯೫. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೬

೯೬. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೬

೯೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೭

೯೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೮

೯೯. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೯

೧೦೦. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೭

೧೦೧. ಬ.ಜಿ.ಶಾ.ಸಂ.೧, ಕ್ರಿ.ಶ.೧೭೨೩, ಪು.೨೦೧

೧೦೨. ಎ ಆರ್ ಎಸ್ ಐ ಇ, ೧೯೪೩-೪೪, ಸಂ.೬೫

೧೦೩. ವಿ.ಅ.ಸಂ-೨, ಕ್ರಿ.ಶ.೧೫೪೫, ಪು.೬೨, ೬೩

೧೦೪. ಎ ಆರ್ ಐ ಇ, ೧೯೭೪-೭೫, ಸಂ.೩

೧೦೫. ಎ ಆರ್ ಐ ಇ, ೧೯೭೪-೭೫, ಸಂ.೪

೧೦೬. ಎ ಆರ್ ಐ ಇ, ೧೯೪೩-೪೪, ಸಂ.ಬಿ.೭೬

೧೦೭. ಎ ಆರ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೧೦೮. ತರ್ದವಾಡಿ ನಾಡು, ಡಾ.ಎಸ್.ಕೆ.ಕೊಪ್ಪಾ, ಪು.೩೧

೧೦೯. ಆ.ವಿ.ಶಾ.ಒಂ.ಅ, ಜೆ.ಎಂ.ನಾಗಯ್ಯ, ಪು.೮೯

೧೧೦. ಎ ಆರ್ ಐ ಇ, ೧೯೭೪-೭೫, ಸಂ.೪

೧೧೧. ಪ್ರಾ.ಕ.ಆ.ವಿ, ಎಂ.ಎಂ.ಕಲಬುರ್ಗಿ, ಪು.೧೨೧

೧೧೨. ಬ.ಜಿ.ಶಾ.ಸಂ-೧, ಕ್ರಿ.ಶ.೧೦೭೪, ಪು.೧೯೪

೧೧೩. ಪ್ರಾ.ಕ.ಆ.ವಿ, ಎಂ.ಎಂ.ಕಲಬುರ್ಗಿ, ಪು.೧೨೫

೧೧೪. ಅದೇ, ಪು.೧೨೦

೧೧೫. ಎ ಆರ್ ಐ ಇ, ೧೯೨೨, ಸಂ.೭೩೯

೧೧೬. ಬ.ಜಿ.ಶಾ.ಸಂ-೧, ಕ್ರಿ.ಶ.೧೦೭೪, ಪು.೧೯೪

೧೧೭. ಎ ಆರ್ ಐ ಇ, ೧೯೨೨, ಸಂ.೭೩೯

೧೧೮. ಪ್ರಾ.ಕ.ಆ.ವಿ, ಎಂ.ಎಂ.ಕಲಬುರ್ಗಿ, ಪು.೧೧೯

೧೧೯. ಬ.ಜಿ.ಸಾಂ.ಇ. ಜೆ.ಎಂ.ನಾಗಯ್ಯ, ಪು.೨೧, ೨೨

೧೨೦. ಪ್ರಾ.ಕ.ಆ.ವಿ, ಎಂ.ಎಂ.ಕಲಬುರ್ಗಿ, ಪು.೧೧೯

೧೨೧. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೧೧೯

೧೨೨. ಕರ್ನಾಟಕದ ವೀರಗಲ್ಲುಗಳು, ಆರ್.ಶೇಷಶಾಸ್ತ್ರೀ, ಪು.೧೧

೧೨೩. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೯೯

೧೨೪. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೪

೧೨೫. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೧೦೦

೧೨೬. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೪

೧೨೭. ಕರ್ನಾಟಕದ ವೀರಗಲ್ಲುಗಳು, ಆರ್.ಶೇಷಶಾಸ್ತ್ರೀ, ಪು.೧೯, ೨೦

೧೨೮. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೬೯

೧೨೯. ಕರ್ನಾಟಕ ಸಂಗಾತಿ, ಬರುಗೂರು ರಾಮಚಂದ್ರಪ್ಪ, ಪು.೧೯೬

೧೩೦. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಎಂ. ಚಿದಾನಂದಮೂರ್ತಿ, ಪು.೪,೫

೧೩೧. ಕರ್ನಾಟಕ ಸಂಗಾತಿ, ಬರುಗೂರು ರಾಮಚಂದ್ರಪ್ಪ, ಪು.೧೯೬

೧೩೨. ಕ.ಶಾ.ಸಂ.೨, ಬ.ಜಿ.ಶಾ. ಸಿ.ಎಸ್.ಪಾಟೀಲ, ಪು.೧೬೩

೧೩೩. ಬ.ಜಿ.ಶಾ.ಸಂ.-೧, ಪು.೨೦೦

೧೩೪. ಕ.ಶಾ.ಸಂ.೨, ಬ.ಜಿ.ಶಾ.ಪು.೧೬೬

೧೩೫. ಬ.ಜಿ.ಶಾ.ಸಂ.೧, ಪು.೧೯೧

೧೩೬. ಬ.ಜಿ.ಸಾಂ.ಇ, ಜೆ.ಎಂ.ನಾಗಯ್ಯ, ಪು.೧೨೪, ೧೨೫

೧೩೭. ಎ ಆರ್ ಐ ಇ, (೧೯೨೨-೧೯೨೫), ಸಂ.೭೩೧

೧೩೮. ವಿಜಯ ಕರ್ನಾಟಕ ದಿನ ಪತ್ರಿಕೆ, ಪು.೧

೧೩೯. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೧೫

೧೪೦. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೨೭

೧೪೧. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೧೫

೧೪೨. ಶಾ.ಕ.ಸ್ತ್ರೀ.ಸಂ, ಚೆನ್ನಕ್ಕಪಾವಟೆ, ಪು.೨೫೦, ೨೫೧, ೨೫೨

೧೪೩. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೧೬,೩೩

೧೪೪. ಶಾ.ಕ.ಸ್ತ್ರೀ.ಸ, ಚೆನ್ನಕ್ಕ ಪಾವಟೆ, ಪು.೨೫೨

೧೪೫. ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೩

೧೪೬. ಸ.ಬ.ವೀ.ಮ.ಸ್ಮಾ, ಎಂ.ಎಂ.ಕಲಬುರ್ಗಿ, ಪು.೧೦

೧೪೭. ಅದೇ, ಪು.೧೫

೧೪೮. ಎ ಆರ್ ಐ ಇ, ೧೯೨೨-೨೩, ಸಂ.೧೯೨೨ರ ೭೨೯

೧೪೯. ಕನ್ನಡ ಶಾಸನಶಿಲ್ಪ, ಡಾ.ಡಿ.ವಿ.ಪರಮಶಿವಮೂರ್ತಿ, ಪು.೭

೧೫೦. ಅದೇ, ಪು.೨೨

೧೫೧. ಅದೇ, ಪು.೨೩, ೨೫

೧೫೨. ಬ.ಜಿ.ಶಾ.ಸಂ-೧, ಪು.೧೯೪

೧೫೩. ಅದೇ, ಪು.೧೯೫

೧೫೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೩

೧೫೫. ಎ ಆರ್ ಎಸ್ ಐ ಇ, ಸಂ.೩೦೨ರ ೧೯೨೫

೧೫೬. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೭

೧೫೭. ಎ.ಆರ್., ಸಂ.೭೫ರ ೧೯೪೩-೪೪

೧೫೮. ಎ ಆರ್ ಐ ಇ, ೧೯೨೨-೨೩, ಸಂ.೧೯೨೨ರ ೭೪೨

೧೫೯. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೬೭

೧೬೦. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೨

೧೬೧. ಎ ಆರ್ ಐ ಇ, ೧೯೪೪-೪೫, ಸಂ.ಬಿ.೭೬

೧೬೨. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೧

೧೬೩. ಎ.ಆರ್., ಸಂ.೭೪೩ರ ೧೯೨೨

೧೬೪. ಎ.ಆರ್., ಸಂ.೪ರ ೧೯೭೪-೭೫

೧೬೫. ಎ ಆರ್ ಐ ಇ, ೧೯೭೪-೭೫, ಸಂ.ಎ.೫

೧೬೬. ಎ ಆರ್ ಐ ಇ, ೧೯೪೪-೪೫, ಸಂ.ಬಿ.೮೭

೧೬೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೧

೧೬೮. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦

೧೬೯. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೦

೧೭೦. ಎ.ಆರ್., ಸಂ.೭೬ರ, ೧೯೪೩-೪೪

೧೭೧. ಎ.ಆರ್., ಸಂ.ಎ.೩ರ, ೧೯೭೪-೭೫

೧೭೨. ಎ ಆರ್ ಐ ಇ, ೧೯೭೪-೭೫, ಸಂ.ಎ.೪

೧೭೩. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೪

೧೭೪. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೬೭

೧೭೫. ಎ ಆರ್ ಎಸ್ ಐ ಇ, ೧೯೨೨-೨೭, ಸಂ.೧೯೨೨ರ ೭೩೨

೧೭೬. ಎ ಆರ್ ಎಸ್ ಐ ಇ, ೧೯೨೪-೨೫, ೧೯೨೫ರ ೨೮೮

೧೭೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೫

೧೭೮. ಎ ಆರ್ ಎಸ್ ಐ ಇ, ೧೯೨೫-೨೫, ಸಂ.೧೯೨೫ರ ೨೯೩

೧೭೯. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೦

೧೮೦. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೯

೧೮೧. ವಿ ಪಿ ಆರ್, ೧೯೮೮-೯೧, ಪು.೨೪೫, ೨೪೬

೧೮೨. ಎ ಆರ್ ಎಸ್ ಐ ಇ, ೧೯೪೪-೪೫, ಸಂ.ಬಿ.೮೩

೧೮೩. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೮

೧೮೪. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೮

೧೮೫. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೨೭

೧೮೬. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೯

೧೮೭. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೧

೧೮೮. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೯

೧೮೯. ಎ ಆರ್ ಐ ಇ, ೧೯೪೩-೪೪, ಸಂ.ಬಿ.೭೬

೧೯೦. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೭೨

೧೯೧. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೯೨

೧೯೨. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨೫ರ ೭೪೩

೧೯೩. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೨೮೭

೧೯೪. ಎ ಆರ್ ಐ ಇ, ೧೯೭೪-೭೫, ಸಂ.ಎ.೩

೧೯೫. ಎ ಆರ್ ಐ ಇ, ೧೯೨೪-೨೫, ಸಂ.೪

೧೯೬. ಎ ಆರ್ ಐ ಇ, ೧೯೪೪-೪೫, ಸಂ.ಬಿ.೮೭

೧೯೭. ಬ.ಜಿ.ಶಾ.ಸಂ-೧, ಪು.೧೯೫

೧೯೮. ಎ ಆರ್ ಐ ಇ, ೧೯೨೨-೨೩, ಸಂ.೧೯೨೨ರ ೭೪೨

೧೯೯. ಎ ಆರ್ ಐ ಇ, ೧೯೪೪-೪೫, ಸಂ.ಬಿ.೭೬

೨೦೦. ಎ ಆರ್ ಐ ಇ, ೧೯೪೩-೪೪, ಸಂ.ಬಿ.೭೫

೨೦೧. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೯

೨೦೨. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೧೯೨೫ರ ೩೦೨

೨೦೩. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೭

೨೦೪. ಎ ಆರ್ ಐ ಇ, ೧೯೪೩-೪೪, ಸಂ.ಬಿ.೭೦

೨೦೫. ಎ ಆರ್ ಐ ಇ, ೧೯೭೪-೭೫, ಸಂ.ಎ.೫

೨೦೬. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೧೯೨೨ರ ೭೩೪

೨೦೭. ಎ ಆರ್ ಐ ಇ, ೧೯೨೨-೨೩, ಸಂ.೭೩೩ರ ೧೯೭೭

೨೦೮. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೩೮ರ ೧೯೨೨

೨೦೯. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೩೨ರ ೧೯೨೨

೨೧೦. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೨೯೦ರ ೧೯೨೫

೨೧೧. ವಿ ಪಿ ಆರ್, ೧೯೮೮-೯೧, ಪು.೨೪೫, ೨೪೬

೨೧೨. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೩೭ರ ೧೯೨೨

೨೧೩. ಎ ಆರ್ ಎಸ್ ಐ ಇ, ೧೯೪೩-೪೪, ಸಂ.ಬಿ.೬೫

೨೧೪. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೨೮೧ರ ೧೯೨೫

೨೧೫. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೨೮೮ರ ೧೯೨೫

೨೧೬. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೩೦೪ರ ೧೯೨೫

೨೧೭. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೨೭ರ ೧೯೨೨

೨೧೮. ಎ ಆರ್ ಐ ಇ, ೧೯೪೪-೪೫, ಸಂ.ಬಿ.೮೩

೨೧೯. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೬

೨೨೦. ಎ ಆರ್ ಐ ಇ, ೧೯೪೩-೪೪, ಸಂ.ಬಿ.೬೯

೨೨೧. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೩೯ರ ೧೯೨೨

೨೨೨. ಎ ಆರ್ ಐ ಇ, ೧೯೭೪-೭೫, ಸಂ.ಎ.೪

೨೨೩. ಎ ಆರ್ ಎಸ್ ಐ ಇ, ೧೯೨೨-೨೩, ಸಂ.೭೪೨ರ ೧೯೨೨

೨೨೪. ಎ ಆರ್ ಎಸ್ ಐ ಇ, ೧೯೭೪-೭೫, ಸಂ.ಎ.೩

೨೨೫. ವಿ ಪಿ ಆರ್, ೧೯೮೮-೯೧, ಪು.೨೪೫, ೨೪೬

೨೨೬. ಎ ಆರ್ ಎಸ್ ಐ ಇ, ೧೯೨೪-೨೫, ಸಂ.೨೮೫ರ ೧೯೨೫

೨೨೭. ಎಸ್ ಐ ಐ., ಸಂ.IX ಭಾಗ-II, ಪು.೫೨೮

೨೨೮. ಎಸ್ ಐ ಐ., ಸಂ.IX ಭಾಗ-II, ಪು.೫೮೪

೨೨೯. ಎ ಆರ್, ಸಂ.೭೩೯ರ ೧೯೨೨

೨೩೦. ಎ ಆರ್, ಸಂ.೩.ರ., ೧೯೭೪-೭೫

೨೩೧. ಎ ಆರ್, ಸಂ.೪ರ, ೧೯೭೪-೭೫

೨೩೨. ಎ ಆರ್, ಸಂ.೭೨೭ರ ೧೯೨೨

೨೩೩. ಎ ಆರ್, ಸಂ.೭೪೨ರ ೧೯೨೨

೨೩೪. ಶಾಸನ ಪರಿಚಯ, ಆರ್ .ಶೇಷಶಾಸ್ತ್ರಿ, ಪು.೧೩

೨೩೫. ಎ ಆರ್. ಸಂ.೭೨೮ರ ೧೯೨೨

೨೩೬. ಎ ಆರ್. ಸಂ.೩೦೨ರ ೧೯೨೫

೨೩೭. ಕ.ಸಂ.ಸ, ಎಚ್.ತಿಪ್ಪೇರುದ್ರಸ್ವಾಮಿ, ಪು.೨೫೪

೨೩೮. ಎ ಆರ್, ಸಂ.೮೬ರ ೧೯೪೪-೪೫

೨೩೯. ಎ ಆರ್, ಸಂ.೭೦ರ, ೧೯೪೩-೪೪

೨೪೦. ಬ.ಜಿ.ಶಾ.ಸಂ-೧, ಪು.೧೯೪

೨೪೧. ಎ ಆರ್, ಸಂ.೨೯೩ರ ೧೯೨೫

೨೪೨. ಎ ಆರ್, ಸಂ.೬೬ರ ೧೯೪೩-೪೪

೨೪೩. ಎ ಆರ್, ಸಂ.೭೩೯ರ ೧೯೨೨

೨೪೪. ಎ ಆರ್, ಸಂ.೩.ರ ೧೯೭೪-೭೫

೨೪೫. ಕ.ಸಂ.ಸ, ಎಚ್.ತಿಪ್ಪೇರುದ್ರಸ್ವಾಮಿ, ಪು.೨೫೩

೨೪೬. ಎ. ಆರ್, ಸಂ.೭೪೨ರ ೧೯೨೨

೨೪೭. ಕ.ಸಂ.ಸ, ಎಚ್.ತಿಪ್ಪೇರುದ್ರಸ್ವಾಮಿ, ಪು.೨೫೨, ೨೫೩

೨೪೮. ಎ.ಆರ್, ಸಂ.೭೬ರ ೧೯೪೩-೪೪

೨೪೯. ಎ.ಆರ್, ಸಂ.೭೨೭ರ ೧೯೨೨ ಮತ್ತು ಎ.ಆರ್, ಸಂ.೭೨೮ರ ೧೯೨೨

ಅಧ್ಯಾಯ ೪

ವಾಸ್ತುಶಿಲ್ಪ

೪

ವಾಸ್ತುಶಿಲ್ಪ

೪.೧. ದೇವಾಲಯಗಳು

ವಾಸ್ತುಶಾಸ್ತ್ರ ಎಂದರೆ ವಸತಿ ನಿರ್ಮಾಣ ಶಾಸ್ತ್ರ ಎಂದು ಅರ್ಥ. ವಾಸ್ತುಶಿಲ್ಪಕ್ಕೆ ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವವಿದೆ.[೧] ಹಿಂದೆ ಇವು ಹಳ್ಳಿಗರ ಜೀವನಾಡಿಗಳಾಗಿದ್ದವು. ದೇವಾಲಯಗಳು ಅವರಿಗೆ ವಿದ್ಯಾಕೇಂದ್ರಗಳಾಗಿ, ವಿವಿಧ ರೀತಿಯ ಮನರಂಜನೆಯ, ವಿನೋದಾದಿಗಳ ಆಗರವಾಗಿ, ಕುಶಲಕಲೆಗಳ ಸಾಧನಗಳಾಗಿ, ಮತಧರ್ಮಗಳ ನೆಲೆ ದಾಣವಾಗಿ, ದೀನ ದಲಿತರ ಆಶ್ರಯ ಕಲ್ಪತರುವಾಗಿ ಹಲವು ಹತ್ತು ಕಾರ್ಯ ಕ್ಷೇತ್ರಗಳ ಶಾಂತಿ ಧಾಮವಾಗಿ ಇದ್ದುದು ಶಾಸನಾಧಾರಗಳಿಂದ ತಿಳಿದುಬರುತ್ತವೆ.[೨]

ಭೌಗೋಳಿಕವಾಗಿ ಸಂಡೂರು ತಾಲ್ಲೂಕಿನ ಮೇರೆಗಳು ಈಗಿನಂತೆ ಹಿಂದೆ ಇರಲಿಲ್ಲ. ಬೇರೆ ಬೇರೆ ಅರಸರುಗಳ ಕಾಲದಲ್ಲಿ ಬೇರೆ ಬೇರೆ ಗಡಿಗಳಿದ್ದವು. ಸಂಡೂರು ತಾಲೂಕು ಪ್ರಾಚೀನ ಕಾಲದಿಂದ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಗಾರರು, ಮರಾಠರು, ಹೈದರಾಲಿ, ಟಿಪ್ಪುಸುಲ್ತಾನ, ಬ್ರಿಟಿಷರು ಮೊದಲಾದವರ ಆಳ್ವಿಕೆಗೆ ಒಳಪಟ್ಟ ಭಾಗವಾಗಿತ್ತು. ಹಿಂದಿನ ಕಾಲದ ವಾಸ್ತುಶಿಲ್ಪ ಮುಖ್ಯವಾಗಿ ರಾಜ ಪೋಷಣೆಯಲ್ಲೆ ಬೆಳೆದು ಬಂದುದನ್ನು ಕಾಣುತ್ತೇವೆ. ಇವುಗಳಲ್ಲಿ ದೇವಾಲಯಗಳ ಸಂಖ್ಯಾ ಪ್ರಮಾಣದ ದೃಷ್ಟಿಯಿಂದ ಸಂಡೂರು ತಾಲೂಕಿನಲ್ಲಿ ವಿಜಯನಗರದ ವಾಸ್ತುಶಿಲ್ಪಕಲೆಯೇ ಅತಿ ಮಹತ್ವದ್ದಾಗಿ ಕಂಡುಬರುತ್ತದೆ. ಆದರೆ ಶೈಲಿಯ ದೃಷ್ಟಿಯಿಂದ ಗಮನಿಸುವುದಾದರೆ ಚಾಲುಕ್ಯರ ಹಾಗೂ ವಿಜಯನಗರದ ವಾಸ್ತುಶೈಲಿಯೇ ಮುಖ್ಯವಾದುದಾಗಿದೆ.

ಮಧ್ಯಯುಗವು ದೇವಾಲಯಗಳ ನಿರ್ಮಾಣಯುಗ. ಅರಸರು, ಅರಸಿಯರು, ಮಂತ್ರಿಗಳು, ಮಾಂಡಲಿಕರು ಮುಂತಾದವರೆಲ್ಲರ ವಿಜಯದ ಸ್ಮರಣೆಗಾಗಿ, ಪೂರ್ವಜರ ಸ್ಮರಣೆಗಾಗಿ, ಕುಲದೈವೋಪಾಸನೆಗಾಗಿ, ಪ್ರತಿಷ್ಠೆಗೋಸ್ಕರ, ಮೋಕ್ಷ ಪ್ರಾಪ್ತಿಗಾಗಿ, ಸಮಾಜ ಸೇವೆಗಾಗಿ, ಧಾರ್ಮಿಕ ಕಾರ್ಯಾಚರಣೆಗಳಿಗಾಗಿ, ಮತೀಯ ಹೆಗ್ಗಳಿಕೆಗಾಗಿ ಹೀಗೆ ವಿವಿಧೋದ್ದೇಶಕ್ಕಾಗಿ ದೇವಾಲಯವನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ವೈವಿಧ್ಯ ಪೂರ್ಣವಾದ ಅಸಂಖ್ಯಾತ ದೇವಾಲಯಗಳು ಆಯಾ ಕಾಲಕ್ಕೆ ನಿರ್ಮಾಣಗೊಳ್ಳುತ್ತ ಬಂದವು. ಆದರೆ ರಾಜರಾಜರ ದ್ವೇಷಗಳಿಗೆ ಮತ್ತು ಜನತೆಯ ಅಜ್ಞಾನದಿಂದ

ಹಾಗೂ ಕಾಲನ ತುಳಿತಕ್ಕೆ ಸಿಲುಕಿ ಅದೆಷ್ಟೋ ದೇವಾಲಯಗಳು ಇಂದು ನೆಲಸಮವಾಗಿವೆ. ಮತ್ತದೆಷ್ಟೋ ಭಗ್ನಗೊಂಡಿವೆ. ಹೀಗೆ ವಿನಾಶದ ಅಂಚಿನಲ್ಲಿ ಅಳಿದು ಉಳಿದುಕೊಂಡಿರುವ ಅವಶೇಷಗಳ ಆಧಾರದ ಮೇಲೆ ನಾವಿಂದು ಇಂದಿನ ಈ ತಾಲೂಕಿನ ವಾಸ್ತುಶಿಲ್ಪದ ವೈಭವವನ್ನು ಕಟ್ಟಿಕೊಡಬೇಕಾಗಿದೆ.

ಈ ತಾಲೂಕಿನಲ್ಲಿ ಚಾಲುಕ್ಯ ಪೂರ್ವಯುಗದ ವಾಸ್ತುಶಿಲ್ಪದ ಕುರುಹುಗಳು ದೊರೆತಿಲ್ಲವಾದರೂ ಸಂಡೂರಿನ ಕಾರ್ತಿಕೇಯ ಕ್ಷೇತ್ರ ಚಾಲುಕ್ಯ ಪೂರ್ವ ಕಾಲದಲ್ಲೇ ಪುಣ್ಯ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು ಎಂದು ತಿಳಿದುಬರುವುದು. ಆದರೆ ಬಾದಾಮಿ ಚಾಲುಕ್ಯರ ಕಾಲದಿಂದ ವಾಸ್ತುಶಿಲ್ಪ ಕಲೆಯ ಉದಾಹರಣೆಗಳು ಇಲ್ಲಿ ಕಾಣಸಿಗುತ್ತವೆ. ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಮೇಲಿನ ಪಾರ್ವತಿ ದೇವಾಲಯ ಕ್ರಿ.ಶ.೮ನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರಿಂದ ನಿರ್ಮಿಸಲ್ಪಟ್ಟಿತ್ತೆಂದು ಮತ್ತು ಕುಮಾರಸ್ವಾಮಿ ದೇವಾಲಯ ರಾಷ್ಟ್ರಕೂಟರ ೨ನೇ ಕೃಷ್ಣನಿಂದ ನಿರ್ಮಿಸಲ್ಪಟ್ಟಿತ್ತೆಂದು ತಿಳಿದುಬರುತ್ತದೆ. ಹಾಗೂ ಕುಮಾರಸ್ವಾಮಿ ಕ್ಷೇತ್ರವು ಮೊದಲು ಜೈನರದಾಗಿತ್ತು ಎಂಬ ಅಂಶ ವಡ್ಡಾರಾಧನೆ ಕೃತಿಯಿಂದ ತಿಳಿದುಬರುತ್ತದೆ.[೩] ಆದರೆ ಈ ಪ್ರದೇಶ ಜೈನರ ಕ್ಷೇತ್ರವಾಗಿತ್ತು ಎಂಬುದಕ್ಕೆ ನಿಖರವಾದ ಯಾವುದೇ ಆಕರಗಳು ಉಪಲಬ್ಧವಿಲ್ಲ. ಆದರೆ ಈ ತಾಲೂಕಿನ ಹಳೆದರೋಜಿಯ ಬೆಟ್ಟದ ಮೇಲೆ ಬಸದಿ ಇದ್ದ ಕಟ್ಟಡದ ಅವಶೇಷಗಳು ಇದ್ದು, ಒಂದು ಶಾಸನ ಸಹಿತ ನಿಸಿದಿ ಶಿಲೆ ಹಾಗೂ ಒಂದು ನಿಸಿದಿ ಸ್ಮಾರಕವನ್ನು ಹಾಗೂ ಹೊಸಮಲೆದುರ್ಗದ ರಾಮನಾಥ ದೇವಾಲಯದ ಆವರಣದಲ್ಲಿಯ ವೀರಗಲ್ಲುಗಳು ಮತ್ತು ಇತರ ಮೂರ್ತಿಶಿಲ್ಪಗಳ ಅವಶೇಷಗಳು ಬಿದ್ದಿರುವ ಸ್ಥಳದಲ್ಲಿ ಒಂದು ತುಂಡಾಗಿ ಬಿದ್ದಿರುವ ನಿಸಿದಿ ಸ್ಮಾರಕಶಿಲ್ಪ ಇರುವುದನ್ನು ಕ್ಷೇತ್ರಕಾರ್ಯದಿಂದ ಪತ್ತೆ ಹಚ್ಚಲಾಗಿದೆ. ಒಟ್ಟಿನಲ್ಲಿ ಈ ತಾಲೂಕಿನಲ್ಲಿ ಉಪಲಬ್ಧವಾದ ಈ ಸ್ಮಾರಕ, ಕಟ್ಟಡಗಳ ಅವಶೇಷಗಳ ಆಧಾರದಿಂದ ಈ ಪ್ರದೇಶವು ಹಿಂದೆ ಜೈನ ಕ್ಷೇತ್ರವಾಗಿತ್ತು ಎಂಬುದು ಸ್ಪಷ್ಟವಾಗುವುದು.

ಬಾದಾಮಿ ಚಾಲುಕ್ಯರ ಅವಧಿಯ ದೇವಾಲಯಗಳು ಕೆಂಪು ಉಸುಕು ಕಲ್ಲಿನಿಂದ (Granita) ನಿರ್ಮಿಸಲ್ಪಟ್ಟವುಗಳಾಗಿವೆ. ಚೌಕಾಕಾರದ ಗರ್ಭಗೃಹ ಮತ್ತು ಚೌಕ-ಆಯತಾಕಾರದ ಅಧಿಷ್ಠಾನದ ಮೇಲೆ ಕಟ್ಟಿದ ಸಭಾಮಂಟಪ, ಮುಖಮಂಟಪಗಳು, ಅಧಿಷ್ಠಾನದಲ್ಲಿ "ಕುಮುದ" 'ಗಳ', ಗಳ ವಿನ್ಯಾಸ ಗೋಡೆಗಳ ಮೇಲೆ ಅರ್ಧಕಂಬ, ಸರಳ ಜಾಲಂಧ್ರ, ಸರಳ ಕೋಷ್ಠಗಳು, ಸಭಾಮಂಟಪಕ್ಕಿಂತ ಸ್ವಲ್ಪ ಎತ್ತರದಲ್ಲಿರುವ ಗರ್ಭಗೃಹ, ಚೌಕಾಕಾರದಲ್ಲಿ ಹೆಚ್ಚು ಏಣುಗಳು, ಅಲಂಕೃತ ಅಡ್ಡ ಪಟ್ಟಿಕೆಗಳು, ಒಂದಕ್ಕಿಂತ ಹೆಚ್ಚಾಗಿರುವ ಲತಾಸುರುಳಿಗಳ ದ್ವಾರ ಶಾಖೆಗಳಿರುವ ಬಾಗಿಲು ಚೌಕಟ್ಟುಗಳು, ಗರುಡ ಅಥವಾ ಅಧಿದೇವತೆಯ ಪ್ರತಿಮೆ ಇರುವ ಬಾಗಿಲ ಮೇಲಿನ ಲಲಾಟಬಿಂಬ, ದ್ರಾವಿಡ, ಕದಂಬನಾಗರ ಅಥವಾ ರೇಖಾನಾಗರ ಶೈಲಿಯ ಗರ್ಭಗುಡಿಯ ಮೇಲಿನ ಶಿಖರಗಳು, ಸುಕನಾಸಿಯ ಮುಂಚಾಚಿದ ಶಿಖರ, ಪೂರ್ಣ ಕುಂಭಗಳು, ಇಳಿಜಾರು ಮಾಳಿಗೆ, ಸಭಾಮಂಟಪದ ಮೇಲಿನ ಛಾವಣಿಗಳ (ಭುವನೇಶ್ವರಿ)

ಸಮಪಾತಳಿ ಹಾಗೂ ಕೆಲವೆಡೆ ಸರಳ ಪ್ರತಿಮೆಗಳ ಅಲಂಕಾರ, ದೇವಾಲಯದ ಮುಂದೆ ವಿಜಯಸ್ತಂಭ ಮುಂತಾದವುಗಳು ಈ ಶಿಲ್ಪ ಶೈಲಿಯ ವೈಶಿಷ್ಟ್ಯಗಳು. ಈ ತಾಲೂಕಿನಲ್ಲಿ ಈ ರೀತಿಯ ವಾಸ್ತುಶಿಲ್ಪವುಳ್ಳ ದೇವಾಲಯ ಬಹುಶಃ ಕುಮಾರಸ್ವಾಮಿಬೆಟ್ಟದ ಪಾರ್ವತಿ ದೇವಾಲಯವೊಂದೇ ಆಗಿರಬೇಕು.

ರಾಷ್ಟ್ರಕೂಟರ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಗರ್ಭಗೃಹಗಳಿರುವ ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮುಂತಾದ ಪ್ರಕಾರಗಳ ದೇವಾಲಯಗಳು ನಿರ್ಮಾಣಗೊಂಡಿದ್ದನ್ನು ಕಾಣುತ್ತೇವೆ. ಆದರೆ ಈ ರೀತಿಯ ದೇವಾಲಯಗಳು ಈ ತಾಲೂಕಿನಲ್ಲಿ ಕಾಣಸಿಗುವುದು ವಿರಳ. ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯ ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲ್ಪಟ್ಟಿತ್ತೆಂದು ತಿಳಿದರೂ, ಶೈಲಿಯ ದೃಷ್ಟಿಯಿಂದ ರಾಷ್ಟ್ರಕೂಟರ ಅವಧಿಯದಾಗಿದೆ. ಹಾಗೂ ಇಲ್ಲಿನ ಈಶ್ವರ ದೇವಾಲಯವು ಇವರ ಕಾಲದ್ದಾಗಿದೆ. ಹಾಗೂ ದೇವಾಲಯದ ಮುಂದೆ ಮಕರ ತೋರಣವನ್ನು ನಿಲ್ಲಿಸುವ ಪದ್ಧತಿ ಕೂಡ ಇವರ ಕಾಲದಿಂದಲೇ ಪ್ರಾರಂಭವಾಯಿತು.

ಕಲ್ಯಾಣ ಚಾಲುಕ್ಯರ ಕಾಲವು ವಾಸ್ತುಶಿಲ್ಪಕಲೆಯ ಅತ್ಯಂತ ಸಮೃದ್ಧಿಯ ಕಾಲ. ಈ ಕಾಲದಲ್ಲಿ ಕೆಂಪು ಕಲ್ಲಿನ ಬದಲು ಕಪ್ಪು ಹಸಿರು ಅಥವಾ ನೀಲಿ ಮಿದು ಕಲ್ಲಿನ ಬಳಕೆ ಪ್ರಾರಂಭವಾಯಿತು. ಹಿಂದಿನ ವಾಸ್ತುಶಿಲ್ಪ ಶೈಲಿಯಲ್ಲಿ ಹೆಚ್ಚಿನ ಸುಧಾರಣೆಗಳು ಈ ಕಾಲದಲ್ಲಾದವು. ನವರಂಗದ ಕಂಬಗಳಲ್ಲಿ ಮೇಲಿನ ಭುವನೇಶ್ವರಿಯಲ್ಲಿ, ಬಾಗಿಲುವಾಡಗಳಲ್ಲಿ, ಗೋಡೆಗಳ ಕೋಷ್ಠಗಳಲ್ಲಿ, ಅಧಿಷ್ಠಾನ ಮುಂತಾದ ಕಡೆಗಳಲ್ಲಿ ಕುಸುರಿನ ಕೆಲಸ ಹೆಚ್ಚಾಗಿ ಆದವು. ಕಲೆಯಲ್ಲಿ ಹೆಚ್ಚಿನ ಪ್ರಮಾಣ ಬದ್ಧತೆ-ಸೌಂದರ್ಯ-ನಿಖರತೆ- ಅದ್ಭುತ ಸಿದ್ಧಿಗಳನ್ನು ಸಾಧಿಸಲಾಯಿತು. ಈ ಮಾದರಿಯ ವಾಸ್ತುಶಿಲ್ಪ ಹೊಂದಿರುವ ದೇವಾಲಯಗಳು ಈ ತಾಲೂಕಿನಲ್ಲಿಯೂ ಇವೆ. ಅವುಗಳೆಂದರೆ ತಾಳೂರಿನ ನಾರಿಹಳ್ಳದ ದಂಡೆಯ ಮೇಲಿನ ಈಶ್ವರ ದೇವಾಲಯ ಈ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈಗ ಈ ದೇವಾಲಯ ಪಾಳು ಬಿದ್ದಿದೆ. ಇದೇ ಗ್ರಾಮದ ಒಳಗೆ ಇರುವ ಮತ್ತೊಂದು ಈಶ್ವರ ದೇವಾಲಯವು ಇವರ ಕಾಲದ ವಾಸ್ತುಶೈಲಿಯಲ್ಲಿತ್ತೆಂದು ತಿಳಿದುಬರುತ್ತದೆ. ಆದರೆ ಸಾರ್ವಜನಿಕರ ನಿರ್ಲಕ್ಷ್ಯತೆಯ ಕಾರಣದಿಂದ ಈ ದೇವಾಲಯ ಹಾಳಾಗಿದ್ದು, ಜೀರ್ಣೋದ್ಧಾರಗೊಳಿಸಲಾಗಿದೆ. ಆದರೆ ಈ ಕಾಲದಲ್ಲಿಯೇ ಕೆತ್ತಲ್ಪಟ್ಟ ಶಿವಲಿಂಗ, ನಂದಿ ಇತ್ಯಾದಿ ಮೂರ್ತಿಶಿಲ್ಪಗಳು ಮಾತ್ರ ದೇವಾಲಯದ ಗರ್ಭಗೃಹದಲ್ಲಿವೆ. ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಹತ್ತಿರವಿರುವ ಹರಿಶಂಕರ ದೇವಾಲಯವು ಇವರ ಕಾಲದ ವಾಸ್ತುಶೈಲಿಯಲ್ಲಿ ನಿರ್ಮಿಸಲ್ಪಟ್ಟದ್ದಾಗಿದೆ. ಇದು ಕೇವಲ ಗರ್ಭಗೃಹವನ್ನು ಮಾತ್ರ ಹೊಂದಿದೆ. ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯವು ರಾಷ್ಟ್ರಕೂಟರ ೨ನೆಯ ಕೃಷ್ಣನಿಂದ ನಿರ್ಮಿಸಲ್ಪಟ್ಟಿತೆಂದು ತಿಳಿದು ಬಂದರೂ, ವಾಸ್ತುಶೈಲಿಯ ದೃಷ್ಟಿಯಿಂದ ಇದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಇದೇ ದೇವಾಲಯದ ಆವರಣದಲ್ಲಿಯ ನಾಗನಾಥೇಶ್ವರ, ರಂಗನಾಥ, ಪಾತಾಳೇಶ್ವರ ದೇವಾಲಯಗಳು ವಾಸ್ತುಶೈಲಿಯ

ದೃಷ್ಟಿಯಿಂದ ಕಲ್ಯಾಣ ಚಾಲುಕ್ಯರ ಶೈಲಿಯವುಗಳಾಗಿವೆ. ಆದರೆ ಈ ಕಾಲದ ವಾಸ್ತುಶಿಲ್ಪಗಳು ಈ ತಾಲೂಕಿನಲ್ಲಿ ಕೆಲವೊಂದು ಪ್ರದೇಶದಲ್ಲಿ ಕಂಡುಬಂದರೂ ವಿರಳವೆಂದೇ ಹೇಳಬೇಕಾಗುತ್ತದೆ.

ಕಲ್ಯಾಣ ಚಾಲುಕ್ಯರ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡ ಶೈಲಿಯೇ ಮುಂದೆ ಹೊಯ್ಸಳ ಶೈಲಿಯಾಯಿತು. ಈ ತಾಲೂಕಿನಲ್ಲಿ ಕೆಲವು ದೇವಾಲಯಗಳನ್ನು ಹಾಗೂ ದೇವಾಲಯಗಳ ಕಂಬಗಳ ಶೈಲಿಯನ್ನು ಗಮನಿಸಿದಾಗ ಅವುಗಳು ಬಹುಶಃ ಹೊಯ್ಸಳ ಅರಸರ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳಾಗಿದ್ದು, ಮುಂದೆ ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರಬಹುದೇ? ಎನಿಸದಿರದು.

ವಿಜಯನಗರ ಸಾಮ್ರಾಜ್ಯವು ಸಂಡೂರು ತಾಲೂಕಿನ ಹೆಮ್ಮೆಯ ಸಾಮ್ರಾಜ್ಯ. ೧೪ನೆಯ ಶತಮಾನದಲ್ಲಿ ಮುಸ್ಲಿಮರ ದಾಳಿಯಿಂದ ಹಿಂದುತ್ವವನ್ನು ರಕ್ಷಿಸಿ ಸುಮಾರು ೨೦೦ ವರ್ಷಗಳವರೆಗೆ ವೈಭವದ ಪರಾಕಾಷ್ಠೆಯನ್ನು ಹೊಂದಿ ವಿಶ್ವವಿಖ್ಯಾತವಾದ ಸಾಮ್ರಾಜ್ಯ. ವಾಸ್ತುಶಿಲ್ಪ ಕಲೆಯಲ್ಲಿ ವಿಜಯನಗರವು ಹಿಂದಿಗಿಂತ ಭಿನ್ನವಾದ ಮಾದರಿಯನ್ನು ಅಳವಡಿಸಿಕೊಂಡಿತು. ತಮಿಳು ನಾಡಿನಲ್ಲಿದ್ದ ದ್ರಾವಿಡ ವಾಸ್ತುಶಿಲ್ಪಕಲೆಯನ್ನು ಅನುಸರಿಸಿತು. ದೇವಾಲಯಗಳು ಧಾರ್ಮಿಕ ಚಟುವಟಿಕೆಗಳ ವ್ಯಾಪಕತೆಗೆ ಅನುಕೂಲವಾಗುವಂತೆ ವಿಶಾಲಗೊಂಡವು. ಮೂರ್ತಿಶಿಲ್ಪ ಅಲಂಕಾರಿಕತೆಗಳಿಗಿಂತಲೂ ವಾಸ್ತುಶಿಲ್ಪವು ಮುಖ್ಯವಾಯಿತು. ಹಂಪೆಯಲ್ಲೇ ದೊರೆಯುವ ಕೆಂಪು ಕಗ್ಗಲ್ಲನ್ನೇ ಬಳಸಿದುದರಿಂದ ಚಾಲುಕ್ಯ, ಹೊಯ್ಸಳರ ಕಾಲದ ಸೂಕ್ಷ್ಮ, ನಯಗಳಿಲ್ಲದ ದೊಡ್ಡ ಪ್ರಮಾಣದ ವಾಸ್ತುಶಿಲ್ಪ ಶೈಲಿಯು ಬಳಕೆಗೆ ಬಂದಿತು.

ಎತ್ತರವಾದ ಗೋಪುರಗಳು, ಮಹಾದ್ವಾರಗಳು, ಸಣ್ಣಕೋಟೆಯಂತಿರುವ ದೇವಾಲಯದ ಪ್ರಾಕಾರಗೋಡೆ, ಒಳಗಡೆ ಅನೇಕ ಬಗೆಯ ದೇಗುಲ ಸಂಕೀರ್ಣಗಳು, ಕಲ್ಯಾಣಮಂಟಪ, ಉತ್ಸವ ಮಂಟಪ, ಸಭಾಮಂಟಪ, ಭೋಜನ ಶಾಲೆ, ಪಾಕಶಾಲೆ, ನಂದಿ ಮಂಟಪ, ದೀಪಸ್ತಂಭ ಮುಂತಾದವುಗಳೆಲ್ಲಾ ಈ ಆವರಣದಲ್ಲಿರುವಂತೆ ನಿರ್ಮಾಣಗೊಂಡವು. ಅನೇಕ ಕಂಬಗಳುಳ್ಳ ದೊಡ್ಡ ಸಂಯುಕ್ತ ಕಂಬಗಳು, ಯಾಳಿ, ಆನೆ, ಸಿಂಹಗಳು ಹೊತ್ತು ನಿಂತಿರುವ ಕಲಾತ್ಮಕವಾದ ದೊಡ್ಡ ಕಂಬಗಳು, ಮುಂಚಾಚಿ ಬಾಗಿ ಕೊಂಡಿರುವ ಛಾವಣಿ ಮುಂಜೂರುಗಳು ಮುಂತಾದುವೆಲ್ಲ ವಿಜಯನಗರ ವಾಸ್ತುಶಿಲ್ಪದ ವೈಶಿಷ್ಟ್ಯಗಳು.

ಗರ್ಭಗುಡಿಗೆ ಪ್ರದಕ್ಷಿಣಾ ಪಥ ಇದ್ದೇ ಇರುತ್ತದೆ. ಕೆಲವು ಕಡೆ ಗರ್ಭಗುಡಿ ನೆಲಗಟ್ಟಿಗಿಂತ ತಗ್ಗಾದ ಮಟ್ಟದ ಪ್ರದಕ್ಷಿಣಾ ಪಥವಿರುತ್ತದೆ. ಈ ತಾಲೂಕಿನಲ್ಲಿ ಈ ಕಾಲದ ಗೋಪುರ, ದೇವಾಲಯದ ಶಿಖರಗಳನ್ನು ಇಟ್ಟಿಗೆ ಗಾರೆಗಳಿಂದ ಕಟ್ಟಿದ್ದರಿಂದ ಬಹಳಷ್ಟು ಬಿದ್ದು ಹೋಗಿವೆ. ಕೆಳಗಿನ ಕಲ್ಲಿನ ಕಟ್ಟಡದ ಭಾಗಗಳು ಮಾತ್ರ ಉಳಿದಿವೆ. ವಾಸ್ತುಶಿಲ್ಪದ ಶೈಲಿಯ ದೃಷ್ಟಿಯಿಂದ ಗಮನಿಸುವುದಾದರೆ, ಈ ತಾಲೂಕಿನಲ್ಲಿ ವಿಜಯನಗರ ಅರಸರ ಕಾಲದ ದೇವಾಲಯಗಳೇ ಅಧಿಕವಾಗಿವೆ. ಅವುಗಳಲ್ಲಿ ಕೆಲವು

ದೇವಾಲಯಗಳು ಯಾವುದೇ ರಕ್ಷಣೆಯಿಲ್ಲದೇ ನೆಲಸಮವಾಗಿವೆ. ಕೆಲವೊಂದು ದೇವಾಲಯಗಳು ಜೀರ್ಣೋದ್ಧಾರಗೊಂಡು ಇನ್ನೂ ನೋಡುಗರ ಗಮನ ಸೆಳೆದಿವೆ. ಅಷ್ಟೇ ಅಲ್ಲದೆ ಸಂಡೂರು ಪರಿಸರದಲ್ಲಿ ಹಿಂದೂ-ಮುಸ್ಲಿಂ ಮತೀಯ ಸಮನ್ವಯದ ಸಂಕೇತವಾಗಿ ಎರಡೂ ಶೈಲಿಗಳ ಒಡ ಬೆರೆತ ಕಟ್ಟಡವೆಂದರೆ ಪೇಶ್ವೆಗಳಾದ ಘೋರ್ಪಡೆ ಮಹಾರಾಜರ ಅರಮನೆಯೊಂದೆ ಆಗಿದೆ. ಒಟ್ಟಿನಲ್ಲಿ ವಿಜಯನಗರದ ಅವನತಿಯೊಡನೆ ವಾಸ್ತುಶಿಲ್ಪಕಲೆಯೂ ಅವನತಿ ಹೊಂದಿತ್ತೆನ್ನಬಹುದು. ಈ ನಂತರದ ಅವಧಿಯಲ್ಲಿ ಈ ಪ್ರದೇಶದಲ್ಲಿ ಪಾಳೆಗಾರರ ಕಾಲದ, ಅಲ್ಲಲ್ಲಿ ಕೆಲವು ದೇವಾಲಯಗಳು ನಿರ್ಮಾಣಗೊಂಡಿದ್ದರೂ, ಹಿಂದಿನ ಸಮೃದ್ಧಿ ಗುಣಮಟ್ಟಗಳು ನಮಗೆ ಕಾಣಸಿಗುವುದಿಲ್ಲ.

ಒಟ್ಟಾರೆಯಾಗಿ ಈ ತಾಲ್ಲೂಕಿನ ಪ್ರಾಚೀನ ಮತ್ತು ಮಧ್ಯಕಾಲೀನ ದೇವಾಲಯಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದ್ದು, ಅವುಗಳ ನಿರ್ಮಾಣ, ಜೀರ್ಣೋದ್ಧಾರ, ನಿರ್ವಾಹಣೆಗಾಗಿ ನೀಡಿದ ದಾನ-ದತ್ತಿಗಳ ಕುರಿತು ಶಾಸನೋಲ್ಲೇಖಿತ ದೇವಾಲಯಗಳಲ್ಲಿ ಕಾಣುತ್ತೇವೆ. ಆದರೆ ಶಾಸನದಲ್ಲಿ ಉಲ್ಲೇಖವಾಗಿರದ ಅನೇಕ ಅರಸರುಗಳಿಂದ ನಿರ್ಮಿಸಲ್ಪಟ್ಟ ದೇವಾಲಯವನ್ನೂ ಈ ತಾಲೂಕಿನಲ್ಲಿ ಕಾಣುತ್ತೇವೆ. ಅವುಗಳ ಕುರಿತು ಇಲ್ಲಿ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ.

೪.೧.೧. ಶೈವ ದೇವಾಲಯಗಳು

ಶೈವ ಪಂಥಕ್ಕೆ ಸೇರಿದ ಈ ತಾಲೂಕಿನ ಅನೇಕ ಶೈವ ದೇವಾಲಯಗಳ ಕುರಿತು ಅವು ಇರುವ ಗ್ರಾಮ, ಸ್ಥಳ, ಸ್ಮಾರಕ, ಅವಧಿ, ಶೈಲಿ, ಅಭಿಮುಖ, ಸ್ಥಿತಿ, ಪಂಥ ಈ ಹಿನ್ನೆಲೆಯಲ್ಲಿ ಇಲ್ಲಿ ಕಾಣಸಿಗುವ ಶಾಸನೋಲ್ಲೇಖಿತ ದೇವಾಲಯಗಳು ಹಾಗೂ ಶಾಸನದಲ್ಲಿ ಉಲ್ಲೇಖವಾಗಿರದ ಮತ್ತು ಕರ್ನಾಟಕ ದೇವಾಲಯ ಕೋಶ(ಬ.ಜಿ) ಗ್ರಂಥದಲ್ಲಿ ಉಲ್ಲೇಖವಾಗಿರದ ಇಲ್ಲಿಯ ದೇವಾಲಯಗಳನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿ ಇಲ್ಲಿ ಪ್ರಥಮ ಬಾರಿಗೆ ಅಧ್ಯಯನಕ್ಕೊಳಪಡಿಸಲಾಗಿದೆ.

ಗ್ರಾಮ : ಸಂಡೂರು

ಸ್ಥಳ : ಕುಮಾರಸ್ವಾಮಿ ಬೆಟ್ಟ

ಸ್ಮಾರಕ : ಪಾರ್ವತಿ ದೇವಾಲಯ

ಕಾಲ : ಕ್ರಿ.ಶ.೧೦.ನೇ. ಶತಮಾನ

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಶೈಲಿ : ರಾಷ್ಟ್ರಕೂಟ[೪]

ಅಭಿಮುಖ : ಪೂರ್ವ

ಸ್ಥಿತಿ : ಉತ್ತಮ

ಪಂಥ : ಶೈವ

ಪಾರ್ವತಿ ದೇವಿಯ (ಕುಮಾರಸ್ವಾಮಿ ಬೆಟ್ಟ) ದೇವಾಲಯದ ಬಲಭಾಗದಲ್ಲಿಯ ಭಿತ್ತಿಯಲ್ಲಿಯ ಶಾಸನವು 'ಜೀನಾಲಯನ್'[೫] ಎಂಬ ವ್ಯಕ್ತಿಯ ಹೆಸರನ್ನು ಉಲ್ಲೇಖಿಸುತ್ತದೆ. ಬಹುಶಃ ಈ ದೇವಾಲಯವನ್ನು ಈ ಕಟ್ಟಿಸಿದ ಜೀನಾಲಯನ್‌ನ ಉಲ್ಲೇಖ ಇದಾಗಿರಬಹುದು ಎಂದು ಊಹಿಸಬಹುದಾಗಿದೆ. ಅದೇ ದೇವಾಲಯದ ಬಲಭಾಗದ ಪಟ್ಟಿಯಲ್ಲಿ 'ಶ್ರೀ'[೬] ಎಂಬ ಅಕ್ಷರ ಮಾತ್ರ ಕಾಣುತ್ತಿದ್ದು ಉಳಿದ

ಅಕ್ಷರಗಳನ್ನು ಅಳಿಸಿರುತ್ತಾರೆ. ಅದೇ ದೇವಾಲಯದ ಬಲಭಾಗದ ಗೋಡೆಯಲ್ಲಿನ ದೇವಕೋಷ್ಠದ ಪ್ರತಿಮೆಯ ಮೇಲಿನ ಬರಹ 'ಶ್ರೀ ಜೀಲಯನ್'[೭] ಎಂದಿದೆ. ಈ ದೇವಾಲಯದಲ್ಲಿ ದೊರೆತ ಶಾಸನ ಮಾಹಿತಿಗಳಂತೆ ಹಾಗೂ ದೇವಾಲಯದ ಲಕ್ಷಣಗಳಿಂದ ಇದು ರಾಷ್ಟ್ರಕೂಟರ ಕಾಲದೆಂದು ದೃಢಪಡುತ್ತದೆ. ಈ ದೇವಾಲಯವು ಈಗ ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆಯಲ್ಲಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದು ಸುಮಾರು ಮೂರು ಅಡಿ ಎತ್ತರವಾಗಿರುವ ಸಾದಾ ಕೆತ್ತನೆಯ ಅಧಿಷ್ಠಾನವನ್ನು ವಿಶಾಲವಾದ ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ರಾಷ್ಟ್ರಕೂಟ ಶೈಲಿಯ ಆರು ಕಂಬಗಳಿದ್ದು ಇವುಗಳ ಮಧ್ಯ ಪೀಠದ ಮೇಲೆ ಪಾರ್ವತಿ ಶಿಲ್ಪವಿದೆ. ಇದು ಸುಮಾರು ನಾಲ್ಕುವರೆ ಅಡಿ ಎತ್ತರವಾಗಿದ್ದು ಸಮಭಂಗಿಯಲ್ಲಿದೆ. ಇದರ ಕೈಗಳಲ್ಲಿ ಶಿವ, ಗಣೇಶ ಮತ್ತು ಫಲಗಳಿವೆ. ಅಂತರಾಳದ ಪ್ರವೇಶದ್ವಾರಕ್ಕೆ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಪದ್ಮ, ಹೂವಿನ ಎಸಳುಗಳು, ಕೀರ್ತಿಮುಖಗಳಿವೆ. ದ್ವಾರದ ಎರಡೂ ಭಾಗಗಳಲ್ಲಿರುವ ದ್ವಾರಪಾಲಕರ ವಿಗ್ರಹಗಳಲ್ಲಿ, ಬಲಭಾಗದ ವಿಗ್ರಹವು ಉದ್ಧವಾದ ಜಟೆ, ಮೀಸೆ, ಮೊಳಕಾಲದವರೆಗೆ ವಸ್ತ್ರ ಮತ್ತು ಪಾದರಕ್ಷೆಗಳನ್ನು ಧರಿಸಿ, ಉದ್ದನೆಯ ದಂಡವನ್ನು ಎರಡೂ ಕೈಗಳಲ್ಲಿ ಹಿಡಿದು ನಿಂತಿದ್ದಾನೆ. ಎಡಭಾಗದ ವಿಗ್ರಹ ತಲೆಯ ಮೇಲೆ ಟೋಪಿ, ಇಳಿಬಿದ್ದ ಕರ್ಣಾಭರಣ ಹಾಗೂ ಬಳೆಗಳು ತೆಳುವಾದ ವಸ್ತ್ರವನ್ನುಟ್ಟು ಕೈಗಳಲ್ಲಿ ದಂಡ ಹಿಡಿದಿರುವನು. ಅಂತರಾಳದ ಗೋಡೆಗೆ ಹೊಂದಿಕೊಂಡು ಎರಡು ದಪ್ಪವಾದ ಚೌಕಾಕಾರದ ಕಂಬಗಳಿವೆ.

ಗರ್ಭಗೃಹದ ಪ್ರವೇಶದ್ವಾರಕ್ಕೆ ವೃತ್ತಾಕಾರದ ಅರ್ಧಗಂಭಗಳು ಎರಡೂ ಭಾಗಗಳಲ್ಲಿ ಪದ್ಮಗಳನ್ನು ಹಿಡಿದ ದ್ವಾರಪಾಲಕ (ಕುಬ್ಜ) ವಿಗ್ರಹಗಳು, ಮೇಲ್ಭಾಗ ಅಂತಸ್ತಿನಿಂದ ಕೂಡಿದ ಗೋಪುರ, ಅದರ ಕೆಳ ಪಟ್ಟಿಕೆಯಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳು, ಮಧ್ಯದಲ್ಲಿ ಚಿಕ್ಕಮೂರ್ತಿ ಹಾಗೂ ಲಲಾಟಬಿಂಬದಲ್ಲಿ ಗರುಡ ಶಿಲ್ಪವಿದೆ. ವಿಶಾಲವಾದ ಗರ್ಭಗೃಹದಲ್ಲಿ ನಾಲ್ಕೂ ಕಂಬಗಳು ಅಂತರಾಳದ ಕಂಬಗಳಂತಿವೆ. ಮಧ್ಯದಲ್ಲಿ ಎತ್ತರವಾದ ಪೀಠ, ಅದರ ಮೇಲೆ ಪಾರ್ವತಿ ವಿಗ್ರಹವಿದೆ.

ಸಭಾಮಂಟಪದ ಪಾರ್ಶ್ವಗಳಲ್ಲಿರುವ ದೇವಕೋಷ್ಠಗಳಲ್ಲಿ ಕೇಶವ, ಸೂರ್ಯ, ಮಾಧವ, ಯಮಧರ್ಮ ಮತ್ತು ಶಾಸನ ಶಿಲ್ಪಗಳಿವೆ. ಕೇಶವನ ಶಿಲ್ಪವು ಕಿರೀಟ, ಮುಕುಟ, ಚಕ್ರಕುಂಡಲ, ಕೊರಳಹಾರ, ಬಳೆಗಳು, ಯಜ್ಞೋಪವೀತ, ದೋತ್ರಧರಿಸಿ ಪದ್ಮದ ಮೇಲೆ ಸಮಭಂಗಿಯಲ್ಲಿನಿಂತಿದೆ. ನಾಲ್ಕು ಕೈಗಳಿದ್ದು, ಹಿಂದಿನ ಬಲ, ಎಡ ಕೈಗಳಲ್ಲಿ ಶಂಖ, ಚಕ್ರ, ಮುಂದಿನ ಬಲ, ಎಡಕೈಗಳಲ್ಲಿ ಪದ್ಮಗುಚ್ಛ, ಗಧೆ ಇರುತ್ತವೆ. ಸುತ್ತಲಿನ ಫಲಕದ ಮೇಲೆ ಗರುಡ ಚಾಮರಧಾರೆಯರ ಶಿಲ್ಪಗಳಿವೆ. ಸೂರ್ಯನ ಶಿಲ್ಪವು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ಬಳೆಗಳು, ರತ್ನಪಟ್ಟಿ, ಕಾಲುಗಡಗ, ದೊತ್ರಧರಿಸಿ, ಸಮಭಂಗಿಯಲ್ಲಿನಿಂತಿದೆ. ಇದು ಎರಡು ಕೈಗಳನ್ನು ಹೊಂದಿದ್ದು, ಒಂದು

ಕೈಯಲ್ಲಿ ಪದ್ಮ, ಇನ್ನೊಂದು ಕೈಯು ಅಭಯ ಮುದ್ರೆಯಲ್ಲಿದೆ. ಸುತ್ತಲಿನ ಫಲಕದ ಮೇಲೆ ಚಾಮರಧಾರೆಯರು ಮತ್ತು ಚಿಕ್ಕ ಚಿಕ್ಕ ಶಿಲ್ಪಗಳಿವೆ. ಮಾಧವನ ಶಿಲ್ಪವು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ನಾಗಬಂಧ, ಬಳೆಗಳು, ಯಜ್ಞೋಪವೀತ, ರತ್ನಪಟ್ಟಿ, ಮತ್ತು ದೊತ್ರವನ್ನು ಧರಿಸಿ, ಸಮಭಂಗಿಯಲ್ಲಿನಿಂತಿದ್ದು, ನಾಲ್ಕು ಕೈಗಳಲ್ಲಿ ಹಿಂದಿನ ಬಲ, ಎಡ ಕೈಗಳಲ್ಲಿ ಚಕ್ರ, ಶಂಖ ಮುಂದಿನ ಬಲ, ಎಡ ಕೈಗಳು ಡೋಲ ಹಸ್ತ ಕಟ್ಯಾವಲಂಬಿತ ಮುದ್ರೆಯಲ್ಲಿವೆ. ಯಮಧರ್ಮನ ಶಿಲ್ಪವು ಕೋಣದ ಮೇಲೆ ಕುಳಿತಿದ್ದು, ಕಿರೀಟ, ಮುಕುಟ, ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತ, ಬಳೆಗಳನ್ನು ಧರಿಸಿದ್ದು ಈ ಮೂರ್ತಿಯ ಕೈಗಳಲ್ಲಿ ದಂಡ ಪಾಶಗಳಿವೆ.

ಸಭಾಮಂಟಪದ ಪ್ರವೇಶದ್ವಾರಕ್ಕೆ ಹೊಂದಿಕೊಂಡು ಸೋಪಾನಗಳನ್ನು ರಚಿಸಲಾಗಿದೆ. ದೇವಾಲಯದ ಹೊರಗೋಡೆಯ ಅಧಿಷ್ಠಾನ ಭಾಗವು ಉಪಾನೆ, ಜಗತಿ, ವೃತ್ತ ಕುಮುದ ಮತ್ತು ಪಟ್ಟಿಕೆಗಳಿಂದ ಕೂಡಿದೆ. ಗೋಡೆಯಲ್ಲಿ ಎತ್ತರದ ಅರ್ಧಗಂಭಗಳು ಮತ್ತು ದೇವಕೋಷ್ಠಗಳಿವೆ. ಈ ಕಂಬಗಳು ಚೌಕಾಕಾರವಾಗಿದ್ದು, ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಮುಚ್ಚಳ, ಚಾಚು ಪೀಠ ಅದರ ಮೇಲೆ ಬೋದಿಗೆ ಇದೆ. ದೇವಾಲಯದ ಮುಖ ಭಾಗವು ಒಳಗೊಂಡಂತೆ ಹೊರಗೊಡೆಯ ಸುತ್ತಲೂ ಎರಡೆರಡೂ ಅರ್ಧಗಂಭಗಳ ಮಧ್ಯದಲ್ಲಿರುವ ಕೋಷ್ಠಗಳಲ್ಲಿ ವಿವಿಧ ಭಂಗಿಯಲ್ಲಿ ಶಿವನ ಮೂರ್ತಿಗಳಿವೆ. ಈ ಕೋಷ್ಠಕಗಳ ಮೇಲ್ಭಾಗ ಮಕರ ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು, ಕೋಷ್ಠಕಗಳ ತುದಿ ದೇವಾಲಯದ ಶಿಖರವನ್ನು ಮುಟ್ಟಿರುತ್ತದೆ.

ಅಂತರಾಳದ ವಿಮಾನದ ಮೇಲಿನ ಭಾಗದ ಗೋಡೆಯ ಲಕ್ಷಣಗಳೇ ಇದ್ದು, ಮುಂದಿನ ಭಾಗದ ಗೂಡಿನಲ್ಲಿ, ಶಿವ ಪಾರ್ವತಿಯ ವಿಗ್ರಹಗಳು, ಮೇಲ್ಭಾಗ ಗಜಪುಷ್ಠಾಕಾರದ ಚಪ್ಪಡಿ ಇದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯಲ್ಲಿರುವ ಅಂತಸ್ತಿನಿಂದ ಕೂಡಿದ ಶಿಖರ, ಅಮಲಕಗಳಿವೆ. ದೇವಾಲಯದ ಲಕ್ಷಣಗಳಿಂದ ಬಾದಾಮಿ ಚಾಲುಕ್ಯರ ಕಾಲದ ಉತ್ತರಾರ್ಧದಲ್ಲಿ ನಿರ್ಮಾಣವಾಗಿದೆ ಎಂದು ಗುರುತಿಸಬಹುದಾಗಿದೆ.

ಈ ದೇವಾಲಯವು ಎಲ್ಲಾ ಲಕ್ಷಣಗಳಿಂದ ಶೈವ ಸಂಪ್ರದಾಯಕ್ಕೆ ಸಂಬಂಧಿಸಿದೆ. ಆದರೆ ದೇವಾಲಯದ ಗೋಡೆಯ ಮೇಲೆ ಅಲ್ಲಲ್ಲಿ 'ಶ್ರೀ ಜಿನಾಲಯನ್' ಮತ್ತು 'ಜಿಲಯನ್', ಎಂದು ಬರೆದಿರುವ ಆದಿ ಚಾಲುಕ್ಯರ ಕಾಲದ ಬರವಣಿಗೆಗಳಿವೆ. ಆದರೆ ದೇವಾಲಯದಲ್ಲಿ ದೊರೆತ ಶಾಸನ ಮಾಹಿತಿಯಂತೆ ಇದು ರಾಷ್ಟ್ರಕೂಟರ ಕಾಲದೆಂದು ದೃಢಪಡುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಪಾರ್ವತಿ ದೇವಾಲಯವು ಈ ಪ್ರದೇಶದಲ್ಲಿ ಕಾಣಸಿಗುವ ಅತ್ಯಂತ ಪ್ರಾಚೀನವಾದ ದೇವಾಲಯವಾಗಿದೆ. ಇದನ್ನು ಪೂರ್ವದ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿರಬೇಕು. ಇದು ಸುಮಾರು ೭ನೇ ಶತಮಾನದ ಮಧ್ಯವಿರಬೇಕು. ಇದರ ಸುಖನಾಶವು ವಿಶಾಲವಾಗಿದ್ದು,

ವಿಜಯನಗರ ಅರಸರ ಕಾಲದಲ್ಲಿ ಗುಡಿಯ ದ್ವಾರ ಉಂಟಾದಂತೆ ಕಾಣುವುದು. ಸುಕನಾಶವು ಕಿರೀಟದಂತೆ ಸುತ್ತಾಗಿದೆ.[೮]

ಗ್ರಾಮ : ಸಂಡೂರು
ಶೈಲಿ : ಕಲ್ಯಾಣ ಚಾಲುಕ್ಯ[೯]
ಸ್ಥಳ : ಕುಮಾರಸ್ವಾಮಿಯ ಬೆಟ್ಟ
ಅಭಿಮುಖ : ಪೂರ್ವ
ಸ್ಮಾರಕ : ಕುಮಾರಸ್ವಾಮಿ ದೇವಾಲಯ
ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೦ನೆಯ ಶತಮಾನ
ಪಂಥ : ಶೈವ
ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಕುಮಾರಸ್ವಾಮಿ ದೇವಾಲಯದ ಪ್ರವೇಶದ ಎಡ ಹಸ್ತಿಹಸ್ತದಲ್ಲಿರುವ ಕ್ರಿ.ಶ.೧೦೭೪ರ[೧೦] ಶಾಸನವು ಸ್ವಾಮಿದೇವರ ದೇಗುಲದ ಕೆಲಸ ಮಾಡಿದ ಕಲ್ಕುಟಿಗರಾದ ಬಿಯಳಚಟ್ಟ, ಬೆನಗಬೋವ, ಕಮ್ಮಾರನಾಯಕರನ್ನು ಉಲ್ಲೇಖಿಸುತ್ತದೆ. ಹಾಗೂ ಈ ದೇಗುಲದ ಕೆಲಸ ಮಾಡಿದಕ್ಕೆ ಶ್ರೀಸ್ವಾಮಿದೇವರ ತಪೋವನಾದಿಪತಿಗಳಾದ ಗಧಾದರರಸರು ಕಲ್ಕುಟಿಗರಾದ ಬಿಯಳಚಟ್ಟ, ಬೆನಗಬೋವ, ಕಮ್ಮಾರನಾಯಕರಿಗೆ ಭೂದಾನವನ್ನು ನೀಡಿದ ವಿಷಯವನ್ನು ತಿಳಿಸುತ್ತದೆ.

ಪಾರ್ವತಿ ದೇವಾಲಯದ ಮಂಟಪದಲ್ಲಿ ಇರಿಸಿರುವ ಕ್ರಿ.ಶ.೧೨೦೬[೧೧]ರ ಶಾಸನದಲ್ಲಿ ಹೊಯ್ಸಳ ದೊರೆ ವೀರಬಲ್ಲಾಳನ ಆಜ್ಞೆಯಂತೆ ಅವನ ದಂಡನಾಯಕನಾದ ಮಹದೇವ ದಂಡನಾಯಕನು ಹಿಂದೆ ರಾಷ್ಟ್ರಕೂಟವಂಶದ ಕೃಷ್ಣರಾಜನು ಸ್ವಾಮಿದೇವರಿಗೆ ನೀಡಿದ್ದ ಕೆರೆಯಪಳ್ಳಿ (ಈಗಿನ ಕೆರ್ನಳ್ಳಿ ಗ್ರಾಮ) ಗ್ರಾಮವನ್ನು ಪುನರ್ದತ್ತಿಯಾಗಿ ನೀಡುತ್ತಾನೆ. ಈ ದತ್ತಿಯನ್ನು ಆ ಸ್ಥಳದ ವಿಷ್ಣುಕರ ಬ್ರಹ್ಮಚಾರಿ ಸ್ವೀಕರಿಸುತ್ತಾನೆ ಎಂದು ಈ ಶಾಸನದಿಂದ ತಿಳಿದುಬರುತ್ತದೆ.

ಕುಮಾರಸ್ವಾಮಿ ದೇವಾಲಯದ ಜಾಗಟೆಯ ಮೇಲಿನ ಕ್ರಿ.ಶ.೧೮೫೪ರ[೧೨] ಶಾಸನವು ಕುಮಾರಸ್ವಾಮಿ ದೇವರಿಗೆ ಗುಹೇಶ್ವರದುರ್ಗದ ಅಭುವನ ಗೋತ್ರದ ಕಂಚುಗಾರ ಬಟ್ಲ ಬಸವನ ಪೌತ್ರ ಸಿಂಗಪ್ಪನು (ಗಡಿಯಾರ) ತೂಕ ಶೇ.೫೬ ಜಾಗಟೆಯ ನೀಡಿದ ಹಾಗೂ ಸಣ್ಣ ಬಸಪ್ಪನ ಪುತ್ರ ಸಕ್ರಪ್ಪ ಮತ್ತು ಕುಮಾರಪ್ಪನವರು ಸಲಾಕಿ (ಸರಪಳಿ) ಮಾಡಿಸಿ ಕೊಟ್ಟಿರುತ್ತಾರೆ. ಇದರ ತೂಕ ೮೧. ಸೇರು ಎಂದು ಉಲ್ಲೇಖಿಸುತ್ತದೆ.

ಈ ದೇವಾಲಯವು ರಾಷ್ಟ್ರಕೂಟರ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗೂ ಜೀರ್ಣೋದ್ಧಾರ, ಅಭಿವೃದ್ಧಿ ಕಾರ್ಯ ನಡೆಯುತ್ತ ಬಂದಿರುವಂತೆ ಕಾಣುವುದು. ಇದಕ್ಕೆ ಆಧಾರವೆಂದರೆ ದೇವಾಲಯದ ಪ್ರಾಕಾರಕ್ಕೆ ತಾಗಿಕೊಂಡು ದ್ವಾರಮಂಟಪವಿದೆ. ದ್ವಾರ ಮಂಟಪದ ಗೋಪುರ ಇಟ್ಟಿಗೆ, ಗಾರೆಗಳಿಂದ ಐದು ಹಂತಗಳಲ್ಲಿ ರಚನೆಗೊಂಡಿದ್ದು, ಈ ದೇವಾಲಯವು ಈಗ ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆಗೆ ಒಳಪಟ್ಟಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದು ಗರ್ಭಗೃಹ, ಅಂತರಾಳ, ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದ ಪ್ರವೇಶ ದ್ವಾರವು ಹೂವಿನ ಎಸಳುಗಳು, ಮಯೂರ ಸಾಲು ಹಾಗೂ ಮರದಿಂದ ರಚಿಸಿದ ಗಜ,ಗಿಳಿಗಳ ಕೆತ್ತನೆಯ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದಲ್ಲಿ ಆರು ಕಂಬಗಳಿದ್ದು, ಕಂಬಗಳಲ್ಲಿ ಚೌಕಾಕಾರ ಹಾಗೂ ವರ್ತುಲಾಕಾರದ ಭಾಗಗಳಿರುತ್ತವೆ. ಇವು ಅಂತರಾಳದ ಕಂಬಗಳಂತಿವೆ. ಅವುಗಳ ಮಧ್ಯದಲ್ಲಿ ಸುಮಾರು ನಾಲ್ಕುವರೆ ಅಡಿ ಎತ್ತರದ ಕುಮಾರಸ್ವಾಮಿಯ ಮೂರ್ತಿಯು ಸಮಭಂಗಿಯಲ್ಲಿ ನಿಂತಿದೆ. ಸುತ್ತಲೂ ಪ್ರಭಾವಳಿ ಹಾಗೂ ಕಿರೀಟ, ಮುಕುಟ, ಕೊರಳಾಭರಣ, ಕರ್ಣಾಭರಣಗಳನ್ನು ಹೊಂದಿದೆ. ಈತನ ಒಂದು ಕೈಯಲ್ಲಿ ದಂಡಾಯುಧ ಇನ್ನೊಂದು ಕೈ ಅಭಯ, ಕೈ ಮೇಲೆ ಕ್ರೌಂಚ ಪಕ್ಷಿ ನಿಂತಿದೆ. ಇದರ ಕೆಳಗೆ ರಾಮ, ಲಕ್ಷ್ಮಣರು, ಬಲಬದಿ ಕೆಳಗೆ ಮಯೂರ ಶಿಲ್ಪಗಳನ್ನು ಕಂಡರಿಸಲಾಗಿದೆ.[೧೩]

ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಕೆಳ ಮತ್ತು ಮೇಲೆ ಚೌಕಾಕಾರ, ಮಧ್ಯ ವೃತ್ತಾಕಾರದಲ್ಲಿದ್ದು (ಅದರಲ್ಲಿ ಚೈತ್ಯಾಕಾರದ ಕೆತ್ತನೆಗಳಿವೆ) ಫಲಕ ಬೋಧಿಗೆಗಳನ್ನು ಹೊಂದಿವೆ. ಸಭಾಮಂಟಪದ ಗೋಡೆಗೆ ನಿಂತಿರುವ ಮಹಿಷಮರ್ಧಿನಿ ಮತ್ತು ಪಾರ್ವತಿ ಶಿಲ್ಪಗಳು ಸುಂದರ ಕೆತ್ತನೆಗಳಿಂದ ಕೂಡಿವೆ. ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಕುಮುದ ಹಾಗೂ ಚೌಕಗಳುಳ್ಳ ಪಟ್ಟಿಕಾ ಭಾಗಗಳು ಎದ್ದು ಕಾಣುತ್ತವೆ. ದೇವಾಲಯದ ಗೋಡೆಗಳಲ್ಲಿ ಎತ್ತರವಾದ ಅರ್ಧಗಂಭಗಳು ಹಾಗೂ ದೇವಕೋಷ್ಠಗಳಿವೆ. ಅರ್ಧಗಂಭಗಳ ವೈಶಿಷ್ಟ್ಯವೆಂದರೆ, ಇವುಗಳೆಲ್ಲಾ ಚೌಕಾಕಾರವಾಗಿದ್ದು, ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಮುಚ್ಚಳ ಚಾಚುಪೀಠ ಅದರ ಮೇಲೆ ಬೋದಿಗೆ ಇದೆ. ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ಅರ್ಧಗಂಭಗಳನ್ನು ಹೊಂದಿದ ಕೋಷ್ಠಕಗಳ ಮೇಲ್ಭಾಗದ ಶಿಖರಗಳು ದೇವಾಲಯದ ತುದಿ ಮಾಳಿಗೆಯನ್ನು ಮುಟ್ಟಿರುತ್ತವೆ. ಕೈಪಿಡಿ ಗೋಡೆಯ ಮೇಲೆ ಕೂಟಗಳು, ನಂದಿ ಶಿಲ್ಪಗಳಿದ್ದು, ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರದಲ್ಲಿ ಹಿತ್ತಾಳೆ ಕಳಸವನ್ನು ಇಡಲಾಗಿದೆ. ಕೆಂಪು ಉಸುಕಿನ ಶಿಲೆಯಲ್ಲಿ ಈ ದೇವಾಲಯ ರಚನೆಯಾಗಿದ್ದು, ಅಮೃತ ಶಿಲೆಯ ದೀಪಸ್ತಂಭವು ದೇವಾಲಯದ ಮುಂದಿದೆ. ಮುಖಮಂಟಪದ ಇಕ್ಕೆಲಗಳಲ್ಲಿರುವ ಕಂಬಗಳ ಮೇಲೆ ದ್ವಾರಪಾಲಕರ ವಿಗ್ರಹಗಳಿವೆ.[೧೪]

ದೇವಾಲಯದ ಅಧಿಷ್ಠಾನವು, ಉಪಾನ, ಜಗತಿ, ಕಂಠ, ತ್ರಿಪಟ್ಟಿ ಕುಮುದ, ಪದ್ಮ ಮತ್ತು ಪಟ್ಟಿಕೆಗಳನ್ನೊಳಗೊಂಡಿದೆ. ಹೊರಗೋಡೆ ಹಿಂಬಣಿ - ಮುಂಬಣಿಗಳಿಂದ ಕೂಡಿದ್ದು, ಗೋಡೆಯ ಮೇಲೆ ಜೋಡಿ ಅರ್ಧಗಂಭಗಳು ಅವುಗಳ ಮೇಲೆ ಶಿಖರ, ಅದರಲ್ಲಿ ಚೈತ್ಯಾಕಾರದ ಕೆತ್ತನೆ ಇದೆ. ಅಂತರಾಳದ ಮೇಲೆ ಒಂದೇ ಸಾಲಿನಲ್ಲಿರುವ ಐದು ಶಿಖರಗಳಲ್ಲಿ ಮಧ್ಯದ ಶಿಖರ ಉಳಿದವುಗಳಿಗಿಂತಲೂ ಎತ್ತರ ಮತ್ತು ದೊಡ್ಡ ಪ್ರಮಾಣದಲ್ಲಿದ್ದು, ವಿಜಯನಗರದ ದೇವಾಲಯಗಳ ಗೋಪುರದಂತಿದೆ. ಗರ್ಭಗೃಹದ

ಮೇಲೆ ನಾಲ್ಕೂ ಭಾಗಗಳಲ್ಲಿ ಪದ್ಮಗಳಿಂದ (ಚೈತ್ಯಾಕಾರ ಮಾದರಿಯಲ್ಲಿ) ಕೂಡಿದ ವಿಜಯನಗರ ಮಾದರಿಯ ಶಿಖರವಿದೆ. ಬಹುಶಃ ಮೇಲಿನ ಶಿಖರಗಳು ವಿಜಯನಗರ ಕಾಲದಲ್ಲಿ ನಿರ್ಮಾಣವಾದಂತೆ ಕಾಣುತ್ತವೆ.[೧೫]

ಗ್ರಾಮ : ಸಂಡೂರು

ಸ್ಥಳ : ಕುಮಾರಸ್ವಾಮಿ ಬೆಟ್ಟ

ಸ್ಮಾರಕ : ನಾಗನಾಥೇಶ್ವರ ದೇವಾಲಯ

ಕಾಲ : ಕ್ರಿ.ಶ.ಸು.೧೧ನೆಯ ಶತಮಾನ

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಶೈಲಿ : ಕಲ್ಯಾಣ ಚಾಲುಕ್ಯ[೧೬]

ಅಭಿಮುಖ : ಪೂರ್ವ

ಸ್ಥಿತಿ : ಉತ್ತಮ

ಪಂಥ : ಶೈವ

ಈ ದೇವಾಲಯವು ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದೆ. ಸಮಚತುಷ್ಕೋನಾಕಾರದಲ್ಲಿರುವ ಗರ್ಭಗೃಹವು ಶಿವಲಿಂಗ, ವಿಷ್ಣು, ಗಣೇಶ ಹಾಗೂ ನಂದಿಶಿಲ್ಪಗಳನ್ನು ಒಳಗೊಂಡಿದೆ. ಸಭಾಮಂಟಪದ ಮುಂಭಾಗದಲ್ಲಿ ಇತ್ತೀಚೆಗೆ ಮುಖಮಂಟಪವನ್ನು ಜೋಡಿಸಲಾಗಿದೆ. ಈ ದೇವಾಲಯದ ಬಲಭಾಗದ ಸುಮಾರು ಎರಡು ಅಡಿ ಎತ್ತರವಾದ ಜಗತಿಯ ಮೇಲೆ ವಿಷ್ಣು ಶಿಲ್ಪವಿದೆ. ಅಲ್ಲಿ ಹತ್ತು ಶಿವಲಿಂಗಗಳಿದ್ದು, ಒಂದು ಶಿವಲಿಂಗದ ಪೀಠದಲ್ಲಿ ಶಾಸನವನ್ನು ಕೆತ್ತಲಾಗಿದೆ. ಕ್ರಿ.ಶ.೧೦೪೫ರ[೧೭] ಈ ಶಾಸನದಲ್ಲಿ ಓರ್ವೆಯ ಹಂಪಾಚಾರಿಯ ಮೊಮ್ಮಗ ಚನಯಾಚಾರಿಯ ಮಗ ಧರ್ಮಾಂಬುಧಿಯು ನವಿಲನ್ನು ಪ್ರತಿಷ್ಠೆ ಮಾಡಿದ ಉಲ್ಲೇಖವಿರುವುದು.

ಈ ದೇವಾಲಯವು ನಿರಾಂದಾರ ಪ್ರದಕ್ಷಿಣಾ ಪಥವನ್ನೊಳಗೊಂಡಿದ್ದು, ಬಾಗಿಲ ದ್ವಾರದ ಮೇಲ್ಭಾಗವು ಪುಷ್ಪಗಳಿಂದ ಅಲಂಕೃತವಾಗಿದೆ. ದ್ವಾರದಲ್ಲಿ ದ್ವಾರಪಾಲಕರ ವಿಗ್ರಹಗಳಿದ್ದು ಅವು ಗಧೆಯನ್ನು ಹಿಡಿದು ನಿಂತುಕೊಂಡಿವೆ. ಇವು ಕೈಗಡಗ, ಕಾಲುಗಡಗ ಕೊರಳಹಾರ, ಕಿರೀಟ, ತೋಳಬಂಧಿ, ಸೊಂಟಪಟ್ಟಿ ಒಳಗೊಂಡಿವೆ. ಹೊರಗೆ ನಾಗಶಿಲ್ಪಗಳು, ವಿನಾಯಕನ ಮೂರ್ತಿಗಳಿವೆ. ಇದು ಅಧಿಷ್ಠಾನ, ಭಿತ್ತಿ, ಶಿಖರ, ಸ್ತೂಪಿಗಳನ್ನೊಳಗೊಂಡಿದ್ದು, ಮುಂಭಾಗದ ಶಿಖರದಲ್ಲಿ ನಂದಿಶಿಲ್ಪಗಳಿದ್ದು ನಾಸಿಕದಲ್ಲಿ ವಿನಾಯಕನ ಮೂರ್ತಿ, ಹಿಂಭಾಗದ ನಾಸಿಕದಲ್ಲಿ ವಿಷ್ಣುವಿನ ವಿಗ್ರಹ, ಬಲಭಾಗದ ನಾಸಿಕದಲ್ಲಿ ಮುನಿಯ ಶಿಲ್ಪವಿದೆ.

ಗ್ರಾಮ : ಸಂಡೂರು

ಸ್ಥಳ : ಕುಮಾರಸ್ವಾಮಿಯ ಬೆಟ್ಟ

ಸ್ಮಾರಕ : ಈಶ್ವರ ದೇವಾಲಯ

ಶೈಲಿ : ರಾಷ್ಟ್ರಕೂಟ

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಅಭಿಮುಖ : ಪಶ್ಚಿಮ

ಕಾಲ : ಕ್ರಿ.ಶ.ಸು.೧೦ನೆಯ ಶತಮಾನ[೧೮]

ಸ್ಥಿತಿ : ಉತ್ತಮ

ಪಂಥ : ಶೈವ

ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದಕ್ಕೆ ಕಿರಿದಾದ ಬಾಗಿಲಿರುವುದು. ಕಬ್ಬಿಣದ ಜಾಲಂಧರಗಳನ್ನು ಕದಗಳಿಗೆ ಜೋಡಿಸಲಾಗಿದ್ದು, ಗರ್ಭಗೃಹದ ಆಕಾರಕ್ಕೆ ತಕ್ಕಂತೆ ಕಿರಿದಾದ ಮೂರು ಹಂತಗಳುಳ್ಳ ಶಿಖರವಿರುವುದು. ಶಿಖರದ ಎರಡು ಹಂತಗಳನ್ನು ಬಳಸಿಕೊಂಡು ದೇವಕೋಷ್ಠಗಳನ್ನು ಪೂರ್ಣಗೊಳಿಸಲಾಗಿದ್ದು, ಇವು ಸ್ತೂಪಿಯ ಕೆಳಭಾಗವನ್ನು ಮುಟ್ಟಿರುತ್ತವೆ.

ಗ್ರಾಮ : ಸಂಡೂರು — **ಶೈಲಿ : ಕಲ್ಯಾಣ ಚಾಲುಕ್ಯ**[೧೯]

ಸ್ಥಳ : ಕುಮಾರಸ್ವಾಮಿ ಬೆಟ್ಟ — **ಅಭಿಮುಖ : ಪಶ್ಚಿಮ**

ಸ್ಮಾರಕ : ಪಾತಾಳೇಶ್ವರ ದೇವಾಲಯ — **ಸ್ಥಿತಿ : ಉತ್ತಮ**

ಕಾಲ : ಕ್ರಿ.ಶ.ಸು.೧೦ನೆಯ ಶತಮಾನ — **ಪಂಥ : ಶೈವ**

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಈ ದೇವಾಲಯ ಕೇವಲ ಗರ್ಭಗೃಹವನ್ನು ಹೊಂದಿದ್ದು, ಭೂಮಟ್ಟಕ್ಕಿಂತ ತುಂಬಾ ಕೆಳಗಿದ್ದು ಬಾವಿಗೆ ಹೊಂದಿಕೊಂಡು ಇದೆ. ಇದರಲ್ಲಿ ಶಿವಲಿಂಗ ಹಾಗೂ ನಂದಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದೆ.

ಗ್ರಾಮ : ಸಂಡೂರು — **ಶೈಲಿ : ಕಲ್ಯಾಣ ಚಾಲುಕ್ಯ**[೨೦]

ಸ್ಥಳ : ಕುಮಾರಸ್ವಾಮಿ ಬೆಟ್ಟ — **ಅಭಿಮುಖ : ಪೂರ್ವ**

ಸ್ಮಾರಕ : ಹರಿಶಂಕರ ದೇವಾಲಯ — **ಸ್ಥಿತಿ : ಉತ್ತಮ**

ಕಾಲ : ಕ್ರಿ.ಶ.ಸು.೧೧ನೆಯ ಶತಮಾನ — **ಪಂಥ : ಶೈವ**

ಹರಿಶಂಕರ ದೇವಾಲಯವು ಗರ್ಭಗೃಹ, ತೆರೆದ ಸಭಾಮಂಟಪಗಳನ್ನು ಹೊಂದಿದ್ದು, ಗರ್ಭಗೃಹದ ಪ್ರವೇಶದ್ವಾರವು ಸರಳ ಕೆತ್ತನೆಯಿಂದ ಕೂಡಿರುವುದು. ಗರ್ಭಗೃಹದಲ್ಲಿ ಶಿವಲಿಂಗ, ತೆರೆದ ಸಭಾಮಂಟಪದಲ್ಲಿ ನಂದಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು, ಭಿತ್ತಿ, ಪ್ರಸ್ತಾರ, ಶಿಖರ, ಸ್ತೂಪಿಯನ್ನೊಳಗೊಂಡಿದ್ದು, ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದೆ. ದೇವಾಲಯದ ಹೊರ ಭಿತ್ತಿಯಲ್ಲಿ ಎತ್ತರವಾದ ಅರ್ಧಗಂಭಗಳು ಹಾಗೂ ದೇವಕೋಷ್ಠಗಳಿವೆ. ಅರ್ಧ ಗಂಭಗಳ ವೈಶಿಷ್ಟ್ಯವೆಂದರೆ ಇವುಗಳೆಲ್ಲಾ ಚೌಕಾಕಾರವಾಗಿದ್ದು, ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಮುಚ್ಚಳ, ಚಾಚುಪೀಠ ಅದರ ಮೇಲೆ ಬೋದಿಗೆ ಇರುವುದು. ಈ ದೇವಾಲಯದ ಪ್ರವೇಶದ್ವಾರವು ಲಲಾಟಬಿಂಬವನ್ನು ಹೊಂದಿದ್ದು ನಾಸಿಕದಲ್ಲಿ ಶೈವ ವಿಗ್ರಹಗಳಿವೆ. ಅಕ್ಕ ಪಕ್ಕದಲ್ಲಿ ನಂದಿ ಶಿಲ್ಪಗಳಿವೆ. ಇದು ಪ್ರದಕ್ಷಿಣ ಪಥವನ್ನೊಳಗೊಂಡಿದೆ. ಈ ದೇವಾಲಯದ ಹೊರಭಾಗದಲ್ಲಿರುವ ನಂದಿಯ ಬಾಯಿಯಿಂದ ಸತತವಾಗಿ ನೀರು ಸುರಿಯುತ್ತಿರುತ್ತದೆ. ಈ ನೀರು ಬೆಟ್ಟದ ಮೇಲ್ಭಾಗದಿಂದ

ಜಲಪಾತವಾಗುತ್ತಿದ್ದು, ದಟ್ಟವಾದ ಮರಗಿಡಗಳ ತೊಪ್ಪಲಿನಲ್ಲಿ ಈ ದೇವಾಲಯವು ಮುಚ್ಚಿಕೊಂಡಿರುವಂತೆ ಭಾಸವಾಗುತ್ತದೆ. ಇದನ್ನು ಮರಳು ಮಿಶ್ರಿತ ಕೆಂಪು ಶಿಲೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯವು ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಸು.೪-೫ ಕಿ.ಮೀ. ಮುಂಚೆಯೆ ಬಲಪಕ್ಕದಲ್ಲಿ ಕಾಣಸಿಗುತ್ತದೆ.

ಗ್ರಾಮ : ಹಳೆ ದರೋಜಿ — ಶೈಲಿ : ಕಲ್ಯಾಣ ಚಾಲುಕ್ಯ

ಸ್ಥಳ : ಬೆಟ್ಟದ ಮೇಲೆ — ಅಭಿಮುಖ : ಪೂರ್ವ

ಸ್ಮಾರಕ : ರಾಮಲಿಂಗೇಶ್ವರ — ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ.೧೨ನೇ ಶತಮಾನ[೨೧] — ಪಂಥ : ಶೈವ

ದರೋಜಿ ಗ್ರಾಮದ ಬೆಟ್ಟದ ತುದಿಯಲ್ಲಿ ಶಿಥಿಲವಾದ ಕೋಟೆಯ ಮಧ್ಯ ರಾಮಲಿಂಗೇಶ್ವರ ದೇವಾಲಯವಿದೆ. ಇದು ಗರ್ಭಗೃಹ, ತೆರೆದ ಸಭಾಮಂಟಪವನ್ನೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗನ ಶಿಲ್ಪವಿರುವುದು. ತೆರೆದ ಸಭಾಮಂಟಪದಲ್ಲಿ ನಾಲ್ಕು ಸಾದಾ ಕೆತ್ತನೆಯ ಕಂಬಗಳಿದ್ದು, ಮುಂದಿನ ಎಡ ಹಾಗೂ ಬಲಭಾಗದ ಕಂಬಗಳಲ್ಲಿ ಶಾಸನವನ್ನು ಕಂಡರಿಸಲಾಗಿದೆ. ಈ ದೇವಾಲಯದ ಎದುರುಗಡೆ ಪುಷ್ಕರಣಿ ಇದೆ. ಇದು ತುಂಬಾ ಆಳವಾಗಿದ್ದು, ಇದರ ಒಂದು ಬಂಡೆಯ ಮೇಲೆ ಒಂದು ರೇಖಾಚಿತ್ರವಿದ್ದು ಬಲಗೈಯಲ್ಲಿ ಖಡ್ಗವನ್ನು ಹಿಡಿದು ನಿಂತ ಇದು ವೀರಭದ್ರನ ರೇಖಾ ಚಿತ್ರವಾಗಿದೆ. ಈ ದೇವಾಲಯದ ಹೊರ ಭಿತ್ತಿಯ ಎಡಭಾಗದ ಗೋಡೆಯ ಮೇಲೆ ಎರಡು ಆನೆಯ ಉಬ್ಬು ಶಿಲ್ಪಗಳಿವೆ. ಮುಂದಿನ ಆನೆಯ ಕೆಳಗಿನ ಶಿಲ್ಪ ಸವೆದಿದೆ. ಹಿಂದಿನ ಆನೆಯು ಸೊಂಡಿಲಿನಿಂದ ಏನನ್ನೋ ಹಿಡಿದಿದೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಸಾದಾ ಮೇಲ್ಛಾವಣಿಯನ್ನು ಹಾಗೂ ಗೋಪುರವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಗೃಹಪಿಂಡಿಯನ್ನು ಹೊಂದಿರುವುದು ಗರ್ಭಗೃಹದ ದ್ವಾರಬಾಗಿಲು ಸಾದಾ ಇದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈಗ ಈ ದೇವಾಲಯ ಪಾಳುಬಿದ್ದಿರುವುದು.

ಗ್ರಾಮ : ತಾಳೂರು — ಅಭಿಮುಖ : ಪೂರ್ವ

ಸ್ಥಳ : ನಾರಿಹಳ್ಳದ ದಂಡೆ ಮೇಲೆ — ಶೈಲಿ : ಕಲ್ಯಾಣ ಚಾಲುಕ್ಯ

ಸ್ಮಾರಕ : ಈಶ್ವರ ದೇವಾಲಯ — ಸ್ಥಿತಿ : ಕನಿಷ್ಠ

ಕಾಲ : ಕ್ರಿ.ಶ.೧೨೧೮ — ಪಂಥ : ಶೈವ

ಸಂಡೂರು ತಾಲ್ಲೂಕಿನ ತಾಳೂರು ಗ್ರಾಮದ ಹೊರಗೆ ಇರುವ ಈಶ್ವರ ದೇವಾಲಯದ ಕಂಬದಲ್ಲಿಯ ಕ್ರಿ.ಶ.೧೨೧೮ರ ಈ ಶಾಸನವು[೨೨] ಹೊಯ್ಸಳ ವೀರ ಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿ ತಲರದ ಈಶ್ವರ ದೇವಾಲಯವನ್ನು ಯಗವಟ್ಟಿಯ ಬೊಮ್ಮಗವುಡ ಎಂಬುವನು ನಿರ್ಮಿಸಿದ ಎಂದು ಉಲ್ಲೇಖಿಸುತ್ತದೆ. ಈ ಬೊಮ್ಮಗವುಡನು ಈಶ್ವರ ದೇವಾಲಯವನ್ನು ನಿರ್ಮಿಸಿ ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬೊಮ್ಮೋಜನಿಗೆ ಭೂದಾನ ನೀಡಿದ ಉಲ್ಲೇಖವಿದೆ.

ಈ ಶಾಸನದ ಉಲ್ಲೇಖದಂತೆ ಇಂದು ತಾಳೂರು ಎಂದು ಕರೆಯಲ್ಪಡುತ್ತಿರುವ ಗ್ರಾಮವನ್ನು ಹಿಂದೆ 'ತಲರ' ಎಂದು ಕರೆಯುತ್ತಿದ್ದರೆಂದು ತಿಳಿದುಬರುವುದು. ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳನ್ನೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗ ವಿಗ್ರಹವಿದೆ. ಅಂತರಾಳದಲ್ಲಿ ನಂದಿಶಿಲ್ಪವಿದ್ದು, ವಿಶಾಲವಾದ ಸಭಾಮಂಟಪಕ್ಕೆ ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಈ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಹಾಗೂ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯವನ್ನು ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಸಭಾಮಂಟಪದಲ್ಲಿ ನಾಲ್ಕು ಅಲಂಕೃತ ಕಂಬಗಳಿದ್ದು, ಮುಖಮಂಟಪದಲ್ಲಿ ಸಾದಾ ಕೆತ್ತನೆಯ ಎರಡು ಕಂಬಗಳಿವೆ. ಈ ದೇವಾಲಯವು ಅಧಿಷ್ಠಾನ, ಗೃಹಪಿಂಡಿಯನ್ನು ಹೊಂದಿದ್ದು ಗರ್ಭಗೃಹದಲ್ಲಿಯ ವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು ಹೊರಗೆ ಹೋಗಲು ಅದರ ಭಿತ್ತಿಯಲ್ಲಿ ಒಂದು ರಂಧ್ರಯುಕ್ತ ಜಲ ಪ್ರಣಾಳಿ ಇದೆ. ಗರ್ಭಗೃಹದ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಈ ದೇವಾಲಯವು ಚೌಕಾಕಾರದ ತಳ ವಿನ್ಯಾಸವನ್ನು ಹೊಂದಿದ್ದು, ಇದರ ಶಿಖರ ಭಾಗವು ಚೌಕಾಕಾರವಾಗಿದೆ. ಸಭಾಮಂಟಪದಲ್ಲಿಯ ನಾಲ್ಕು ಕಂಬಗಳ ಶೈಲಿಯು ಈ ರೀತಿ ಇದೆ : ಪೀಠ, ಪಾದ, ದಂಡ, ದಂಡಾಗ್ರ ಬೋದಿಗೆಯನ್ನೊಳಗೊಂಡಿವೆ. ದಂಡ ಭಾಗದಲ್ಲಿ ಮಡಿಕೆಗಳಿಂದ ಕೂಡಿದ್ದು ಚತುರಾಶ್ರ ಪಟ್ಟಿಕೆಯನ್ನು ಹೊಂದಿದೆ. ಹಾಗೂ ಮಧ್ಯ ಪಟ್ಟಿಕೆ ಇದ್ದು, ಒಂದು ಕಂಬದ ಮಧ್ಯಪಟ್ಟಿಕೆಯಲ್ಲಿ ಹಾಗೂ ಪಾದದಲ್ಲಿ ಶಾಸನವನ್ನು ಕೆತ್ತಲಾಗಿದೆ. ದಂಡಾಗ್ರದ ಮೇಲೆ ನಾಸಿ, ಕುಂಭ ಅದರ ಮೇಲೆ ವೃತ್ತಾಕಾರದ ಪಟ್ಟಿಕೆ ಇದ್ದು ಕುಂಭದ ಮೇಲೆ ಕಂಠವಿದ್ದು ಅದರ ಮೇಲೆ ಮಂಡಿ, ಹಾರಿಕಾ ವೃತ್ತವೇತ್ರ ಅಂಗಗಳಿದ್ದು ಮೇಲೆ ಚೌಕಾಕಾರದ ಫಲಕವಿದೆ. ಅದರ ಮೇಲೆ ಬೋದಿಗೆ ಇದೆ.

ಗ್ರಾಮ : ತಾಳೂರು	ಅಭಿಮುಖ : ಪೂರ್ವ
ಸ್ಥಳ : ಗ್ರಾಮದ ಒಳಗೆ	ಶೈಲಿ : ಕಲ್ಯಾಣ ಚಾಲುಕ್ಯ
ಸ್ಮಾರಕ : ಈಶ್ವರ ದೇವಾಲಯ	ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ.೧೩ನೆಯ ಶತಮಾನ[೨೩]	ಪಂಥ : ಶೈವ

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಿಸಲ್ಪಟ್ಟ ಈ ದೇವಾಲಯವು ಗರ್ಭಗೃಹ ಹಾಗೂ ಸಭಾಮಂಟಪಗಳನ್ನೊಂದಿದ್ದು, ಸಭಾಮಂಟಪದಲ್ಲಿ ನಾಲ್ಕು ಕಟ್ಟಿಗೆಯ ಕಂಬಗಳಿವೆ. ಸಾದಾ ಮೇಲ್ಛಾವಣಿಯನ್ನು ಹೊಂದಿದ್ದು ಇದು ಸರಳ ಭಿತ್ತಿಯನ್ನು ಹೊಂದಿದೆ. ಸರಳ ಶೈಲಿಯಲ್ಲಿರುವ ಈ ಕಟ್ಟಡಕ್ಕೆ ಕಲ್ಲು, ಕಟ್ಟಿಗೆ, ಸಿಮೆಂಟ್ ಬಳಸಲಾಗಿದೆ. ಹಾಗೂ ಈ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಲಾಗಿದ್ದರೂ ಶಿಲ್ಪಗಳು ಮಾತ್ರ ಪ್ರಾಚೀನವಾಗಿವೆ. ಗರ್ಭಗೃಹದಲ್ಲಿಯೇ ಈಶ್ವರಲಿಂಗ, ನಂದಿಶಿಲ್ಪ ಇತ್ಯಾದಿ ಪ್ರಾಚೀನ ಶಿಲ್ಪಗಳಿವೆ.

ಗ್ರಾಮ : ಸಂಡೂರು | ಅಭಿಮುಖ : ದಕ್ಷಿಣ

ಸ್ಥಳ : ಗ್ರಾಮದ ಒಳಗೆ | ಶೈಲಿ : ವಿಜಯನಗರ

ಸ್ಮಾರಕ : ತಾರಕೇಶ್ವರ ದೇವಾಲಯ | ಸ್ಥಿತಿ : ಉತ್ತಮ

ಕಾಲ : ಕ್ರಿ.ಶ.೧೫೪೪ | ಪಂಥ : ಶೈವ

ಸಂಡೂರಿನ ಕ್ರಿ.ಶ.೧೫೪೪ರ ಶಾಸನವು ಸದಾಶಿವದೇವರಾಯನ ಆಳ್ವಿಕೆಯ ಅವಧಿಯಲ್ಲಿ ರಾಮರಾಜನು ನಾಯಿಂದರಿಗೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ಉಲ್ಲೇಖಿಸುತ್ತದೆ.[೨೪] ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವನ್ನು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು, ಗರ್ಭಗೃಹ ಅಂತರಾಳವನ್ನು ಒಳಗೊಂಡಂತೆ ವಿಶಾಲವಾದ ಪ್ರಾಕಾರವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೂರ್ತಿ ಇದ್ದು, ಪಂಚಲೋಹದ ಐದು ಹೆಡೆಯ ಸರ್ಪವನ್ನು ಹೊಂದಿದೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ದೇವಾಲಯದ ಭಿತ್ತಿಯು ಸಾದಾ ಕೆತ್ತನೆಯಿಂದ ಕೂಡಿದ್ದು ದೇವಾಲಯದ ಪ್ರವೇಶದ್ವಾರವೂ ಸಹ ಸಾದಾ ಕೆತ್ತನೆಯಿಂದ ಕೂಡಿದೆ. ಲಲಾಟಬಿಂಬದ ಮಧ್ಯ ವಿನಾಯಕನ ಶಿಲ್ಪವಿದ್ದು, ಅದರ ಅಕ್ಕಪಕ್ಕದಲ್ಲಿನ ನಾಸಿಕದಲ್ಲಿ ಮುನಿಗಳ ಮತ್ತು ನಂದಿ ಶಿಲ್ಪಗಳಿವೆ. ಈ ದೇವಾಲಯದ ತಲವಿನ್ಯಾಸವು ಚೌಕಾಕಾರವಾಗಿದ್ದು, ಮೇಲ್ಭಾಗವು ಚೌಕಾಕಾರವಾಗಿದೆ. ದೇವಾಲಯದ ಎದುರುಗಡೆ ಗರುಡಗಂಭವಿದೆ. ಈ ಗರುಡಗಂಭಕ್ಕೆ ಒರಗಿಸಿ ಶಾಸನವನ್ನು ನಿಲ್ಲಿಸಲಾಗಿದೆ. ಇದು ನಿರಾಂಧಾರ ಪ್ರದಕ್ಷಿಣ ಪಥವನ್ನೊಳಗೊಂಡಿದ್ದು ಗರ್ಭಗೃಹಕ್ಕೆ ನೇರವಾಗಿ ಚಿಕ್ಕ ಗೋಪುರವಿರುವುದು.

ಗ್ರಾಮ : ಸುಬ್ಬರಾಯನಹಳ್ಳಿ | ಶೈಲಿ : ವಿಜಯನಗರ

ಸ್ಥಳ : ನವಿಲುಸ್ವಾಮಿ ಬೆಟ್ಟ | ಸ್ಥಿತಿ : ಉತ್ತಮ

ಸ್ಮಾರಕ : ನವಿಲುಸ್ವಾಮಿ ದೇವಾಲಯ | ಅಭಿಮುಖ : ಪೂರ್ವ

ಕಾಲ : ಕ್ರಿ.ಶ.೧೫ನೆಯ ಶತಮಾನ | ಪಂಥ : ಶೈವ

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದು ಸಂಡೂರಿನ ಕುಮಾರಸ್ವಾಮಿ ದೇವಾಲಯದ ಪಶ್ಚಿಮಕ್ಕೆ ಸುಮಾರು ೩.ಕಿ.ಮೀ. ಅಂತರದಲ್ಲಿ ಇಂದಿಗೂ ಇರುವುದು. ಈ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು ಗರ್ಭಗೃಹ ಮತ್ತು ಸಭಾಮಂಟಪ ಹಾಗೂ ಪ್ರಾಕಾರವನ್ನೊಳ ಗೊಂಡಿದೆ. ಸಭಾಮಂಟಪದಲ್ಲಿ ೩೬ ಕಂಬಗಳಿದ್ದು ಮೂರು ದ್ವಾರಗಳಿಂದ ಕೂಡಿರುವುದು. ಇಲ್ಲಿಯ ಕಂಬಗಳು ಚೌಕಾಕಾರವಾಗಿದ್ದು ಸಾದಾ ಕೆತ್ತನೆಯನ್ನೊಳಗೊಂಡಿದೆ. ಈ ದೇವಾಲಯದ ತಲವಿನ್ಯಾಸವು ಚೌಕಾಕಾರವಾಗಿದ್ದು, ಗರ್ಭಗೃಹದ ನೇರಕ್ಕೆ ವೃತ್ತಾಕಾರದ ಚಿಕ್ಕ ಗೋಪುರವಿದೆ. ಪ್ರಾಕಾರದಲ್ಲಿ ಗೋಡೆಗೆ ಒರಗಿಸಿ ಎರಡು ಶಿಲಾಶಾಸನಗಳನ್ನು ನಿಲ್ಲಿಸಲಾಗಿದೆ. ಹಾಗೂ ದೇವಾಲಯದ ಎದುರುಗಡೆ ಸುಮಾರು ೨೦ ಅಡಿ ಎತ್ತರದ ದಪ್ಪನೆಯ ಒಂದು ಕಲ್ಲಿನ ಮಾನಸ್ತಂಭವನ್ನು ನಿಲ್ಲಿಸಲಾಗಿದೆ. ಸ್ತಂಭದ ತುದಿಯ

ಮೇಲೆ ಕಲ್ಲಿನಲ್ಲಿ ಸುಂದರವಾಗಿ ಕೆತ್ತಲಾದ ನವಿಲಿನ ಒಂದು ವಿಗ್ರಹವನ್ನು ಸ್ಥಾಪಿಸಲಾಗಿದೆ. ಅದರ ಕೆಳಗೆ ಕೃಷ್ಣನ ವಿಗ್ರಹವಿದೆ. ಹಾಗೂ ದೇವಾಲಯದ ಮುಂದೆ ವಿಜಯನಗರದ ಅರಸರು ಕಟ್ಟಿಸಿದ ಒಂದು ಪುಷ್ಕರಣಿ ಇದೆ. ಮೊದಲು ಗರ್ಭಗುಡಿಯ ಒಳಗೆ ಸುಮಾರು ನಾಲ್ಕೈದು ಅಡಿ ಎತ್ತರದ ಸುಂದರವಾದ ಕಾರ್ತಿಕ ಋಷಿಯ ಪ್ರತಿಮೆಯಿತ್ತೆಂದು ಅದು ಭಿನ್ನ(ಕಳವು)ಗೊಂಡ ಮೇಲೆ ಹೊಸ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದ ಬಗ್ಗೆ ತಿಳಿದುಬರುತ್ತದೆ. ಈ ನವಿಲುಸ್ವಾಮಿಯು ತನ್ನ ವಾಹನನಾದ ನವಿಲಿನ ಮೇಲೆ ದಂಡಾಯುಧ ಹಿಡಿದು ಕುಳಿತಿದ್ದಾನೆ. ದೇವಾಲಯದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಕೆಳಭಾಗದಲ್ಲಿ ಮದನಿಕೆಯರ ವಿಗ್ರಹಗಳಿವೆ.

ಈ ದೇವಾಲಯದ ಬಳಿ ಇರುವ ಒಂದು ಶಾಸನದಲ್ಲಿ ಬುಕ್ಕರಾಯನು ಮಂಟಪವನ್ನು ಮತ್ತು ಕೊಂಡ(ಕೊಳ)ವನ್ನು ಮಾಡಿಸಿದ ಉಲ್ಲೇಖವಿದೆ. ಅದೇ ದೇವಾಲಯದ ಇನ್ನೊಂದು ಶಿಲಾ ಶಾಸನದಲ್ಲಿ ವಿಜಯನಗರದ ವೀರಭೂಪತಿರಾಯ ಅರಸನ ಸಾಮಂತನು ಸ್ವಾಮಿ ದೇವರ ದೇವಸ್ಥಾನದ ಹತ್ತಿರ ಎರಡು ಗುಡಿಗಳ ಮಧ್ಯದ ಕಲ್ಲು ಹಾಸಿನ ಕಾಲುದಾರಿ ಕಟ್ಟಿಸಿದ್ದನ್ನು ತಿಳಿಸುತ್ತದೆ. ಹಾಗೂ ಪ್ರಧಾನಿ ಶಂಕರಸ ವಿಠಪನ ಉಲ್ಲೇಖವಿದೆ.

ಗ್ರಾಮ : ಹಳೆದರೋಜಿ	ಶೈಲಿ : ವಿಜಯನಗರೋತ್ತರ
ಸ್ಥಳ : ಬೆಟ್ಟದ ಮೇಲೆ	ಅಭಿಮುಖ : ದಕ್ಷಿಣ
ಸ್ಮಾರಕ : ಕೋಡಿ ವೀರಭದ್ರ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೫ನೆಯ ಶತಮಾನ	ಪಂಥ : ಶೈವ

ಕೋಡಿ ವೀರಭದ್ರನ ಶಿಲ್ಪವು ಒಂದು ಬಂಡೆಯಲ್ಲಿ ಕೆತ್ತಲ್ಪಟ್ಟ ಉಬ್ಬುಶಿಲ್ಪವಾಗಿದೆ. ಇದು ಗರ್ಭಗೃಹ ಹಾಗೂ ಸಭಾಮಂಟಪವನ್ನೊಳಗೊಂಡಿದ್ದು, ಸಭಾಮಂಟಪದಲ್ಲಿ ಸಾದಾ ಕೆತ್ತನೆಯಿಂದ ಕೂಡಿದ ನಾಲ್ಕು ಕಂಬಗಳಿವೆ. ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿರುವುದು. ಇದು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ದೇವಾಲಯದ ಪಕ್ಕದಲ್ಲಿ ಮಂಟಪವಿರುವುದು. ಇದರಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಈ ವಿಶಾಲವಾದ ಪ್ರಾಕಾರದಲ್ಲಿ ಒಂದು ಲಿಂಗ ಮುದ್ರೆಕಲ್ಲಿದ್ದು ಅದರಲ್ಲಿ ಶಿವಲಿಂಗ ಮತ್ತು ಚಂದ್ರ ಹಾಗೂ ತ್ರಿಶೂಲವನ್ನು ಕಂಡರಿಸಲಾಗಿದ್ದು, ಅದರ ಕೆಳಗೆ 'ಶ್ರೀವಿರೂಪಾಕ್ಷ' ಎಂದು ಒಂದು ಸಾಲಿನಲ್ಲಿ ಶಾಸನವನ್ನು ಕಂಡರಿಸಲಾಗಿದೆ.

ಗ್ರಾಮ : ಚೋರುನೂರು	ಶೈಲಿ : ವಿಜಯನಗರ
ಸ್ಥಳ : ಗ್ರಾಮದ ಆಗ್ನೇಯಕ್ಕೆ	ಅಭಿಮುಖ : ಉತ್ತರ
ಸ್ಮಾರಕ : ವೀರಭದ್ರ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ[೨೫]	ಪಂಥ : ಶೈವ

ಚೋರುನೂರಿನ ವೀರಭದ್ರ ದೇವಾಲಯವು ಕ್ರಿ.ಶ.೧೬ನೆಯ ಶತಮಾನದ ವಿಜಯನಗರದ ಅರಸ ಸದಾಶಿವರಾಯನ ಕಾಲದಲ್ಲಿ ನಿರ್ಮಾಣವಾದದ್ದೆಂದು ತಿಳಿದುಬರುವುದು. ಚೋರಮನೂರ ಗವುಡ ಸೇನ ಬೋವರು ಬಡಗಿ ಕಮ್ಮಾರರಿಗೆ ವರ್ಷಕ್ಕೆ ಮೂರು ಗದ್ಯಾಣಗಳನ್ನು ಬಿಟ್ಟ ಉಲ್ಲೇಖವನ್ನು[೨೬] ನೀಡುವ ಈ ಶಾಸನವು ದೇವಾಲಯದ ಪ್ರಾಕಾರದ ಒಳಗೆ ಇದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ ತೆರೆದ ಸಭಾಮಂಟಪ ಹಾಗೂ ಪ್ರಾಕಾರವನ್ನೊಳಗೊಂಡಿದೆ. ಈ ದೇವಾಲಯವನ್ನು ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದ್ದು, ಇದು ಗರ್ಭಗೃಹ, ತೆರೆದ ಸಭಾಮಂಟಪಗಳನ್ನೊಳಗೊಂಡಿರುವುದು. ಜಗತಿಗೆ ಹೊಂದಿಕೊಂಡು ಸೋಪಾನವನ್ನು ನಿರ್ಮಿಸಲಾಗಿದೆ. ನಿರಾಂಧಾರ ಪ್ರದಕ್ಷಿಣಾ ಪಥವನ್ನೊಳಗೊಂಡಿದ್ದು ಇದರ ಭಿತ್ತಿಯು ಅಲಂಕಾರ ರಹಿತವಾಗಿರುವುದು. ದೇವಾಲಯದ ಮೇಲ್ಕಟ್ಟಡವು ಶಿಖರ ರಹಿತವಾಗಿದ್ದು. ಗರ್ಭಗೃಹ ದ್ವಾರವು ಸಾದಾ ಕೆತ್ತನೆಯಿಂದ ಕೂಡಿರುವುದು. ಸಭಾ ಮಂಟಪದಲ್ಲಿ ಚೌಕಾಕಾರದ ಸರಳ ಕೆತ್ತನೆಯ ಆರು ಕಂಬಗಳಿವೆ. ಗರ್ಭಗೃಹದಲ್ಲಿರುವ ವೀರಭದ್ರನ ಮೂಲ ವಿಗ್ರಹವನ್ನು ದೇವಾಲಯದ ಒಳಗೆ ಒಂದು ಪಕ್ಕದಲ್ಲಿ ಇಡಲಾಗಿದ್ದು, ಇತ್ತೀಚಿಗೆ ಪ್ರತಿಷ್ಠಾಪಿಸಲಾದ ಮೂರ್ತಿಯನ್ನು ಗರ್ಭಗೃಹದಲ್ಲಿ ಇಡಲಾಗಿದೆ. ಗರ್ಭಗೃಹದಲ್ಲಿಯ ಮೂಲ ವೀರಭದ್ರನ ವಿಗ್ರಹವು ಸಮಭಂಗಿಯಲ್ಲಿದ್ದು ಇದರ ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ, ಗುರಾಣಿಗಳಿವೆ.

ಗ್ರಾಮ : ಕುರೆಕುಪ್ಪೆ	ಶೈಲಿ : ವಿಜಯನಗರ
ಸ್ಥಳ : ಗ್ರಾಮದ ಒಳಗೆ	ಅಭಿಮುಖ : ದಕ್ಷಿಣ
ಸ್ಮಾರಕ : ಪಂಪಾಪತಿ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ[೨೭]	ಪಂಥ : ಶೈವ

ಕ್ರಿ.ಶ.೧೫೨೩ರ ಶಾಸನವು ಕುರೆಕುಪ್ಪೆಯಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಸಾಮ ಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿದನೆಂದು ಉಲ್ಲೇಖಿಸುವುದು.[೨೮] ಈಗ ಈ ದೇವಾಲಯವು ಪಂಪಾಪತಿ ದೇವಾಲಯವೆಂದು ಖ್ಯಾತಿ ಪಡೆದಿದೆ. ಸಾಮಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ದೇವಕಾರ್ಯಕ್ಕೆ ದಾನ ನೀಡುತ್ತಾನೆ. ಮತ್ತು ಊರಿನ ಮಹಾಜನರು ನಾಲ್ಕುಕುಳ ತೋಟವನ್ನು ದಾನವಾಗಿ ನೀಡುತ್ತಾರೆ.

ಈ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು, ಗರ್ಭಗೃಹ ಹಾಗೂ ವಿಶಾಲವಾದ ಸಭಾಮಂಟಪಗಳಿಂದ ಕೂಡಿದ ಇದರ ಗರ್ಭಗೃಹ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೂರ್ತಿಯನ್ನು ಸಭಾಮಂಟಪದಲ್ಲಿ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ಸಭಾಮಂಟಪದಲ್ಲಿ ೧೬ ಕಂಬಗಳಿವೆ. ಒಂದು ಕಂಬದ ಎರಡು ಮುಖದಲ್ಲಿ ಕನ್ನಡದಲ್ಲಿ ಶಾಸನವನ್ನು ಕಂಡರಿಸಲಾಗಿದೆ. ಅದೇ ರೀತಿ ಇನ್ನೊಂದು ಕಂಬದ ಎರಡು ಮುಖದಲ್ಲಿ ಅದೇ ಪಾಠವನ್ನು ಸಂಸ್ಕೃತದಲ್ಲಿ ಕೆತ್ತಲ್ಪಟ್ಟಿದೆ. ಈ ದೇವಾಲಯದ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಲಲಾಟ ಬಿಂಬದಲ್ಲಿ ಬ್ರಹ್ಮ, ಶಿವ, ಪಾರ್ವತಿ, ಗಣೇಶ, ಗರುಡನ ಮೇಲೆ ಕುಳಿತ ವಿಷ್ಣುವಿನ ಶಿಲ್ಪಗಳಿದ್ದು, ನಂದಿ, ಸಿಂಹಗಳ, ಶೈವದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಎದುರುಗಡೆ ಗರುಡಗಂಭವಿದೆ. ಈ ದೇವಾಲಯದ ಸಭಾಮಂಟಪದಲ್ಲಿ ಎಂಟು ಕಂಬಗಳ ಕೆತ್ತನೆಯ ಶೈಲಿಯು ಈ ರೀತಿ ಇವೆ: ಪೀಠ, ಪಾದ, ದಂಡ, ದಂಡಾಗ್ರ, ಬೋದಿಗೆಗಳನ್ನು ಒಳಗೊಂಡಿವೆ. ದಂಡವು ಮಡಿಕೆಗಳಿಂದ ಕೂಡಿದ್ದು, ಚತುರಾಶ್ರ ಪಟ್ಟಿಕೆಯನ್ನು ಮಧ್ಯಪಟ್ಟಿಕೆಯನ್ನು ಹೊಂದಿದೆ. ಪಾದದಲ್ಲಿ ಎರಡು ಕಡೆ ಶಾಸನ ಕೆತ್ತಲಾಗಿರುವುದು. ದಂಡಾಗ್ರದ ಮೇಲೆ ನಾಸಿ, ಕುಂಭ, ಅದರ ಮೇಲೆ ವೃತ್ತಾಕಾರದ ಪಟ್ಟಿಕೆ ಇದ್ದು, ಕುಂಭದ ಮೇಲೆ ಕಂಠವಿದ್ದು, ಅದರ ಮೇಲೆ ಮಂಡಿ, ಹಾರಿಕಾ, ವೃತ್ತವೇತ್ರ ಅಂಗಾಂಗಗಳಿದ್ದು ಚೌಕಾಕಾರದ ಫಲಕವಿದೆ. ಅದರ ಮೇಲೆ ಬೋಧಿಗೆ ಇದೆ. ಈ ದೇವಾಲಯವು ಬೆಣಚು ಶಿಲೆಯಿಂದ ನಿರ್ಮಿಸಿದ ಏಕಕೂಟ ದೇವಾಲಯವಾಗಿದೆ.

ಗ್ರಾಮ : ಅಂತಾಪುರ	ಶೈಲಿ : ವಿಜಯನಗರ
ಸ್ಥಳ : ಗ್ರಾಮದ ಒಳಗೆ	ಸ್ಥಿತಿ : ಕನಿಷ್ಠ
ಸ್ಮಾರಕ : ಮಲ್ಲಿಕಾರ್ಜುನ ದೇವಾಲಯ	ಅಭಿಮುಖ : ದಕ್ಷಿಣ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ	ಪಂಥ : ಶೈವ

ಕ್ರಿ.ಶ.೧೬ನೆಯ ಶತಮಾನಕ್ಕೆ ಸೇರಿದ ಅಂತಾಪುರದ ಮಲ್ಲಿಕಾರ್ಜುನ ದೇವಾಲಯದ ಬಳಿ ಇರುವ ಶಾಸನದಲ್ಲಿ ತಿಮ್ಮರಸಯ್ಯನವರು ಅಂತಾಪುರದ ಮಲ್ಲಿಕಾರ್ಜುನ ದೇವಾಲಯದ ನಂದಾದೀಪಕ್ಕೆ ದಾನ ನೀಡಿದಂತೆ ಉಲ್ಲೇಖವಿದೆ.[೩೯] ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಎತ್ತರದ ಜಗತಿಯ ಮೇಲೆ ಗರ್ಭಗೃಹವಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ತೆರೆದ ಸಭಾಮಂಟಪವನ್ನೊಳಗೊಂಡಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಜಗತಿಯ ಮೇಲೆ ತೆರೆದ ಸಭಾಮಂಟಪವಿದ್ದು ಅದರಲ್ಲಿ ನಂದಿಶಿಲ್ಪವಿದೆ. ಈ ದೇವಾಲಯದ ಗರ್ಭಗೃಹದ ಬಾಗಿಲದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಗುಡಿಯ ತಲವಿನ್ಯಾಸ ಚೌಕಾಕಾರವಾಗಿದೆ. ಈ ದೇವಾಲಯವು ಶಿಖರ ರಹಿತವಾಗಿರುವುದಲ್ಲದೆ ಜಗತಿಗೆ ಹೊಂದಿಕೊಂಡಂತೆ ಸೋಪಾನವನ್ನು ನಿರ್ಮಿಸಲಾಗಿದೆ. ದೇವಾಲಯದ ಭಿತ್ತಿಯು ಸರಳವಾದ ಕೆತ್ತನೆಯಿಂದ ಕೂಡಿದೆ.

ಗ್ರಾಮ : ತಾಳೂರು	ಶೈಲಿ : ವಿಜಯನಗರೋತ್ತರ
ಸ್ಥಳ : ಗ್ರಾಮದ ಒಳಗೆ	ಅಭಿಮುಖ : ಉತ್ತರ
ಸ್ಮಾರಕ : ವೀರಭದ್ರ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೪೦]	ಪಂಥ : ಶೈವ

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಸಮಚತುಷ್ಕೋನದಲ್ಲಿದ್ದು, ಒಳಗೆ ವೀರಭದ್ರನ ಶಿಲ್ಪವಿರುವುದು ಸಭಾಮಂಟಪದಲ್ಲಿ ಸಾದಾ ಕೆತ್ತನೆಯಿಂದ ಕೂಡಿದ ಆರು ಕಟ್ಟಿಗೆಯ ಕಂಬಗಳಿದ್ದು, ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದೆ. ಕಣಶಿಲೆಯಿಂದ ನಿರ್ಮಿಸಲಾದ ಈ ದೇವಾಲಯವು ಪ್ರಾಕಾರವನ್ನು ಒಳಗೊಂಡಿದೆ. ಆದರೆ ಈಗ ಈ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ದಾರಗೊಳಿಸಲಾಗಿದ್ದು ಸಿಮೆಂಟು, ಕಲ್ಲು, ಕಟ್ಟಿಗೆಗಳನ್ನು ಬಳಸಿ ಕಟ್ಟಲ್ಪಟ್ಟಿದ್ದು, ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ಪ್ರತಿವರ್ಷ ಯುಗಾದಿಯ ಪಾಡ್ಯದ ದಿನ ಜಾತ್ರೆಯಾಗುತ್ತದೆ.

ಗ್ರಾಮ : ವಡ್ನು	**ಶೈಲಿ** : ವಿಜಯನಗರೋತ್ತರ
ಸ್ಥಳ : ಗ್ರಾಮದ ಒಳಗೆ	**ಅಭಿಮುಖ** : ಉತ್ತರ
ಸ್ಮಾರಕ : ಈಶ್ವರ ದೇವಾಲಯ	**ಸ್ಥಿತಿ** : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೩೧]	**ಪಂಥ** : ಶೈವ

ಈ ದೇವಾಲಯವು ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಊರ್ಧ್ವಪೀಠ ಶಿವಲಿಂಗವಿದ್ದು, ಸಭಾಮಂಟಪದಲ್ಲಿ ನಂದಿಶಿಲ್ಪವಿದೆ. ಈ ದೇವಾಲಯವು ಜಗತಿಯ ಮೇಲೆ ನಿರ್ಮಿಸಲಾಗಿದ್ದು, ಕಣಶಿಲೆಯಲ್ಲಿ ನಿರ್ಮಿಸಲಾಗಿದೆ. ಸಾದಾ ಮೇಲ್ಛಾವಣಿಯನ್ನು ಹೊಂದಿದ್ದು, ಸಭಾಮಂಟಪದಲ್ಲಿ ನಾಲ್ಕು ಕಂಬಗಳನ್ನೊಳಗೊಂಡಿರುವುದು. ಅವು ಸಾದಾ ಕೆತ್ತನೆಯಿಂದ ಕೂಡಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದ್ದು, ದೇವಾಲಯದ ಮೇಲ್ಛಾವಣಿಯಲ್ಲಿ ನಂದಿ ಶಿಲ್ಪಗಳಿವೆ. ದೇವಾಲಯದ ಎದುರುಗಡೆ ಗರುಡಗಂಭವಿದೆ. ಈ ದೇವಾಲಯವು ಜಗಲಿ, ಭಿತ್ತಿ, ಸಾದಾ ಮೇಲ್ಛಾವಣಿ, ಶಿಖರ, ಸ್ತೂಪಿಯನ್ನು ಹೊಂದಿದೆ.

ಗ್ರಾಮ : ಜೋಗ	**ಶೈಲಿ** : ವಿಜಯನಗರೋತ್ತರ
ಸ್ಥಳ : ಗ್ರಾಮದ ಒಳಗೆ	**ಅಭಿಮುಖ** : ಪೂರ್ವ
ಸ್ಮಾರಕ : ವೀರಭದ್ರ ದೇವಾಲಯ	**ಸ್ಥಿತಿ** : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೩೨]	**ಪಂಥ** : ಶೈವ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕುನೂರು ವರ್ಷಗಳಷ್ಟು ಹಳೆಯದಾದ ವೀರಭದ್ರನ ಶಿಲ್ಪವಿರುವುದು. ಗರ್ಭಗೃಹದ ಪ್ರವೇಶದ್ವಾರದಲ್ಲಿ ಶೈವದ್ವಾರ ಪಾಲಕರ ಶಿಲ್ಪಗಳಿದ್ದು ಲಲಾಟಬಿಂಬದಲ್ಲಿ ಕರುವಿಗೆ ಹಾಲುಣಿಸುವ ಗೋವಿನ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ಆರು ಕಂಬಗಳಿದ್ದು, ಕಂಬಗಳ ಬೋದಿಗೆಗಳು ಮಾತ್ರ ಪುಷ್ಪ ಬೋದಿಗೆಗಳಿಂದಲಂಕೃತಗೊಂಡಿವೆ. ಇದರ ಪ್ರವೇಶಕ್ಕೆ

ಸುರುಳಿಯಾಳಿಗಳಿಂದ ಬಂಧಿತ ಸೋಪಾನಗಳಿವೆ. ಗರ್ಭಗೃಹದ ಮಧ್ಯಕ್ಕೆ ಗೋಪುರವಿದ್ದು, ಅದನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಜಗಲಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರಾಕಾರವನ್ನೊಳಗೊಂಡಿರುವ ಇದು ಕಪೋತ, ಸಾದಾ ಮೇಲ್ಛಾವಣಿಯನ್ನು ಹೊಂದಿದ್ದು, ನಾಸಿಕದಲ್ಲಿ ಪಾರ್ವತಿ, ಪರಮೇಶ್ವರ, ವಿಘ್ನೇಶ್ವರ, ನಂದಿ, ಸಿಂಹ, ಶೈವ, ದೇವತೆಗಳ ವಿಗ್ರಹಗಳಿವೆ. ಗರ್ಭಗೃಹದ ಒಳಗೆ ಹೂವಿನ ಭುವನೇಶ್ವರವಿದೆ. ಈ ದೇವಾಲಯವನ್ನು ಕಣ ಶಿಲೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯದ ಪ್ರಾಕಾರದಲ್ಲಿ ಗರುಡಗಂಭ, ನಂದಿ ಶಿಲ್ಪಗಳಿದ್ದು ಇವು ಪ್ರಾಚೀನ ಕಾಲದ ಶಿಲ್ಪಗಳಾಗಿವೆ. ಈ ದೇವಾಲಯವನ್ನು ಇತ್ತೀಚಿಗೆ ಜೀರ್ಣೋದ್ಧಾರಗೊಳಿಸಲಾಗಿರುವುದು. ಪ್ರತಿವರ್ಷ ಮಾಘ ಮಾಸದ ಬಹುಳ ಚತುರ್ದಶಿಯ ಜಾಗರಣೆಯ ದಿನದಂದು ಶಿವಯೋಗದಲ್ಲಿ ಜಾತ್ರೆಯಾಗುತ್ತದೆ.

ಗ್ರಾಮ : ಸಂಡೂರು	ಶೈಲಿ : ವಿಜಯನಗರೋತ್ತರ
ಸ್ಥಳ : ಗ್ರಾಮದ ಉತ್ತರಕ್ಕೆ(ಶಿವಪುರ)	ಅಭಿಮುಖ : ಪಶ್ಚಿಮ
ಸ್ಮಾರಕ : ಈಶ್ವರ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೩೩]	ಪಂಥ : ಶೈವ

ಈ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ಸಭಾಮಂಟಪವನ್ನು ಹೊಂದಿದ್ದು, ಪ್ರಾಕಾರವನ್ನೊಳಗೊಂಡಿರುವುದು. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಶಿವಲಿಂಗವು ಕಪ್ಪು ಶಿಲೆಯಲ್ಲಿ ಮಾಡಲಾಗಿರುವ ಪ್ರಾಚೀನ ವಿಗ್ರಹವಾಗಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಇಕ್ಕೆಲಗಳಲ್ಲಿ ಶೈವ ದ್ವಾರ ಪಾಲಕರ ಶಿಲ್ಪಗಳು ಹಾಗೂ ಅಂತರಾಳದಲ್ಲಿ ನಂದಿ ಮತ್ತು ಗಣೇಶನ ಶಿಲ್ಪಗಳಿವೆ. ಈ ನಂದಿ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಮಾಡಲಾಗಿದೆ. ಇದರ ಪಕ್ಕದಲ್ಲಿ ಗಣೇಶನ ವಿಗ್ರಹವಿದ್ದು, ಶೈಲಿಯ ದೃಷ್ಟಿಯಿಂದ ಗಮನಿಸುವುದಾದರೆ ಇವೆರಡೂ ಸಹ ಪ್ರಾಚೀನ ವಿಗ್ರಹಗಳಾಗಿವೆ. ಗರ್ಭಗೃಹ, ಅಂತರಾಳದ ವಿಗ್ರಹಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ವಾಸ್ತುಶೈಲಿಯು ವಿಜಯನಗರೋತ್ತರ ಕಾಲಕ್ಕೆ ಸಂಬಂಧಿಸಿದಂತೆ ಇರುವವು. ಅಂತರಾಳದ ಬಾಗಿಲುವಾಡವು ಸಾದಾ ಕೆತ್ತನೆಯಿಂದ ಕೂಡಿರುವುದು ಸಭಾಮಂಟಪದಲ್ಲಿ ವಿಜಯನಗರ ಶೈಲಿಯ ನಾಲ್ಕು ಕಂಬಗಳಿವೆ. ಸಭಾಮಂಟಪಕ್ಕೆ ಹೊಂದಿಕೊಂಡು ಆನೆಗಳಿಂದ ಬಂಧಿತವಾದ ಸೋಪಾನಗಳಿವೆ. ದ್ವಾರ ಮಂಟಪದ ಗೋಪುರ ಹಾಗೂ ದೇವಾಲಯದ ಶಿಖರವನ್ನು ಇಟ್ಟಿಗೆ ಹಾಗೂ ಗಾರೆಗಳಿಂದ ನಿರ್ಮಿಸಲಾಗಿದ್ದು, ದ್ವಾರಗೋಪುರವನ್ನು ಶಾಲಾ ಕಟ್ಟಡದ ಶೈಲಿಯಲ್ಲಿ ನಿರ್ಮಿಸಲಾಗಿದೆ.

ಈ ದೇವಾಲಯವನ್ನು ಬೆಣಚು ಕಲ್ಲಿನಿಂದ ನಿರ್ಮಿಸಲಾಗಿದೆ. ದೇವಾಲಯದ ಗೋಡೆಗಳಲ್ಲಿ ಆನೆ, ಕುದುರೆ, ಮತ್ಸ್ಯ, ಮಿಥುನ, ನವಿಲು, ಸಳ, ಶಿವಲಿಂಗ, ಹಾವು, ವರಹ ಮತ್ತು ಸೈನಿಕರ ಉಬ್ಬು ಕೆತ್ತನೆಯ ಶಿಲ್ಪಗಳಿದ್ದು, ಕೈಪಿಡಿ ಗೋಡೆಯಲ್ಲಿ ತೋರಣ ಹಾಗೂ ಆನೆ ಸಾಲುಗಳು ಹಾಗೂ ಗರ್ಭಗೃಹದ

ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದ್ದು, ಇದರಲ್ಲಿ ದೇವಕೋಷ್ಠಗಳಿದ್ದು ಐದು ಹಂತಗಳಿಂದ ಕೂಡಿರುವುದು. ಈ ದೇವಕೋಷ್ಠಗಳಲ್ಲಿ ಶೈವ, ವೈಷ್ಣವ ದೇವತೆಗಳ ವಿಗ್ರಹಗಳಿವೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಕೈಪಿಡಿಗೋಡೆ, ಪ್ರಸ್ತಾರ, ಶಿಖರ, ಸ್ತೂಪಿಯನ್ನೊಳಗೊಂಡಿದ್ದು ದೇವಾಲಯದ ಎದುರುಗಡೆ ಗರುಡಗಂಭವನ್ನು ಮತ್ತು ದೇವಾಲಯವು ಪ್ರದಕ್ಷಿಣ ಪಥವನ್ನೊಳಗೊಂಡಿದೆ.

ಈ ದೇವಾಲಯದ ಆವರಣದಲ್ಲಿ ಚಂಡಿಕೇಶ್ವರ, ಪಾರ್ವತಿ, ವೆಂಕಟೇಶ್ವರನ ಚಿಕ್ಕ ಚಿಕ್ಕ ದೇವಾಲಯಗಳಿವೆ. ಪಾರ್ವತಿ ದೇವಾಲಯವು ಗರ್ಭಗೃಹವನ್ನು ಹೊಂದಿದ್ದು, ಗರ್ಭಗೃಹದಲ್ಲಿ ಪಾರ್ವತಿ ದೇವಿಯ ವಿಗ್ರಹವಿದೆ. ಇದನ್ನು ಕಪ್ಪು ಶಿಲೆಯಲ್ಲಿ ಮಾಡಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರವನ್ನು ಹೊಂದಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ.

ಚಂಡಿಕೇಶ್ವರನ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ಚಂಡಿಕೇಶ್ವರನ ವಿಗ್ರಹವಿದೆ. ಇದು ಈಶ್ವರ ದೇವಾಲಯಕ್ಕೆ ಅಂಟಿಕೊಂಡೆ ಇದೆ. ಈ ದೇವಾಲಯವನ್ನು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಗರ್ಭಗೃಹದ ನೇರಕ್ಕೆ ದ್ರಾವಿಡ ಶೈಲಿಯ ಕೂಟ ಶಿಖರವಿದೆ. ಈ ದೇವತೆಗೆ ದಕ್ಷಿಣಮೂರ್ತಿ ಎಂತಲೂ ಕರೆಯುತ್ತಾರೆ. ಇಂತಹದೇ ದಕ್ಷಿಣಮೂರ್ತಿಯ ವಿಗ್ರಹವನ್ನು ಹಂಪೆಯ ವಿರೂಪಾಕ್ಷ ದೇವಾಲಯದ ಪೂರ್ವಭಾಗದ ಭಿತ್ತಿಯಲ್ಲಿ ಕಾಣುತ್ತೇವೆ. ಈ ವಿಗ್ರಹವನ್ನು ಕಪ್ಪು ಶಿಲೆಯಲ್ಲಿ ಮಾಡಲ್ಪಟ್ಟಿದೆ.

ವೆಂಕಟೇಶ್ವರ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಗರ್ಭಗೃಹದಲ್ಲಿ ವೆಂಕಟೇಶ್ವರನ ವಿಗ್ರಹವಿದೆ. ಈ ದೇವಾಲಯವು ಈಶ್ವರ ದೇವಾಲಯದ ಎದುರುಗಡೆ ಇರುವುದು. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದೆ. ಈ ವಿಗ್ರಹವನ್ನು ಕಪ್ಪು ಶಿಲೆಯಲ್ಲಿ ಮಾಡಲಾಗಿದೆ. ಈ ದೇವಾಲಯದಲ್ಲಿ ಶೈವ ಪಂಥದ ಶಿವಲಿಂಗ, ಪಾರ್ವತಿದೇವಿ, ವಿನಾಯಕ ಇತ್ಯಾದಿ ದೇವತೆಗಳು ಇದ್ದು, ಅದರ ಜೊತೆಗೆ ವೈಷ್ಣವ ಪಂಥದ ವೆಂಕಟರಮಣನ ವಿಗ್ರಹ ಇರುವುದು ಒಂದು ವಿಶೇಷವಾಗಿದೆ. ಶೈವ ಮತ್ತು ವೈಷ್ಣವ ಪಂಥಗಳ ಈ ಹರಿ ಮತ್ತು ಹರರ ದೇವಾಲಯವು ಒಂದೇ ದೇವಾಲಯದ ಆವರಣದಲ್ಲಿ ನಿರ್ಮಿಸಿರುವುದನ್ನು ಗಮನಿಸಿದರೆ ಈ ಎರಡು ಪಂಥಗಳಲ್ಲಿ ಮತ ಭೇದವಿಲ್ಲದೆ, ಎರಡೂ ಪಂಥದ ದೇವತೆಗಳನ್ನು ಒಂದೇ ಕಡೆ ಪೂಜಿಸುವುದು ಏಕತೆಯ ಸಂಕೇತವನ್ನು ಸೂಚಿಸುತ್ತದೆ. ಈ ದೇವಾಲಯದ ಪ್ರಾಕಾರದಲ್ಲಿ ಒಂದು ತೀರ್ಥ(ಬಾವಿ)ವನ್ನು ನಿರ್ಮಿಸಲಾಗಿದೆ. ಅದು ಇಂದಿಗೂ ಇದೆ. ಇಲ್ಲಿ ಮಾಘಮಾಸದ ಶುಕ್ಲ ಪಕ್ಷದ ಭಾರತದ ಹುಣ್ಣಿಮೆಯ ದಿನದಂದು ಈಶ್ವರ ದೇವರ ರತೋತ್ಸವ ಹಾಗೂ ಜಾತ್ರೆ ನಡೆಯುತ್ತದೆ.

ಗ್ರಾಮ : ತುಂಬರಗುದ್ದಿ
ಶೈಲಿ : ವಿಜಯನಗರೋತ್ತರ

ಸ್ಥಳ : ಗ್ರಾಮದ ಒಳಗೆ
ಅಭಿಮುಖ : ಉತ್ತರ

ಸ್ಮಾರಕ : ಈಶ್ವರ ದೇವಾಲಯ
ಸ್ಥಿತಿ : ಕನಿಷ್ಠ

ಕಾಲ : ಕ್ರಿ.ಶ.ಸು. ೧೭ನೆಯ ಶತಮಾನ[೬೪]
ಪಂಥ : ಶೈವ

ಈ ದೇವಾಲಯವು ಗರ್ಭಗೃಹ ಹಾಗೂ ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಸಭಾಮಂಟಪದಲ್ಲಿ ಶಿವ, ಪಾರ್ವತಿಯರ ಶಿಲ್ಪಗಳಿರುವವು. ಪ್ರಾಕಾರದ ಗೋಡೆಗೆ ಹೊಂದಿಕೊಂಡು ಶಾಸನವಿದ್ದು, ಅದರ ಅಕ್ಷರಗಳು ಸಂಪೂರ್ಣ ಸವೆದಿವೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಸರಳ ಮೇಲ್ಛಾವಣಿಯನ್ನು ಹೊಂದಿದ್ದು, ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಈಗ ಜೀರ್ಣೋದ್ಧಾರಗೊಳಿಸಲಾಗಿದೆ.

ಗ್ರಾಮ : ಉಬ್ಬಲಗಂಡಿ
ಅಭಿಮುಖ : ಪೂರ್ವ

ಸ್ಥಳ : ಗ್ರಾಮದ ಒಳಗೆ
ಶೈಲಿ : ವಿಜಯನಗರೋತ್ತರ

ಸ್ಮಾರಕ : ವೀರಭದ್ರ ದೇವಾಲಯ
ಸ್ಥಿತಿ : ಉತ್ತಮ

ಕಾಲ : ೧೮ನೆಯ ಶತಮಾನ
ಪಂಥ : ಶೈವ

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದರ ಗರ್ಭಗೃಹವು ಗವಿಯ ಒಳಗೆ ಇದ್ದು ಅದಕ್ಕೆ ಅಂಟಿಕೊಂಡು ಸುಖನಾಸಿ, ಸಭಾಮಂಟಪವಿದೆ. ಸಭಾಮಂಟಪದಲ್ಲಿ ಆರು ಕಂಬಗಳಿದ್ದು, ಅವು ಸರಳ ಕೆತ್ತನೆಯಿಂದ ಕೂಡಿವೆ. ಈ ದೇವಾಲಯ ಪ್ರಾಕಾರವನ್ನೊಳಗೊಂಡಿದ್ದು, ಐದು ಅಡಿ ಎತ್ತರದ ಜಗಲಿಯ ಮೇಲಿರುವ ಇದು ಸೋಪಾನವನ್ನೊಳಗೊಂಡಿದ್ದು, ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ಈ ದೇವಾಲಯವು ಸುಮಾರು ಇನ್ನೂರೈವತ್ತು ವರ್ಷಗಳಷ್ಟು ಪ್ರಾಚೀನದ್ದಾಗಿದೆ. ಕಣಶಿಲೆಯಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿತ್ತು, ಆದರೆ ಈಗ ಈ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗುತ್ತಿದೆ. ದೇವಾಲಯದ ಎದುರುಗಡೆ ಗರುಡ ಗಂಭವಿದೆ. ಈ ದೇವಾಲಯದ ಹಿಂದೆ ಗಂಡಿಯಿರುವುದರಿಂದ ಇದಕ್ಕೆ ಗಂಡಿ ವೀರಭದ್ರನ ದೇವಾಲಯ ಎಂದು, ಈ ಗ್ರಾಮಕ್ಕೆ ಉಬ್ಬಲ ಗಂಡಿ ಎಂದು ಕರೆಯುತ್ತಾರೆ.

೪.೧.೨. ವೈಷ್ಣವ ದೇವಾಲಯಗಳು

ವಿಷ್ಣು ಅಥವಾ ವೈದಿಕ ಪಂಥಕ್ಕೆ ಸಂಬಂಧಿಸಿದ ಈ ತಾಲ್ಲೂಕಿನ ದೇವಾಲಯಗಳನ್ನು ಅವು ಇರುವ ಸ್ಥಳ, ಗ್ರಾಮ, ಸ್ಮಾರಕ, ಕಾಲ, ಶೈಲಿ, ಅಭಿಮುಖ, ಸ್ಥಿತಿ, ಪಂಥ, ಈ ಹಿನ್ನೆಲೆಯಲ್ಲಿ ಈ ತಾಲ್ಲೂಕಿನಲ್ಲಿ ಕಾಣಸಿಗುವ ಶಾಸನೋಲ್ಲೇಖಿತ ಹಾಗೂ ಶಾಸನದಲ್ಲಿ ಉಲ್ಲೇಖವಾಗಿರದ ದೇವಾಲಯಗಳನ್ನು ಮತ್ತು ಕರ್ನಾಟಕ ದೇವಾಲಯ ಕೋಶ (ಬ.ಜಿ) ಗ್ರಂಥದಲ್ಲಿ ಉಲ್ಲೇಖವಾಗಿರದ ಈ ತಾಲ್ಲೂಕಿನ ಅನೇಕ

ದೇವಾಲಯಗಳನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿ, ಇಲ್ಲಿ ಪ್ರಥಮ ಬಾರಿಗೆ ಅಧ್ಯಯನಕ್ಕೆ ಚರ್ಚೆಗೊಳಪಡಿಸಲಾಗಿದೆ.

ಗ್ರಾಮ : ಸಂಡೂರು | ಶೈಲಿ : ಕಲ್ಯಾಣ ಚಾಲುಕ್ಯ

ಸ್ಥಳ : ಕುಮಾರಸ್ವಾಮಿ ಬೆಟ್ಟ | ಅಭಿಮುಖ : ಉತ್ತರ

ಸ್ಮಾರಕ : ರಂಗನಾಥ ದೇವಾಲಯ | ಸ್ಥಿತಿ : ಉತ್ತಮ

ಕಾಲ : ಕ್ರಿ.ಶ.ಸು.೧೧ನೆಯ ಶತಮಾನ[೭೬] | ಪಂಥ : ವೈಷ್ಣವ

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಈ ದೇವಾಲಯವು ವಿಶಾಲವಾದ ಜಾಗವೊಂದಕ್ಕೆ ಹೊಂದಿಕೊಂಡಿದ್ದು, ಗರ್ಭಗೃಹವನ್ನು ಮಾತ್ರ ಹೊಂದಿದೆ. ಇದರಲ್ಲಿ ಕಪ್ಪು ಮಿಶ್ರಿತ ಹಸಿರು ಛಾಯೆಯ ಕಲ್ಲಿನಲ್ಲಿ ಅನಂತಶಯನ ವಿಗ್ರಹವನ್ನು ಕಂಡರಿಸಲಾಗಿದೆ.

ಗ್ರಾಮ : ಸುಶೀಲನಗರ | ಶೈಲಿ : ವಿಜಯನಗರ

ಸ್ಥಳ : ರಾಮಘಡ | ಅಭಿಮುಖ : ಪೂರ್ವ

ಸ್ಮಾರಕ : ರಾಮದೇವಾಲಯ | ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ.೧೫೨೭[೭೭] | ಪಂಥ : ವೈಷ್ಣವ

ರಾಮಘಡ ಶಾಸನದಲ್ಲಿ ಕ್ರಿ.ಶ.೧೫೨೭ರಲ್ಲಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಗೋಪಾಯ ಮತ್ತು ಆಕೆಯ ತಮ್ಮ ರಾಮಣಾನು ರಾಮನಾಥನ ಗುಡಿಯನ್ನು ನಿರ್ಮಿಸಿದಂತೆ ಉಲ್ಲೇಖಿಸಿದ್ದು, ಆ ದೇವಾಲಯದ ಜೀರ್ಣೋದ್ಧಾರಕ್ಕೆ, ಗಂಟೆ, ಜಾಗಟೆ, ಹರಿವಾಣ, ಚೆಂಬು ಮೇಲೆ ಹೊನ್ನನ್ನು ಪೂಜಾ ಸಾಮಾಗ್ರಿಗಳನ್ನು ನೀಡಿದ ಬಗ್ಗೆ ಉಲ್ಲೇಖಿಸುತ್ತದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೂರ್ತಿ ಇದ್ದು ಈ ಮೂರ್ತಿಯ ಹಿಂದೆ ರಾಮನ ಶಿಲ್ಪವಿದೆ. ಗರ್ಭಗೃಹದ ಬಾಗಿಲ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಅದರ ಮೇಲೆ ಐದು ನಾಸಿಕಗಳಿವೆ. ಅದರ ಮಧ್ಯದ ನಾಸಿಕದಲ್ಲಿ ವಿನಾಯಕನ ಶಿಲ್ಪವಿದೆ. ನಾಲ್ಕು ನಾಸಿಕಗಳು ಖಾಲಿ ಇವೆ. ಅವು ಇತ್ತೀಚೆಗೆ ಮಾಡಿಸಿದಂತೆ ಕಾಣುತ್ತವೆ. ಸಭಾಮಂಟಪದಲ್ಲಿ ನಾಲ್ಕು ಚೌಕಾಕಾರದ ಸಾದಾ ಕೆತ್ತನೆಯ ಕಂಬಗಳಿವೆ. ದೇವಾಲಯದ ಭಿತ್ತಿಯು ಸಾದಾ ಕೆತ್ತನೆಯಿಂದ ಕೂಡಿದೆ. ದೇವಾಲಯದ ಎದುರು ಗಡೆ ಗರುಡಗಂಭವಿದೆ. ಹಾಗೂ ರಾಮನ ಪಾದಗಳಿವೆ. ಈ ದೇವಾಲಯದ ಪ್ರವೇಶದ್ವಾರವು ಲಲಾಟಬಿಂಬವನ್ನು ಹೊಂದಿದ್ದು ಮೂರು ನಾಸಿಕಗಳನ್ನೊಳಗೊಂಡಿದೆ. ಈ ನಾಸಿಕಗಳಲ್ಲಿ ಯಾವುದೇ ಮೂರ್ತಿಗಳಿಲ್ಲ. ಈ ದೇವಾಲಯವು

ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಗ್ರೀವ, ಶಿಖರ ಸ್ತೂಪಿಗಳನ್ನು ಒಳಗೊಂಡಿದೆ. ಈ ಶಿಖರವು ಅರಳಿದ ಪದ್ಮಗಳಿಂದ ಕೂಡಿದ್ದು ಗೋಪುರದಲ್ಲಿ ಸಿಂಹ, ನಂದಿ, ನಾರಸಿಂಹ, ವಿಷ್ಣು ಮುಂತಾದ ವೈಷ್ಣವ ಮೂರ್ತಿ ಶಿಲ್ಪಗಳಿವೆ. ಹಾಗೂ ಸಭಾಮಂಟಪದ ಗೋಡೆಗೆ ಒರಗಿಸಿ ಒಂದು ವೀರಗಲ್ಲನ್ನು ಇಡಲಾಗಿದೆ. ಆ ವೀರಗಲ್ಲು ಬಿಲ್ಲು, ಬಾಣವನ್ನು ಹಿಡಿದುಕೊಂಡಿದೆ. ದೇವಾಲಯದ ಹೊರಗೋಡೆಯ ಬಲಗಡೆಗೆ ಶಾಸನವನ್ನು ನಿಲ್ಲಿಸಲಾಗಿದೆ.

ದೇವಾಲಯದ ಹೊರ ಆವರಣದ ಬಲಭಾಗದಲ್ಲಿ ಅನೇಕ ಶಂಖ, ಚಕ್ರಧಾರಿಯಾದ ವಿಷ್ಣುವಿನ ಮೂರ್ತಿಗಳು, ನಾಗಶಿಲ್ಪಗಳು, ಪಾದಗಳು, ವಿನಾಯಕ ಶಿಲ್ಪ ಹಾಗೂ ವೀರಗಲ್ಲುಗಳಿವೆ. ಈ ವೀರಗಲ್ಲುಗಳು ತ್ರುಟಿತವಾಗಿವೆ. ಈ ದೇವಾಲಯದ ಹಿಂಭಾಗದಲ್ಲಿ ಒಂದು ಹೊಂಡವಿದೆ. ಅದಕ್ಕೆ ರಾಮನ ಹೊಂಡವೆಂದು ಕರೆಯುತ್ತಾರೆ. ಈಗ ಆ ಹೊಂಡದಲ್ಲಿ ನೀರು ಬತ್ತಿದೆ.

ಗ್ರಾಮ : ಜಿಗಿನಹಳ್ಳಿ — **ಅಭಿಮುಖ : ಉತ್ತರ**

ಸ್ಥಳ : ಗ್ರಾಮದ ಒಳಗೆ — **ಶೈಲಿ : ವಿಜಯನಗರ**

ಸ್ಮಾರಕ : ಆಂಜನೇಯ ದೇವಾಲಯ — **ಸ್ಥಿತಿ : ಮಧ್ಯಮ**

ಕಾಲ : ಕ್ರಿ.ಶ.೧೫ನೆಯ ಶತಮಾನ — **ಪಂಥ : ವೈಷ್ಣವ**

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ. ಗರ್ಭಗೃಹದ ದ್ವಾರ ಬಾಗಿಲು ಸಾದಾ ಕೆತ್ತನೆಯಿಂದ ಕೂಡಿದೆ. ಸಭಾಮಂಟಪದಲ್ಲಿ ಆರು ಸಾದಾ ಕೆತ್ತನೆಯ ಕಂಬಗಳಿವೆ. ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿದೆ. ಈ ದೇವಾಲಯವು ಮೂರು ಅಡಿ ಜಗತಿಯ ಮೇಲೆ ನಿರ್ಮಿಸಲಾಗಿದೆ. ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ದೇವಾಲಯದ ಪಕ್ಕದಲ್ಲಿ ಶಾಸನವಿದೆ. ಈ ದೇವಾಲಯವನ್ನು ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ ಆಂಜನೇಯನ ಮೂರ್ತಿಶಿಲ್ಪವು ಕೊರಳಹಾರ ಪದಕ, ರತ್ನಹಾರ, ಚೆನ್ನವೀರ, ಕರ್ಣಾಭರಣ, ತೋಳಬಂಧಿ, ಭುಜಕವಚ, ಕೈಗಡಗ, ಕಾಲುಗಡಗ, ಯಜ್ಞೋಪವಿತ ಧರಿಸಿದೆ. ಬಲಗೈಯು ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದೆ. ಕಾಲಲ್ಲಿ ಒಬ್ಬ ಪುರುಷನ ಶಿಲ್ಪವಿದೆ.

ಗ್ರಾಮ : ಸೋವೇನಹಳ್ಳಿ — **ಅಭಿಮುಖ : ಉತ್ತರ**

ಸ್ಥಳ : ಗ್ರಾಮದ ಒಳಗೆ — **ಶೈಲಿ : ವಿಜಯನಗರ**

ಸ್ಮಾರಕ : ಆಂಜನೇಯ ದೇವಾಲಯ — **ಸ್ಥಿತಿ : ಮಧ್ಯಮ**

ಕಾಲ : ಕ್ರಿ.ಶ.೧೫ನೆಯ ಶತಮಾನ — **ಪಂಥ : ವೈಷ್ಣವ**

ಈ ದೇವಾಲಯವು ಗ್ರಾಮದ ಒಳಗೆ ಇದೆ. ಇದು ಗರ್ಭಗೃಹ, ಸಭಾಮಂಟಪ, ಮುಖಮಂಟಪವನ್ನೊಂದಿದೆ. ಸಭಾಮಂಟಪದಲ್ಲಿ ನಾಲ್ಕು ಸಾದಾ ಕೆತ್ತನೆಯ ಕಂಬಗಳಿದ್ದು,

ಮುಖಮಂಟಪದಲ್ಲಿ ಎರಡು ಸಾದಾ ಕೆತ್ತನೆಯ ಕಂಬಗಳಿವೆ. ಗರ್ಭಗೃಹದ ಲಲಾಟಬಿಂಬವು ಸಾದಾ ಕೆತ್ತನೆಯಿಂದ ಕೂಡಿದ್ದು, ಈ ದೇವಾಲಯವು ಸಾಂದರ ಪ್ರದಕ್ಷಿಣಾಪಥವನ್ನೊಳಗೊಂಡಿರುವುದು. ಇದು ಜಗತಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಎದುರುಗಡೆ ಗರುಡ ಗಂಭವಿದ್ದು ವೈಷ್ಣವ ದೇವತೆಗಳ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಜಗತಿ, ಭಿತ್ತಿ, ಮೇಲ್ಛಾವಣಿಯನ್ನೊಂದಿದೆ. ದೇವಾಲಯವು ಉತ್ತರಾಭಿಮುಖ ವಾಗಿರುವುದು. ದೇವಾಲಯದ ಎಡ ಪಕ್ಕದಲ್ಲಿರುವ ಪಾಳು ಬಿದ್ದ ಗರುಡಗಂಭದ ಪೀಠದ ನಾಲ್ಕು ದಿಕ್ಕಿಗೂ ಅಕ್ಷರಗಳನ್ನು ಕೆತ್ತಲಾಗಿದೆ.

ಗ್ರಾಮ : ಹಳೆದರೋಜಿ — ಅಭಿಮುಖ : ದಕ್ಷಿಣ
ಸ್ಥಳ : ಊರ ಒಳಗೆ — ಶೈಲಿ : ವಿಜಯನಗರೋತ್ತರ
ಸ್ಮಾರಕ : ವೆಂಕಟರಮಣ ದೇವಾಲಯ — ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ — ಪಂಥ : ವೈಷ್ಣವ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪವನ್ನೊಂದಿದ್ದು, ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಇತ್ತೀಚೆಗೆ ನಿರ್ಮಿಸಲ್ಪಟ್ಟ ಆಂಜನೆಯನ ವಿಗ್ರಹವಿದ್ದು ಸಭಾಮಂಟಪದಲ್ಲಿ ವೆಂಕಟರಮಣನ ವಿಗ್ರಹವಿದೆ. ಸಭಾಮಂಟಪದಲ್ಲಿ ನಾಲ್ಕು ಸಾದಾ ಕಂಬಗಳಿದ್ದು, ದೇವಾಲಯದ ಎದುರುಗಡೆ ಗರುಡಗಂಭವಿದೆ. ದೇವಾಲಯದ ಆವರಣದಲ್ಲಿಯೇ ಸಿಂಹಪೀಠ, ಅಶ್ವಗಳಿಂದ ಕೂಡಿದ ಸೂರ್ಯಪೀಠ, ತೀರ್ಥಂಕರ ಶಿಲ್ಪಗಳ ಅವಶೇಷಗಳಿವೆ. ಈ ದೇವಾಲಯವು ವಾಸ್ತುಶೈಲಿಯ ದೃಷ್ಟಿಯಿಂದ ವಿಜಯನಗರ ಶೈಲಿಯದಾಗಿದೆ.

ಗ್ರಾಮ : ಹಳೆದರೋಜಿ — ಅಭಿಮುಖ : ದಕ್ಷಿಣ
ಸ್ಥಳ : ಊರ ಹೊರಗೆ — ಶೈಲಿ : ವಿಜಯನಗರ
ಸ್ಮಾರಕ : ಆಂಜನೇಯ — ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ — ಪಂಥ : ವೈಷ್ಣವ

ಈ ದೇವಾಲಯವು ಗರ್ಭಗೃಹ, ಅಂತರಾಳವನ್ನೊಂದಿದೆ. ಜಗತಿಯ ಮೇಲೆ ನಿರ್ಮಿಸಲ್ಪಟ್ಟ ಇದರ ಗರ್ಭಗೃಹದಲ್ಲಿ ಇತ್ತೀಚೆಗೆ ಕಂಡರಿಸ್ಪಟ್ಟ ಆಂಜನೇಯನ ಶಿಲ್ಪವಿದೆ. ಅಂತರಾಳದಲ್ಲಿ ಅಲಂಕಾರಿಕವಾದ ನಾಲ್ಕು ಕಂಬಗಳಿದ್ದು ಅದಕ್ಕೆ ಹೊಂದಿಕೊಂಡು ಸೋಪಾನವಿರುವುದು. ಜಗತಿಯ ಮೇಲೆ ನಿರ್ಮಿಸಲ್ಪಟ್ಟ ಇದು ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ದೇವಾಲಯದ ಎದುರುಗಡೆ ಗರುಡಗಂಭವಿದೆ.

ಗ್ರಾಮ : ಹಳೆದರೋಜಿ — ಅಭಿಮುಖ : ದಕ್ಷಿಣ
ಸ್ಥಳ : ಊರ ಹೊರಗೆ — ಶೈಲಿ : ವಿಜಯನಗರೋತ್ತರ
ಸ್ಮಾರಕ : ಆಂಜನೇಯ — ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ — ಪಂಥ : ವೈಷ್ಣವ

ಈ ದೇವಾಲಯವು ಗರ್ಭಗೃಹ, ಅಂತರಾಳವನ್ನು ಹೊಂದಿದ್ದು, ಅಂತರಾಳದಲ್ಲಿ ಎರಡು ಅಲಂಕೃತ ಕಂಬಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ವಿಗ್ರಹವಿದ್ದು, ಜಗತಿಯ ಮೇಲೆ ನಿರ್ಮಿಸಲ್ಪಟ್ಟ ಇದು ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ಈ ದೇವಾಲಯದ ಹೊರಗೆ ಕಲ್ಯಾಣ ಚಾಲುಕ್ಯರ ಅವಧಿಯ ಮೂರು ಹಂತದ ವೀರಗಲ್ಲು ಇರುವುದು. ಈ ದೇವಾಲಯದಿಂದ ಸ್ವಲ್ಪ ಮುಂದೆ ಹೋದರೆ ಎದುರು ಬಸವಣ್ಣನ ಶಿಲ್ಪವಿದೆ.

ಗ್ರಾಮ : ಬೊಮ್ಮಗಟ್ಟ	ಶೈಲಿ : ವಿಜಯನಗರ
ಸ್ಥಳ : ಗ್ರಾಮದ ಪೂರ್ವಕ್ಕೆ	ಅಭಿಮುಖ : ದಕ್ಷಿಣ
ಸ್ಮಾರಕ : ಹುಲಿಕುಂಟೇಶ್ವರ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೬ನೆಯ ಶತಮಾನ[೨೬]	ಪಂಥ : ವೈಷ್ಣವ

ಬೊಮ್ಮಗಟ್ಟದ ಆಂಜನೇಯ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಪ್ರಾಕಾರ, ದ್ವಾರಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ. ಈ ಶಿಲ್ಪವು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲು ಗಡಗ, ಪಾದಗೆಜ್ಜೆ, ಯಜ್ಞೋಪವೀತ, ಸೊಂಟಪಟ್ಟಿ, ದೋತ್ರ ಧರಿಸಿದೆ. ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ದ್ವಾರ ಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳು ಅಲಂಕಾರದಿಂದ ಕೂಡಿವೆ. ಅಲಂಕಾರ ರಹಿತ ಭುವನೇಶ್ವರಿ ಇದೆ. ಅಂತರಾಳದಲ್ಲಿ ಎರಡು ಕಂಬಗಳಿದ್ದು ಅವುಗಳನ್ನು ಬೆಣಚು ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಈ ಕಂಬಗಳ ಶೈಲಿಯನ್ನು ಗಮನಿಸಿದರೆ ಇವು ಹೊಯ್ಸಳ ಶೈಲಿಯಲ್ಲಿರುವಂತೆ ಕಾಣುತ್ತವೆ. ಮೊದಲ ಎಡಗಡೆಯ ಕಂಬದ ಕೆಳಗೆ ಗರುಡನ ಶಿಲ್ಪವಿದೆ. ಈ ಕಂಬಗಳು ಪೀಠ, ಪಾದ, ದಂಡ, ದಂಡಾಗ್ರ, ಚತುರಾಶ್ರಪಟ್ಟಿ ಹೊಂದಿದ್ದು, ಹದಿನಾರು ಮಡಿಕೆಗಳಿಂದ ಕೂಡಿವೆ. ಬೋದಿಗೆಯನ್ನು ಹೊಂದಿದೆ. ಸಭಾಮಂಟಪದಲ್ಲಿಯೂ ಆರು ಕಂಬಗಳಿದ್ದು ಅವು ಅಂತರಾಳದ ಕಂಬಗಳಂತೆ ಇವೆ. ಈ ದೇವಾಲಯವು ಎರಡು ದ್ವಾರಗಳಿಂದ ಕೂಡಿದೆ.

ಆಂಜನೇಯನ ಗರ್ಭಗೃಹದ ಬಲಗಡೆಗೆ ಮತ್ತೊಂದು ಗರ್ಭಗೃಹವಿದ್ದು ಅದರಲ್ಲಿ ರಾಮ, ಸೀತಾ, ಲಕ್ಷ್ಮಣ, ಹನುಮಂತ, ಗರುಡನ ಶಿಲ್ಪಗಳಿವೆ. ಎಲ್ಲಾ ಶಿಲ್ಪಗಳು ಸ್ಥಾನಿಕ ಭಂಗಿಯಲ್ಲಿದ್ದು ಹಿತ್ತಾಳೆಯ ಪ್ರಭಾವಳಿಯನ್ನು ಹೊಂದಿವೆ. ಗರ್ಭಗೃಹದ ದ್ವಾರ ಬಾಗಿಲ ಮೇಲೂ ಹಿತ್ತಾಳೆಯ ಹೊದಿಕೆ ಇದೆ. ಅದರಲ್ಲಿಯೂ ರಾಮ, ಲಕ್ಷ್ಮಣ, ಸೀತ, ಹನುಮಾನರ ಶಿಲ್ಪಗಳಿವೆ. ಇದರ ಇಕ್ಕೆಲಗಳಲ್ಲಿ ವೈಷ್ಣವ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಸಿಂಹವಕ್ತ್ರ ಪ್ರಣಾಳ ಸೋಪಾನವಿದೆ. ಈ ಸೋಪಾನದ ಅಕ್ಕ ಪಕ್ಕದಲ್ಲಿ ದೀಪಸ್ತಂಭಗಳಿವೆ.

ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಸ್ತೂಪಿಯನ್ನೊಳಗೊಂಡಿದೆ. ಈ ದೇವಾಲಯದ ಸಭಾಮಂಟಪದ ಮುಂದಿನ ಶಿಖರವು ಐದು ಚಿಕ್ಕ ಚಿಕ್ಕ ಗೋಪುರಗಳನ್ನೊಳಗೊಂಡಿದ್ದು, ವಿಜಯನಗರದ ಶೈಲಿಯಲ್ಲಿದೆ. ಇದರಲ್ಲಿ ವಿಷ್ಣುವಿನ ದಶಾವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ವಿಷ್ಣು, ಕೃಷ್ಣ, ಬುದ್ಧ, ಕಲ್ಕಿಯ ವಿಗ್ರಹಗಳಿದ್ದು ಕೆಳಭಾಗದಲ್ಲಿ ನವಿಲು, ಜಿಂಕೆ, ಹನುಮಂತ, ಹೂವು, ಮನುಷ್ಯರ ಶಿಲ್ಪಗಳಿವೆ. ಗರ್ಭಗೃಹದ ಗೋಪುರ ದ್ರಾವಿಡ ಶೈಲಿಯಲ್ಲಿದ್ದು, ಅದರಲ್ಲಿ ದೇವಕೋಷ್ಠಗಳಿದ್ದು, ವೈಷ್ಣವ ಮೂರ್ತಿ ಶಿಲ್ಪಗಳಿರುವವು. ದೇವಾಲಯದ ಭಿತ್ತಿಯಲ್ಲಿ ಮತ್ಸ್ಯ, ಉರಗಗಳ ಉಬ್ಬು ಶಿಲ್ಪಗಳಿವೆ. ಈ ದೇವಾಲಯದ ಎದುರು ಗಡೆ ಗರುಡಗಂಭವಿದ್ದು ಅದರಲ್ಲಿ ಕೃಷ್ಣ, ಹನುಮಂತ, ಗರುಡ, ವಿನಾಯಕನ ಶಿಲ್ಪಗಳಿವೆ.

ಅದೇ ರೀತಿ ರಾಮದೇವರ ಗರ್ಭಗೃಹದ ಶಿಖರದಲ್ಲಿಯೂ ಸಹ ವಿಷ್ಣು, ಕೃಷ್ಣ ಇತ್ಯಾದಿ ವೈಷ್ಣವ ಮೂರ್ತಿ ಶಿಲ್ಪಗಳಿವೆ. ಈ ಗರ್ಭಗೃಹದ ಎದುರುಗಡೆಗೂ ಒಂದು ಗರುಡಗಂಭವಿದ್ದು ಅದರಲ್ಲಿ ಶಂಖ, ಚಕ್ರ, ಹನುಮಂತ, ಗರುಡನ ಶಿಲ್ಪವಿದೆ. ಈ ದೇವಾಲಯದ ಪ್ರವೇಶ ದ್ವಾರದ ದ್ವಾರಗೋಪುರವು ಶಾಲಾ ಕಟ್ಟಡ ಶೈಲಿಯಲ್ಲಿದೆ. ಈ ಗೋಪುರವು ಮೂರು ಹಂತವನ್ನು ಹೊಂದಿದ್ದು, ಈ ಗೋಪುರದಲ್ಲಿ ರಾಮ, ವಿಷ್ಣು, ಹನುಮಂತ, ಗರುಡ ಇತ್ಯಾದಿ ವೈಷ್ಣವ ಶಿಲ್ಪಗಳಿವೆ. ಈ ದೇವಾಲಯದ ಮೂರು ಗೋಪುರಗಳನ್ನು ಹಿಂದೆ ಇದ್ದಂತೆಯೇ ಈಗ ಅದೇ ಶೈಲಿಯಲ್ಲಿ ನವೀಕರಿಸಲಾಗಿರುವುದು. ಈ ದೇವಾಲಯದ ಅಂತರಾಳ, ಸಭಾಮಂಟಪದ ಕಂಬದ ಶೈಲಿಯನ್ನು ಗಮನಿಸಿದರೆ ಇವು ಹೊಯ್ಸಳರ ಶೈಲಿಯಲ್ಲಿರುವಂತೆ ಕಾಣುವವು. ಆದರೆ ದೇವಾಲಯವು ಹೊಂದಿರುವ ಗರ್ಭಗೃಹ, ಅಂತರಾಳ, ಸಭಾಮಂಟಪ, ಪ್ರಾಕಾರ, ದ್ವಾರಮಂಟಪ, ಗೋಪುರ ಇವುಗಳನ್ನು ಹಾಗೂ ದೇವಾಲಯವನ್ನು ನಿರ್ಮಿಸಲು ಬಳಸಿದ ಬೆಣಚು ಶಿಲೆಯನ್ನು ಗಮನಿಸಿದರೆ ಇದು ವಿಜಯನಗರ ಶೈಲಿಯಂತೆ ಕಾಣಸಿಗುವುದು. ದೇವಾಲಯವು ಸಂಡೂರಿನ ವಿಠ್ಠಲ ದೇವಾಲಯದ ಶೈಲಿಯಂತೆ ಇದೆ. ಅಂದರೆ ಬಹುಶಃ ಈ ದೇವಾಲಯವು ವಿಜಯನಗರದ ಕಾಲದಿಂದ ಹಿಡಿದು ಪಾಳೆಗಾರರ ಕಾಲದವರೆಗೂ ಜೀರ್ಣೋದ್ಧಾರಗೊಳ್ಳುತ್ತ ಬಂದಿರುವುದನ್ನು ಕಾಣಬಹುದು. ಹಾಗೂ ಈ ದೇವಾಲಯದ ಹೊರ ಭಾಗದಲ್ಲಿ ಅಕ್ಕ ಪಕ್ಕದಲ್ಲಿ ಬಹಳಷ್ಟು ಮಂಟಪಗಳು ಕಂಡುಬರುತ್ತವೆ. ತುಂಡಾದ ಕಂಬಗಳ ಶಿಲ್ಪಗಳು ಬಿದ್ದಿವೆ. ದೇವಾಲಯದ ಎಡಗಡೆ ಪುಷ್ಕರಣಿ ಇದೆ. ದೇವಾಲಯದ ಮುಂದೆ ಮುದ್ದೇಲಪ ಎಂಬ ಈ ದೇವಾಲಯ ಕಟ್ಟಿಸಿದನೆಂದು ಹೇಳುವ ವ್ಯಕ್ತಿಯ ಶಿಲ್ಪ ಅದರ ಸುತ್ತ ಏಳು ಕೈಮುಗಿದುಕೊಂಡು ಕುಳಿತ ಮುನಿಗಳ ಶಿಲ್ಪಗಳಿವೆ. ಇದು ಗರ್ಭಗೃಹ, ಪ್ರಾಕಾರ ಹೊಂದಿದೆ. ಗರ್ಭಗೃಹದ ಇಕ್ಕೆಲಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಈ ಗರ್ಭಗೃಹ, ಅಧಿಷ್ಠಾನ, ಭಿತ್ತಿ, ಮೇಲ್ಛಾವಣಿಯನ್ನೊಂದಿದೆ.

ಈ ಆಂಜನೇಯನ ದೇವಾಲಯದಿಂದ ಬಲಭಾಗಕ್ಕೆ ಸ್ವಲ್ಪ ಅಂತರದಲ್ಲಿ ಮತ್ತೊಂದು ಹನುಮಂತನ ದೇವಾಲಯವಿದೆ. ಮೊದಲು ಇಲ್ಲಿ ಹನುಮಂತನನ್ನು ಪ್ರತಿಷ್ಠಾಪಿಸಲಾಗಿತ್ತು. ಹಾಗೂ ಇದನ್ನು ಪಾದಗಟ್ಟೆ ಎಂದು ಸಹ ಸ್ಥಳೀಯರು ಹೇಳುತ್ತಾರೆ. ಆನಂತರ ಈಗಿರುವ ಸ್ಥಳದಲ್ಲಿ ಈ ಆಂಜನೇಯನ ದೇವಾಲಯ ನಿರ್ಮಿಸಲಾಯಿತ್ತೆಂದು ತಿಳಿದುಬರುತ್ತದೆ. ಈ ಆಂಜನೇಯನ ಗರ್ಭಗೃಹವು ಅಧಿಷ್ಠಾನ, ಭಿತ್ತಿ, ಮೇಲ್ಛಾವಣಿ ಹೊಂದಿದೆ. ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವಿದೆ. ಇದರ ಸ್ವಲ್ಪ ಅಂತರದಲ್ಲಿ ಮತ್ತೊಂದು ಗರ್ಭಗೃಹವಿದ್ದು, ಅದರಲ್ಲಿ ಹುತ್ತಯಿದೆ. ಅದರಲ್ಲಿ ಇಬ್ಬರು ಭರ್ಜಿ, ಖಡ್ಗ ಹಿಡಿದ ವೀರರ ಶಿಲ್ಪವಿರುವ ವೀರಗಲ್ಲು ಶಿಲ್ಪವಿದ್ದು, ಈ ವೀರರು ಮುಡಿ ಕಟ್ಟಿದ್ದಾರೆ. ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಸೊಂಟಪಟ್ಟಿಯಲ್ಲಿಯ ಕಿರುಗತ್ತಿ ಇದ್ದು, ದೋತ್ರ ಧರಿಸಿವೆ.

ಗ್ರಾಮ : ಕುರೆಕುಪ್ಪೆ | ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಒಳಗೆ | ಶೈಲಿ : ವಿಜಯನಗರೋತ್ತರ
ಸ್ಮಾರಕ : ಆಂಜನೇಯ ದೇವಾಲಯ | ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೩೮] | ಪಂಥ : ವೈಷ್ಣವ

ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಇದು ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿದ್ದು, ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿದ್ದು, ಇವು ದುಂಡನೆಯ ಹಾಗೂ ಚೌಕಾಕಾರ ಭಾಗಗಳಿಂದ ಕೂಡಿವೆ. ದೇವಾಲಯದ ಕೈಪಿಡಿ ಗೋಡೆಯಲ್ಲಿರುವ ದೇವಕೋಷ್ಠಕಗಳಲ್ಲಿ ಅಸ್ಪಷ್ಟವಾಗಿ ಗೋಚರಿಸುವ ಕೆಲವು ಶಿಲ್ಪಗಳು ಕಂಡುಬರುತ್ತವೆ. ದೇವಾಲಯದ ಮೇಲ್ಛಾವಣಿಯು ಸಾದಾ ಕೆತ್ತನೆಯಿಂದ ಕೂಡಿದೆ. ದೇವಾಲಯದ ಹೊರಭಾಗದ ಕಟ್ಟೆಯ ಮೇಲೆ ನಂದಿ ಹಾಗೂ ವೀರಗಲ್ಲುಗಳಿವೆ.

ಗ್ರಾಮ : ಜೋಗ | ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಒಳಗೆ | ಶೈಲಿ : ವಿಜಯನಗರ
ಸ್ಮಾರಕ : ಆಂಜನೇಯ ದೇವಾಲಯ | ಸ್ಥಿತಿ : ಕನಿಷ್ಠ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೩೯] | ಪಂಥ : ವೈಷ್ಣವ

ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ಇದು ಗರ್ಭಗೃಹ ಹಾಗೂ ತೆರೆದ ಸಭಾಮಂಟಪಗಳನ್ನೊಳಗೊಂಡಿದೆ. ಈಗ ಗರ್ಭಗೃಹ ಹಾಗೂ ಸಭಾಮಂಟಪದ ಅವಶೇಷ ಮಾತ್ರ ಗೋಚರಿಸುತ್ತವೆ. ಈ ಸ್ಥಳದಲ್ಲಿ ಗರುಡ ಹಾಗೂ ಶಾಸನ ಶಿಲ್ಪಗಳಿವೆ. ಶಾಸನವು ಹಳೆಯದಾಗಿದ್ದು, ಇದು ಓದಲಾಗದಷ್ಟು ಹಾಳಾಗಿದೆ. ಆದರೆ ಇತ್ತೀಚಿನ ಕ್ಷೇತ್ರಕಾರ್ಯದಿಂದ ತಿಳಿದುಬಂದುದೇನೆಂದರೆ ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆಯ ಗ್ರಂಥದಲ್ಲಿ ತಿಳಿಸಿದ ಈ ಮಾಹಿತಿಯಂತೆ ಇಲ್ಲಿ

ಯಾವ ಅವಶೇಷಗಳು ಕಾಣ ಸಿಗುವುದಿಲ್ಲ. ಗರ್ಭಗೃಹದ ಆಂಜನೇಯನ ವಿಗ್ರಹ ಮಾತ್ರ ಹಳೆಯದಾಗಿದ್ದು ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ.

ಗ್ರಾಮ : ತುಂಬರಗುದ್ದಿ	ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಈಶಾನ್ಯಕ್ಕೆ	ಶೈಲಿ : ವಿಜಯನಗರ
ಸ್ಮಾರಕ : ಆಂಜನೇಯ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೬೦]	ಪಂಥ : ವೈಷ್ಣವ

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಸುಮಾರು ಮೂರು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಗರ್ಭಗೃಹ ತೆರೆದ ಸಭಾಮಂಟಪ ಹಾಗೂ ಪ್ರಾಕಾರವನ್ನು ಹೊಂದಿರುವ ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬು ಶಿಲ್ಪವಿದೆ. ಸಭಾಮಂಟಪದಲ್ಲಿ ಆರು ಸಾದಾ ಕೆತ್ತನೆಯ ಕಂಬಗಳಿವೆ. ದೇವಾಲಯದ ಮೇಲ್ಛಾವಣಿ ಸಾದಾ ಕೆತ್ತನೆಯಿಂದ ಕೂಡಿದ್ದು, ಮೇಲ್ಛಾವಣಿಯ ನಾಸಿಕದಲ್ಲಿ ವೈಷ್ಣವ ಶಿಲ್ಪಗಳಿವೆ. ಪ್ರಾಕಾರಕ್ಕೆ ಹೊಂದಿಕೊಂಡು ಶಾಸನ ಮತ್ತು ವೀರಗಲ್ಲುಗಳಿವೆ. ಈ ಶಾಸನದಲ್ಲಿ ದುರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ ಮೂರು ಕಾಸನ್ನು ದಾನ ನೀಡಿದ ಉಲ್ಲೇಖವಿದೆ.[೬೧]

ಗ್ರಾಮ : ಬಸಾಪುರ.ಎಸ್	ಅಭಿಮುಖ : ಪೂರ್ವ
ಸ್ಥಳ : ಗ್ರಾಮದ ಪಶ್ಚಿಮಕ್ಕೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ರಾಮದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ	ಪಂಥ : ವೈಷ್ಣವ

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿರುವುದು. ಗರ್ಭಗೃಹ, ಅಂತರಾಳ, ಸಭಾಮಂಟಪವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ನವೀಕರಿಸಿದ ರಾಮ, ಲಕ್ಷ್ಮಣ, ಸೀತೆ ಹಾಗೂ ಆಂಜನೇಯನ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಹಳೆಯ ಶಿಲ್ಪಗಳನ್ನು ನದಿಗೆ ಬಿಡಲಾಗಿದೆ. ಸಭಾಮಂಟಪದ ಪ್ರವೇಶಕ್ಕೆ ಸೋಪಾನಗಳನ್ನು ಜೋಡಿಸಲಾಗಿದೆ. ದೇವಾಲಯದ ಮೇಲ್ಛಾವಣಿಯು ಸಾದಾ ಕೆತ್ತನೆಯಿಂದ ಕೂಡಿದ್ದು, ಸಭಾಮಂಟಪದಲ್ಲಿ ಆರು ಕಂಬಗಳಿವೆ. ಈ ಕಂಬಗಳ ವೈಶಿಷ್ಟ್ಯವೆಂದರೆ, ಇವುಗಳೆಲ್ಲಾ ಚೌಕಾಕಾರವಾಗಿದ್ದು, ಅರ್ಧಗಂಭಗಳನ್ನೊಳಗೊಂಡಿವೆ. ಪುಷ್ಪ ಬೋದಿಗೆಗಳಿವೆ. ಒಟ್ಟಿನಲ್ಲಿ ಅಲಂಕಾರಿಕ ಕಂಬಗಳಿಂದ ಕೂಡಿವೆ.

ಗ್ರಾಮ : ವಡ್ಡು	ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಪಶ್ಚಿಮಕ್ಕೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ಹಳ್ಳದರಾಯ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೬೨]	ಪಂಥ : ವೈಷ್ಣವ

ಈ ದೇವಾಲಯವು ದ್ವಿಕೂಟಾಚಲವಾಗಿದ್ದು ಎತ್ತರದ ಜಗಲಿಯ ಮೇಲೆ ನಿರ್ಮಿಸಲಾಗಿದೆ. ಎರಡು ಗರ್ಭಗೃಹ ಹಾಗೂ ತೆರೆದ ಸಭಾಮಂಟಪದಿಂದ ಕೂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದ್ದು, ಸಭಾಮಂಟಪದಲ್ಲಿ ಸರಳ ಕೆತ್ತನೆಯ ಆರು ಕಂಬಗಳಿವೆ. ಇದಕ್ಕೆ ಅಂಟಿಕೊಂಡು ಮತ್ತೊಂದು ಗರ್ಭಗೃಹವಿದ್ದು, ಇದರಲ್ಲಿ ರಾಮ, ಸೀತೆ, ಆಂಜನೇಯರ ಶಿಲ್ಪಗಳಿವೆ. ಸಭಾಮಂಟಪದ ಜಗಲಿಗೆ ಹೊಂದಿಕೊಂಡು ಸೋಪಾನವನ್ನು ನಿರ್ಮಿಸಲಾಗಿದ್ದು, ಸಾದಾ ಮೇಲ್ಛಾವಣಿಯನ್ನು ಹೊಂದಿದ್ದು ಗರ್ಭಗೃಹಕ್ಕೆ ನೇರವಾಗಿ ಕೂಟ ಶಿಖರವಿದೆ. ದೇವಾಲಯದ ಎದುರುಗಡೆ ಗರುಡ ಗಂಭವಿದೆ. ಪ್ರಾಕಾರವನ್ನೊಳಗೊಂಡಿದ್ದು, ಪ್ರಾಕಾರಕ್ಕೆ ಹೊಂದಿಕೊಂಡು ಅನೇಕ ನಾಗಶಿಲ್ಪಗಳಿವೆ. ಈ ಆಂಜನೇಯನ ದೇವಾಲಯವು ನಾರಿಹಳ್ಳದ ದಂಡೆಯ ಮೇಲಿರುವುದರಿಂದ ಹಳ್ಳದರಾಯ ಎಂದು ಕರೆಯುತ್ತಾರೆ. ಈ ದೇವಾಲಯವು ಜಗತಿ, ಭಿತ್ತಿ, ಶಿಖರ, ಸ್ತೂಪಿಯನ್ನೊಳಗೊಂಡಿದೆ. ಇಲ್ಲಿ ಪ್ರತಿವರ್ಷ ಅಮೃತದ ಅಮವಾಸ್ಯೆಯಾದ ಏಳು ದಿನದ ನಂತರ ಈ ದೇವರ ಜಾತ್ರೆ ನಡೆಯುತ್ತದೆ.

ಗ್ರಾಮ : ಸಂಡೂರು	**ಅಭಿಮುಖ** : ದಕ್ಷಿಣ
ಸ್ಥಳ : ನಗರದ ದಕ್ಷಿಣಕ್ಕೆ	**ಶೈಲಿ** : ವಿಜಯನಗರೋತ್ತರ
ಸ್ಮಾರಕ : ನರಸಿಂಹ ದೇವಾಲಯ	**ಸ್ಥಿತಿ** : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ.ಶತಮಾನ[೪೩]	**ಪಂಥ** : ವೈಷ್ಣವ

ಬೆಟ್ಟದ ಮಧ್ಯದಲ್ಲಿರುವ ಈ ದೇವಾಲಯವು ಗರ್ಭಗೃಹ, ಸಭಾಮಂಟಪ ಹಾಗೂ ದ್ವಾರಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ನರಸಿಂಹನ ಮತ್ತು ಲಕ್ಷ್ಮಿಯ ವಿಗ್ರಹಗಳಿವೆ. ಸಭಾಮಂಟಪದಲ್ಲಿನ ನಾಲ್ಕು ಕಂಬಗಳ ಶೈಲಿ ವಿಜಯನಗರದ ಮಾದರಿಯಲ್ಲಿವೆ. ಸಭಾಮಂಟಪವನ್ನು ಪೂರ್ವದಿಂದಲೂ ಪ್ರವೇಶಿಸಬಹುದು. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರವಿದ್ದು, ದ್ವಾರ ಮಂಟಪದ ಗೋಪುರವು ನಾಲ್ಕು ಹಂತವನ್ನು ಹೊಂದಿದ್ದು, ಶಾಲಾ ಶೈಲಿಯ ಶಿಖರವಿದೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಸ್ತೂಪಿಯನ್ನೊಳಗೊಂಡಿದೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದ್ದು, ದೇವಾಲಯದ ಗೋಪುರಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ.

ಗ್ರಾಮ : ಸಂಡೂರು	**ಅಭಿಮುಖ** : ಪೂರ್ವ
ಸ್ಥಳ : ಗ್ರಾಮದ ಪೂರ್ವಕ್ಕೆ	**ಶೈಲಿ** : ವಿಜಯನಗರೋತ್ತರ
ಸ್ಮಾರಕ : ವಿಠ್ಠೋಬನ ದೇವಾಲಯ	**ಸ್ಥಿತಿ** : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೪೪]	**ಪಂಥ** : ವೈಷ್ಣವ

ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ದ್ವಾರಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ವಿಠ್ಠಲನ

ವಿಗ್ರಹವಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ಗಣೇಶ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರನ್ನು ಕೆತ್ತಲಾಗಿದೆ. ವಿಠ್ಠಲನ ಮೂರ್ತಿಯೂ ಸಮಭಂಗಿಯಲ್ಲಿದ್ದು, ಸುತ್ತಲೂ ಪ್ರಭಾವಳಿ ಹಾಗೂ ಕೀರ್ತಿಮುಖಗಳನ್ನು ಹೊಂದಿದೆ.

ಅಂತರಾಳದ ಪಾರ್ಶ್ವಗಳಲ್ಲಿ ಎರಡು ಗರ್ಭಗೃಹಗಳಿವೆ. ಇವುಗಳಲ್ಲಿ ಒಂದರಲ್ಲಿ ಶಿವಲಿಂಗ ವಿಗ್ರಹ ಮತ್ತೊಂದು ಗರ್ಭಗೃಹದಲ್ಲಿ ಸೀತೆಯ ವಿಗ್ರಹಗಳಿವೆ. ಸಭಾಮಂಟಪದ ಉತ್ತರ ಹಾಗೂ ದಕ್ಷಿಣ ದಿಕ್ಕುಗಳಿಗೂ ಪ್ರವೇಶದ್ವಾರಗಳಿವೆ. ಇದರಲ್ಲಿರುವ ಕಂಬಗಳು ಚೌಕಾಕಾರವಾಗಿವೆ. ಮೇಲ್ಭಾಗದಲ್ಲಿ ವರ್ತುಲಾಕಾರವನ್ನು ಹೊಂದಿದ್ದು, ಅವುಗಳಲ್ಲಿ ಲಕ್ಷ್ಮೀನರಸಿಂಹ, ಲಜ್ಜೆಗೌರಿ ಮತ್ತು ಆಂಜನೇಯನ ಉಬ್ಬು ಶಿಲ್ಪಗಳಿವೆ. ಇದರ ಭುವನೇಶ್ವರದಲ್ಲಿ ಶಿವ, ಪಾರ್ವತಿ, ವಿಷ್ಣು ಇತ್ಯಾದಿ ಚಿತ್ರಗಳು ಕಂಡುಬರುತ್ತವೆ. ಸಭಾಮಂಟಪಕ್ಕೆ ಆನೆಗಳಿಂದ ಬಂಧಿತವಾದ ಸೋಪಾನಗಳನ್ನು ಜೋಡಿಸಲಾಗಿದೆ. ದ್ವಾರಮಂಟಪದ ಗೋಪುರವು ತುಂಬಾ ಎತ್ತರವಾಗಿದ್ದು, ಇದು ಇಟ್ಟಿಗೆ ಹಾಗೂ ಗಾರೆಗಳಿಂದ ನಿರ್ಮಿಸಲ್ಪಟ್ಟಿದೆ. ಇದು ಹಂಪಿಯ ವಿರೂಪಾಕ್ಷ ದೇವಾಲಯದ ದ್ವಾರಗೋಪುರವನ್ನು ಹೋಲುತ್ತದೆ. ಬೆಣಚು ಕಲ್ಲಿನಿಂದ ನಿರ್ಮಿತವಾಗಿರುವ ಈ ದೇವಾಲಯವನ್ನು ಪಾಂಡುರಂಗನ ಭಕ್ತಳಾದ ಗಂಗಮ್ಮ ಎಂಬಾಕೆ ಕಟ್ಟಿಸಿದಳೆಂದು ಪ್ರತೀತಿ ಇದೆ.

ಗ್ರಾಮ : ಬಂಡ್ರಿ	ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಒಳಗೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ಆಂಜನೇಯ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೪೯]	ಪಂಥ : ವೈಷ್ಣವ

ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಗರ್ಭಗೃಹ ಹಾಗೂ ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ. ಪ್ರಾಕಾರದ ಮುಂದಿನ ವಿಶಾಲವಾದ ಕಟ್ಟೆಯ ಮೇಲೆ ಸುಮಾರು ಐದು ಅಡಿ ಎತ್ತರದ ಶಿಲೆಗಳಲ್ಲಿ ವೀರರ ಉಬ್ಬುಶಿಲ್ಪಗಳಿವೆ. ಈ ಶಿಲ್ಪಗಳ ಆಧಾರದಿಂದ ಈ ದೇವಾಲಯವು ಪಾಳೆಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಗ್ರಾಮ : ಚೋರುನೂರು	ಅಭಿಮುಖ : ದಕ್ಷಿಣ
ಸ್ಥಳ : ಗ್ರಾಮದ ಒಳಗೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ಆಂಜನೇಯ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೪೬]	ಪಂಥ : ವೈಷ್ಣವ

ಚೋರುನೂರು ಗ್ರಾಮದ ಒಳಗೆ ಇರುವ ಆಂಜನೇಯನ ದೇವಾಲಯವು ಗರ್ಭಗೃಹ, ಸಭಾಮಂಟಪ, ಮುಖಮಂಟಪ, ಪ್ರಾಕಾರವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಆಂಜನೇಯನ ಮೂರ್ತಿ ಶಿಲ್ಪವಿದೆ. ಇದು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಪಾದಗೆಜ್ಜೆ, ಸೊಂಟಪಟ್ಟಿ, ಯಜ್ಞೋಪವಿತ ದೋತ್ರಧರಿಸಿದೆ. ಬಲಗೈ ಅಭಯ ಹಸ್ತವನ್ನೊಂದಿದ್ದು, ಎಡಗೈಯಲ್ಲಿ ಗಧಾ ಹಿಡಿದಿದೆ. ಗರ್ಭಗೃಹದ ದ್ವಾರಬಾಗಿಲ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಬಾಗಿಲವಾಡದ ಸುತ್ತ ಕುಂಬ ಲತಾ ಸುರುಳಿಗಳಿಂದ ಅಲಂಕೃತವಾಗಿದೆ.

ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಮೇಲೆ ಪುಷ್ಪ ಭುವನೇಶ್ವರಿ ಇದೆ. ಈ ಕಂಬಗಳು ಪೀಠ, ಪಾದ, ದಂಡ, ದಂಡಾಗ್ರ, ಬೋಧಿಗೆಗಳಿಂದ ಕೂಡಿದ್ದು ಸಾದಾ ಕೆತ್ತನೆಯಿಂದ ಕೂಡಿವೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಸಾದಾ ಕೆತ್ತನೆಯಿಂದ ಕೂಡಿದ್ದು, ಮುಂದಿನ ಎರಡು ಕಂಬಗಳಲ್ಲಿ ಮಾತ್ರ ಮೀನು, ನಾಗಗಳ ಉಬ್ಬು ಶಿಲ್ಪಗಳಿವೆ. ದೇವಾಲಯದ ಮೇಲ್ಛಾವಣಿ ಸಾದಾ ಕೆತ್ತನೆಯಿಂದ ಕೂಡಿದೆ. ಈ ದೇವಾಲಯವು ಎರಡುವರೆ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಸಿಂಹವಕ್ತ್ರ ಪ್ರಣಾಳಗಳಿಂದ ಕೂಡಿದ ಸೋಪಾನವಿದೆ. ದೇವಾಲಯದ ಪ್ರವೇಶದ್ವಾರದ ಎಡ ಭಾಗದಲ್ಲಿ ಒಂದು ಶಿಲೆಯಲ್ಲಿ ಶಾಸನವನ್ನು ಕೆತ್ತಲಾಗಿದೆ. ಅದು ಅಸ್ಪಷ್ಟವಾಗಿದೆ. ಈ ಪ್ರವೇಶದ್ವಾರದ ಬಾಗಿಲ ಲಲಾಟಬಿಂಬದ ಮೇಲೆ ಲಕ್ಷ್ಮೀಯ ಉಬ್ಬುಶಿಲ್ಪವಿದ್ದು, ಸ್ತ್ರೀಯರು ಚಾಮರ ಬೀಸುತ್ತಿದ್ದಾರೆ. ಇಲ್ಲಿಯೂ ಗಜವಕ್ತ್ರ ಪ್ರಣಾಳಗಳಿಂದ ಕೂಡಿದ ಸೋಪಾನವಿದ್ದು, ಈಗ ಅದು ನೆಲದಲ್ಲಿ ಸ್ವಲ್ಪ ಭಾಗ ಮುಚ್ಚಿ ಹೋಗಿದೆ. ಈ ಪ್ರವೇಶದ್ವಾರ ಬಾಗಿಲಲ್ಲಿ ಸ್ತ್ರೀಯರ ಉಬ್ಬುಶಿಲ್ಪಗಳು, ನವಿಲುಗಳಿದ್ದು, ಅವುಗಳಿಂದ ಹೊರಟ ಸುರುಳಿಗಳಿದ್ದು ಅದರಲ್ಲಿ ಗಿಳಿಗಳು, ಕುಳಿತಿರುವಂತೆ ಅಲಂಕಾರಿಕವಾಗಿ ಕಂಡರಿಸಲಾಗಿದೆ.

ದೇವಾಲಯದ ಎದುರುಗಡೆ ಸು.೧೦ ಅಡಿ ಉದ್ದವಾದ ಗರುಡಗಂಭವಿದೆ. ಅದರಲ್ಲಿ ಕೈಮುಗಿದು ನಿಂತಿರುವ ಒಬ್ಬ ಭಕ್ತನ ಉಬ್ಬುಶಿಲ್ಪವಿದೆ. ಇದು ಕಿರೀಟ, ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ದೋತ್ರ ಧರಿಸಿದೆ. ಗರುಡಗಂಭದ ಹಿಂದೆ ಗಜಲಕ್ಷ್ಮಿ ಶಿಲ್ಪವಿದೆ. ಇದು ಕೈ ಮುಗಿದು ಕುಳಿತು ಧ್ಯಾನಾಸಕ್ತವಾಗಿದ್ದ, ಇದು ಕರ್ಣಾಭರಣ, ಕೊರಳಾಭರಣ, ತೋಳಬಂಧಿ, ಕೈಗಡಗ ಧರಿಸಿರುವುದು. ಗರಡುಗಂಭದ ಹತ್ತಿರ ಪಾದಗಟ್ಟೆಗಳಿವೆ. ಈ ಗರುಡಗಂಭದ ಸು.೫ ಅಡಿ ಅಂತರದಲ್ಲಿ ಬುಡ್ಡೆಕಲ್ಲು, ಯಂತ್ರಕಲ್ಲು ಇವೆ. ಆದರೆ ಈಗ ಯಂತ್ರಕಲ್ಲು ಸವೆದಿವೆ. ಬುಡ್ಡೆಕಲ್ಲು ನೆಲದಲ್ಲಿ ಮುಚ್ಚಿಕೊಂಡು ಹೋಗಿದೆ. ಈ ದೇವಾಲಯದಿಂದ ಎಡಗಡೆಗೆ ಸ್ವಲ್ಪ ದೂರ ಹೋದರೆ ಅಲ್ಲಿ ಐದು ವೀರಗಲ್ಲು, ಮಾಸ್ತಿಕಲ್ಲುಗಳಿವೆ.

ಈ ದೇವಾಲಯದ ಬಲಪಕ್ಕದಲ್ಲಿ ಮತ್ತೊಂದು ಗರ್ಭಗೃಹವಿದ್ದು ಅದರಲ್ಲಿ ರಾಮ, ಸೀತ, ಲಕ್ಷ್ಮಣ, ಆಂಜನೇಯ, ಗರುಡ, ವಿನಾಯಕ ಹಾಗೂ ಈ ವಿಗ್ರಹಗಳ ಇಕ್ಕೆಲಗಳಲ್ಲಿ ಧ್ಯಾನಾಸಕ್ತರಾದ ಮುನಿಗಳು ಕೈಮುಗಿದು ಕುಳಿತಿವೆ. ರಾಮನ ಶಿಲ್ಪವು ಕಿರೀಟ, ಮುಕುಟ, ಕರ್ಣಾಭರಣ, ಕೊರಳಾಭರಣ, ಸೊಂಟಪಟ್ಟಿ, ಯಜ್ಞೋಪವಿತ, ತೋಳಬಂಧಿ, ಕೈಗಡಗ, ಕಾಲುಗಡಗ, ದೋತ್ರ ಧರಿಸಿದೆ. ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದೆ. ಪ್ರಭಾವಳಿಯನ್ನು ಹೊಂದಿದೆ. ಲಕ್ಷ್ಮಣನ ಶಿಲ್ಪವು ಕಿರೀಟ, ಮುಕುಟ, ಕರ್ಣಾಭರಣ, ಕೊರಳಾಭರಣ, ಸೊಂಟಪಟ್ಟಿ, ಯಜ್ಞೋಪವಿತ, ತೋಳಬಂಧಿ, ಕೈಗಡಗ, ಕಾಲುಗಡಗ, ದೊತ್ರ ಧರಿಸಿದೆ. ಬಲಗೈಯಲ್ಲಿ ಬಾಣವನ್ನು, ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದೆ. ಸುತ್ತಲು ಪ್ರಭಾವಳಿಯನ್ನು ಹೊಂದಿದೆ. ಸೀತೆಯ ವಿಗ್ರಹವು ಕಿರೀಟ, ಕೊರಳ ಹಾರಗಳು, ಕರ್ಣಾಭರಣಗಳು, ಸೀರೆ, ಕುಪ್ಪಸ, ಕಾಲುಗಡಗ, ಬಳೆ, ಕೈಗಡಗ, ತೋಳಬಂಧಿ, ಪಾದಗೆಜ್ಜೆ, ಸೊಂಟಪಟ್ಟಿ ಧರಿಸಿದೆ. ಬಲಗೈಯಲ್ಲಿ ತಾವರೆ ಮೊಗ್ಗನ್ನು ಹಿಡಿದಿದ್ದು ಎಡಗೈಯು ವರದ ಹಸ್ತದಲ್ಲಿದೆ. ಗರುಡನ ಶಿಲ್ಪವು ಕಿರೀಟ, ಮುಕುಟ, ಕರ್ಣಾಭರಣ, ತೋಳಬಂಧಿ, ಕೈಗಡಗ, ಕಾಲುಗಡಗ, ಯಜ್ಞೋಪವಿತ, ಸೊಂಟಪಟ್ಟಿ, ದೊತ್ರ ಧರಿಸಿದ್ದು ಸ್ಥಾನಿಕ ಶೈಲಿಯಲ್ಲಿದೆ. ಹನುಮಂತನ ಶಿಲ್ಪವು ಕರ್ಣಾಭರಣ, ಕೊರಳಹಾರ, ಯಜ್ಞೋಪವಿತ, ಕೈಗಡಗ, ಕಾಲುಗಡಗ, ತೋಳಬಂಧಿ, ಸೊಂಟಪಟ್ಟಿ ಧರಿಸಿದ್ದು ಸ್ಥಾನಿಕ ಆಸನದಲ್ಲಿದೆ. ಈ ಗರ್ಭಗೃಹದ ದ್ವಾರಬಾಗಿಲು ಸಾದಾ ಕೆತ್ತನೆಯಿಂದ ಕೂಡಿರುವುದು.

ಗ್ರಾಮ : ಆವಿನಮಡುಗು | **ಅಭಿಮುಖ : ಪೂರ್ವಾಭಿಮುಖ**

ಸ್ಥಳ : ಗ್ರಾಮದ ಹೊರಗೆ | **ಶೈಲಿ : ವಿಜಯನಗರೋತ್ತರ**

ಸ್ಮಾರಕ : ಆಂಜನೇಯ ದೇವಾಲಯ | **ಸ್ಥಿತಿ : ಮಧ್ಯಮ**

ಕಾಲ : ಕ್ರಿ.ಶ.ಸು.೧೭ನೆಯ ಶತಮಾನ | **ಪಂಥ : ವೈಷ್ಣವ**

ಈ ದೇವಾಲಯವು ವಿಠಲಾಪುರದ ಬಳಿ ಇರುವ ಆವಿನಮಡುಗಿಗೆ ಸೇರಿದ ಕೆರೆಯ ಎದುರಿಗಿದೆ. ಈ ದೇವಾಲಯವು ಗರ್ಭಗೃಹ, ಸಭಾಮಂಟಪ, ತೆರೆದ ಸಭಾಮಂಟಪವನ್ನೊಂದಿದೆ. ದೇವಾಲಯದ ಎದುರುಗಡೆ ಗರುಡಗಂಭವಿದೆ. ಸಭಾಮಂಟಪದಲ್ಲಿ ನಾಲ್ಕು ಸಾದಾ ಕೆತ್ತನೆಯ ಕಂಬಗಳಿವೆ. ತೆರೆದ ಮುಖಮಂಟಪದಲ್ಲಿ ಎರಡು ಸಾದಾ ಕೆತ್ತನೆಯ ಕಂಬಗಳಿವೆ. ಈ ದೇವಾಲಯ ಜಗತಿಯ ಮೇಲೆ ಇದೆ. ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಎಡಗಡೆ ಗರುಡನ ಶಿಲ್ಪವಿದೆ. ಬಲಗಡೆಯ ಭಿತ್ತಿಯಲ್ಲಿ ಶಿಲ್ಪ ಮುಕ್ಕಾಗಿದೆ. ಅದರ ಪಕ್ಕದಲ್ಲಿ ಮನುಷ್ಯ, ಮಧ್ಯ ಲಿಂಗದ ಉಬ್ಬುಶಿಲ್ಪವಿದೆ. ಪ್ರಸ್ತಾರದಲ್ಲಿ ಗಿಳಿಗಳ ಸಾಲುಗಳಿವೆ. ಮೇಲ್ಭಾವಣಿಯಲ್ಲಿ ಸಿಂಹ ವಾಹನಗಳಿವೆ. ತೆರೆದ ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿದೆ. ಈ ದೇವಾಲಯವು ಜಗತಿ, ಭಿತ್ತಿ, ಪ್ರಸ್ತಾರ, ಶಿಖರ, ಸ್ತೂಪಿಯನ್ನೊಂದಿದೆ. ಇದನ್ನು ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ. ಪಕ್ಕದಲ್ಲಿ ಮಂಟಪವಿದ್ದು ಅದರಲ್ಲಿ ಸಾದಾ ಕೆತ್ತನೆಯ ನಾಲ್ಕು ಕಂಬಗಳಿವೆ.

ಗ್ರಾಮ : ಬೊಮ್ಮಗಟ್ಟ | ಅಭಿಮುಖ : ಉತ್ತರ

ಸ್ಥಳ : ಗ್ರಾಮದ ಪೂರ್ವಕ್ಕೆ | ಶೈಲಿ : ವಿಜಯನಗರೋತ್ತರ

ಸ್ಮಾರಕ : ಮುದ್ದೇಲಪ್ಪ ದೇವಾಲಯ | ಸ್ಥಿತಿ : ಮಧ್ಯಮ

ಕಾಲ : ಕ್ರಿ.ಶ.ಸು.೧೭ನೆಯ ಶತಮಾನ[೪೭] | ಪಂಥ : ವೈಷ್ಣವ

ಈ ದೇವಾಲಯವು ವಿಶಾಲವಾದ ಪ್ರಾಕಾರದ ಮಧ್ಯ ಎತ್ತರದ ಜಗತಿಯ ಮೇಲೆ ಗರ್ಭಗೃಹ ಮಾತ್ರ ಇರುವುದು. ಗರ್ಭಗೃಹ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ವೀರರ ಉಬ್ಬು ಕೆತ್ತನೆಗಳಿವೆ. ಇದರ ಮಧ್ಯದಲ್ಲಿ ಸುಮಾರು ಮೂರು ಅಡಿ ಎತ್ತರದ ವೀರಗಲ್ಲಿದೆ. ಪಾಳೆಗಾರರ ಅವಧಿಯಲ್ಲಿ ಮುದ್ದೇಲಪ್ಪ ಎಂಬುವನು ಹುಲಿಕುಂಟೇಶ್ವರ ದೇವಾಲಯದಲ್ಲಿ ಪೂಜಾರಿಯಾಗಿದ್ದ ಎಂದು ಅದಕ್ಕೆ ಅವನ ಹೆಸರಿನಲ್ಲಿ ಈ ದೇವಾಲಯವು ನಿರ್ಮಾಣವಾಯಿತೆಂಬ ಹೇಳಿಕೆಗಳಿವೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ.

ಗ್ರಾಮ : ಸಂಡೂರು | ಅಭಿಮುಖ : ಪಶ್ಚಿಮ

ಸ್ಥಳ : ಗ್ರಾಮದ ಹೊರಗೆ | ಶೈಲಿ : ವಿಜಯನಗರೋತ್ತರ

ಸ್ಮಾರಕ : ಆಂಜನೇಯ ದೇವಾಲಯ | ಸ್ಥಿತಿ : ಉತ್ತಮ

ಕಾಲ : ಕ್ರಿ.ಶ.ಸು.೧೭ನೆಯ ಶತಮಾನ | ಪಂಥ : ವೈಷ್ಣವ

ಈ ದೇವಾಲಯವು ಗರ್ಭಗೃಹ ಹಾಗೂ ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದೆ. ಮುಖಮಂಟಪದಲ್ಲಿ ೧೨ ಕಂಬಗಳಿವೆ. ಪ್ರದಕ್ಷಿಣ ಪಥವನ್ನೊಳಗೊಂಡಿದೆ. ವಿಶಾಲವಾದ ಪ್ರಾಕಾರವನ್ನೊಳಗೊಂಡಿದ್ದು ಗರ್ಭಗೃಹದಲ್ಲಿ ಆಂಜನೇಯನ ವಿಗ್ರಹವಿರುವುದು.

ಗ್ರಾಮ : ಕೃಷ್ಣಾನಗರ ವ್ಯಾಪ್ತಿಗೆ ಬರುತ್ತದೆ | ಅಭಿಮುಖ : ದಕ್ಷಿಣ

ಸ್ಥಳ : ಭೀಮತೀರ್ಥ | ಶೈಲಿ : ವಿಜಯನಗರೋತ್ತರ

ಸ್ಮಾರಕ : ಆಂಜನೇಯ ದೇವಾಲಯ | ಸ್ಥಿತಿ : ಕನಿಷ್ಠ

ಕಾಲ : ಕ್ರಿ.ಶ.ಸು.೧೭ನೆಯ ಶತಮಾನ | ಪಂಥ : ವೈಷ್ಣವ

ಈ ದೇವಾಲಯವು ಸಂಡೂರಿನಿಂದ ಸು.೫ ಕಿ.ಮೀ. ಅಂತರದಲ್ಲಿದೆ. ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಎಡಗಡೆಗೆ ಸು.೩.ಕಿ.ಮೀ.ಬೆಟ್ಟದ ಒಳಗೆ ಹೋದರೆ ಈ ದೇವಾಲಯ ಕಾಣಸಿಗುತ್ತದೆ. ಈ ದೇವಾಲಯವು ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಕಟ್ಟಲ್ಪಟ್ಟಿದ್ದಾಗಿದೆ. ಇದು ಗರ್ಭಗುಡಿಯನ್ನೊಂದೆ ಹೊಂದಿದ್ದು, ಪ್ರವೇಶದ್ವಾರವು ಸೋಪಾನವನ್ನೊಳಗೊಂಡಿದೆ. ದ್ವಾರಬಾಗಿಲ ಮೇಲೆ ಗಜಲಕ್ಷ್ಮಿ ಶಿಲ್ಪವಿದ್ದು, ಸುತ್ತಲು ಲತಾಸುರುಳಿಗಳಿವೆ. ಗರ್ಭಗೃಹದ ಮೇಲೆ ಶಿಲ್ಪ ರಹಿತ ಭುವನೇಶ್ವರಿಯಿರುವುದು.

ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಗೋಪುರವನ್ನೊಳಗೊಂಡಿದೆ. ಗೋಪುರದಲ್ಲಿ ದೇವಕೋಷ್ಠಗಳಿದ್ದು, ಅವುಗಳಲ್ಲಿ ಶಿಲ್ಪಗಳಿದ್ದು ಕೆಲವು ಹಾಳಾಗಿವೆ. ಮತ್ತೆ ಕೆಲವು ಶಿಲ್ಪಗಳು ಸವೆದಿವೆ. ಈ ದೇವಾಲಯದ ಗರ್ಭಗೃಹದಲ್ಲಿ ಆಂಜನೇಯನ ಮೂರ್ತಿ ಶಿಲ್ಪವಿದ್ದು ಅದು ಇತ್ತೀಚಿನದಾಗಿದೆ. ಆದರೆ ಈ ದೇವಾಲಯ ಮಾತ್ರ ಪ್ರಾಚೀನವಾದುದಾಗಿದೆ. ಹಾಗೂ ಈ ದೇವಾಲಯ ಹಾಳಾದಾಗ ಪುನಃ ಇದನ್ನು ಬೆಣಚು ಶಿಲೆಯಿಂದ ಜೀರ್ಣೋದ್ಧಾರಗೊಳಿಸಿದಂತೆ ಕಾಣುತ್ತದೆ. ಈ ಮಾದರಿಯ ಮತ್ತೊಂದು ಇಲ್ಲಿಂದ ಸುಮಾರು ೮-೯, ಕಿ.ಮೀ. ಅಂತರದಲ್ಲಿರುವ ಹರಿಶಂಕರ ದೇವಾಲಯವಿರುವುದನ್ನು ಕಾಣುತ್ತೇವೆ. ಇದು ಸಹ ಭೀಮತೀರ್ಥದ ಹನುಮಂತ ದೇವಾಲಯದ ಶೈಲಿಯಲ್ಲಿಯೇ ನಿರ್ಮಿಸಲ್ಪಟ್ಟಿದೆ. ಈ ಹರಿಶಂಕರ ತೀರ್ಥದಲ್ಲಿಯೂ ಸಹ ಒಂದೇ ಗರ್ಭಗೃಹವಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಶೈಲಿಯಲ್ಲಿ ನಿರ್ಮಿಸಲ್ಪಟ್ಟ ಈಶ್ವರ ದೇವಾಲಯವಿದೆ. ಈ ಎರಡೂ ದೇವಾಲಯಗಳು ಒಂದೇ ಕಾಲದಲ್ಲಿ ನಿರ್ಮಿಸಲ್ಪಟ್ಟಿರಬಹುದೆಂದು ಊಹಿಸಬಹುದಾಗಿದೆ. ಆದರೆ ಈ ಭೀಮತೀರ್ಥದ ಹನುಮಂತನ ದೇವಾಲಯವು ಹರಿಶಂಕರ ದೇವಾಲಯದಷ್ಟು ಉತ್ತಮ ಸ್ಥಿತಿಯಲ್ಲಿ ಇಲ್ಲ. ಈ ಭೀಮತೀರ್ಥದಲ್ಲಿ ಹನುಮಂತನ ದೇವಾಲಯ ಅಷ್ಟೇ ಅಲ್ಲದೆ ಈ ದೇವಾಲಯದ ಆವರಣದಲ್ಲಿ ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟ ಅನೇಕ ಮೂರ್ತಿ ಶಿಲ್ಪಗಳಿವೆ. ಕಪ್ಪು ಶಿಲೆಯಲ್ಲಿ ಮಾಡಿದ ಬಸವಣ್ಣನ ವಿಗ್ರಹ, ಊರ್ಧ್ವ ಪೀಠಲಿಂಗ, ಅದರ ಪಕ್ಕದಲ್ಲಿ ಲಿಂಗ ರಹಿತ ಎರಡು ಊರ್ಧ್ವ ಪೀಠಗಳಿವೆ. ಆದರೆ ಒಂದು ಲಿಂಗರಹಿತ ಊರ್ಧ್ವಪೀಠದಲ್ಲಿ ತುಂಬಾ ಚಿಕ್ಕದಾಗಿ ಕೆತ್ತಲ್ಪಟ್ಟ ಏಳು ಕುದುರೆಗಳಿದ್ದು, ಒಬ್ಬ ಸಾರಥಿ ಇರುವಂತೆ ಕೆತ್ತಲ್ಪಟ್ಟಿರುವ ಸೂರ್ಯಪೀಠವಿದೆ. ಹಾಗೂ ಅದರ ಪಕ್ಕದಲ್ಲಿ ಬೆಣಚು ಶಿಲೆಯಲ್ಲಿ ಮಾಡಿದ ಒಂದು ಲಿಂಗವಿದೆ. ಅದರ ಪಕ್ಕದಲ್ಲಿ ಮತ್ತೊಂದು ಕಪ್ಪು ಶಿಲೆಯಲ್ಲಿ ಮಾಡಿದ ಲಿಂಗರಹಿತ ಊರ್ಧ್ವ ಪೀಠವಿದೆ. ಈ ದೇವಾಲಯದ ಆವರಣದಲ್ಲಿ ಹಿಂದೆ ಇನ್ನೂ ಅನೇಕ ಮೂರ್ತಿಶಿಲ್ಪಗಳಿದ್ದ ಬಗ್ಗೆ ತಿಳಿದು ಬರುತ್ತದೆ. ಆದರೆ ಈಗ ಇಲ್ಲಿನ ಕೆಲವು ವಿಗ್ರಹಗಳನ್ನು ಇಲ್ಲಿಂದ ಬೇರೆ ಸ್ಥಳಗಳಿಗೆ ತೆಗೆದುಕೊಂಡು ಹೋಗಲಾಗಿದೆ. ಹಾಗೂ ಕೆಲವು ವಿಗ್ರಹಗಳು ಜನರ ಅಜ್ಞಾನದಿಂದ ನಾಶಗೊಳಿಸಲ್ಪಟ್ಟಿವೆ.

ಅದೇ ದೇವಾಲಯದ ಆವರಣದಲ್ಲಿ ಒಂದೇ ಕಪ್ಪು ಶಿಲೆಯಲ್ಲಿ ಮಾಡಿದ ಪಾದಗಳಿವೆ. ಅವನ್ನು ಕುಮಾರಸ್ವಾಮಿ ಪಾದ ಎಂದು ಸ್ಥಳೀಯರು ಹೇಳುತ್ತಾರೆ. ಈ ಪಾದವನ್ನು ಸುತ್ತುವರಿದ ಮೂರು ಹೆಡೆಯ ಸರ್ಪವಿದೆ. ಅದರಲ್ಲಿಯೇ ಒಬ್ಬ ವ್ಯಕ್ತಿಯ ಪುಟ್ಟ ಶಿಲ್ಪವಿರುವುದು. ಈಗ ಅದರ ಶಿರ ತುಂಡಾಗಿದೆ. ಮತ್ತು ಅದರಲ್ಲಿಯೇ ಟಗರಿನ ಶಿಲ್ಪವಿದ್ದು, ಅದರ ರುಂಡ ಒಂದು ಕಡೆ ದೇಹ ಮತ್ತೊಂದು ಕಡೆ ಬಿದ್ದಿರುವಂತೆ ಕೆತ್ತಲಾಗಿದೆ. ಹಾಗೂ ಅದರಲ್ಲಿಯೇ ಒಬ್ಬ ನಾಗಕನ್ನೆಯ ಒಂದೇ ತಲೆಯನ್ನು ಕೆತ್ತಲಾಗಿದೆ. ಆದರ ಪಕ್ಕದಲ್ಲಿಯೇ ಬೆಣಚು ಶಿಲೆಯಲ್ಲಿ ಕೆತ್ತಲ್ಪಟ್ಟ ಜೋಡಿ ನಾಗಶಿಲ್ಪವಿದೆ. ಹಾಗೂ ಲಿಂಗ, ಸೂರ್ಯ, ಚಂದ್ರರ ಶಿಲ್ಪಗಳಿವೆ. ಇಲ್ಲಿ ಇರುವ ಎಲ್ಲಾ ಶಿಲ್ಪಗಳನ್ನು ಗಮನಿಸಿದರೆ ಈ ಎಲ್ಲಾ ಶಿಲ್ಪಗಳು

ಒಂದೇ ಕಾಲಕ್ಕೆ ಸೇರಿದವುಗಳಾಗಿರದೆ ಬೇರೆ ಬೇರೆ ಅರಸರ ಆಳ್ವಿಕೆಯ ಅವಧಿಯಲ್ಲಿ ಮಾಡಿಸಲ್ಪಟ್ಟವುಗಳಾಗಿವೆ ಎಂಬುದು ಶಿಲ್ಪಗಳ ಶೈಲಿ ಶಿಲೆಯ ಬಳಕೆಯಿಂದ ಸ್ಪಷ್ಟವಾಗುತ್ತದೆ. ಇದೇ ದೇವಾಲಯದ ಆವರಣದಲ್ಲಿ ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಅವು ಈ ಕೆಳಗಿನಂತೆ ಇವೆ :

ಕೋಣ ವಾಹನದ ಮೇಲೆ ಕುಳಿತ ಯಮನ ವಿಗ್ರಹ, ಶರಭ ವಾಹನದ ಮೇಲೆ ಕುಳಿತ ವರುಣ, ಆನೆಯ ವಾಹನದ ಮೇಲೆ ಕುಳಿತ ಇಂದ್ರ, ಟಗರಿನ ವಾಹನದ ಮೇಲೆ ಕುಳಿತ ಅಗ್ನಿ, ಚಿಗರೆಯ ವಾಹನದ ಮೇಲೆ ಕುಳಿತ ವಾಯುವ್ಯ, ನಂದಿಯ ವಾಹನದ ಮೇಲೆ ಕುಳಿತ ಈಶಾನ್ಯ, ಮನುಷ್ಯನ ಮೇಲೆ ಕುಳಿತ ನೈರುತ್ಯ, ಕುದುರೆಯ ಮೇಲೆ ಕುಳಿತ ಕುಬೇರ, ಒಟ್ಟು ಎಂಟು ಅಷ್ಟ ದಿಕ್ಪಾಲಕರ, ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟ ಮೂರ್ತಿ ಶಿಲ್ಪಗಳಿವೆ. ಇವು ವಿಜಯನಗರ ಶೈಲಿಯಲ್ಲಿವೆ.

ಗ್ರಾಮ : ದೋಣಿಮಲೈ ಕ್ರಾಸ್ ಬಳಿ	ಅಭಿಮುಖ : ದಕ್ಷಿಣ
ಸ್ಥಳ : ತಿಮ್ಮಪ್ಪನ ಬೆಟ್ಟ	ಶೈಲಿ : ವಿಜಯನಗರೋತ್ತರ
ಸ್ಮಾರಕ : ತಿಮ್ಮಪ್ಪನ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೭ನೆಯ ಶತಮಾನ	ಪಂಥ : ವೈಷ್ಣವ

ಈ ದೇವಾಲಯವು ದೋಣಿಮಲೈ ಕ್ರಾಸ್‌ನಿಂದ ೧೦.ಕಿ.ಮೀ. ಬೆಟ್ಟದ ಮೇಲೆ ಇದೆ. ಇದು ಗರ್ಭಗೃಹ, ಅಂತರಾಳ, ಮುಖಮಂಟಪವನ್ನೊಂದಿದೆ. ಅಂತರಾಳದಲ್ಲಿ ಎರಡು ಕಂಬಗಳು ಮುಖಮಂಟಪದಲ್ಲಿ ಎರಡು ಕಂಬಗಳಿವೆ. ತಿಮ್ಮಪ್ಪನ ವಿಗ್ರಹವು ಕಲ್ಲಿನಲ್ಲಿ ಉದ್ಭವವಾದ ಮೂರ್ತಿಯಾಗಿದೆ. ಇದು ಬೆಳ್ಳಿಯ ಮುಖವಾಡ ಹೊಂದಿದ್ದು ಏಳು ಎಡೆ ಸರ್ಪವನ್ನು, ಕೀರ್ತಿಮುಖವನ್ನು ಹಾಗೂ ಒಂಭತ್ತು ಕೊಡೆಗಳನ್ನು ಹೊಂದಿದೆ. ಈ ದೇವಾಲಯವನ್ನು ಈಗ ಜೀರ್ಣೋದ್ಧಾರಗೊಳಿಸಲಾಗಿರು ವುದು. ಇದು ಅಧಿಷ್ಠಾನ. ಭಿತ್ತಿ, ಪ್ರಸ್ತಾರ, ಗೋಪುರ, ಶಿಖರ, ಸ್ತೂಪಿಯನ್ನು ಹೊಂದಿದ್ದು ಗೋಪುರದಲ್ಲಿ ಗೋಪಾಲಕೃಷ್ಣ, ಗರುಡ, ಹನುಮಂತ, ರಾಮಲಕ್ಷ್ಮಣ, ನರಸಿಂಹ ಇತ್ಯಾದಿ ವೈಷ್ಣವ ಶಿಲ್ಪಗಳು ಹಾಗೂ ಸಿಂಹ ವಾಹನಗಳಿವೆ. ಶಿಖರ ತೆರೆದ ಪದ್ಮಗಳಿಂದ ಅಲಂಕೃತವಾಗಿದೆ.

ಗ್ರಾಮ : ಮೆಟ್ರಿಕಿ	ಅಭಿಮುಖ : ಉತ್ತರ
ಸ್ಥಳ : ಗ್ರಾಮದ ಒಳಗೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ರಾಮಸ್ವಾಮಿ ದೇವಾಲಯ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ.ಸು.೧೮ ನೆಯ ಶತಮಾನ	ಪಂಥ : ವೈಷ್ಣವ

ಮೆಟ್ರಿಕಿ ಗ್ರಾಮದ ಒಳಗೆ ಇರುವ ರಾಮಸ್ವಾಮಿ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹವನ್ನು ಮಾತ್ರ ಹೊಂದಿದೆ. ಈ ಗರ್ಭಗೃಹವು ಒಂದು ಕುಟೀರ ಮಾದರಿಯಲ್ಲಿದೆ. ಅಂದರೆ ಸುತ್ತಲು ಗೋಡೆಯಿದ್ದು, ಮೇಲ್ಛಾವಣಿ ಮಾತ್ರ ಗುಡಿಸಲಿಗೆ ಹಾಕಿರುವಂತೆ ಹುಲ್ಲಿನ ಒದಿಕೆಯನ್ನು

ಹಾಕಲಾಗಿದೆ. ಸುತ್ತಲೂ ಪೌಳಿ ಅಂದರೆ ಪ್ರಾಕಾರವಿದೆ. ಈ ಗರ್ಭಗೃಹದಲ್ಲಿ ರಾಮಸ್ವಾಮಿಯ (ಕುಮಾರರಾಮನ?) ಶಿರ ಮಾತ್ರ ಇದೆ.

ಗ್ರಾಮ : ಮೆಟ್ರಿಕಿ	ಅಭಿಮುಖ : ಪೂರ್ವ
ಸ್ಥಳ : ಊರ ಹೊರಗೆ	ಶೈಲಿ : ವಿಜಯನಗರೋತ್ತರ
ಸ್ಮಾರಕ : ರಾಮಸ್ವಾಮಿಯ ತಂದೆ-ತಾಯಿ ದೇವಾಲಯ	ಸ್ಥಿತಿ : ಉತ್ತಮ
ಕಾಲ : ಕ್ರಿ.ಶ.ಸು.೧೮ನೆಯ ಶತಮಾನ	ಪಂಥ : ವೈಷ್ಣವ

ಮೆಟ್ರಿಕಿ ಗ್ರಾಮದ ಹೊರಗೆ ಅಂದರೆ ವಿಠಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಕುಮಾರರಾಮನ ತಂದೆ-ತಾಯಿಯಾದ ಕಂಪಿಲರಾಯ, ಹರಿಯಾಲದೇವಿಯರ ದೇವಾಲಯವೆಂದು ಸ್ಥಳೀಯರು ಪರಿಚಯಿಸುವ ವೀರಮಾಸ್ತಿಯ ಕಲ್ಲನ್ನು ಹೊಂದಿದ ದೇವಾಲಯವಿದೆ. ಇದು ಗರ್ಭಗೃಹ ತೆರೆದ ಸಭಾಮಂಟಪವನ್ನೊಂದಿದೆ. ಗರ್ಭಗೃಹದಲ್ಲಿ ಇಬ್ಬರು ಶಸ್ತ್ರಧಾರಿಗಳಾದ ಕುದುರೆ ಸವಾರಿ ಮಾಡುತ್ತಿರುವ ವೀರರ ಶಿಲ್ಪಗಳ ಮಧ್ಯ ಹರಿಯಾಲದೇವಿ ಎಂದು ಹೇಳುವ ಸ್ತ್ರೀ ವಿಗ್ರಹವಿದೆ. ಇದರ ಬಲಗೈಯು ಅಭಯ ಹಸ್ತದಲ್ಲಿದ್ದು ಎಡಗೈಯು ವರದ ಮುದ್ರೆಯಲ್ಲಿದೆ. ತಲೆಯಲ್ಲಿ ತುರುಬು ಕಟ್ಟಿದ್ದು, ಕೊರಳಹಾರ, ಕರ್ಣಾಭರಣ, ಸೊಂಟಪಟ್ಟಿ, ಬಳೆ, ಮೂಗುತಿ, ಸೀರೆ, ಕುಪ್ಪಸ ಧರಿಸಿದ್ದಾಳೆ. ಸ್ಥಳೀಯರ ಹೇಳಿಕೆಯಂತೆ ರಾಮಸ್ವಾಮಿಯ (ಕುಮಾರರಾಮನ?) ತಂದೆ ತಾಯಿಯ ದೇವಾಲಯ ಎಂಬಂತೆ, ಇಲ್ಲಿ ತಂದೆ ತಾಯಿಯ ಶಿಲ್ಪವಷ್ಟೆ ಅಲ್ಲದೆ ಇವರ ಜೊತೆ ಮತ್ತೊಬ್ಬ ಪುರುಷನ ಶಿಲ್ಪವಿರುವುದನ್ನು ಕಾಣುತ್ತೇವೆ. ಬಹುಶಃ ಈ ಇಬ್ಬರು ವೀರರಲ್ಲಿ ಒಬ್ಬ ವೀರನು ಕಂಪಿಲರಾಯ ಹಾಗೂ ಮತ್ತೊಬ್ಬ ವೀರ ಬೈಚಪ್ಪನಾಯಕ ಅವರ ಜೊತೆಗೆ ಹರಿಯಾಲದೇವಿ ಹೀಗೆ ಈ ಮೂವರ ಶಿಲ್ಪಗಳು ಇವು ಆಗಿರಬೇಕು ಎಂದು ಊಹಿಸಬಹುದಾಗಿದೆ.

ಈ ಇಬ್ಬರು ವೀರರು ಕರ್ಣಾಭರಣ, ಕೊರಳಾಭರಣ, ಸೊಂಟಪಟ್ಟಿ ದೊತ್ರಧರಿಸಿದ್ದಾರೆ. ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಭರ್ಜಿಯನ್ನು ಸೊಂಟದಲ್ಲಿ ಕಿರುಗತ್ತಿಯನ್ನು ಹಿಟ್ಟುಕೊಂಡಿದ್ದಾರೆ. ಕುದುರೆಯ ಜೂಲದಲ್ಲಿಯೂ ಖಡ್ಗವಿದ್ದು ಅಕ್ಕಪಕ್ಕದಲ್ಲಿ ಚಿಕ್ಕದಾಗಿ ಕಾಣಿಸುವ ಸೈನಿಕರು ಆಯುಧಗಳನ್ನು ಹೊಂದಿದ್ದಾರೆ. ಪಕ್ಕದಲ್ಲಿ ನಾಯಿ ಶಿಲ್ಪವಿದೆ. ಒಂದೇ ಶಿಲೆಯಲ್ಲಿ ಆಯುಧ ಧಾರಿಯಾದ ವೀರ, ಸೈನಿಕ ಹಾಗೂ ನಾಯಿಯ ಶಿಲ್ಪಗಳನ್ನು ಕಂಡರಿಸಿರುವುದನ್ನು ಗಮನಿಸಿದರೆ, ಬೇಟೆಗೆ ಹೊರಟಂತಹ ಸಂದರ್ಭವನ್ನು ಈ ಶಿಲೆಯಲ್ಲಿ ಕೆತ್ತಿದಂತೆ ತಿಳಿಯುತ್ತದೆ. ತೆರೆದ ಸಭಾಮಂಟಪದಲ್ಲಿ ಎರಡು ಸಾದಾ ಕೆತ್ತನೆಯ ಕಂಬಗಳಿವೆ. ಈ ದೇವಾಲಯವು ಒಂದುವರೆ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಪ್ರಾಕಾರವನ್ನೊಳಗೊಂಡಿದ್ದು, ಅದು ಪಾಳು ಬಿದ್ದಿದೆ. ಈ ದೇವಾಲಯ ಜಗತಿ, ಭಿತ್ತಿ, ಸಾದಾ ಮೇಲ್ಛಾವಣಿಯನ್ನು ಹೊಂದಿದೆ. ತೆರೆದ ಸಭಾಮಂಟಪಕ್ಕೆ ಹೊಂದಿಕೊಂಡು ಸೋಪಾನವಿದೆ. ಪ್ರವೇಶದ್ವಾರದ ಮೇಲ್ಛಾವಣಿಯಲ್ಲಿ ಸುಖನಾಸವಿದೆ. ಅದರಲ್ಲಿಯ ಶಿಲ್ಪಗಳು ಸವೆದಿವೆ. ನಂದಿ ವಾಹನಗಳಿವೆ. ದೇವಾಲಯದ

ಎದುರುಗಡೆ ಗರುಡಗಂಭವಿದೆ. ಅಲ್ಲಿ ಕುದುರೆ ಸವಾರರ ಪುಟ್ಟ ಪುಟ್ಟ ಶಿಲ್ಪಗಳಿದ್ದು, ಪ್ರಾಕಾರದಲ್ಲಿ ನಾಗಶಿಲ್ಪಗಳಿವೆ.

೪.೧.೩. ಮಸೀದಿಗಳು

ಸಂಡೂರು ತಾಲೂಕಿನಲ್ಲಿ ಇಸ್ಲಾಂ ಪಂಥಕ್ಕೆ ಸೇರಿದ ಪ್ರಾಚೀನ ಅಥವಾ ಮಧ್ಯಕಾಲೀನ ಮಸೀದಿಗಳು ಕಂಡು ಬರದಿದ್ದರೂ ಕ್ರಿ.ಶ.೧೮ನೆಯ ಶತಮಾನದ ಟಿಪ್ಪುಸುಲ್ತಾನನ ಅವಧಿಯದು ಎಂದು ಹೇಳುವ ಒಂದು ಮಸೀದಿ ಮಾತ್ರ ಕಾಣಸಿಗುತ್ತದೆ. ಅದನ್ನು ಹೊರತು ಪಡಿಸಿದರೆ ಬಹುತೇಕ ಈ ತಾಲೂಕಿನ ಅನೇಕ ಮಸೀದಿಗಳು ಇತ್ತೀಚಿನವುಗಳಾಗಿವೆ. ಆದ್ದರಿಂದ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಕೇವಲ ೧೮.ನೇ.ಶತಮಾನದ ಒಂದು ಮಸೀದಿಯನ್ನು ಹಾಗೂ ಇತ್ತೀಚಿನ ಐತಿಹಾಸಿಕ ಮಹತ್ವವನ್ನು ಹೊಂದಿದ ಒಂದು ಮಸೀದಿಯ ಕುರಿತು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಗ್ರಾಮ : ಹಳೆದರೋಜಿ	**ಅಭಿಮುಖ : ದಕ್ಷಿಣ**
ಸ್ಥಳ : ಗ್ರಾಮದ ಹೊರಗೆ	**ಶೈಲಿ : ಇಂಡೋಸಾರ್‌ಸೇನಿಕ್**
ಸ್ಮಾರಕ : ಪಾಳುಬಿದ್ದ ಮಸೀದಿ	**ಸ್ಥಿತಿ : ಕನಿಷ್ಠ**
ಕಾಲ : ಕ್ರಿ.ಶ.೧೮ನೇ ಶತಮಾನ	**ಪಂಥ : ಇಸ್ಲಾಂ**

ಹಳೆದರೋಜಿಯ ಗ್ರಾಮದ ಹೊರಗೆ ಸಂಪೂರ್ಣವಾಗಿ ಪಾಳು ಬಿದ್ದಿರುವ ಮಸೀದಿ ಇದ್ದು ಅದರಲ್ಲಿ ಅರಬೀಕ್ ಹಾಗೂ ಪರ್ಶಿಯನ್ ಭಾಷೆಯ ಎರಡು ಶಾಸನಗಳಿವೆ. ಈ ಮಸೀದಿ ಇರುವ ಸ್ಥಳವನ್ನು ಹಿಂದೆ ಆನೆ ಮತ್ತು ಕುದುರೆಗಳ ಬಜಾರ ಎಂದು ಕರೆಯುತ್ತಿದ್ದರು ಎಂದು ಸ್ಥಳೀಯರು ಹೇಳುತ್ತಾರೆ. ಇದು ಬಹುಶಃ ಟಿಪ್ಪುಸುಲ್ತಾನನ ಅವಧಿಯಲ್ಲಿ ನಿರ್ಮಿಸಲ್ಪಟ್ಟಂತೆ ತಿಳಿದುಬರುತ್ತದೆ.

ಗ್ರಾಮ : ದೋಣಿಮಲೈ ಕ್ರಾಸ್ ಬಳಿ	**ಅಭಿಮುಖ : ಪೂರ್ವ**
ಸ್ಥಳ : ದೋಣಿಮಲೈ ಕ್ರಾಸ್	**ಶೈಲಿ : ಇತ್ತೀಚಿನದು**
ಸ್ಮಾರಕ : ಹಜ್ರತ್ ಸಯ್ಯದ್ ಬಾಬಾ ಫಕೃದ್ದೀನ್ ದರ್ಗಾ	**ಸ್ಥಿತಿ : ಉತ್ತಮ**
ಕಾಲ : ಇತ್ತೀಚಿನದು	**ಪಂಥ : ಇಸ್ಲಾಂ**

ಈ ದೇವಾಲಯವು ದೋಣಿಮಲೈ ಕ್ರಾಸ್‌ನ ಬಳಿ ಇದೆ. ಇದು ಹಿಂದು ಮುಸ್ಲಿಂ ಜನಾಂಗದ ಆರಾಧನ ಸ್ಥಳ, ಹಜ್ರತ್ ಸಯ್ಯದ್ ಬಾಬಾ ಫಕೃದ್ದೀನ್ ಅವರ ದರ್ಗಾ. ಈ ದರ್ಗಾದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ನಮಗೆ ತಿಳಿಯದಿದ್ದರೂ, ಅದೆಷ್ಟೋ ಸುಮಾರು ವರ್ಷಗಳಿಂದ (ಸು. ಇನ್ನೂರು-ಮೂನ್ನೂರು ವರ್ಷ) ಇಲ್ಲಿ ಫಾತೆಹ ಮತ್ತು ಪೂಜೆ ಜೊತೆ-ಜೊತೆಯಾಗಿಯೆ ನಡೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಇಲ್ಲಿ ವರ್ಷಕ್ಕೊಮ್ಮೆ ಉರುಸು(ಜಾತ್ರೆ) ಕೂಡ ನಡೆಯುತ್ತದೆ.

ಹಜ್ರತ್ ಬಾಬಾ ಫಕ್ರುದ್ದೀನ್‌ರವರ ಇತಿಹಾಸವನ್ನು ಗಮನಿಸಿದಾಗ ಅವರು ಮೂಲತಃ ಬಲೂಚಿಸ್ಥಾನದ ರಾಜಮನೆತನಕ್ಕೆ ಸೇರಿದ ವ್ಯಕ್ತಿ ಎಂದು ತಿಳಿದುಬರುತ್ತದೆ. ಇವರು ಬಾಲ್ಯದಿಂದಲೇ ಅರಬ್ಬಿ, ಫಾರ್ಸಿ, ಉರ್ದು ಸಾಹಿತ್ಯದಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದವರಾಗಿದ್ದರು. ತಂದೆಯವರ ಮೇಲ್ವಿಚಾರಣೆಯಲ್ಲಿ ಆಡಳಿತ, ಯುದ್ಧ ಕೌಶಲ್ಯ ಮಾತ್ರವಲ್ಲದೇ ಧಾರ್ಮಿಕ ಮನೋಭಾವನೆಗಳನ್ನು ಬೆಳೆಸಿಕೊಂಡಿದ್ದರು. ಖುರಾನ್ ಅಭ್ಯಾಸದಲ್ಲಿ ಅಪಾರವಾದ ಆಸಕ್ತಿ ಹೊಂದಿದ್ದ ಇವರಿಗೆ ಚಿಂತನೆ ಮಾಡುವ ಗುಣ ಚಿಕ್ಕಂದಿನಿಂದಲೇ ಬಂದಿತ್ತು. ಅವರ ಜೀವನದಲ್ಲಿ ಪ್ರವಾದಿ ಮಹಮ್ಮದ್‌ರವರ ವಚನಗಳು ಅವರಿಗೆ ಸ್ಫೂರ್ತಿ ನೀಡಿದವು. "ನತ್ತರ್ ವಲಿ" ಎಂಬ ಗುರುಗಳ ದೀಕ್ಷೆಯಲ್ಲಿ ಬಾಬಾರವರು ವಿದ್ಯಾಭ್ಯಾಸ ಮುಂದುವರೆಸಿದರು. ಮುಂದೆ ಗುರುಗಳ ಆದೇಶದಂತೆ ಹಿಂದ್‌ಗೆ (ಭಾರತ) ಬಂದರು. ಅದೇ ನಿನ್ನ ವಾಸಸ್ಥಳ ಮತ್ತು ಸಮಾಧಿಯೆಂದು ಶಿಷ್ಯ ಫಕ್ರುದ್ದೀನ್‌ಗೆ ಉಪದೇಶಿಸಿದರು. ಅದಕ್ಕೆ ಬಾಬಾರವರು ಗುರುಗಳೇ ನಾನು ಅದಾವ ದೇಶವನ್ನು ನೋಡಿಲ್ಲ, ಅದು ಎಲ್ಲಿದೆಯೋ ಗೊತ್ತಿಲ್ಲ, ಅಲ್ಲಿ ಯಾವುದು ನನಗೆ ತಿಳಿದಿಲ್ಲ. ಹೋಗುವದಾದರು ಯಾವ ದಿಕ್ಕಿಗೆ ಎಂದು ಪ್ರಶ್ನಿಸಿದರು. ಆಗ ಗುರುಗಳು ಒಂದು ಚಿಕ್ಕ ಕಟ್ಟಿಗೆಯ ತುಂಡನ್ನು ಶಿಷ್ಯನ ಕೈಗಿತ್ತು ನೀನು ಪ್ರಯಾಣ ಬೆಳೆಸಿ ಸಾಯಂಕಾಲ ಬೀಡು ಬಿಡುವ ಸ್ಥಳದಲ್ಲಿ ಈ ಕಟ್ಟಿಗೆಯ ತುಂಡನ್ನು ಒಂದು ತೆಗ್ಗಿನಲ್ಲಿಟ್ಟು ನೀರು ಹಾಕಿ ಮಲಗಬೇಕು ಮರುದಿನ ಎದ್ದಾಗ, ಆ ಕಟ್ಟಿಗೆಯಲ್ಲಿ ಚಿಗುರೊಡೆದು ಎಲೆಗಳು ಕಂಡಲ್ಲಿ ಅದೇ ನಿನ್ನ ಊರೆಂದು ತಿಳಿಯೆಂದರು. ಗುರುಗಳಿಂದ ಆಶೀರ್ವಾದ ಪಡೆದ ನಂತರ ತಮ್ಮ ಪರಿವಾರದೊಂದಿಗೆ ಸಾವಿರಾರು ಕಿ.ಮೀ.ಗಳ ರಸ್ತೆ ಕ್ರಮಿಸಿ ಈಗಿನ ಆಂಧ್ರ ಪ್ರದೇಶದ ಪೆನಗೊಂಡ ಗ್ರಾಮಕ್ಕೆ ಬಂದಾಗ ಅಲ್ಲಿ ಹೂಳಿಟ್ಟ ಕಟ್ಟಿಗೆಯ ತುಂಡು ಚಿಗುರೊಡೆದಿತ್ತು. ಇದೇ ತಮ್ಮ ಸ್ಥಳವೆಂಬುದನ್ನು ಖಚಿತಪಡಿಸಿಕೊಂಡರು. ಅಲ್ಲಿಂದ ಮುಂದೆ ಸಮಾಜ ಸೇವೆಯಲ್ಲಿ ನಿರತರಾದ ಅವರು ಇಡೀ ಮನುಜ ಕುಲವನ್ನೇ ಒಂದಾಗಿಸುವ ಕಾಯಕದಲ್ಲಿ ತೊಡಗಿದರು. ಈ ಮಹನೀಯರು ಪೆನುಗೊಂಡಾಕ್ಕೆ ಹೋಗುವ ಹಾದಿಯ ಮಧ್ಯದಲ್ಲಿ ಅಂದರೆ ಈಗಿನ ಸಂಡೂರಿನ ಪಕ್ಕದ ಕೃಷ್ಣಾನಗರ ವ್ಯಾಪ್ತಿಗೆ ಸೇರಿದ ದರ್ಗಾದ ಸ್ಥಳದಲ್ಲಿ ಕೆಲಕಾಲ ತಂಗಿದ್ದರೆಂಬ ಚರಿತ್ರೆ ಇದೆ. ಅಂದಿನಿಂದ ಇಂದಿನವರೆಗೂ ಇದೊಂದು ಹಿಂದು-ಮುಸ್ಲಿಂ ಸಮುದಾಯಗಳ ಮಿಲನದ ಸೇತುವೆಯಾಗಿದೆ.

ಈ ದರ್ಗಾದಲ್ಲಿ ಚಿಕ್ಕಮಕ್ಕಳ ಜವಳ ಕಾರ್ಯ, ಮನೆಯಲ್ಲಿ ಲಗ್ನ, ಮುಂತಾದ ಶುಭ ಕಾರ್ಯಗಳಿಗೆ ಪೂಜೆ, ಫಾತೆಹ, ಮದುವೆಯ ನಂತರ ನವದಂಪತಿಗಳ ದಾಂಪತ್ಯ ಜೀವನದ ಸಫಲತೆಗಾಗಿ ದರ್ಶನ, ಹೊಲ ಗದ್ದೆಗಳಿಗೆ ಬೀಜ ಹಾಕುವುದಕ್ಕಿಂತ ಮುನ್ನ ಉತ್ತಮ ಬೆಳೆಗಾಗಿ ಪೂಜೆ, ರೋಗ, ಕಾಡಾಟ, ಮುಂತಾದವುಗಳನ್ನು ಕೊನೆಗಾಣಲು ಪೂಜೆಗೈಯುವುದು ಇಲ್ಲಿನ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಧರ್ಮಗಳ ಜನರ ನಂಬಿಕೆಯಾಗಿದೆ. ನಾನು ಕೇವಲ ಒಂದು ಸಮುದಾಯಕ್ಕೆ ಸೇರಿದವನಲ್ಲ! ಇಡೀ ಮನುಜ ಕುಲ ನನ್ನ ಬಂಧು, ಪ್ರತಿಯೊಬ್ಬರು ಅಲ್ಲಾಹನ ಭಕ್ತರು, ಎಲ್ಲರೂ ಸಹೋದರರೇ,

ಸತ್ತ ಮೇಲೆ ನಾವು ಸೇರಬೇಕಾಗಿರುವ ಜಾಗವೂ ಒಂದೇ ಎಂದು ಬಾಬಾರವರು ಜನರನ್ನು ಉಪದೇಶಿಸುತ್ತಿದ್ದರು. ಆದುದರಿಂದ ಅವರ ಹೆಸರು ಎರಡೂ ಧರ್ಮಗಳ ಮಿಲನದ ಕುರುಹಾಗಿ "ಬಾಬಯ್ಯ"! ಎಂದಾಯಿತು. ವರ್ಷಕ್ಕೊಮ್ಮೆ ಆಂಧ್ರ ಪ್ರದೇಶದ ಪೆನುಗೊಂಡದಲ್ಲಿ ಜರುಗುವ ದಿನದಂದೇ ಈ ದರ್ಗಾದಲ್ಲಿಯೂ ಸಹ ಉರುಸ್ (ಜಾತ್ರೆ) ನಡೆಯುತ್ತದೆ. ಈ ಉರುಸ್‌ಗೆ ನಾನಾ ಕಡೆಗಳಿಂದ ಜನ ಬಂದು ಸೇರುತ್ತಾರೆ. ಆ ದಿನ ರಾತ್ರಿ ಹಿಂದೂಗಳ ಭಜನೆ ಮತ್ತು ಮುಸ್ಲಿಂರ ಖವ್ವಾಲಿ ಕಾರ್ಯಕ್ರಮವಿರುತ್ತದೆ. ಮೊದಲು ಈ ದರ್ಗಾ ಚಿಕ್ಕದಾಗಿತ್ತು. ಆದರೆ ಈಗ ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ದರ್ಗಾವು ಕೋಮು ಸೌಹಾರ್ದಕ್ಕೆ ಉತ್ತಮ ನಿದರ್ಶನವಾಗಿದೆ.[೪೭]

೪.೨. ಸಂಡೂರಿನ ಶ್ರೀ ಶಿವವಿಲಾಸ ರಾಜಮಹಲ್ ಅರಮನೆ

ಸಂಡೂರಿನ ಘೋರ್ಪಡೆ ಮಹಾರಾಜರ ಶ್ರೀ ಶಿವವಿಲಾಸ ರಾಜಮಹಲ್ ಸಂಡೂರಿನಿಂದ-ಹೊಸಪೇಟೆಗೆ ಹೋಗುವ ಮಾರ್ಗದಲ್ಲಿದೆ. ಈ ಅರಮನೆಯನ್ನು ೧೯೩೮ರಲ್ಲಿ ನಿರ್ಮಿಸಲು ಪ್ರಾರಂಭಿಸಿ ೧೯೪೦ರಲ್ಲಿ ಪೂರ್ಣಗೊಳಿಸಲಾಯಿತು. ಈ ಅರಮನೆಯಲ್ಲಿ ದರ್ಬಾರ್ ಹಾಲ್, ದೇವಸ್ಥಾನಗಳು ಇಲ್ಲ. ಸಂಡೂರು ಗ್ರಾಮದ ಮಧ್ಯದಲ್ಲಿರುವ ಹಳೆಯ ಅರಮನೆಯಲ್ಲಿ ಇವು ಇದ್ದವು. ಈಗ ಹಳೆಯ ಅರಮನೆಯಲ್ಲಿ ಖಾದಿ ನೇಯ್ಗೆಯ ಕೆಲಸ ನಡೆಯುತ್ತಿದೆ.

ಈ ಅರಮನೆಯು ೨೦ ಎಕರೆಯ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದೆ. ೧೭೦೦೦ ದ ೫೦೦ ಸ್ಕೊಯರ್ ಫೀಟ್ ನ ಅಗಲದಲ್ಲಿ ಕೆಳಗಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಇದರ ಉದ್ದ ಸುಮಾರು ೧೦೦ ಅಡಿ ಇದೆ. ಈ ಕಟ್ಟಡವನ್ನು ನಿರ್ಮಿಸಲು ಮೆಸನರಿ, ಗ್ರಾನೈಟ್ ಕಾಂಕ್ರಿಟ್(ಸುರಕಿ) ಅನ್ನು ಬಳಸಲಾಗಿದೆ. ಈ ಅರಮನೆಯ ಗೋಡೆಗಳು ಎರಡುವರೆ ಅಡಿ ದಪ್ಪ ಇವೆ. ನೆಲಕ್ಕೆ ಕಡಪ್ಪಕಲ್ಲನ್ನು ಹಾಸಲಾಗಿದೆ. ಕಿಟಕಿ, ಬಾಗಿಲುಗಳಿಗೆ ತೇಗದ ಕಟ್ಟಿಗೆಯನ್ನು ಅಳವಡಿಸಲಾಗಿದೆ.

ಈ ಅರಮನೆಯು ಎರಡು ಹಂತಸ್ತಿನ ಮಹಲಾಗಿದೆ. ಕೆಳಗೆ ೧೫ ಕೋಣೆಗಳಿದ್ದು, ಅದರಂತೆಯೇ ಮೇಲೆಯೂ ೧೫ ಕೋಣೆಗಳಿವೆ. ಇದರಲ್ಲಿ ಕಛೇರಿ, ಗ್ರಂಥಾಲಯ ಇತ್ಯಾದಿ ಕೋಣೆಗಳಿದ್ದು, ಪ್ರತಿಯೊಂದು ಕೋಣೆಗಳಿಗೂ ಸ್ನಾನ ಗೃಹಗಳಿರುವುದು ವಿಶೇಷವಾಗಿದೆ. ಈ ಕಟ್ಟಡವು ಚೌಕಾಕಾರವಾಗಿದ್ದು ಮೇಲ್ಭಾಗದಲ್ಲಿ ಐದು ಗುಮ್ಮಟಗಳಿವೆ. ಮೇಲಿನ ಹಂತಸ್ತಿನಲ್ಲಿ ಮೊಗಸಾಲೆ ಇದ್ದು ಕಮಾನುಗಳಿಂದ ಅಲಂಕೃತವಾಗಿದೆ. ಈ ಅರಮನೆಯನ್ನು ಇಂಡೋಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿದೆ.

೪.೩. ಮಂಟಪ

ಸಂಡೂರು ತಾಲ್ಲೂಕಿನ ಸುಬ್ಬರಾಯನಹಳ್ಳಿ ಬಳಿಯ ನವಿಲುತೀರ್ಥದಲ್ಲಿ ವಿಜಯನಗರದ ಅರಸ ಬುಕ್ಕರಾಯನು ಮಂಟಪವನ್ನು ನಿರ್ಮಿಸಿದನೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ.[೪೮] ಶಾಸನದ

ಉಲ್ಲೇಖದಂತೆ ಇಂದಿಗೂ ನವಿಲುಸ್ವಾಮಿ ದೇವಸ್ಥಾನದಲ್ಲಿ ಮಂಟಪ ಇರುವುದನ್ನು ಕಾಣುತ್ತೇವೆ. ಈ ಮಂಟಪವು ೩೬ ಕಂಬಗಳನ್ನು ಹೊಂದಿದೆ. ಈ ಕಂಬಗಳು ಸಾದಾ ಕೆತ್ತನೆಯಿಂದ ಕೂಡಿದ್ದು ಮಧ್ಯ ಪಟ್ಟಿಕೆಯಲ್ಲಿ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ಮಂಟಪವನ್ನು ವಿಜಯನಗರ ಶೈಲಿಯಲ್ಲಿ ನಿರ್ಮಿಸಲಾಗಿದೆ.

೪.೪. ಮೂರ್ತಿಶಿಲ್ಪಗಳು

ಶಿಲ್ಪ ಮೂಲತಃ ಕಲೆಯ ಮನಸ್ಸಿನಿಂದ ಹುಟ್ಟಿ ಧಾರ್ಮಿಕ ಚೌಕಟ್ಟಿನಲ್ಲಿ ಬೆಳೆದಿದೆ. ಅದು ಹೆಚ್ಚಾಗಿ ಭಕ್ತಿಯನ್ನು ಉದ್ದೀಪನಗೊಳಿಸುತ್ತದೆ.[೪೯] ಈ ಶಿಲ್ಪವು ಒಂದು ಆಕೃತಿ ಅದರ ನಿರ್ಮಾತೃ ಶಿಲ್ಪಿ. ನಿರ್ಮಿತ ಆಕೃತಿಯು ಒಂದು ಮೂರ್ತಿಯದಾದರೆ ಅದು ಮೂರ್ತಿ ಶಿಲ್ಪವಾಗುತ್ತದೆ.

ಸಂಡೂರು ತಾಲ್ಲೂಕಿನಲ್ಲಿ ಸಂಖ್ಯಾ ಪ್ರಮಾಣದ ದೃಷ್ಟಿಯಿಂದ ವಿಜಯನಗರ ಕಾಲದ ಮೂರ್ತಿ ಶಿಲ್ಪಗಳೇ ಅಧಿಕವಾಗಿವೆ. ಚಾಲುಕ್ಯ ಪೂರ್ವಯುಗದ ಮೂರ್ತಿ ಶಿಲ್ಪದ ಕುರುಹುಗಳು ಈ ತಾಲ್ಲೂಕಿನಲ್ಲಿ ಕಂಡುಬಂದರೂ, ಬೆರಳೆಣಿಕೆಯಷ್ಟು ಮಾತ್ರ ಕಾಣಸಿಗುತ್ತವೆ. ಸಂಡೂರಿನ ಕಾರ್ತಿಕೇಯ ಕ್ಷೇತ್ರವು ಚಾಲುಕ್ಯ ಪೂರ್ವ ಕಾಲದಲ್ಲೇ ಪುಣ್ಯ ಕ್ಷೇತ್ರವೆಂದು ಪ್ರಸಿದ್ಧವಾಗಿತ್ತು. ಬಾದಾಮಿ ಚಾಲುಕ್ಯರ ಕಾಲದಿಂದಲೇ ಈ ತಾಲೂಕಿನಲ್ಲಿ ಮೂರ್ತಿ ಶಿಲ್ಪಗಳು ಇರುವಿಕೆಯ ಉದಾಹರಣೆಗಳು ಸಿಗುತ್ತವೆ. ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಮೇಲಿನ ಕುಮಾರಸ್ವಾಮಿ ದೇವಾಲಯದ ಅಂತರಾಳದ ಪಾರ್ವತಿ ಮೂರ್ತಿಶಿಲ್ಪ ಹಾಗೂ ಪಾರ್ವತಿ ದೇವಾಲಯದ ಪಾರ್ವತಿ ಶಿಲ್ಪವು ಕ್ರಿ.ಶ.೬-೭ ನೇ ಶತಮಾನಕ್ಕೆ ಸೇರಿದ್ದಾಗಿದೆ. ಪಾರ್ವತಿ ದೇವಾಲಯದ ಅಂತರಾಳದ ಕೇಶವ, ಸೂರ್ಯ ಮೂರ್ತಿ ಶಿಲ್ಪವು ೬-೭ನೇ ಶತಮಾನದ ಶೈಲಿಯಲ್ಲಿದೆ. ಇದೇ ದೇವಾಲಯದ ಅಂತರಾಳದ ಮಾಧವ ಮೂರ್ತಿ ಶಿಲ್ಪವು ಕ್ರಿ.ಶ.೮ನೇ ಶತಮಾನಕ್ಕೆ ಸೇರಿದ್ದಾಗಿದೆ. ಇದೇ ದೇವಾಲಯದ ಅಂತರಾಳದ ಯಮ ಮೂರ್ತಿ ಶಿಲ್ಪವು ಕ್ರಿ.ಶ.೯ನೇ ಶತಮಾನಕ್ಕೆ ಸೇರಿದ್ದಾಗಿದೆ. ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿಯ ತ್ರಿವಿಕ್ರಮ (ಪಾತಾಳೇಶ್ವರ) ಮೂರ್ತಿಯು ಸಾಮಾನ್ಯ ಲಕ್ಷಣಗಳಿಂದ ಕ್ರಿ.ಶ.೪ನೇ ಶತಮಾನದ್ದೆಂದು ಕಂಡುಬರುತ್ತದೆ. ಬೆಟ್ಟದ ಕುಮಾರಸ್ವಾಮಿ ದೇವಾಲಯದ ಕುಮಾರಸ್ವಾಮಿ ಮೂರ್ತಿ ಶಿಲ್ಪವು ಕಲ್ಯಾಣ ಚಾಲುಕ್ಯರ ಶೈಲಿಯ ಕ್ರಿ.ಶ.೧೦.ನೇ ಶತಮಾನದ್ದೆಂದು ತಿಳಿದುಬರುತ್ತದೆ.

ಹೀಗೆ ಈ ತಾಲ್ಲೂಕಿನಲ್ಲಿ ಕಾಣಸಿಗುವ ಚಾಲುಕ್ಯ ಪೂರ್ವ ಹಾಗೂ ಬಾದಾಮಿ ಚಾಲುಕ್ಯರ ಕಾಲದಿಂದೀಚೆಗಿನ ಮೂರ್ತಿ ಶಿಲ್ಪಗಳು ವಿರಳ. ಆದರೆ ವಿಜಯನಗರ ಸಾಮ್ರಾಜ್ಯಕ್ಕೆ (ಹಂಪಿ) ತೀರ ಹತ್ತಿರದಲ್ಲಿರುವ ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮೂರ್ತಿ ಶಿಲ್ಪಗಳೇ ಅಧಿಕವಾಗಿ ಕಾಣಸಿಗುತ್ತವೆ. ಇಲ್ಲಿ ಮೂರ್ತಿ ಶಿಲ್ಪಗಳನ್ನು ಚಾಲುಕ್ಯ ಪೂರ್ವಯುಗದಿಂದ ಹಿಡಿದು ವಿಜಯನಗರೋತ್ತರದ ಅವಧಿಯವರೆಗಿನ ಮೂರ್ತಿಶಿಲ್ಪಗಳನ್ನಾಗಿ ವಿಂಗಡಿಸಿ ಪರಿಚಯಿಸಲಾಗಿದೆ.

ಚಾಲುಕ್ಯ ಪೂರ್ವಯುಗದ ಶಿಲ್ಪಗಳು (ಕ್ರಿ.ಶ.೫ನೆಯ ಶತಮಾನದವರೆಗೆ)

ತ್ರಿವಿಕ್ರಮ ಶಿಲ್ಪ : ತ್ರಿವಿಕ್ರಮ ಮೂರ್ತಿ ಶಿಲ್ಪವು ಸಾಮಾನ್ಯ ಲಕ್ಷಣಗಳಿಂದ ಕ್ರಿ.ಶ.೪ನೇ ಶತಮಾನದ್ದೆಂದು ತಿಳಿದುಬರುತ್ತದೆ.[೫೦] ಸಮಭಂಗಿಯಲ್ಲಿ ನಿಂತಿರುವ ಈ ಶಿಲ್ಪವು ಚತುರ್ಬಾಹುಗಳನ್ನೊಳ ಗೊಂಡಿದೆ. ಇದು ಹಿಂದಿನ ಬಲ-ಎಡ ಕೈಗಳಲ್ಲಿ ಪ್ರಯೋಗ ಚಕ್ರ-ಶಂಖವನ್ನು ಮತ್ತು ಮುಂದಿನ ಬಲ-ಎಡ ಕೈಗಳಲ್ಲಿ ಅಭಯ ಮುದ್ರೆ ಮತ್ತು ಗದಾ-ಕಟ್ಯಾವಲಂಬಿತ ಮುದ್ರೆಯಲ್ಲಿವೆ. ಸುತ್ತಲೂ ಫಲಕ ಹಾಗೂ ಎಡ ಪಾದದ ಬಳಿ ಗರುಡ ಶಿಲ್ಪವಿದೆ. ಈ ಶಿಲ್ಪವು ಅಗಲವಾದ ಕಣ್ಣುಗಳನ್ನು, ಉದ್ದನೆಯ ಮೂಗನ್ನು, ಅಗಲವಾದ ಎದೆಯನ್ನು ಹೊಂದಿದೆ. ಇದು ಕಿರೀಟ, ಮುಕುಟ, ಕರ್ಣ, ಕಂಠಾಭರಣ, ಬಳೆಗಳು, ಯಜ್ಞೋಪವಿತ, ದೋತ್ರ ಧರಿಸಿದೆ.

ಚಾಲುಕ್ಯಯುಗದ ಶಿಲ್ಪಗಳು (ಕ್ರಿ.ಶ.೬ ರಿಂದ ೧೦.ನೇ ಶತಮಾನದವರೆಗೆ)

ಕೇಶವ : ಪಾರ್ವತಿ ದೇವಾಲಯದ ಅಂತರಾಳದಲ್ಲಿರುವ ಈ ಶಿಲ್ಪವು ಕ್ರಿ.ಶ.೬-೭[೫೧] ನೇ ಶತಮಾನದ ಶೈಲಿಯಲ್ಲಿದೆ. ಇದು ಪದ್ಮದ ಮೇಲೆ ಸಮಭಂಗಿಯಲ್ಲಿದ್ದು, ಚತುರ್ಬಾಹುಗಳನ್ನೊಳಗೊಂಡಿದೆ. ಹಿಂದಿನ ಬಲ-ಎಡ ಕೈಗಳಲ್ಲಿ ಶಂಖ-ಚಕ್ರವನ್ನು ಮುಂದಿನ ಬಲ-ಎಡ ಕೈಗಳಲ್ಲಿ ಪದ್ಮಗುಚ್ಛ-ಗದಾ ಇರುತ್ತವೆ. ಸುತ್ತಲಿನ ಫಲಕದ ಮೇಲೆ ಗರುಡ, ಚಾಮರಧಾರೆಯರ ಶಿಲ್ಪಗಳಿವೆ. ಶಾಂತಮುಖ ಭಾವವನ್ನು ಹೊಂದಿದ ಇದು ಕಿರೀಟ, ಮುಕುಟ, ಚಕ್ರಕುಂಡಲ ಕೊರಳ ಹಾರ, ಬಳೆಗಳು, ಯಜ್ಞೋಪವಿತ, ದೋತ್ರ ಧರಿಸಿದೆ.

ಸೂರ್ಯ : ಪಾರ್ವತಿ ದೇವಾಲಯದ ಅಂತರಾಳದಲ್ಲಿಯ ಈ ಶಿಲ್ಪವು ಶಾಂತಮುಖ ಭಾವವನ್ನು ಹೊಂದಿದೆ. ಇದು ಕ್ರಿ.ಶ.೬.೭ನೇ ಶತಮಾನಕ್ಕೆ[೫೨] ಸೇರಿದ್ದಾಗಿದ್ದು ಸಮಭಂಗಿಯಲ್ಲಿ ನಿಂತಿದೆ. ದ್ವಿಬಾಹುಗಳನ್ನೊಂದಿದ್ದ ಇದು ಒಂದು ಕೈಯಲ್ಲಿ ಪದ್ಮ, ಮತ್ತೊಂದು ಕೈಯು ಅಭಯ ಮುದ್ರೆಯಲ್ಲಿದೆ. ಸುತ್ತಲಿನ ಫಲಕದ ಮೇಲೆ ಚಾಮರಧಾರೆಯರು ಮತ್ತು ಚಿಕ್ಕ ಚಿಕ್ಕ ಶಿಲ್ಪಗಳಿವೆ. ಈ ಶಿಲ್ಪವು ಕಿರೀಟ ಮುಕುಟ, ಕರ್ಣಕುಂಡಲ, ಕೊರಳಹಾರ, ಬಳೆಗಳನ್ನು ರತ್ನಪಟ್ಟಿ ಕಾಲುಗಡಗ, ದೋತ್ರ ಧರಿಸಿದೆ.

ಪಾರ್ವತಿ : ಕುಮಾರಸ್ವಾಮಿ ದೇವಾಲಯದ ಅಂತರಾಳದಲ್ಲಿಯ ಈ ಶಿಲ್ಪವು ಕ್ರಿ.ಶ.೬-೭ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ.[೫೩] ಶಾಂತ ಮುಖ ಭಾವವನ್ನು ಹೊಂದಿರುವ ಈಕೆ ಸಮಭಂಗಿಯಲ್ಲಿ ನಿಂತಿದ್ದಾಳೆ. ಚತುರ್ಬಾಹುಗಳನ್ನೊಳಗೊಂಡ ಈಕೆಯು ಹಿಂದಿನ ಬಲ-ಎಡ ಕೈಗಳಲ್ಲಿ ಈಶ್ವರ ಲಿಂಗ, ಗಣೇಶ ಶಿಲ್ಪಗಳನ್ನು ಹಿಡಿದು ಕೊಂಡಿದ್ದಾಳೆ. ಮುಂದಿನ ಬಲಗೈಯು ಅಕ್ಷಮಾಲಾ ಸಹಿತ ಅಭಯ ಮುದ್ರೆಯಲ್ಲಿದೆ. ಎಡಗೈಯಲ್ಲಿ ಮಾದಲ ಹಣ್ಣು ಇದೆ. ಸುತ್ತಲಿನ ಫಲಕದ ಮೇಲೆ ಬಲಭಾಗದಲ್ಲಿ ಶಿವ, ಎಡಭಾಗದಲ್ಲಿ

ಗಣೇಶನ ಶಿಲ್ಪಗಳಿವೆ. ಈಕೆಯು ಜಟಾಮುಕುಟ, ಕರ್ಣಾಭರಣ, ಕಂಠಾಭರಣ, ನಾಗಬಂಧ, ರತ್ನಪಟ್ಟಿ, ಬಳೆಗಳು, ಕಾಲುಗಡಗವನ್ನು ಧರಿಸಿದ್ದಾಳೆ.

ಮಾಧವ : ಪಾರ್ವತಿ ದೇವಾಲಯದ ಅಂತರಾಳದಲ್ಲಿರುವ ಈ ಮೂರ್ತಿ ಶಿಲ್ಪದ ಲಕ್ಷಣವನ್ನು ಗಮನಿಸಿದರೆ, ಕ್ರಿ.ಶ.೮.ನೇ ಶತಮಾನಕ್ಕೆ[೨೪] ಸೇರಿದೆಂದು ತಿಳಿದುಬರುತ್ತದೆ. ಇದು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ನಾಗಬಂಧ, ಬಳೆಗಳು, ಯಜ್ಞೋಪವಿತ, ರತ್ನಪಟ್ಟಿ ಮತ್ತು ದೋತ್ರವನ್ನು ಧರಿಸಿದೆ. ಸಮಭಂಗಿಯಲ್ಲಿರುವ ಈ ಶಿಲ್ಪವು ಚತುರ್ಬಾಹುಗಳನ್ನು ಹೊಂದಿದೆ. ಹಿಂದಿನ ಬಲ-ಎಡ ಕೈಗಳಲ್ಲಿ ಚಕ್ರ-ಶಂಖವನ್ನು ಹಾಗೂ ಮುಂದಿನ ಬಲ-ಎಡ ಕೈಗಳು ಡೋಲ ಹಸ್ತ-ಕಟ್ಯಾವಲಂಬಿತ ಮುದ್ರೆಯಲ್ಲಿವೆ. ಸೌಮ್ಯ ಮುಖ ಭಾವವನ್ನು ಹೊಂದಿದೆ.

ಅಗಸ್ತ್ಯಮುನಿ : ಕುಮಾರಸ್ವಾಮಿ ಬೆಟ್ಟದ ಅಗಸ್ತ್ಯತೀರ್ಥದ ಬಳಿಯಿರುವ ಈ ಶಿಲ್ಪವು ಸಾಮಾನ್ಯ ಲಕ್ಷಣಗಳಿಂದ ಕ್ರಿ.ಶ.೮ನೇ ಶತಮಾನಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ. ಈತನು ತಲೆಯಲ್ಲಿ ಕಿರೀಟ, ಕರ್ಣಾಭರಣ, ಕೊರಳಹಾರ, ಕೈಗಡಗ, ತೋಳಬಂಧಿಯನ್ನು ಧರಿಸಿದ್ದಾನೆ. ಈತನು ದ್ವಿಬಾಹುವನ್ನೊಂದಿದ್ದು ಬಲಗೈಯಲ್ಲಿ ದಂಡವನ್ನು ಹಿಡಿದುಕೊಂಡಿದ್ದಾನೆ. ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿದೆ. ಈತನು ಸೌಮ್ಯಮುಖ ಭಾವವನ್ನು ಹೊಂದಿದ್ದು, ಅಗಲವಾದ ಕಣ್ಣು, ಉದ್ದನೆಯ ಮೂಗು, ದೊಡ್ಡ ಹೊಟ್ಟೆಯನ್ನು ಹೊಂದಿದ್ದಾನೆ. ಯಕ್ಷನ ಶಿಲ್ಪದಂತೆ ಕಂಡುಬರುವ ಈತನನ್ನು ಸ್ಥಳೀಯರು ಅಗಸ್ತ್ಯಮುನಿ ಎಂದು ಕರೆಯುತ್ತಾರೆ.

ಮಹಿಷಮರ್ದಿನಿ : ಕುಮಾರಸ್ವಾಮಿ ದೇವಾಲಯದ ಅಂತರಾಳದಲ್ಲಿರುವ ಈ ಮೂರ್ತಿ ಶಿಲ್ಪವು ಕ್ರಿ.ಶ.೯ನೇ ಶತಮಾನಕ್ಕೆ ಸೇರಿದ್ದಾಗಿದೆ. ಈಕೆಯು ಕಿರೀಟ, ಮುಕುಟ, ಕರ್ಣಾಭರಣ, ಕಂಠಾಭರಣಗಳು, ಬಳೆಗಳು, ರತ್ನಪಟ್ಟಿ, ಕಾಲುಗಡಗಗಳನ್ನು ಧರಿಸಿದ್ದಾಳೆ. ಉಗ್ರವಾದ ಮುಖ ಭಾವವನ್ನು ಹೊಂದಿದ ಈಕೆಯು ತ್ರಿಭಂಗಿಯಲ್ಲಿದ್ದು ಅಸುರನನ್ನು ಸಂಹರಿಸುತ್ತಿದ್ದಾಳೆ. ಚತುರ್ಬಾಹುವನ್ನೊಂದಿದ ಈಕೆಯು ಹಿಂದಿನ ಕೈಗಳಲ್ಲಿ ಶಂಖ-ಚಕ್ರವನ್ನು ಹಾಗೂ ಮುಂದಿನ ಕೈಗಳಲ್ಲಿ, ಬಲಗೈಯಿಂದ ತ್ರಿಶೂಲವನ್ನು ಹಾಗೂ ಎಡಗೈಯಿಂದ ಅಸುರನ ಜಟೆ ಹಿಡಿದು ಎಡಗಾಲನ್ನು ಆತನ ಮೇಲಿಟ್ಟು, ತ್ರಿಶೂಲದಿಂದ ಇರಿಯುತ್ತಿದ್ದಾಳೆ.

ಯಮ : ಪಾರ್ವತಿ ದೇವಾಲಯದ ಅಂತರಾಳದಲ್ಲಿರುವ ಈ ಮೂರ್ತಿ ಶಿಲ್ಪವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಉಗ್ರವಾದ ಮುಖಭಾವವನ್ನು ಹೊಂದಿದ ಈತನು ಕೋಣದ ಮೇಲೆ ಕುಳಿತಿದ್ದಾನೆ. ದ್ವಿಬಾಹುಗಳನ್ನೊಳಗೊಂಡ ಈತನು ಬಲಗೈಯಲ್ಲಿ ದಂಡವನ್ನು ಹಾಗೂ ಎಡಗೈಯಲ್ಲಿ ಪಾಶವನ್ನು ಹಿಡಿದುಕೊಂಡಿದ್ದಾನೆ. ಕಿರೀಟ-ಮುಕುಟ, ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತ, ಕೈಗಡಗ, ತೋಳಬಂಧಿ, ಚೆನ್ನವೀರ, ಉದರ ಬಂಧಿಯನ್ನು ಧರಿಸಿದ್ದಾನೆ.

ವಿಷ್ಣು : ನಾಗನಾಥೇಶ್ವರ ದೇವಾಲಯದ ಗರ್ಭಗೃಹದೊಳಗಿನ ಈ ಶಿಲ್ಪವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಸಮಭಂಗಿಯಲ್ಲಿರುವ ಇದು ಚತುರ್ಬಾಹುಗಳನ್ನೊಳಗೊಂಡಿದೆ. ಹಿಂದಿನ ಎಡ-ಬಲಕೈಗಳಲ್ಲಿ ಶಂಖ-ಚಕ್ರವನ್ನು, ಹಾಗೂ ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿದೆ. ಈ ಶಿಲ್ಪವು ಕರಂಡ ಮುಕುಟ, ಕರ್ಣಾಭರಣ, ಕೊರಳಹಾರ, ಯಜ್ಞೋಪವಿತ, ಕೈಗಡಗ, ಕಟೀಸೂತ್ರವನ್ನು ಧರಿಸಿದ್ದಾನೆ.

ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿರುವ ಈ ವಿಗ್ರಹವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಶಾಂತಮುಖ ಭಾವವನ್ನು ಹೊಂದಿದ ಈತನು ಸಮಭಂಗಿಯಲ್ಲಿ ನಿಂತಿರುವನು. ಈತನು ಚತುರ್ಬಾಹುಗಳನ್ನೊಳಗೊಂಡಿದ್ದು ಮುಂದಿನ ಬಲ-ಎಡ ಕೈಗಳಲ್ಲಿ ಪ್ರಯೋಗ ಚಕ್ರ-ಶಂಖವನ್ನು ಹಾಗೂ ಹಿಂದಿನ ಬಲ-ಎಡ ಕೈಗಳು ಡೋಲಹಸ್ತ, ಗಧೆಯನ್ನು ಹಿಡಿದಿದ್ದಾನೆ. ಕಿರೀಟ, ಮುಕುಟ, ವೃತ್ತಾಕಾರದ ಕುಂಡಲ, ಕೊರಳಹಾರ, ಚೆನ್ನವೀರ, ಉದರಬಂಧಿ, ಬಳೆಗಳು, ತೋಳಬಂಧಿ, ಕಟೀಸೂತ್ರವನ್ನು ಹಾಗೂ ದೋತ್ರವನ್ನು ಧರಿಸಿದ್ದಾನೆ.

ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿಯ ಮತ್ತೊಂದು ವಿಷ್ಣುವಿನ ಮೂರ್ತಿ ಶಿಲ್ಪವು ಕ್ರಿ.ಶ.೯ನೇ ಶತಮಾನದ್ದಾಗಿದ್ದು, ಶಾಂತ ಮುಖ ಭಾವವನ್ನು ಹೊಂದಿದ್ದಾನೆ. ಸಮಭಂಗಿಯಲ್ಲಿರುವ ಈತನು ಚತುರ್ಬಾಹುವನ್ನೊಳಗೊಂಡಿದ್ದು, ಹಿಂದಿನ ಎಡ-ಬಲ ಕೈಗಳಲ್ಲಿ ಚಕ್ರ-ಗಧಾವನ್ನು, ಮುಂದಿನ ಬಲ-ಎಡ ಕೈಗಳು ಅಕ್ಷಮಾಲಾ ಸಹಿತ ಅಭಯ ಮುದ್ರೆ, ಕಟ್ಯಾವಲಂಬಿತ ಮುದ್ರೆ ಸಹಿತವಾಗಿ ಶಂಖವನ್ನು ಹಿಡಿದಿದ್ದಾನೆ. ಈತನು ಜಟಾಮುಕುಟ, ವೃತ್ತಾಕಾರದ ಓಲೆ, ಕೈಗಡಗ, ಕಟೀಸೂತ್ರ ಹಾಗೂ ದೋತ್ರವನ್ನು ಧರಿಸಿದ್ದಾನೆ.

ನಾಗನಾಥ : ನಾಗನಾಥ ದೇವಾಲಯದ ಆವರಣದಲ್ಲಿರುವ ಈ ಶಿಲ್ಪವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಇದು ಏಳು ಹೆಡೆಯ ಸರ್ಪವನ್ನು ಹೊಂದಿದ್ದು, ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣವನ್ನು ಧರಿಸಿದೆ.

ಗಣೇಶ : ನಾಗನಾಥ ದೇವಾಲಯದ ಗರ್ಭಗೃಹದಲ್ಲಿರುವ ಈ ವಿಗ್ರಹವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಇದು ಈಗ ಸವೆದಿದೆ.

ಪಾರ್ವತಿ ದೇವಾಲಯದ ಅಂತರಾಳದಲ್ಲಿರುವ ಈ ಮೂರ್ತಿಶಿಲ್ಪವು ಕ್ರಿ.ಶ.೯ನೇ ಶತಮಾನದ್ದಾಗಿದೆ. ಈತನು ಕಿರೀಟ, ಮುಕುಟ, ಕಂಠಾಭರಣ, ಉದರದಲ್ಲಿ ನಾಗಬಂಧ, ಯಜ್ಞೋಪವಿತವನ್ನು ಧರಿಸಿದ್ದಾನೆ. ಕುಳಿತ ಭಂಗಿಯಲ್ಲಿರುವ ಈತನು ದ್ವಿಬಾಹುವನ್ನೊಂದಿದ್ದು ಬಲಗೈಯು ಜ್ಞಾನ ಮುದ್ರೆಯಲ್ಲಿದೆ. ಎಡಗೈಯಲ್ಲಿ ಮೊದಕವನ್ನು ಹಿಡಿದಿದ್ದಾನೆ.

ಶಿವಲಿಂಗಗಳು : ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿ ಒಂದೇ ಕಡೆಗೆ ಆರು ಶಿವಲಿಂಗಗಳು ಇವೆ. ಇವು ಕ್ರಿ.ಶ.೯ನೇ ಶತಮಾನದವುಗಳಾಗಿದ್ದು, ಇವುಗಳಲ್ಲಿ ನಾಲ್ಕು ಶಿವಲಿಂಗಗಳು ಊರ್ಧ್ವಪೀಠರಹಿತ ಶಿವಲಿಂಗಗಳಿವೆ. ಎರಡು ಪೀಠರಹಿತ ಲಿಂಗಗಳು ಸುಮಾರು ಒಂದು ಅಡಿ ಎತ್ತರವಿದ್ದರೆ ಎರಡು ಪೀಠರಹಿತ ಲಿಂಗಗಳು ಚಿಕ್ಕವಿವೆ. ಅವುಗಳಲ್ಲಿ ಇನ್ನೂ ಎರಡು ಶಿವಲಿಂಗಗಳಲ್ಲಿ ಒಂದು ಪೀಠ ಸಹಿತ ಶಿವಲಿಂಗವಿದೆ. ಅದರ ಪಕ್ಕದಲ್ಲಿಯ ಮತ್ತೊಂದು ಶಿವಲಿಂಗವೂ ಪೀಠ ಸಹಿತವಿದ್ದು ಪೀಠದಲ್ಲಿ ಶಾಸನವನ್ನು ಕಂಡರಿಸಲಾಗಿದ್ದು, ಹರಳಿದ ಪದ್ಮದ ಮೇಲೆ ಲಿಂಗ ಪ್ರತಿಷ್ಠಾಪಿಸಲಾಗಿದೆ.

ನಂದಿ : ಕುಮಾರಸ್ವಾಮಿ ದೇವಾಲಯದ ಶಿವಲಿಂಗ ದೇವಾಲಯದ ಎದುರಿನ ನಂದಿ ವಿಗ್ರಹವು ೯ನೇ ಶತಮಾನದ ಶೈಲಿಯಲ್ಲಿದೆ. ಇದು ಹಣೆ ಪಟ್ಟಿಯನ್ನು ಕೊರಳಲ್ಲಿ ಗೆಜ್ಜೆ ಸರವನ್ನು ಮತ್ತು ಸರಪಳಿಯಂತ ಸರವನ್ನು, ಕಾಲಲ್ಲಿ ಕಡಗವನ್ನು ಧರಿಸಿದ್ದು, ಬೆನ್ನಿನ ಮೇಲೆ ಭುಜಪಟ್ಟಿಯನ್ನು, ಹಿಂದೆ ಎರಡು ಎಳೆಯ ಗೆಜ್ಜೆ ಸರವನ್ನು ಧರಿಸಿಕೊಂಡಿರುವ ಇದು ಅಲಂಕಾರಿಕ ನಂದಿ ವಿಗ್ರಹವಾಗಿದೆ. ನಂದಿಯ ಮುಂದೆ ಪುಟ್ಟ ಶಿವಲಿಂಗ ವಿಗ್ರಹವಿದೆ.

ಅಷ್ಟದಿಕ್ಪಾಲಕರು : ಭೀಮತೀರ್ಥದ ಆವರಣದಲ್ಲಿರುವ ಎಂಟು ಅಷ್ಟದಿಕ್ಪಾಲಕರ ಶಿಲ್ಪಗಳು ಕ್ರಿ.ಶ.೧೦ನೇ ಶತಮಾನದ್ದಾಗಿವೆ. ಇವುಗಳಲ್ಲಿ ಒಂದೊಂದು ವಿಗ್ರಹಗಳ ಲಕ್ಷಣಗಳನ್ನು ಕೆಳಗೆ ವಿವರಿಸಲಾಗಿದೆ.

ಕಪ್ಪು ಶಿಲೆಯಲ್ಲಿ ಕಂಡರಿಸಲ್ಪಟ್ಟ ಯಮನು ಕೋಣನ ಮೇಲೆ ಕುಳಿತಿದ್ದಾನೆ. ಚರ್ತು ಬಾಹುವನ್ನೊಂದಿದ ಈತನು ಮುಂದಿನ ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು, ಎಡಗೈಯಿಂದ ಕೋಣದ ಲಗಾಮನ್ನು ಹಿಡಿದುಕೊಂಡಿದ್ದಾನೆ. ಹಿಂದಿನ ಬಲಗೈಯಲ್ಲಿ ಪ್ರಯೋಗ ಚಕ್ರವಿದ್ದು, ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಈತನು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಲ್ಲಿ ಪದಕ ಸರಗಳನ್ನು ಹಾಗೂ ತೋಳಬಂಧಿ, ಕೈಗಡಗ, ಸೊಂಟಪಟ್ಟಿ ಯಜ್ಞೋಪವಿತ, ಕಾಲುಗಡಗ, ಗೆಜ್ಜೆಗಳಿಂದಲಂಕೃತವಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ಐರಾವತದ (ಆನೆ) ಮೇಲೆ ಕುಳಿತ ಇಂದ್ರನು ಚರ್ತುಬಾಹುಗಳನ್ನೊಂದಿದ್ದಾನೆ. ಈತನು ಹಿಂದಿನ ಬಲಗೈಯಲ್ಲಿ ಗಧಾ ಮತ್ತು ಎಡಗೈಯಲ್ಲಿ ಅಂಕುಶವನ್ನು ಹಿಡಿದಿದ್ದಾನೆ. ಮುಂದಿನ ಎರಡು ಕೈಗಳು ಸವೆದಿವೆ. ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಲ್ಲಿ ಹಾರಗಳು, ಕೇಯೂರ, ಯಜ್ಞೋಪವಿತ, ಸೊಂಟಪಟ್ಟಿ, ಕಾಲುಗಡಗ, ಪಾದಗೆಜ್ಜೆ, ಕೈಗಡಗಗಳಿಂದಲಂಕೃತವಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ಟಗರು ವಾಹನದ ಮೇಲೆ ಕುಳಿತ ಅಗ್ನಿಯು ಚರ್ತುಬಾಹುವನ್ನೊಂದಿದ್ದು, ಹಿಂದಿನ ಬಲಗೈಯಲ್ಲಿ ಶಂಖವನ್ನು ಮತ್ತು ಎಡಗೈಯಲ್ಲಿ ಸ್ಥಿತಿ ಚಕ್ರವನ್ನು ಹಿಡಿದಿದ್ದಾನೆ. ಹಾಗೂ ಮುಂದಿನ ಬಲಗೈಯಲ್ಲಿ ದಂಡವನ್ನು ಮತ್ತು ಎಡಗೈಯು ಸವೆದಿದೆ. ಈತನು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಲ್ಲಿ

ಪದಕ ಸರಗಳನ್ನು, ಬ್ರಹ್ಮಸೂತ್ರವನ್ನು (ಯಜ್ಞೋಪವಿತ), ಸೊಂಟಪಟ್ಟಿ, ಕೈಗಡಗ, ಕೇಯೂರ, ಕಾಲುಗಡಗ, ಪಾದಗೆಜ್ಜೆಗಳಿಂದಲಂಕೃತವಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ನರವಾಹನನ ಮೇಲೆ ಕುಳಿತ ನೈರುತ್ಯನು ದ್ವಿಬಾಹುಗಳನೊಂದಿದ್ದಾನೆ. ಈತನು ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು, ಎಡಗೈಯನ್ನು ಮುಂಚಾಚಿದ್ದಾನೆ. ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ಕೇಯೂರ, ಕೈಗಡಗ, ಕಾಲುಗಡಗ, ಯಜ್ಞೋಪವಿತ, ಪಾದಗೆಜ್ಜೆಯನ್ನು ಮತ್ತು ದೋತ್ರವನ್ನು ಧರಿಸಿದ್ದಾನೆ.

ಕುದುರೆ ವಾಹನದ ಮೇಲೆ ಕುಳಿತ ಕುಬೇರನು ಚರ್ತುಬಾಹುಗಳನ್ನೊಂದಿದ್ದಾನೆ. ಈತನು ಮುಂದಿನ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದು, ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದಿದ್ದಾನೆ. ಹಿಂದಿನ ಬಲಗೈಯಲ್ಲಿ ಖಂಡ ಪರಶುವನ್ನು, ಎಡಗೈಯಲ್ಲಿ ಖಂಡಾರೋಹವನ್ನು ಹಿಡಿದಿದ್ದಾನೆ. ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ಯಜ್ಞೋಪವಿತ, ಕಾಲುಗಡಗ, ಕೈಗಡಗ, ಸೊಂಟಪಟ್ಟಿಗಳಿಂದಲಂ ಕೃತವಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ನಂದಿ ವಾಹನನ ಮೇಲೆ ಕುಳಿತ ಈಶಾನ್ಯನು ಚರ್ತುಭುಜಗಳನ್ನೊಂದಿದ್ದಾನೆ. ಈತನು ಹಿಂದಿನ ಬಲಗೈಯಲ್ಲಿ ಡಮರುವನ್ನು ಎಡಗೈಯಲ್ಲಿ ತ್ರಿಶೂಲವನ್ನು ಹಾಗೂ ಮುಂದಿನ ಬಲಗೈಯು ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ತಲೆ ಬುರುಡೆಯನ್ನು ಹಿಡಿದಿದ್ದಾನೆ. ಕಿರೀಟ, ಮುಕುಟ, ಕರ್ಣಾಭರಣ, ಕೊರಳಲ್ಲಿ ಪದಕ, ಹಾರಗಳನ್ನು, ಯಜ್ಞೋಪವಿತ, ಕೇಯೂರ, ಕಾಲುಗಡಗ, ಕೈಗಡಗ, ಪಾದಗೆಜ್ಜೆಯಿಂದ ಅಲಂಕೃತವಾಗಿರುವ ಈತನು ದೋತ್ರವನ್ನು ಧರಿಸಿದ್ದಾನೆ.

ಮಕರ ವಾಹನದ ಮೇಲೆ ಕುಳಿತ ವರುಣನು ಚರ್ತುಬಾಹುಗಳನ್ನೊಂದಿದ್ದಾನೆ. ಈತನು ಮುಂದಿನ ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದಾನೆ. ಹಿಂದಿನ ಬಲಗೈಯಲ್ಲಿ ತ್ರಿಶೂಲ(?)ವನ್ನು ಹಾಗೂ ಎಡಗೈಯಲ್ಲಿ ತಾವರೆಯ ಹೂವನ್ನು ಹಿಡಿದಿದ್ದಾನೆ. ಕಿರೀಟ, ಮುಕುಟ, ಕರ್ಣಾಭರಣ, ಕೊರಳಾಭರಣ, ಯಜ್ಞೋಪವಿತ, ಕೇಯೂರ, ಕೈಗಡಗ, ಸೊಂಟಪಟ್ಟಿ, ಕಾಲುಗಡಗ, ಪಾದಗೆಜ್ಜೆಗಳಿಂದಲಂಕೃತವಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ಜಿಂಕೆ ವಾಹನದ ಮೇಲೆ ಕುಳಿತ ವಾಯುವ್ಯನು ಚರ್ತುಬಾಹುಗಳನ್ನೊಂದಿದ್ದಾನೆ. ಈತನು ಮುಂದಿನ ಬಲಗೈಯಲ್ಲಿ ದಂಡವನ್ನು ಮತ್ತು ಎಡಗೈಯಿಂದ ಜಿಂಕೆಯ ಲಗಾಮನ್ನು ಹಿಡಿದಿದ್ದಾನೆ. ಹಿಂದಿನ ಬಲಗೈಯಲ್ಲಿ ಪರಶುವನ್ನು ಮತ್ತು ಎಡಗೈಯಲ್ಲಿ ಧ್ವಜವನ್ನು ಹಿಡಿದಿದ್ದಾನೆ. ಈತನು ಕಿರೀಟ, ಮುಕುಟ, ಕೊರಳಹಾರ, ಯಜ್ಞೋಪವಿತ, ಸೊಂಟಪಟ್ಟಿ, ಕಾಲುಗಡಗ, ಪಾದಗೆಜ್ಜೆ, ಕೈಗಡಗಗಳಿಂದಲಂಕೃತನಾಗಿದ್ದು, ದೋತ್ರವನ್ನು ಧರಿಸಿದ್ದಾನೆ.

ಸೂರ್ಯನ ಪೀಠ : ಭೀಮತೀರ್ಥದ ಆವರಣದಲ್ಲಿರುವ ಈ ಸೂರ್ಯನ ಪೀಠವು ಕ್ರಿ.ಶ.೧೦.ನೇ ಶತಮಾನದ್ದಾಗಿದೆ. ಈ ಪೀಠದಲ್ಲಿ ಏಳು ಅಶ್ವಗಳಿದ್ದು ಒಬ್ಬ ಸಾರಥಿ ಇರುವಂತೆ ಕಂಡರಿಸಲಾಗಿದೆ.

ಚಂಡಿಕೇಶ್ವರ : ಸಂಡೂರಿನ ಈಶ್ವರ ದೇವಾಲಯದ ಆವರಣದಲ್ಲಿರುವ ಚಂಡಿಕೇಶ್ವರ ಶಿಲ್ಪವು ಕ್ರಿ.ಶ.೧೦.ನೇ ಶತಮಾನದ ಶೈಲಿಯಲ್ಲಿ ಕಂಡರಿಸಲಾಗಿದೆ. ಈತನು ಕಿರೀಟ ಮುಕುಟ, ಕಿವಿಯಲ್ಲಿ ರುದ್ರಾಕ್ಷಿ ಕುಂಡಲ, ಕೊರಳಲ್ಲಿ ಜಪಾಮಾಲಾವನ್ನು ಧರಿಸಿದ್ದಾನೆ. ಈತನು ದ್ವಿಭುಜಗಳನ್ನೊಂದಿದ್ದು, ಬಲಗೈಯಲ್ಲಿ ಡಮರುವನ್ನು ಹಾಗೂ ಎಡಗೈಯು ವರದ ಮುದ್ರೆಯಲ್ಲಿದ್ದು, ಅರ್ಧ ಯೋಗಾಸನದಲ್ಲಿ ಕುಳಿತಿದ್ದಾನೆ.

ಕಲ್ಯಾಣ ಚಾಲುಕ್ಯಯುಗ

ರಂಗನಾಥ : ಕುಮಾರಸ್ವಾಮಿ ಬೆಟ್ಟದ ಅಗಸ್ತ್ಯ ತೀರ್ಥದ ಬಳಿ ಇರುವ ಅನಂತಶಯನ ಮೂರ್ತಿಶಿಲ್ಪವು ಕ್ರಿ.ಶ.೧೧.ನೇ ಶತಮಾನದ ಶೈಲಿಯಲ್ಲಿದೆ. ಇದನ್ನೇ ಸ್ಥಳೀಯರು ರಂಗನಾಥ ಎನ್ನುತ್ತಾರೆ. ಈತನ ವಿಗ್ರಹವು ಚತುರ್ಬಾಹುಗಳನ್ನೊಂದಿದ್ದು, ಹಿಂದಿನ ಬಲಗೈಯಲ್ಲಿ ಶಂಖ-ಚಕ್ರವನ್ನು ಹಾಗೂ ಎಡಗೈಯು ತಲೆಗೆ ಆಧಾರವಾಗಿದೆ. ಮುಂದಿನ ಬಲಗೈಯು ಮೊಣಕಾಲ ಮೇಲಿದ್ದು, ಎಡಗೈಯು ಎದೆ ಭಾಗದಲ್ಲಿದೆ. ಈತನು ಕರಂಡ ಮುಕುಟ, ಕರ್ಣಕುಂಡಲ, ಕಂಠಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಚನ್ನವೀರ, ಯಜ್ಞೋಪವಿತ, ಸೊಂಟಪಟ್ಟಿಗಳಿಂದಲಂಕೃತನಾಗಿದ್ದಾನೆ. ನಾಭಿಯಿಂದ ಹೊರ ಹೊಮ್ಮಿರುವ ಕಮಲದಲ್ಲಿ ಬ್ರಹ್ಮನ ಶಿಲ್ಪವಿದೆ. ಇದರ ಮೇಲ್ಭಾಗದಲ್ಲಿ ವಿಷ್ಣುವಿನ ದಶ ಅವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಬುದ್ಧ ಹಾಗೂ ಕಲ್ಕಿಯರ ಪುಟ್ಟ ಶಿಲ್ಪಗಳನ್ನು ಕಂಡರಿಸಲಾಗಿದೆ. ಪಾದದ ಬಳಿ ವಿಷ್ಣುವಿಗೆ ಅಭಿಮುಖವಾಗಿ ಲಕ್ಷ್ಮಿ ಕುಳಿತಿದ್ದಾಳೆ.

ನಂದಿ : ಕುಮಾರಸ್ವಾಮಿ ದೇವಾಲಯದ ಎದುರಿಗಿರುವ ಈ ಶಿಲ್ಪವು ಕ್ರಿ.ಶ.೧೧ನೇ ಶತಮಾನದ್ದಾಗಿದ್ದು, ಕೊರಳಲ್ಲಿ ಗೆಜ್ಜೆಯ ಪಟ್ಟಿಯನ್ನು ಮತ್ತು ಅಲಂಕಾರಿಕ ಗಂಟೆ ಸರವನ್ನು ಹಾಗೂ ಬೆನ್ನ ಮೇಲೆಯು ಅಲಂಕಾರಿಕ ಭುಜಪಟ್ಟಿಯನ್ನು, ಹಣೆ ಪಟ್ಟಿಯನ್ನು ಧರಿಸಿದೆ. ಇದೇ ಶೈಲಿಯ ಮತ್ತೊಂದು ನಂದಿ ಶಿಲ್ಪವು ಹಳೆದರೋಜಿ ಗ್ರಾಮದ ರಾಮಲಿಂಗೇಶ್ವರ ಬೆಟ್ಟದ ಮೇಲಿದೆ. ಅದರ ಕಾಲ ಕ್ರಿ.ಶ.೧೨ನೇ ಶತಮಾನ.

ಶಿವಲಿಂಗ : ಭೀಮತೀರ್ಥದ ಬಳಿಯಿರುವ ಈ ವಿಗ್ರಹವು ಕ್ರಿ.ಶ.೧೨ನೇ ಶತಮಾನದ ಶೈಲಿಯಲ್ಲಿದೆ. ಇದು ಈಗ ಶಿಥಿಲವಾಗಿದೆ. ಇದನ್ನು ಸಿಮೆಂಟ್‌ನಿಂದ ಮರಳಿ ಜೋಡಿಸಲಾಗಿದೆ.

ಹಳೆದರೋಜಿಯ ಗ್ರಾಮದ ರಾಮಲಿಂಗೇಶ್ವರ ಬೆಟ್ಟದಲ್ಲಿಯ ರಾಮಲಿಂಗೇಶ್ವರ(ಲಿಂಗ) ವಿಗ್ರಹವು ೧೨.ನೇ ಶತಮಾನದ ಶೈಲಿಯಲ್ಲಿದೆ. ಇದು ಸಹ ಈಗ ಪಾಳು ಬಿದ್ದಿದೆ.

ಸೂರ್ಯಪೀಠ : ಹಳೆದರೋಜಿಯ ವೆಂಕಟರಮಣ ದೇವಾಲಯದ ಪ್ರಾಕಾರದಲ್ಲಿ ಏಳು ಅಶ್ವಗಳು ಒಬ್ಬ ಸಾರಥಿಯನ್ನು ಹೊಂದಿದ ಕ್ರಿ.ಶ.೧೨ನೇ ಶತಮಾನಕ್ಕೆ ಸೇರಿದ ಸೂರ್ಯಪೀಠ ಹಾಗೂ ಸಿಂಹಪೀಠಗಳಿವೆ.

ಹೊಯ್ಸಳಯುಗ

ಶಿವ, ವಿಷ್ಣು, ನಾರದ, ವೀರಭದ್ರ ಶಿಲ್ಪಗಳ ಪಟ್ಟಿಕೆ (ಹೊಸಮಲೆದುರ್ಗ)

ಅಯ್ಯನ ಕೊಳ್ಳದ ಬಂಡೆಯ ಮೇಲಿರುವ ಈ ಶಿಲ್ಪಗಳ ಕಾಲ ಕ್ರಿ.ಶ.೧೩ನೇ ಶತಮಾನದ ಶಿಲಾ ಪಟ್ಟಿಕೆಯಲ್ಲಿ ವೀರಭದ್ರನು ನಿಂತಿದ್ದು, ತಲೆಯಲ್ಲಿ ಜಟಾಮುಕುಟವಿದೆ. ಚತುರ್ಬಾಹುವನ್ನೊಂದಿದ್ದು, ಕೈಗಳಲ್ಲಿ ಖಡ್ಗ, ಬಾಣ, ಬಿಲ್ಲು ಮತ್ತು ಗುರಾಣಿ ಮೇಲೆ ಕೆಳಭಾಗದಲ್ಲಿ ಎಡಗೈನ್ನಿರಿಸಿದ್ದು ದೋತ್ರವನ್ನು ಧರಿಸಿದ್ದಾನೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿಯನ್ನು ನಿರ್ಮಿಸಲಾಗಿದೆ. ಶಿಲ್ಪವು ಭಾಗಶಃ ಭಗ್ನಗೊಂಡಿದೆ. ನಾಗಶಿಲ್ಪವು ಕೋನಾಕಾರದ ಪ್ರಭಾವಳಿಯ ಆಕಾರದಲ್ಲಿ ನಾಗಶಿಲ್ಪವಿದ್ದು, ಏಳು ಹೆಡೆಗಳಿವೆ. ಇದು ವೀರಭದ್ರನ ಎಡ ಭಾಗದಲ್ಲಿದ್ದು ಅಷ್ಟೇ ಎತ್ತರವಾಗಿದೆ. ಶಿವಲಿಂಗ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಶಿಲ್ಪಗಳಿದ್ದು, ಕೆಳಭಾಗದಲ್ಲಿ ಪಾಣಿಪೀಠವಿರುವ ಶಿವಲಿಂಗ ಶಿಲ್ಪವಿದೆ. ಲಿಂಗ, ನಂದಿ ಮತ್ತು ನಾರದಮುನಿಗಳ ಶಿಲ್ಪಗಳಲ್ಲಿ, ಶಿವಲಿಂಗ ಶಿಲ್ಪದ ಬದಿಯಲ್ಲಿ ನಂದಿ ಶಿಲ್ಪವಿದ್ದು, ಅದರ ಕೆಳಭಾಗದಲ್ಲಿ ತಂಬೂರಿಯನ್ನು ಹಿಡಿದು ಸಂಗೀತದಲ್ಲಿ ಮಗ್ನನಾಗಿರುವ ನಾರದ ಮುನಿಯ ಶಿಲ್ಪವಿದೆ.

ನಂದಿಯ ಮೇಲೆ ಶಿವ, ಪಾರ್ವತಿಯರು ಆಸೀನರಾಗಿದ್ದಾರೆ. ಶಿವನ ಕೈಯಲ್ಲಿರುವ ಡಮರು ಮತ್ತು ಶಿವ, ಪಾರ್ವತಿಯರ ಕಾಲುಗಳು ಮತ್ತು ಕಠೀ ಭಾಗಗಳು ಕಾಣಿಸುತ್ತವೆ. ನಂದಿಯು ತನ್ನ ಬೆನ್ನ ಮೇಲೆ ಆಸೀನರಾಗಿರುವ ಶಿವ ಪಾರ್ವತಿಯರನ್ನು ನೋಡುತ್ತಿರುವಂತಿದೆ. ನಂದಿಯ ಕೊರಳಲ್ಲಿ ಗಂಟೆಗಳ ಹಾರವಿದ್ದು, ಬೆನ್ನ ಮೇಲೆ ಅಲಂಕಾರಿಕವಾಗಿ ಜೂಲವನ್ನು ಹೊದಿಸಿದಂತಿದೆ. ಪ್ರಸ್ತುತ ಈ ಶಿಲ್ಪದ ಮೇಲ್ಭಾಗವು ಭಾಗಶಃ ಭಿನ್ನಗೊಂಡಿವೆ. ವಿಷ್ಣು ಸಮಭಂಗಿಯಲ್ಲಿ ನಿಂತಿದ್ದು ಮೇಲ್ಭಾಗ ಭಗ್ನಗೊಂಡಿದೆ. ಹಿಂದಿನ ಕೈಗಳಲ್ಲಿ ಚಕ್ರ, ಶಂಖ ಹಾಗೂ ಮುಂದಿನ ಎಡಗೈ ಕಟಿಹಸ್ತ, ಬಲಗೈಯು ಅಭಯ ಹಸ್ತದಲ್ಲಿದೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿ ಇದೆ. ಈ ಶಿಲ್ಪ ಪಟ್ಟಿಕೆಯು ದೇವ ಸಭೆಯನ್ನು ಪ್ರತಿಬಿಂಬಿಸುವಂತೆ ಕಾಣಿಸುತ್ತದೆ.

ಶಿವಲಿಂಗ : ಹೊಸಮಲೆದುರ್ಗದ ಆಂಜನೇಯ ದೇವಾಲಯದ ಗರ್ಭಗೃಹದಲ್ಲಿರುವ ಈ ಶಿವಲಿಂಗವು ಅಂಡಾಕಾರವಾಗಿದೆ. ಶಿವಲಿಂಗದ ಪೀಠದ ಮೇಲ್ಭಾಗ ವೃತ್ತಾಕಾರವಾಗಿದ್ದು, ಪ್ರಣಾಳವಿದೆ. ಈ ಶಿವಲಿಂಗದ ಹಿಂಭಾಗದಲ್ಲಿ ಆಂಜನೇಯನ ಶಿಲ್ಪವಿದೆ. ಈ ಶಿವಲಿಂಗದ ಕಾಲ ಕ್ರಿ.ಶ.೧೩-೧೪ನೇ ಶತಮಾನ.

ವೀರಭದ್ರ : ಹೊಸಮಲೆದುರ್ಗದ ಹುಲಿಮಾನಪ್ಪನ ಮಠದ ಒಳಭಾಗದಲ್ಲಿಯ ಕ್ರಿ.ಶ.೧೩-೧೪ನೇ ಶತಮಾನದ ವೀರಭದ್ರ ಶಿಲ್ಪವು ತ್ರಿಭಂಗಿಯಲ್ಲಿ ನಿಂತಿದ್ದು, ಚತುರ್ಬಾಹುವನ್ನೊಳಗೊಂಡಿದ್ದ, ಇದು

ಖಡ್ಗ, ಬಾಣ, ಬಿಲ್ಲುಗಳನ್ನು ಹಿಡಿದು ಗುರಾಣಿಯ ಮೇಲೆ ಕೈಯನ್ನು ಇರಿಸಿದ್ದಾನೆ. ಶಿರದಲ್ಲಿ ಜಟಾ ಮುಕುಟವಿದ್ದು, ಹಣೆಯಲ್ಲಿ ಮೂರನೇ ಕಣ್ಣು ಇದ್ದು, ಕಿವಿಯಲ್ಲಿ ಸರ್ಪಕುಂಡಲವಿದೆ. ಜಟಾಮುಕುಟದಲ್ಲಿ ಚಿಕ್ಕದಾದ ಶಿವಲಿಂಗ ಮೂಡಲ್ಪಟ್ಟ ಚಿತ್ರಣ ನಿಜಕ್ಕೂ ಸುಂದರ. ಕಂಠಾಭರಣ ಕೈತೋಳುಗಳಲ್ಲಿ ಮತ್ತು ಕಡಗಗಳನ್ನು ಧರಿಸಿದ್ದಾನೆ. ದೋತ್ರ ಹಾಗೂ ರುಂಡಮಾಲೆಯನ್ನು ಧರಿಸಿರುವನು. ಈ ಶಿಲ್ಪದಲ್ಲಿ ಪ್ರಭಾವಳಿ ಇದ್ದು, ಕೆಳಭಾಗದಲ್ಲಿ ಎರಡು ಬದಿಯಲ್ಲಿ ದಕ್ಷಬ್ರಹ್ಮನು ಅಂಜಲಿ ಮುದ್ರೆಯಲ್ಲಿದ್ದಾನೆ. ಎಡಭಾಗದಲ್ಲಿ ನಿಂತಿರುವ ಸ್ತ್ರೀ ಶಿಲ್ಪವು ಬಲಗೈ ಅಭಯ ಹಸ್ತದಲ್ಲಿದ್ದು ಎಡಗೈಯು ವ್ಯಾಖ್ಯಾನ ಮುದ್ರೆಯಲ್ಲಿದೆ.

ಭೈರವ : ಹೊಸಮಲೆದುರ್ಗದ ಹುಲಿಮಾನಪ್ಪನ ಮಠದ ಮುಂದಿರುವ ಕ್ರಿ.ಶ.೧೩-೧೪ನೇ ಶತಮಾನದ ಈ ಶಿಲ್ಪವು ಈಗ ಭಗ್ನಗೊಂಡಿದೆ. ಭೈರವನು ತ್ರಿಭಂಗಿಯಲ್ಲಿ ನಿಂತಿರುವನು. ಪಾದಗಳಲ್ಲಿ ಆಭರಣಗಳಿವೆ. ಎಡ-ಬಲದಲ್ಲಿ ಭೂತಗಣಗಳಿವೆ. ಕುಳಿತುಕೊಂಡಿರುವ ಭೂತಗಣ ಶಿಲ್ಪದ ಪೀಠ ಭಾಗದ ಮಧ್ಯದಲ್ಲಿ ಚೇಳಿನ ಶಿಲ್ಪವಿರುವುದು.

ಸ್ತ್ರೀ ದೇವತೆಯ ಶಿಲ್ಪ : ಹೊಸಮಲೆದುರ್ಗದ ಹುಲಿಮಾನಪ್ಪನ ಮಠದ ಮುಂದಿರುವ ಕ್ರಿ.ಶ.೧೩-೧೪ ನೇ.ಶತಮಾನದ ಈ ಶಿಲ್ಪವು ಸಮಭಂಗಿಯಲ್ಲಿ ನಿಂತಿದೆ. ಇದು ಈಗ ಭಗ್ನಗೊಂಡಿದೆ. ಈ ಶಿಲ್ಪದ ಮೇಲ್ಭಾಗದ ಸುತ್ತಲೂ ಪ್ರಭಾವಳಿ ಇದ್ದು, ಅದರ ಪಟ್ಟಿಕೆಯಲ್ಲಿ ಲತಾ, ಪುಷ್ಪ, ದೇವರ ಚಿತ್ರಗಳಿವೆ. ಶಿಲ್ಪದ ಮುಂದಿನ ಕೈಗಳು ಭಗ್ನವಾಗಿವೆ. ಧರಿಸಿರುವ ಸೀರೆಯು ಕಲಾತ್ಮಕವಾಗಿದ್ದು. ನೆರಿಗೆಯು ಸ್ವಲ್ಪ ಎದ್ದು ಕಾಣುವಂತಿದ್ದು ಕೆಳಭಾಗದಲ್ಲಿ ವಿಶಾಲವಾಗಿ ಹರಡಿಕೊಂಡಿದೆ. ಕೊರಳಲ್ಲಿ ಪದಕವಿದೆ. ಶಿಲ್ಪದ ಮುಖದ ಭಾಗವು ಸವೆದಿದೆ.

ದುರ್ಗ : ದರೋಜಿ ಗ್ರಾಮದ ಬಸ್ ನಿಲ್ದಾಣದ ಬಳಿಯಿರುವ ಚಿಕ್ಕ ಗುಡಿಯಲ್ಲಿಯ ಕ್ರಿ.ಶ.೧೩-೧೪ನೇ ಶತಮಾನದ ಈ ಶಿಲ್ಪವು ಚತುರಾಶ್ರ ಪೀಠದ ಮೇಲೆ ಸುಖಾಸನದಲ್ಲಿ ಆಸೀನಳಾಗಿರುವ ಈ ದೇವಿಯು ಚರ್ತುಬಾಹುಗಳನೊಂದಿದ್ದು, ಖಡ್ಗ, ಡಮರು, ತ್ರಿಶೂಲ ಹಾಗೂ ಪಾತ್ರೆ(ಬಟ್ಟಲನ್ನು)ಯನ್ನು ಹಿಡಿದಿದ್ದಾಳೆ. ಶಿರದಲ್ಲಿ ಕರಂಡ ಮುಕುಟವಿದೆ. ಕೈ ಹಾಗೂ ಕಾಲುಗಳಲ್ಲಿ ಕಡಗಾಭರಣಗಳಿದ್ದು, ಕರ್ಣಕುಂಡಲವಿದೆ.

ವಿಷ್ಣು : ಹಳೆದರೋಜಿಯ ಕೋಟೆಯ ರಸ್ತೆಗೆ ಹೊಂದಿಕೊಂಡಂತೆ ಇರುವ ಚಿಕ್ಕ ದೇವಾಲಯದಲ್ಲಿಯ ಕ್ರಿ.ಶ.೧೩-೧೪ನೇ ಶತಮಾನದ ಈ ಶಿಲ್ಪವು ಚರ್ತುಬಾಹುವನ್ನೊಂದಿದ್ದು, ಹಿಂದಿನ ಕೈಗಳಲ್ಲಿ ಶಂಖ, ಚಕ್ರವನ್ನು ಹಾಗೂ ಮುಂದಿನ ಬಲಗೈ ಅಭಯ, ಎಡಗೈ ಕಟ್ಯಾವಲಂಬಿತವಾಗಿದೆ. ತಲೆಯಲ್ಲಿ ಕರಂಡ ಮುಕುಟ, ಕೊರಳಲ್ಲಿ ಹಾರಗಳಿವೆ.

ಶೂಲಬ್ರಹ್ಮ ಅಥವಾ ಗುಂಡ ಬ್ರಹ್ಮಯ್ಯರು : ಹೊಸಮಲೆದುರ್ಗದ ಹುಲಿಮಾನಪ್ಪನ ಮಠದ ಒಳಭಾಗದಲ್ಲಿಯ ಕ್ರಿ.ಶ.೧೩-೧೪ನೇ ಶತಮಾನದ ಶಿಲ್ಪಗಳು ಇವು. ಹುಲಿಮಾನಪ್ಪನ ಶಿಲ್ಪದ

ಕೆಳಭಾಗದಲ್ಲಿ ಶೂಲಬ್ರಹ್ಮ ಹಾಗೂ ಗುಂಡ ಬ್ರಹ್ಮಯ್ಯಗಳ ಶಿಲ್ಪಗಳಿವೆ. ಗುಂಡ ಬ್ರಹ್ಮಯ್ಯರು ತಮ್ಮ ಕೈಗಳಲ್ಲಿ ಶೂಲವನ್ನು ಹಿಡಿದುನಿಂತಿದ್ದು ಹುಲಿಯ ಮೇಲೆ ಕುಳಿತಿರುವ ಯೋಗಿಯನ್ನು ನೋಡುತ್ತಿರುವಂತಿದೆ.

ಹುಲಿಮಾನಪ್ಪ : ಹೊಸಮಲೆದುರ್ಗದ ಹುಲಿಮಾನಪ್ಪನ ಮಠದ ಒಳಭಾಗದಲ್ಲಿರುವ ಕ್ರಿ.ಶ.೧೩-೧೪ನೇ ಶತಮಾನದ ಈ ಶಿಲ್ಪವು, ಒಬ್ಬ ಯೋಗಿ(ಸಂತ) ಹುಲಿಯ ಮೇಲೆ ಕುಳಿತಿದ್ದು ಸರ್ಪವನ್ನು ಹುಲಿಯ ಬಾಯಿಗೆ ಕಡಿವಾಣ ಹಾಕಿ ಎಡಗೈಯಲ್ಲಿ ಹಿಡಿದಿದ್ದಾನೆ. ಕೊರಳಲ್ಲಿ ಶಿವಲಿಂಗ ಕರಡಿಗೆಯನ್ನು ಧರಿಸಿದ್ದು, ಕೈತೋಳು ಮತ್ತು ಮುಂಗೈಯಲ್ಲಿ ರುದ್ರಾಕ್ಷಿ ಮಾಲೆಗಳನ್ನು, ಕಟಿಯಲ್ಲಿ ಉಡಿದಾರ, ಮುಂಗಾಲುಗಳಲ್ಲಿ ಕಡಗಗಳನ್ನು ಧರಿಸಿದ್ದು, ಹುಲಿಯ ಮೇಲೆ ಕುಳಿತಂತಿದೆ.

ವಿಜಯನಗರ ಯುಗ

ನಂದಿ : ಹಳೆದರೋಜಿ ಗ್ರಾಮದ ಒಳಗೆ ಇರುವ ಈ ಶಿಲ್ಪವು ಕ್ರಿ.ಶ.೧೪ನೇ ಶತಮಾನದ್ದಾಗಿದೆ. ಇದು ಕೊರಳಲ್ಲಿ ಗಂಟೆಯ ಸರಗಳನ್ನು ಹಾಗೂ ಹಣೆ ಪಟ್ಟಿಯನ್ನು ಧರಿಸಿದೆ. ಇದೇ ಗ್ರಾಮದ ರಾಮಲಿಂಗೇಶ್ವರ ಬೆಟ್ಟದ ಮೇಲಿನ ಮತ್ತೊಂದು ಬಸವಣ್ಣನ ವಿಗ್ರಹವು ಕ್ರಿ.ಶ.೧೫ನೇ ಶತಮಾನದ್ದಾಗಿದ್ದು ಕೊರಳಲ್ಲಿ ಗೆಜ್ಜೆ ಸರವನ್ನು ಹಾಗೂ ಗಂಟೆ ಸರವನ್ನು ಬೆನ್ನಹಿಂದೆ ಗಂಟೆ ಸರವನ್ನು ಕಾಲಲ್ಲಿ ಕಡಗವನ್ನು, ಹಣೆ ಪಟ್ಟಿಯನ್ನು ಧರಿಸಿದೆ. ಇದೇ ಬೆಟ್ಟದ ಮೇಲೆ ಇರುವ ಮತ್ತೊಂದು ಕ್ರಿ.ಶ.೧೫ನೇ ಶತಮಾನಕ್ಕೆ ಸೇರುವ ಬಸವಣ್ಣನ ಶಿಲ್ಪವು ಕೊರಳಲ್ಲಿ ಗೆಜ್ಜೆಸರಗಳನ್ನು ಧರಿಸಿದ್ದ ಇದು ಸವೆದಿದೆ. ಇದೇ ಗ್ರಾಮದ ಹೊರಗೆ ಹನುಮಂತನ ದೇವಾಲಯದ ಸಮೀಪದಲ್ಲಿರುವ ಎದುರು ಬಸವಣ್ಣನ ಶಿಲ್ಪವು ಸಹ ಕೊರಳ ಹಾರಗಳನ್ನು ಹಾಗೂ ಹಣೆ ಪಟ್ಟಿಯನ್ನು ಧರಿಸಿದ್ದು, ಇದು ಕ್ರಿ.ಶ.೧೫ನೇ ಶತಮಾನದ್ದಾಗಿದೆ.

ಕೇಶವ : ಹೊಸಮಲೆದುರ್ಗದ ರಾಮಸ್ವಾಮಿದೇವಾಲಯದ ಗರ್ಭಗೃಹದಲ್ಲಿಯ ಕ್ರಿ.ಶ.೧೫-೧೬ನೇ ಶತಮಾನದ ಈ ಶಿಲ್ಪವು ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಶಿಲ್ಪವು ಚರ್ತುಬಾಹುಗಳನೊಂದಿದ್ದು, ಹಿಂದಿನ ಕೈಗಳಲ್ಲಿ ಶಂಖ, ಚಕ್ರವನ್ನು ಹಾಗೂ ಮುಂದಿನ ಕೈಗಳಲ್ಲಿ ಗಧೆ, ಪದ್ಮಗಳಿವೆ. ಶಿರದ ಹಿಂಭಾಗದಲ್ಲಿ ಪ್ರಭಾವಳಿ ಇದೆ. ಶಿರದಲ್ಲಿ ಕರಂಡ ಮುಕುಟವಿದೆ. ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತ, ವೈಜಯಂತಿಹಾರ, ಕಾಲಗಡಗಗಳಿಂದಲಂಕೃತವಾಗಿದೆ.

ರಾಮ ಮತ್ತು ಸೀತೆ : ವಡ್ಡು ಗ್ರಾಮದ ಹಳ್ಳದರಾಯ ದೇವಾಲಯದಲ್ಲಿಯ ಮತ್ತೊಂದು ಗರ್ಭಗೃಹದಲ್ಲಿರುವ ಈ ವಿಗ್ರಹಗಳು ಕ್ರಿ.ಶ.೧೬ನೇ ಶತಮಾನದ ಶೈಲಿಯಲ್ಲಿವೆ. ರಾಮನ ಶಿಲ್ಪವು ಸಮಭಂಗಿಯಲ್ಲಿದ್ದು, ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತ, ಸೊಂಟಪಟ್ಟಿ, ಕಠೀಸೂತ್ರಗಳಿಂದ ಅಲಂಕೃತವಾಗಿದ್ದಾನೆ. ಈತನು ದ್ವಿಭುಜವನ್ನೊಂದಿದ್ದು, ಎಡಗೈಯಲ್ಲಿ ಬಿಲ್ಲನ್ನು ಹಾಗೂ ಬಲಗೈಯನ್ನು ಬಾಣ ಸಹಿತವಾಗಿ ಆಂಜನೇಯನಿಗೆ ಆಶೀರ್ವಾದಿಸುತ್ತಿದ್ದಾನೆ. ಆಂಜನೇಯನು

ಅಂಜಲಿ ಮುದ್ರೆಯಲ್ಲಿ ಕುಳಿತ ಶೈಲಿಯಲ್ಲಿದ್ದಾನೆ. ಸೀತೆಯ ವಿಗ್ರಹವು ಸಮಭಂಗಿಯಲ್ಲಿ ನಿಂತಿದ್ದು, ಕಿರೀಟ ಮುಕುಟ, ಕಂಠಾಭರಣ, ಕಾಲುಗಡಗ, ಗೆಜ್ಜೆ, ಕೈಗಡಗ, ಬಳೆ, ಮೂಗುತಿ, ಸೊಂಟಕ್ಕೆ ಡಾಬುಗಳಿಂದ ಅಲಂಕೃತಳಾಗಿದ್ದಾಳೆ. ಈಕೆಯ ಬಲಗೈಯು ಅಭಯ ಹಸ್ತದಲ್ಲಿದ್ದು, ಎಡಗೈಯು ವರದ ಹಸ್ತದಲ್ಲಿದೆ.

ವೆಂಕಟರಮಣ : ಹಳೆದರೋಜಿ ಗ್ರಾಮದ ಒಳಗೆ ಇರುವ ವೆಂಕಟರಮಣನ ವಿಗ್ರಹವು ಕ್ರಿ.ಶ.೧೬ನೇ ಶತಮಾನದ್ದಾಗಿದೆ. ಈತನು ಚರ್ತುಬಾಹುವನ್ನೊಳಗೊಂಡಿದ್ದು, ಮುಂದಿನ ಬಲಗೈಯನ್ನು ವರದ ಹಸ್ತದಲ್ಲಿ, ಎಡಗೈಯು ಕಟ್ಯಾವಲಂಬಿತವಾಗಿದೆ. ಹಿಂದಿನ ಬಲಗೈಯಲ್ಲಿ ಚಕ್ರವನ್ನು ಮತ್ತು ಎಡಗೈಯಲ್ಲಿ ಶಂಖವನ್ನು ಹಿಡಿದುಕೊಂಡಿದ್ದಾನೆ. ತಲೆಯಲ್ಲಿ ಕರಂಡ ಮುಕುಟವನ್ನು, ಕರ್ಣಾಭರಣ, ಕಂಠಾಭರಣ, ಭುಜಕವಚ, ಕೇಯೂರ, ಕೈಗಡಗ, ಕಾಲುಗಡಗ, ಪಾದಗೆಜ್ಜೆ, ಕಠೀಸೂತ್ರ, ದೋತ್ರವನ್ನು ಧರಿಸಿಕೊಂಡಿದ್ದಾನೆ. ಶಾಂತ ಮುಖ ಭಾವವನ್ನು ಹೊಂದಿದ ಈತನು ಸಮಭಂಗಿಯಲ್ಲಿ ನಿಂತಿದ್ದಾನೆ.

ಆಂಜನೇಯ : ಮೆಟ್ರಿಕಿ ಗ್ರಾಮದ ಹೊರಗೆ ಇರುವ ಕ್ರಿ.ಶ.೧೬ನೇ ಶತಮಾನದ ಈ ಶಿಲ್ಪವು ಕೊರಳಹಾರ, ಕೇಯೂರ, ಕೈಗಡಗ, ಕಾಲುಗಡಗ, ಯಜ್ಞೋಪವಿತ, ಭುಜಕವಚಗಳಿಂದಲಂಕೃತವಾಗಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯನ್ನು ಎದೆಯ ಭಾಗದಲ್ಲಿ ಇಟ್ಟುಕೊಂಡಿದ್ದಾನೆ.

ಸೋವೇನಹಳ್ಳಿ ಗ್ರಾಮದ ಒಳಗೆ ಇರುವ ಕ್ರಿ.ಶ.೧೬ನೇ ಶತಮಾನಕ್ಕೆ ಸೇರಿದ ಈ ವಿಗ್ರಹವು ಕೊರಳಲ್ಲಿ ಪದಕ ಸರವನ್ನು, ಉದರ ಬಂಧವನ್ನು ಭುಜಕವಚ, ಕೇಯೂರ, ಕೈಗಡಗ, ಚನ್ನವೀರ, ಕಾಲುಗಡಗಳಿಂದಲಂಕೃತವಾಗಿದ್ದ ಇದರ ಬಲಗೈಯು ಅಭಯ ಹಸ್ತವನ್ನೊಂದಿದ್ದು ಎಡಗೈಯಲ್ಲಿ ಗಧೆಯನ್ನು ಹಿಡಿದುಕೊಂಡಿದೆ.

ಜಗಿನಹಳ್ಳಿ ಗ್ರಾಮದ ಹೊರಗೆ ಇರುವ ಕ್ರಿ.ಶ.೧೬ನೇ ಶತಮಾನದ ಈ ಶಿಲ್ಪವು ಕೊರಳಲ್ಲಿ ಕಂಠೀಹಾರ, ಪದಕಸರ, ರತ್ನಹಾರ, ಭುಜಕವಚ, ಕೇಯೂರ, ಕೈಗಡಗ, ಚನ್ನವೀರ, ಕಾಲುಗಡಗ, ಪಾದಗೆಜ್ಜೆಗಳಿಂದಲಂಕೃತವಾಗಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ.

ಗಣೇಶ : ಸಂಡೂರಿನ ಈಶ್ವರ ದೇವಾಲಯದ ಆವರಣದಲ್ಲಿರುವ ಈ ವಿಗ್ರಹವು ಕ್ರಿ.ಶ.೧೬ನೇ ಶತಮಾನದ್ದಾಗಿದೆ. ಇದು ಕರಂಡ ಮುಕುಟ, ಕೊರಳಾಭರಣ, ಕೇಯೂರ, ಭುಜಕವಚ, ಯಜ್ಞೋಪವಿತ, ಉದರಕ್ಕೆ ನಾಗಬಂಧ, ಕೈಗಡಗ, ಕಾಲುಗಡಗಗಳಿಂದಲಂಕೃತವಾದ ಈ ಶಿಲ್ಪವು ಚರ್ತುಬಾಹುಗಳನ್ನೊಂದಿದ್ದು, ಮುಂದಿನ ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಮೊದಕವಿದ್ದು ಸೊಂಡಿಲಿನಿಂದ ತಿನ್ನುವಂತಿದೆ. ಹಿಂದಿನ ಬಲಗೈಯು ಪರಶುವನ್ನು ಹಾಗೂ ಎಡಗೈಯಲ್ಲಿ ಡಮರುವನ್ನು ಹಿಡಿದಿದೆ. ಪಾದದ ಬಳಿ ವಾಹನ ಇಲಿ ಇದೆ. ಸುತ್ತಲು ಸುರುಳಿಗಳಿಂದ ಕೂಡಿದ ಪ್ರಭಾವಳಿ ಇದೆ.

ಪಾರ್ವತಿ : ಸಂಡೂರಿನ ಈಶ್ವರ ದೇವಾಲಯದ ಆವರಣದಲ್ಲಿಯ ಈ ಮೂರ್ತಿ ಶಿಲ್ಪವು ಕ್ರಿ.ಶ.೧೬ನೇ ಶತಮಾನದ್ದಾಗಿದ್ದು, ಕಿರೀಟ, ಮುಕುಟ, ಕಂಠಾಭರಣ, ಕೈಗಡಗ, ಬಳೆಗಳು, ಕಾಲುಗಡಗ, ಕರ್ಣಾಭರಣಗಳಿಂದಲಂಕೃತವಾಗಿದ್ದಾಳೆ. ಶಾಂತ ಮುಖಭಾವವನ್ನೊಂದಿದ ಈಕೆಯು ಸಮಭಂಗಿಯಲ್ಲಿ ನಿಂತಿರುವಳು. ದ್ವಿಭುಜಗಳನ್ನೊಂದಿದ ಈಕೆಯು ಬಲಗೈಯಲ್ಲಿ ತಾವರೆ ಮೊಗ್ಗನ್ನು ಹಾಗೂ ಎಡಗೈಯಲ್ಲಿ ಡಮರುವನ್ನು ಹಿಡಿದಿದ್ದಾಳೆ. ಸುತ್ತಲೂ ಲತಾ ಸುರುಳಿಯ ಪ್ರಭಾವಳಿ ಇದೆ.

ಲಿಂಗ : ಹೊಸಮಲೆದುರ್ಗದ ರಾಮದೇವರ ದೇವಾಲಯದ ಗರ್ಭಗೃಹದಲ್ಲಿಯ ಕ್ರಿ.ಶ.೧೬ನೇ ಶತಮಾನದ ಶಿವಲಿಂಗವು ಪೀಠದ ಮೇಲಿದ್ದು ಅಂಡಾಕಾರವಾಗಿದೆ. ಈ ಶಿವಲಿಂಗದ ಹಿಂಭಾಗದಲ್ಲಿ ಕೇಶವನ ಮೂರ್ತಿ ಶಿಲ್ಪವಿದೆ.

ಚೊರುನೂರು ಗ್ರಾಮದ ಒಳಗೆ ಇರುವ ವೀರಭದ್ರನ ವಿಗ್ರಹವು ಕ್ರಿ.ಶ.೧೬ನೇ ಶತಮಾನಕ್ಕೆ ಸೇರಿದ್ದಾಗಿದೆ. ಗಂಭೀರವಾದ ಮುಖ ಭಾವವನ್ನು ಹೊಂದಿದ ಈತನು ಸಮಭಂಗಿಯಲ್ಲಿ ನಿಂತಿದ್ದಾನೆ. ಈತನು ಚರ್ತುಬಾಹುಗಳನ್ನೊಂದಿದ್ದು, ಬಲಗೈಯಲ್ಲಿ ಖಡ್ಗ-ಬಾಣಗಳನ್ನು ಹಾಗೂ ಎಡಗೈಯಲ್ಲಿ ಬಿಲ್ಲು-ಗಧೆಯನ್ನು ಹಿಡಿದಿದ್ದಾನೆ. ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣ, ಕೈಗಡಗ, ಕಾಲುಗಡಗ, ಯಜ್ಞೋಪವಿತ ಕೇಯೂರ, ಸೊಂಟಪಟ್ಟಿಗಳಿಂದಲಂಕೃತನಾಗಿದ್ದು, ಸೊಂಟಪಟ್ಟಿಯಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದಾನೆ. ಈತನ ಬಲಗಾಲ ಪಕ್ಕಕ್ಕೆ ದಕ್ಷಯಜ್ಞನ ಪ್ರತಿಮೆ ಇದೆ.

ವಿಜಯನಗರೋತ್ತರ ಯುಗ

ವೆಂಕಟೇಶ್ವರ : ಸಂಡೂರಿನ ಈಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೭ನೇ ಶತಮಾನದ ಶೈಲಿಯಲ್ಲಿರುವ ಈ ವಿಗ್ರಹವು ಚರ್ತುಬಾಹುಗಳನ್ನೊಳಗೊಂಡಿದ್ದು ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದ್ದು ಎಡಗೈಯು ಕಟ್ಯಾವಲಂಭಿತವಾಗಿದೆ. ಹಿಂದಿನ ಬಲಗೈಯಲ್ಲಿ ಚಕ್ರವನ್ನು ಹಾಗೂ ಎಡಗೈಯಲ್ಲಿ ಶಂಖವನ್ನು ಹಿಡಿದುಕೊಂಡಿದ್ದಾನೆ. ಕರಂಡ ಮುಕುಟ, ಕರ್ಣಕುಂಡಲ, ಕಂಠಾಭರಣಗಳು, ಯಜ್ಞೋಪವಿತ, ಚನ್ನವೀರ, ಕೇಯೂರ, ಭುಜಕವಚ, ಕೈಗಡಗ ಕಾಲುಗಡಗ, ಕಠೀ ಸೂತ್ರಗಳಿಂದಲಂಕೃತವಾಗಿದ್ದು, ಸಮಭಂಗಿಯಲ್ಲಿ ನಿಂತಿದ್ದಾನೆ. ಊರ್ಧ್ವಪೀಠದಲ್ಲಿ ಪ್ರತಿಷ್ಠಾಪಿಸಲಾದ ಈ ವಿಗ್ರಹದ ಪೀಠದ ಬಲಗಡೆಗೆ ಅಂಜಲಿ ಮುದ್ರೆಯಲ್ಲಿ ಕುಳಿತ ಗರುಡನ ಚಿಕ್ಕ ಶಿಲ್ಪವನ್ನು ಹಾಗೂ ಎಡಗಡೆಗೆ ಅಂಜಲಿ ಮುದ್ರೆಯಲ್ಲಿ ನಿಂತ ಹನುಮಂತನ ಚಿಕ್ಕ ಶಿಲ್ಪವನ್ನು ಕಂಡರಿಸಲಾಗಿದೆ. ವಿಗ್ರಹದ ಸುತ್ತಲೂ ನವಿಲಿನ ಕೊಕ್ಕಿನಿಂದ ಹೊರಟ ಹೂವಿನ ಸುರುಳಿಯಿಂದಲಂಕೃತವಾದ ಪ್ರಭಾವಳಿ ಇದೆ.

ನಂದಿ : ಭೀಮತೀರ್ಥ ದೇವಾಲಯದ ಆವರಣದಲ್ಲಿಯ ಈ ಶಿಲ್ಪವು ಕ್ರಿ.ಶ.೧೭ನೇ ಶತಮಾನದ್ದಾಗಿದೆ. ಇದು ಹಣೆಪಟ್ಟಿ, ಕೊರಳಲ್ಲಿ ಗೆಜ್ಜೆಯ ಪಟ್ಟಿಯನ್ನು ಮತ್ತು ಗೆಜ್ಜೆಯ ಸರವನ್ನು ಕಾಲಲ್ಲಿ ಕಡಗವನ್ನು ಧರಿಸಿದೆ.

ಶಿವಲಿಂಗ : ಇದೇ ದೇವಾಲಯದ ಆವರಣದಲ್ಲಿರುವ ಈ ವಿಗ್ರಹವು ಕ್ರಿ.ಶ.೧೭ನೇ ಶತಮಾನದ ಶೈಲಿಯಲ್ಲಿದೆ. ಇದರ ಪೀಠವು ಉತ್ತಮವಾಗಿದ್ದು ಲಿಂಗ ಮಾತ್ರ ಶಿಥಿಲವಾಗಿದೆ.

ಜೋಗ ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ವೀರಭದ್ರನ ವಿಗ್ರಹವು ಚತುರ್ಬಾಹುಗಳನ್ನೊಂದಿದ್ದು, ಬಲಗೈಯಲ್ಲಿ ಖಡ್ಗ-ಬಾಣವನ್ನು ಹಾಗೂ ಎಡಗೈಯಲ್ಲಿ ಗಧೆ-ಬಿಲ್ಲುಗಳನ್ನು ಹಿಡಿದಿದ್ದಾನೆ. ಈತನು ಕಿರೀಟ ಮುಕುಟ, ಕಂಠಾಭರಣ, ಕರ್ಣಾಭರಣ, ಕೈಗಡಗ, ಕಾಲುಗಡಗ, ಸೊಂಟಪಟ್ಟಿ, ಯಜ್ಞೋಪವೀತಗಳಿಂದಲಂಕೃತನಾಗಿದ್ದಾನೆ. ಬಲಗಾಲ ಪಕ್ಕಕ್ಕೆ ದಕ್ಷಯಜ್ಞನ ಪ್ರತಿಮೆ ಇದೆ.

ಬಂಡ್ರಿ ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ವೀರಭದ್ರನ ವಿಗ್ರಹವು ಚತುರ್ಬಾಹುವನ್ನೊಂದಿದ್ದು, ಬಲಗೈಯಲ್ಲಿ ಖಡ್ಗ-ಬಾಣವನ್ನು ಹಾಗೂ ಎಡಗೈಯಲ್ಲಿ ಬಿಲ್ಲು-ಗಧೆಯನ್ನು ಹಿಡಿದಿದ್ದಾನೆ. ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣ, ಕೇಯೂರ, ಯಜ್ಞೋಪವಿತ, ಸೊಂಟಪಟ್ಟಿ, ಕೈಗಡಗ, ಪಾದಗೆಜ್ಜೆ, ಭುಜ ಕವಚಗಳಿಂದಲಂಕೃತನಾಗಿದ್ದಾನೆ.

ವಡ್ನು ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ಶೈಲಿಯಲ್ಲಿರುವ ಹಳ್ಳದರಾಯ ಎಂದು ಕರೆಯಲ್ಪಡುವ ಈ ಶಿಲ್ಪವು ದ್ವಿಬಾಹುವನ್ನೊಂದಿದ್ದು, ಬಲಗೈಯು ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಈತನ ಶಿಲ್ಪವು ಕಂಠಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಚನ್ನವೀರ, ಯಜ್ಞೋಪವಿತಗಳಿಂದ ಅಲಂಕೃತವಾಗಿದ್ದಾನೆ.

ಜೋಗ ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ಈ ವಿಗ್ರಹವು ದ್ವಿಬಾಹುಗಳನ್ನೊಂದಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಈತನು ಕಂಠಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಚನ್ನವೀರ, ಯಜ್ಞೋಪವಿತಗಳನ್ನು ಧರಿಸಿದ್ದಾನೆ.

ಚೋರುನೂರು ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ಈ ಶಿಲ್ಪವು ದ್ವಿಬಾಹುವನ್ನೊಂದಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಕಂಠಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಯಜ್ಞೋಪವಿತಗಳಿಂದ ಅಲಂಕೃತನಾಗಿದ್ದಾನೆ.

ಕುರೆಕುಪ್ಪೆ ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ಈ ಮೂರ್ತಿ ಶಿಲ್ಪವು ದ್ವಿಭುಜಗಳನ್ನೊಂದಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಈತನು ಕಂಠಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಯಜ್ಞೋಪವಿತ, ಚನ್ನವೀರಗಳಿಂದ ಅಲಂಕೃತನಾಗಿದ್ದಾನೆ.

ತುಂಬರಗುದ್ದಿ ಗ್ರಾಮದ ಒಳಗೆ ಇರುವ ಕ್ರಿ.ಶ.೧೭ನೇ ಶತಮಾನದ ಈ ವಿಗ್ರಹವು ದ್ವಿಬಾಹುಗಳನ್ನೊಂದಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಕಂಠಾಭರಣ, ಕೇಯೂರ, ಕೈಗಡಗ ಕಾಲುಗಡಗ, ಯಜ್ಞೋಪವಿತಗಳಿಂದ ಅಲಂಕೃತನಾಗಿದ್ದಾನೆ.

ರಾಮಘಡದಲ್ಲಿರುವ ರಾಮನ ಮೂರ್ತಿ ಶಿಲ್ಪವು ಚರ್ತುಬಾಹುವನ್ನೊಂದಿದ್ದು, ಹಿಂದಿನ ಬಲಗೈಯಲ್ಲಿ ಶಂಖವನ್ನು ಹಾಗೂ ಎಡಗೈಯಲ್ಲಿ ಚಕ್ರವನ್ನು ಮತ್ತು ಮುಂದಿನ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯು ವರದ ಮುದ್ರೆಯಲ್ಲಿದೆ. ಈ ಶಿಲ್ಪವು ಕಿರೀಟ ಮುಕುಟ, ಕರ್ಣಾಭರಣ, ಚನ್ನವೀರ, ಯಜ್ಞೋಪವಿತ, ಕೇಯೂರ, ಕೈಗಡಗ, ಕಾಲುಗಡಗ, ಕಠೀಸೂತ್ರಗಳಿಂದ ಅಲಂಕೃತರ್ನಾಗಿದ್ದಾನೆ. ಇದರ ಕಾಲ ಕ್ರಿ.ಶ.೧೭ನೇ ಶತಮಾನ.

ನರಸಿಂಹಸ್ವಾಮಿ : ಸಂಡೂರಿನ ದಕ್ಷಿಣಕ್ಕೆ ಧರ್ಮಾಪುರ ಎಂಬ ಗ್ರಾಮದಿಂದ ಸು.೧ ಕಿ.ಮೀ. ಅಂತರದಲ್ಲಿರುವ ನರಸಿಂಹಸ್ವಾಮಿ ದೇವಾಲಯದಲ್ಲಿಯ ಈ ವಿಗ್ರಹವು ಕ್ರಿ.ಶ.ಸು.೧೭ನೇ ಶತಮಾನದ್ದಾಗಿದೆ. ಈ ಶಿಲ್ಪವನ್ನು ಏಕ ಶಿಲೆಯಲ್ಲಿ ಮಾಡಲಾಗಿದ್ದು, ನರಸಿಂಹಸ್ವಾಮಿಯ ಶಿರವನ್ನು ಮಾತ್ರ ಕಂಡರಿಸಲಾಗಿದೆ. ಕಿರೀಟ, ಮುಕುಟ, ಕಂಚಿನ ಪ್ರಭಾವಳಿಯನ್ನೊಂದಿದ್ದು, ಇವನ್ನು ಇತ್ತೀಚೆಗೆ ಮಾಡಿಸಲಾಗಿದೆ.

ವೀರಭದ್ರ : ಸಂಡೂರು ಗ್ರಾಮದ ಒಳಗೆ ಇರುವ ಕ್ರಿ.ಶ.೧೮ನೇ ಶತಮಾನದ ಶೈಲಿಯಲ್ಲಿರುವ ಈ ವಿಗ್ರಹವು ಚರ್ತುಭುಜಗಳನ್ನೊಂದಿದ್ದು, ಮುಂದಿನ ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗಧೆಯನ್ನು ಹಾಗೂ ಹಿಂದಿನ ಬಲಗೈಯಲ್ಲಿ ಬಾಣವನ್ನು ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ನಿಂತಿದ್ದಾನೆ. ಕಿರೀಟ ಮುಕುಟ ಹಾಗು ಶಿರದ ಹಿಂದೆ ಐದು ಹೆಡೆಯ ಸರ್ಪವಿದೆ. ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತವನ್ನು ಧರಿಸಿದ್ದಾನೆ.

ಆಂಜನೇಯ : ನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿರುವ ಈ ಶಿಲ್ಪವು ಕ್ರಿ.ಶ.೧೮ನೇ ಶತಮಾನದ ಶೈಲಿಯಲ್ಲಿದ್ದು, ದ್ವಿಬಾಹುವನ್ನೊಂದಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದಾನೆ. ಕೊರಳಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಚನ್ನವೀರವನ್ನು ಧರಿಸಿದ್ದಾನೆ.

ಆವಿನಮಡುಗು ಗ್ರಾಮದ ಹೊರಗೆ ಕೆರೆಯ ಏರಿ ಮೇಲೆ ಇರುವ ಕ್ರಿ.ಶ.೧೮ನೇ ಶತಮಾನದ ಈ ಶಿಲ್ಪವು ದ್ವಿಬಾಹುವನ್ನೊಂದಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗಧೆಯಿದೆ. ಈ ಶಿಲ್ಪವು ಕರ್ಣಾಭರಣ, ಕಂಠಾಭರಣ, ಭುಜಕವಚ, ತೋಳಬಂದಿ, ಕೈಗಡಗ, ಕಾಲುಗಡಗ, ಯಜ್ಞೋಪವಿತಗಳಿಂದ ಅಲಂಕೃತನಾಗಿದ್ದಾನೆ.

ಭೀಮತೀರ್ಥದಲ್ಲಿರುವ ಕ್ರಿ.ಶ.೧೮ನೇ ಶತಮಾನದ ಶೈಲಿಯಲ್ಲಿರುವ ಆಂಜನೇಯನ ಶಿಲ್ಪವು ದ್ವಿಬಾಹುವನ್ನೊಂದಿದ್ದು, ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯಿಂದ ಗಧೆಯನ್ನು ಹಿಡಿದಿದ್ದಾನೆ.

ಕಂಠಾಭರಣ, ಕೊರಳಾಭರಣ, ಕೇಯೂರ, ಕೈಗಡಗ, ಕಾಲುಗಡಗ, ಯಜ್ಞೋಪವಿತಗಳಿಂದ ಅಲಂಕೃತವಾಗಿದ್ದಾನೆ.

ಹಳೆದರೋಜಿ ಗ್ರಾಮದ ಒಳಗೆ ಇರುವ ವೆಂಕಟರಮಣ ದೇವಾಲಯದ ಗರ್ಭಗೃಹದಲ್ಲಿಯ ಕ್ರಿ.ಶ.೧೮ನೇ ಶತಮಾನದ ಆಂಜನೇಯನ ಶಿಲ್ಪವು ದ್ವಿಬಾಹುವನ್ನೊಂದಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈಯಿಂದ ಗಧೆಯನ್ನು ಹಿಡಿದಿದ್ದಾನೆ. ಕಂಠಾಭರಣ, ಕೊರಳಾಭರಣ, ಕೈಗಡಗ, ಕಾಲುಗಡಗ, ಯಜ್ಞೋಪವಿತಗಳಿಂದ ಅಲಂಕೃತನಾಗಿದ್ದಾನೆ.

ನವಿಲುಸ್ವಾಮಿ : ಸುಬ್ಬರಾಯನಹಳ್ಳಿ ಸಮೀಪದ ನವಿಲುತೀರ್ಥದ, ನವಿಲುಸ್ವಾಮಿ ದೇವಾಲಯದ ನವಿಲುಸ್ವಾಮಿ ಮೂರ್ತಿ ಶಿಲ್ಪವು ಕ್ರಿ.ಶ.೧೮ನೇ ಶತಮಾನದ್ದಾಗಿದೆ. ಈ ವಿಗ್ರಹವು ದ್ವಿಬಾಹುಗಳನ್ನೊಂದಿದ್ದು, ಬಲಗೈಯಲ್ಲಿ ಶಕ್ತ್ಯಾಯುಧ, ಎಡಗೈಯಲ್ಲಿ ನವಿಲಿನ ಕೊರಳನ್ನು ಹಿಡಿದಿದ್ದಾನೆ. ಕಿರೀಟ, ಮುಕುಟ, ಕರ್ಣಾಭರಣ, ಕಂಠಾಭರಣ, ಕಂಕಣಗಳಿಂದ ಅಲಂಕೃತವಾಗಿದ್ದು, ನವಿಲು ವಾಹನದ ಮೇಲೆ ಕುಳಿತಿದ್ದಾನೆ.

ರಾಮ-ಸೀತೆ-ಲಕ್ಷ್ಮಣ : ಬೊಮ್ಮಗಟ್ಟ ಗ್ರಾಮದ ಒಳಗೆ ಇರುವ ಕ್ರಿ.ಶ.೧೮ನೇ ಶತಮಾನದ ಶೈಲಿಯಲ್ಲಿರುವ ಈ ವಿಗ್ರಹಗಳು ಸರ್ವಾಭರಣಗಳಿಂದ ಅಲಂಕೃತವಾಗಿವೆ. ಇವು ದ್ವಿಬಾಹುಗಳನ್ನೊಂದಿದ್ದು, ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಬಾಣವನ್ನು ಹಿಡಿದಿವೆ. ಸೀತೆಯ ವಿಗ್ರಹವು ದ್ವಿಭುಜವನ್ನೊಂದಿದ್ದು, ಬಲಗೈ ಅಭಯ ಮುದ್ರೆಯಲ್ಲಿದ್ದು ಎಡಗೈಯು ವರದಾ ಮುದ್ರೆಯಲ್ಲಿದೆ.

ಎಸ್.ಬಸಾಪುರ ಗ್ರಾಮದ ಒಳಗಿರುವ ರಾಮ, ಲಕ್ಷ್ಮಣ, ಸೀತೆ, ಆಂಜನೇಯನ ವಿಗ್ರಹಗಳು ಕ್ರಿ.ಶ.೧೮ನೇ ಶತಮಾನದ್ದಾಗಿವೆ. ರಾಮ, ಲಕ್ಷ್ಮಣರ ವಿಗ್ರಹಗಳು ದ್ವಿಬಾಹುಗಳನ್ನೊಂದಿದ್ದು, ಎಡಗೈಯಲ್ಲಿ ಬಿಲ್ಲನ್ನು, ಬಲಗೈಯು ಅಭಯ ಮುದ್ರೆಯಲ್ಲಿದ್ದು ಬೆನ್ನ ಹಿಂದೆ ಬತ್ತಳಿಕೆ ಇವೆ. ಈ ವಿಗ್ರಹಗಳು ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣ, ಸೊಂಟಪಟ್ಟಿ, ಯಜ್ಞೋಪವಿತ ಧರಿಸಿವೆ. ಸೀತೆಯ ಶಿಲ್ಪವು ಕೈಗಡಗ, ಬಳೆಗಳನ್ನು, ಕಾಲುಗಡಗ, ಗೆಜ್ಜೆಗಳನ್ನು, ಮೂಗುತಿಯನ್ನು ಧರಿಸಿದೆ. ಆಂಜನೇಯನು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾನೆ.

ಉಬ್ಬಲಗಂಡಿ ಗ್ರಾಮದ ಹೊರಗೆ ಇರುವ ಕ್ರಿ.ಶ.೧೮ನೇ ಶತಮಾನದ ವೀರಭದ್ರನ ಶಿಲ್ಪವು ಚರ್ತುಬಾಹುವನ್ನೊಂದಿದ್ದು, ಬಲಗೈಯಲ್ಲಿ ಖಡ್ಗ-ಬಾಣವನ್ನು, ಎಡಗೈಯಲ್ಲಿ ಬಿಲ್ಲು, ಗಧೆಯನ್ನು ಹಿಡಿದಿದ್ದಾನೆ. ಕಿರೀಟ ಮುಕುಟ, ಕರ್ಣಾಭರಣ, ಕಂಠಾಭರಣ, ಯಜ್ಞೋಪವಿತ, ಸೊಂಟಪಟ್ಟಿ, ಕೈಗಡಗ, ಕಾಲುಗಡಗಗಳಿಂದಲಂಕೃತವಾಗಿದ್ದಾನೆ. ಈತನ ಬಲಗಾಲ ಪಕ್ಕಕ್ಕೆ ದಕ್ಷಯಜ್ಞನ ಪ್ರತಿಮೆ ಇದೆ.

ತಾಳೂರು ಗ್ರಾಮದ ಒಳಗೆ ಇರುವ ಕ್ರಿ.ಶ.೧೮.ನೇ ಶತಮಾನದ ವೀರಭದ್ರನ ವಿಗ್ರಹವು ಚರ್ತುಬಾಹುಗಳನ್ನೊಂದಿದ್ದು, ಬಲಗೈಯಲ್ಲಿ ಖಡ್ಗ-ಬಾಣಗಳಿದ್ದು, ಎಡಗೈಯಲ್ಲಿ ಬಿಲ್ಲು-ಗಧೆಯನ್ನು

ಹಿಡಿದಿದ್ದಾನೆ. ತನ್ನ ಬಲಗಾಲನ್ನು ದಕ್ಷರಾಜನ ಪ್ರತಿಮೆಯ ಮೇಲೆ ಇಟ್ಟಿದ್ದಾನೆ. ಕಿರೀಟ ಮುಕುಟ, ಕರ್ಣಕುಂಡಲ, ಕಂಠಾಭರಣ, ಯಜ್ಞೋಪವಿತ, ಸೊಂಟಪಟ್ಟಿಯನ್ನು, ಕೈಗಡಗ, ಕಾಲುಗಡಗಗಳಿಂದಲಂಕೃತನಾಗಿದ್ದಾನೆ.

ತಿಮ್ಮಪ್ಪ : ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗದ ಮಧ್ಯದ ದೋಣಿಮಲೈ ಕ್ರಾಸ್‌ನಿಂದ ಸು.೧೦.ಕಿ.ಮೀ ಮೇಲೆ ತಿಮ್ಮಪ್ಪನ ಬೆಟ್ಟ ಎಂದು ಕರೆಯುವ ತಿಮ್ಮಪ್ಪನ ದೇವಾಲಯದಲ್ಲಿಯ ಈ ವಿಗ್ರಹವು ಉದ್ಭವ ಮೂರ್ತಿಯಾಗಿದ್ದು, ಇದಕ್ಕೆ ಇತ್ತೀಚೆಗೆ ಬೆಳ್ಳಿಯ ಮುಖವಾಡ, ಬೆಳ್ಳಿಯ ಏಳು ಹೆಡೆಯ ಸರ್ಪವನ್ನು, ಬೆಳ್ಳಿಯ ಒಂಭತ್ತು ಕೊಡೆಗಳನ್ನು ಹಾಗೂ ಕಂಚಿನ ಕೀರ್ತಿ ಮುಖಗಳಿಂದ ಅಲಂಕೃತವಾಗಿದೆ. ಇದರ ಕಾಲ ಸು.೧೮ನೇ ಶತಮಾನವಾಗಿದೆ.

ಬಾಲಕೃಷ್ಣ : ಸಂಡೂರಿನ ಒಳಗಿರುವ ವಿಠ್ಠಲ ದೇವಾಲಯದಲ್ಲಿಯ ಈ ವಿಗ್ರಹವು ಕ್ರಿ.ಶ.೧೮ನೇ ಶತಮಾನದ್ದಾಗಿದೆ. ಇದು ಕಿರೀಟ, ಕರ್ಣಾಭರಣ, ಕೊರಳಾಭರಣ, ಕೇಯೂರ, ಯಜ್ಞೋಪವಿತ, ಕೈಗಡಗ, ಕಾಲುಗಡಗ, ಸೊಂಟಪಟ್ಟಿಗಳಿಂದ ಅಲಂಕೃತವಾಗಿದ್ದ, ಇದು ದ್ವಿಬಾಹುವನ್ನೊಂದಿದ್ದು ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಿದೆ.

ಆಳ್ವರು : ಬೊಮ್ಮಗಟ್ಟದ ಹುಲಿಕುಂಟೇಶ್ವರ ದೇವಾಲಯದ ಎದುರು ಗಡೆ ಇರುವ ಈ ಶಿಲ್ಪಗಳು ಕ್ರಿ.ಶ.೧೮ನೇ ಶತಮಾನಕ್ಕೆ ಸೇರಿದವುಗಳಾಗಿವೆ. ಮುದ್ದೇಲಪ್ಪನ ವಿಗ್ರಹವು ಮಾತ್ರ ಸಮಭಂಗಿಯಲ್ಲಿ ನಿಂತಿದ್ದು, ಉಳಿದ ಏಳು ಆಳ್ವರ ಶಿಲ್ಪಗಳು ಪದ್ಮಾಸನದಲ್ಲಿ ಕೈಮುಗಿದು ಕುಳಿತುಕೊಂಡಿವೆ.

೪.೫. ಕಾಷ್ಠವಾಸ್ತು ಮತ್ತು ಶಿಲ್ಪಗಳು

ಮರದ ಕಟ್ಟಡಗಳ ನಿರ್ಮಾಣದ ಕಲೆಗೆ 'ಕಾಷ್ಠವಾಸ್ತು ಶಿಲ್ಪ' ಎಂದು ಕರೆಯಲಾಗುತ್ತದೆ.[೫೫] ದೇವಾಲಯಗಳಲ್ಲಿ ಮರವನ್ನು ಅಳವಡಿಸಿ ಕಟ್ಟಡ ನಿರ್ಮಿಸುವ ಪದ್ಧತಿಯನ್ನು ಮುಖ್ಯವಾಗಿ ವಿಜಯನಗರದ ಕೊನೆಗಾಲದಲ್ಲಿ ಕಾಣಬಹುದು.[೫೬] ಇಂತಹ ಕಾಷ್ಠವಾಸ್ತು ಶಿಲ್ಪವನ್ನೊಳಗೊಂಡ ದೇವಾಲಯಗಳನ್ನು ಸಂಡೂರು ತಾಲೂಕಿನಲ್ಲಿಯೂ ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾದವು ಕುಮಾರಸ್ವಾಮಿ ದೇವಾಲಯದ ದ್ವಾರದ ಬಾಗಿಲುವಾಡ, ಗರ್ಭಗೃಹದ ಬಾಗಿಲುವಾಡ ಹಾಗೂ ಪಾರ್ವತಿ ದೇವಾಲಯದ ದ್ವಾರಬಾಗಿಲುವಾಡ, ಗರ್ಭಗೃಹದ ಬಾಗಿಲು, ಕುಮಾರಸ್ವಾಮಿ ದೇವಾಲಯದ ಮಹಾದ್ವಾರದ ಬಾಗಿಲು, ಪಾರ್ವತಿ ದೇವಾಲಯದ ದ್ವಾರದ ಕಟ್ಟಿಗೆಯ ದ್ವಾರಪಾಲಕ ವಿಗ್ರಹಗಳು ಹಾಗೂ ಸಂಡೂರು ತಾಲ್ಲೂಕಿನ ಕೆಲವು ಗ್ರಾಮಗಳ ದೇವಾಲಯಗಳಲ್ಲಿ ಕಟ್ಟಿಗೆಯನ್ನು ದೇವಾಲಯದ ಬಾಗಿಲುವಾಡಗಳಿಗೆ, ಕಂಬಗಳಿಗೆ, ಅಲಂಕಾರಿಕ ಶಿಲ್ಪಗಳಿಗೆ ಬಳಸಿರುವುದನ್ನು ಕಾಣುತ್ತೇವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.[೫೭]

ಕುಮಾರಸ್ವಾಮಿ ದೇವಾಲಯದ ಕಟ್ಟಿಗೆಯ ಬಾಗಿಲುವಾಡ

ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಬಾಗಿಲವಾಡವು ಸಭಾಮಂಟಪದ ಎರಡು ಕಂಬಗಳ ನಡುವೆ ಸಾಗುವಾನಿ ಮರದಿಂದ ನಿರ್ಮಿಸಲ್ಪಟ್ಟಿದೆ. ಈ ಬಾಗಿಲವಾಡವನ್ನು ಸುಮಾರು ನೂರು ವರ್ಷಗಳ ಹಿಂದೆ ಅಳವಡಿಸಲಾಗಿದೆ. ಈ ಬಾಗಿಲುವಾಡವು ಮೂರು ಪಟ್ಟಿಕೆಗಳನ್ನು ಹೊಂದಿದೆ. ಎರಡೂ ಕಡೆಯ ಮೊದಲ ಪಟ್ಟಿಗಳ ತಳದಲ್ಲಿ ಹಂಸ ನಂತರ ಯಾಳಿ, ಅನಂತರ ಲತಾಬಳ್ಳಿಗಳ ಸೂಕ್ಷ್ಮ ಕೆತ್ತನೆಗಳನ್ನು ಮಾಡಲಾಗಿದೆ. ಎರಡನೆಯ ಪಟ್ಟಿಕೆಗಳಲ್ಲಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಲತಾಬಳ್ಳಿಗಳ ಮತ್ತು ಸರಪಳಿಗಳ ರಚನೆ ಇದೆ. ಕೊನೆಯ ಪಟ್ಟಿಕೆಗಳಲ್ಲಿ ಅಲಂಕಾರಕ್ಕಾಗಿ ಸಣ್ಣ ಕಳಸಾಕೃತಿಯ ಹಿತ್ತಾಳೆ ಮೊಳೆಗಳನ್ನು ಅಳವಡಿಸಲಾಗಿದೆ. ಅವುಗಳನ್ನು ಪೀರಿಕಿಗಳೆಂದು ಕರೆಯಲಾಗುತ್ತದೆ. ಈ ಬಾಗಿಲುವಾಡ ೯ ಅಡಿ ಎತ್ತರವನ್ನು ಹಾಗೂ ೫.೫. ಅಡಿ ಅಗಲವನ್ನು ಹೊಂದಿದೆ. ದ್ವಾರಬಾಗಿಲ ಲಲಾಟಬಿಂಬದಲ್ಲಿ ಗಣೇಶನ ಪ್ರತಿಮೆ ಇದೆ. ಇದರ ಮೇಲೆ ಎರಡು ಪಟ್ಟಿಕೆಗಳಿದ್ದು, ಮೇಲಿನ ಪಟ್ಟಿಕೆಯಲ್ಲಿ ಎಲೆ ಬಳ್ಳಿಗಳ ಕೆತ್ತನೆ ಹಾಗೂ ಕೆಳಗಿನ ಪಟ್ಟಿಯ ಮಧ್ಯ ಭಾಗದಲ್ಲಿ ಗಂಡಭೇರುಂಡ ಪಕ್ಷಿಯ ಕೆತ್ತನೆ ಇದೆ. ಪಕ್ಷಿಯು ತನ್ನ ಕಾಲುಗಳಲ್ಲಿ ಆನೆಗಳನ್ನು ಹಿಡಿದಿರುವಂತೆ ಕಂಡರಿಸಲಾಗಿದೆ. ಒಂದೊಂದು ಬಾಗಿಲಿನಲ್ಲಿ ಆಯಾಕಾರದ ನಾಲ್ಕು ಚೌಕಟ್ಟುಗಳಿದ್ದು, ಪ್ರತಿ ಚೌಕಟ್ಟಿನಲ್ಲೂ ಅಲಂಕೃತವಾದ ಬಟ್ಟಲಾಕೃತಿಯನ್ನು ಮೂಡಿಸಲಾಗಿದೆ.

ಕುಮಾರಸ್ವಾಮಿ ದೇವಾಲಯದ ಗರ್ಭಗೃಹದ ಬಾಗಿಲುವಾಡ

ಕುಮಾರಸ್ವಾಮಿ ದೇವಾಲಯದ ಗರ್ಭಗೃಹದ ಬಾಗಿಲುವಾಡವನ್ನು ಮತ್ತು ಬಾಗಿಲನ್ನು ಶ್ರೀಗಂಧದ ಮರದ ಕಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದೆ. ಒಂಬತ್ತು ಅಡಿ ಎತ್ತರ ಹಾಗೂ ನಾಲ್ಕು ಅಡಿ ಅಗಲವಿರುವ ಈ ಬಾಗಿಲುವಾಡವು ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಚಿತ್ರಗಳನ್ನು ಒಳಗೊಂಡಿದೆ. ಬಾಗಿಲುವಾಡದ ಎರಡೂ ಭಾಗಗಳಲ್ಲಿ ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ಗಿಳಿ, ಆನೆ, ಸಿಂಹ ಮತ್ತು ದ್ರಾಕ್ಷಿ ಹಣ್ಣುಗಳ ಗೊಂಚಲು ಮತ್ತು ತಿನ್ನುತ್ತಿರುವ ಗಿಳಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ದ್ವಾರಬಾಗಿಲ ಲಲಾಟಬಿಂಬದಲ್ಲಿ ಕಮಲದ ಹೂ ಹಾಗೂ ಇದರ ಮೇಲೆ ಎರಡು ನಾಗಗಳನ್ನು ಮತ್ತು ಇಕ್ಕೆಲಗಳಲ್ಲಿ ಗಿಳಿಗಳನ್ನು ಕಂಡರಿಸಲಾಗಿದೆ. ಇದರ ಮೇಲಿನ ಪಟ್ಟಿಯ ಮಧ್ಯ ಭಾಗದಲ್ಲಿ ಗರಿ ಬಿಚ್ಚಿ ಕೊಂಡಿರುವಂತೆ ನವಿಲನ್ನು ಕೆತ್ತಲಾಗಿದೆ. ಇದು ನೋಡುವುದಕ್ಕೆ ಬಿಡಿ ಚಿತ್ರದಂತೆ ಕಂಡುಬರುತ್ತದೆ. ಇದರ ಎರಡೂ ತುದಿಗಳಲ್ಲಿ ಯಾಳಗಳನ್ನು ಕೆತ್ತಲಾಗಿದೆ. ಇದಕ್ಕೆ ಅಳವಡಿಸಿರುವ ಎರಡು ಬಾಗಿಲುಗಳು ಅತ್ಯಂತ ಸೂಕ್ಷ್ಮ ಕೆತ್ತನೆಯ ಕೆಲಸವನ್ನೊಳಗೊಂಡಿದೆ. ಪ್ರತಿಬಾಗಿಲು ಆಯಾಕಾರದ ನಾಲ್ಕು ಚೌಕಟ್ಟುಗಳನ್ನು ಹೊಂದಿದ್ದು ಪ್ರತಿ ಚೌಕಟ್ಟಿನ ಮಧ್ಯದಲ್ಲಿ ಅನೇಕ ಸುತ್ತುಗಳಲ್ಲಿ ಕಮಲದ ದಳಗಳನ್ನು ಕೆತ್ತಲಾಗಿದೆ. ಹಾಗೂ ನಾಲ್ಕೂ ಮೂಲೆಗಳಲ್ಲಿ ಆನೆ, ಗಿಳಿ, ಸಿಂಹ, ಯಾಳ ಮುಂತಾದ ಪ್ರಾಣಿಗಳ ಸೂಕ್ಷ್ಮ ಕೆತ್ತನೆಯನ್ನು ಮಾಡಲಾಗಿದೆ.

ಪಾರ್ವತಿ ದೇವಾಲಯದ ಬಾಗಿಲುವಾಡ

ಪಾರ್ವತಿ ದೇವಾಲಯದ ಬಾಗಿಲುವಾಡವನ್ನು ಮರದ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಇದು ಎರಡು ಪಟ್ಟಿಕೆಗಳಿಂದ ಕೂಡಿದೆ. ಮೊದಲ ಪಟ್ಟಿಕೆಯಲ್ಲಿ ಕೆಳಗೆ ಕಟ್ಟಿಗೆಯಿಂದ ಕಂಡರಿಸಲಾದ ಎರಡು ಕಡೆ ದ್ವಾರಪಾಲಕರ ವಿಗ್ರಹಗಳಿವೆ. ಆನಂತರ ಸರಪಳಿ ಮಾದರಿಯ ಸುರುಳಿಯಾಕಾರದ ಕೆತ್ತನೆ, ಲತಾಬಳ್ಳಿಗಳ ಕೆತ್ತನೆ ಇದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪ್ರತಿಮೆ ಇದೆ. ಈ ಶಿಲ್ಪವು ಚರ್ತುಬಾಹುಗಳನ್ನೊಂದಿದ್ದು, ಮುಂದಿನ ಬಲಗೈ ಅಭಯ, ಎಡಗೈ ವರದ ಹಸ್ತವನ್ನೊಂದಿದೆ. ಹಿಂದಿನ ಎರಡು ಕೈಗಳಲ್ಲಿ ಪುಷ್ಪಗಳನ್ನು ಹಿಡಿದುಕೊಂಡಿದೆ. ಅಕ್ಕಪಕ್ಕದಲ್ಲಿ ಎರಡು ಆನೆಗಳು ಒಂದೊಂದು ಕಾಲನ್ನು ಮುಂದೆ ಎತ್ತಿದ್ದು, ಎತ್ತಿದ ಸೊಂಡಿಲಿನಿಂದ ಹೂವನ್ನು ಹಿಡಿದಿವೆ. ಎರಡನೆಯ ಪಟ್ಟಿಕೆಯಲ್ಲಿಯೂ ಸುತ್ತಲೂ ಸರಪಳಿಯಾಕಾರ, ಲತಾಬಳ್ಳಿಗಳ ಸೂಕ್ಷ್ಮ ಕೆತ್ತನೆಯಿಂದ ಅಲಂಕೃತವಾಗಿದೆ.

ಪಾರ್ವತಿದೇವಿ ದೇವಾಲಯದ ಗರ್ಭಗೃಹದ ಬಾಗಿಲು

ಪಾರ್ವತಿ ದೇವಾಲಯದ ಗರ್ಭಗೃಹದ ಬಾಗಿಲನ್ನು ಮರದ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಬಾಗಿಲುಗಳಲ್ಲಿ ಯಾವುದೇ ಅಲಂಕಾರಿಕತೆಯ ರಚನೆ ಕಂಡುಬರುವುದಿಲ್ಲ, ಬದಲಿಗೆ ಇಲ್ಲಿ ಜಾಲಂದ್ರವಿರುವ ಬಾಗಿಲನ್ನು ಅಳವಡಿಸಲಾಗಿದೆ.

ಕುಮಾರಸ್ವಾಮಿ ದೇವಾಲಯದ ಮಹಾದ್ವಾರದ ಬಾಗಿಲು

ಕುಮಾರಸ್ವಾಮಿ ದೇವಾಲಯದ ಮಹಾದ್ವಾರದ ಬಾಗಿಲು ಸುಮಾರು ಹದಿನಾಲ್ಕು ಅಡಿ ಎತ್ತರವಿದೆ. ಈ ಬಾಗಿಲುಗಳಲ್ಲಿ ಮರದ ಅಡ್ಡ ಪಟ್ಟಿಕೆಗಳನ್ನು ಅಳವಡಿಸಲಾಗಿದ್ದು, ಅವುಗಳನ್ನು ಗಂದಟಗಿ ಎಂದು ಕರೆಯಲಾಗುವುದು. ಬಾಗಿಲುಗಳಿಗೆ ಬಳಸಿರುವ ಬಿಡಿ ಹಲಗೆಗಳನ್ನು ಜೋಡಿಸಲು ಈ ಅಡ್ಡ ಪಟ್ಟಿಗಳು ಅವಶ್ಯವಾಗಿರುತ್ತವೆ. ಇದು ಸು.ಮುನ್ನೂರು ವರ್ಷಗಳಷ್ಟು ಹಳೆಯದೆಂದು ಹೇಳಬಹುದು.

ಪಾರ್ವತಿ ದೇವಾಲಯದ ಕಟ್ಟಿಗೆಯ ದ್ವಾರಪಾಲಕ ವಿಗ್ರಹ

ಪಾರ್ವತಿ ದೇವಾಲಯದ ದ್ವಾರಬಾಗಿಲ ಈ ಕಾಷ್ಠಶಿಲ್ಪವು ಕರಂಡ ಮುಕುಟವನ್ನು, ಪತ್ರಕುಂಡಲವನ್ನು ಧರಿಸಿದೆ. ಇದು ಚರ್ತುಬಾಹುವನ್ನೊಳಗೊಂಡಿದ್ದು ಹಿಂದಿನ ಬಲಗೈಯಲ್ಲಿ ಚಕ್ರವನ್ನು ಎಡಗೈಯಲ್ಲಿ ಶಂಖವನ್ನು ಹಿಡಿದಿದ್ದು, ಮುಂದಿನ ಬಲಗೈಯಿಂದ ಗಧೆಯ ತುದಿಯನ್ನು ಗದ್ದಕ್ಕೆ ತಾಕಿದಂತೆ ಹಿಡಿದಿದ್ದು, ಎಡಗೈಯನ್ನು ಗಧೆಯ ಮಧ್ಯೆ ಹಿಡಿದಿದೆ. ಕೈಯಲ್ಲಿ ಕಡಗ, ಭುಜದಲ್ಲಿ ಭುಜಕವಚ ಧರಿಸಿದೆ. ಸೊಂಟದಲ್ಲಿ ಕಠೀಸೂತ್ರ, ದೊತ್ರವನ್ನು ಧರಿಸಿದೆ. ಈ ಶಿಲ್ಪವು ಸಮಭಂಗಿಯಲ್ಲಿ ನಿಂತಿದೆ.

ಸಂಡೂರು ಗ್ರಾಮದ ೯ನೆಯ ವಾರ್ಡ್‌ನಲ್ಲಿರುವ ಪೀರಲು ದೇವರ (ಮುಸ್ಲಿಂ ದೇವರು) ಗುಡಿಯಲ್ಲಿ ದುಂಡಾದ ಕಂಬಗಳನ್ನು ಅಳವಡಿಸಲಾಗಿದೆ. ಈ ಕಂಬಗಳನ್ನು ಸ್ಥಳೀಯ ಅರಣ್ಯದಲ್ಲಿ ದೊರೆಯುವ ಸಣ್ಣ ಮರಗಳನ್ನು ಕಡಿದು ತಂದು ಬಾಚಿಯಿಂದ ತೊಗಟೆಯನ್ನು ಮತ್ತು ಉಬ್ಬುಗಳನ್ನು ತೆಗೆದು ಹಾಗೆಯೇ ನಿಲ್ಲಿಸಲಾಗಿದೆ.

ಇದೇ ಗ್ರಾಮದ ಹೊಸ ಬಾವಿ ಓಣಿಯಲ್ಲಿ ಇತ್ತೀಚೆಗೆ ನಿರ್ಮಿಸಲಾದ ಪೀರಲು ದೇವರ ಗುಡಿಯಲ್ಲಿ ಚತುರ್ಮುಖ ಕಂಬಗಳನ್ನು ಅಳವಡಿಸಲಾಗಿದೆ. ಇಲ್ಲಿ ಶಿಸ್ತು ಮಾಡಿದ ಬೇವಿನ ಮರದ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಕಂಬಗಳನ್ನು ಪೀಠದ ಮೇಲೆ ನಿಲ್ಲಿಸಲಾಗಿದೆ.

ಈ ತಾಲ್ಲೂಕಿನ ಲಕ್ಷ್ಮೀಪುರದ ಉಡಚಲ ಪರಮೇಶ್ವರಿಯ ದೇವಾಲಯದ ಮುಖಮಂಟಪದಲ್ಲಿನ ನಾಲ್ಕು ವೃತ್ತಾಕಾರದ ಕಂಬವನ್ನು ಕಲ್ಲಿನ ಪೀಠದ ಮೇಲೆ ನಿಲ್ಲಿಸಲಾಗಿದೆ. ಈ ಕಟ್ಟಿಗೆಗಳನ್ನು ಸ್ಥಳೀಯ ಅರಣ್ಯದಿಂದ ತಂದು ತೊಗಟೆಯನ್ನು ತೆಗೆದು ಹಾಗೆ ನಿಲ್ಲಸಲಾಗಿದೆ.

ಈ ತಾಲ್ಲೂಕಿನ ತಾಳೂರು ಗ್ರಾಮದ ಒಳಗಿನ ಈಶ್ವರ ದೇವಾಲಯದ ಸಭಾಮಂಟಪದ ನಾಲ್ಕು ಕಂಬಗಳನ್ನು ಎಂಟು ಗೋಡೆಗಂಭಗಳನ್ನು ಸ್ಥಳೀಯವಾಗಿ ದೊರೆಯುವ ಕಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಇವು ಚೌಕಾಕಾರವಾಗಿವೆ. ಇದೇ ಗ್ರಾಮದ ಒಳಗಿನ ವೀರಭದ್ರ ದೇವಾಲಯದ ಮುಖಮಂಟಪದ ಕಟ್ಟಿಗೆಯ ಕಂಭಗಳು ವೃತ್ತಾಕಾರವಾಗಿದ್ದು, ಇವನ್ನು ಸ್ಥಳೀಯವಾಗಿ ದೊರೆಯುವ ಅರಣ್ಯದಿಂದ ತಂದು ಅಳವಡಿಸಲಾಗಿದೆ.

ಒಟ್ಟಾರೆಯಾಗಿ ಗಮನಿಸುವುದಾದರೆ ಸಂಡೂರು ತಾಲ್ಲೂಕಿನಲ್ಲಿ ಕಾಷ್ಠ ವಾಸ್ತುಶಿಲ್ಪವನ್ನೊಳಗೊಂಡ ದೇವಾಲಯಗಳು ಬಹಳ ವಿರಳ. ಹಾಗೂ ಇಂದು ಕಾಷ್ಠಶಿಲ್ಪವನ್ನು ಕಾಣುವುದು ಅಪರೂಪವಾಗಿದೆ. ಏಕೆಂದರೆ ಅರಣ್ಯಗಳ ನಾಶದಿಂದ ಮರಗೆಲಸಕ್ಕೆ ಬೇಕಾದ ಕಚ್ಚಾವಸ್ತು ದೊರೆಯುವುದು ದುರ್ಲಭವಾಗುತ್ತಿದೆ. ಅರಣ್ಯ ರಕ್ಷಣೆಯ ಕಾರಣದಿಂದ ಮರಗೆಲಸದ ಮುನ್ನಡೆಯನ್ನು ಕುಂಠಿತಗೊಳಿಸಿದೆ. ಹಾಗೂ ಹಿಂದಿನ ಮರಗೆಲಸದ ಕಟ್ಟಡಗಳು ಉಳಿದು ಬಂದಿದ್ದರು, ಅವು ಕೆಲವೇ ಕೆಲವು ಪ್ರದೇಶಗಳಲ್ಲಿ ಮಾತ್ರ. ಇಂದು ಕಾಷ್ಠವಾಸ್ತುಶಿಲ್ಪ ಕೇವಲ ಶ್ರೀಮಂತರ ಪ್ರತಿಷ್ಠೆಯ ಸಂಕೇತವಾಗಿ ರೂಪುಗೊಂಡಿದೆ. ಅವರ ಶ್ರೇಷ್ಠತೆ, ಘನತೆಗೌರವಗಳನ್ನು, ಅವರ ಸಾಮರ್ಥ್ಯಗಳನ್ನು ಪ್ರದರ್ಶಿಸುವ ಮಾಧ್ಯಮವಾಗಿದೆ.

೪.೬. ಭಿತ್ತಿ ಶಿಲ್ಪಗಳು

ಗೋಡೆಯ ಮೇಲೆ ರೂಪುಗೊಂಡ ಶಿಲ್ಪ ಭಿತ್ತಿ ಶಿಲ್ಪ. ಈ ಭಿತ್ತಿ ಶಿಲ್ಪಗಳು ಗಾರೆಗಚ್ಚಿನಿಂದ ನಿರ್ಮಾಣಗೊಂಡಿರುತ್ತವೆ. ಈ ಗಾರೆಯನ್ನು ಪ್ರಾಚೀನ ಕಾಲದಿಂದಲೂ ವಾಸ್ತು ರಚನೆಗಳಲ್ಲಿ ನಿರಂತರವಾಗಿ ಬಳಸಲಾಗುತ್ತಿದೆ. ಈ ಗಾರೆಯಿಂದ ನಿರ್ಮಿಸಲ್ಪಟ್ಟ ಭಿತ್ತಿ ಶಿಲ್ಪಗಳ ರಚನೆ ಮುಖ್ಯವಾಗಿ ಅಲಂಕಾರಿಕ

ದೃಷ್ಟಿಯದು. ಅದು ಬಿಡಿ ಶಿಲ್ಪವಾಗಿರಲಿ ಅಥವಾ ಉಬ್ಬು ಶಿಲ್ಪವಾಗಿರಲಿ ಹಿನ್ನೆಲೆಯಲ್ಲಿರುವ ವಾಸ್ತುಭಾಗದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ ಖಾಲಿ ಕಾಣುವ ಸ್ಥಳಗಳನ್ನು ಕಲಾಕೃತಿಗಳಿಂದ ತುಂಬುವುದಾಗಿತ್ತು.[೫೮]

ಸಂಡೂರು ತಾಲ್ಲೂಕಿನಲ್ಲಿಯೂ ವಿಜಯನಗರದ ಹಾಗೂ ವಿಜಯನಗರೋತ್ತರದ ಅವಧಿಯಲ್ಲಿ ನಿರ್ಮಿಸಲ್ಪಟ್ಟ ದೇವಾಲಯದ ಗೋಪುರಗಳು, ಮಂಟಪಗಳು ಮಹಾದ್ವಾರ ಗೋಪುರಗಳಲ್ಲಿ ಗಾರೆಯಿಂದ ನಿರ್ಮಿಸಲ್ಪಟ್ಟ ವೈವಿಧ್ಯಮಯವಾದ ಗಾರೆಯ ಭಿತ್ತಿ ಶಿಲ್ಪಗಳನ್ನು ಕಾಣುತ್ತೇವೆ. ಮುಖ್ಯವಾಗಿ ವಿಜಯನಗರದ ಅವಧಿಯಲ್ಲಿ ನಿರ್ಮಾಣಗೊಂಡ ಗಾರೆಯ ಶಿಲ್ಪಗಳಲ್ಲಿ ಸಂಡೂರು ತಾಲ್ಲೂಕಿನ ಕುಮಾರಸ್ವಾಮಿ ದೇವಾಲಯದ ಸಭಾಮಂಟಪದ ಮೇಲ್ಛಾವಣಿಯಲ್ಲಿ ಗಾರೆಯಿಂದ ನಿರ್ಮಾಣಗೊಂಡ ಕೈಪಿಡಿಗೋಡೆಯಲ್ಲಿ ಗೋಪುರ ರಚನೆಗಳಿಂದ ಅಲಂಕೃತಗೊಂಡ ಗೂಡುಗಳಿದ್ದು, ಅವುಗಳಲ್ಲಿ ಶೈವ ದೇವತೆಗಳ ಶಿಲ್ಪಗಳಿರುವುದನ್ನು ಕಾಣುತ್ತೇವೆ. ಈ ದೇವಾಲಯದ ಮಹಾದ್ವಾರ ಗೋಪುರವು ಐದು ಹಂತವನ್ನೊಂದಿದ್ದು, ಅದರಲ್ಲಿ ಶೈವದೇವತೆಗಳ ಹಾಗೂ ಶೈವ ಪರಿವಾರ ದೇವತೆಗಳ, ಮುನಿಗಳ ಗಾರೆಯ ಭಿತ್ತಿ ಶಿಲ್ಪಗಳಿವೆ. ಇವು ಇಂದು ಮಳೆ, ಗಾಳಿಯ ಹೊಡೆತಕ್ಕೆ ಸಿಲುಕಿ ಕೆಲವು ಶಿಲ್ಪಗಳು ಸವೆದಿವೆ. ಮತ್ತೆ ಕೆಲವು ಭಿನ್ನವಾಗಿವೆ.

ಇದೇ ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದ ಗೋಪುರದ ಮೇಲಿನ ಚಂಡಿಯ ಭಿತ್ತಿ ಶಿಲ್ಪವು ಸು.೮ನೇ ಶತಮಾನದ್ದಾಗಿದೆ. ಚಂಡಿಯು ತ್ರಿಭಂಗಿಯಲ್ಲಿ ನಿಂತಿದ್ದು ರಾಕ್ಷಸನನ್ನು ಕಾಲಲ್ಲಿ ತುಳಿಯುತ್ತಾ ಸಂಹರಿಸುತ್ತಿರುವಂತಿದೆ. ಈಕೆ ದಶಭುಜಗಳನ್ನು ಹೊಂದಿದ್ದು, ತ್ರಿಶೂಲ, ಖಡ್ಗ, ಇತ್ಯಾದಿ ಆಯುಧಗಳನ್ನು ಹಿಡಿದಿದ್ದಾಳೆ. ಶಿಲ್ಪ ಸವೆದಿರುವುದರಿಂದ ಆಯುಧಗಳು ಅಸ್ಪಷ್ಟವಾಗಿವೆ. ಕೊರಳಲ್ಲಿ ರುಂಡ ಮಾಲೆಯನ್ನು ಧರಿಸಿದ್ದಾಳೆ. ಶಿರದಲ್ಲಿ ಮುಕುಟ ಕಿರೀಟವನ್ನು ಧರಿಸಿದ್ದು ಕೂದಲನ್ನು ಹರಡಿಕೊಂಡಿದ್ದಾಳೆ. ಈಕೆಯು ಸರ್ವ ವಸ್ತ್ರಾಭರಣಗಳಿಂದ ಅಲಂಕೃತಳಾಗಿದ್ದಾಳೆ.

ಕುಮಾರಸ್ವಾಮಿ ದೇವಾಲಯದ ದ್ವಾರ ಮಂಟಪದ ಹೊರ ಭಿತ್ತಿಯ ಬಲಗಡೆಯ ಶಿಲ್ಪಗಳು, ಕಹಳೆಯನ್ನು ಊದುತ್ತಿರುವ ವೀರನ ಶಿಲ್ಪವು ವೀರಗಾಸೆ, ಶಲ್ಯೆಯನ್ನು ಧರಿಸಿದ್ದು ವೀರಮುಡಿಯನ್ನು ಕಟ್ಟಿದೆ. ಅವನ ಪಕ್ಕದಲ್ಲಿ ತಪ್ಪಡಿಯನ್ನು ಬಾರಿಸುತ್ತಿರುವ ಮತ್ತೊಬ್ಬ ವೀರನಿರುವನು. ಅದರ ಪಕ್ಕದ ದೇವಕೋಷ್ಠದಲ್ಲಿ ನರಸಿಂಹನು ಅರ್ಧಯೋಗಾಸನದಲ್ಲಿ ಕುಳಿತಿರುವನು. ಆತನ ಎಡಗಡೆಯ ತೊಡೆಯ ಮೇಲೆ ಲಕ್ಷ್ಮೀಯು ಕುಳಿತಿದ್ದಾಳೆ. ಎಡಗೈಯಿಂದ ಆಕೆಯನ್ನು ಅಲಂಗಿಸಿಕೊಂಡಿರುವ ನರಸಿಂಹನ ಬಲಗೈಯು ಜ್ಞಾನ ಮುದ್ರೆಯಲ್ಲಿ ಉಪದೇಶ ಮಾಡುವ ರೀತಿಯಲ್ಲಿದೆ. ಎಡಗೈಯನ್ನು ಇಳಿ ಬಿಟ್ಟ ಲಕ್ಷ್ಮೀಯ ಕೈಯನ್ನು ಕೆಳಗೆ ಕುಳಿತ ಪರಿಚಾರಿಕೆಯು ಹಿಡಿದಿರುವಂತಿದೆ. ಪಕ್ಕದಲ್ಲಿ ಒಬ್ಬ ಚಾಮರಧಾರೆಯ ಸ್ತ್ರೀಯು ಚಾಮರವನ್ನು ಬೀಸುತ್ತ ನಿಂತಿದ್ದಾಳೆ. ಅದರ ಪಕ್ಕದಲ್ಲಿಯ ಶಿಲ್ಪಗಳು, ಮೂವರು ಭಕ್ತರಿದ್ದು ಅದರಲ್ಲಿ ಇಬ್ಬರು ಭಕ್ತರು ಅಂಜಲಿ ಮುದ್ರೆಯಲ್ಲಿ ಅರ್ಧಯೋಗಾಸನದಲ್ಲಿ ಕುಳಿತಿದ್ದರೆ ಮತ್ತೊಬ್ಬ

ಭಕ್ತ ಅಂಜಲಿ ಮುದ್ರೆಯಲ್ಲಿ ಸಮಭಂಗಿಯಲ್ಲಿ ನಿಂತಿದ್ದಾನೆ. ಅದರ ಪಕ್ಕಕ್ಕೆ ಮತ್ಸ್ಯ ವೇಷಧಾರಿಯಾದ ವಿಷ್ಣುವು ಚರ್ತುಬಾಹುವನ್ನು ಹೊಂದಿದ್ದು, ಹಿಂದಿನ ಎಡಗೈಯಲ್ಲಿ ಚಕ್ರವನ್ನು ಹಾಗೂ ಬಲಗೈಯಲ್ಲಿ ಶಂಖವನ್ನು ಮತ್ತು ಮುಂದಿನ ಎಡಗೈಯಲ್ಲಿ ಗಧೆಯನ್ನು ಹಿಡಿದಿದ್ದು ಬಲಗೈಯು ಅಭಯ ಮುದ್ರೆಯಲ್ಲಿದೆ. ಶಿರದಲ್ಲಿ ಕಿರೀಟ ಧರಿಸಿದ್ದಾನೆ. ಈತನ ಪಕ್ಕದಲ್ಲಿ ನಿಂತ ಭಕ್ತನು ಬಲಗೈಯನ್ನು ಜ್ಞಾನ ಮುದ್ರೆಯಲ್ಲಿಡಿದಿದ್ದು, ಎಡಗೈಯು ವರದ ಮುದ್ರೆಯಲ್ಲಿದೆ. ಈತನು ಸಮಭಂಗಿಯಲ್ಲಿ ನಿಂತಿದ್ದಾನೆ.

ಕುಮಾರಸ್ವಾಮಿ ದೇವಾಲಯದ ದ್ವಾರ ಮಂಟಪದ ಎಡಗಡೆಯ ಹೊರಭಿತ್ತಿಯ ಶಿಲ್ಪಗಳು. ಮೊದಲಿಗೆ ಒಬ್ಬ ಮುನಿಯು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾನೆ. ಈ ಮುನಿಯ ಎದುರುಗಡೆ ಮತ್ತೊಬ್ಬ ಮುನಿಯು ಸಮಭಂಗಿಯಲ್ಲಿ ನಿಂತಿದ್ದು ಎದುರಿಗೆ ಕುಳಿತಿರುವ ಮುನಿಯನ್ನು ಬಲಗೈಯಿಂದ ಆಶೀರ್ವಾದಿಸುತ್ತಿರುವನು. ಅದರ ಪಕ್ಕದಲ್ಲಿಯ ದೇವಕೋಷ್ಠದಲ್ಲಿಯ ಹನುಮಂತನ ಶಿಲ್ಪವು ಅಂಜಲಿ ಮುದ್ರೆಯಲ್ಲಿ ನಿಂತಿದ್ದು, ಬಲಗಾಲನ್ನು ಯಾವುದೋ ಪ್ರಾಣಿಯ ಮೇಲೆ ಇಟ್ಟಿದ್ದಾನೆ. ಅದರ ಪಕ್ಕದಲ್ಲಿಯ ಪಕ್ಷಿಯ ಶಿಲ್ಪವು ಚಲಿಸುತ್ತಿರುವ ಶೈಲಿಯಲ್ಲಿದೆ.

ಈ ದೇವಾಲಯದ ದ್ವಾರ ಮಂಟಪದ ಒಳಭಾಗದಲ್ಲಿಯ ಬಲಗಡೆಯ ಭಿತ್ತಿ ಶಿಲ್ಪಗಳು. ಒಂದು ಭಿತ್ತಿಶಿಲ್ಪವು ಅರ್ಧಯೋಗಾಸನದಲ್ಲಿ ಜ್ಞಾನ ಮುದ್ರೆಯಲ್ಲಿ ಉಪದೇಶ ಮಾಡುವಂತೆ ಕುಳಿತಿದೆ. ಅದರ ಎದುರಿನ ಶಿಲ್ಪವು ಶಿಥಿಲವಾಗಿದ್ದು, ಬಲಗೈಯಿಂದ ಆಶೀರ್ವಾದ ಮಾಡುವಂತಿದ್ದು ತ್ರಿಭಂಗಿಯಲ್ಲಿ ನಿಂತುಕೊಂಡಿದೆ. ಅದರ ಪಕ್ಕದಲ್ಲಿಯ ದೇವಕೋಷ್ಠದಲ್ಲಿಯ ಒಂದು ಭಿತ್ತಿ ಶಿಲ್ಪವು ಪದ್ಮಾಸನದಲ್ಲಿ ಕುಳಿತ್ತಿದ್ದು ಅಂಜಲಿ ಮುದ್ರೆಯಲ್ಲಿ ಧ್ಯಾನ ಮಗ್ನವಾಗಿದೆ. ಅದರ ಪಕ್ಕದಲ್ಲಿಯ ಶಿಲ್ಪವು ಅಂಜಲಿ ಮುದ್ರೆಯಲ್ಲಿ ಎರಡೂ ಕೈಗಳನ್ನೆತ್ತಿ ಸೂರ್ಯ ನಮಸ್ಕಾರ ಮಾಡುತ್ತಿದೆ. ಈ ದೇವಕೋಷ್ಠದ ಹೊರ ಪಕ್ಕದ ಭಿತ್ತಿ ಶಿಲ್ಪವು ಅರ್ಧಯೋಗಾಸನದಲ್ಲಿ ಕುಳಿತಿದ್ದು ಬಲಗೈಯು ಜ್ಞಾನ ಮುದ್ರೆಯಲ್ಲಿದೆ. ಎಡಗೈಯನ್ನು ಎಡಗಡೆಯ ತೊಡೆಯ ಮೇಲಿಟ್ಟುಕೊಂಡಿದೆ.

ಈ ದೇವಾಲಯದ ದ್ವಾರ ಮಂಟಪದ ಒಳ ಭಾಗದಲ್ಲಿಯ ಎಡಗಡೆಯ ಭಿತ್ತಿಶಿಲ್ಪಗಳು. ಒಬ್ಬ ಮುನಿಯು ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವನು. ಅದರ ಪಕ್ಕದಲ್ಲಿಯ ದೇವಕೋಷ್ಠದ ಒಂದು ಭಿತ್ತಿ ಶಿಲ್ಪವು ಅರ್ಧಯೋಗಾಸನದಲ್ಲಿ ಕುಳಿತಿದ್ದು ಎಡಗೈಯನ್ನು ನೆಲಕ್ಕೆ ಊರಿದೆ. ಬಲಗೈಯನ್ನು ಜ್ಞಾನ ಮುದ್ರೆಯಲ್ಲಿಡಿದುಕೊಂಡಿದ್ದು ಎದುರಿಗಿರುವ ಭಕ್ತನಿಗೆ ಉಪದೇಶ ಮಾಡುತ್ತಿದೆ. ಇದು ಶಿರದಲ್ಲಿ ಕಿರೀಟವನ್ನು ಧರಿಸಿದೆ. ಎದುರಿಗೆ ನಿಂತಿರುವ ಶಿಲ್ಪವು ಸಮಭಂಗಿಯಲ್ಲಿ, ಅಂಜಲಿ ಮುದ್ರೆಯಲ್ಲಿ ನಿಂತಿದೆ. ದೇವಕೋಷ್ಠದ ಹೊರಗಿರುವ ಭಿತ್ತಿಶಿಲ್ಪವು ಪದ್ಮಾಸನದಲ್ಲಿ, ಅಂಜಲಿ ಮುದ್ರೆಯಲ್ಲಿ ಧ್ಯಾನಾಸಕ್ತವಾಗಿ ಕುಳಿತಿದೆ.

ಈ ದೇವಾಲಯದ ದ್ವಾರ ಮಂಟಪದ ಒಳಭಾಗದ ಭಿತ್ತಿ ಶಿಲ್ಪವು ಜಟೆಯನ್ನು ಬಿಟ್ಟಿದ್ದು, ದಾಡಿ, ಮೀಸೆಯನ್ನು ಬಿಟ್ಟಿರುವ ಒಬ್ಬ ಮುನಿಯು ಯೋಗಾಸನದಲ್ಲಿ ಕುಳಿತಿದ್ದಾನೆ.

ವಿಜಯನಗರದ ಸೇನಾಧಿಪತಿಯಾಗಿದ್ದ ಬಯಕಾರ ರಾಮಪ್ಪನ ಅವಧಿಯಲ್ಲಿ ಅವನಿಂದ ನಿರ್ಮಿಸಲ್ಪಟ್ಟ, ಈ ತಾಲೂಕಿನ ಹುಲಿಕುಂಟೆ ಗ್ರಾಮದ ಬಾಲಕೃಷ್ಣ ದೇವಾಲಯವು ಇಂದು ಪಾಳು ಬಿದ್ದಿದೆ. ಈ ದೇವಾಲಯದ ಸಭಾಮಂಟಪದ ಕೈಪಿಡಿಯ ಮೇಲ್ತುದಿಯಲ್ಲಿ ಗಾರೆಯಿಂದ ನಿರ್ಮಿಸಲ್ಪಟ್ಟ ಗೋಪುರ ರಚನೆಗಳಿಂದ ಅಲಂಕೃತಗೊಂಡ ಗೂಡುಗಳನ್ನು ಕಾಣುತ್ತೇವೆ.

ಸಂಡೂರು ತಾಲೂಕಿನ ಶಿವಪುರದ (ಸಂಡೂರು) ಈಶ್ವರ ದೇವಾಲಯದ ದ್ವಾರಬಾಗಿಲ ಎಡಗಡೆ ಇರುವ ಭಿತ್ತಿ ಶಿಲ್ಪಗಳು. ಒಬ್ಬ ವೀರನು ಆನೆಯ ಮೇಲೆ ಕುಳಿತು ಸವಾರಿ ಮಾಡುತ್ತಿದ್ದಾನೆ. ಆನೆಯು ಸೊಂಡಿಲನ್ನು ಮೇಲಕ್ಕೆ ಎತ್ತಿದೆ. ಮತ್ತೊಬ್ಬ ವೀರನು ಎರಡು ಕೈಗಳಿಂದ ತಪ್ಪಡಿಯನ್ನು ಬಾರಿಸುತ್ತಿದ್ದಾನೆ. ಅವನ ಪಕ್ಕದಲ್ಲಿ ಮತ್ತಿಬ್ಬರು ಯೋಧರು ನಿಂತಿದ್ದು ಅವರಲ್ಲಿ ಒಬ್ಬ ಯೋಧನು ಕಹಳೆಯನ್ನು ಊದುತ್ತಿದ್ದಾನೆ. ಮತ್ತೊಬ್ಬನು ಖಡ್ಗ, ಭರ್ಜಿಯನ್ನು ಹಿಡಿದುಕೊಂಡಿದ್ದಾನೆ. ಈ ನಾಲ್ಕು ಜನ ಯೋಧರು ವೀರ ಮುಡಿಯನ್ನು ಕಟ್ಟಿದ್ದು, ವೀರಗಾಸೆಯನ್ನು ತೊಟ್ಟಿದ್ದಾರೆ. ಇವರು ಅಲಂಕಾರಿಕ ಉಡುಪು, ಆಭರಣಗಳನ್ನು ಧರಿಸಿಕೊಂಡಿದ್ದಾರೆ. ಈ ಭಿತ್ತಿಶಿಲ್ಪಗಳ ಸ್ವಲ್ಪ ಮೇಲಿನ ಹಂತದಲ್ಲಿ ಹೆಡೆ ಬಿಚ್ಚಿಕೊಂಡಿರುವ ನಾಗಶಿಲ್ಪವಿದೆ. ಈ ಶಿಲ್ಪದ ಸ್ವಲ್ಪ ಮೇಲೆ ನಿಂತಿರುವ ನವಿಲು ಹಾಗೂ ಸಿಂಹದ ಶಿಲ್ಪಗಳಿವೆ.

ಅದೇ ದೇವಾಲಯದ ಬಲಗಡೆ ಇರುವ ಬಾಗಿಲ ಬಳಿಯ ಭಿತ್ತಿಯಲ್ಲಿ ಎರಡು ಆನೆಗಳು ನಿಂತಿದ್ದು, ಒಂದು ಮರವನ್ನು ಎರಡೂ ಆನೆಗಳು ಸೊಂಡಿಲಿನಿಂದ ಹಿಡಿದುಕೊಂಡಿರುವಂತೆ ಇವೆ. ಮೇಲೆ ಸೂರ್ಯನ ಉಬ್ಬುಶಿಲ್ಪವಿದೆ. ಅದೇ ದೇವಾಲಯದ ಎಡಗಡೆಯ ಭಿತ್ತಿಯಲ್ಲಿಯ ಶಿಲ್ಪ, ಒಂದು ಸಿಂಹವು ನಿಂತ ಶೈಲಿಯಲ್ಲಿದ್ದು ಆನೆಯ ಸೊಂಡಿಲನ್ನು ಹಿಡಿದುಕೊಂಡಿದೆ. ಇಲ್ಲಿ ಆನೆಯನ್ನು ಬೇಟೆಯಾಡಲು ಬಂದ ಸಿಂಹವನ್ನು ಒಬ್ಬ ವೀರನು ಸಂಹರಿಸುತ್ತಿರುವ ಶೈಲಿಯಲ್ಲಿದೆ. ಅಂದರೆ ಸಿಂಹದ ಮೇಲೆ ಕುಳಿತ ವೀರನು ಸಿಂಹದ ಕೊರಳನ್ನು ಎಡಗೈಯಿಂದ ಹಿಡಿದು ಜಗ್ಗುತ್ತಿದ್ದು ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಈತನು ವೀರ ಜಡೆಯನ್ನು ಬಿಟ್ಟಿದ್ದು ವೀರಗಾಸೆಯನ್ನು ತೊಟ್ಟಿದ್ದಾನೆ. ಈ ಶಿಲ್ಪವನ್ನು ಗಮನಿಸಿದರೆ, ಆನೆಯನ್ನು ಕೊಲ್ಲಲು ಹೊರಟಿರುವ ಸಿಂಹವನ್ನು ಒಬ್ಬ ವೀರನು ಬಿಡಿಸುತ್ತಿರುವ ದೃಶ್ಯದಂತೆ ಕಾಣುತ್ತದೆ.

ಅದೇ ದೇವಾಲಯದ ಬಲಗಡೆಯ ಗೋಡೆಯಲ್ಲಿಯ ಶಿಲ್ಪ, ಇಬ್ಬರು ಪುರುಷರು ಒಬ್ಬರ ಕೈಯನ್ನು ಮತ್ತೊಬ್ಬರು ಸ್ನೇಹದ ಸಂಕೇತವೇನೊ ಎನ್ನುವಂತೆ ಹಿಡಿದುಕೊಂಡು ನಿಂತಿರುವರು. ಅದೇ ದೇವಾಲಯದ ಬಲಗಡೆಯ ಗೋಡೆಯ ಉಬ್ಬುಶಿಲ್ಪ, ಒಬ್ಬ ವೀರನು ಮೇಲೆತ್ತಿದ ಬಲಗೈಯಲ್ಲಿ ಕಿರುಗತ್ತಿಯನ್ನು ಹಿಡಿದುಕೊಂಡು ಓಡುತ್ತಿರುವನು. ಅವನನ್ನು ಹಿಂಬಾಲಿಸಿಕೊಂಡು ನಾಯಿಯು ಓಡುತ್ತಿರು

ವುದು. ಈ ಶಿಲ್ಪವನ್ನು ಗಮನಿಸಿದರೆ ಒಬ್ಬ ವೀರನು ಬೇಟೆಯ ನಾಯಿಯನ್ನು ಜೊತೆಗೆ ಕರೆದುಕೊಂಡು ಬೇಟೆಗೆ ಹೊರಟಂತೆ ಕಂಡುಬರುತ್ತದೆ. ಈ ಶಿಲ್ಪದ ಕೆಳಗೆ ಸಮಭಂಗಿಯಲ್ಲಿ ನಿಂತಿರುವ ಕುದುರೆಯ ಶಿಲ್ಪವಿದೆ. ಈ ಶಿಲ್ಪದ ಪಕ್ಕದಲ್ಲಿ ಬಾಲವನ್ನು ಎತ್ತಿಕೊಂಡು ಓಡುತ್ತಿರುವ ಹುಲಿಯ ಶಿಲ್ಪವಿದೆ.

ಅದೇ ದೇವಾಲಯದ ಎಡಗಡೆಯ ಗೋಡೆಯಲ್ಲಿಯ ಶಿಲ್ಪಗಳು ಒಂದು ಶಿವಲಿಂಗ, ಚಲಿಸುತ್ತಿರುವ ಉರಗ, ಮತ್ಸ್ಯ, ಸೊಂಡಿಲನ್ನು ಎತ್ತಿಕೊಂಡು ಘಿಳಿಡುತ್ತನಿಂತಿರುವ ಆನೆ ಹಾಗೂ ನವಿಲು, ಕೀರ್ತಿಮುಖವನ್ನೊಳಗೊಂಡ ಚಕ್ರ, ಕೀರ್ತಿಮುಖವನ್ನೊಳಗೊಂಡ ಪುರುಷ ಶಿಲ್ಪಗಳಿವೆ. ಹೀಗೆ ಈ ದೇವಾಲಯದ ಭಿತ್ತಿಯಲ್ಲಿ ಅನೇಕ ಉರಗ, ಮತ್ಸ್ಯ, ಆನೆ, ಸಿಂಹಗಳ, ವೀರರ, ಪ್ರಾಣಿ, ಪಕ್ಷಿಗಳ ಭಿತ್ತಿ ಶಿಲ್ಪಗಳಿರುವುದನ್ನು ಕಾಣುತ್ತೇವೆ.

ವಿಜಯನಗರೋತ್ತರದ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಸಂಡೂರು ಗ್ರಾಮದ ಈಶ್ವರ ದೇವಾಲಯದ ಸಭಾಮಂಟಪದ ಕೈಪಿಡಿಯ ಮೇಲ್ಛುದಿಯಲ್ಲಿ ಗಾರೆಯಿಂದ ನಿರ್ಮಿಸಲ್ಪಟ್ಟ ಗೋಪುರ ರಚನೆಗಳಿಂದಲಂಕೃತ ವಾದ ಗೂಡುಗಳಿದ್ದು, ಅದರಲ್ಲಿ ಶೈವ ದೇವತೆಗಳ ಶಿಲ್ಪಗಳಿವೆ. ಹಾಗೂ ದೇವಾಲಯದ ಸುತ್ತಲಿನ ಭಿತ್ತಿಯಲ್ಲಿಯೂ ಯೋಧರ, ಪ್ರಾಣಿ, ಪಕ್ಷಿಗಳ ಭಿತ್ತಿ ಶಿಲ್ಪಗಳಿವೆ. ಈ ದೇವಾಲಯದ ಮಹಾದ್ವಾರದ ಗೋಪುರವು ಗಾರೆಯಿಂದ ನಿರ್ಮಿಸಲ್ಪಟ್ಟಿದ್ದು, ಮೂರು ಹಂತವನ್ನೊಳಗೊಂಡಿದ್ದಾಗಿದ್ದು, ಅದರಲ್ಲಿ ಶೈವ ದೇವತೆಗಳು ಹಾಗು ಅವುಗಳ ಪರಿವಾರ ದೇವತೆಗಳ ಭಿತ್ತಿ ಶಿಲ್ಪಗಳಿವೆ. ಇದೇ ರೀತಿಯ ಮಹಾದ್ವಾರ ಗೋಪುರವನ್ನೊಂದಿದ ಮತ್ತೊಂದು ದೇವಾಲಯವೆಂದರೆ ಈ ತಾಲ್ಲೂಕಿನ ನರಸಿಂಹಸ್ವಾಮಿ ದೇವಸ್ಥಾನದ್ದು. ಗಾರೆಯನ್ನು ಬಳಸಿ ನಿರ್ಮಿಸಲ್ಪಟ್ಟ ಕುಮಾರಸ್ವಾಮಿ ದೇವಾಲಯದ ಸಭಾಮಂಟಪ ಹಾಗೂ ಮಹಾದ್ವಾರ ಗೋಪುರದ ಮಾದರಿಯಲ್ಲಿ ನಿರ್ಮಿಸಲ್ಪಟ್ಟ ಸು.೧೮ ನೇ.ಶ.ದ ಸಂಡೂರಿನ ವಿಠಲ ಮಂದಿರವನ್ನು ಕಾಣು ತ್ತೇವೆ. ಇವಷ್ಟೇ ಅಲ್ಲದೆ ಕೇವಲ ದೇವಾಲಯದ ಗೋಪುರಕ್ಕೆ ಮಾತ್ರ ಗಾರೆಯನ್ನು ಬಳಸಿ ನಿರ್ಮಿಸಿರುವ ಅನೇಕ ಗೋಪುರಗಳನ್ನು ಈ ತಾಲ್ಲೂಕಿನಲ್ಲಿ ಕಾಣುತ್ತೇವೆ. ಅವೆಲ್ಲವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಇದೇ ತಾಲ್ಲೂಕಿನ ಬೊಮ್ಮಗಟ್ಟದ ಹುಲಿಕುಂಟೇಶ್ವರ ದೇವಾಲಯದ ಅಂತರಾಳದ ಹೊರಭಿತ್ತಿಯ ಶಿಲ್ಪ. ಇಲ್ಲಿ ಚಲಿಸುತ್ತಿರುವ ಶೈಲಿಯಲ್ಲಿರುವ ಮತ್ಸ್ಯ, ಹೆಡೆ ಬಿಚ್ಚಿಕೊಂಡು ಚಲಿಸುತ್ತಿರುವ ಉರಗದ ಭಿತ್ತಿ ಶಿಲ್ಪಗಳಿವೆ. ಇದೇ ತಾಲ್ಲೂಕಿನ ಚೋರುನೂರು ಗ್ರಾಮದ ಆಂಜನೇಯ ದೇವಾಲಯದ ಮುಖ ಮಂಟಪದ ಒಂದು ಕಂಬದಲ್ಲಿ ಹೆಡೆ ಬಿಚ್ಚಿಕೊಂಡು ಚಲಿಸುತ್ತಿರುವ ಉರಗ ಹಾಗೂ ಮತ್ತೊಂದು ಕಂಬದಲ್ಲಿ ಮತ್ಸ್ಯದ ಶಿಲ್ಪಗಳಿವೆ.

೪.೭. ದೇವಕೋಷ್ಠದ ಶಿಲ್ಪಗಳು

ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದ ಹೊರ ಭಿತ್ತಿಯ ಎಡಭಾಗದ ದೇವಕೋಷ್ಠದ ಪುರುಷ ದೇವತೆಯ ಶಿಲ್ಪವು ತಲೆಯಲ್ಲಿ ಕಿರೀಟ, ಮುಕುಟ, ಕಿವಿಯಲ್ಲಿ ನಾಗಕುಂಡಲ, ಕೊರಳಲ್ಲಿ

ಮಣಿಸರಗಳನ್ನು, ಮಣಿ ಉದರಬಂಧವನ್ನು, ಕೈಯಲ್ಲಿ ಮಣಿ ಕಡಗವನ್ನು ಹಾಗೂ ತೋಳಲ್ಲಿ ನಾಗಬಂಧವನ್ನು ಮತ್ತು ಕಟೀಸೂತ್ರವನ್ನು, ಚನ್ನವೀರವನ್ನು ಧರಿಸಿಕೊಂಡಿದೆ. ಈ ಶಿಲ್ಪದ ಎರಡು ಕಾಲುಗಳನ್ನು ಬಳಸಿಕೊಂಡು ಸುತ್ತಿಕೊಂಡಿರುವ ನಾಗರ ಹಾವಿದ್ದು ಅದರ ಕೆಳಗೆ ರುಂಡವಿದೆ. ಈ ಶಿಲ್ಪವು ಚರ್ತುಬಾಹುವನ್ನು ಹೊಂದಿದ್ದು, ಹಿಂದಿನ ಬಲಗೈಯಲ್ಲಿ ಪರಶುವನ್ನು ಮತ್ತು ಎಡಗೈಯಲ್ಲಿ ಸರ್ಪವನ್ನು ಹಿಡಿದಿದೆ. ಮುಂದಿನ ಬಲಗೈಯನ್ನು ಎದೆಯ ಮೇಲೆ ಇಟ್ಟುಕೊಂಡಿದೆ. ಎಡಗೈಯು ಕಟ್ಯಾವಲಂಬಿತವಾಗಿದೆ. ಪಕ್ಕದಲ್ಲಿ ರುಂಡಧಾರಿಯಾದ ಮಹಿಷನ ಶಿಲ್ಪವಿದೆ. ಬಲಪಕ್ಕದಲ್ಲಿ ಮತ್ತೊಂದು ಶಿಲ್ಪವಿದೆ. ಈ ದೇವಕೋಷ್ಠದ ಮೇಲೆ 'ಶ್ರೀ ಜಿಲಯನ್' ಎಂಬ ಶಾಸನವಿದೆ. ಈ ಶಿಲ್ಪವು ಸಮಭಂಗಿಯಲ್ಲಿದೆ. ಮಕರ ತೋರಣದಿಂದ ಈ ದೇವಕೋಷ್ಠವು ಅಲಂಕೃತವಾಗಿದೆ.

ಇದೇ ದೇವಾಲಯದ ಹೊರ ಭಿತ್ತಿಯ ಬಲಭಾಗದ ದೇವಕೋಷ್ಠದ ಶಿಲ್ಪವು ಶಿರದಲ್ಲಿ ಕರಂಡ ಮುಕುಟ, ಕರ್ಣಕುಂಡಲ, ಪದಕಸರ, ಚನ್ನವೀರ, ಉದರಬಂಧ, ಕಟೀಸೂತ್ರ, ತೋಳಬಂಧಿ, ಕೈಗಡಗ ಧರಿಸಿದೆ. ಈ ಶಿಲ್ಪವು ದ್ವಿಬಾಹುಗಳನ್ನೊಂದಿದ್ದು, ತ್ರಿಭಂಗಿಯಲ್ಲಿ ನಿಂತಿದೆ. ಈ ಕೋಷ್ಠವು ಅಲಂಕೃತವಾದ ತೋರಣವನ್ನೊಳಗೊಂಡಿದೆ.

ಇದೇ ದೇವಾಲಯದ ಹೊರ ಭಿತ್ತಿಯ ಹಿಂಭಾಗದ ದೇವಕೋಷ್ಠದ ಪುರುಷ ದೇವತೆಯ ಶಿಲ್ಪವು ಶಿರದಲ್ಲಿ ಕರಂಡ ಮುಕುಟವನ್ನು, ಕರ್ಣಕುಂಡಲವನ್ನು, ಕೊರಳಲ್ಲಿ ಸರ, ಮಣಿಗಳ ತೋಳಬಂದಿ, ಕೈಗಡಗ, ಯಜ್ಞೋಪವಿತ, ಕಟೀಸೂತ್ರವನ್ನು ಧರಿಸಿದೆ. ಬಲಗೈ ಸವೆದಿದೆ. ಎಡಗೈ ಕಟ್ಯಾವಲಂಬಿತವಾಗಿದೆ. ಇದರ ಪಕ್ಕದಲ್ಲಿ ಕುಳಿತ ಶಿಲ್ಪವು ಸವೆದಿದೆ. ಈ ಕೋಷ್ಠವು ಮಕರ ತೋರಣದಿಂದ ಅಲಂಕೃತವಾಗಿದೆ.

ಪಾರ್ವತಿ ದೇವಾಲಯದ ಮುಂಭಾಗದ ಭಿತ್ತಿಯಲ್ಲಿಯ ಎಡಭಾಗದ ದೇವಕೋಷ್ಠದ ಶಿಲ್ಪವು ಶಿರದಲ್ಲಿ ಕರಂಡ ಮುಕುಟವನ್ನು, ಕಿವಿಯಲ್ಲಿ ವರ್ತುಲಾಕಾರದ ಕುಂಡಲವನ್ನು, ಕೊರಳಲ್ಲಿ ಮಣಿಸರ, ಕೈಯಲ್ಲಿ ಕಡಗ, ಉದರ ಬಂಧ, ಕಟೀಸೂತ್ರವನ್ನು, ಚನ್ನವೀರವನ್ನು, ತೋಳಲ್ಲಿ ನಾಗಬಂಧಿಯನ್ನು ಧರಿಸಿದೆ. ಬಲಗೈಯಲ್ಲಿ ದಂಡವನ್ನು ಹಿಡಿದಿದ್ದು, ಎಡಗೈ ಕಟ್ಯಾವಲಂಬಿತವಾಗಿದೆ. ಈ ಶಿಲ್ಪವು ತ್ರಿಭಂಗಿಯಲ್ಲಿದ್ದು, ಅಕ್ಕಪಕ್ಕದಲ್ಲಿ ಪರಿಚಾರಿಕೆಯರಿದ್ದಾರೆ. ಇದರ ಪಕ್ಕದ ಕೋಷ್ಠದಲ್ಲಿಯ ಪುರುಷ ಶಿಲ್ಪವು ಜಟಾಮುಕುಟವನ್ನು ಹಾಗೂ ಎಡಗೈಗೆ ಮಾತ್ರ ಕಡಗವನ್ನು ಧರಿಸಿದೆ. ಎಡಗೈ ಮತ್ತು ಬಲಗೈಯಿಂದ ದಂಡವನ್ನು ಹಿಡಿದು ನಿಂತಿದ್ದಾನೆ. ಈ ಶಿಲ್ಪವು ತ್ರಿಭಂಗಿಯಲ್ಲಿದೆ. ಉದರ ಬಂಧ, ಕಟೀಸೂತ್ರ ಧರಿಸಿದ್ದಾನೆ.

ಇದೇ ದೇವಾಲಯದ ಮುಂಭಾಗದ ಭಿತ್ತಿಯಲ್ಲಿಯ ಬಲಭಾಗದ ದೇವಕೋಷ್ಠದ ಪುರುಷ ಶಿಲ್ಪವು ಶಿರದಲ್ಲಿ ಕಿರೀಟ ಮುಕುಟವನ್ನು, ಕಿವಿಯಲ್ಲಿ ವರ್ತುಲಾಕಾರದ ಆಭರಣವನ್ನು, ತೋಳಲ್ಲಿ ನಾಗಬಂಧವನ್ನು, ಕೊರಳಲ್ಲಿ ಸರವನ್ನು, ಚನ್ನವೀರವನ್ನು, ಉದರಬಂಧವನ್ನು, ಸೊಂಟಪಟ್ಟಿ, ಕಟೀ

ಸೂತ್ರವನ್ನು ಧರಿಸಿದೆ. ಇಳಿ ಬಿಟ್ಟ ಎಡಗೈಯಿಂದ ವಸ್ತ್ರವನ್ನು ಹಿಡಿದಿದ್ದು, ಬಲಗೈ ತೋಳಿನಿಂದ ಈ ವಸ್ತ್ರ ಇಳಿ ಬಿಡಲಾಗಿದೆ. ಎತ್ತಿದ ಬಲಗೈಯ ಹೆಬ್ಬೆರಳು ಹಣೆಯನ್ನು ಮುಟ್ಟಿದೆ. ಇದು ತ್ರಿಭಂಗಿಯಲ್ಲಿದೆ.

ಇದರ ಪಕ್ಕದ ಕೋಷ್ಠದಲ್ಲಿಯ ಪುರುಷ ಶಿಲ್ಪವು ಜಟೆಯನ್ನು ಬಿಟ್ಟಿದೆ. ಬಲಗೈಗೆ ಮಾತ್ರ ಕಡಗ ಧರಿಸಿದೆ. ಸೊಂಟದಲ್ಲಿ ಚಾಕು, ಕಿರುಗತ್ತಿಯನ್ನು ಹಾಗೂ ಬೆನ್ನ ಹಿಂದೆ ಖಡ್ಗವನ್ನು ಮತ್ತು ಎಡಗೈ-ಬಲಗೈಯಿಂದ ಒಂದು ದಂಡವನ್ನು ಹಿಡಿದು ತ್ರಿಭಂಗಿಯಲ್ಲಿ ನಿಂತಿದೆ. ಈ ಶಿಲ್ಪವು ಅಲಂಕಾರಿಕ ಉಡುಪನ್ನು ಧರಿಸಿದ್ದು, ಪಾದರಕ್ಷೆಯನ್ನೂ ಧರಿಸಿದೆ.

೪.೮. ಕೋಟೆಗಳು

ಕೋಟೆಯೆಂದರೆ ರಕ್ಷಣಾರ್ಥವಾಗಿ ಸುತ್ತಲೂ ಎತ್ತರವಾದ ಗೋಡೆಯ ರಚನೆಯೆಂದು ಅರ್ಥ. ಇದು ಶಿಲಾರಚನೆಯಾಗಿರಬಹುದು ಅಥವಾ ಮಣ್ಣಿನ ರಚನೆಯಾಗಿರಬಹುದು. ಕೋಟೆಗೆ ದುರ್ಗ, ಕಿಲ್ಲೆ ಎಂದೂ ಕರೆಯುವರು. ರಕ್ಷಣಾ ವಾಸ್ತುವಿನಲ್ಲಿ ಕೋಟೆಗೆ ಪ್ರಥಮ ಸ್ಥಾನವಿದೆ.

ಸಂಡೂರು ತಾಲ್ಲೂಕಿನಲ್ಲಿ ಕಾಣ ಬರುವ ಅನೇಕ ಕೋಟೆಗಳಲ್ಲಿ ಪ್ರಾಚೀನವಾದ ಕೋಟೆ ಎಂದರೆ ದರೋಜಿ ಕೋಟೆ. ಈ ಕೋಟೆಯು ೧೨. ನೇ. ಶತಮಾನದ ಪ್ರಾರಂಭದಲ್ಲಿತ್ತೆಂದು ಕ್ರಿ.ಶ.೧೧೦೪-೦೫[೫] ರ ಶಾಸನದಿಂದ ತಿಳಿದುಬರುತ್ತದೆ. ಈ ಅವಧಿಯ ನಂತರದ ಕೋಟೆಯೆಂದರೆ ೧೩-೧೪ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟ ಹೊಸಮಲೆದುರ್ಗದ ಕೋಟೆ. ಈ ಕೋಟೆಗಳನ್ನು ಹೊರತುಪಡಿಸಿದರೆ, ಕ್ಷೇತ್ರಕಾರ್ಯ ಕೈಗೊಂಡು ಪತ್ತೆ ಹಚ್ಚಲಾದ ಇನ್ನೂ ಕೆಲವು ಕೋಟೆಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ಅವುಗಳಲ್ಲಿ:

ಉತ್ತರಮಲೆ ಕೋಟೆ, ಜೋಗಿಕಲ್ಲಿನ ಕೋಟೆ, ಬೊಮ್ಮಗಟ್ಟದ ಕೋಟೆ, ತಿಮ್ಮಪ್ಪನ ಬೆಟ್ಟದ ಕೋಟೆಗಳು. ಈ ನಾಲ್ಕು ಕೋಟೆಗಳು ಅವಶೇಷಗಳ ಆಧಾರದಿಂದ ಸುಮಾರು ೧೬-೧೭ನೇ ಶತಮಾನದ ಪಾಳೆಗಾರರ ಅವಧಿಯಲ್ಲಿ ನಿರ್ಮಿಸಲ್ಪಟ್ಟವುಗಳಂತೆ ಕಂಡುಬರುತ್ತವೆ. ಈ ಪ್ರದೇಶವು ವಿಜಯನಗರದ ಪತನ ನಂತರ ಜರಿಮಲೆ ಪಾಳೆಗಾರರ ಆಳ್ವಿಕೆಗೊಳಪಟ್ಟಿತ್ತು. ಆ ಅವಧಿಯಲ್ಲಿ ಈ ಕೋಟೆಗಳು ನಿರ್ಮಾಣಗೊಂಡಿರಬೇಕು. ಏಕೆಂದರೆ ಈ ನಾಲ್ಕೂ ಕೋಟೆಗಳು ಸು.೨೫ ಕಿ.ಮೀ.ಅಂತರದ ಒಳಗೆ ನಿರ್ಮಿಸಲ್ಪಟ್ಟಿದ್ದು ಗಮನಿಸಿದರೆ. ಇವು ಬಹುಶಃ ಈ ಪ್ರದೇಶವನ್ನು ಆಳಿದ ಜರಿಮಲೆ ಪಾಳೆಗಾರರ ಅವಧಿಯಲ್ಲಿಯೇ ನಿರ್ಮಿತವಾಗಿರಬೇಕೆಂದು ಊಹಿಸಬಹುದಾಗಿದೆ. ಈ ಕೋಟೆಗಳು ಬೆಟ್ಟದ ಮೇಲೆ ನಿರ್ಮಿಸಲು ಕಾರಣ ದಟ್ಟವಾದ ಅರಣ್ಯ. ಇಲ್ಲಿ ದೊರೆಯುವ ಕಟ್ಟಿಗೆ, ನೀರು ಇತ್ಯಾದಿ ಸಾಮಾಗ್ರಿಗಳ ಸೌಲಭ್ಯದಿಂದ ತಮಗೆ ಬೇಕಾದ ಆಯುಧಗಳನ್ನು ನಿರ್ಮಿಸಿಕೊಳ್ಳಲು ಸೈನ್ಯವನ್ನು ತಂಗಲು, ಶತ್ರುಗಳಿಂದ ರಕ್ಷಿಸಿಕೊಳ್ಳಲು ಈ ಬೆಟ್ಟದ ಪ್ರದೇಶವು ಸೂಕ್ತ ಸ್ಥಳವಾಗಿದ್ದು, ರಕ್ಷಣೆಯ ದೃಷ್ಟಿಯಿಂದಲೂ ಉತ್ತಮ

ಸೌಲಭ್ಯವುಳ್ಳ, ಸೌಕರ್ಯಗಳಿಂದ ಕೂಡಿತ್ತು. ಆದ್ದರಿಂದ ಈ ಪಾಳೆಗಾರರು ಬೆಟ್ಟದ ಮೇಲೆಯೇ ಕೋಟೆಯನ್ನು ನಿರ್ಮಿಸಿರಬೇಕು.

ಪಾಳೆಗಾರರ ನಂತರದ ಅವಧಿಯಲ್ಲಿ ನಮಗೆ ಕಾಣಸಿಗುವ ಕೃಷ್ಣಾನಗರದ ಕೋಟೆಯು ಸು.೧೭-೧೮ನೇ ಶತಮಾನದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರಿಂದ ನಿರ್ಮಿಸಲ್ಪಟ್ಟಿದಾಗಿದ್ದು, ಇಂದಿಗೂ ಉತ್ತಮ ಸ್ಥಿತಿಯಲ್ಲಿದೆ. ಒಟ್ಟಿನಲ್ಲಿ ಈ ಪ್ರದೇಶದಲ್ಲಿ ೧೨ನೇ ಶತಮಾನದಿಂದ ಹಿಡಿದು ೧೮ನೇ ಶತಮಾನದವರೆಗಿನ ಕೋಟೆಯ ಅವಶೇಷಗಳನ್ನು ಕಾಣುತ್ತೇವೆ.

ಈ ಕೋಟೆಗಳು ಇಂದು ರಕ್ಷಣೆಯ ಕೊರತೆಯಿಂದ ಹಾಗೂ ಸಾರ್ವಜನಿಕರ ನಿರ್ಲಕ್ಷತೆಯಿಂದ ಅನಾಥವಾಗಿ, ಯಾವುದೋ ಕಟ್ಟಡದ ಬುನಾದಿಯ, ಗೋಡೆಯ ಕಲ್ಲುಗಳಾಗಿ ಹೇಳ ಹೆಸರಿಲ್ಲದಂತೆ ಕೋಟೆಗೆ ಬಳಸಲ್ಪಟ್ಟ ಕಲ್ಲುಗಳು ಕಟ್ಟಡಗಳಿಗೆ ಬಳಕೆಯಾಗುತ್ತಿವೆ. ಈ ಅಳಿದುಳಿದ ಕೋಟೆಯ ಅವಶೇಷಗಳ ವಿವರವನ್ನು ಇಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ವಿಜಯನಗರ ಪೂರ್ವದ ಕೋಟೆಗಳು

ದರೋಜಿ ಕೋಟೆ

ದರೋಜಿಯು ಸಂಡೂರು ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ೧೨ನೇ ಶತಮಾನದಲ್ಲಿ ದೊರವಡಿ ನಾಡು ಅಥವಾ ದೊರವಡಿ-೩೦ರ ರಾಜಧಾನಿಯಾಗಿದ್ದ ದೊರವಡಿಯು ಕಾಲಾಂತರದಲ್ಲಿ ದರೋಜಿಯಾಗಿದೆ.[೬೦] ಇದನ್ನು ಶಾಸನಗಳು ದೊರವದಿ ಎಂದು ಕರೆದಿವೆ. ಇದು ಬಲ್ಲಕುಂದೆ ನಾಡಿನ ದೊಡ್ಡ ಉಪವಿಭಾಗಗಳಲ್ಲಿ ಒಂದೆಂಬ ಅಂಶವು ಓರುವಾಯಿ ಮತ್ತು ಹಂಪೆ ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ.೧೨ನೇ ಶತಮಾನದಲ್ಲಿ ದೊರವಡಿನಾಡು ಅಥವಾ ದೊರವಡಿ-೩೦ರ ರಾಜಧಾನಿಯಾಗಿದ್ದಿತು.[೬೧] ದೊರವಡಿಯಲ್ಲಿ ೧೨ನೇ ಶತಮಾನದ ಪ್ರಾರಂಭದಲ್ಲಿ ಕೋಟೆಯಿದ್ದುದು ಇಲ್ಲಿಯ ಕ್ರಿ.ಶ.೧೧೦೪-೦೫ರ ಶಾಸನದಿಂದ ತಿಳಿಯುತ್ತದೆ. ಈ ಕೋಟೆಯನ್ನು ೧೨.ನೇ.ಶ.ದ. ಕೊನೆಯಲ್ಲಿ ಹೊಯ್ಸಳ ಎರಡನೇ ಬಲ್ಲಾಳ ಜಯಿಸಿದ್ದನು. ಕ್ರಿ.ಶ.೧೨೮೦ ಮತ್ತು ೧೨೮೨-೮೩ರಲ್ಲಿ ಮುಮ್ಮಡಿ ಸಿಂಗೆಯನಾಯಕ ದೊರವದಿಯನ್ನು ಆಳುತ್ತಿದ್ದಾಗ ಯಾದವ ರಾಮದೇವನ ಸೈನ್ಯವು ಆಕ್ರಮಣ ಮಾಡಿತು. ೧೩೨೦ರಲ್ಲಿ ಮುಮ್ಮಡಿ ಸಿಂಗೆಯ ನಾಯಕನ ಮಗ ಕಂಪಿಲರಾಯ ದೊರವಡಿಯನ್ನು ಆಳುತ್ತಿದ್ದಾಗ ಹೊಯ್ಸಳ ಮೂರನೇ ಬಲ್ಲಾಳ ದಂಡೆತ್ತಿ ಬಂದನು. ೧೬.ನೇ.ಶ.ದಲ್ಲಿ ವಿಜಯನಗರ ಅರಸರ ಕಾಲದಲ್ಲಿ ದೊರವಡಿಯ ಸುತ್ತಲಿನ ಪ್ರದೇಶವನ್ನು ದೊರವಡಿ ವೇಂಠೆ ಎಂದು ಕರೆಯುತ್ತಿದ್ದರು.[೬೨]

ಕೋಟೆಯ ಲಕ್ಷಣಗಳು

ದೋರವಡಿ ಪಟ್ಟಣವಿದ್ದ ಸ್ಥಳವನ್ನು ಹಳೆದರೋಜಿ ಎಂದು ಕರೆಯುತ್ತಾರೆ. ಇದರ ಪಶ್ಚಿಮಕ್ಕೆ ದರೋಜಿ ಬೆಟ್ಟವಿದೆ. ಬೆಟ್ಟದ ಮೇಲೆ ಕೋಟೆ ಮತ್ತು ಇತರ ಕಟ್ಟಡಗಳ ಅವಶೇಷಗಳಿವೆ. ದೊರವಡಿ

ಪಟ್ಟಣ ಅಥವಾ ಹಳೆದರೋಜಿಯ ಸುತ್ತ ಹಿಂದೆ ಕೋಟೆಯಿದ್ದ ಬಗ್ಗೆ ಈಗ ಆಧಾರಗಳಿಲ್ಲ. ಒಂದು ವೇಳೆ ಕೋಟೆ ಇದ್ದಿದ್ದರೂ ಅದನ್ನು ವ್ಯವಸಾಯ ಮಾಡಲು ಹಾಳು ಮಾಡಿರಬಹುದು. ಏಕೆಂದರೆ ಹಾಳು ಪಟ್ಟಣದ ಪ್ರದೇಶವು ವ್ಯವಸಾಯಕ್ಕೆ ಒಳಪಟ್ಟಿದೆ. ಆದರೆ ಬೆಟ್ಟದ ಮೇಲೆ ೧೨ನೇ ಶತಮಾನದಲ್ಲಿಯೇ ಕೋಟೆ ಇದ್ದುದಕ್ಕೆ ಅಲ್ಲಿನ ರಾಮಲಿಂಗೇಶ್ವರ ದೇವಾಲಯದಲ್ಲಿಯ ಶಾಸನವು ಆಧಾರವಾಗಿದೆ. ಶಾಸನದ ಪ್ರಕಾರ ಈ ದೇವಾಲಯವು ದೊರವಡಿಯ ಕೋಟೆಯ ಒಳಗಿತ್ತು.

ದರೋಜಿ ಬೆಟ್ಟದ ಸಾಲಿನಲ್ಲಿ ಮೂರು ಬೆಟ್ಟಗಳಿವೆ. ಇವುಗಳನ್ನು ಉತ್ತರಬೆಟ್ಟ, ಮಧ್ಯದ ಬೆಟ್ಟ ಮತ್ತು ದಕ್ಷಿಣ ಬೆಟ್ಟಗಳೆಂದು ಕರೆಯಬಹುದು. ಇವುಗಳಲ್ಲಿ ಮಧ್ಯ ಮತ್ತು ದಕ್ಷಿಣ ಬೆಟ್ಟಗಳ ಮೇಲೆ ಕೋಟೆ ವಿಸ್ತರಿಸಿದೆ. ದಕ್ಷಿಣ ಬೆಟ್ಟದ ಬುಡದಲ್ಲಿ ವೀರಭದ್ರ ದೇವಾಲಯವಿದೆ. ಬೆಟ್ಟಗಳ ಮೇಲೆ ಹತ್ತಲು ಮಧ್ಯ ಮತ್ತು ದಕ್ಷಿಣ ಬೆಟ್ಟಗಳ ಮಧ್ಯದ ಕಿರಿದಾದ ಕೊಳ್ಳದಲ್ಲಿ ಮೆಟ್ಟಿಲುಗಳಿವೆ. ಕೊಳ್ಳದ ದಾರಿಯಲ್ಲಿ ಆಗ್ನೇಯಕ್ಕೆ ಎರಡು ಮತ್ತು ವಾಯುವ್ಯಕ್ಕೆ ಎರಡು ಕೋಟೆ ಗೋಡೆಗಳನ್ನು ಎರಡು ಬೆಟ್ಟಗಳ ಮಧ್ಯ ನಿರ್ಮಿಸಲಾಗಿದೆ. ಈ ಕೋಟೆಗಳಲ್ಲಿ ತೆರೆದ ದ್ವಾರಗಳಿವೆ. ಆದರೆ ಬಾಗಿಲಿನಂತಹ ಯಾವುದೇ ಕಟ್ಟಡಗಳಿಲ್ಲ. ಚಿಕ್ಕ ಕಲ್ಲುಗಳಿಂದ ಕಟ್ಟಿದ ಆಗ್ನೇಯ ಕೋಟೆಗೋಡೆಗಳು ೧೭-೧೮ನೇ ಶತಮಾನದವುಗಳು. ಆದರೆ ವಾಯುವ್ಯ ಕೋಟೆ ಗೋಡೆಗಳನ್ನು ಭಾಗಶಃ ಕತ್ತರಿಸಿದ ದೊಡ್ಡ ಕಲ್ಲುಗಳಿಂದ ಕಟ್ಟಿದ್ದು ಇವು ೧೩ನೇ ಶತಮಾನ ಅಥವಾ ಅದಕ್ಕಿಂತ ಹಿಂದಿನ ಕಾಲದವು. ಈ ಕೊಳ್ಳದಲ್ಲಿ ಬೆಟ್ಟದ ಮೇಲಿನಿಂದ ಹರಿದು ಬಂದ ನೀರನ್ನು ಸಂಗ್ರಹಿಸಲು ಎರಡು ಚಿಕ್ಕ ಕೆರೆಗಳಿವೆ.

ಆಗ್ನೇಯದಿಂದ ಮೊದಲನೆಯ ಕೋಟೆ ಗೋಡೆಯನ್ನು ದಾಟಿ ಎರಡನೆಯ ಕೋಟೆಯ ಹತ್ತಿರ ಹೋದಾಗ ಒಂದು ದಾರಿ ದಕ್ಷಿಣ ಬೆಟ್ಟದ ಮೇಲೆ ಹೋಗುತ್ತದೆ. ಈ ದಾರಿಯಲ್ಲಿ ಕೆಲವು ಮೆಟ್ಟಿಲುಗಳನ್ನು ಹತ್ತಿ ಮುಂದೆ ಹೋದಾಗ ರಾಮಲಿಂಗೇಶ್ವರ ದೇವಾಲಯ ಕಾಣುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯಲ್ಲದೆ ಬೇರೆ ಅಲಂಕಾರವಿಲ್ಲ. ಅಂತರಾಳದ ಮುಂದೆ ಬಾಗಿಲವಾಡವಿಲ್ಲ. ನಂತರ ಸೇರಿಸಲಾದ ಸಭಾಮಂಟಪ ಭಾಗಶಃ ಬಿದ್ದು ಹೋಗಿದೆ. ಹೊರಗೋಡೆಯ ಮೇಲೆ ಅರೆಗಂಭಗಳ ಅಲಂಕಾರವಿದೆ. ಸಭಾಮಂಟಪದ ಉತ್ತರ ಗೋಡೆಯ ಮೇಲೆ ಆನೆಯ ಎರಡು ಉಬ್ಬು ಶಿಲ್ಪಗಳಿವೆ. ಅಂತರಾಳದ ಅರೆಗಂಭಗಳ ಮೇಲಿನ ಶಾಸನವು ಕ್ರಿ.ಶ.೧೧೦೪-೦೫ರಲ್ಲಿ ದೊರವಡಿ ಕೋಟೆಯೊಳಗಿನ ರಾಮೇಶ್ವರ ದೇವರಿಗೆ ದಾನ ಕೊಟ್ಟಿದುದನ್ನು ದಾಖಲಿಸುತ್ತದೆ. ಈ ದೇವಾಲಯವು ಶಾಸನದ ಕಾಲಕ್ಕಿಂತ ಕೆಲವು ವರ್ಷ ಹಿಂದಿನದಾಗಿದೆ. ದೇವಾಲಯದ ಮುಂದೆ ಚಿಕ್ಕ ನೀರಿನ ದೋಣಿಯಿದೆ. ದೇವಾಲಯದ ಸುತ್ತಲಿನ ಸಮತಟ್ಟಾದ ಪ್ರದೇಶದ ಸುತ್ತಲು ಕೋಟೆಯಿದೆ. ಈ ಕೋಟೆಗೆ ದಕ್ಷಿಣಕ್ಕೆ ಬಾಗಿಲಿದೆ. ಇಲ್ಲಿಂದ ಮೇಲೆ ಮೊದಲು ಪಶ್ಚಿಮಕ್ಕೆ ನಂತರ ವಾಯುವ್ಯಕ್ಕೆ ಮೂರು ಬಾಗಿಲುಗಳ ಮೂಲಕ ಹೋದಾಗ

ಬೆಟ್ಟದ ತುದಿಯಲ್ಲಿರುವ ಸಮತಟ್ಟಾದ ಪ್ರದೇಶವನ್ನು ತಲುಪುತ್ತೇವೆ. ಈ ಪ್ರದೇಶದ ಸುತ್ತಲಿನ ಕೋಟೆಯನ್ನು ಚಿಕ್ಕ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕೋಟೆಯಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ಇಲ್ಲಿ ಕೆಲವು ಕಟ್ಟಡಗಳ ಅವಶೇಷಗಳು ಮತ್ತು ಒಂದು ನೀರಿನ ದೊಣೆ ಇವೆ. ಇಲ್ಲಿಯ ಒಂದು ಗುಂಡಿನ ಮೇಲೆ ಹುಲಿಯನ್ನು ಬಂದೂಕಿನಿಂದ ಬೇಟೆಯಾಡುತ್ತಿರುವ ಮನುಷ್ಯನ, ಒಂಟೆಯ ಮೇಲೆ ಕುಳಿತು ನಗಾರಿ ಬಾರಿಸುವವನ, ಖಡ್ಗ ಹಿಡಿದು ಕುದುರೆಯ ಮೇಲೆ ಕುಳಿತವನ ಮತ್ತು ಧ್ವಜದೊಂದಿಗೆ ಅಂಬಾರಿಯನ್ನು ಹೊತ್ತ ಆನೆಯ ರೇಖಾಚಿತ್ರಗಳಿವೆ. ಮತ್ತೊಂದು ಗುಂಡಿನ ಮೇಲೆ ಆನೆಯನ್ನು ಕೊಲ್ಲುತ್ತಿರುವ ಸಿಂಹದ ರೇಖಾಚಿತ್ರವಿದೆ. ಮನುಷ್ಯರ ಭಂಗಿ ಮತ್ತು ಪ್ರಾಣಿಗಳ ಚಲನವಲನಗಳನ್ನು ನೈಜವಾಗಿ ಚಿತ್ರಿಸಲಾಗಿದೆ.

ಮಧ್ಯ ಬೆಟ್ಟದ ಸುತ್ತಲು ಎರಡು ಕೋಟೆ ಗೋಡೆಗಳಿವೆ. ಚಿಕ್ಕ ಕಲ್ಲುಗಳಿಂದ ಕಟ್ಟಿದ ಈ ಗೋಡೆಗಳಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ಬೆಟ್ಟದ ತುದಿಯಲ್ಲಿನ ಸಮತಟ್ಟಾದ ಪ್ರದೇಶದಲ್ಲಿ ಕೆಲವು ಕಟ್ಟಡಗಳ ಅವಶೇಷಗಳು ಮತ್ತು ಒಂದು ನೀರಿನ ದೊಣೆ ಇವೆ. ಈ ಬೆಟ್ಟದ ಉತ್ತರಕ್ಕಿರುವ ಕೋಟೆ ಗೋಡೆಯನ್ನು ದೊಡ್ಡ ಕಲ್ಲುಗಳಿಂದ ಕಟ್ಟಲಾಗಿದ್ದು, ಇದು ೧೩-೧೪ನೇ ಶತಮಾನದ್ದು, ಈ ಬೆಟ್ಟದ ಮೇಲಿನ ಉಳಿದ ಕೋಟೆ ಮತ್ತು ದಕ್ಷಿಣ ಬೆಟ್ಟದ ಮೇಲಿನ ಕೋಟೆ ೧೭-೧೮ನೇ ಶತಮಾನದವು.[೬೩]

ಹೊಸಮಲೆದುರ್ಗ

೧೩-೧೪ನೇ ಶತಮಾನಗಳಲ್ಲಿ ಹೊಸಮಲೆದುರ್ಗವೆಂಬ ಹೆಸರಿನಿಂದ ವೀರ ಕಂಪಿಲರಾಯ ಮತ್ತು ಆತನ ಪುತ್ರ ಗಂಡುಗಲಿ ಕುಮಾರರಾಮನ ರಾಜಧಾನಿಯಾಗಿ ಮೆರೆದ ಈ ಸ್ಥಳ, ಕಾಲಾಂತರದಲ್ಲಿ ಕುಮಾರರಾಮನ ನೆನಪಿಗಾಗಿ ರಾಮಘಡವೆಂಬ ಹೆಸರು ಬದಲಾಯಿಸಿಕೊಂಡು ಇತಿಹಾಸಕಾರರಿಂದ ಬಹುದೂರು ಉಳಿದಿದೆ. ಇದು ಸಂಡೂರಿನಿಂದ ವಾಯುವ್ಯ ದಿಕ್ಕಿಗೆ ಹತ್ತು ಕಿ.ಮೀ. ದೂರದಲ್ಲಿ ಬೆಟ್ಟದ ಮೇಲಿದೆ.[೬೪]

ಮುಮ್ಮಡಿಸಿಂಗನು ಮರಣಿಸಿದಾಗ ಅವನ ಮಗ ವೀರಕಂಪಿಲದೇವನಿಗೆ ಹದಿನೆಂಟು ವರ್ಷವಾಗಿತ್ತು.[೬೫] ವೀರ ಕಂಪಿಲದೇವನು ಎಳೆಯ ಪ್ರಾಯದವನಾಗಿದ್ದರಿಂದಲೂ ರಾಜ್ಯದಲ್ಲಿ ಕ್ಷೋಭೆಯುಂಟಾದುದರಿಂದ ಆ ಸಮಯವನ್ನೆ ನಿರೀಕ್ಷಿಸುತ್ತಿದ್ದ, ಹೊಯ್ಸಳ ವೀರಬಲ್ಲಾಳ, ಗುತ್ತಿಯ ಚಾಮರಾಜ, ಓರಂಗಲ್ಲಿನ ಪ್ರತಾಪರುದ್ರ ಮುಂತಾದ ಶತ್ರುಗಳು ಕಂಪಿಲರಾಯನ ದೇಶದ ಮೇಲೆ ದಂಡೆತ್ತಿ ಬಂದು ಕೆಲವು ಭಾಗಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಕಂಪಿಲನ ರಾಜ್ಯವು ಕುಸಿಯಿತು.[೬೬] ಕೆಲವು ಕಾಲಾನಂತರ ರಾಜ್ಯದಲ್ಲಿ ಬರಗಾಲವು ಪ್ರಾಪ್ತವಾಯಿತು. ರಾಜಧಾನಿಯಲ್ಲಿ ವಾಸಮಾಡಲು ಸಾಧ್ಯವಿಲ್ಲದೆ[೬೭] ಜಟ್ಟಂಗಿ ಗಿರಿಯ ಬಳಿ ನೆಲೆಸಿದ ಮೇಲೆ ಕ್ಷಾಮವು ಕ್ಷೀಣಿಸಿ, ಬೆಳೆಯು

ಸಮೃದ್ಧಿಯಾಗಿ, ಸುಖ ಉಂಟಾಯಿತು. ವೃದ್ಧಿಯಾದ ಪರಿವಾರಕ್ಕೂ, ಕುರಿ, ಮೇಕೆ, ಗೋವೃಂದಗಳಿಗೂ ಸಾಕಷ್ಟು ವಸತಿಯನ್ನು ಹುಡುಕುತ್ತಾ ಕಂಪಿಲದೇವರಾಯನೂ ಅವನ ಪರಿವಾರದವರೂ ವಲಸೆ ಹೊರಟರು. ನಡುಮಲೆಯಲ್ಲಿ ಹಟ್ಟಿಯನ್ನು ಹಾಕಿಕೊಂಡು ಬಡತನದಿಂದ ಜೀವಿಸುತ್ತಿದ್ದರು. ಒಂದು ದಿನ ಬೇಟೆಯಾಡುತ್ತಿದ್ದಾಗ ಲೋಹಗಿರಿಯಲ್ಲಿ (ಲೋಹಾಚಲ ಕುಮಾರಸ್ವಾಮಿ ಬೆಟ್ಟ) ನೆಲೆಸಿರುವ ತಾರಕಾಸುರ ಸಂಹಾರಿ ಕುಮಾರಸ್ವಾಮಿಯನ್ನು ದರ್ಶನ ಮಾಡಿ ಕಾಣಿಕೆಯನ್ನರ್ಪಿಸಿ ಹರಕೆಯನ್ನು ಹೊಂದಿದರು. ಬೇಟೆಯಾಡುತ್ತಾ ಮುಂದಕ್ಕೆ ಹೋಗಲು ದಟ್ಟವಾದ ಹೊಸಮಲೆ ಎಂಬ ಅರಣ್ಯವು ಇವರಿಗೆ ಗೋಚರಿಸಿತು. ಈ ಅರಣ್ಯ ಮಧ್ಯದಲ್ಲಿ ಒಂದು ನಗರವನ್ನು ನಿರ್ಮಿಸಿಕೊಂಡು ಸುಖವಾಗಿರಬಹುದೆಂದು ನಿರ್ಧರಿಸಿದರು.

ವೀರ ಕಂಪಿಲದೇವನು ತನ್ನ ಪರಿವಾರ ಸಮೇತನಾಗಿ ಹೊಸಮಲೆ ಅರಣ್ಯದಲ್ಲಿ ಹಟ್ಟಿಯನ್ನು ಕಟ್ಟಿಕೊಂಡು ನೆಲೆಸಿದನು. ಕಣಿವೆಗಳಲ್ಲಿ ಕಾದಿದ್ದು ಅಲ್ಲಿ ಬರುವ ಪ್ರಯಾಣಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುವುದು, ಊರು, ಗ್ರಾಮಗಳನ್ನು ಮುತ್ತಿ ಐಶ್ವರ್ಯವಂತರನ್ನು ಬಡಿದು ಧನಕನಕ ವಸ್ತ್ರಗಳನ್ನು ಅಪಹಾರ ಮಾಡುವುದು ಇವನ ನಿತ್ಯ ಜೀವನದ ಕಸುಬಾಯಿತು. ಕಾಲಕ್ರಮದಲ್ಲಿ ಬೇಡ ಪಡೆಯೊಂದನ್ನು ಸೇರಿಸಿ ಕೆಲವು ಗ್ರಾಮಗಳಿಗೆ ಒಡೆಯನಾಗಿ ರಾಜನೆಂದು ಪಟ್ಟಾಭಿಷೇಕ ಮಾಡಿಸಿಕೊಂಡನು. ರಾಜ್ಯವು ದಿನದಿನಕ್ಕು ಅಭಿವೃದ್ಧಿಯನ್ನು ಹೊಂದುತ್ತಿರಲು ಶತ್ರುಗಳಿಗೆ ಅಭೇದ್ಯವಾದ ಕೋಟೆಯನ್ನು ನಿರ್ಮಿಸುವುದು ಅವಶ್ಯಕವಾಯಿತು. ತಾನು ಕಟ್ಟಿದ ಹಟ್ಟಿಗೆ ಬದಲಾಗಿ ಅಲ್ಲಿಯೇ ಹೊಸಮಲೆ ದುರ್ಗವೆಂಬ ಕೋಟೆಯನ್ನು ನಿರ್ಮಿಸಿದನು.[೬೮] ಈ ಕೋಟೆಯನ್ನು ನಿರ್ಮಿಸಿ ಗುತ್ತಿಯ ಜಗದಪ್ಪರಾಯ, ಹಳೆಯ ಬೀಡಿನ ಬಲ್ಲಾಳರಾಯ ಮತ್ತು ದಿಳ್ಳಿಯ ಸುಲ್ತಾನ ಇವರಿಗೆ ಕಪ್ಪವನ್ನು ಕೊಡುತ್ತಾ ಸಾಮಂತನಾಗಿ ರಾಜ್ಯವಾಳುತ್ತಿದ್ದನು ಎಂದು ನಾಗಸಂಗಯ್ಯನ ಸಾಂಗತ್ಯ ತಿಳಿಸುತ್ತದೆ.[೬೯]

ಕೋಟೆಯ ಲಕ್ಷಣ

ಹೊಸಮಲೆದುರ್ಗ ಅಥವಾ ರಾಮನಮಲೆ ಕೋಟೆಯು ಬೆಟ್ಟದ ಮೇಲೆ ಸಮುದ್ರ ಮಟ್ಟಕ್ಕಿಂತ ೯೯೧ ಕಿ.ಮೀ. ಎತ್ತರದಲ್ಲಿರುವ ಸಮತಟ್ಟಾದ ಪ್ರದೇಶದಲ್ಲಿ ಕೋಟೆಯನ್ನು ಕಟ್ಟಿದೆ. ಈ ಕೋಟೆಯ ಕಾಲ ಕ್ರಿ.ಶ.೧೩-೧೪ ನೇ ಶತಮಾನ. ಸಮತಟ್ಟಾದ ಪ್ರದೇಶದ ಅಂಚಿಗೆ ಹೊಂದಿಕೊಂಡಂತೆ ಕೋಟೆ ಕಟ್ಟಿರುವುದರಿಂದ ಹೊರಗೆ ಕಡಿದಾದ ಬೆಟ್ಟದ ಬದಿಗಳಿವೆ. ಆದುದರಿಂದ ಕಂದಕದ ಅವಶ್ಯಕತೆಯಿಲ್ಲ. ಕೋಟೆಯನ್ನು ದೊಡ್ಡ ಗಾತ್ರದ ಕಲ್ಲುಗಳಿಂದ ಕಟ್ಟಿದೆ. ಗಣಿಗಾರಿಕೆಯಿಂದ ಕೋಟೆಯು ಅಲ್ಲಲ್ಲಿ ಹಾಳಾಗಿದೆ. ಕೋಟೆಗೆ ನಾಲ್ಕು ಬಾಗಿಲುಗಳಿದ್ದು, ರಾಮಸ್ವಾಮಿ ದೇವಾಲಯದ ಆಗ್ನೇಯಕ್ಕಿರುವುದೇ ಅತಿ ದೊಡ್ಡ ಬಾಗಿಲು. ಈ ಬಾಗಿಲಿನ ಪ್ರವೇಶದ್ವಾರವು 'L' ಆಕಾರದಲ್ಲಿದೆ. ದಕ್ಷಿಣದಿಂದ ಉತ್ತರಕ್ಕೆ ಸಾಗಿ ಮುಂದೆ ಪಶ್ಚಿಮದೆಡೆಗೆ ತಿರುಗುತ್ತದೆ. ಅದೇ ದೇವಾಲಯದ ಪೂರ್ವಕ್ಕೆ ಶಿಥಿಲಾವಸ್ಥೆಯಲ್ಲಿರುವ ಕವಣೆ

ಕಲ್ಲು ಬಾಗಿಲಿದೆ. ಕೋಟೆಯೊಳಗೆ ಬಾಗಿಲ ಬಳಿಯಲ್ಲಿ ಕವಣೆಕಲ್ಲುಗಳ ದೊಡ್ಡ ರಾಶಿಯಿದೆ. ಈ ಕಲ್ಲುಗಳನ್ನು ಕವಣೆಯಿಂದ ವೈರಿಯ ಮೇಲೆ ಎಸೆಯಲಾಗುತ್ತಿತ್ತು. ಬಾಗಿಲ ಹೊರಗೆ ಇಂತಹ ಕಲ್ಲುಗಳು ಅಲ್ಲಲ್ಲಿ ಚದುರಿದಂತೆ ಬಿದ್ದಿವೆ. ಅದೇ ದೇವಾಲಯದ ಉತ್ತರಕ್ಕೆ ೧.೧೦ ಮೀ. ಅಗಲವಿರುವ ಚಿಕ್ಕ ಬಾಗಿಲಿದೆ ಮತ್ತು ಅದೇ ದೇವಾಲಯದ ದಕ್ಷಿಣಕ್ಕೆ ಶಿಥಿಲಾವಸ್ಥೆಯಲ್ಲಿರುವ ನಾಲ್ಕನೆಯ ಬಾಗಿಲಿದೆ. ರಾಮಸ್ವಾಮಿ ದೇವಾಲಯದ ನೈರುತ್ಯಕ್ಕೆ ಒಂದು ಚಿಕ್ಕ ಪ್ರದೇಶದಲ್ಲಿ ಕಟ್ಟಡಗಳ ಅವಶೇಷಗಳು ಮಣ್ಣಲ್ಲಿ ಊತು ಹೋಗಿವೆ. ಅವುಗಳ ಗೋಡೆಗಳ ದಪ್ಪ ಮತ್ತು ಉದ್ದವನ್ನು ಗಮನಿಸಿದಾಗ ಅರಮನೆಯಂತಹ ಕಟ್ಟಡಗಳಿಗೆ ಸಂಬಂಧಿಸಿದವುಗಳಂತೆ ಕಾಣುತ್ತವೆ. ಇಲ್ಲಿ ಕಂಪಿಲರಾಯನ ಅರಮನೆ ಇತ್ತೆಂದು ಹೇಳಲಾಗುತ್ತದೆ. ಬೆಟ್ಟದ ಮೇಲೆ ಅಲ್ಲಲ್ಲಿ ನೈಸರ್ಗಿಕವಾಗಿ ತಗ್ಗಾಗಿರುವ ಪ್ರದೇಶಗಳನ್ನು, ನೀರನ್ನು ಸಂಗ್ರಹಿಸಲು ಕೊಳಗಳನ್ನಾಗಿ ಪರಿವರ್ತಿಸಲಾಗಿದೆ. ಇವುಗಳನ್ನು ಕೊಳ್ಳಗಳೆಂದು ಕರೆಯಲಾಗುತ್ತಿದೆ.

ಕೋಟೆಯೊಳಗೆ ರಾಮಸ್ವಾಮಿ ದೇವಾಲಯ, ಆಂಜನೇಯ ದೇವಾಲಯ ತಾಯಮ್ಮ ದೇವಾಲಯ ಮತ್ತು ಹುಲಿಮಾನಪ್ಪನ ಮಠಗಳಿವೆ. ರಾಮಸ್ವಾಮಿ (ರಾಮನಾಥ) ದೇವಾಲಯವನ್ನು ಗೋಪಾಯಿ ಮತ್ತು ಇತರರು ಕುಮಾರರಾಮನ (ರಾಮನಾಥ-ವೊಡೆಯನ) ನೆನಪಿಗೆ ಕಟ್ಟಿಸಿದರೆಂದು ದೇವಾಲಯದ ಮುಂದಿನ ಕ್ರಿ.ಶ.೧೫೨೮ರ ಶಾಸನವು ತಿಳಿಸುತ್ತದೆ. ೧೬ನೇ.ಶತಮಾನದಲ್ಲಿ ನಿರ್ಮಾಣಗೊಂಡ ಈ ದೇವಾಲಯವು ಇತ್ತೀಚಿನ ವರ್ಷಗಳಲ್ಲಿ ಸಂಪೂರ್ಣ ಜೀರ್ಣೋದ್ಧಾರಗೊಂಡು ಆಧುನಿಕ ದೇವಾಲಯದಂತೆ ಕಾಣುತ್ತದೆ.[೬೦]

ಪ್ರಸ್ತುತವಾಗಿ ಈ ಹೊಸಮಲೆದುರ್ಗವು ರಾಮನಮಲೆದುರ್ಗ ಅಥವಾ ರಾಮನಮಲೆ ಎಂದು ಕರೆಯಲ್ಪಡುತ್ತಿದೆ. ಈಗ ಇದು ಗುರುತೂ ಇಲ್ಲದಂತೆ ಹಾಳಾಗಿದೆ. ಎಲ್ಲಿತ್ತೆಂಬುದನ್ನು ಕಂಡುಹಿಡಿಯಲು ಕಷ್ಟವಾಗಿದೆ. ಇದರ ಉತ್ತರ ಅಕ್ಷಾಂಶ ೧೫೦°-೧೦° ಪೂರ್ವ ರೇಖಾಂಶ ೭೬°-೨೦°ರಲ್ಲಿದೆ. ಈ ಹೊಸಮಲೆದುರ್ಗವು ಕುಮ್ಮಟದುರ್ಗದಂತೆ ರಾಜಧಾನಿಯಾಗಿ ಮೆರೆದ ಸ್ಥಳ. ಈ ಪರಿಸರ ಬೆಟ್ಟ, ಗುಡ್ಡ, ಅರಣ್ಯಗಳಿಂದ ಕೂಡಿದೆ. ಪಶ್ಚಿಮದಲ್ಲಿ ಬಯಲು ಪ್ರದೇಶ ಹಾಗೂ ತುಂಗಭದ್ರ ನದಿ ಪ್ರವಹಿಸುತ್ತಿದೆ. ಈ ಪ್ರದೇಶದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳು ಹೇರಳವಾಗಿ ಲಭ್ಯವಿದೆ. ಲಭ್ಯವಿರುವ ಕಬ್ಬಿಣದ ಅಂಶಗಳನ್ನೊಳಗೊಂಡ ಕಲ್ಲುಗಳನ್ನು ಕೋಟೆ, ನೀರಿನ ಕೊಳಗಳ ನಿರ್ಮಾಣಕ್ಕಾಗಿ ಉಪಯೋಗಿಸಿದ ಉದಾಹರಣೆಗಳಿವೆ.[೬೧]

ಮುಮ್ಮಡಿಸಿಂಗನ ಕಾಲಕ್ಕೆ ಈ ಪರಿಸರವು ಆಳ್ವಿಕೆಗೆ ಒಳಪಟ್ಟಿದ್ದರೂ, ಮುಂದೆ ಕಂಪಿಲರಾಯನ ಕಾಲಕ್ಕೆ ಈ ಹೊಸಮಲೆದುರ್ಗವು ರಾಜಧಾನಿಯಾಗಿ ಪ್ರಸಿದ್ಧಿ ಪಡೆದಿತ್ತು. ಅಷ್ಟೇ ಅಲ್ಲದೆ ಈ ಕುಮ್ಮಟದುರ್ಗದಲ್ಲಿಯ ಹಾಗೂ ಹೊಸಮಲೆದುರ್ಗಗಳಲ್ಲಿಯ ಸ್ಮಾರಕಗಳ ಅಧ್ಯಯನವು, ಕಂಪಿಲನು ಸಾಮಾನ್ಯ ದೊರೆಯಾಗಿರಲಿಲ್ಲವೆಂಬುದನ್ನು ಸಮರ್ಥಿಸುತ್ತದೆ.[೬೨]

ವಿಜಯನಗರೋತ್ತರದ ಕೋಟೆಗಳು

ಜೋಗಿಕಲ್ಲಿನ ಕೋಟೆ

ಸಂಡೂರಿನಿಂದ ಸು.೧೫.ಕಿ.ಮೀ. ಅಂತರದಲ್ಲಿ ಜೋಗಿಕಲ್ಲು ಎಂಬ ಗ್ರಾಮವಿದೆ. ಈ ಗ್ರಾಮದಿಂದ ಸು.೧.ಕಿ.ಮೀ. ಕಾಲುದಾರಿಯಲ್ಲಿ ಸಾಗಿದರೆ ಬೆಟ್ಟದ ಮೇಲೆ ಒಂದು ಪಾಳೆಗಾರರ ಕಾಲದ ಕೋಟೆ ಇದೆ. ಇಂದಿನ ಜೋಗಿಕಲ್ಲು ಎಂಬ ಗ್ರಾಮವು ಅಂದು ಜೋಗಪ್ಪನಾಯಕ ಎಂಬ ಪಾಳೆಗಾರನ ಸಂಸ್ಥಾನವಾಗಿತ್ತು. ಈ ಜೋಗಪ್ಪನಾಯಕನು ಜರಿಮಲೆ ಪಾಳೆಗಾರರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತ ಅವರ ಅಧೀನದಲ್ಲಿದ್ದು ಆಳ್ವಿಕೆ ನಡೆಸುತ್ತಿದ್ದ ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಈ ಜೋಗಿಕಲ್ಲಿನ ಕೋಟೆಯನ್ನು ಆ ಪ್ರದೇಶದಲ್ಲಿ ದೊರೆಯುವ ಬಂಡೆಗಲ್ಲುಗಳನ್ನೇ ಉಪಯೋಗಿಸಿಕೊಂಡು ನಿರ್ಮಿಸಿದ್ದಾರೆ. ಈ ಕೋಟೆಯನ್ನು ಸುತ್ತುವರಿದಿರುವ ದೊಡ್ಡ ದೊಡ್ಡ ಬಂಡೆಗಳೇ ಕೋಟೆಗೆ ರಕ್ಷಣೆ ಒದಗಿಸುವಂತೆ ಇವೆ. ಮತ್ತು ಅಲ್ಲಿನ ಬಂಡೆಗಳ ಮೇಲೆಯೂ ಬತ್ತೇರಿಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಕೋಟೆಯ ಗೋಡೆಯ ಕೆಲವು ಭಾಗಗಳಲ್ಲಿ ಪಿರಂಗಿಯಿಂದ ಗುಂಡುಗಳನ್ನು ಹಾರಿಸಲೆಂದೇ ಕಿಂಡಿಗಳನ್ನು ಬಿಡಲಾಗಿದೆ. ಕೋಟೆಯ ಒಳಗಿನ ಕಟ್ಟಡಗಳೆಲ್ಲವು ಹಾಳಾಗಿದ್ದು, ಅವುಗಳ ಅವಶೇಷಗಳು ಮಾತ್ರ ಕಂಡುಬರುತ್ತವೆ. ಇತ್ತೀಚಿನ ದಿನಗಳಲ್ಲಿ ಸ್ಥಳೀಯರು ಈ ಪ್ರದೇಶದಲ್ಲಿ ಕೆಲವು ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳನ್ನು ನಿರ್ಮಿಸಿದ್ದಾರೆ.

ಕೋಟೆಯ ಲಕ್ಷಣ

ಈ ಕೋಟೆಯು ಸುಮಾರು ಒಂದು ಕಿ.ಮೀ. ವಿಸ್ತಾರದ ವ್ಯಾಪ್ತಿಯನ್ನೊಳಗೊಂಡಿದೆ. ಇದರ ಎತ್ತರ ಸು.೮ ರಿಂದ ೧೦ ಅಡಿ ಇದೆ. ಈ ಕೋಟೆಗೆ ಉತ್ತರ ದಿಕ್ಕಿನಲ್ಲಿ ಪ್ರವೇಶದ್ವಾರವಿದ್ದು, ಕೋಟೆಯನ್ನು ಸುತ್ತುವರಿದು ನಾಲ್ಕೂ ದಿಕ್ಕುಗಳಲ್ಲಿ ಬತೇರಿಗಳನ್ನು ನಿರ್ಮಿಸಲಾಗಿದೆ. ಆದರೆ ಈಗ ಈ ಬತೇರಿಗಳ ಕೆಲವು ಭಾಗಗಳು ಶಿಥಿಲವಾಗಿ ಬಿದ್ದು ಹೋಗಿವೆ. ಸ್ಥಳೀಯರು ಇದರ ಕಲ್ಲುಗಳನ್ನು ಬಳಸಿಕೊಂಡು ಮನೆಗಳನ್ನು ಕಟ್ಟಿಕೊಂಡಿರುವರು. ಈ ಕಾರಣದಿಂದಲೂ ಕೋಟೆ ಅವನತಿಯತ್ತ ಸಾಗಿದೆ. ಈ ಕೋಟೆಯನ್ನು ಹತ್ತಲು ಸುಲಭವಾಗಿ ಸಾಧ್ಯವಾಗುವುದಿಲ್ಲ. ಪ್ರವೇಶದ್ವಾರವನ್ನು ಹೊಕ್ಕ ನಂತರ ಒಳಗೆ ಹೋಗಲು ತುಂಬಾ ಚಿಕ್ಕದಾದ ಹಾದಿಯಿದೆ. ಅದರಲ್ಲಿ ನುಸುಳಿ ಕೋಟೆಯ ಒಳಗೆ ಹೋಗಬೇಕು. ಕೋಟೆಯನ್ನು ಹತ್ತಲು ಪಾಳೆಗಾರರು ಆ ಬಂಡೆಗಳಲ್ಲಿಯೇ ಮೆಟ್ಟಿಲುಗಳನ್ನು ಕೆತ್ತಿರುವರು. ಇವೂ ಕೂಡ ಇಂದು ಬಹಳ ಸವೆದಿವೆ. ಈ ಕೋಟೆಯ ಕೆಳಭಾಗದಲ್ಲಿ ದಕ್ಷಿಣ ದಿಕ್ಕಿಗೆ ಜೋಗಪ್ಪನಾಯಕನು ಕೆರೆಯೊಂದನ್ನು ಕಟ್ಟಿಸಿರುವನು. ಆ ಕೆರೆ ಇಂದಿಗೂ ಉಳಿದು ಬಂದಿದೆ. ಈ ಕೋಟೆಯ ಪ್ರವೇಶದ್ವಾರದ ಬಲಭಾಗದಲ್ಲಿ ಒಂದು ನೀರಿನ ಹೊಂಡ ಇದೆ. ಅದನ್ನು ಸ್ಥಳೀಯರು ಪಾಳೇಗಾರರ ಹೊಂಡ ಎಂದೇ ಕರೆಯುತ್ತಾರೆ.

ಬಳ್ಳಾರಿ ಜಿಲ್ಲೆಯ ಅನೇಕ ಕೋಟೆಗಳ ನಡುವೆಯೂ ಈ ಜೋಗಿಕಲ್ಲು ಕೋಟೆ ವಾಸ್ತುಶೈಲಿಯಿಂದ, ರಕ್ಷಣಾ ತಂತ್ರಗಳ ವ್ಯವಸ್ಥೆಯಿಂದ ಹಾಗೂ ಪಾಳೆಗಾರರ ನಿರ್ಮಾಣ ಶೈಲಿಯ ದೃಷ್ಟಿಯಿಂದ ನಮ್ಮ ಗಮನವನ್ನು ಸೆಳೆಯುತ್ತದೆ. ಆದರೆ ನಮ್ಮ ಜನರ ನಿರ್ಲಕ್ಷ್ಯದಿಂದ ಬೇಗ, ಬೇಗ ಅವನತಿಯ ಹಾದಿ ಹಿಡಿದಿರುವ ಈ ಕೋಟೆಯನ್ನು ರಕ್ಷಿಸುವ ಜವಾಬ್ದಾರಿ ನಮ್ಮ ಹಾಗೂ ಸರ್ಕಾರದ ಮೇಲಿದೆ.

ಉತ್ತರಮಲೆ ಕೋಟೆ

ಸಂಡೂರಿನಿಂದ ಸುಮಾರು ೩೦.ಕಿ.ಮೀ. ಅಂತರದಲ್ಲಿರುವ ಉತ್ತರಮಲೆ ಎಂಬ ಗ್ರಾಮದಿಂದ ಸುಮಾರು ೪.ಕಿ.ಮೀ. ಅಂತರದ ಬೆಟ್ಟದ ತುದಿಯಲ್ಲಿ ಒಂದು ಕೋಟೆ ಇದೆ. ಇದು ಉತ್ತರಮಲೆ ಗ್ರಾಮದ ಹತ್ತಿರ ಇರುವುದಕ್ಕೆ ಇದಕ್ಕೆ ಉತ್ತರಮಲೆ ಕೋಟೆ ಎಂದೇ ಕರೆಯುತ್ತಾರೆ. ಈ ಕೋಟೆ ನಿರ್ಮಿಸಿರುವ ಶೈಲಿಯನ್ನು ಗಮನಿಸಿದರೆ ಪಾಳೆಗಾರರ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಕೋಟೆಯಂತೆ ಕಾಣುತ್ತದೆ.

ಕೋಟೆಯ ಲಕ್ಷಣಗಳು

ಈ ಕೋಟೆಯು ಸು.೪.ಕಿ.ಮೀ. ವಿಸ್ತಾರವಾದ ವ್ಯಾಪ್ತಿಯನ್ನೊಳಗೊಂಡಿದೆ. ಇದರ ಗೋಡೆಯ ಎತ್ತರ ಸುಮಾರು ೫-೬ ಅಡಿ ಇದೆ. ಪ್ರವೇಶದ್ವಾರವು (ಅಗಳಿ ಬಾಗಿಲು) ಪೂರ್ವ ದಿಕ್ಕಿಗೆ ಇದ್ದು, ಮುಂದೆ ಬುಡ್ಡೆಕಲ್ಲು ಇದೆ. ಕೋಟೆಯ ಒಳಗೆ ಹತ್ತಿ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಅವುಗಳು ಈಗ ಬಿದ್ದು ಹೋಗಿವೆ. ಕೋಟೆಯ ನಾಲ್ಕು ದಿಕ್ಕಿಗೂ ಬುರುಜುಗಳಿವೆ. ಇವುಗಳನ್ನು ಇರುವ ಬೆಟ್ಟದ ಬಂಡೆಗಲ್ಲುಗಳ ಮೇಲಯೇ ನಿರ್ಮಿಸಲಾಗಿದೆ. ಈಗ ಅವು ಪಾಳು ಬಿದ್ದಿವೆ.

ಕೋಟೆಯ ಒಳಗೆ ಪಾಳು ಬಿದ್ದ ಕಟ್ಟಡಗಳ ಅವಶೇಷಗಳಿವೆ. ಅಷ್ಟೇ ಅಲ್ಲದೆ ಹಾಲು ಕಾಯಿಸುವ ದೋಣಿಯಿದೆ. ಮದ್ದುಗುಂಡುಗಳನ್ನು ತಯಾರಿಸುತ್ತಿದ್ದ ಕಟ್ಟಡ ಇಂದಿಗೂ ಇದ್ದು ಕಟ್ಟಡದ ಕೆಲವು ಭಾಗಗಳು ಬಿದ್ದಿವೆ. ಇದರಲ್ಲಿ ದೊಡ್ಡ ಹೊಂಡ ಇದೆ. ಹಾಗೂ ಕಾಮವ್ವನಗೇರಿ ಎಂಬ ಒಂದು ಕೇರಿ ಇದ್ದು, ಅದರ ಕಟ್ಟಡಗಳ ಅವಶೇಷಗಳಿವೆ. ಕೋಟೆಯ ಒಳಗೆ ಮಲಿಯಮ್ಮ ದೇವಿಯ ಪುಟ್ಟ ದೇವಾಲಯವಿದೆ. ಈ ದೇವಿಯ ಜಾತ್ರೆಯು ಪ್ರತಿ ಐದು ವರ್ಷಕ್ಕೊಮ್ಮೆ ಮೂರು ದಿನಗಳವರೆಗೆ ಜರುಗುತ್ತದೆ. ಕೋಟೆಯ ಕೆಳಭಾಗದಲ್ಲಿ ದಕ್ಷಿಣ ದಿಕ್ಕಿಗೆ ಹಿಂದೆ ಕೆರೆ ಇದ್ದು, ಈಗ ಆ ಕೆರೆ ಒಡೆದು ಹೋಗಿ ಅದು ಬತ್ತಿದೆ.

ಈ ಕೋಟೆಯನ್ನು ನಿರ್ಮಿಸಿರುವ ಶೈಲಿ ಮತ್ತು ಬಳಸಿರುವ ಶಿಲೆ, ರಕ್ಷಣಾ ತಂತ್ರ ವ್ಯವಸ್ಥೆಯಿಂದ ಗಮನಿಸಿದರೆ ಇದು ಪಾಳೆಗಾರರ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಕೋಟೆಯಂತೆ ಕಾಣುತ್ತದೆ. ಈ ಕೋಟೆಯು, ಇಲ್ಲಿಗೆ ಸಮೀಪವಿರುವ ಜೋಗಿಕಲ್ಲಿನ ಕೋಟೆಯನ್ನು ನಿರ್ಮಿಸಿದ ಶೈಲಿಯಲ್ಲಿಯೇ

ನಿರ್ಮಿಸಲಾಗಿದೆ. ಆದರೆ ಈ ಕೋಟೆಯು ವಿಶಾಲವಾದ ಪ್ರದೇಶವನ್ನೊಳಗೊಂಡಿದ್ದು, ಅನೇಕ ಕಟ್ಟಡಗಳ ಅವಶೇಷಗಳಿರುವುದನ್ನು ಇಲ್ಲಿ ಕಾಣುತ್ತೇವೆ. ಸಂಡೂರು ತಾಲ್ಲೂಕಿನ ಕೆಲವೇ ಕೋಟೆಗಳಲ್ಲಿ ಕಾಣಸಿಗುವ ಮದ್ದುಗುಂಡುಗಳನ್ನು ತಯಾರಿಸುವ ಕೋಣೆ ಈ ಕೋಟೆಯಲ್ಲಿಯೂ ಇರುವುದು ಒಂದು ವಿಶೇಷವಾಗಿದೆ. ಇಲ್ಲಿ ತಯಾರಿಸುತ್ತಿದ್ದ ಮದ್ದುಗುಂಡುಗಳನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸಾಗಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಕಾಡಿನ ಮಧ್ಯದಲ್ಲಿ ಈ ಕೋಟೆಯನ್ನು ನಿರ್ಮಿಸಿರುವುದನ್ನು ಗಮನಿಸಿದರೆ, ಇಲ್ಲಿ ಮದ್ದುಗುಂಡುಗಳನ್ನು ತಯಾರಿಸಲು ಸೂಕ್ತವಾದ ಸ್ಥಳ ಇದಾಗಿತ್ತೆಂದು, ಆದ್ದರಿಂದ ಈ ಕೋಟೆಯನ್ನು ಬೆಟ್ಟದ ಮೇಲೆ ನಿರ್ಮಿಸಿರಬೇಕೆಂದು ವ್ಯಕ್ತವಾಗುತ್ತದೆ. ಇದು ಬೆಟ್ಟದ ಮೇಲಿರುವುದರಿಂದ, ಯಾರ ಗಮನಕ್ಕೆ ಬಾರದಿರುವುದರಿಂದ, ಇಲ್ಲಿಯ ಕಲ್ಲುಗಳನ್ನು ಸ್ಥಳೀಯರು ತಮ್ಮ ಸ್ವಂತಕ್ಕೆ ಬಳಸುತ್ತಿರುವುದರಿಂದ, ಯಾವ ರಕ್ಷಣೆಯಿಲ್ಲದೆ ಪ್ರಸ್ತುತ ಕೋಟೆಯು ಪಾಳು ಬಿದ್ದಿದೆ.

ಬೊಮ್ಮಗಟ್ಟ ಕೋಟೆ

ಸಂಡೂರಿನಿಂದ ಸು.೪೦ ಕಿ.ಮೀ. ಅಂತರದಲ್ಲಿರುವ ಬೊಮ್ಮಗಟ್ಟ ಗ್ರಾಮದಲ್ಲಿ ಸ್ಥಳೀಯರು ತಿಳಿಸುವಂತೆ, ನರಸಿಂಗರಾಯನ ಕಾಲದಲ್ಲಿ ಕಟ್ಟಲ್ಪಟ್ಟ ಕೋಟೆಯೆಂದು ತಿಳಿಸುವ ಕೋಟೆಯ ಅವಶೇಷಗಳು ಈ ಗ್ರಾಮದಲ್ಲಿ ಇಂದಿಗೂ ಇವೆ. ಈ ಗ್ರಾಮದಲ್ಲಿ ದೊರೆತ ಕೂಟ ತಾಮ್ರ ಶಾಸನದ ಉಲ್ಲೇಖದಂತೆ ವಿಜಯನಗರದ ಅರಸ ಸಾಳ್ವನರಸಿಂಗರಾಯನ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಈ ನರಸಿಂಗರಾಯ ವಿಜಯನಗರ ಅರಸ ಸಾಳ್ವನರಸಿಂಗರಾಯನೆ? ಅಥವಾ ಯಾರಾದರೊಬ್ಬ ಪಾಳೆಯಗಾರನೆ? ಎಂಬ ಬಗ್ಗೆ ಖಚಿತವಾದ ಮಾಹಿತಿ ದೊರೆಯುವುದಿಲ್ಲ. ಆದರೆ ಈ ಕೋಟೆ ನಿರ್ಮಿಸಿರುವ ಲಕ್ಷಣಗಳನ್ನು ಗಮನಿಸಿದರೆ ಹಿಂದೆ ಈ ಪ್ರದೇಶವನ್ನಾಳಿದ ಜರಿಮಲೆ ಪಾಳೆಗಾರರೇ ಈ ಕೋಟೆಯನ್ನು ನಿರ್ಮಿಸಿರುವ ಸಾಧ್ಯತೆ ಇದ್ದು, ಈ ನರಸಿಂಗರಾಯನೆಂಬುವನು ಅವರಿಗೆ ಅಧೀನನಾಗಿ ಈ ಕೋಟೆಯ ಪ್ರದೇಶವನ್ನು ಆಳಿರಬೇಕೆಂದು ಊಹಿಸಬಹುದಾಗಿದೆ.

ಕೋಟೆಯ ಲಕ್ಷಣಗಳು

ಈ ಕೋಟೆಯು ಹಿಂದೆ ಸು.೨೫ ಅಡಿ ಎತ್ತರವಿತ್ತೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಈಗ ಶಿಥಿಲವಾಗಿರುವ ಕೋಟೆಯ ಗೋಡೆಯ ಉದ್ದ ಸು.೫ ರಿಂದ ೬ ಅಡಿ ಎತ್ತರ ಮಾತ್ರ ಇದೆ. ಈ ಪ್ರದೇಶವು ಸುಮಾರು ಎರಡು-ಮೂರು ಎಕರೆ ವಿಸ್ತಾರದ ವ್ಯಾಪ್ತಿಯನ್ನೊಳಗೊಂಡಿದೆ. ಈ ಕೋಟೆಯ ಪ್ರವೇಶದ್ವಾರ ಉತ್ತರ ದಿಕ್ಕಿಗೆ ಇದೆ. ದಕ್ಷಿಣಕ್ಕೆ ಕೋಟೆಯ ಹಿಂದಿನ ಬಾಗಿಲು ಇದೆ. ಕಳ್ಳಕಿಂಡಿಯು ಇದೆ. ಈ ಕೋಟೆಯಲ್ಲಿ ಇಂದು ಶಿಥಿಲಾವಸ್ಥೆಯಲ್ಲಿರುವ ಎರಡು ಬುರುಜುಗಳು ಮಾತ್ರ ಉಳಿದಿವೆ. ಪ್ರವೇಶದ್ವಾರದ ಬಳಿ ಬುಡ್ಡೆಕಲ್ಲು, ಯಂತ್ರಕಲ್ಲುಗಳಿವೆ. ಕೋಟೆಯ ಸುತ್ತಲು ಜಲಾವೃತ್ತಗೊಂಡ

ಕಂದಕವಿದೆ. ಇದನ್ನು ನಿರ್ಮಿಸಲು ಕಾಡುಕಲ್ಲನ್ನು ಬಳಸಲಾಗಿದೆ. ಇದರ ಒಳಗೆ ಪ್ರವೇಶದ್ವಾರದ ಮುಂದೆಯೇ ನ್ಯಾಯ ಪಂಚಾಯಿತಿಗಳನ್ನು ಜರುಗಿಸುವ ಸಲುವಾಗಿ ನಿರ್ಮಿಸಿದ ಛಾವಡಿ ಇದ್ದು. ಈಗ ಪಾಳು ಬಿದ್ದಿದೆ.

ಹಿಂದೆ ಈ ಕೋಟೆಯಲ್ಲಿ ಗುಡೇಕೋಟೆ ಪಾಳೆಗಾರರು ಮದ್ದು ಗುಂಡುಗಳನ್ನು ಸಂಗ್ರಹಿಸಿಡುತ್ತಿದ್ದರೆಂದು ತಿಳಿದುಬರುತ್ತದೆ. ಕೋಟೆಯ ಮುಂದೆ ಆಂಜನೇಯನ ದೇವಾಲಯವಿರುವುದರಿಂದ ಅದಕ್ಕೆ ಈಗಲೂ ಊರ ಮುಂದಿನರಾಯ ಎಂದು ಕರೆಯುತ್ತಾರೆ.

ಪ್ರಸ್ತುತವಾಗಿ ಸ್ಥಳೀಯರು ಇರುವ ಕೋಟೆಯನ್ನು ಬೀಳಿಸಿ ಮನೆಗಳನ್ನು ನಿರ್ಮಿಸಿಕೊಂಡಿರುವುದರಿಂದ ಈ ಗ್ರಾಮದಲ್ಲಿ ಕೋಟೆ ಇದೆ ಎಂಬುದು ಬಹು ಬೇಗ ಗಮನಕ್ಕೆ ಬರುವುದಿಲ್ಲ. ಆದರೆ ಇಲ್ಲಿ ಕಾಣಸಿಗುವ ಕೋಟೆಯ ಶಿಥಿಲಾವಸ್ಥೆಯಲ್ಲಿರುವ ಗೋಡೆ, ಬುರುಜು, ಕಂದಕ, ಛಾವಡಿ, ಬುಡ್ಡೆಕಲ್ಲು, ಯಂತ್ರಕಲ್ಲು ಇತ್ಯಾದಿ ಕೋಟೆಯ ಅವಶೇಷಗಳ ಆಧಾರದಿಂದ ಇಲ್ಲಿ ಕೋಟೆ ಇದೆ ಎಂದು ತಿಳಿದು ಬರುವುದು. ಆದರೆ ಮುಂಬರುವ ದಿನಗಳಲ್ಲಿ ಇದರ ಅವಶೇಷಗಳು ಸಹ ಕಾಣಸಿಗದಂತೆ ಆಗುವುದರಲ್ಲಿ ಸಂದೇಹವಿಲ್ಲ.

ತಿಮ್ಮಪ್ಪನ ಬೆಟ್ಟದ ಕೋಟೆ

ಈ ಕೋಟೆಯು ಸಂಡೂರಿನಿಂದ-ಬಳ್ಳಾರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಅಂದರೆ ಸಂಡೂರಿನಿಂದ ೧೫ ಕಿ.ಮೀ ಅಂತರದ ಬೆಟ್ಟದ ತುದಿಯಲ್ಲಿ ಈ ಕೋಟೆಯು ಕಾಣಸಿಗುತ್ತದೆ. ಇದು ತಿಮ್ಮಪ್ಪನ ದೇವಾಲಯದಿಂದ ಸ್ವಲ್ಪ ದೂರ ಕಾಲು ದಾರಿಯಿಂದ ಸಾಗಿದರೆ ಈ ಕೋಟೆ ಇದೆ. ಈ ದೇವಾಲಯದ ಬಳಿ ಈ ಕೋಟೆ ಇರುವುದರಿಂದ ಇದಕ್ಕೆ ತಿಮ್ಮಪ್ಪನ ಬೆಟ್ಟದ ಕೋಟೆ ಎಂದು ಕರೆಯುತ್ತಾರೆ. ಪ್ರಸ್ತುತವಾಗಿ ಈ ಕೋಟೆ ಇರುವ ಪ್ರದೇಶವನ್ನು (ಬೆಟ್ಟವನ್ನು) ಜಿಂದಾಲ್ ಕಾರ್ಖಾನೆಯವರು ಕಾಂಟ್ರ್ಯಾಕ್ಟ್ ಪಡೆದಿದ್ದಾರೆ.

ಕೋಟೆಯ ಲಕ್ಷಣಗಳು

ಈ ಕೋಟೆಯು ಸು.೨.ಕಿ.ಮೀ. ವಿಸ್ತಾರವಾದ ವ್ಯಾಪ್ತಿಯನ್ನೊಳಗೊಂಡಿದೆ. ಈ ಕೋಟೆ ಗೋಡೆಯು ಶಿಥಿಲವಾಗಿದ್ದು, ಉಳಿದ ಕೋಟೆಯ ಎತ್ತರ ಸು.೬.ಅಡಿ ಇದೆ. ಪ್ರವೇಶದ್ವಾರವು ಪೂರ್ವದಿಕ್ಕಿಗಿದ್ದು ಸಂಪೂರ್ಣವಾಗಿ ಶಿಥಿಲವಾಗಿದೆ. ಈ ಕೋಟೆಯು ಶಿಥಿಲಗೊಂಡ ೭ ಬತೇರಿಗಳನ್ನೊಳಗೊಂಡಿದೆ. ಕೋಟೆ ಗೋಡೆಯಲ್ಲಿ ತುಪಾಕಿಯಿಂದ ಗುಂಡುಗಳನ್ನು ಹಾರಿಸುವ ಸಲುವಾಗಿ ಕಿಂಡಿಗಳನ್ನು ಬಿಡಲಾಗಿದೆ. ಕೋಟೆಯ ಒಳಗೆ ಎರಡು ಹೊಂಡಗಳನ್ನು ನಿರ್ಮಿಸಲಾಗಿದೆ. ಒಂದು ಹೊಂಡ ಒಬ್ಬ ಆಳಿನಷ್ಟು ಆಳವನ್ನೊಂದಿದೆ. ಮತ್ತೊಂದು ಸು.೨೦ ಅಡಿ ಆಳವನ್ನು ಹೊಂದಿದೆ. ಎರಡು

ನೈಸರ್ಗಿಕವಾಗಿ ನಿರ್ಮಿತವಾದ ಬಾವಿಗಳಿವೆ. ಈ ಕೋಟೆಯು ಇರುವ ಪ್ರದೇಶವು ಕಬ್ಬಿಣದ ಅದಿರನ್ನೊಳಗೊಂಡಂತ ಬೆಟ್ಟವಾಗಿರುವುದರಿಂದ ಇದನ್ನು ನಿರ್ಮಿಸಲು ಸ್ಥಳೀಯವಾಗಿ ದೊರೆಯುವ ಕಬ್ಬಿಣದ ಕಲ್ಲುಗಳನ್ನೇ ಬಳಸಿ ಕಟ್ಟಲ್ಪಟ್ಟಿದೆ. ಈ ಕೋಟೆಯು ಬೆಟ್ಟದ ತುದಿಯಲ್ಲಿದ್ದು ಸಾಮಾನ್ಯವಾಗಿ ಯಾರ ಗಮನಕ್ಕೂ ಬಾರದಿರುವುದರಿಂದ ಹಾಗೂ ಇಲ್ಲಿಯೇ ಗಣಿಗಾರಿಕೆ ನಡೆಯುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಇಲ್ಲಿ ಕೋಟೆ ಇತ್ತು ಎಂದು ಹೇಳಲೂ ಸಹ ಕೋಟೆಯ ಅವಶೇಷಗಳಿರುವುದಿಲ್ಲ ಎಂಬುದರಲ್ಲಿ ಸಂದೇಹವಿಲ್ಲ.

ಕೃಷ್ಣಾನಗರ ಕೋಟೆ

ಕೃಷ್ಣಾನಗರವು ಸಂಡೂರಿನಿಂದ ಸುಮಾರು ೨ ಕಿ.ಮೀ. ಅಂತರದಲ್ಲಿದ್ದು, ಇಂದು ಸಂಡೂರು ನಗರಕ್ಕೆ ಹೊಂದಿಕೊಂಡಿದೆ. ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮ ಕಾಣಸಿಗುತ್ತದೆ. ಸಂಡೂರಿನ ಪೂರ್ವಕ್ಕೆ ಈ ಗ್ರಾಮವಿದೆ.[೭೩] ಕೃಷ್ಣಾನಗರದ ಕೋಟೆಯನ್ನು ಹೈದರಾಲಿಯು ಸಂಡೂರಿನ ಮುರಾರಿರಾವ ಘೋರ್ಪಡೆಯನ್ನು ಸೋಲಿಸಿದ ನಂತರ ಕ್ರಿ.ಶ.೧೭೭೬ರಲ್ಲಿ ನಿರ್ಮಿಸಲು ಆರಂಭಿಸಿದನು. ಮುಂದೆ ಟಿಪ್ಪುಸುಲ್ತಾನನು ಇದನ್ನು ಕ್ರಿ.ಶ.೧೭೯೨ರಲ್ಲಿ ಪೂರ್ಣಗೊಳಿಸಿದನು.[೭೪]

ಕೋಟೆಯ ಲಕ್ಷಣಗಳು

ಚೌಕಾಕಾರದ ಈ ಕೋಟೆಯನ್ನು ನಿರ್ಮಿಸಲು ಮಧ್ಯಮ ಗಾತ್ರದ ಕಲ್ಲು ಮತ್ತು ಗಾರೆಯನ್ನು ಬಳಸಲ್ಪಟ್ಟಿದೆ. ಕೋಟೆಯ ಮೇಲ್ಭಾಗದಲ್ಲಿಯ ಕೈಪಿಡಿ ಗೋಡೆಯನ್ನು ಇಟ್ಟಿಗೆ, ಗಾರೆಯನ್ನು ಬಳಸಿ ನಿರ್ಮಿಸಲ್ಪಟ್ಟಿದೆ. ಕೋಟೆಯ ಪೂರ್ವ ದಿಕ್ಕಿನ ಗೋಡೆಯ ಮಧ್ಯದಲ್ಲಿ ದೊಡ್ಡ ಬಾಗಿಲು ಮತ್ತು ದಕ್ಷಿಣ ದಿಕ್ಕಿನ ಗೋಡೆಯ ಮಧ್ಯದಲ್ಲಿ ಚಿಕ್ಕ ದಿಡ್ಡಿ ಬಾಗಿಲು ಇವೆ. ಕೋಟೆಯ ಸುತ್ತಲು ಹದಿನೈದು ವೃತ್ತಾಕಾರದ ಬುರುಜುಗಳಿವೆ. ಅವುಗಳಲ್ಲಿ ನಾಲ್ಕು ಮೂಲೆಗಳಲ್ಲಿರುವ ಬುರುಜುಗಳು ದೊಡ್ಡದಾಗಿವೆ. ಕೋಟೆಯ ಸುತ್ತಲು ಸುಮಾರು ಮೂವತ್ತೈದು ಅಡಿ ಅಗಲ ಮತ್ತು ಇಪ್ಪತ್ತು ಅಡಿ ಆಳವಾದ ಕಂದಕವಿದೆ.

ಪೂರ್ವದಿಕ್ಕಿನ ಬಾಗಿಲಿನ ಮುಂದೆ ಗೋಡೆಗಳನ್ನು ಕಟ್ಟಿ ಎರಡು ಆವರಣಗಳನ್ನು ನಿರ್ಮಿಸಿ, ಮೂರು ಬಾಗಿಲುಗಳ ಮೂಲಕ ಪ್ರವೇಶವನ್ನು ಒದಗಿಸಲಾಗಿದೆ. ಕೋಟೆಗೋಡೆಯಲ್ಲಿ ಪೂರ್ವಾಭಿಮುಖವಾಗಿರುವ ಒಳಬಾಗಿಲಿನ ಪಕ್ಕದಲ್ಲಿನ ಎರಡು ಬದಿಯಿಂದ ಮುಂದೆ ಪೂರ್ವಕ್ಕೆ ಚಾಚಿದ ಗೋಡೆಗಳ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿರುವ ಮತ್ತೊಂದು ಗೋಡೆಯನ್ನು ಕಟ್ಟಿ ಒಳ ಆವರಣವನ್ನು ನಿರ್ಮಿಸಿದೆ. ಇದರ ಹೊರಗೆ ಮೊದಲ ಕೋಟೆ ಗೋಡೆಯಿಂದ ಅದೇ ರೀತಿ ಮುಂದೆ ಚಾಚಿದ ಗೋಡೆಗಳ ದೊಡ್ಡ ಹೊರ ಆವರಣದ ಪೂರ್ವ ದಿಕ್ಕಿಗೆ ಮಧ್ಯಭಾಗದಲ್ಲಿ ಬಾಗಿಲು ಮತ್ತು ಮೂಲೆಗಳಲ್ಲಿ ಬುರುಜುಗಳಿವೆ. ಸರಳವಾದ ಈ ಬಾಗಿಲಿನ ಮೇಲೆ ದುಂಡನೆಯ ಕಮಾನಿದೆ. ಮೇಲಿನ ಕೈಪಿಡಿ ಗೋಡೆಯಲ್ಲಿ

ಚಿಕ್ಕ ಕಮಾನುಗಳು ಮತ್ತು ಮಿನರೆಟ್‌ಗಳಿವೆ. ಈ ಆವರಣದ ಗೋಡೆ ಹೆಚ್ಚು ಎತ್ತರವಿಲ್ಲ. ಇಟ್ಟಿಗೆ ಮತ್ತು ಗಾರೆಯ ಕೈಪಿಡಿ ಗೋಡೆಯಲ್ಲಿ ಬಂದೂಕು ಕಿಂಡಿಗಳಿವೆ.

ಬಾಗಿಲಿನ ಈಶಾನ್ಯಕ್ಕಿರುವ ಬುರುಜಿನ ಮೇಲೆ ಮೂರು ತೋಪು ಸಂಧಿಗಳಿವೆ. ಆಗ್ನೇಯಕ್ಕಿರುವ ಬುರುಜು ಶಿಥಿಲವಾಗಿದೆ. ಒಳ ಆವರಣದ ಉತ್ತರ ಗೋಡೆಯ ಮಧ್ಯದಲ್ಲಿ ಬಾಗಿಲು ಮತ್ತು ಮೂಲೆಗಳಲ್ಲಿ ಬುರುಜುಗಳು ಇವೆ. ಈ ಆವರಣದ ಗೋಡೆ ಸು.೨೫ ಅಡಿ ಎತ್ತರವಾಗಿದೆ. ದೊಡ್ಡದಾಗಿರುವ ಬಾಗಿಲ ತೋಳಿನ ಮಧ್ಯ ಭಾಗದಲ್ಲಿ ಉಬ್ಬಿದ ಪಟ್ಟಿ ಮತ್ತು ಕೆಳ ಮೂಲೆಯಲ್ಲಿ ಮುಂದೆ ಚಾಚಿದ ಪುಷ್ಪದಳ ಇವೆ. ಮೇಲೆ ಎರಡು ಬೋದಿಗೆಗಳಿವೆ. ಕೆಳಗಿನ ಬೋದಿಗೆ ಬಾಳೆಯ ಮೊಗ್ಗಿನ ಆಕಾರದಲ್ಲಿದೆ. ಮೇಲಿನದು ಚೌಕಾಕಾರದ ಪುಷ್ಪ ಮತ್ತು ಆನೆಯ ಸೊಂಡಿಲಿನಿಂದ ಹೊರಬಂದ ಬಾಳೆಯ ಮೊಗ್ಗಿನ ಆಕಾರದಲ್ಲಿದೆ. ತೋಳುಗಳಂತೆಯೇ ಇರುವ ಬಾಗಿಲ ಉತ್ತರಂಗದ ತುದಿಗಳಲ್ಲಿ ಚೌಕಾಕಾರದ ಪುಷ್ಪಗಳಿವೆ. ಈ ಬಾಗಿಲ ಪಕ್ಕದಲ್ಲಿ ಒಂದು ಚಿಕ್ಕ ಉಪ ಬಾಗಿಲಿನ ಚೌಕಟ್ಟು ಮುಖ್ಯ ಬಾಗಿಲಿನ ಚೌಕಟ್ಟಿನಂತೆಯೇ ಇದೆ. ಆದರೆ ಇದರಲ್ಲಿ ಬೋದಿಗೆಗಳಿಲ್ಲ. ಪ್ರವೇಶದ ಪಾರ್ಶ್ವಗಳಲ್ಲಿಯ ಕಟ್ಟೆಗಳನ್ನು ಮೂರು ರಂಗಗಳಿಂದ ನಿರ್ಮಿಸಿದೆ. ಕಟ್ಟೆಗಳ ಮೇಲಿನ ಕಂಬಗಳಲ್ಲಿ ಮೂರು ಚೌಕ ಮತ್ತು ಎರಡು ಅಷ್ಟಭುಜಾಕೃತಿಯ ಭಾಗಗಳಿವೆ. ಕಂಬಗಳ ಮೇಲೆ ಸುರುಳಿಯಾಕಾರದ ಬೋದಿಗೆಗಳಿವೆ. ಒಳಭಾಗದಲ್ಲಿ ಬಾಗಿಲ ಮೇಲಿರುವ ಕೈಪಿಡಿ ಗೋಡೆಯಲ್ಲಿ ಕಂಗುರ (ತೆನೆ) ಮಿನರೆಟ್ ಮತ್ತು ಇಟ್ಟಿಗೆಗಳನ್ನು ಜೋಡಿಸಿ ಮಾಡಿದ ಪುಷ್ಪ ವಿನ್ಯಾಸದ ಜಾಲಂಧ್ರದಂತಹ ವಿನ್ಯಾಸಗಳಿವೆ. ಬಾಗಿಲ ಹತ್ತಿರವಿರುವ ಬುರುಜುಗಳು ಶಿಥಿಲಾವಸ್ಥೆಯಲ್ಲಿವೆ. ಒಳ ಆವರಣದ ಗೋಡೆಯ ಮೇಲಿನಿಂದ ಪ್ರಧಾನ ಕೋಟೆಗೋಡೆಯ ಮೇಲೆ ಬರಲು ಎರಡು ಬದಿಯಿಂದ ದಾರಿಗಳಿವೆ. ಒಳ ಆವರಣದ ಎಲ್ಲ ಒಳ ಗೋಡೆಗಳ ಮೇಲಿನ ಕೈಪಿಡಿ ಗೋಡೆಯನ್ನು ತೆನೆಗಳಿಂದ ಅಲಂಕರಿಸಿದೆ. ದಕ್ಷಿಣ ಗೋಡೆಯಲ್ಲಿ ಕಾವಲುಗಾರರ ನಾಲ್ಕು ಗೂಡುಗಳಿವೆ. ಪ್ರಧಾನ ಕೋಟೆ ಗೋಡೆಯಲ್ಲಿರುವುದೇ ಕೊನೆಯ ಅಥವಾ ಒಳ ಬಾಗಿಲು, ದೊಡ್ಡದಾಗಿರುವ ಈ ಬಾಗಿಲಿಗೆ ಎರಡು ಬಾಗಿಲ ಚೌಕಟ್ಟುಗಳಿವೆ. ಒಳ ಚೌಕಟ್ಟಿನ ತೋಳಿನ ಒಳ ಬದಿಯನ್ನು ಆನೆಯ ಸೊಂಡಿಲಿನಿಂದ ಹೊರ ಬಂದ ತೋರಣದಿಂದ, ಮೂಲೆಯನ್ನು ಪುಷ್ಪ ದಳಗಳಿಂದ ಮತ್ತು ಹೊರ ಬದಿಯನ್ನು ವ್ಯಾಳದಿಂದ ಹೊರ ಬಂದ ಬಳ್ಳಿ ಸುರುಳಿಗಳಿಂದ ಅಲಂಕರಿಸಲಾಗಿದೆ. ಹೊರ ಚೌಕಟ್ಟಿನ ತೋಳನ್ನು ವಜ್ರಾಕೃತಿಯ ವಿನ್ಯಾಸದಿಂದ ಮತ್ತು ಕುಂಭದಿಂದ ಹೊರಬಂದ ಬಳ್ಳಿ ಸುರುಳಿಗಳಿಂದ ಅಲಂಕರಿಸಿದೆ. ಬಾಗಿಲ ಒಳಬದಿಗೆ ಬಾಳೆಯ ಮೊಗ್ಗಿನ ಆಕಾರದ ಬೋದಿಗೆ ಮತ್ತು ಮುಂಭಾಗದಲ್ಲಿ ವ್ಯಾಳದ ಬಾಯಿಯಿಂದ ಹೊರಬಂದ ಬಾಳೆಯ ಮೊಗ್ಗಿನ ಆಕಾರದ ಬೋದಿಗೆಗಳಿವೆ. ಈ ಬಾಗಿಲ ಪಕ್ಕದಲ್ಲಿ ಒಂದು ಚಿಕ್ಕ ಉಪಬಾಗಿಲಿದೆ. ಉಪಬಾಗಿಲನ್ನು ನಾಲ್ಕು ಭಾಗಗಳಲ್ಲಿ ವಿಭಜಿಸಿದ ವಜ್ರಾಕೃತಿಯ ವಿನ್ಯಾಸಗಳಿಂದ ಅಲಂಕರಿಸಿದೆ. ಎರಡು ಬಾಗಿಲುಗಳ ಮಧ್ಯದಲ್ಲಿ ಗೋಡೆಯ ಮೇಲೆ

ಕಾಮನಿರತ ಮಾನವ ಮತ್ತು ಪ್ರಾಣಿಯ ಶಿಲ್ಪವಿದೆ. ಬಾಗಿಲ ಮೇಲಿನ ಕೈಪಿಡಿ ಗೋಡೆಯನ್ನು ಇಟ್ಟಿಗೆ ಗಾರೆಯ ಜಾಲಂಧ್ರದಿಂದ, ತೆನೆಗಳಿಂದ ಮತ್ತು ಮಿನರೆಟ್‌ಗಳಿಂದ ಅಲಂಕರಿಸಿದೆ. ಬಾಗಿಲಿನ ಒಂದು ಕದವು ಮಾತ್ರ ಉಳಿದಿದೆ. ಮರದ ಕದದ ಮೇಲೆ ಮರದಲ್ಲಿ ಮಾಡಿದ ಅಲಂಕಾರಿಕ ಉದ್ದ ಮತ್ತು ಅಡ್ಡ ಪಟ್ಟಿಗಳು ಮತ್ತು ಕಬ್ಬಿಣದ ಮೊಳೆಗಳ ಚೂಪಾದ ತಲೆಗಳಿವೆ. ಪ್ರವೇಶದ ಪಕ್ಕದಲ್ಲಿಯ ಕಟ್ಟೆಗಳ ಅಧಿಷ್ಠಾನವನ್ನು ಅಲಂಕೃತ ದಿಂಡುಗಳಿಂದ ನಿರ್ಮಿಸಿದೆ. ಕಂಠಭಾಗವನ್ನು ಮೀನುಗಳಿಂದ ಅಲಂಕರಿಸಿದೆ. ಕಟ್ಟೆಯ ಮೇಲಿನ ಕಂಬಗಳ ಕೆಳಗಿನ ಭಾಗ ಚೌಕಾಕಾರವಾಗಿದ್ದು, ಮೇಲ್ಭಾಗ ಅಷ್ಟಭುಜಾಕೃತಿಯಲ್ಲಿದೆ. ಕಂಬದ ಗಾತ್ರ ಮೇಲೆ ಹೋದಂತೆ ಚಿಕ್ಕದಾಗುತ್ತದೆ. ಮೇಲೆ ಸುರುಳಿ ಬೋದಿಗೆಗಳಿವೆ. ಒಂದು ಅರೆಗಂಭದ ಮೇಲೆ ಕೈ ಮುಗಿದು ನಿಂತಿರುವ ಪುರುಷನ ಶಿಲ್ಪವಿದೆ. ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ದೊಡ್ಡ ಗೂಡುಗಳಿವೆ. ಬಾಗಿಲ ಒಳ ಬದಿಯ ಕಲ್ಲಿನ ಕೈಪಿಡಿ ಗೋಡೆಯನ್ನು ಕಮಾನುಗಳ ಉಬ್ಬು ಚಿತ್ರಗಳಿಂದ ಅಲಂಕರಿಸಿದೆ. ಕೋಟೆಯ ಒಳಭಾಗದಲ್ಲಿ ಬಾಗಿಲ ಎರಡು ಪಕ್ಕದಲ್ಲಿರುವ ಮೆಟ್ಟಿಲುಗಳ ಮೂಲಕ ಕೋಟೆಯ ಮೇಲೆ ಹತ್ತಲು ಅವಕಾಶವಿದೆ. ದಕ್ಷಿಣ ಗೋಡೆಯ ಮಧ್ಯದಲ್ಲಿರುವ ದಿಡ್ಡಿಯ ಚೌಕಟ್ಟಿನ ಕೆಳಗೆ ಉತ್ತರಂಗದ ಮಧ್ಯದಲ್ಲಿ ಮತ್ತು ತುದಿಗಳಲ್ಲಿ ಚೌಕಾಕಾರದ ಪುಷ್ಪ ವಿನ್ಯಾಸವಿದೆ. ಬಾಗಿಲ ಮೇಲ್ಭಾಗದಲ್ಲಿಯ ಮತ್ತೊಂದು ಉತ್ತರಂಗದ ಮಧ್ಯದಲ್ಲಿ ವೃತ್ತಾಕಾರದ ಪುಷ್ಪ ಮತ್ತು ಅದರ ಬದಿಗಳಲ್ಲಿ ಒಂದು ನವಿಲು ಮತ್ತು ಒಂದು ಪಾರಿವಾಳದ ಶಿಲ್ಪಗಳಿವೆ.

ಬುರುಜುಗಳ ಕೈಪಿಡಿ ಗೋಡೆಯಲ್ಲಿ ಬಂದೂಕು ಕಿಂಡಿಗಳು ಮತ್ತು ತೋಪಿಗಾಗಿ ಬಿಟ್ಟ ಸಂದಿಗಳಿವೆ. ಕೈಪಿಡಿ ಗೋಡೆಯು ಅಗಲವಾಗಿದ್ದು, ಹೊರ ಬದಿಗೆ ಇಳಿಜಾರಾಗಿದೆ. ಬುರುಜುಗಳ ಮೇಲೆ ಕಾವಲುಗಾರರಿಗಾಗಿ ಮಾಡಿದ 'L' ಆಕಾರದ ಚಿಕ್ಕ ಗೂಡುಗಳಿವೆ. ಕೆಲವು ಗೂಡುಗಳು 'U' ಆಕಾರದಲ್ಲಿವೆ. ಪಶ್ಚಿಮ ದಿಕ್ಕಿನ ಕೋಟೆಯ ಮಧ್ಯದಲ್ಲಿಯ ಬುರುಜು ಬಹಳ ದೊಡ್ಡದಾಗಿದೆ. ಅದರ ಮೇಲೆ ಒಂದು ಬತೇರಿ ಮತ್ತು ಕೆಳಮಟ್ಟದಲ್ಲಿರುವ ಒಂದು ಕಟ್ಟಡ ಇವೆ. ಆಯತಾಕಾರದ ಈ ಕಟ್ಟಡವನ್ನು ಅದಕ್ಕಿಂತ ದೊಡ್ಡದಾದ ತಗ್ಗಿನಲ್ಲಿ ಕಟ್ಟಿದೆ. ಕೆಳಗೆ ಇಳಿಯಲು ಎರಡು ಬದಿಗೆ ಮೆಟ್ಟಿಲುಗಳಿವೆ. ಎಂಟು ಕಂಬಗಳ ಕಟ್ಟಡದ ಮುಂಭಾಗದಲ್ಲಿ ಕಮಾನುಗಳಿವೆ. ಈಶಾನ್ಯ ದಿಕ್ಕಿನ ಬುರುಜಿನ ಹೊರಗೋಡೆಯ ಕಲ್ಲಿನ ಮೇಲೆ ಆಂಜನೇಯನ ಶಿಲ್ಪವಿದೆ. ಕೋಟೆಯ ಮೇಲೆ ಓಡಾಡಲು ಅಗಲವಾದ ದಾರಿಯಿದೆ. ಕೋಟೆ ಗೋಡೆಯಲ್ಲಿ ಬಂದೂಕು ಕಿಂಡಿಗಳು ಮತ್ತು ತೋಪು ಸಂಧಿಗಳಿವೆ. ಕೋಟೆಯ ಮೇಲೆ ತೋಪುಗಳನ್ನು ಒಯ್ಯುವ ಸಲುವಾಗಿ ಕೋಟೆಯ ನೈರುತ್ಯ ಮೂಲೆಯಲ್ಲಿ ದೊಡ್ಡ ಇಳಿ ವೋರೆ(ramp)ಯನ್ನು ನಿರ್ಮಿಸಿದೆ.

ಕೋಟೆಯೊಳಗೆ ನಾಲ್ಕು ಮೂಲೆಯಲ್ಲಿ ನಾಲ್ಕು ಆಯತಾಕಾರದ ಇಟ್ಟಿಗೆ ಗಾರೆಯ ಕಟ್ಟಡಗಳು ಮತ್ತು ಪೂರ್ವ ದಿಕ್ಕಿನ ಬಾಗಿಲಿನ ಹತ್ತಿರ ಒಂದು ಬಾವಿ ಇದೆ. ಆಯತಾಕಾರದ ಬಾವಿಗೆ ಉತ್ತರ

ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಪೂರ್ವ ಮತ್ತು ಪಶ್ಚಿಮ ಗೋಡೆಗಳಲ್ಲಿ ಪ್ರತಿಯೊಂದರಲ್ಲಿ ಮೂರು ಗೂಡುಗಳಿವೆ. ಆಗ್ನೇಯ ಮೂಲೆಯಲ್ಲಿರುವ ಕಟ್ಟಡದ ಮುಂಭಾಗದಲ್ಲಿ ಮೂರು ಬಾಗಿಲುಗಳಿವೆ. ಒಳಭಾಗದಲ್ಲಿ ೬ x ೨ ಕಂಬಗಳಿವೆ. ಮೇಲೆ ಕಮಾನುಗಳ ಮೇಲೆ ನಿಂತಿರುವ ಒಳ ಮಾಳಿಗೆಯಿದೆ. ನೈರುತ್ಯ ಮೂಲೆಯಲ್ಲಿಯ ಕಟ್ಟಡದ ಮುಂಭಾಗದಲ್ಲಿಯ ಆಯತಾಕಾರದ ಚಿಕ್ಕ ಮೊಗಸಾಲೆಗೆ ಎರಡು ಬಾಗಿಲುಗಳಿವೆ. ಇಲ್ಲಿಂದ ಕಟ್ಟಡದ ಒಳಗೆ ಹೋಗಲು ಮತ್ತೆರಡು ಬಾಗಿಲುಗಳಿವೆ. ಕಟ್ಟಡದ ಒಳಗೆ ಒಂದೇ ಸಾಲಿನಲ್ಲಿ ಎಂಟು ಕಂಬಗಳಿವೆ. ಪಶ್ಚಿಮ ಗೋಡೆಯಲ್ಲಿ ಎರಡು ಚಿಕ್ಕ ಕಿಟಕಿಗಳಿವೆ. ವಾಯುವ್ಯ ಮೂಲೆಯಲ್ಲಿಯ ಕಟ್ಟಡದ ಮುಂಭಾಗದಲ್ಲಿ ಮೂರು ಬಾಗಿಲು ಮತ್ತು ಎರಡು ಕಿಟಕಿಗಳಿವೆ. ಉತ್ತರ ದಕ್ಷಿಣ ಗೋಡೆಗಳಲ್ಲಿ ಒಂದೊಂದು ಕಿಟಕಿಗಳಿವೆ. ಒಳಗೆ ಒಂದೇ ಸಾಲಿನಲ್ಲಿ ಒಂಬತ್ತು ಕಂಬಗಳಿವೆ. ಮಾಳಿಗೆ ಗುಡಿಸಲಿನಾಕಾರದಲ್ಲಿ ಎರಡೂ ಬದಿಗೆ ಇಳಿಜಾರಾಗಿದೆ. ಈಶಾನ್ಯ ಮೂಲೆಯಲ್ಲಿಯ ಕಟ್ಟಡದ ಮುಂಭಾಗದಲ್ಲಿ ಕಮಾನಿನ ಐದು ಬಾಗಿಲುಗಳಿವೆ. ಒಳಗೆ ೬x೨ ಕಂಬಗಳಿವೆ. ಮಾಳಿಗೆ ಗುಡಿಸಲಿನಾಕಾರದಲ್ಲಿದೆ.[೨೯]

ಮದ್ದಿನ ಮನೆ

ಆಗ್ನೇಯ ಮೂಲೆಯಲ್ಲಿರುವ ಮದ್ದಿನ ಮನೆಯು ಉತ್ತರಾಭಿಮುಖವಾಗಿದೆ. ಇದು ಪೂರ್ವ ಪಶ್ಚಿಮವಾಗಿ ೨೦ ಅಡಿ ಉದ್ದ ಹಾಗೂ ಉತ್ತರ ದಕ್ಷಿಣವಾಗಿ ಸುಮಾರು ೩೦ ಅಡಿ ಅಗಲವಾಗಿದೆ. ಉತ್ತರದ ಗೋಡೆಯ ಮಧ್ಯದಲ್ಲಿ ಕಿರಿದಾದ ಕಮಾನಿನಾಕಾರದ ೨ ಬಾಗಿಲುಗಳಿವೆ. ಒಳಭಾಗದಲ್ಲಿ ಒಟ್ಟು ೧೨ ಕಂಬಗಳಿವೆ. ಇವುಗಳು ಕಮಾನಿನಾಕಾರದಲ್ಲಿದ್ದು, ಇವುಗಳ ಮೇಲೆ ಒಳಮಾಳಿಗೆ ನಿಂತಿದೆ. ನೈರುತ್ಯ ಮೂಲೆಯಲ್ಲಿಯ ಮದ್ದಿನ ಮನೆಯು ಉತ್ತರಾಭಿಮುಖವಾಗಿದೆ. ಇದಕ್ಕೆ ಎರಡು ಬಾಗಿಲುಗಳಿವೆ. ಕಟ್ಟಡದ ಒಳಗೆ ಹೋಗಲು ಇನ್ನೆರಡು ಬಾಗಿಲುಗಳಿದ್ದು ಇದರೊಳಗೆ ಎಂಟು ಕಂಬಗಳಿವೆ. ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಎರಡು ಚಿಕ್ಕ ಕಿಟಕಿಗಳಿವೆ. ಇದು ಆಗ್ನೇಯಕ್ಕಿರುವ ಮದ್ದಿನ ಮನೆಗಿಂತ ಚಿಕ್ಕದಾಗಿದೆ. ವಾಯುವ್ಯ ದಿಕ್ಕಿನಲ್ಲಿರುವ ಮದ್ದಿನ ಮನೆಯು ಪೂರ್ವಾಭಿಮುಖವಾಗಿದ್ದು ಇದು ಉತ್ತರ ದಕ್ಷಿಣವಾಗಿ ಸು.೬೦ ಅಡಿ ಉದ್ದ ಹಾಗೂ ಪೂರ್ವ ಪಶ್ಚಿಮವಾಗಿ ೨೦ ಅಡಿ ಅಗಲವಾಗಿದೆ. ಇದರ ಪೂರ್ವದ ಗೋಡೆಯಲ್ಲಿ ಕಿರಿದಾದ ಕಮಾನಿನಾಕಾರದ ಮೂರು ಬಾಗಿಲುಗಳಿವೆ. ನಾಲ್ಕು ದಿಕ್ಕಿಗೂ ಚಿಕ್ಕ ಚಿಕ್ಕ ಕಿಟಕಿಗಳಿವೆ. ಒಳಗೆ ಒಂದೇ ಸಾಲಿನಲ್ಲಿ ಒಂಭತ್ತು ಕಂಬಗಳಿವೆ. ಈಶಾನ್ಯ ದಿಕ್ಕಿಗಿರುವ ಮದ್ದಿನ ಮನೆಯು ದಕ್ಷಿಣಾಭಿಮುಖವಾಗಿ ಸು.೨೦ ಅಡಿ ಅಗಲವಾಗಿದೆ. ಮುಂಭಾಗದಲ್ಲಿ ಕಮಾನಿನಾಕಾರದ ಐದು ಬಾಗಿಲುಗಳಿವೆ. ಒಳಭಾಗದಲ್ಲಿ ಎರಡು ಸಾಲುಗಳಲ್ಲಿರುವ ಒಟ್ಟು ೧೨ ಕಂಬಗಳಿವೆ. ಈ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಸಾರ್ವಜನಿಕರಿಗೆ ನೀಡಲಾಗುತ್ತಿದ್ದು, ಇವುಗಳಲ್ಲಿ ದವಸ ಧಾನ್ಯಗಳನ್ನು, ದನಕರುಗಳನ್ನು ಮತ್ತು ಮೇವುಗಳನ್ನು ಇಡುವುದಕ್ಕಾಗಿ ಬಳಸಲಾಗುತ್ತಿದೆ. ಕೋಟೆಯೊಳಗೆ ಕೃಷ್ಣಾನಗರ

ಗ್ರಾಮವಿದ್ದು, ಈ ನಗರದಲ್ಲಿ ರಾಮಸ್ವಾಮಿ, ಈಶ್ವರ, ಊರಮ್ಮ, ತಾಯಮ್ಮನ ದೇವಾಲಯಗಳು, ದರ್ಗಾಗಳು ಹಾಗೂ ಮಸೀದಿಗಳಿವೆ. ಕೋಟೆಯ ಪೂರ್ವದಿಕ್ಕಿನ ಬಾಗಿಲಿನ ಹತ್ತಿರ ಆಯತಾಕಾರದ ಬಾವಿ ಇದೆ. ಇದಕ್ಕೆ ಉತ್ತರ ದಿಕ್ಕಿನಲ್ಲಿ ಪ್ರವೇಶ ಮಾಡಲು ಮೆಟ್ಟಿಲುಗಳಿವೆ. ಪೂರ್ವ ಮತ್ತು ಪಶ್ಚಿಮದ ಗೋಡೆಯಲ್ಲಿ ಗೂಡುಗಳಿವೆ.[೬]

ಸಮಾರೋಪ

ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಎಲ್ಲ ಜನರು ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು ತಮ್ಮ ಸಂಪತ್ತನ್ನು ವೈರಿಗಳಿಂದ ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಸಲುವಾಗಿ ಅವರು ಗ್ರಾಮಗಳ ಸುತ್ತಲು ಕೋಟೆಯನ್ನು ನಿರ್ಮಿಸಲು ಪ್ರಾರಂಭಿಸಿದರು. ಗ್ರಾಮಗಳು ಬೆಳೆದು ಹಲವಾರು ಗ್ರಾಮಗಳು ಒಟ್ಟು ಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ, ಆಳುವ ಅರಸರು ತಮ್ಮ ರಾಜ್ಯಗಳನ್ನು ರಕ್ಷಿಸಿಕೊಳ್ಳಲು ರಾಜಧಾನಿಯಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದರು.

ಈ ಪ್ರದೇಶದಲ್ಲಿಯ ಕೋಟೆಗಳು ಅಂದರೆ ದರೋಜಿ ಕೋಟೆ ಮತ್ತು ಹೊಸಮಲೆದುರ್ಗದ ಕೋಟೆಯನ್ನು ಹೊರತುಪಡಿಸಿದರೆ, ಉಳಿದ ಎಲ್ಲಾ ಕೋಟೆಗಳು ವಿಜಯನಗರೋತ್ತರ ಕಾಲದಲ್ಲಿ ನಿರ್ಮಿಸಲ್ಪಟ್ಟವುಗಳಾಗಿವೆ. ಇಲ್ಲಿನ ಕೋಟೆಗಳು ಹೆಚ್ಚಾಗಿ ಬೆಟ್ಟಗಳ ಮೇಲೆ ನಿರ್ಮಿಸಿದವುಗಳಾಗಿದ್ದು, ಕೋಟೆ ನಿರ್ಮಿಸಲು ಬಳಸಿದ ಶಿಲೆ, ಆಯ್ಕೆ ಮಾಡಿಕೊಂಡ ಸ್ಥಳ, ನಿರ್ಮಾಣ ಶೈಲಿ, ರಕ್ಷಣೆಯ ತಂತ್ರಗಳ ವ್ಯವಸ್ಥೆಯನ್ನು ಗಮನಿಸಿದರೆ ಇವು ಪಾಳೆಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಕೋಟೆಗಳೆಂದು ತಿಳಿದುಬರುತ್ತದೆ. ಆದರೆ ಈ ಎಲ್ಲಾ ಕೋಟೆಗಳು ಇಂದು ಜನರ ನಿರ್ಲಕ್ಷತೆ, ಬೇಜವಾಬ್ದಾರಿತನದಿಂದ ಕೋಟೆಯ ಕಲ್ಲುಗಳನ್ನು ತಮ್ಮ ಸ್ವಂತ ಕಟ್ಟಡಗಳಿಗೆ ಇತರ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದು, ಮುಂದೊಂದು ದಿನ ಈ ಪ್ರದೇಶದಲ್ಲಿ ಕೋಟೆಗಳು ಇದ್ದವು ಎಂಬ ಅವಶೇಷವನ್ನು ಸಹ ಬಿಡದ ಹಾಗೆ ಕೋಟೆಗಳನ್ನು ನಾಶ ಮಾಡುತ್ತಿರುವುದು ಖೇಧದ ಸಂಗತಿಯಾಗಿದೆ.

ಅಡಿಟಿಪ್ಪಣಿಗಳು

೧. ಚಾಲುಕ್ಯದರ್ಶನ, ಸುರೇಶ ಪಾಟೀಲ, ಪು.೪೪

೨. ಕ.ವಿ.ವಿ.ವಿ.ಕೋ-೨, ಕರಕುಶಲಕಲೆಗಳು, ಪು.೨೧೪

೩. ಸ್ಕಂದ ಶ್ರೀಗಂಧ, ಸ್ಮರಣಸಂಚಿಕೆ, ಪು.೧೮

೪. ಕ.ದೇ.ಕೋ (ಬ.ಜಿ), ಪು.೨೫೫

೫. ಎ.ಆರ್, ಸಂ.೭೪೦ ರಿಂದ ೧೯೨೨

೬. ಕ.ವಿ.ವಿ.ಶಾ.ಸಂ-೧, ಪು.೧೯೬

೭. ಅದೇ, ಪು.೧೯೬

೮. ಬ.ಜಿ.ಸಾಂ.ದ (ಸಂ.ಲೇ), ಪು.೫೮

೯. ಕ.ದೇ.ಕೋ., ಪು.೨೫೭

೧೦. ಕ.ವಿ.ವಿ.ಶಾ.ಸಂ-೧, ಪು.೧೯೪

೧೧. ಎ.ಆರ್, ಸಂ.೭೩೯ ರಿಂದ ೧೯೨೨

೧೨. ಕ.ವಿ.ವಿ.ಶಾ.ಸಂ-೧, ಪು.೧೯೪

೧೩. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೫೦

೧೪. ಕ.ದೇ.ಕೋ(ಬ.ಜಿ), ಪು.೨೫೭, ೨೫೮

೧೫. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೫೧

೧೬. ಕ.ದೇ.ಕೋ., ಪು.೨೫೯

೧೭. ಎ.ಆರ್, ಸಂ.ಬಿ.೮೩ ರಿಂದ ೧೯೪೪

೧೮. ಕ.ದೇ.ಕೋ.(ಬ.ಜಿ), ಪು.೨೫೮

೧೯. ಅದೇ, ಪು.೨೬೦

೨೦. ಅದೇ, ಪು.೨೫೪

೨೧. ವಿ ಪಿ ಆರ್, ೧೯೮೮-೯೧, ಪು.೨೪೬

೨೨. ಎ.ಆರ್, ಸಂ.೭೪೩ ರಿಂದ ೧೯೨೨

೨೩. ಕ.ದೇ.ಕೋ (ಬ.ಜಿ), ಪು.೨೪೮

೨೪. ಎ.ಆರ್, ಸಂ.ಬಿ.೪೦ ರಿಂದ ೧೯೪೩

೨೫. ಕ.ದೇ.ಕೋ.(ಬ.ಜಿ), ಪು.೨೪೬

೨೬. ಎ.ಆರ್., ಸಂ.೨೯೦ ರಿಂದ ೯೨೫

೨೭. ಕ.ದೇ.ಕೋ.(ಬ.ಜಿ), ಪು.೨೪೫

೨೮. ಎ.ಆರ್., ಸಂ.೭೨೭ ರಿಂದ ೯೨೨

೨೯. ಎ.ಆರ್., ಸಂ.೭೩೨ ರಿಂದ ೯೨೨

೩೦. ಕ.ದೇ.ಕೋ (ಬ.ಜಿ), ಪು.೨೪೯

೩೧. ಅದೇ, ಪು.೨೫೪

೩೨. ಅದೇ, ಪು.೨೪೭

೩೩. ಅದೇ, ಪು.೨೬೦

೩೪. ಕ.ದೇ.ಕೋ (ಬ.ಜಿ), ಪು.೨೫೦

೩೫. ಅದೇ, ಪು.೨೫೯

೩೬. ಎ.ಆರ್., ಸಂ.೭೬ ರಿಂದ ೧೯೪೩-೪೪

೩೭. ಕ.ದೇ.ಕೋ (ಬ.ಜಿ), ಪು.೨೫೨

೩೮. ಅದೇ, ಪು.೨೪೫

೩೯. ಅದೇ, ಪು.೨೪೭

೪೦. ಅದೇ, ಪು.೨೪೯

೪೧. ಎ.ಆರ್., ಸಂ.೨೯೩ ರಿಂದ ೯೨೫

೪೨. ಕ.ದೇ.ಕೋ (ಬ.ಜಿ), ಪು.೨೫೩

೪೩. ಅದೇ, ಪು.೨೫೫

೪೪. ಅದೇ, ಪು.೨೬೧

೪೫. ಅದೇ, ಪು.೨೫೧

೪೬. ಅದೇ, ಪು.೨೪೬

೪೭. ಅದೇ, ಪು.೨೫೩

೪೮. ಎ.ಆರ್., ಸಂ.೭೪೧ ರಿಂದ ೯೨೨

೪೯. ಕನ್ನಡ ಶಾಸನಶಿಲ್ಪ, ಡಾ.ಡಿ.ವಿ.ಪರಮಶಿವಮೂರ್ತಿ, ಪು.೧೯

೫೦. ಸಂ.ಪ.ಕಾ.ತ ಚಾ.ಅ., ವಾಸುದೇವ ಬಡಿಗೇರ, ಪು.೬೨

೫೧. ಅದೇ, ಪು.೬೨

೫೨. ಅದೇ, ಪು.೬೩

೫೩. ಅದೇ, ಪು.೬೩

೫೪. ಅದೇ, ಪು.೬೩

೫೫. ಕ.ವಿ.ವಿ.ವಿ.ಕೋ-೨, ಕರಕುಶಲಕಲೆಗಳು, ಪು.೧೬೫

೫೬. ಮಹದೇವ ಸಿ., ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪು.೨೮

೫೭. ಅದೇ,

೫೮. ಮಹದೇವ ಡಾ.ಸಿ., ವಿಜಯನಗರದ ಗಾರೆಶಿಲ್ಪ, ಪು.೫,೭,೮

೫೯. ಕರ್ನಾಟಕದ ಕೋಟೆಗಳು, ಸಿ.ಎಸ್.ಪಾಟೀಲ್, ಪು.೬೩

೬೦. ಅದೇ, ಪು.೬೩

೬೧. ಕೋಟೆ-ಕೊತ್ತಲಗಳು ಒಂದು ಅಧ್ಯಯನ (ಅಪ್ರಕಟಿತ ಪಿಎಚ್ ಡಿ ಮಹಾಪ್ರಬಂಧ) ಕೋಟ್ರೇಶ್ ಎಂ., ಪು.೧೧೨

೬೨. ಕರ್ನಾಟಕ ಕೋಟೆಗಳು, ಸಿ.ಎಸ್.ಪಾಟೀಲ್, ಪು.೬೩

೬೩. ಅದೇ, ಪು.೬೩, ೬೫

೬೪. ಅದೇ, ಪು.೬೬

೬೫. ಹು.ಶ್ರೀ.ಜೋ.ಸಂ.ಲೇ, ಸಂ:ಲಕ್ಷ್ಮಣ ತೆಲಗಾವಿ, ಪು.೪೬೫

೬೬. ಅದೇ, ಪು.೪೬೭

೬೭. ಅದೇ, ಪು.೪೬೫

೬೮. ಅದೇ, ಪು.೪೬೭, ೪೬೮

೬೯. ಅದೇ, ಪು.೯೭

೭೦. ಕರ್ನಾಟಕ ಕೋಟೆಗಳು, ಸಿ.ಎಸ್.ಪಾಟೀಲ್, ಪು.೬೮, ೭೦

೭೧. ಕು.ನಾ.ಒಂ.ಸಾಂ.ಅ, (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ), ಮಂಜುನಾಥಯ್ಯ ಟಿ.ಎಂ., ಪು.೯,೧೫, ೧೬,೧೭,೧೮

೭೨. ಹು.ಶ್ರೀ.ಜೋ.ಸಂ.ಲೇ, ಸಂ:ಲಕ್ಷ್ಮಣ ತೆಲಗಾವಿ, ಪು.೫೭೬, ೫೭೭

೭೩. ಕೋಟೆ-ಕೊತ್ತಲಗಳು ಒಂದು ಅಧ್ಯಯನ (ಅಪ್ರಕಟಿತ ಪಿಎಚ್ ಡಿ ಮಹಾಪ್ರಬಂಧ) ಕೋಟ್ರೇಶ್ ಎಂ., ಪು.೧೦೩

೭೪. ಕರ್ನಾಟಕದ ಕೋಟೆಗಳು, ಸಿ.ಎಸ್.ಪಾಟೀಲ್, ಪು.೨೬೫

೭೫. ಅದೇ, ಪು. ೨೬೫, ೨೬೬, ೨೬೭, ೨೬೮

೭೬. ಕೋಟೆ-ಕೊತ್ತಲಗಳು ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ) ಕೋಟ್ರೇಶ್ ಎಂ., ಪು.೧೦೯, ೧೧೦.

ಅಧ್ಯಾಯ ೫

ಸಂಡೂರು ಪ್ರಾಚೀನ ಲೋಹ ತಯಾರಿಕ ಕೇಂದ್ರ

೫.೧. ಲೋಹ ತಯಾರಿಕೆಯ ಪ್ರಾಚೀನತೆ

೫.೨. ಕಬ್ಬಿಣ ತಯಾರಿಕೆಯ ಮೂಲ ಕರ್ತೃಗಳು

೫.೩. ಐದು ವರ್ಗದವರು(ಸ್ಥಾನದಯ್ದುವರ್ಗದವರು)

೫.೪. ಕಾರ್ತಿಕೇಯ ತಪೋವನ ಒಂದು ಪ್ರಾಚೀನ ಲೋಹ(ಶಸ್ತ್ರಾಸ್ತ್ರ) ತಯಾರಿಕ ಕೇಂದ್ರ

೫.೫. ಕಾರ್ತಿಕೇಯ ತಪೋವನ-ಅಧಿಪತಿಗಳು

೫.೬. ಕಾರ್ತಿಕೇಯ-ಒಂದು ಪುರಾತನ ದೇವತೆ

೫.೭. ಸಂಡೂರು ತಾಲ್ಲೂಕಿನ ಪ್ರಸ್ತುತ ಕಬ್ಬಿಣ ಗಣಿಗಾರಿಕೆಯ ಇತಿಹಾಸ

೫.೮. ಸಂಡೂರು ಪರಿಸರದಲ್ಲಿ ದೊರೆಯುವ ವಿವಿಧ ಮಾದರಿಯ ಲೋಹಗಳು

೪.೯. ಗಣಿಗಾರಿಕೆಯ ದುಷ್ಪರಿಣಾಮ

೫

ಸಂಡೂರು-ಪ್ರಾಚೀನ ಲೋಹ ತಯಾರಿಕ ಕೇಂದ್ರ

ಲೋಹವು ಮಾನವನ ಬೆಳವಣಿಗೆಗೆ ಅನೇಕ ರೀತಿಯಲ್ಲಿ ನೆರವು ನೀಡಿದ್ದು, ಇಂದಿನ ಮಾನವನ ಅನೇಕ ಸಾಧನೆಗಳಿಗೆ ಮೂಲವಾಗಿ ನಿಂತಿದೆ. ಈ ಕಾರಣದಿಂದ ಲೋಹಗಳು ಒಂದು ನಾಡಿನ ಸಂಪತ್ತಾಗಿ, ಬೆಳವಣಿಗೆಗೆ ಸಾಧನವಾಗಿ ರೂಪುಗೊಂಡಿದೆ. ಇಂದು ಪ್ರತಿಯೊಂದು ರಂಗದಲ್ಲಿಯೂ ಲೋಹ ಅತ್ಯಗತ್ಯ ವಸ್ತುವಾಗಿದೆ. ಸಂಡೂರು ರಾಮಾಯಣ ಮಹಾಭಾರತದ ಕಾಲದಿಂದಲ್ಲೂ ಒಂದು ಪ್ರಮುಖ ಲೋಹ ತಯಾರಿಕಾ ಕೇಂದ್ರವಾಗಿ ಬೆಳೆದುಬಂದಿದೆ. ಈ ಅಧ್ಯಾಯದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಲಾಗಿದೆ.

೫.೧. ಲೋಹ ತಯಾರಿಕೆಯ ಪ್ರಾಚೀನತೆ

ಲೋಹಶಾಸ್ತ್ರ ಪ್ರಾಚೀನತೆಯು ಪ್ರಪಂಚದ ಎಲ್ಲಾ ಭಾಗಗಳಲ್ಲಿಯ ಶಿಲಾ ತಾಮ್ರ (ಚಾಲ್ಕೋಲಿಥಿಕ್) ಸಂಸ್ಕೃತಿಗಳಷ್ಟು ಹಿಂದಿನದಾಗಿದೆ.[೧] ತಾಮ್ರ ಶಿಲಾಯುಗ ಮತ್ತು ಚರಿತ್ರೆ ಕಾಲದ ಮಧ್ಯದ ಅವಧಿಯನ್ನು ಸಾಮಾನ್ಯವಾಗಿ ಕಬ್ಬಿಣಯುಗ ಎಂದು ಕರೆಯಲಾಗುತ್ತಿದೆ. ಜಗತ್ತಿನಾದ್ಯಂತ ಪ್ರಕೃತಿಯಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುವುದರಿಂದ ಇತರ ಲೋಹಗಳಿಗಿಂತಲೂ ಹೆಚ್ಚು ಕಬ್ಬಿಣದ ಉತ್ಪಾದನೆಯಾಗುತ್ತಿದೆ. ಕಬ್ಬಿಣದ ಕುರಿತು ಅತ್ಯಂತ ಹಳೆಯ ಪುರಾವೆ ಎಂದರೆ ಕ್ರಿ.ಪೂ.೪೦೦೦ ಕಾಲದೆನ್ನಲಾದ ಕೆಲವು ಕಬ್ಬಿಣದ ಮಣಿಗಳು. ಇವು ಕೈರೊ ಎಂಬ ನಗರದ ಬಳಿ ಇರುವ ಗೀಜಾ ಎಂಬಲ್ಲಿನ ಸಮಾಧಿಯಲ್ಲಿ ದೊರೆತದ್ದಾಗಿದೆ. ಆ ಕಾಲಕ್ಕೆ ಮಾನವನಿಗೆ ಕಬ್ಬಿಣದ ಬಳಕೆ ಚೆನ್ನಾಗಿ ತಿಳಿದಿತ್ತೆನ್ನಬಹುದು.[೨]

೫.೨. ಕಬ್ಬಿಣ ತಯಾರಿಕೆಯ ಮೂಲ ಕರ್ತೃಗಳು

ತಾಮ್ರ ತಯಾರಿಸುವ ತಂತ್ರವನ್ನು ಬಲ್ಲ ಜನರ ಒಂದು ಗುಂಪು ಕಬ್ಬಿಣ ತಯಾರಿಸುವ ಕಲೆ ಪ್ರಾರಂಭಿಸಿರಬಹುದು. ಈ ಕಲೆ ಪ್ರಾರಂಭವಾದಾಗ ಇದಕ್ಕೆ "ಕಬ್ಬಿಣಯುಗ" ಎಂದು ಕರೆಯಲಾಯಿತು. ಜಗತ್ತಿನಾದ್ಯಂತ ಈ ಯುಗವು ಏಕ ಕಾಲದಲ್ಲಿ ಆರಂಭವಾಗಲಿಲ್ಲ. ಯುರೇಶಿಯಾದಲ್ಲಿ ಮೊದಲು ನಡೆದ

ಇದು ಕ್ರಮೇಣ ವಿಶ್ವದಲ್ಲೆಲ್ಲ ಹರಡಿತು. ಈ ತಂತ್ರ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದಲು ಪ್ರಕೃತಿಯಲ್ಲಿ ಹೇರಳವಾಗಿ ಅಡಗಿಕೊಂಡಿರುವ ಕಬ್ಬಿಣದ ನಿಕ್ಷೇಪಗಳೇ ಕಾರಣವಾದವು. ಈ ನಿಕ್ಷೇಪಗಳು ಹರಡಿರುವ ಸ್ಥಳಗಳ ಸುತ್ತಮುತ್ತ ಪ್ರದೇಶದಲ್ಲಿ ವಾಸವಾಗಿರುವ ಗುಡ್ಡ ಗಾಡು ಜನರೆ ಕಬ್ಬಿಣ ತಯಾರಿಕೆಗೆ ಮೂಲ ಕರ್ತೃಗಳು.[೩]

ಪ್ರಪಂಚದಲ್ಲಿಯೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದ ನಿಕ್ಷೇಪವನ್ನು ಹೊಂದಿರುವ ಪ್ರದೇಶ ಮಧ್ಯ ಪ್ರದೇಶವಾಗಿದೆ.[೪] ಪ್ರಾಚೀನ ಗಣಿಗಾರಿಕೆಯ ಮೇಲೆ ಇತ್ತೀಚೆಗೆ ನಡೆದ ಕೆಲವು ಸಂಶೋಧನೆಗಳಿಂದ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಅಂದರೆ ಪ್ರಾಚೀನ ಕಾಲದಲ್ಲಿ ಕಪ್ಪು, ಕೆಂಪು ಬಣ್ಣದ ಮಡಿಕೆಗಳನ್ನು ತಯಾರಿಸುವ ಜನವರ್ಗದವರು ಕಬ್ಬಿಣ ತಯಾರಿಸುವ ಕಲೆ ಬಲ್ಲವರಾಗಿದ್ದರು. ಈ ಜನರು ಸ್ಥಳ ಪರಿಶೀಲನೆ ಮಾಡಿ ಬಣ್ಣವನ್ನು ನೋಡಿ ಗಣಿ ಪ್ರದೇಶವನ್ನು ಆಯ್ಕೆ ಮಾಡುತ್ತಿದ್ದರು. ಇಂದಿಗೂ ಗಣಿಗಾರಿಕೆಯಲ್ಲಿ ಹೆಸರು ವಾಸಿಯಾದ ಈ ಅಗಾರಿಯಾ ಎಂಬ ಬುಡಕಟ್ಟು ಜನರೇ ಊದು ಕುಲುಮೆಗಳ ಮೂಲಕ ಅದಿರಿನಿಂದ ಕಬ್ಬಿಣವನ್ನು ತಯಾರಿಸುವ ಕಲೆಯನ್ನು ರೂಢಿಸಿಕೊಂಡು ಬಂದಿದ್ದಾರೆ ಹಾಗೂ ಇವರೇ ಈ ಕಲೆಯಲ್ಲಿ ಪ್ರಮುಖರಾದವರು.[೫]

ಪ್ರಾಚೀನ ಗಣಿಗಾರಿಕೆಯ ಮೇಲೆ ಇತ್ತೀಚೆಗೆ ನಡೆದ ಕೆಲವು ಸಂಶೋಧನೆಗಳಿಂದ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಸ್ಥಳ ಪರಿಶೀಲನೆ ಮಾಡಿ ಬಣ್ಣವನ್ನು ನೋಡಿ ಗಣಿ ಪ್ರದೇಶವನ್ನು ಆಯ್ಕೆ ಮಾಡುವ ಕಲೆ ಈ ಮಧ್ಯಭಾರತದ ಅಗಾರಿಯಾ ಎಂಬ ಜನರು ಇಂದಿಗೂ ರೂಢಿಸಿಕೊಂಡು ಬಂದಿದ್ದಾರೆ. ಅವರು ಕಂದು, ಕೆಂಪು ಅಥವಾ ಕಪ್ಪು ಅದಿರನ್ನಾಗಲಿ (ಹೆಮಟೈಟ್) ಇಲ್ಲವೆ ಕಾಂತಾಕರ್ಷಣೆಯುಳ್ಳ ಅಯಸ್ಸಿಂದೂರ ಅಥವಾ ಪುಡಿ (ಮ್ಯಗ್ನಟೈಟ್) ಕೂಡಿಸುತ್ತಿದ್ದುದು ಉಂಟು.

ಅದಿರಿನಿಂದ ಕಬ್ಬಿಣವನ್ನು ತಯಾರಿಸುವಾಗ, ಒಂದು ರೀತಿಯ ಒರಟು ಕುಲುಮೆಗಳನ್ನು ಬಳಸುತ್ತಿದ್ದರು. ಕಬ್ಬಿಣದ ಅದಿರನ್ನು ಇದ್ದಲಿನೊಡನೆ ಮಿಶ್ರ ಮಾಡಿ ಈ ರಾಶಿಯ ಮೂಲಕ ಗಾಳಿ ಬೀಸುವಂತೆ ತಳದಲ್ಲಿ ಒಂದು ರಂಧ್ರ ಮತ್ತು ಮೇಲ್ಭಾಗದಲ್ಲಿ ಇನ್ನೊಂದು ರಂಧ್ರವನ್ನಿಟ್ಟು ಅನಂತರ ಇದ್ದಲನ್ನು ಹೊತ್ತಿಸುತ್ತಿದ್ದರು. ಒಂದು ಭಾಗ ಇದ್ದಲು ಉರಿದು ಕಾರ್ಬನ್ ಮೊನೊಕ್ಸೈಡ್ ಆಗಿ, ಕಬ್ಬಿಣದ ಆಕ್ಸೈಡ್‌ನ್ನೂ ಕಬ್ಬಿಣವಾಗಿ ಅಪಕರ್ಷಿಸುತ್ತಿತ್ತು.[೬]

೫.೩. ಐದು ವರ್ಗದವರು (ಸ್ಥಾನದಯ್ಯುವರ್ಗದವರು)

ದಕ್ಷಿಣ ಭಾರತದಲ್ಲಿ ಈ ಮೊದಲು ವಾಸವಾಗಿದ್ದ ತಾಮ್ರ ತಯಾರಿಸುವ ಜನರೇ ಕಬ್ಬಿಣ ತಯಾರಿಕೆಯ ಕಾಯಕವನ್ನು ಮುಂದುವರಿಸಿಕೊಂಡು ಬಂದಂತೆ ಕಾಣುತ್ತದೆ.[೭] ಅಂದರೆ ಕ್ರಿ.ಶ.ಆರಂಭದ ವೇಳೆಗೆ ಶಕ್ತಿ ಸಂಪ್ರದಾಯ ಸ್ಪಷ್ಟವಾಗಿ ಗುರುತಿಸುವಷ್ಟು ಅಭಿವೃದ್ಧಿಯಲ್ಲಿದ್ದು, ಬುಡಕಟ್ಟು ಜನಾಂಗದವರು

ಇದರ ಆರಾಧಕರಾಗಿದ್ದರು. ವಿವಿಧ ವಸ್ತುಗಳನ್ನು ತಯಾರಿಸುವ ಕುಶಲಕರ್ಮಿಗಳಾದ ಇವರಲ್ಲಿ ಚಿನ್ನ ತಯಾರಿಸುವ ಅರ್ಕಸಾಲಿಗ, ಕಂಚು ತಯಾರಿಸುವ ಕಂಚುಗಾರ, ಕಬ್ಬಿಣ ತಯಾರಿಸುವ ಕಮ್ಮಾರ ಇವರು ಅದಿರಿನಿಂದ ಲೋಹವನ್ನು ಬೇರ್ಪಡಿಸುವ ತಂತ್ರಗಳು ಒಂದೇಯಾಗಿದ್ದರಿಂದ ಒಟ್ಟಾಗಿ ಕೆಲಸ ನಿರ್ವಹಿಸಲು ಪ್ರಾರಂಭಿಸಿದರು. ಈ ಲೋಹ ತಯಾರಿಕೆಯಲ್ಲಿ ಅವುಗಳ ಬಣ್ಣ ಬದಲಾಯಿಸಲು ಗಿಡ ಮೂಲಿಕೆಗಳನ್ನು ಉಪಯೋಗಿಸಲಾಗುತ್ತಿತ್ತು. ಅದರಲ್ಲಿ ತಜ್ಞನಾಗಿರುವ ಬಡಗಿ ಅವರೊಂದಿಗೆ ಕೂಡಿಕೊಂಡರೆ, ಇವರು ತಯಾರಿಸಿದ ಲೋಹದಿಂದ ವಿವಿಧ ವಸ್ತುಗಳನ್ನು ನಿರ್ಮಿಸುತ್ತಿದ್ದ ಶಿಲ್ಪಿಯೂ ಕೂಡ ಈ ಗುಂಪಿನಲ್ಲಿ ಒಬ್ಬಾದ. ಈ ರೀತಿಯಾಗಿ ಬೆಳೆದ ಐದು ವರ್ಗದವರು ಆರ್ಥಿಕವಾಗಿ ಪ್ರಬಲರಾಗುತ್ತ ಬಂದರು. ನಂತರ ರಾಜರ ಆಶ್ರಯ, ಜನರ ಮನ್ನಣೆ ದೊರೆತದ್ದರಿಂದ ಇವರು ಬುಡಕಟ್ಟು ಜನರಿಂದ ಪ್ರತ್ಯೇಕವಾಗಿ ಗುರುತಿಸಿಕೊಂಡರು.[೮] ಈ ಐದು ವಿಧವಾದ ವಸ್ತುಗಳನ್ನು ತಯಾರಿಸುವ ಕುಶಲಕರ್ಮಿಗಳು ತಮ್ಮ ಆಸುಪಾಸಿನಲ್ಲಿಯೇ ಸಿಗುವ ಪ್ರಕೃತಿದತ್ತವಾದ ಕಚ್ಚಾ ವಸ್ತುಗಳನ್ನೇ ತಮ್ಮ ಕೈಗಾರಿಕೆಯ ಮೂಲ ಸಾಮಾಗ್ರಿಯಾಗಿ ಬಳಸುತ್ತಿದ್ದರು.[೯]

ಕರ್ನಾಟಕದಲ್ಲಿ ಕಬ್ಬಿಣದ ನಿಕ್ಷೇಪಗಳನ್ನು ಹೊಂದಿದ ಸ್ಥಳಗಳಾದ ಹಳ್ಳೂರು, ಕೋಮಾರನಹಳ್ಳಿ, ಕುಡತಿನಿ ಮುಂತಾದ ನೆಲೆಗಳು ಕಬ್ಬಿಣ ತಯಾರಿಸುವ ಕಾರ್ಯಾಗಾರಗಳಾಗಿದ್ದವು. ಈ ಕಾರ್ಯಾಗಾರಗಳಲ್ಲಿ ಉತ್ಕೃಷ್ಟವಾದ ಕಬ್ಬಿಣದ ಉತ್ಪಾದನೆಯಾಗುತ್ತಿತ್ತು. ಆರಂಭದಲ್ಲಿ ಭಾರತಕ್ಕೆ ಬಂದ ಯುರೋಪಿನ ಪ್ರವಾಸಿಗರು ಕರ್ನಾಟಕದ ಕಮ್ಮಾರಿಕೆಯ ಬಗ್ಗೆ ಹೇಳುವಾಗ ಇಲ್ಲಿಯ ಜನರ ಕಮ್ಮಾರಿಕೆಯ ಕಲೆ ಪ್ರಪಂಚದಲ್ಲಿಯೇ ಭಿನ್ನವಾದುದಲ್ಲದೆ, ಇವರು ತಯಾರಿಸುವ ಕಬ್ಬಿಣ ಹೊಳಪಿನಿಂದ ಕೂಡಿದುದಲ್ಲದೆ ಬಹಳ ಉತ್ಕೃಷ್ಟವಾದದ್ದೆಂದು ಹೇಳುತ್ತಾರೆ. ಕುಡತಿನಿ, ಸಂಡೂರು ಬೆಟ್ಟಗಳ ಅದಿರಿನಿಂದ ತಯಾರಾದ ಕಬ್ಬಿಣ ಬಳ್ಳಾರಿ, ರಾಯಚೂರು ಪ್ರದೇಶಗಳಲ್ಲಿ ಬಳಕೆಯಲ್ಲಿತ್ತು. ಹಂಪಿ-ಗಂಗಾವತಿ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ದೊರೆತ ಕಬ್ಬಿಣದ ಉಪಕರಣಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ಅದು ಸಂಡೂರು ಕುಡತಿನಿ ಬೆಟ್ಟಗಳ ಅದಿರಿನಿಂದ (ಕ್ರಿ.ಪೂ.೧೦೦೦-೮೦೦ರಲ್ಲಿ) ತಯಾರಾದವೆಂದು ತಿಳಿದುಬಂದಿದೆ.[೧೦] ತಾಮ್ರ ಮತ್ತು ಕಬ್ಬಿಣ ಬೃಹತ್ ಶಿಲಾ ಸಂಸ್ಕೃತಿಯ ಕಾಲದಲ್ಲಿ ಬೆಳೆದ ಲೋಹ ತಂತ್ರಗಾರಿಕೆಗಳಾದ ಚಿನ್ನ, ತಾಮ್ರ ಹಾಗೂ ಕಬ್ಬಿಣ ತಯಾರಿಸುವ ವೃತ್ತಿಯವರೂ, ಇವುಗಳ ಬಣ್ಣ ಬದಲಾಯಿಸಲು ಹೊಳಪು ನೀಡಲು ಗಿಡ ಮೂಲಿಕೆಗಳನ್ನು ಉಪಯೋಗಿಸುತ್ತಿದ್ದುದರಿಂದ ಕಾಷ್ಠ ವೃತ್ತಿಯವರೂ, ಇವುಗಳಿಂದ ವಿವಿಧ ವಸ್ತುಗಳನ್ನು ನಿರ್ಮಿಸುವ ವೃತ್ತಿಯವರು ತಮ್ಮ ತಮ್ಮ ಕಾಯಕದಲ್ಲಿ ಪರಿಣಿತರಾಗಿದ್ದರು. ವೃತ್ತಿಗಳು ಒಂದನ್ನೊಂದು ಅವಲಂಬಿಸಿರುವುದರಿಂದ ಈ ಎಲ್ಲಾ ಗುಂಪಿನವರು ಒಂದಾಗಿ ಐದು ವರ್ಗದವರೆಂದು ಗುರುತಿಸಿಕೊಂಡರು. ಈ ವ್ಯವಸ್ಥೆಯನ್ನು ಕುಡತಿನಿಯ ಶಾಸನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.[೧೧] ಆದ್ದರಿಂದ ಇವರೈವರು ಒಂದು ಮತಸ್ತರು. ಜಾತಿಯವರು ಎಂದು ಹೇಳಬಹುದು.[೧೨]

ಕುಡತಿನಿಯ ಶಾಸನಗಳಲ್ಲಿ ಉಲ್ಲೇಖವಾದ ಸ್ಥಾನದಯ್ಯುವರ್ಗದವರು ಅಲ್ಲಿನ ಧರ್ಮಕ್ಕೂ, ಗ್ರಾಮಕ್ಕೂ ಮುಖ್ಯಸ್ಥರಾಗಿದ್ದರು. ಇವರು ತಮ್ಮನ್ನು ಕಾರ್ತಿಕೇಯ ಪಾದಪದ್ಮೋಪಜೀವಿಗಳೆಂದು ಕರೆದುಕೊಂಡಿದ್ದಾರೆ. ಧಾರ್ಮಿಕ ಕಾರ್ಯ, ದಾನದತ್ತಿ ಬಿಡುವುದು, ನ್ಯಾಯ ಬಗೆಹರಿಸುವುದು ಎಲ್ಲಾ ಪ್ರಮುಖ ಕಾರ್ಯಗಳು ಕಾರ್ತಿಕೇಯ ತಪೋವನದ ಅಧಿಪತಿಗಳ ಮತ್ತು ಸ್ಥಾನದಯ್ಯುವರ್ಗದವರ ಸಮ್ಮುಖದಲ್ಲಿ ನಡೆಯುತ್ತಿದ್ದವು. ಡಾ.ಅ.ಸುಂದರ ಅವರು ಈ ಸ್ಥಾನದಯ್ಯುವರ್ಗದವರು ವಿಶ್ವಕರ್ಮ ಪರಂಪರೆಯ ಪಾಂಚಾಳರು (ಕಲ್ಕುಟಿಗ, ಕಮ್ಮಾರ, ಅಕ್ಕಸಾಲಿಗ, ಕಂಚುಗಾರ, ಬಡಗಿ) ಆಗಿರಬಹುದು ಎಂದು ಹೇಳುತ್ತಾರೆ.[೧೩] ಈ ಪಾಂಚಾಳರು ಎಂಬ ಪದವು ಅಕ್ಕಸಾಲಿ, ಕಮ್ಮಾರ, ಬಡಗಿ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ವೃತ್ತಿಯವರನ್ನು ಕುರಿತು ಒಂದು ಜಾತಿ ಎಂಬ ಅರ್ಥದಲ್ಲಿ ಬಳಕೆಯಾಗಿರುವಂತಿದೆ. ಆದರೂ ಈ ಪಾಂಚಾಳರು ಎಂಬ ಜಾತಿಯನ್ನೇ ಒಂದು ಸಂಘ ಎಂಬ ಅರ್ಥದಲ್ಲಿ ತಿಳಿಯಬಹುದೆನಿಸುತ್ತದೆ. ಹಾಗೂ ಈ ಪರಿಭಾಷೆಗಳನ್ನು ಶಾಸನಗಳಲ್ಲಿ ಬಳಸಿರುವ ಸಂದರ್ಭಗಳನ್ನು ನೋಡಿ ಅದನ್ನು ಒಂದು ಶ್ರೇಣಿಯ ಅಥವಾ ಸಂಘದ ಹೆಸರು ಎಂದು ತಿಳಿಯಲಡ್ಡಿಯಿಲ್ಲ.[೧೪] ವಿಜಯನಗರದರಸರ ಕಾಲದಲ್ಲಿಯೂ ರೂವಾರಿಗಳ ಹಾಗೂ ಪಾಂಚಾಳ ಶ್ರೇಣಿಗಳಿದ್ದುದನ್ನು ಡಾ.ಎ.ವಿ.ವೆಂಕಟರತ್ನಂ ಚರ್ಚಿಸಿದ್ದಾರೆ. ಕುಶಲಕಲಾಕಾರರಾದ ಅಕ್ಕಸಾಲಿಗರು, ಕಮ್ಮಟದ ಆಚಾರಿಗಳು ಕಮ್ಮಾರರು, ಮರಗೆಲಸದವರು ಮತ್ತು ಕಲ್ಲು ಕೆಲಸದವರನ್ನೆಲ್ಲ ಒಟ್ಟಾಗಿ ವೀರ ಪಾಂಚಾಳರು ಎಂದು ಕರೆಯುತ್ತಿದ್ದರು. "ಪಂಚಹಣಂವರು", "ಪಂಚನಾನಂದರು", "ಪನಚನುಲು", "ಪಾಂಚಾಲರು" ಎಂಬುದಾಗಿ ಶಾಸನಗಳಲ್ಲಿ ಬರುವ ಪರಿಭಾಷೆಗಳು ಈ ಐದು ವಿಧವಾದ ಕುಶಲಕೆಲಸಗಾರರ ಶ್ರೇಣಿಯನ್ನು ಕುರಿತದ್ದಾಗಿವೆ. ಈ ವೀರ ಪಾಂಚಾಲರ ಶ್ರೇಣಿಯು ಒಮ್ಮೆ ತನ್ನ ಸದಸ್ಯರ ವೇತನಕ್ಕೆ ಸಂಬಂಧಿಸಿದ ವಿಷಯವನ್ನು ಸಮೂಹಿಕ ಒಪ್ಪಂದದಿಂದ ತೀರ್ಮಾನಿಸುತ್ತದೆ. ಕ್ರಿ.ಶ.೧೩೭೨ರ ಒಂದು ಶಾಸನವು ಸಮಸ್ತ ವೀರ ಪಾಂಚಾಲರು ಮನುವಂಶದ ಮೊದಲಿಗರು ಮತ್ತು ಹೋಲಿಸಲಸಾಧ್ಯವಾದಂಥ ಗುಣವುಳ್ಳವರು ಎಂದು ಮುಂತಾಗಿ ತೆರಕಣಾಂಬಿಯ ವೀರ ಪಾಂಚಾಲರ ವಿಷಯವಾಗಿ ತಿಳಿಸುತ್ತದೆ.[೧೫] ಈ ಪಾಂಚಾಳರು ಆದಿ ಶಕ್ತಿಯ ಆರಾಧಕರಾಗಿದ್ದರು. ಚೋಳ ಮಹಾರಾಜರಿಗೆ ಪುರೋಹಿತರಾಗಿದರೆಂದು ಹೇಳಿಕೊಳ್ಳುತ್ತಾರೆ.[೧೬] ಕಂಚಿಪುರಾಣದಲ್ಲಿ ಉಕ್ತವಾಗಿರುವ ಕಂಚುಗಾರನಾದ ಧರ್ಮಪಾಲ ಮತ್ತು ಮಕ್ಕಳ ಹಿರಿಮೆಯನ್ನು ಶ್ರೀ ಕಾಳಿಕಾದೇವಿಯು ಚೋಳನೃಪಾಲನಿಗೆ ಮನವರಿಕೆ ಮಾಡಿಕೊಡುವ ಸಂದರ್ಭದಲ್ಲಿ ಅವರು ಆಚಾರ ಪ್ರೌಡರೂ, ಪಂಚಾತ್ಮರೂ, ಪಂಚಬ್ರಹ್ಮರೂ ಆಗಿದ್ದು ಅವರು ಸೀಸಕ, ಕವಚ, ವಜ್ರಾಂಗಿ, ಕತ್ತಿ, ಬಲ್ಲೆಯ, ಈಟಿ, ನಾರಾಚ, ಅಂಬು ಮೊದಲಾದ ಆಯುಧಗಳನ್ನು ತಯಾರು ಮಾಡುವುದರಲ್ಲಿ ನಿಷ್ಣಾತರು ಎಂಬುದಾಗಿ ಹೇಳುತ್ತಾಳೆ. ಇದರಿಂದ ಪಂಚಕಾರುಕ ವೃತ್ತಿಯ ಪಂಚಾಳರು ಯುದ್ಧಕ್ಕೆ ಬೇಕಾದ ಶಿರಸ್ತ್ರಾಣಗಳು, ಕವಚಗಳು, ಅನೇಕ ವಿಧವಾದ ಆಯುಧಗಳನ್ನು ತಯಾರಿಸುತ್ತಿದ್ದರು ಎಂದು ತಿಳಿದು ಬರುತ್ತದೆ.[೧೭] ಆದ್ದರಿಂದಲೇ ಕರಿಕಾಲ ಚೋಳ

ಮಹಾರಾಜರುಕಾರ್ತಿಕೇಯ ತಪೋವನಕ್ಕೆ ಬಂದು ಅಲ್ಲಿ ತಪೋವನಾಧಿಪತಿಗಳಾಗಿದ್ದ ಋಷಿಗಳ ದರ್ಶನ ಪಡೆದುಕೊಂಡರೆಂದು ತಿಳಿದು ಬರುತ್ತದೆ.[೧೮]

ಈ ಕಾರ್ತಿಕೇಯ ತಪೋವನ ಪ್ರದೇಶದಲ್ಲಿ ಲೋಹ ಮತ್ತು ಕಟ್ಟಿಗೆಯ ಕೆಲಸಗಳು ಪ್ರಮುಖವಾದ ಕಾರಣ ಇಲ್ಲಿಯ ಸ್ಥಾನದಯ್ಯುವರ್ಗದವರು ವಿಶ್ವಕರ್ಮ ಪರಂಪರೆಯ ಪಾಂಚಾಳ ವರ್ಗದ ಕಮ್ಮಾರ, ಬಡಗಿ, ಅರ್ಕಸಾಲಿ, ಕಂಚುಗಾರ, ಶಿಲ್ಪಿಗಳಾಗಿದ್ದರು. ಈ ಧರ್ಮಕ್ಕೆ, ಗ್ರಾಮಕ್ಕೆ ಮತ್ತು ಕಬ್ಬಿಣ ಅದಿರನ್ನು ಹೊಂದಿದ ಪರ್ವತ ಪ್ರದೇಶಕ್ಕೆ ಪಾಂಚಾಳ ಕುಲದ ಜನಾಂಗದವರು ಮುಖಂಡರಾಗಿದ್ದರು ಎಂಬುದು ಕುಡತಿನಿಯ ಗ್ರಾಮದ ಶಾಸನಗಳಲ್ಲಿಯ "ಶ್ರೀ ಕರ್ಮಾರ ಕುಳಹ್ಮಯ ದ್ವಿಜವರ ಗ್ರಾಮಸ್ಕತ ಹಾಗೂ ಈ ಧರ್ಮಕ್ಕೆ ಸ್ಥಾನದಯ್ಯುವರ್ಗಮುಂ ವೊಡೆಯರಾಗಿ ಪ್ರತಿ ಪಾಳಿಸುವರು" 'ಬ್ರಹ್ಮಚಾರಿ ಮುಖ್ಯಸ್ಥಾನದಯ್ಯುವರ್ಗಗಳ್ದೇವರ' ಎಂಬ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.[೧೯]

೫.೪. ಕಾರ್ತಿಕೇಯ ತಪೋವನ ಒಂದು ಪ್ರಾಚೀನ ಲೋಹ(ಶಸ್ತ್ರಾಸ್ತ್ರ) ತಯಾರಿಕ ಕೇಂದ್ರ

ಸಂಡೂರು ತಾಲ್ಲೂಕಿನಲ್ಲಿರುವ ಇಂದಿನ ಕುಮಾರಸ್ವಾಮಿ ಬೆಟ್ಟವೇ ಅಂದಿನ ಕಾರ್ತಿಕೇಯವನವಾಗಿತ್ತೆಂಬುದು ಸ್ಥಳೀಯರ ಹೇಳಿಕೆ. ಈ ವಿಷಯದ ಬಗ್ಗೆ ಸಮೀಪದಲ್ಲಿರುವ ಕುಡತಿನಿಯ ಶಾಸನಗಳಲ್ಲಿ ಉಲ್ಲೇಖವಾದ 'ಕಾರ್ತಿಕೇಯ ತಪೋವನ'ವು ಆ ಸ್ಥಳವೇ ಎಂದು ಭಾವಿಸಲಾಗಿದೆ. ಆದರೆ ಪ್ರೊ.ಅ.ಸುಂದರರವರು ತಮ್ಮ ಅಧ್ಯಯನದಲ್ಲಿ[೨೦] ಕುಮಾರಸ್ವಾಮಿ ಬೆಟ್ಟವೇ 'ಕಾರ್ತಿಕೇಯವನ'ವೆಂದು ವಿಮರ್ಶಿಸಿದ್ದಾರೆ. ಶ್ರೀಮದ್ ರಾಮಾಯಣದ 'ಕಿಷ್ಕಿಂದಾಕಾಂಡ'ದಲ್ಲಿ ಕಾರ್ತಿಕೇಯ ವನವು ಅತ್ಯುತ್ತಮ ಶಸ್ತ್ರಗಳ ತಯಾರಿಕೆಯ ಸ್ಥಳವೆಂಬಂತೆ ಉಲ್ಲೇಖಿತವಾಗಿದೆ. ಶ್ರೀರಾಮ ಲಕ್ಷ್ಮಣರು ಕಿಷ್ಕಿಂದೆಗೆ ಹೋಗುವಾಗ ಮೊದಲು ಕಾರ್ತಿಕೇಯವನಕ್ಕೆ ಹೋಗಿ ಶ್ರೀ ಕಾರ್ತಿಕೇಯ ಸ್ವಾಮಿದರ್ಶನ ಮಾಡಬೇಕೆಂದು ಋಷಿಗಳೊಬ್ಬರು ಅವರಿಗೆ ತಿಳಿಸಿದರು. ಅದರಂತೆ ಅವರು ಕಾರ್ತಿಕೇಯ ಸ್ವಾಮಿಯ ದರ್ಶನ ಮಾಡಿದಾಗ, ದೇವತೆಯ ಸೇನಾನಿಯಾದ ಕಾರ್ತಿಕೇಯ ಸ್ವಾಮಿಯು, ಸೀತೆಯನ್ನು ಕದ್ದುಕೊಂಡು ಹೋದ ಲಂಕಾಧಿಪತಿ ರಾವಣನಲ್ಲಿ ಬಲವಾದ ಶ್ರೇಷ್ಠ ಮಟ್ಟದ ಶಸ್ತ್ರಗಳಿವೆ. ಶ್ರೀರಾಮನ ಬಳಿಯಿರುವ ಶಸ್ತ್ರಗಳು ಅವುಗಳಿಗೆ ಸಾಟಿಯಾಗಲಾರವು; ಆದ್ದರಿಂದ ಕಾರ್ತಿಕೇಯ ವನದಲ್ಲಿ ಶಸ್ತ್ರಗಳನ್ನು ಮಾಡಿಸಿಕೊಳ್ಳಬೇಕೆಂದು ಸೂಚನೆಯನ್ನು ಕೊಟ್ಟನು. ಮುಂದೆ ಸುಗ್ರೀವನು ಬಲಿಷ್ಠನಾದ ತನ್ನ ಅಣ್ಣನನ್ನು ಶ್ರೀರಾಮನು ಗೆಲ್ಲಲು ಸಾಧ್ಯವೆ ಎಂದು ಅನುಮಾನ ಪಟ್ಟಾಗ ರಾಮನು ಕಾರ್ತಿಕೇಯ ವನದಲ್ಲಿ ಸಿದ್ಧವಾದ ಶ್ರೇಷ್ಠಮಟ್ಟದ ಶಸ್ತ್ರಗಳು ತನ್ನ ಬಳಿ ಇವೆಯೆಂದು ಹೇಳುತ್ತಾನೆ. ಈ ವಿಷಯವನ್ನು ವಿಶ್ಲೇಷಿಸಿದಾಗ ರಾಮಾಯಣದ ಕಾವ್ಯ ರಚನೆಯಾಗುವ ಹೊತ್ತಿಗೆ ಕಾರ್ತಿಕೇಯ ವನವು ಉತ್ತಮ ಶಸ್ತ್ರಾಸ್ತ್ರಗಳ ತಯಾರಿಕೆಗೆ ಬಹಳಷ್ಟು ಪ್ರಸಿದ್ಧವಾಗಿರಬೇಕು. ಈ ವಿಷಯದ ಸತ್ಯಾಸತ್ಯತೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಶೀಲಿಸಬಹುದು. ಕಾರ್ತಿಕೇಯ ವನದ ಸುತ್ತಮುತ್ತಲಿನ ಪ್ರದೇಶವು ಅತ್ಯುತ್ತಮ

ದರ್ಜೆಯ ಕಬ್ಬಿಣದ ಅದಿರಿನ ಅಪರಿಮಿತ ನಿಕ್ಷೇಪಗಳಿಗೆ ಪ್ರಸಿದ್ಧ. ಈ ಪ್ರದೇಶದಲ್ಲಿ ಈಗಲೂ ಕೂಡ ದೊಡ್ಡ ಪ್ರಮಾಣದಲ್ಲಿ ಅದಿರನ್ನು ಸಂಗ್ರಹಿಸಲಾಗುತ್ತಿದೆ. ಈ ಪ್ರದೇಶದ ಸುತ್ತೇಲ್ಲ ಹಿರೇಬೆನಕಲ್ ಬ್ರಹ್ಮಗಿರಿ ಭಾಗದಲ್ಲಿ ಬೃಹತ್ ಶಿಲಾ ಸಂಸ್ಕೃತಿಯ ಗವಿವರ್ಣ ಚಿತ್ರಗಳಲ್ಲಿ ವಿವಿಧ ಕಬ್ಬಿಣದ ಆಯುಧಗಳನ್ನು ಹಿಡಿದಿರುವ ಕುದುರೆ ಸವಾರರ ಚಿತ್ರಗಳಿವೆ. ಉತ್ತರ ಕರ್ನಾಟಕದ ರಾಜೂರು (ರೋಣ. ತಾ) ಹಳ್ಳೂರು, ತಡಕನಹಳ್ಳಿ (ಧಾರವಾಡ.ಜಿ) ಹಳಿಂಗಳಿ (ಬಿಜಾಪುರ.ಜಿ) ಕೊಮಾರನಹಳ್ಳಿ (ದಾವಣಗೆರೆ ಜಿ.)ಗಳಲ್ಲಿಯ ಬೃಹತ್ ಶಿಲಾ ಸಂಸ್ಕೃತಿಯ ಕಬ್ಬಿಣದ ಆಯುಧಗಳು ಉತ್ತಮ ದರ್ಜೆಯ ಉಕ್ಕಿನವು ಇವುಗಳ ಕಾಲಮಾನ ಸು.ಕ್ರಿ.ಪೂ.೧೨೦೦-೮೦೦, ಆದ್ದರಿಂದ ಹಿರೇಬೆನಕಲ್, ಬ್ರಹ್ಮಗಿರಿ ಪ್ರದೇಶದಲ್ಲಿಯ ಇಂಥ ಕಲ್ಗೋರಿಗಳ ಕಬ್ಬಿಣ ಉಪಕರಣಗಳು, ಆಯುಧಗಳು ಕೂಡ ಉತ್ತಮ ಉಕ್ಕಿನವೆಂದು ಹೇಳಬಹುದು. ಭಾರತ ದೇಶವು ಇಡೀ ವಿಶ್ವದಲ್ಲೇ ಕನಿಷ್ಠ ಕ್ರಿ.ಪೂ.೨ನೆಯ ಸಹಸ್ರಮಾನದ ಕೊನೆಯ ಭಾಗದಿಂದ ೧೯ನೆಯ ಶತಮಾನದ ಮಧ್ಯದವರೆಗೂ ಶ್ರೇಷ್ಠ ಉಕ್ಕಿನ ಹಾಗೂ ಅದರ ಉಪಕರಣಗಳ ತಯಾರಿಕೆಗೆ ಪ್ರಸಿದ್ಧವಾಗಿತ್ತು.[೨೧]

ಚೋಳ ಮಹಾರಾಜರು ಋಷಿಗಳನ್ನು ಭೇಟಿಯಾಗಿ ಸ್ಥಳದ ಮಹಾತ್ಮೆಯನ್ನು ಅರಿತಿದ್ದು ಇಲ್ಲಿಯೇ. ಪ್ರಾಚೀನ ತಮಿಳು ಸಂಘಂ ಸಾಹಿತ್ಯದಲ್ಲಿ ಕರಿಕಾಲ ಚೋಳನ ಉಲ್ಲೇಖ ಬರುತ್ತವೆ. ಬಾಲ್ಯದಲ್ಲಿ ಅಗ್ನಿಯ ಅನಾಹುತಕ್ಕೊಳಗಾಗಿ ಅವನ ಕಾಲು ಸುಟ್ಟದ್ದರಿಂದ ಕರಿಕಾಲ ಚೋಳನೆಂದು ಹೆಸರಾದ ಈ ಸಾಹಿತ್ಯದಲ್ಲಿ ಮುಖ್ಯವಾಗಿ ಚೋಳ, ಚೇರ ಮತ್ತು ಪಾಂಡ್ಯ ಅರಸರ ಹೆಸರು, ಅವರ ಆಡಳಿತದ ಬಗ್ಗೆ ತಿಳಿದುಬರುತ್ತದೆ. ಸಂಘಂ ಯುಗವು ಕ್ರಿ.ಪೂ.೬ನೆಯ ಶತಮಾನದಲ್ಲಿ ಪ್ರಾರಂಭವಾಗಿ ಕ್ರಿ.ಶ.೬ನೆಯ ಶತಮಾನದಲ್ಲಿ ಕೊನೆಗೊಂಡಿತ್ತೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಯುಗವು ಕ್ರಿ.ಪೂ.೩ನೆಯ ಶತಮಾನದಿಂದ ಕ್ರಿ.ಶ.೩ನೆಯ ಶತಮಾನದ ಅವಧಿಯಲ್ಲಿತ್ತೆಂದು ಪ್ರೊ.ಎನ್. ಬಾಲಸುಬ್ರಹ್ಮಣ್ಯಂ ಅವರ ಅಭಿಪ್ರಾಯವಾದರೆ, ಕ್ರಿ.ಪೂ.೩ನೆಯ ಶತಮಾನದಿಂದ ಕ್ರಿ.ಶ.೧ನೆಯ ಶತಮಾನದ ಅವಧಿಯಲ್ಲಿತ್ತೆಂಬುದು ಪ್ರೊ.ಕೆ.ಎ.ನೀಲಕಂಠ ಶಾಸ್ತ್ರೀಯವರ ಅಭಿಪ್ರಾಯವಾಗಿದೆ. ಸಂಘಂ ಯುಗದಲ್ಲಿ ಪ್ರಸಿದ್ಧ ಅರಸನಾದ ಕರಿಕಾಲ ಚೋಳ ಮಹಾರಾಜನು ಕಾರ್ತಿಕೇಯ ತಪೋವನಕ್ಕೆ ಬಂದು ಅಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳನ್ನು ಭೇಟಿಯಾಗಿದ್ದರಿಂದ ಕಾರ್ತಿಕೇಯ ತಪೋವನವು ಕ್ರಿ.ಪೂ.೨ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಬೆಳೆದು ಬಂದಿತ್ತೆಂದು ತಿಳಿದು ಬರುತ್ತದೆ.[೨೨]

ಕೆಲವು ಶಾಸನಗಳಲ್ಲಿ ಕಾರ್ತಿಕೇಯ ತಪೋವನದ ಉಲ್ಲೇಖ ಬರುತ್ತದೆ. "ಶ್ರೀ ಸ್ವಾಮಿಕಾರ್ತಿಕೇಯ ದೇವರ ಮೊದಲ ಬಾಡ ಕೊಟ್ಟಿತಣಿ" ಶ್ರೀ ಸ್ವಾಮಿದೇವರ ಪಟ್ಟಣ" ಮತ್ತು ಕಾರ್ತಿಕೇಯನಪುರ ಕೊಟ್ಟಿತ್ತೊಣಿ ಎಂದು ಪ್ರಸಿದ್ಧಿ ಹೊಂದಿತ್ತು. "ಅಲ್ಲಿಯ ನೈಷ್ಠಿಕ ತಪೋದನರಾಹಾರಕ್ಕೆ ದಾನಕೊಟ್ಟ ಬಗ್ಗೆ. ಈ ಸ್ಥಾನಂ ನೈಷ್ಠಿಕ ತಪೋಧನರ ಸ್ಥಾನವಿಲ್ಲಿ" ಎಂದು ಶಾಸನಗಳು ಉಲ್ಲೇಖಿಸುತ್ತವೆ. ಈ

ಗ್ರಾಮದ ಶಾಸನಗಳು ತಪೋಧನರ ಹೆಸರನ್ನು ಹೇಳುವಾಗ "ಶ್ರೀಸ್ವಾಮಿ ಕಾರ್ತಿಕೇಯ ತಪೋವನಾಧಿಪತಿಗಳೆಂದು ಉಲ್ಲೇಖಿಸುತ್ತವೆ. ಆದರೆ ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿಯ ಶಾಸನದಲ್ಲಿ ಕಾರ್ತಿಕೇಯ ತಪೋವನಾಧಿಪತಿ ಎಂದು ಹೇಳದೆ ಕೇವಲ ವಿಷ್ಣುಕರ ಬ್ರಹ್ಮಚಾರಿ ಎಂದಷ್ಟೇ ಉಲ್ಲೇಖವಿದೆ. ಈ ಮೇಲಿನ ಎಲ್ಲ ಆಧಾರಗಳಿಂದ ಶ್ರೀಸ್ವಾಮಿ ಕಾರ್ತಿಕೇಯ ತಪೋವನ ಕುಡತಿನಿಯಾಗಿದ್ದು ಸಂಡೂರು ಕುಮಾರಸ್ವಾಮಿ ಬೆಟ್ಟ ಅಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ರಾಮಾಯಣದಲ್ಲಿಯ ಉಲ್ಲೇಖದಂತೆ, ಕುಮಾರಸ್ವಾಮಿ ಬೆಟ್ಟದಿಂದ ಸುಮಾರು ೨೦ ಕಿ.ಮೀ. ಈಶಾನ್ಯಕ್ಕಿರುವ ಕುಡತಿನಿಯಲ್ಲಿಯೂ 'ಕಾರ್ತಿಕೇಯ ತಪೋವನ ಎಂಬ ಉಲ್ಲೇಖವು ಅಲ್ಲಿಯ ೧೦ ರಿಂದ ೧೩ನೆಯ ಶತಮಾನದ ಒಂಭತ್ತು ಶಾಸನಗಳಲ್ಲಿವೆ. ಮತ್ತು ಇಲ್ಲಿ ೧೦ನೆಯ ಶತಮಾನದ ಕುಮಾರಸ್ವಾಮಿ ದೇವಾಲಯವೂ ಇದೆ. ಸ್ಥಳೀಯ ಕಥೆಯ ಪ್ರಕಾರ ಕಾರ್ತಿಕೇಯನು ನೆಲೆಸಿದ ಸ್ಥಳ 'ಲೋಹಾಚಲ'ವೆಂದು ಹೇಳಿದೆ. ಈ ಲೋಹಾಚಲವೇ ಕುಮಾರಸ್ವಾಮಿಬೆಟ್ಟವೆಂದು ಗುರುತಿಸಬಹುದು. ಈ ಬೆಟ್ಟದ ಮೇಲೆಯೇ ಕುಮಾರಸ್ವಾಮಿ, ಪಾರ್ವತಿ, ಶಿವ ದೇವಾಲಯಗಳಿವೆ. ಇವೂ ಕೂಡ ೮-೧೦ನೆಯ ಶತಮಾನದವು. 'ಕಾರ್ತಿಕೇಯದೇವ ತಪೋವನ' ಎಂಬ ಸ್ಥಳವನ್ನು ಗುರುತಿಸುವಲ್ಲಿ ಕುಡತಿನಿಯ ಎಂಟು ಶಾಸನಗಳಲ್ಲಿಯ ಕೆಲವೊಂದು ಅಂಶಗಳು ಗಮನಾರ್ಹ ಏಕೆಂದರೆ ಇವುಗಳಲ್ಲಿ ಕಾರ್ತಿಕೇಯ ತಪೋವನದ ಉಲ್ಲೇಖವಿದೆ.[೨೩]

೫.೫. ಕಾರ್ತಿಕೇಯ ತಪೋವನ-ಅಧಿಪತಿಗಳು

ಕಾರ್ತಿಕೇಯ ತಪೋವನದ ಅಧಿಪತಿಗಳ ಪರಂಪರೆ ಇತಿಹಾಸ ಪೂರ್ವ ಕಾಲದಿಂದಲೂ ಅಭಿವೃದ್ಧಿಯಲ್ಲಿದ್ದರೂ ಕೂಡ ಇವರುಗಳ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ನಮಗೆ ಲಭಿಸುವುದು ರಾಷ್ಟ್ರಕೂಟರ ಕಾಲದಿಂದ. ಕಾರ್ತಿಕೇಯ ತಪೋವನಾಧಿಪತಿ ಮಹಾಮುನಿಯಂನ ನಂತರ ಈ ತಪೋವನಕ್ಕೆ ಅಧಿಪತಿಯಾಗಿ ಗದಾಧರಯ್ಯ ಬ್ರಹ್ಮಚಾರಿ ಅಧಿಕಾರವಹಿಸಿಕೊಂಡನು ಎಂದು ತಿಳಿದುಬರುತ್ತದೆ. ಇವನು ಗೌಡ ದೇಶದಿಂದ ಬಂದವನು. ತಡಾ ಎನ್ನುವ ಗ್ರಾಮದಲ್ಲಿ ಜನಿಸಿದವನು ಎಂದು ತಿಳಿದುಬರುತ್ತದೆ. ಇದರಿಂದ ವ್ಯಕ್ತವಾಗುವುದೇನೆಂದರೆ ಇವನು ಉತ್ತರದ ಕಡೆಯವನು ಎಂಬುದು. ಈತನು ಉತ್ತರ ಭಾರತದ ಕಡೆಯಿಂದ ಬಂದು, ದಕ್ಷಿಣ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೊಳಗಲ್ಲಲ್ಲಿ ಮೊದಲು ನೆಲೆಸಿ ನಂತರ ಕುಡತಿನಿ ಗ್ರಾಮಕ್ಕೆ ಬಂದು ನೆಲೆಸಿದನೆಂದು ತಿಳಿದುಬರುತ್ತದೆ. ಲೋಹಾಸನಿ, ದಂಡಾಸನಿ ಗದಾಧರನು ಕಾರ್ತಿಕೇಯ ಪಾದಪದ್ಮೋಪ ಜೀವಿಯಾಗಿದ್ದು, ಮೊದಲು ಕೊಳಗಲ್ಲು ನಂತರ ಕುಡತಿನಿ ಗ್ರಾಮಗಳಲ್ಲಿ ಸ್ಕಂದನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದನು.[೨೪]

ಸೂರ್ಯನಿಗೆ ಉಷಾ ಮತ್ತು ಸರನ್ಯೂ ಎಂಬ ಇಬ್ಬರು ಪತ್ನಿಯರು. ಭವಿಷತ್ ಪುರಾಣದ ಪ್ರಕಾರ ಸೂರ್ಯನ ಮತ್ತೊಬ್ಬ ಪತ್ನಿಯಾದ ಸರನ್ಯೂ ವಿಶ್ವಕರ್ಮನ ಅಥವಾ ತ್ವಷ್ಟನ ಮಗಳೆಂದು ಉಲ್ಲೇಖವಿದೆ.

ಮಾರ್ಕಂಡೇಯ ಪುರಾಣದ ಪ್ರಕಾರ, ಸೂರ್ಯನ ಶಾಖ ಜಗತ್ತಿನಾದ್ಯಂತ ಹರಡಿದಾಗ ಸೃಷ್ಟಿಕರ್ತನಾದ ವಿಶ್ವಕರ್ಮನು ಆ ಶಾಖದಲ್ಲಿ ಒಂದು ಭಾಗವನ್ನು ತೆಗೆದುಕೊಂಡು ಅದರಿಂದ ಆಯುಧ ತಯಾರಿಸಿ ಕಾರ್ತಿಕೇಯನಿಗೆ ಕೊಡುತ್ತಾನೆ. ಕಾರ್ತಿಕೇಯನ ಆಯುಧಗಳಲ್ಲಿ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದು ಶಕ್ತ್ಯಾಯುಧವಾಗಿದೆ. ಅಲ್ಲದೆ ಕಾರ್ತಿಕೇಯನ ಆಸನ ಸೂರ್ಯನ ಹತ್ತಿರವಿತ್ತೆಂದು ಭವಿಷತ್ ಪುರಾಣದಲ್ಲಿದೆ.[೨೫]

ಆದರೆ ಲೋಹಾಸನಕ್ಕೆ ಸಂಬಂಧಿಸಿದ ಕಥೆಯ ಪ್ರಕಾರ, ಕಮ್ಮಾರನು ಸೂರ್ಯನಿಂದ ಶಾಖ ತೆಗೆದುಕೊಂಡು ಲೋಹದಿಂದ ಲೋಹೇಶ್ವರ (ಲೋಹಕ್ಕೆ ಒಡೆಯ)ನಿಗೆ ಆಸನ ಮಾಡಲು ಪ್ರಾರಂಭಿಸುತ್ತಾನೆ. ಈ ಆಸನ ಸರಿಯಾಗಿ ಹೊಂದದೇ ಇರುವುದಕ್ಕೆ ಚಿಂತಾಗ್ರಸ್ತನಾಗಿದ್ದಾಗ, ಆ ದಿನ ರಾತ್ರಿ ಲೋಹೇಶ್ವರನು ಕನಸಿನಲ್ಲಿ ಬಂದು ಆಸನ ಮಾಡುವ ಬಗೆ ಮತ್ತು ಅದರ ಲಕ್ಷಣಗಳನ್ನು ಹೇಳುತ್ತಾನೆ. ಮರುದಿವಸ ಆತನ ಹೇಳಿಕೆಯ ಪ್ರಕಾರ ಆಸನ ನಿರ್ಮಿಸಿದಾಗ ಒಂದು ಸರಿಯಾಗುತ್ತದೆ. ಕಾರ್ತಿಕೇಯ ತಪೋವನದ ಅಧಿಪತಿಗಳು ತಮ್ಮನ್ನು ಕರೆದುಕೊಳ್ಳುವಾಗ ಲೋಹಾಸನಿ, ದಂಡಾಸನಿ ಎಂದು ಗುರುತಿಸಿಕೊಂಡಿದ್ದಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ ಲೋಹಾಸನಿ, ದಂಡಾಸನಿ ಎನ್ನುವುದು ಲೋಹ ತಂತ್ರಗಾರಿಕೆ ಮತ್ತು ಕಟ್ಟಿಗೆಯ ಕೆಲಸಗಳಿಗೆ ಮುಖಂಡತ್ವವನ್ನು ಸೂಚಿಸುತ್ತದೆ. ಈ ಪ್ರದೇಶದ ಬೆಟ್ಟದಾದಿಯಲ್ಲಿ ಹರಡಿರುವ ಕಬ್ಬಿಣದ ಅದಿರು ಲೋಹದ ಕೆಲಸಕ್ಕೆ ಮತ್ತು ಕಾಡು ಕಟ್ಟಿಗೆಯ ಕೆಲಸಕ್ಕೆ ಅನುಕೂಲವಾಗಿದ್ದವು. ಹೀಗಾಗಿ ಇಲ್ಲಿ ಈ ಎರಡೂ ಕಾರ್ಯಗಳು ಅತಿ ಪ್ರಾಚೀನ ಕಾಲದಿಂದಲೂ ಅಭಿವೃದ್ಧಿಯಲ್ಲಿದ್ದದ್ದು ಸ್ಪಷ್ಟವಾಗುತ್ತದೆ. ಕಾಷ್ಠ ಮತ್ತು ಲೋಹ ಮುಂತಾದ ಕಾರ್ಯಗಳನ್ನು ನಿರ್ವಹಿಸುವಂತವರ ಆಹಾರಕ್ಕಾಗಿ ಭೂದಾನ ಬಿಡಲಾಗಿತ್ತೆಂದು ಕುಡತಿನಿಯ ಒಂದು ಶಾಸನದಲ್ಲಿ ಈ ಬಗ್ಗೆ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಆದರೆ ಈಗ ಈ ಶಾಸನ ಬಹಳ ತೃಟಿತವಾಗಿದ್ದು, ಬರವಣಿಗೆ, ಭಾಷೆಗಳಿಂದ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ್ದಾಗಿದೆ.[೨೬]

ಸಂಡೂರು ಸುತ್ತಮುತ್ತಲ ಶಾಸನಗಳಲ್ಲಿ ಅನೇಕ ಯತಿಗಳ (ಮುನಿಗಳ) ಉಲ್ಲೇಖವಿರುವುದನ್ನು ಕಾಣುತ್ತೇವೆ. ಕ್ರಿ.ಶ.೯೬೬ ರಿಂದ ಕ್ರಿ.ಶ.೧೨೧೮ರವರೆಗೆ ಸಂಡೂರು ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಯತಿಗಳ ಪರಂಪರೆಯನ್ನು ಈ ರೀತಿಯಾಗಿ ಕಾಣುತ್ತೇವೆ.

ಶಕ - ೯೬೬ - ಗಧಾದರರಸ

ಶಕ - ೧೨೦೭ - (೧೨೦೬) ವಿಷ್ಣುಕರ ಬ್ರಹ್ಮಚಾರಿ, ಲೋಹಾಸನಿ ದಂಡಾಸನಿ

ಶಕ - ೧೨೧೮ - ಉದಯಾಕರದೇವ ಬ್ರಹ್ಮಚಾರಿ[೨೭]

ಕ್ರಿ.ಶ.೧೨೧೮ರವರೆಗೆ ಮಾತ್ರ ಈ ಮುನಿ ಪರಂಪರೆ ಇದ್ದ ಬಗ್ಗೆ ಶಾಸನಾಧಾರಗಳಿಂದ ತಿಳಿದುಬರುತ್ತದೆ. ಆದರೆ ಮುಂದೆ ಈ ಯತಿಗಳ ಪರಂಪರೆ ಶಾಸನಗಳಲ್ಲಿ ಕಂಡುಬರುವುದಿಲ್ಲ.*

೫.೬. ಕಾರ್ತಿಕೇಯ - ಒಂದು ಪುರಾತನ ದೇವತೆ

ಪುರಾಣ ಕಾಲದಿಂದಲೂ ಪ್ರಸಿದ್ಧವಾದ ಸ್ಕಂದಪುರಿ ಕ್ಷೇತ್ರವೇ ಇಂದಿನ ಸಂಡೂರು ನಗರ. ಈ ಸ್ಕಂದಪುರಕ್ಕೆ ಸುತ್ತಲೂ ಲೋಹ ಪರ್ವತಗಳ ಕೋಟೆ ಇದ್ದಿತು.* ಈಗಲೂ ಈ ಪರ್ವತಗಳಿವೆ. ಈ ಸ್ಕಂದಪುರದ ದೇವತೆಯಾದ ಕುಮಾರಸ್ವಾಮಿಯು ಐತಿಹಾಸಿಕವಾಗಿ ಪ್ರಾಚೀನ ದೇವತೆಯಾಗಿದ್ದು, ಈ ದೇವತೆ ಉತ್ತರ ಭಾರತದಲ್ಲಿ ನಾನಾ ಕಡೆ ಪ್ರಖ್ಯಾತಿ ಪಡೆದಿದೆ. ದಕ್ಷಿಣ ಭಾರತದ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿಯೂ ಈ ದೇವರು ಪ್ರಖ್ಯಾತಿಯನ್ನು ಹೊಂದಿರುವುದು ಒಂದು ವಿಶೇಷವಾಗಿದೆ. ನವಿಲು ವಾಹನನಾದ ಕಾರ್ತಿಕೇಯಸ್ವಾಮಿಯ ಮಂದಿರಗಳು ಹೆಚ್ಚು ಶಿಖರದ ತುದಿಗಳಲ್ಲೇ ಇರುವುದು ಕಂಡುಬರುತ್ತವೆ. ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯವೂ ಸಹ ಬೆಟ್ಟದ ಮೇಲೆ ಇರುವುದು ಗಮನಾರ್ಹ. ಕಾಕತಾಳೀಯವೊ ಎಂಬಂತೆ ಈ ಪ್ರದೇಶದಲ್ಲಿ ನವಿಲುಗಳು (ಕಾರ್ತಿಕೇಯನ ವಾಹನ ನವಿಲು) ಹೆಚ್ಚಾಗಿ ವಾಸಿಸುತ್ತಿವೆ.

ಚಂದ್ರಮಾನ ಮಾಸದ ೬ನೇ ದಿನ ಅಂದರೆ ಷಷ್ಠಿಯ ದಿನವು ಈತನಿಗೆ ಪವಿತ್ರವಾದ ದಿನವೆಂದು ಪರಿಗಣಿಸಲಾಗಿದೆ.[೨೮] ಈ ದಿನವೇ ಈತನು ದೇವತೆಗಳಲ್ಲಿ ಶ್ರೇಷ್ಠನೆನಿಸಿದ ಇಂದ್ರನು ಸೂಚಿಸಿದ ದಕ್ಷಬ್ರಹ್ಮನ ಮಗಳಾದ ದೇವ ಸೇನೆಯನ್ನು ಷಷ್ಠಿಯ ದಿನದಂದು ಮದುವೆಯಾದನು. ಈ ದಿನವನ್ನೇ 'ಸ್ಕಂದಷಷ್ಠಿ' ಎನ್ನುವರು. ಸಂಡೂರಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದಲ್ಲಿಯೂ ಪ್ರತಿವರ್ಷ ಸ್ಕಂದಷಷ್ಠಿಯನ್ನು ಆಚರಿಸಲಾಗುತ್ತದೆ. ಅಲ್ಲದೆ ಪ್ರತಿ ಐದು ವರ್ಷಕ್ಕೆ ಎರಡು ಬಾರಿ ಜಾತ್ರೆಯಾಗುತ್ತದೆ. ಈ ಸಂದರ್ಭದಲ್ಲಿ ಸಾವಿರಾರು ಭಕ್ತಾದಿಗಳು ಬೇರೆ ಬೇರೆ ಪ್ರದೇಶಗಳಿಂದ, ರಾಜ್ಯಗಳಿಂದ ಬರುವುದನ್ನು ಗಮನಿಸಿದರೆ ಈ ದೇವಾಲಯ ತುಂಬಾ ಪ್ರಾಚೀನ ಕಾಲದಿಂದಲೇ ಪ್ರಸಿದ್ಧಿಯನ್ನು ಪಡೆದಿತ್ತೆಂದು ತಿಳಿಯುತ್ತದೆ.

ಬೇರೆ ಪ್ರದೇಶಗಳಲ್ಲಿ ಕುಮಾರಸ್ವಾಮಿಯನ್ನು ಹೆಂಗಸರು ಪೂಜಿಸುವುದನ್ನು ಕಾಣುತ್ತೇವೆ. ಆದರೆ ಇಲ್ಲಿಯ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯವನ್ನು, ಕುಮಾರಸ್ವಾಮಿಯ ಶಾಪದಿಂದಾಗಿ ಯಾವ ಹೆಂಗಸರು ಪ್ರವೇಶಿಸುವಂತಿರಲಿಲ್ಲ. ಕಾರಣ ಇದಕ್ಕೆ ಒಂದು ಸುಂದರವಾದ ದಂತಕಥೆ ಹೀಗಿದೆ

---

*ಈ ಮುನಿ ಪರಂಪರೆಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಕುಡತಿನಿಯ ಶಾಸನಗಳಲ್ಲಿ ಕಾಣಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಗಾಗಿ ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು ಎಂ.ಫಿಲ್.ಅಪ್ರಕಟಿತ ಸಂಪ್ರಬಂಧದ ಪು.೧೧೫ ಅನ್ನು ನೋಡಿ.

* ಇಂದಿಗೂ ಸಂಡೂರು ತಾಲ್ಲೂಕು ಲೋಹ ಪರ್ವತವನ್ನಾವರಿಸಿಕೊಂಡ ಕೋಟೆಯಂತೆಯೇ ಕಾಣುತ್ತದೆ.

: ಯೌವನಕ್ಕೆ ಬಂದ ಕುಮಾರನಿಗೆ ಮದುವೆ ಮಾಡಲು ತಾಯಿಯಾದ ಪಾರ್ವತಿ ದೇವಿಯು ಕನ್ನೆಯರಿಗಾಗಿ ಹುಡುಕಾಟ ಪ್ರಾರಂಭಿಸಿದಳು. ದಕ್ಷಿಣ ದೇಶದ ಕನ್ಯಾಕುಮಾರಿಯನ್ನು ನೋಡಿ ಬಂದು ಮಗನಿಗೆ ತಿಳಿಸಿ, ಮದುವೆಗೆ ಅವನ ಮನ ಒಲಿಸಲು ಯತ್ನಿಸಿದಳು. ಮಗನಾದ ಕುಮಾರನು ಪಾರ್ವತಿದೇವಿಯನ್ನು ಕೇಳಿದ ಕನ್ಯೆ ಹೇಗಿದ್ದಾಳೆ? ಎಂದು. ಆಗ ಪಾರ್ವತಿದೇವಿ ಹೇಳಿದಳು "ಆ ಕನ್ಯೆ, ರೂಪದಲ್ಲಿ ನನ್ನಂತೆ ಇದ್ದಾಳೆ" ಎಂದು. ಅದಕ್ಕೆ ಕುಮಾರನು ಹೇಳುತ್ತಾನೆ ಅವಳು ರೂಪದಲ್ಲಿ ನಿನ್ನಂತೆಯೇ ಇದ್ದರೆ ಆಕೆ ನನಗೆ ತಾಯಿಯ ಸಮಾನಳಾದಂತೆ ಅದಕ್ಕೆ ನನಗೆ ಮದುವೆಯೇ ಬೇಡ ಎಂದು ಹಠ ಹಿಡಿದನು. ಆಗ ಪಾರ್ವತಿ ದೇವಿಯು ನಾನು ಹೆತ್ತು-ಹೊತ್ತು ಹಾಲು ಕುಡಿಸಿ ಸಾಕಿ ಸಲಹಿ ದೊಡ್ಡವನನ್ನು ಮಾಡಿದ್ದಕ್ಕೆ ನೀನು ನನಗೆ ಕೊಡುವ ಪ್ರತಿಫಲ ಇದೇ ಏನು? ಎಂದು ಕೇಳಿದಳು. ಅದಕ್ಕೆ ಕುಮಾರನು ಹೇಳಿದ, ತಾಯಿ ನನಗೆ ನಿನ್ನ ಹಂಗು ಬೇಡ ತೆಗೆದುಕೋ ನೀನು ಕೊಟ್ಟ ಹಾಲನ್ನು" ಎಂದು ಕಾರಿಕೊಂಡನು. ಆಗ ಹಾಲಿನ ಜೊತೆಗೆ ರಕ್ತವೂ ಹೊರಬಿದ್ದಿತು. ಆ ಹಾಲಿನ ಭಾಗವೆಲ್ಲ ವಿಭೂತಿಯ ಕಣ್ಣೆಯಾಯಿತು. ಅಂದರೆ ವಿಭೂತಿಯ ಗಟ್ಟಿಯಾಯಿತು. ರಕ್ತದ ಭಾಗವೆಲ್ಲವೂ ಜಾಜಿಕಣ್ಣೆ (ಗಟ್ಟಿ)ಯಾಯಿತು. ಈಗಲೂ ಕುಮಾರಸ್ವಾಮಿಯ ಬೆಟ್ಟದಲ್ಲಿ ಇಂಥ ಕೆಲವು ಭಾಗಗಳಿರುವುದನ್ನು ಕಾಣಬಹುದು. ಅಲ್ಲಿನ ಗುಡಿಯ ನೆಲದಲ್ಲಿ ಸಿಕ್ಕ ಇಂತಹ ನಯವಾದ ಬಿಳಿ ಕಣ್ಣೆಯನ್ನೇ ವಿಭೂತಿಯಾಗಿ ಸ್ಥಳೀಯರು ಇಂದಿಗೂ ಬಳಸುತ್ತಾರೆ.

ಹೀಗೆ ಕುಮಾರಸ್ವಾಮಿ ಮಹಿಳೆಯರಿಗೆ ತನ್ನ ದರ್ಶನ ನಿಷಿದ್ಧವಾಗಲಿ ಎಂದು ಶಾಪವಿತ್ತನು. ಇದರಿಂದ ಮರುಗಿದ ಪಾರ್ವತಿದೇವಿ ಅಬಲೆಯರಿಗಾದರೂ ನಿನ್ನ ದರ್ಶನ ದೊರಕುವಂತೆ ಉಪಾಯ ಮಾಡಬೇಕೆಂದು ಕೇಳಿಕೊಂಡಾಗ ಮಹಿಳೆಯರಿಗೆ ದರ್ಶನ ನೀಡುವ ಸಲುವಾಗಿ ಕುಮಾರಸ್ವಾಮಿಯೇ, ನವಿಲುಸ್ವಾಮಿಯಾಗಿ, ಕುಮಾರಸ್ವಾಮಿ ದೇವಾಲಯದಿಂದ ಸು.೩.ಕಿ.ಮೀ. ದೂರದ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಾನೆ* ಎಂಬ ಪ್ರತೀತಿಯೂ ಇದೆ. ಆದರೆ ಕಾಲ ಬದಲಾದಂತೆ ಸುಶಿಕ್ಷಿತ ಜನರು ಕುಮಾರಸ್ವಾಮಿಯ ದರ್ಶನ ಪಡೆದ ಮಹಿಳೆಯರು ಜೀವಂತ ಇರಲಾರರು ಎಂಬ ತಪ್ಪು ಕಲ್ಪನೆಯಿಂದ ಮುಕ್ತರಾಗಿ ಇತ್ತೀಚಿನ ದಿನಗಳಲ್ಲಿ ಅವರು ಸಹ ಕುಮಾರಸ್ವಾಮಿಯ ದರ್ಶನ ಪಡೆಯುತ್ತಿದ್ದಾರೆ.

ಕುಮಾರಸ್ವಾಮಿಯು ಸೂರ್ಯ ದೇವತೆಯ ಪ್ರತೀಕವೆಂದೂ ಕುಕ್ಕುಟವು(ಕೋಳಿ) ಸೂರ್ಯ ಪಕ್ಷಿ ಎಂದೂ ಕರೆಯುವುದುಂಟು. ಕುಮಾರಸ್ವಾಮಿಯು ಈ ಕುಕ್ಕುಟವನ್ನು ಧ್ವಜವನ್ನಾಗಿ ಮಾಡಿಕೊಂಡಿರುವನು. ಈತನು ಸ್ವರೂಪದಲ್ಲಿ ಕೌಮರ್ಯವೇ ಇವನ ಲಕ್ಷಣವಾದ್ದರಿಂದ 'ಬಾಲನ್' ಕುಮಾರ ಎಂದು ಕರೆದರು.[೨೯]

---

*ಕುಮಾರಸ್ವಾಮಿ ದೇವಾಲಯಕ್ಕೂ, ನವಿಲುಸ್ವಾಮಿ ದೇವಾಲಯಕ್ಕೂ ೩ ಕಿ.ಮೀ.ಅಂತರವಿದೆ. ಈ ಕುಮಾರಸ್ವಾಮಿ ದೇವಾಲಯದಲ್ಲಿ ಮಹಿಳೆಯರಿಗೆ ತನ್ನ ದರ್ಶನ ನಿಷಿದ್ಧವಿರುವುದರಿಂದ, ಕುಮಾರಸ್ವಾಮಿಯೇ ಅಲ್ಲಿ ನವಿಲುಸ್ವಾಮಿಯಾಗಿ ಕಾಣಿಸಿಕೊಳ್ಳುತ್ತಾನೆ. ಅಲ್ಲಿ ಸ್ತ್ರೀಯರು ನವಿಲುಸ್ವಾಮಿಯನ್ನು ಮೊದಲಿನಿಂದಲೂ ಪೂಜಿಸುತ್ತಿರುವುದು ವಿಶೇಷ.

ಈ ಕುಮಾರಸ್ವಾಮಿಯು ವೇದಗಳ ಕಾಲದಿಂದಲೂ ಹಲವು ನಾಮಾವಳಿಗಳನ್ನು ಪಡೆದು ಪ್ರಸಿದ್ಧನಾಗುತ್ತ ಬಂದಿರುವುದನ್ನು ನಾವು ಕಾಣುತ್ತೇವೆ. ಈ ಪ್ರಸಿದ್ಧಿಯೇ ಮುಂದೆ ಮಹಾಕಾವ್ಯಗಳಲ್ಲೂ ವಿವಿಧ ಕಥೆಗಳ ರೂಪದಲ್ಲಿ ಮುಂದುವರೆದಿದೆ ಎಂದರೆ ತಪ್ಪಾಗದು.[೩೦]

ಆಗಮಗಳಲ್ಲಿ ಕುಮಾರಸ್ವಾಮಿಯ ಲಕ್ಷಣಗಳನ್ನು, ಪೂಜಾ ಕ್ರಮಗಳ ವಿವರವಿರುವುದನ್ನು ಕಾಣುತ್ತೇವೆ. ಅವು ಕಾಮಿಕಾಗಮ, ಪೂರ್ವ ಕಾಮಿಕಾಗಮ ಮತ್ತು ಸುಪ್ರಭೇದಾಗಮಗಳು. ಕುಮಾರ ತಂತ್ರ ಮತ್ತು ಶ್ರೀತತ್ವನಿಧಿಗಳಲ್ಲಿ ಕುಮಾರಸ್ವಾಮಿಯ ಹಲವು ನಾಮಗಳಿರುವುದನ್ನು ನೋಡುತ್ತೇವೆ.[೩೧] ಅಷ್ಟೇ ಅಲ್ಲದೆ ಈ ಕುರಿತು ಕ್ರಿ.ಶ.೧ನೆಯ ಶತಮಾನದಿಂದ ೫ನೆಯ ಶತಮಾನಗಳ ಮಧ್ಯದಲ್ಲಿ ದೊರೆಯುವ ಉಲ್ಲೇಖಗಳ ಪ್ರಕಾರ ಈತನ ಕುರಿತು ಹಲವಾರು ಶಿಲಾ ಶಾಸನಗಳಿರುವುದಲ್ಲದೆ, ಆ ಕಾಲದ ನಾಣ್ಯಗಳ ಮೇಲೂ ಕುಮಾರಸ್ವಾಮಿಯ ಚಿತ್ರವನ್ನು ಕೆತ್ತಿರುವುದು ಕಂಡುಬಂದಿದೆ.[೩೨]

ಕುಮಾರತಂತ್ರ ಮತ್ತು ಶ್ರೀತತ್ವ ನಿಧಿಯನ್ನಾಧರಿಸಿ ಇಲ್ಲಿ ಕುಮಾರಸ್ವಾಮಿಯ ಹಲವು ನಾಮಗಳು ಈ ರೀತಿಯಾಗಿವೆ.

ಭರ್ಜಿ ಆಯುಧವನ್ನೊಂದಿದ, ಇದರಿಂದಲೇ ತಾರಕಾಸುರನ ವಧೆ ಮಾಡಿದ ಕಾರಣ ಈತನಿಗೆ ಶಕ್ತಿಧರ ಎಂಬ ಹೆಸರು ಬಂದಿದೆ.[೩೩] ಈತನು ಒಂದು ಮುಖ ಎರಡು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಶಕ್ತಿ ಎಡಗೈಯಲ್ಲಿ ವಜ್ರವಿರುತ್ತದೆ. ಶ್ರೀತತ್ವ ನಿಧಿಯಲ್ಲಿ ಈತನಿಗೆ ಜ್ಞಾನಶಕ್ತಿ ಎಂದು ಉಲ್ಲೇಖವಿದ್ದು, ಒಂದು ಮುಖ, ನಾಲ್ಕು ಕೈಗಳು, ಜಟಾಮುಕುಟವಿರುತ್ತದೆ. ಕೈಗಳಲ್ಲಿ ಅಭಯ ಮುದ್ರೆ, ಕುಕ್ಕುಟ ಧ್ವಜ, ಶಕ್ತಿ, ವಜ್ರಾಯುಧಗಳಿರುತ್ತವೆ.[೩೪]

ಈತನು ಪವಿತ್ರವಾದ ಶಕ್ತಿಯನ್ನು ಹೊಂದಿರುವುದರಿಂದ 'ಸ್ಕಂದ'ನೆಂದು ಕರೆಸಿಕೊಳ್ಳುವನು.[೩೫] ಹಾಗೂ ತನ್ನ ಬಾಹುಬಲದಿಂದ ಜಗತ್ತನ್ನು ವಶಪಡಿಸಿಕೊಂಡದ್ದರಿಂದ ಸ್ಕಂದನೆಂದು ಹೆಸರು ಬಂದಿದೆ. ಒಂದು ಮುಖ ಎರಡು ಕೈಗಳು ಮತ್ತು ಕಮಲ ಬಣ್ಣವಿರುತ್ತದೆ. ಕೌಪಿನ ಧರಿಸಿದ್ದು, ಬಲಗೈಯಲ್ಲಿ ದಂಡ, ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿರುತ್ತದೆ. ಶ್ರೀತತ್ವನಿಧಿಯಲ್ಲಿ ವಾಲಾಯುಧ ಸುಬ್ರಹ್ಮಣ್ಯನೆಂದೂ ಕರೆಯಲಾಗಿದೆ. ಇದರಲ್ಲಿ ಸ್ಕಂದನು ಒಂದು ಮುಖ, ನಾಲ್ಕು ಕೈಗಳು, ಪದ್ಮಾಸನದಲ್ಲಿ ಕಮಲದ ಮೇಲೆ ಕುಳಿತಿರುವನು. ಆತನ ತಲೆಯ ಹಿಂದೆ ಪ್ರಭಾಮಂಡಲ, ಕರಂಡ ಮುಕುಟವಿರುವುದು, ನಾಲ್ಕು ಕೈಗಳಲ್ಲಿ, ವರದ, ಕುಕ್ಕುಟ, ಅಭಯ, ವಜ್ರಾಯುಧಗಳಿರುತ್ತವೆ.[೩೬]

ದೇವತೆಗಳ ಸೇನಾಮುಖ್ಯಸ್ಥನಾದ ಕಾರಣ ಈತನಿಗೆ ಸೇನಾಪತಿ ಎಂಬ ಹೆಸರು ಬಂದಿದೆ.[೩೭] ಈತನು ಸೂರ್ಯನ ಪ್ರಭಾವದಿಂದ ಉಂಟಾದವನೆಂದೂ, ಆರು ಮುಖಗಳು, ಹನ್ನೆರಡು ಕೈಗಳನ್ನು ಹೊಂದಿದ್ದು, ಎಡ ತೊಡೆಯ ಮೇಲೆ ದೇವಿ ಕುಳಿತು ಕೊಂಡಿರುತ್ತಾಳೆ. ಎಡಗೈ ಅವಳನ್ನು ಆಲಂಗಿಸಿದ್ದು,

ಬಲಗೈಯಲ್ಲಿ ಪದ್ಮವಿರುತ್ತದೆ. ಉಳಿದ ಕೈಗಳಲ್ಲಿ ಶೂಲ, ಖೇಟಕ, ವಜ್ರ, ಧನುಷ್ಯ, ಗಧಾ, ಘಂಟಾ, ಕುಕ್ಕುಟ ಆಯುಧಗಳು ಮತ್ತು ಅಭಯ ಮುದ್ರೆಯಲ್ಲಿರುತ್ತದೆ. ಶ್ರೀ ತತ್ವನಿಧಿಯಲ್ಲಿ ದೇವಸೇನಾಧಿಪತಿ ಎಂದು ಉಲ್ಲೇಖವಾಗಿದ್ದು, ಒಂದು ಮುಖ ನಾಲ್ಕು ಕೈಗಳು, ಕರಿಯಬಣ್ಣದಲ್ಲಿರುತ್ತಾನೆ. ಮುಂದಿನ ಕೈಗಳು ಅಭಯ, ವರದ, ಹಿಂದಿನ ಕೈಗಳಲ್ಲಿ ಶಂಖ ಚಕ್ರಗಳಿರುತ್ತವೆ.[೩೮]

ಬ್ರಾಹ್ಮಣರಿಗೆ ಯಾವಾಗಲೂ ಒಳ್ಳೆಯದನ್ನೇ ಬಯಸುವ, ಬ್ರಾಹ್ಮಣ ಪ್ರಿಯನಾದ ಕಾರಣ ಈತನನ್ನು 'ಸುಬ್ರಹ್ಮಣ್ಯ' ಎಂದು ಕರೆಯುವರು.[೩೯] ಬ್ರಾಹ್ಮಣರ ರಕ್ಷಣೆ ಮಾಡುವುದರಿಂದ ಸುಬ್ರಹ್ಮಣ್ಯನೆಂದೂ ಹೆಸರೂ ಇದೆ. ಸುಬ್ರಹ್ಮಣ್ಯನು ಕುಂಕುಮ ಬಣ್ಣದವನಾಗಿದ್ದು, ಕೇಯೂರ, ಹಾರ, ಮುಂತಾದ ಆಭರಣಗಳನ್ನು ಮತ್ತು ಬಿಳಿ ಬಟ್ಟೆ ಧರಿಸಿರುತ್ತಾನೆ. ಬಲಕೈ ಅಭಯ ಮುದ್ರೆಯಲ್ಲಿ, ಉಳಿದವುಗಳಲ್ಲಿ ಶಕ್ತಿ, ಕುಕ್ಕುಟ ಮತ್ತು ಪದ್ಮ ಹಿಡಿದಿರುತ್ತಾನೆ. ಕೆಲವು ಸಲ ಅಭಯ, ಕಟ್ಯಾವಲಂಬಿತ ಮುದ್ರೆಯಲ್ಲಿರುವ ಎರಡೇ ಕೈಗಳನ್ನು ಹೊಂದಿರುತ್ತಾನೆ.[೪೦]

ಗಜವಾಹನನಾದ ಈತನು ಒಂದು ಮುಖ ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಕೈಗಳು ಅಭಯ-ವರದ, ಹಿಂದಿನ ಕೈಗಳಲ್ಲಿ ಶಕ್ತಿ-ಕುಕ್ಕುಟವಿರುತ್ತದೆ.[೪೧]

ಅರಣ್ಯದಲ್ಲಿರುವ ಬಾಣದಂತಹ ದರ್ಬೆಯ ಮಧ್ಯೆ ಜನಿಸಿದವನೆಂದು ಈತನನ್ನು 'ಶರವಣಭವ'ನೆಂದು ಕರೆಯುತ್ತಾರೆ.[೪೨] ಆರು ಮುಖಗಳು ಹನ್ನೆರಡು ಕೈಗಳು, ಮುಂದಿನ ಬಲ-ಎಡ ಕೈಗಳು ಅಭಯ-ವರದ ಮುದ್ರೆಯಲ್ಲಿರುತ್ತವೆ. ಉಳಿದ ಕೈಗಳಲ್ಲಿ ಶಕ್ತಿ, ಘಂಟಾ, ಧ್ವಜ, ಪದ್ಮ, ಕುಕ್ಕುಟ, ಪಾಶ, ದಂಡ, ಟಂಕ, ಬಾಣ, ಧನುಷ್ಯಾಯುಧಗಳಿರುವವು.[೪೩]

ಈತನು ಮಗುವಾಗಿರುವಾಗ ಆರು ಮಾತೆಯರ ಎದೆಯಿಂದ ಹಾಲನ್ನು ಕುಡಿಯಲು ಆರು ಮುಖಗಳನ್ನು ಹೊಂದಿದ ಕಾರಣ ಈತನು 'ಷಣ್ಮುಖ' ಅಥವಾ 'ಸದಾನನ'ನೆಂದು ಕರೆಸಿಕೊಳ್ಳುವನು.[೪೪] ಪಂಚಮುಖ ಪರಮೇಶ್ವರ ಏಕಮುಖ ಪಾರ್ವತಿಯರಿಂದ ಜನಿಸಿದುದರಿಂದ ಇವನಿಗೆ ಷಣ್ಮುಖನೆಂದು ಹೆಸರು ಬಂದಿರುವುದು. ಇವನು ಆರು ಮುಖಗಳು ಹನ್ನೆರಡು ಕೈಗಳನ್ನು ಹೊಂದಿರುತ್ತಾನೆ. ಕುಂಕುಮ ಬಣ್ಣದವನಾಗಿದ್ದು, ನವಿಲಿನ ಮೇಲೆ ಕುಳಿತಿರುತ್ತಾನೆ. ಮುಂದಿನ ಬಲ-ಎಡಕೈಗಳು ಅಭಯ, ವರದ ಮುದ್ರೆಯಲ್ಲಿ, ಉಳಿದ ಕೈಗಳಲ್ಲಿ ಶಕ್ತಿ, ಬಾಣ, ಖಡ್ಗ, ಧ್ವಜ, ಗಧಾ, ಧನುಷ್ಯ, ವಜ್ರ, ಪದ್ಮ, ಕಟಕ ಹಸ್ತದಲ್ಲಿ ಇರುತ್ತವೆ. ಶ್ರೀ ತತ್ವನಿಧಿಯ ಉಲ್ಲೇಖದಂತೆ ಈತನು ಶಂಖ, ಚಕ್ರ, ಕುಕ್ಕುಟ,, ಪಾಶ, ಹಲಾಯುಧಗಳನ್ನು ಹಿಡಿದು ಅಜಯ-ವಿಜಯ ಎಂಬ ಇಬ್ಬರು ದೇವಿಯರೊಡನೆ ನಿಂತಿರುವನು.[೪೫]

ತಾರಕಾಸುರನ ವಧೆ ಮಾಡಿದ ಕಾರಣ 'ತಾರಕಾರಿ' ಎಂಬ ಹೆಸರು ಇದೆ.[೪೬] ಈತನು ಕುಂಕುಮ ಬಣ್ಣದಂತೆ ಹೊಳೆಯುತ್ತಿದ್ದು, ಹನ್ನೆರಡು ಕೈಗಳನ್ನು ಹೊಂದಿರುತ್ತಾನೆ. ಅವುಗಳಲ್ಲಿ ಅಂಕುಶ, ಧ್ವಜ,

ಖಡ್ಗ, ಪಾಶ, ಚಕ್ರ, ಮುಸಲ, ಶಕ್ತಿ, ವಜ್ರ, ಖೇಟಕ ಆಯುಧಗಳನ್ನು ಹಿಡಿದು, ಒಂದು ಕಟಕ ಹಸ್ತ ಎರಡು ಅಭಯ-ವರದ ಮುದ್ರೆಯಲ್ಲಿರುತ್ತವೆ. ಶ್ರೀತತ್ವನಿಧಿಯ ಉಲ್ಲೇಖದಂತೆ, ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳನ್ನು ಹೊಂದಿದ ಇವನು ಆನೆಯ ಮೇಲೆ ಕುಳಿತಿರುವನು. ಬಲಗೈಗಳಲ್ಲಿ ಖಡ್ಗ, ಶಕ್ತಿ ಎಡಗೈಗಳಲ್ಲಿ ಒಂದು ವರದ ಮುದ್ರೆ ಮತ್ತೊಂದು ಕೈಯಲ್ಲಿ ಖೇಟಕ ಅಥವಾ ಅಕ್ಷಮಾಲಾ ಇರುತ್ತದೆ.[೪೭]

ಕ್ರೌಂಚ ಪರ್ವತವನ್ನು ಪುಡಿ ಮಾಡಿದ ಕಾರಣ 'ಕ್ರೌಂಚ ಬೆಟ್ಟ' ಎಂದು ಹೆಸರು ಪಡೆದ.[೪೮] ಆರು ಮುಖಗಳು, ಎಂಟು ಕೈಗಳನ್ನು ಹೊಂದಿರುತ್ತಾನೆ. ಮುಂದಿನ ಎಡ-ಬಲ ಕೈಗಳು ಅಭಯ-ವರದ ಮುದ್ರೆಗಳಲ್ಲಿ, ಉಳಿದವುಗಳಲ್ಲಿ ಖಡ್ಗ, ಶಕ್ತಿ, ಬಾಣ, ವಜ್ರ, ಧನುಷ್ಯ, ಖೇಟಕಗಳಿರುತ್ತವೆ. ಶ್ರೀತತ್ವನಿಧಿಯ ಉಲ್ಲೇಖದಂತೆ, ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಬಲ-ಎಡ ಕೈಗಳು ವರದ-ಅಭಯ ಹಿಂದಿನ ಬಲ-ಎಡ ಕೈಗಳಲ್ಲಿ ಬಾಣ ಧನುಷ್ಯಗಳಿರುತ್ತವೆ.[೪೯]

ಬ್ರಹ್ಮನಿಗೆ ವೇದಗಳ ಕುರಿತು ಇರುವ ಅಜ್ಞಾನವನ್ನು ತಿಳಿಸಿದುದರಿಂದ 'ಬ್ರಹ್ಮ-ಶಾಸ್ತಾ' ಎಂದೂ ಕರೆಸಿಕೊಳ್ಳುವನು.[೫೦] ಒಂದು ಮುಖ, ನಾಲ್ಕು ಕೈಗಳು, ಮೈಬಣ್ಣವು ಕೆಂಪು ಅಥವಾ ಕಮಲದಂತಿದ್ದು, ಮುಂದಿನ ಬಲ-ಎಡ ಕೈಗಳು ವರದ-ಅಭಯ, ಹಿಂದಿನ ಬಲ-ಎಡ ಕೈಗಳಲ್ಲಿ ಅಕ್ಷಮಾಲಾ ಕಮಂಡಲ ಇರುತ್ತದೆ.[೫೧]

ಸ್ವರೂಪದಲ್ಲಿ ಕೌಮಾರ್ಯವೇ ಇವನ ಲಕ್ಷಣವಾದ್ದರಿಂದ 'ಬಾಲನ್ ' (ಬಾಲಸ್ವಾಮಿ) ಕುಮಾರ ಎಂದು ಕರೆದರು.[೫೨] ಈತನನ್ನು ಸೋಮಸ್ಕಂದನೆಂದೂ ಕರೆಯುತ್ತಾರೆ. ಬಾಲ್ಯಾವಸ್ಥೆಯಲ್ಲಿದ್ದ ಕುಮಾರಸ್ವಾಮಿಯು ತಂದೆ-ತಾಯಿಗಳಾದ ಪಾರ್ವತಿ-ಪರಮೇಶ್ವರರ ಮಧ್ಯ ನಿಂತುಕೊಂಡಿರುವನು. ಎಂಟು ಕೈಗಳನ್ನು ಹೊಂದಿದ ಇವನು, ಅವುಗಳಲ್ಲಿ ಪದ್ಮಗಳನ್ನು ಹಿಡಿದು ಕೊಂಡಿರುತ್ತಾನೆ. ಕೆಲವು ಸಲ ಕೆಂಪು ಬಣ್ಣದವನಾಗಿದ್ದು ಬಲಗೈಯಲ್ಲಿ ಪದ್ಮ, ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿರುತ್ತದೆ. ಶ್ರೀತತ್ವ ನಿಧಿಯ ಉಲ್ಲೇಖದಂತೆ ಈತನು ಕಪ್ಪು ಬಣ್ಣ, ಒಂದು ಮುಖ, ನಾಲ್ಕು ಕೈಗಳನ್ನು ಹೊಂದಿರುತ್ತಾನೆ. ಅವುಗಳಲ್ಲಿ ಎರಡು ಅಭಯ-ವರದ, ಇನ್ನೆರಡು ಕೈಗಳಲ್ಲಿ ಶಕ್ತಿ-ವಜ್ರಾಯುಧಗಳಿರುತ್ತವೆ.[೫೩]

ವನಜೆಯಾದ 'ವಲ್ಲಿ ಅಮ್ಮ'ನನ್ನು ವಿವಾಹವಾದ್ದರಿಂದ ಈತನನ್ನು ವಲ್ಲಿಕಲ್ಯಾಣ ಸುಂದರನೆನ್ನುತ್ತಾರೆ.[೫೪] ಇದು ಒಂದು ವಿಶೇಷವಾಗಿದೆ. ಒಂದು ಮುಖ ನಾಲ್ಕು ಕೈಗಳು, ಮುಂದಿನ ಕೈಗಳು ಅಭಯ-ಕಟ್ಯಾವಲಂಬಿತ ಮುದ್ರೆಯಲ್ಲಿ, ಹಿಂದಿನ ಕೈಗಳಲ್ಲಿ ಅಕ್ಷಮಾಲಾ-ಕಮಂಡಲಗಳಿರುತ್ತವೆ. ಶ್ರೀತತ್ವ ನಿಧಿಯ ಪ್ರಕಾರ ಈ ಮೂರ್ತಿಯನ್ನು ಅಗ್ನಿ ಜಾತಾ ಸುಬ್ರಹ್ಮಣ್ಯ, ಸೌರಬೇಯ, ಗಂಗೇಯ, ಗುಹಾ, ಬ್ರಹ್ಮಚಾರಿ, ದೇಶಿಕಾ ಎಂದು ಹೆಸರಿಸಲಾಗಿದೆ.[೫೫]

ಅಗ್ನಿಜಾತಾ ಸುಬ್ರಹ್ಮಣ್ಯನಿಗೆ ಎರಡು ಮುಖಗಳು, ಎಂಟು ಕೈಗಳು, ದೇಹವು ಬಿಳಿಯ ಬಣ್ಣ, ಕಂಠ ಕಪ್ಪು ಬಣ್ಣಗಳಲ್ಲಿರುತ್ತವೆ. ಬಲಗೈಗಳಲ್ಲಿ ಶ್ರುವ, ಅಕ್ಷಮಾಲಾ, ಖಡ್ಗ, ಇನ್ನೊಂದು ಸ್ವಸ್ತಿಕಾಕಾರದಲ್ಲಿರುತ್ತವೆ. ಎಡಗೈಗಳಲ್ಲಿ ವಜ್ರ, ಕುಕ್ಕುಟ, ಖೇಟಕ, ಅಕ್ಷಯ ಪಾತ್ರೆಗಳಿರುವವು.

ಸೌರಭೆಯನಿಗೆ ನಾಲ್ಕು ಮುಖಗಳು, ಎಂಟು ಕೈಗಳು, ಕಮಲಾಸನದಲ್ಲಿ ಕುಳಿತು ಕೊಂಡಿದ್ದು, ಮುಂದಿನ ಎರಡೂ ಕೈಗಳು ಅಭಯ-ವರದ ಮುದ್ರೆಗಳಲ್ಲಿ, ಉಳಿದವುಗಳಲ್ಲಿ ಬಾಣ, ಕಮಲ, ಶಕ್ತಿ, ಶೂಲ, ಧನುಷ್ಯ, ವಜ್ರಗಳಿರುತ್ತವೆ.

ಗಂಗೆಯ ಸುಬ್ರಹ್ಮಣ್ಯನು, ಗಂಗೆಯ ಮಗನಾಗಿದ್ದರಿಂದ ಗಂಗೆಯ ಎಂಬ ಹೆಸರು ಇದೆ. ಇತರ ಹೆಸರುಗಳಲ್ಲಿ ಇದು ಒಂದು.[೫೬] ಈತನಿಗೆ ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳು, ಕರಂಡ ಮುಕುಟ ಧರಿಸಿ ಮಕರ (ಮೀನಿನ ಜಾತಿಯ)ದ ಮೇಲೆ ನಿಂತಿರುವನು. ಕೈಗಳಲ್ಲಿ ಕುಕ್ಕುಟ ಧ್ವಜ, ನೀಲೋತ್ಪಲ ಬಣ್ಣದ ಹೂವು ಅಥವಾ ಪರಶು, ಪೂರ್ಣಕುಂಭ, ಅರುಣಿ, ಕುಕ್ಕುಟ (ಬಂಗಾರ ಬಣ್ಣದ)ಗಳಿರುತ್ತದೆ.[೫೭]

ಗುಹಾಸುಬ್ರಹ್ಮಣ್ಯನೆಂಬುದು ಈತನ ಇತರ ಹೆಸರುಗಳಲ್ಲಿ ಒಂದಾಗಿದೆ.[೫೮] ಈತನಿಗೆ ಒಂದು ಮುಖ ಮೂರು ಕಣ್ಣುಗಳು, ನಾಲ್ಕು ಕೈಗಳು, ಮತ್ತು ಕಿರೀಟ, ಮುಕುಟ, ಮುಂದಿನ ಕೈಗಳು ಅಭಯ, ವರದ, ಹಿಂದಿನ ಕೈಗಳಲ್ಲಿ ವಜ್ರ, ಶೂಲಗಳಿರುತ್ತವೆ. ಕಪ್ಪು ಮೈ ಬಣ್ಣ, ಬಿಳಿ ಬಟ್ಟೆ ಧರಿಸಿರುತ್ತಾನೆ. ಈತನ ಹೆಂಡತಿಯೂ ಕೂಡಾ ಹತ್ತಿರ ನಿಂತುಕೊಂಡಿರುತ್ತಾಳೆ.[೫೯]

ಕುಮಾರನಾದ್ದರಿಂದ ಈತನನ್ನು ಬ್ರಹ್ಮಚಾರಿ ಸುಬ್ರಹ್ಮಣ್ಯನೆಂದು ಹೆಸರು.[೬೦] ಈತನಿಗೆ ಒಂದು ಮುಖ, ಎರಡು ಕೈಗಳು, ಪದ್ಮದ ಮೇಲೆ ನಿಂತಿರುವನು. ಕೆಂಪು ಮೈಬಣ್ಣ ಯಜ್ಞೋಪವಿತ, ಮೌಂಜಿ ಮತ್ತು ಕೌಪಿನ ಧರಿಸಿರುತ್ತಾನೆ. ಬಲಗಾಲು ಪದ್ಮದ ಮೇಲೆ ಎಡಗಾಲು ಕೆಳಗಿರುವುದು. ಬಲಗೈಯಲ್ಲಿ ದಂಡ ಎಡಗೈಯಲ್ಲಿ ವಜ್ರಗಳಿರುತ್ತವೆ.[೬೧]

ದೇಶಿಕ ಸುಬ್ರಹ್ಮಣ್ಯನು ಶಿವನ ಮಗನಾಗಿದ್ದರಿಂದ ಗುರೂಪದೇಶ ಮಾಡುತ್ತಿರುತ್ತಾನೆ. ಈತನಿಗೆ ಒಂದು ಮುಖ, ಆರು ಕೈಗಳು, ಕರಂಡ ಮುಕುಟ ಧರಿಸಿ ನವಿಲಿನ ಮೇಲೆ ಕುಳಿತಿರುವನು. ಎರಡು ಕೈಗಳಲ್ಲಿ, ಒಂದು ಶಕ್ತಿ ಇನ್ನೊಂದರಲ್ಲಿ ಅಕ್ಷಮಾಲಾ ಹಾಗೂ ಉಳಿದ ಮೂರು ಕೈಗಳು ವರದ, ಅಭಯ ಚಿನ್ ಮುದ್ರೆಯಲ್ಲಿರುತ್ತವೆ.

ಮಾನಸಾರದ ಪ್ರಕಾರ, ಶಿಷ್ಯಭಾವ ಮೂರ್ತಿಯು ಶಿವನು ಆತನ ಮುಂದೆ ಕುಳಿತಿರುವನು. ಪಾರ್ವತಿಯೂ ಕೂಡ ಆತನ ಹತ್ತಿರ ನಿಂತು ಕೊಂಡಿರುತ್ತಾಳೆ. ಈತನು ಪದ್ಮಾಸನದಲ್ಲಿ ಕುಳಿತಿದ್ದು ಒಂದು ಕೈ ತುಟಿಯ ಮೇಲೆ ಮತ್ತೊಂದು ಎದೆಯ ಮೇಲೆ ಬಾನ ಮುದ್ರೆಯಲ್ಲಿರುವುದು. ಉಳಿದೆರಡು

ಕೈಗಳಲ್ಲಿ ಟಂಕ, ಮೃಗ ಹಿಡಿದಿರುತ್ತಾನೆ. ಆರು ಜನ ಪವಿತ್ರ ಮಾತೆಯರ ರೂಪವಾದ 'ಕೃತಿಕೆ'ಯಲ್ಲಿ ಜನಿಸಿದನೆಂದು ಈತನಿಗೆ 'ಕಾರ್ತಿಕೇಯ' ಎಂದು ಕರೆಯುವರು.[೬೨]

ಹೀಗೆ ನಾನಾ ಕೃತಿಗಳು ಕುಮಾರಸ್ವಾಮಿಯನ್ನು ನಾನಾ ಹೆಸರುಗಳಿಂದ, ನಾನಾ ರೂಪಗಳಿಂದ ವರ್ಣಿಸುತ್ತವೆ. ಒಟ್ಟಾರೆಯಾಗಿ ಒಂದು ಶಕ್ತಿದೇವತೆಯಾಗಿ, ಲೋಹಕರ್ಮಿಗಳ ಆರಾಧ್ಯಮೂರ್ತಿಯಾಗಿ ಕುಮಾರಸ್ವಾಮಿ ಬೆಳೆದು ಬಂದಿರುವುದನ್ನು ನಾವು ಗಮನಿಸಬಹುದಾಗಿದೆ.

೫.೭. ಸಂಡೂರು ತಾಲ್ಲೂಕಿನ ಪ್ರಸ್ತುತ ಕಬ್ಬಿಣ ಗಣಿಗಾರಿಕೆಯ ಇತಿಹಾಸ

ಮಾನವನ ಪ್ರಗತಿಯಲ್ಲಿ ಬಹುಮುಖ್ಯ ಪಾತ್ರವಹಿಸಿರುವ ಲೋಹಗಳು ವಿಶ್ವದ ಅತ್ಯಗತ್ಯಗಳಲ್ಲಿ ಒಂದಾಗಿದೆ. ಲೋಹಗಳು ಕೈಗಾರಿಕೆಗಳಲ್ಲಿ ಮತ್ತು ಮಾನವನ ಪ್ರತಿನಿತ್ಯದ ಜೀವನದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿವೆ. ಕ್ರಿ.ಪೂ.೨೮೦೦ರಲ್ಲಿ ಶೆನ್‌ನಾಂಗ್ ಎಂಬ ಚೀನಾ ದೇಶದ ಚಕ್ರವರ್ತಿ ಲೋಹದ ಅದಿರು ಕರಗಿಸಿ ಲೋಹ ತೆಗೆವುದು ಪತ್ತೆ ಹಚ್ಚಿದನು. ಕಬ್ಬಿಣ ಕುರಿತು ಅತ್ಯಂತ ಹಳೆಯ ಪುರಾವೆ ಎಂದರೆ ಕ್ರಿ.ಪೂ.೪೦೦೦ ಕಾಲದೆನ್ನಲಾದ ಕೆಲವು ಕಬ್ಬಿಣದ ಮಣಿಗಳು. ಇವು ಕೈರೊ ಎಂಬ ನಗರದ ಬಳಿ ಇರುವ ಗೀಜಾ ಎಂಬಲ್ಲಿನ ಸಮಾಧಿಯಲ್ಲಿ ದೊರೆತದ್ದಾಗಿದೆ. ಆ ಕಾಲಕ್ಕೆ ಮಾನವನಿಗೆ ಕಬ್ಬಿಣದ ಬಳಕೆ ಚೆನ್ನಾಗಿ ತಿಳಿದಿತ್ತೆನ್ನಬಹುದು. ಈಜಿಪ್ಟಿನ ರಾಮೇಸನ್‌ಗೆ ಸು.ಕಿ.ಪೂ.೧೩೫೦ರಲ್ಲಿ ಹಿಟೆಟ್‌ಗಳ ದೊರೆ ಬರೆದ ಕಾಗದವೊಂದರಲ್ಲಿ ಕಬ್ಬಿಣ ತಯಾರಿಸುವ ಬಗ್ಗೆ ಮಾಹಿತಿ ಕೊಟ್ಟಿದ್ದನು. ಎರಡನೆ ರಾಮೇಸನ್‌ನ ಆಳ್ವಿಕೆಯ ವೇಳೆಗೆ ಈಜಿಪ್ಟಿನಲ್ಲಿ ಕಬ್ಬಿಣದ ಬಳಕೆ ಸಾಮಾನ್ಯವಾಗಿತ್ತು. ಈ ಪೂರ್ವ ಕಾಲದ ಜನರೆಲ್ಲಾ ಬಳಸಿದ ಕಬ್ಬಿಣವೆಂದರೆ ರೂಪಿತ ಕಬ್ಬಿಣ. ಮೊದಮೊದಲಿಗೆ ಲೋಹಗಳನ್ನು ಬಳಸಿದವರಿಗೆ ಲೋಹ ವಸ್ತುಗಳಿಗೆ ಆಕಾರವನ್ನು ಕೊಡುವುದರಲ್ಲಿ ಯಾವ ಬಗೆಯ ರಾಸಾಯನಿಕ ಮತ್ತು ಭೌತಿಕ ಬದಲಾವಣೆಗಳನ್ನು ಮಾಡುತ್ತಿದ್ದರೆಂಬುದರ ಅರಿವಿರಲಿಲ್ಲ. ೧೫೪೦ರಲ್ಲಿ ಬಿರಿಂಗುಷಿಯೊ ಎಂಬುವನು ಪಿರೊಟೆಕ್ನಿಯಾ ಎಂಬ ಗ್ರಂಥದಲ್ಲಿ ಹೇಳುವವರೆಗು ಲೋಹಗಳ ರಾಸಾಯನಿಕ ಪ್ರಕ್ರಿಯೆಗಳು ಕುರಿತಂತೆ ಬರೆದದ್ದು ತೀರಾ ಕಡಿಮೆ.[೬೩]

ಮೊದಲಿಗೆ ಕಿರಿದಾದ ಕುಲುಮೆಗಳಲ್ಲಿ ಕಬ್ಬಿಣದ ಅದಿರನ್ನು ಇದ್ದಲಿನ ಸಹಾಯದಿಂದ ಕರಗಿಸಿ ಬೀಡು ಕಬ್ಬಿಣ ಪಡೆಯುತ್ತಿದ್ದರು. ಕ್ರಿ.ಶ.೧೭೦೦ ರಿಂದೀಚೆಗೆ ಕಲ್ಲಿದ್ದಲು ಬೆಳಕಿಗೆ ಬಂದು ಉಕ್ಕಿನ ತಯಾರಿಕೆಯಲ್ಲಿ ದೊಡ್ಡದೊಂದು ಕ್ರಾಂತಿಯೇ ಉಂಟಾಯಿತು. ೧೮೫೬ರ ಸುಮಾರಿಗೆ ಜರ್ಮನಿಯ ಬೆಸ್ಸಿಮರ್ ಎಂಬಾತ ಉಕ್ಕನ್ನು ತಯಾರಿಸುವ ಹೊಸ ತಂತ್ರವನ್ನು ಬಳಸಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿದ. ಅಲ್ಲಿಂದೀಚೆಗೆ ಉಕ್ಕಿನ ತಯಾರಿಕೆ ಎಲ್ಲ

ಕಡೆಯೂ ಹೆಚ್ಚಿತು.[೬೪] ಕ್ರಿ.ಶ.೧೯ನೆಯ ಶತಮಾನದ ಮಧ್ಯದ ವೇಳೆಗೆ ಲೋಹ ಉತ್ಪಾದನೆ ಮತ್ತು ಲೋಹಗಳೊಂದಿಗಿನ ಕೆಲಸದ ಕಲೆಯ ಬೆಳವಣಿಗೆಗೆ ಹೆಚ್ಚು ಗಮನ ಹರಿಸಲಾಯಿತು.[೬೫]

ಬಳ್ಳಾರಿ-ಹೊಸಪೇಟೆ-ಸಂಡೂರು ವಲಯ ಉತ್ತಮ ದರ್ಜೆಯ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪಗಳನ್ನು ಹೊಂದಿದೆ. ರಾಜ್ಯದ ಕಬ್ಬಿಣದ ಉತ್ಪಾದನೆಯಲ್ಲಿ ಸಂಡೂರು ಪದರ ಶಿಲಾಪಟ್ಟಿಯ ಕೊಡುಗೆ ತುಂಬ ದೊಡ್ಡದು. ಈ ವಲಯದಲ್ಲಿ ಉತ್ಕೃಷ್ಟ ದರ್ಜೆಯ ಕಬ್ಬಿಣದ ಅದುರು ಎರಡು ಭಾಗಗಳಿಗೆ ಸೀಮಿತವಾಗಿದೆ. ಸಂಡೂರು ಪದರ ಶಿಲಾ ಜಾಡಿನ ಪೂರ್ವಭಾಗದಲ್ಲಿರುವ ಕಾಪರ್ ಮೌಂಟನ್ ಪಟ್ಟಿ ಹಾಗೂ ಪಶ್ಚಿಮದ ಸಂಡೂರು ಶಿಲಾಪಟ್ಟಿ, ಪಟ್ಟಿ ರೂಪದ ಕ್ವಾರ್ಟ್‌ಜೈಟ್ ಶಿಲೆಯಲ್ಲಿರುವ ಹಿಮಟೈಟ್ ಇಲ್ಲಿನ ಪ್ರಮುಖ ಕಬ್ಬಿಣದ ಅದುರು, ಮೂಲ ಸಂಚಯನ ಶಿಲೆ ಪರಿವರ್ತನೆಯಾಗಿ ಅದರಿಂದ ಲ್ಯಾಟೆರೈಟ್ ಉತ್ಪಾದನೆಯಾಗಿದೆ. ಹಿಮಟೈಟ್ ಅದುರಿನ ಮೇಲೆ ಇದು ಟೋಪಿಯಂತೆ ಕುಳಿತಿದೆ. ಈ ವಲಯದ ಅದುರು ಶೇ.೬೨ ರಿಂದ ೬೮ ಭಾಗ ಕಬ್ಬಿಣಾಂಶವನ್ನು ಹೊಂದಿದೆ. ಉತ್ತಮ ದರ್ಜೆಯದೆಂದು ಇದನ್ನು ವರ್ಗೀಕರಿಸಲಾಗಿದೆ. ಕೆಲವೆಡೆ ಆಕ್ಸಿಡೀಕರಣದಿಂದಾಗಿ ಕೆಂಬಣ್ಣದ ಪುಡಿ ರೂಪುಗೊಂಡಿದೆ. ಈ ಪುಡಿ ಬಣ್ಣ ತಯಾರಿಕೆಗೆ ಯುಕ್ತವೆಂದು ಕಂಡುಬಂದಿದೆ.[೬೬]

ಸಂಡೂರು ಪದರ ಶಿಲಾಪಟ್ಟಿಯ ನೈರುತ್ಯ ಭಾಗದಲ್ಲಿರುವ ಕುಮಾರಸ್ವಾಮಿ ಕಬ್ಬಿಣದ ನಿಕ್ಷೇಪ ೨೦.ಕಿ.ಮೀ. ಉದ್ದ ೧೫ ಕ್ರಿ.ಮೀ. ಅಗಲವಾಗಿದೆ. ಪ್ರಸ್ಥಭೂಮಿಯ ರೂಪದಲ್ಲಿ ಎತ್ತರಿಸಿರುವ ಈ ಭಾಗ ತೋರಣಗಲ್ಲು ರೈಲ್ವೆ ನಿಲ್ದಾಣದಿಂದ ಕೇವಲ ಮೂರು ಕಿ.ಮೀ.ದೂರದಲ್ಲಿದೆ. ಭಾರತೀಯ ಭೂವೈಜ್ಞಾನಿಕ ಸರ್ವೇಸಂಸ್ಥೆ ಇಲ್ಲಿ ಪರಿಶೋಧನೆ ಮಾಡಿದೆ. ಈ ಭಾಗದ ಒಟ್ಟು ಕಬ್ಬಿಣದ ನಿಕ್ಷೇಪ ೨೧೦ ದಶಲಕ್ಷಟನ್ನೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ಉರುಟು ಅದುರು ಶೇ.೬೨.೭ ಭಾಗ ಮತ್ತು ಬ್ಲೂಡಸ್ಟ್ ೬೫.೫ ಭಾಗ ಕಬ್ಬಿಣಾಂಶವನ್ನು ಹೊಂದಿದೆ.[೬೭]

ಸಂಡೂರಿನಿಂದ ಸು.೮.ಕಿ.ಮೀ. ಆಗ್ನೇಯಕ್ಕಿರುವ ದೋಣಿಮಲೈ ನಿಕ್ಷೇಪಗಳು ಸಂಡೂರು ಪದರು ಶಿಲಾ ಪಟ್ಟಿಯಲ್ಲಿ ೧೨.ಚ.ಕಿ.ಮೀ.ವಿಸ್ತೀರ್ಣ ವ್ಯಾಪಿಸಿವೆ. ಬಳ್ಳಾರಿ ಹೊಸಪೇಟೆಯ ಮಾರ್ಗದಲ್ಲಿರುವ ತೋರಣಗಲ್ಲು ರೈಲ್ವೆ ನಿಲ್ದಾಣ ಸಮೀಪವಿರುವುದರಿಂದ ಸಾಗಾಣಿಕೆಯ ದೃಷ್ಟಿಯಿಂದ ಈ ನಿಕ್ಷೇಪಕ್ಕೆ ಮತ್ತಷ್ಟು ಪ್ರಾಮುಖ್ಯತೆಬಂದಿದೆ. ಸ್ಥಳೀಯ ನಿಕ್ಷೇಪದ ಮೀಸಲು ಪ್ರಮಾಣ ೧೫೮ ದಶಲಕ್ಷ ಟನ್ನುಗಳೆಂದು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ ಪರಿಶೋಧನೆಯಿಂದ ದೃಢೀಕರಿಸಿದೆ. ಇಲ್ಲಿನ ಅದುರಿನಲ್ಲಿ ಶೇ.೬೪ ಭಾಗ ಕಬ್ಬಿಣಾಂಶವಿದೆ. ಅಲ್ಲದೆ ಶೇ.೨.೩೧ ಭಾಗ ಸಿಲಿಕಾನ್ ಡೈ ಆಕ್ಸೈಡ್ , ಶೇ.೨ ಭಾಗ ಅಲ್ಯೂಮಿನಿಯಮ್, ಶೇ.೦.೦೪೧ ಭಾಗ ಫಾಸ್ಫರಸ್ ಅಂಶವಿದೆಯೆಂದು ರಾಸಾಯನಿಕ ವಿಶ್ಲೇಷಣೆಯಿಂದ ತಿಳಿದುಬಂದಿದೆ. ಈ ನಿಕ್ಷೇಪವನ್ನು ರಾಷ್ಟ್ರೀಯ ಖನಿಜಾಭಿವೃದ್ಧಿ ನಿಗಮ

ಅಭಿವೃದ್ಧಿಪಡಿಸುತ್ತಿದೆ. ಪ್ರತಿವರ್ಷ ಈ ನಿಕ್ಷೇಪದಿಂದ ದರ್ಜೆಯ ಅನುಸಾರ ಅದುರನ್ನು ವಿಂಗಡಿಸಿ, ಎರಡು ದಶಲಕ್ಷ ಟನ್ನು ಅದುರನ್ನು ಮಾರುಕಟ್ಟೆಗೆ ಬಿಡಲಾಗುತ್ತದೆ. ಈ ಭಾಗದ ಗಣಿ ಅಭಿವೃದ್ಧಿಗಾಗಿ ಈ ಸಂಸ್ಥೆ ೨೧.೫೬ ಕೋಟಿ ರೂಪಾಯಿ ಬಂಡವಾಳ ಹೊಡಿದೆ. ಅತ್ಯಾಧುನಿಕ ಯಂತ್ರೋಪಕರಣಗಳಿಂದ ಸಜ್ಜಾಗಿ, ಉನ್ನತ ತಂತ್ರಜ್ಞಾನ ಅಳವಡಿಸಿ ಗಣಿ ಮಾಡುತ್ತಿರುವ ಏಕೈಕ ಭಾರತೀಯ ಸಂಸ್ಥೆ ಎಂಬ ಹೆಸರಿಗೆ ಪಾತ್ರವಾಗಿದೆ. ದೋಣಿಮಲೈ ಸಾಲಿನಲ್ಲಿ ೨೦೧೨ ಹೆಕ್ಟೇರು ಪ್ರದೇಶವನ್ನು ಗುತ್ತಿಗೆಗೆ ಪಡೆದು ಈ ಸಂಸ್ಥೆ ತೆರೆದ ಗಣಿ ಕಾರ್ಯಾಚರಣೆ ಮಾಡುತ್ತಿದೆ.[೬೮] ಈ ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೋರೇಷನ್ ರವರು ಅಗೆದು ತೆಗೆಯುತ್ತಿರುವ ದೋಣಿಮಲೈ ಅದಿರನ್ನು ರಫ್ತಿಗಾಗಿ ಉಪಯೋಗಿಸುತ್ತಿದ್ದಾರೆ. ವಿಜಯನಗರದ ಉಕ್ಕು ಕಾರ್ಖಾನೆಯ ಬೇಡಿಕೆಗೆ ಆಧಾರವಾದ ಸಂಡೂರು ಹೊಸಪೇಟೆಯ ಸುತ್ತಲಿನ ಪ್ರದೇಶದ ಕಬ್ಬಿಣ ಅದಿರು ರಫ್ತು ಮಾಡುವುದನ್ನು ತಡೆದು ಅದನ್ನು ಇದೇ ಕಾರ್ಖಾನೆಯಲ್ಲಿ ಬಳಸಿದರೆ ಈಗ ರಫ್ತನ್ನು ಮಾಡಿ ಹಣಗಳಿಸುವದಕ್ಕಿಂತ ಹೆಚ್ಚಿಗೆ ಲಾಭದಾಯಕವಾಗುವಲ್ಲಿ ಸಂದೇಹವಿಲ್ಲ. ಮ್ಯಾಂಗನೀಸ್ ಅದಿರು ಬಳ್ಳಾರಿಯ ಸಂಡೂರು ಬೆಟ್ಟ ಸಾಲಿನಲ್ಲಿ ಮ್ಯಾಂಗನೀಸ್ ಪೈರೋಲ್ಯೂಸೈಟ್ ಖನಿಜ ರೂಪದಲ್ಲಿ ಹೇರಳವಾಗಿ ದೊರೆಯುತ್ತದೆ. ಇದು ಇಲ್ಲಿನ ಪ್ರದೇಶಗಳಾದ ರಾಮದುರ್ಗ, ಕಣಿಮೆಹಳ್ಳಿ, ರಾಮಸ್ವಾಮಿ ಬೆಟ್ಟ ಮುಂತಾದ ಪ್ರದೇಶಗಳಲ್ಲಿ ಸಹ ಸಿಕ್ಕುವುದು.[೬೯] ಬಳ್ಳಾರಿ ಜಿಲ್ಲೆಯಲ್ಲಿಯೇ ಸಂಡೂರು ತಾಲ್ಲೂಕಿನ ಈ ದೋಣಿಮಲೈ ಗುಡ್ಡದಿಂದ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದ ಅದಿರನ್ನು ಉತ್ಪಾದಿಸಿ ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ.[೭೦] ಭಾರತದ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆಯವರು ತಮ್ಮ ಅನ್ವೇಷಣೆಯ ಫಲವಾಗಿ, ಸೊಂಡೂರು ವಲಯದ ವಿವಿಧ ಗುಡ್ಡ ಸಾಲುಗಳಲ್ಲಿ ದೊರೆಯಬಹುದಾದ ಉತ್ತಮ ಕಬ್ಬಿಣದ ಆದಿರು ಎಷ್ಟಿರಬಹುದು ಎನ್ನುವ ಅಂದಾಜನ್ನು ಕೊಟ್ಟಿದ್ದಾರೆ. ದೋಣಿಮಲೈ ಗುಡ್ಡ ಸಾಲಿನಲ್ಲಿ : ೧೫೧ ಮಿಲಿಯ ಟನ್‌ಗಳು(೬೪% Fe) (ದಶಲಕ್ಷ), ರಾಮನಗುಡ್ಡ ಸಾಲಿನಲ್ಲಿ : ೨೧೨ ಮಿಲಿಯ ಟನ್‌ಗಳು(೬೨% Fe), ಕುಮಾರಸ್ವಾಮಿ ಗುಡ್ಡದಲ್ಲಿ : ೧೮೨ ಮಿಲಿಯ ಟನ್‌ಗಳು(೬೪% Fe)[೭೧].

ಒಟ್ಟಿನಲ್ಲಿ ಉತ್ಪತ್ತಿಯಾಗುತ್ತಿರುವ ಕಬ್ಬಿಣದ ಬಹುಭಾಗ ದೈಹಿಕ ದುಡಿಮೆಯಿಂದ ದೊರೆತದ್ದು, ತಂತ್ರಜ್ಞಾನವನ್ನು ಬಳಸಿಕೊಂಡು ಯಂತ್ರ ಸಹಾಯದಿಂದ ಕಬ್ಬಿಣದ ಅದಿರಿನ ಉತ್ಪತ್ತಿಯಲ್ಲಿ ತೊಡಗಿರುವ ಸರ್ಕಾರಿ ಉದ್ಯಮದಲ್ಲೊಂದಾದ ಈ ಸಂಡೂರು ತಾಲ್ಲೂಕಿನ ನ್ಯಾಷನಲ್ ಮಿನಿರಲ್ ಡೆವಲಪ್ ಮೆಂಟ್ ಕಾರ್ಪೋರೇಶನ್ ದೋಣಿಮಲೈ. ಇಲ್ಲಿ ಗಣಿ ಕೆಲಸ ಸಂಪೂರ್ಣವಾಗಿ ಯಾಂತ್ರಿಕವಾಗಿದ್ದು ಅತಿ ಹೆಚ್ಚಿನ ಪ್ರಮಾಣದಲ್ಲಿ ಅದಿರನ್ನು ಉತ್ಪಾದಿಸುತ್ತಿವೆ, ಉತ್ಪತ್ತಿಯಾದ ಅದಿರೆಲ್ಲವೂ ಹೊರ ದೇಶಗಳಿಗೆ ರಫ್ತಾಗುತ್ತಿವೆ. ದೋಣಿಮಲೈಯ ಗಣಿಯನ್ನು ಹೊರತುಪಡಿಸಿದರೆ, ಮಿಕ್ಕ ಯಾವ ಗಣಿಗಳಿಗೂ ಪ್ರತ್ಯೇಕವಾದ ರೈಲು ಮಾರ್ಗದ ಸಂಪರ್ಕವಿಲ್ಲ.[೭೨]

೫.೮. ಸಂಡೂರು ಪರಿಸರದಲ್ಲಿ ದೊರೆಯುವ ವಿವಿಧ ಮಾದರಿಯ ಲೋಹಗಳು

ಈ ತಾಲ್ಲೂಕಿನಲ್ಲಿ ಕಬ್ಬಿಣದ ಅದಿರು ಹೆಚ್ಚು ಉತ್ಪಾದನೆಯಾಗುತ್ತಿದ್ದರೂ ಸಹ ಅದರ ಜೊತೆಗೆ ಇನ್ನೂ ಅನೇಕ ಮಾದರಿಯ ಲೋಹಗಳು ದೊರೆಯುತ್ತವೆ. ಅವುಗಳ ಕುರಿತು ಇಲ್ಲಿ ಚರ್ಚಿಸಲಾಗುತ್ತಿದೆ.

ಕಬ್ಬಿಣ ಮತ್ತು ಮ್ಯಾಂಗನೀಸ್(Fe, Mn)ದೊರೆಯುವ ಶಿಲೆಗಳು

ಈ ತಾಲ್ಲೂಕಿನ ಸಂಡೂರು ಬಳಿಯ ಕುಮಾರಸ್ವಾಮಿ ಬೆಟ್ಟದ ಸಾಲಿನಲ್ಲಿ ಕಬ್ಬಿಣದ ಜೊತೆ ಜೊತೆಗೆ ಮ್ಯಾಂಗನೀಸ್ ಲೋಹವೂ ದೊರೆಯುತ್ತದೆ. ಹಾಗೂ ಈ ಮ್ಯಾಂಗನೀಸ್ ಗಣಿಗಳು ಪ್ರಸಿದ್ಧವಾದವುಗಳಾಗಿವೆ.[೨೩]

ಆಂಡಲುಸೈಟ್ (Andalusite)

ಆಂಡಲುಸೈಟ್ ಎಂಬ ಹೆಸರಿನ ಈ ಖನಿಜ ಕಯನೈಟ್ - ಸಿಲಿಮನೈಟ್ ವಂಶಕ್ಕೆ ಸೇರಿದ, ಹೆಚ್ಚಿನ ಉಷ್ಣವನ್ನು ತಡೆಯಬಲ್ಲ ಖನಿಜ. ಇದು ಅತಿ ಹೆಚ್ಚಿನ ಉಷ್ಣಕ್ಕೆ ಒಳಪಟ್ಟು ರೂಪಾಂತರಗೊಂಡ ಶಿಲೆಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಈ ಖನಿಜವು ಈ ತಾಲ್ಲೂಕಿನ ದರೋಜಿ ಕೆರೆಯ ದಕ್ಷಿಣಕ್ಕೆ ಇರುವ ದಿಬ್ಬದ ಶಿಲೆಗಳಲ್ಲಿ ಆಂಡಲುಸೈಟ್ ಕಾಣುತ್ತದೆ. ಆದರೆ ಎಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದಿಲ್ಲ.[೨೪]

ಕಾವಿಮಣ್ಣು (Ochres)

ಕಾವಿಮಣ್ಣು ಸಾಮಾನ್ಯವಾಗಿ ಎಲ್ಲಿ ಶಿಲೆಗಳು ಶಿಥಿಲಗೊಂಡು ಮಣ್ಣಾಗಿ ಪರಿವರ್ತನೆ ಹೊಂದಿರುತ್ತವೆಯೊ ಅಂಥ ವಲಯಗಳಲ್ಲಿ ಕಾಣಿಸುತ್ತದೆ. ಹಳದಿ, ಕೆಂಪು, ಅಥವಾ ಕಂದು ಬಣ್ಣದ ಕಾವಿಮಣ್ಣು ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ದೊರೆಯುವ ಕಡೆಗಳಲ್ಲಿ ಇರುತ್ತದೆ. ಕಾವಿ ಮಣ್ಣಿನಲ್ಲಿ ಕಬ್ಬಿಣದ ಅಂಶ ಶೇಕಡ ಹತ್ತರಿಂದ ಹಿಡಿದು ಎಂಬತ್ತರವರೆಗೂ ಇರುತ್ತದೆ. ಕಬ್ಬಿಣದ ಅಂಶವನ್ನವಲಂಬಿಸಿ ಕಾವಿಮಣ್ಣು ಲಘು ಹಳದಿಯಿಂದ ಹಿಡಿದು ದಟ್ಟಹಳದಿ, ಕಂದು ಕೆಂಪು, ಕಡುಗೆಂಪು ಬಣ್ಣಗಳನ್ನು ಪಡೆಯುತ್ತದೆ.

ಕಡುಗೆಂಪಿನ ಬಣ್ಣದ ಕೆಂಗಾವಿ ಮಣ್ಣು (Red oxide) ಕಬ್ಬಿಣದ ಅದಿರಿನೊಂದಿಗೆ ಸೊಂಡೂರು ತಾಲ್ಲೂಕಿನ ಕಮ್ಮಟ ಹರವು, ಉಬ್ಬಲಗಂಡಿ, ಮತ್ತು ಕಣಿವೆ ಹಳ್ಳಿಗಳ ಬಳಿ ಹಾಗೂ ಕುಮಾರಸ್ವಾಮಿ ದೇವಾಲಯದ ಹತ್ತಿರದ ಅಡರಗಣಿ ಬಳಿ ಕಡುಗೆಂಪು ಬಣ್ಣದ ಕಾವಿಮಣ್ಣು ದಟ್ಟವಾಗಿ ಹರಡಿದೆ. ವರ್ಷಪ್ರತಿ ೨೦,೦೦೦ ಟನ್ ಕಾವಿಮಣ್ಣನ್ನು ಇಲ್ಲಿಂದ ಪಡೆಯಲಾಗುತ್ತಿದೆ. ಕರ್ನಾಟಕದಲ್ಲಿ ಕಾವಿಮಣ್ಣಿನ ಉತ್ಪತ್ತಿ ಗಣನೀಯವಾದ ಪ್ರಮಾಣದಲ್ಲಿ ಆಗುತ್ತಿರುವುದು ಈ ನಿಕ್ಷೇಪ ಒಂದರಿಂದಲೇ.[೨೫]

ಚಿನ್ನ

ಈ ತಾಲ್ಲೂಕಿನ ಎತ್ತಿನಹಟ್ಟಿ (ತಾರಾನಗರ) ಯಿಂದ ಮೂರು ಕಿ.ಮೀ. ಆಗ್ನೇಯಕ್ಕೆ (GSI) ಲಿಂಗದಹಳ್ಳಿಯ ವಾಯುವ್ಯಕ್ಕೆ (NW) ಪೂರ್ವಜರು ಕೆಲಸ ಮಾಡಿ ಕೈಬಿಟ್ಟ ಗಣಿಗಳು ಕಾಣುತ್ತವೆ. ಮುನ್ನೂರು ಮೀ.ಉದ್ದದ ವಲಯದಲ್ಲಿ ಕಾಣುವ ಶಿಲೆಗಳು ೨.೨೫ ಗ್ರಾಂ ನಿಂದ ಹಿಡಿದು ೪.೫ ಗ್ರಾಂ ಚಿನ್ನ ತೋರಿಸುತ್ತವೆ. ಕಲ್ಲಿನ ಗುಣ, ರಚನಾತ್ಮಕ ಆವರಣ, ಇವು ಚಿನ್ನ ದೊರೆಯುವ ಸಾಧ್ಯತೆಯನ್ನು ಸಮರ್ಥಿಸುತ್ತವೆ. ಬಲವಾಗಿ ಹರಡಿರುವ ಪಟ್ಟಿಯಾಕಾರದ ಕಬ್ಬಿಣ ಹೆಚ್ಚಿರುವ ಸೊಂಡೂರು ಶಿಲಾವಲಯವನ್ನು ವಿವರವಾಗಿ ಪರೀಕ್ಷಿಸಬೇಕಾಗಿದೆ. ಇಲ್ಲಿನ ಶಿಲೆಗಳಲ್ಲಿ, ಬೇರೆಯಾಗಿಯೋ, ಅಥವಾ ಇತರ ಧಾತುಗಳೊಡನೆ ಬೆರೆತಿರುವ ಸ್ಥಿತಿಯಲ್ಲಿಯೋ, ಗಂಧಕದ ಅಂಶ ಹೆಚ್ಚಿರುವ ಶಿಲೆಗಳಲ್ಲಿ ಚಿನ್ನ ದೊರೆಯುವ ಸಾಧ್ಯತೆ ಇದೆ. ಇಲ್ಲಿನ ಬೆಣಚು ಮತ್ತು ಚರ್ಟ್ (chert) ಸಂಬಂಧದ ಶಿಲೆಗಳಲ್ಲಿ ಅತಿ ಸೂಕ್ಷ್ಮ ಆಕಾರದಲ್ಲಿ ಚಿನ್ನ, ಬೆಳ್ಳಿ ಮಿಶ್ರವಾಗಿರುವ ಕಣಗಳು ಕಾಣಿಸುತ್ತದೆ. ಈ ಕಣಗಳಲ್ಲಿ ಬೆಳ್ಳಿಯ ಅಂಶ ಶೇಕಡ ೯ ರಿಂದ ಹಿಡಿದು ೪೦ ರವರೆಗೂ ಇರುವುದು ಕಂಡುಬಂದಿದೆ.[೬೬]

ಜೇಡಿಮಣ್ಣು

ಈ ತಾಲ್ಲೂಕಿನ ಹಲವು ಕಡೆ ಕಾವಿಟ್ಟಿಗೆ ತಯಾರಿಕೆಗೆ ಯೋಗ್ಯವಾದ ಸುದ್ದೆಮಣ್ಣು ದೊರೆಯುತ್ತದೆ. ಕುಮಾರಸ್ವಾಮಿ ದೇವಾಲಯದ ಸುತ್ತ ಇರುವ ಸುಬ್ಬರಾಯನಹಳ್ಳಿ, ಸುಂದರಂ ಬೆಂಚದ ಬಳಿ ಉತ್ತಮ ಜೇಡಿ ಕಾಣಿಸುತ್ತದೆ.

ಜೇಡಿಯ ರಾಸಾಯನಿಕ ಲಕ್ಷಣ ಈ ರೀತಿ ಇದೆ :

Sio$_{೨}$	೪೫.೬೪	೪೮.೬೧
Al$_{೨}$o$_{೩}$	೩೩.೨೦	೩೫.೮೪
F e$_{೨}$o$_{೩}$	೧.೧೬	೬.೩೪[೬೭]

ಬೆಣಚು ಮತ್ತು ಬೆಣಚು ಶಿಲೆ (Quartz and Quartzite)

ಈ ತಾಲ್ಲೂಕಿನ ದೋಣಿಮಲೈ ಗುಡ್ಡಸಾಲಿಗೂ, ಬೆಳಗಲ್ ಗುಡ್ಡಗಳಿಗೂ ನಡುವೆ ಇರುವ ಕಣಿವೆ ಪ್ರದೇಶದಲ್ಲಿನ ಲಿಂಗದಹಳ್ಳಿ, ಅಯ್ಯನಹಳ್ಳಿ, ಮರುತ್ಲ, ಅನಂತಪುರ ಗ್ರಾಮಗಳ ಸರಹದ್ದಿನಲ್ಲಿ ಹಲವಾರು ಬೆಣಚಿನ ಸಿರಗಳಿವೆ. ಒಂದೊಂದು ಸಿರವೂ ೬೦ ರಿಂದ ೬೦೦ ಮೀ. ಉದ್ದ ೬ ರಿಂದ ೨೫ ಮೀಟರು ಅಗಲ ಇವೆ. ಈ ಸಿರಗಳಲ್ಲಿನ ಬೆಣಚು ೯೬ ರಿಂದ ೯೮ ಸಿಲಿಕಾಂಶ ಹೊಂದಿರುತ್ತದೆ. ಸುಮಾರು ೩.೮ ಮಿಲಿಯಟನ್‌ಗಳಷ್ಟು ಬೆಣಚನ್ನು ಪಡೆಯಬಹುದೆಂದು ಅಂದಾಜು ಮಾಡಲಾಗಿದೆ.[೬೮]

ಮ್ಯಾಂಗನೀಸ್ (Manganese)

ಸೊಂಡೂರು ಪದರು ಶಿಲಾವಲಯದ ಪಶ್ಚಿಮದ ಅಂಚಿನಲ್ಲಿ ಹರಡಿರುವ ದೇವಗಿರಿ ಶಿಲಾವರ್ಗದಲ್ಲಿ ಮಧ್ಯಮದರ್ಜೆಯ (ಮ್ಯಾಂಗನೀಸ್ ಅಂಶ ೩೮ ರಿಂದ ೪೮% ರವರೆಗಿರುವ) ಅದಿರು ಹೇರಳವಾಗಿ ದೊರೆಯುತ್ತದೆ. ಇವುಗಳೇ ಅಲ್ಲದೆ ದೇವದಾರಿಗುಡ್ಡ ಮತ್ತು ತಿಮ್ಮಪ್ಪನಗುಡಿ ಬೆಟ್ಟ ಸಾಲಿನಲ್ಲಿ ಕಾಣಿಸುವ ಕಬ್ಬಿಣ ಹೆಚ್ಚಿರುವ ಪಟ್ಟಿಯಾಕಾರದ ಶಿಲೆಗಳೊಡನೆಯೂ ಮ್ಯಾಂಗನೀಸ್ ಅದಿರು ಸಂಗ್ರಹಗೊಂಡಿರುವುದು ಕಾಣುತ್ತದೆ.

ಸೊಂಡೂರಿನ ವಲಯದಲ್ಲಿ ದೊರೆಯುವ ಅದಿರಿನಲ್ಲಿ ಸಿಲಿಕ ಮತ್ತು ರಂಜಕ ಬಹು ಕಡಿಮೆ ಪ್ರಮಾಣದಲ್ಲಿರುವುದರಿಂದ ಇಲ್ಲಿನ ಅದಿರಿಗೆ ಬೇಡಿಕೆ ಹೆಚ್ಚಾಗಿದೆ. ಸೊಂಡೂರಿನಲ್ಲಿ ಮ್ಯಾಂಗನೀಸ್ ಅದಿರಿನ ಹರವನ್ನು ಮೊದಲು ಗುರುತಿಸಿದವರು ಕ್ಯಾಪ್ಟನ್ ನ್ಯೂಬೋಲ್ಡ್. ಆಮೇಲೆ ಸುಮಾರು ೧೯೧೦ ನೆಯ ಇಸವಿಯಲ್ಲಿ ಘೋಷ್ ಎಂಬಾತ ಇಲ್ಲಿನ ನಿಕ್ಷೇಪಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಒದಗಿಸಿದ. ೧೯೦೭ರಲ್ಲಿ 'ಜನರಲ್ ಸೊಂಡೂರು ಮೈನಿಂಗ್ ಕಂಪನಿ' ಎಂದು ಹೆಸರಿಟ್ಟುಕೊಂಡು ಡಚ್ ಜನಾಂಗದ ಹಲವರು ಸೊಂಡೂರು ವಲಯದ ಪಶ್ಚಿಮ ಭಾಗದಲ್ಲಿ ಗಣಿ ತೋಡಲು ರಹದಾರಿ ಪಡೆದರು. ಆ ಕಂಪನಿಯವರಿಗೆ, ರಾಮನದುರ್ಗ, ಕಣಿವೆಹಳ್ಳಿ (ಯಶವಂತನಗರ), ಸುಬ್ಬರಾಯನಹಳ್ಳಿ, ಕಮ್ಮಟಹರವು ಮುಂತಾದ ದಿಬ್ಬಗಳನ್ನೊಳಗೊಂಡ ಸುಮಾರು ೭೫ ಚದರ ಕಿಲೊ ಮೀಟರ್ ಪ್ರದೇಶವನ್ನು ಗುತ್ತಿಗೆ ಕೊಡಲಾಗಿತ್ತು. ವ್ಯವಸ್ಥಿತ ರೀತಿಯಲ್ಲಿ ಗಣಿ ತೋಡುವ ಕೆಲಸ ರಾಮನದುರ್ಗ - ಯಶವಂತನಗರದ ಗುಡ್ಡ ಸಾಲಿನಲ್ಲಿ ಮೊದಲಾಯಿತು. ಇದುವರೆಗೆ ಇಲ್ಲಿನ ಗಣಿಗಳಿಂದ ೨.೫ ಮಿಲಿಯ (ದಶಲಕ್ಷ) ಟನ್ ಅದಿರನ್ನ ಮೊದಲ ನಲವತ್ತೈದು ವರ್ಷಗಳಲ್ಲಿ ಪಡೆಯಲಾಯಿತು. ಗುತ್ತಿಗೆ ಅವಧಿ ಮುಗಿದ ಮೇಲೆ ಡಚ್ ಕಂಪನಿ ತನ್ನ ಹಕ್ಕನ್ನು ಸೊಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರಿನ ಕಂಪನಿಗೆ ವರ್ಗಾಯಿಸಿತು. ಸೊಂಡೂರು ವಲಯದಲ್ಲಿ ಮ್ಯಾಂಗನೀಸ್ ಅದಿರಿನ ಸಮೂಹ ದೇವಗಿರಿ ಘಟಕದ (Formation) ತಳಭಾಗಕ್ಕೆ ಮಾತ್ರ ಸೀಮಿತವಾಗಿದೆ. ಘಟಕ ೮೦೦ ಮೀ ರಿಂದ ೨೦೦೦ ಮೀಟರು ಮಂದವಾಗಿದೆ. ಅದಿರಿನ ವಲಯ ದೇವಗಿರಿಯಿಂದ ಹಿಡಿದು ರಾಮನಮಲೆಯವರೆಗೂ, ಅದರಾಚೆಗೂ ಹರಡಿದೆ. ಘಟಕದ ತಳದಲ್ಲಿ ೧೦ ರಿಂದ ಹಿಡಿದು ೨೫ ಮೀ. ಮಂದದ ಬೆಣಚು ಶಿಲಾಸ್ತರವಿದ್ದು ಅದರ ಮೇಲೆ ಸುಣ್ಣ ಸಂಬಂಧದ ಮತ್ತು ಮ್ಯಾಂಗನೀಸ್ ಅಂಶ ಹೊಂದಿರುವ ಗ್ರೇವ್ಯಾಕ್ ಇರುತ್ತದೆ. ದೇವಗಿರಿ ಘಟಕದ ಬಹುಭಾಗ ಈ ಮ್ಯಾಂಗನೀಸ್ ಗ್ರೇವ್ಯಾಕನಿಂದ ಕೂಡಿದ್ದು. ದೊರೆಯುವ ಅದಿರೆಲ್ಲವೂ, ಈಚೆಗೆ ಸಂಗ್ರಹಗೊಂಡ ಪದರಗಳಾಗಿ, ಉತ್ತಮ ದರ್ಜೆಯ ಅದಿರಿನ ಸೆಲೆಗಳಾಗಿ ಕಾಣಿಸುತ್ತವೆ.

ಇಲ್ಲಿ ದೊರೆಯುವ ಅದಿರು ಕ್ರಿಪ್ಟೋಮಿಲೇನ್, ಸೈಲಾಮಿಲೇನ್, ಪೈರೊಲೂಸೈಟ್ ಮುಂತಾದ ಖನಿಜಗಳ ಮಿಶ್ರಣ. ವಿವಿಧ ದರ್ಜೆಗಳ ಅದಿರಿನಲ್ಲಿ ಮ್ಯಾಂಗನೀಸ್ ಅಂಶ ೨೦ ರಿಂದ ೫೨% ರವರೆಗೂ ಇರುತ್ತದೆ. ಸೊಂಡೂರಿನ ಗಣಿಗಳಿಂದ ಉತ್ಪತ್ತಿಯಾದ ಅದಿರಿನಲ್ಲಿ ಸಿಲಿಕಾಂಶ, ರಂಜಕಾಂಶ ಬಹಳ ಕಡಿಮೆ. ಇಲ್ಲಿ ದೊರೆಯುವ ಅದಿರನ್ನು ಮೂರು ವರ್ಗಗಳಾಗಿ ವಿಂಗಡಿಸಿ ಮಾರಾಟ ಮಾಡುತ್ತಾರೆ.

ಸೊಂಡೂರು ಎ ರಕಂ : ಮ್ಯಾಂಗನೀಸ್ ೩೮-೪೦%, ಕಬ್ಬಿಣ ೧೬-೧೮%

ಸಿಲಿಕ + ಅಲುಮಿನ ೮% (ಗರಿಷ್ಠ), ರಂಜಕ ೦.೦೫% (ಗರಿಷ್ಠ)

ಸೊಂಡೂರು ಬಿ ರಕಂ, ಮ್ಯಾಂಗನೀಸ್ ೩೨-೩೪%, ಕಬ್ಬಿಣ ೨೦-೨೨%, ಸಿಲಿಕ + ಅಲುಮಿನ ೧೦% (ಗರಿಷ್ಠ), ರಂಜಕ ೦.೦೫ % (ಗರಿಷ್ಠ)

ಸೊಂಡೂರು ಸಿ ರಕಂ : ಮ್ಯಾಂಗನೀಸ್ ೩೦%, ಕಬ್ಬಿಣ ೨೨-೨೪%, ರಂಜಕ ೦.೦೫% (ಗರಿಷ್ಠ) ಈ ಮೂರು ರಕಂ ಅದಿರು ಮಾತ್ರವಲ್ಲದೆ ಇನ್ನೂ ಎರಡು ದರ್ಜೆಯ ಅದಿರನ್ನು(೧) ೩೬-೩೮% ಮ್ಯಾಂಗನೀಸ್ ಇರುವ ಅದಿರು ಮತ್ತು(೨). ಸಿಲಿಕ ಹೆಚ್ಚಿರುವ ಅದಿರು - ಇವನ್ನು ಮಾರಾಟ ಮಾಡಲಾಗುತ್ತಿದೆ.

ಈಚೆಗೆ ನಡೆಸಿರುವ ಶೋಧನೆಗಳಿಂದ ಸೊಂಡೂರಿನಲ್ಲಿ ದೊರೆಯುವ ವಿವಿಧ ಬಗೆಯ ಮ್ಯಾಂಗನೀಸ್ ನಿಕ್ಷೇಪಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು.

ಅದಿರಿನ ಮಾದರಿ	ಸಮೃದ್ಧಿ
ಸ್ತರ ರೂಪದವು (Strati form)	೭೫ %
ಪಿಂಡಾಕಾರದವು (Podiform)	೬ %
ಸಪಾಟಾಕಾರದವು (Tabular)	೧೯ %

ಪದರದ ಆಕಾರದಲ್ಲಿರುವ ಅದಿರು ಮ್ಯಾಂಗನೀಸ್ ಅಂಶವಿರುವ ಗ್ರೇವ್ಯಾಕ್‌ನೊಂದಿಗೆ ಸಮಸಮನಾಗಿ ಬೆರೆತಿರುತ್ತದೆ. ಮ್ಯಾಂಗನೀಸ್ ಹೆಚ್ಚಿರುವ ವಿಶಿಷ್ಟ ಪದರಗಳನ್ನು ೫೦೦ ಮೀಟರ್ ದೂರದವರೆಗೂ ಗುರುತಿಸಲಾಗಿದೆ. ಪದರ ಐದು ಮೀಟರ್ ಮಂದವಾಗಿವೆ. ೫೦ ಮೀಟರ್ ಆಳದವರೆಗೂ ಕಾಣಿಸುತ್ತವೆ. ಅದಿರು ಗಡುಸಾಗಿದ್ದು ಸುಲಭಕ್ಕೆ ಪುಡಿಯಾಗುವುದಿಲ್ಲ. ರಾಸಾಯನಿಕ ಲಕ್ಷಣದಲ್ಲಿ ಹೆಚ್ಚಿನ ವ್ಯತ್ಯಾಸಗಳಿರದೆ ಒಂದೇ ಬಗೆಯದಾಗಿರುತ್ತದೆ.

ಪಿಂಡಾಕಾರದ ಅದಿರು, ಶಿಥಿಲಗೊಂಡ ಗ್ರೇವ್ಯಾಕ್ ಶಿಲಾಪದರದಲ್ಲಿನ ಟೊಳ್ಳುಗಳನ್ನು ಸುತ್ತುಗಟ್ಟಿರುತ್ತದೆ. ಸಪಾಟ ಆಕಾರದ ಅದಿರು ಹೊರವಲಯದ ಮುರಗಲ್ಲಿನೊಡನೆ ಬೆರೆತಿರುತ್ತದೆ. ಸ್ಥಳದಿಂದ ಸ್ಥಳಕ್ಕೆ ಅದಿರಿನ ಲಕ್ಷಣ ಬದಲಾಗುತ್ತದೆ. ಶಿಥಿಲಗೊಂಡ ಶಿಲೆಗಳಲ್ಲಿನ ಬಿರುಕಗಳ ಮೂಲಕ

ಮೇಲಕ್ಕೆ ಬರುವ ದ್ರವ, ಮ್ಯಾಂಗನೀಸ್ ಅಂಶವನ್ನು ಸಂಗ್ರಹಿಸಿರುವುದರಿಂದ ಅದಿರಿನ ಲಕ್ಷಣ ಒಂದೇ ಸಮನಾಗಿಲ್ಲ.

ಈ ಮೂರು ದರ್ಜೆಯ ಅದಿರು ಯಾವ ರೀತಿ ದೊರೆಯುತ್ತದೆ ಎನ್ನುವುದನ್ನು ಪುಟ ೩೦೭ರಲ್ಲಿ ಕೊಟ್ಟಿರುವ ಚಿತ್ರ ತೋರಿಸುತ್ತದೆ.

ಸೊಂಡೂರು ಶಿಲೆಗಳಲ್ಲಿ ಮ್ಯಾಂಗನೀಸ್ ಯಾವ ರೀತಿ ಸಂಗ್ರಹವಾಗಿದೆ ಎನ್ನುವುದರ ಕಡೆ ವಿಶೇಷ ಗಮನವನ್ನು ಕೊಡಲಾಗಿದೆ. ಅದಿರನ್ನು ಹೊಂದಿರುವ ಮ್ಯಾಂಗನೀಸ್ ಗ್ರೇವ್ಯಾಕ್ ಶಿಲೆ, ಸಮುದ್ರದ ತಳದಲ್ಲಿ ಬಿರುಕುಗಳ ಮೂಲಕ ಉಕ್ಕಿ ಬಂದ ಬೆಸಾಲ್ಟ್ ಮತ್ತು ಸಮುದ್ರದ ಉಪ್ಪು ನೀರಿನೊಡನೆ ಬೆರೆತುದರಿಂದಲೊ, ಸಮುದ್ರ ತಳದಲ್ಲಿನ ಜ್ವಾಲಾಮುಖಿಯಿಂದ ಹೊರ ಬಿದ್ದ ಶಿಲಾದ್ರವ ಘನೀಭೂತವಾದುದರಿಂದಲೋ ರೂಪುಗೊಂಡಿರಬಹುದೆಂದು ಊಹಿಸಲಾಗಿದೆ. ವಿರಳವಾಗಿ ಹಂಚಿಹೋಗಿದ್ದ ಮ್ಯಾಂಗನೀಸ್ ಅಂಶ ಪ್ರಕೃತಿ ಶಕ್ತಿಗಳ ಬಲದಿಂದ ಶುದ್ಧಗೊಂಡು ಅದಿರಿನ ನಿಕ್ಷೇಪಗಳಾಗಿ ಪರಿವರ್ತನಗೊಂಡಿವೆ.[೭೯]

ಸೊಂಡೂರು ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರಿನ ಕಂಪನಿ

ಇದೊಂದು ಕರ್ನಾಟಕದಲ್ಲಿ ಗಣಿಗಾರಿಕೆ ನಡೆಸುತ್ತ ಬಂದಿರುವ ಅತ್ಯಂತ ಹಳೆಯ ಕಂಪನಿ. ಇಲ್ಲಿನ ಗಣಿಗಳಲ್ಲಿ ದೊರೆಯುವ ಮ್ಯಾಂಗನೀಸ್ ಅದಿರಿನ ದಾಸ್ತಾನು ೨೫ ಮಿಲಿಯ ಟನ್‌ಗಳೆಂದು ಗುರುತಿಸಲಾಗಿದೆ. ವರ್ಷ ಪ್ರತಿ ೩,೦೦,೦೦೦ ಟನ್ ಅದಿರನ್ನು ಉತ್ಪಾದಿಸಲಾಗುತ್ತಿದೆ. ಅದಿರಿನ ಉತ್ಪಾದನೆಯ ಬಹು ಅಂಶ ಗೋವಾ ಬಂದರಿನ ಮೂಲಕ ಹೊರದೇಶಗಳಿಗೆ ರಫ್ತಾಗುತ್ತಿದೆ.

೧೯೬೮ರಲ್ಲಿ ವ್ಯಾಸನಕೆರೆಯ ಬಳಿ ಮಿಶ್ರ ಲೋಹವನ್ನು ಉತ್ಪಾದಿಸುವ ಉದ್ಯಮವೊಂದು ಸ್ಥಾಪಿತವಾಯಿತು. ವಿದ್ಯುಚ್ಛಕ್ತಿ ಚಾಲಿತವಾದ ಕುಲುಮೆಯಲ್ಲಿ ಬೀಡು ಕಬ್ಬಿಣವನ್ನು ತಯಾರಿಸಲಾಯಿತು. ೧೯೭೭ರಲ್ಲಿ ಮತ್ತು ೧೯೮೦ರಲ್ಲಿ ಇನ್ನೂ ಎರಡು ಕುಲುಮೆಗಳು ಸಿದ್ಧವಾಗಿ ಫೆರೋಮ್ಯಾಂಗನೀಸ್ ಮಿಶ್ರಲೋಹವನ್ನು ಉತ್ಪಾದಿಸಲಾಯಿತು. ಅತಿಶುದ್ಧವಾದ ಫೆರೋಸಿಲಿಕಾನ್ ಮಿಶ್ರ ಲೋಹವನ್ನು ಇಲ್ಲಿ ಉತ್ಪಾದಿಸಲಾಗುತ್ತಿತ್ತು. ಇಲ್ಲಿನ ಎಲ್ಲ ಕುಲುಮೆಗಳಿಂದ ವರ್ಷ ಪ್ರತಿ ೮೦,೦೦೦ ಟನ್ ಫೆರೋಮ್ಯಾಂಗನೀಸ್ ಮತ್ತು ಫೆರೋಸಿಲಿಕಾನ್ ಉತ್ಪಾದಿಸುವ ಸಾಧ್ಯತೆ ಇದೆ.

ಸಂಡೂರು ಘಟಕದಲ್ಲಿ ಫೆರೋಮ್ಯಾಂಗನೀಸ್ ಮಿಶ್ರಲೋಹದ ಉತ್ಪಾದನೆಯ ವಿವರ :

ಘಟಕ	ಉತ್ಪಾದನೆಯ ಮಿತಿ	೧೯೮೯-೯೦	೧೯೯೦-೯೧	ಉಪಯೋಗಿಸಿದ ಅದಿರಿನ ಪ್ರಮಾಣ
ಸೊಂಡೂರು ಘಟಕ	೩೦,೦೦೦	೩೨, ೧೮೭	೩೫.೨೬೨	೧,೦೯,೦೪೬

ಸೊಂಡೂರ ಬಳಿಯಿರುವ ಕಂಪನಿಯಲ್ಲಿ ಫೆರೋಮ್ಯಾಂಗನೀಸ್ ಒಂದೇ ಅಲ್ಲದೆ ೮೮೩೭ ಟನ್‌ಗಳಷ್ಟು ಸಿಲಿಕೋ-ಮ್ಯಾಂಗನೀಸ್ ಮಿಶ್ರಲೋಹವನ್ನು ಉತ್ಪಾದಿಸಲಾಗಿದೆ.[೮೦]

ಮ್ಯಾಗ್ನಸೈಟ್

ಮೆಗ್ನೀಷಿಯಮ್ ಕಾರ್ಬೊನೇಟ್‌ಗೆ (Mg Co೩) ಮ್ಯಾಗ್ನಸೈಟ್ ಎಂದು ಹೆಸರು. ಮೆಗ್ನೀಷಿಯಮ್ ಲೋಹ ಸಂಬಂಧದ ಅನೇಕ ಮಿಶ್ರಣಗಳನ್ನು ಈ ಖನಿಜದಿಂದ ಪಡೆಯಲಾಗುತ್ತದೆ. ಈ ತಾಲ್ಲೂಕಿನ ತೋರಣಗಲ್ಲಿನ ರೈಲುನಿಲ್ದಾಣಕ್ಕೆ ಎರಡು ಕಿ.ಮೀ. ಪೂರ್ವಕ್ಕೆ ಇರುವ ಗುಡ್ಡದಲ್ಲಿ ಐದು ಕಿ.ಮೀ. ಉದ್ದ, ೫೦ ಮೀಟರಿಂದ ಹಿಡಿದು ೨೦೦ ಮೀಟರ್ ಅಗಲವಿರುವ ಶಿಲಾವಲಯದಲ್ಲಿ ಮ್ಯಾಗ್ನಸೈಟ್ ಸಿರಗಳು ಕಾಣಿಸುತ್ತವೆ. ಸಿರಗಳು ೧ ಸೆಂ.ಮೀ.ನಿಂದ ೫೦ ಸೆಂ.ಮೀ. ಅಗಲದ ಬಿರುಕುಗಳಲ್ಲಿ ಕಾಣಿಸುತ್ತವೆ.[೮೧]

ಲಿಥಿಯಮ್

ಲಿಥಿಯಮ್ ಅತಿ ಹಗುರವಾದ ಲೋಹ. ಇದು ಸೊಂಡೂರು ಪದರ ಶಿಲಾವಲಯದ ಉತ್ತರ ತುದಿಯಲ್ಲಿ, ಹಲವು ಸೆಂ.ಮೀ. ಉದ್ದದ ಸ್ಪಾಡುಮೀನ್ ಖನಿಜ ದೊರೆಯುವುದೆಂದು ವರದಿಯಾಗಿದೆ.[೮೨]

ಹಸಿರು ಕ್ವಾರ್ಟ್‌ಸೈಟ್ (Fuchsite Quartzite)

ಸೊಂಡೂರು ಪದರು ಶಿಲಾವಲಯದ ದಕ್ಷಿಣಕ್ಕಿರುವ ನೇಮಕಲ್ಲು ಗ್ರಾಮದ ಬಳಿ ದೊರೆಯುವ ಹಸಿರು ಶಿಲೆ ಉತ್ತಮ ಅಲಂಕರಣ ಶಿಲೆಯಾಗಬಲ್ಲದು. ಉಬ್ಬಳಗಂಡಿಯ ಬಳಿ ಈ ಹಸಿರು ಶಿಲೆಗಾಗಿ ತೋಡಿರುವ ಗಣಿಯೊಂದಿದೆ.[೮೩]

ಕಬ್ಬಿಣ ಅದಿರಿನ ಜೊತೆ ಜೊತೆಗೆ ತನ್ನ ಗರ್ಭದಲ್ಲಿ ಅನೇಕ ವಿದಧ ಲೋಹಗಳನ್ನು ಅಡಗಿಸಿಕೊಂಡಿರುವ ಹಾಗೂ ಪ್ರಾಕೃತಿಕವಾಗಿ ಶ್ರೀಮಂತವಾದ ಖನಿಜ ಸಂಪತ್ತನ್ನು ಹೊಂದಿರುವ ಮತ್ತು ರಾಷ್ಟ್ರ ಮಟ್ಟದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿರುವ ಇದು ನಮ್ಮ ಜಿಲ್ಲೆಗೆ ಹೆಮ್ಮೆಯ ತಾಲ್ಲೂಕಾಗಿದೆ.

೫.೯. ಗಣಿಗಾರಿಕೆಯ ದುಷ್ಪರಿಣಾಮಗಳು

ಸಂಡೂರು ತಾಲ್ಲೂಕು ಪುರಾಣ ಕಾಲದಿಂದಲೂ ಗಣಿಗಾರಿಕೆಗೆ ಪ್ರಸಿದ್ಧಿ ಪಡೆದ ಪ್ರದೇಶವಾಗಿತ್ತೆಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಂಡಿದ್ದೇವೆ. ಇಂದು ಈ ಗಣಿಗಾರಿಕೆಯಿಂದ ಸಂಡೂರು ಪ್ರದೇಶವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಪ್ರತಿವರ್ಷ ಗಣಿಗಾರಿಕೆಯಿಂದ ಗಣಿ ಮಾಲಿಕರು ಹೆಚ್ಚಿನ ಲಾಭವನ್ನು ಪಡೆಯುತ್ತಿರುವುದು ಪ್ರಸ್ತುತ ಸಂಗತಿಯಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಂಡೂರು ತಾಲ್ಲೂಕಿನಲ್ಲಿ

ಎಲ್ಲಿ ನೋಡಿದರಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವ ದೃಶ್ಯವು ಎಲ್ಲರ ಕಣ್ಣ ಮುಂದಿರುವ ದೃಶ್ಯ. ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಇದ್ದ ಪ್ರಾಚೀನ ದೇವಾಲಯಗಳು, ಶಾಸನಗಳು, ಸ್ಮಾರಕ ಶಿಲ್ಪಗಳು, ಇತಿಹಾಸ ಪೂರ್ವ ಕಾಲದ ರೇಖಾಚಿತ್ರಗಳು ಮೊದಲಾದ ಐತಿಹಾಸಿಕ ಸ್ಮಾರಕಗಳ ಅವಶೇಷಗಳ ಕುರಿತು ಹಿಂದೆ ಬಿ.ಆರ್.ಫೂಟ್ ಮತ್ತು ಎಂ.ಟೇಲರ್ ಅವರಂತಹ ಪುರಾತತ್ವಜ್ಞರು ಬಾಂಬೆ ಬ್ರಾಂಚ್ ರಾಯಲ್ ಏಶಿಯಾಟಿಕ್ ಸೊಸೈಟಿ ಹಾಗೂ ಮದ್ರಾಸಿನ, ಇಂಡಿಯನ್ ಪ್ರೀ-ಹಿಸ್ಟಾರಿಕ್ ಅಂಡ್ ಪ್ರೋಟೋ-ಹಿಸ್ಟಾರಿಕ್ ಆಂಟಿಕ್ವಿಟಿಸ್ ಮತ್ತು ಇಂಡಿಯನ್ ಆರ್ಕಿಯಾಲಾಜಿಕಲ್ ರಿವ್ಯೂ ಮೊದಲಾದ ವರದಿಗಳಲ್ಲಿ ಈ ತಾಲ್ಲೂಕಿನ ಪುರಾತತ್ವ ಮತ್ತು ಐತಿಹಾಸಿಕ ಸ್ಥಳಗಳನ್ನು ಗುರುತಿಸಿದ್ದಾರೆ. ಆ ವರದಿಯನ್ನು ಅನುಸರಿಸಿ ಇದು ಆ ಕ್ಷೇತ್ರಗಳಿಗೆ ಭೇಟಿ ನೀಡಿದಾಗ ಅಲ್ಲಿನ ಗಣಿಗಾರಿಕೆಯ ಆ ಸ್ಥಳಗಳು ನಾಶವಾಗಿವೆ. ದೇವಾಲಯ, ಶಾಸನ ಮೊದಲಾದ ಸ್ಮಾರಕಗಳನ್ನು ಸ್ಫೋಟಿಸುವುದರ ಮೂಲಕ ನಾಶಗೊಳಿಸಿ ದ್ದಾರೆ. ತುಂಡಾದ ಶಾಸನಗಳನ್ನು, ವಿಗ್ರಹಗಳನ್ನು, ದೇವಾಲಯದ ಅವಶೇಷಗಳನ್ನು ನೀರಿಗೆ ಎಸೆಯಲಾಗಿದೆಯೆಂದು ಸ್ಥಳೀಯರು ಹೇಳುವರು. ಇದನ್ನು ಗಮನಿಸಿದರೆ ಹಿಂದೆ ಹಿರಿಯ ಪುರಾತತ್ವ ತಜ್ಞರು ಗುರುತಿಸಿರುವ ಪ್ರಾಗಿತಿಹಾಸ ಮತ್ತು ಐತಿಹಾಸಿಕ ಸ್ಥಳಗಳು ಇಂದು ನಮಗೆ ನೇರವಗಿ ಕಾಣಸಿಗದೆ ಕೇವಲ ಪುಸ್ತಕದಲ್ಲಿ ಮಾತ್ರ ನೋಡುವಂತಾಗಿದೆ.

ರಾಮಘಡದ ಸ್ಮಾರಕಗಳಿರುವ ಪ್ರದೇಶ, ನವಿಲುಸ್ವಾಮಿ ದೇವಾಲಯ, ಶಾಸನಗಳು, ತಿಮ್ಮಪ್ಪನ ಬೆಟ್ಟದ ದೇವಾಲಯ, ಕೋಟೆಯ ಅವಶೇಷ, ಬನ್ನಿಹಟ್ಟಿ, ಲಿಂಗದಹಳ್ಳಿ, ಕೊಡಾಳು, ಅಂತಾಪುರ, ಸುಲ್ತಾನಪುರ, ಕುಮಾರಸ್ವಾಮಿ ಬೆಟ್ಟ, ಹರಿಶಂಕರ ದೇವಾಲಯ, ರಣಜಿತ್‌ಪುರ, ನರಸಿಂಗಾಪುರ, ಯಶವಂತನಗರ ಹೀಗೆ ಈ ತಾಲ್ಲೂಕನ್ನು ಸುತ್ತುವರಿದು ಗಮನಿಸುತ್ತ ಹೋದರೆ ಇಡೀ ತಾಲ್ಲೂಕಿಗೆ ತಾಲ್ಲೂಕೆ ಗಣಿಗಾರಿಕೆಗೊಳಪಟ್ಟಿದ್ದು, ಈಗಾಗಲೇ ಅನೇಕ ದೇವಾಲಯಗಳು ಮತ್ತು ಸ್ಮಾರಕಗಳು ನಾಶವಾಗಿವೆ.

ಗಣಿಗಾರಿಕೆಯ ಸ್ಫೋಟಗಳ ಪ್ರಭಾವದಿಂದ ಬೆಟ್ಟದ ತುದಿಯಲ್ಲಿರುವ ದೇವಾಲಯಗಳು ಬ್ರಿಟೀಷರ ಬಂಗಲೆಗಳು ಇತರೆ ಕಟ್ಟಡಗಳು ಬಿರುಕು ಬಿಟ್ಟಿದ್ದು, ದೇವಾಲಯಗಳ ಗೋಪುರ ಮುಂತಾದ ಭಾಗಗಳು ಬಿದ್ದು ಹೋಗಿವೆ. ವಿಗ್ರಹಗಳು, ಸ್ಮಾರಕ ಶಿಲ್ಪಗಳಂತಹವುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಗೊಂಡಿವೆ. ಶಾಸನಗಳು ತುಂಡಾಗಿಯೋ ಅಥವಾ ನೆಲದಲ್ಲಿ ಹೂಳಲ್ಪಟ್ಟೋ ಮೆಟ್ಟಲಿಗೆ ಹಾಸುಗಲ್ಲುಗಳಾಗಿಯೋ ಬಳಕೆಯಾಗುತ್ತಿರುವುದನ್ನು ಕಾಣುತ್ತೇವೆ. ಹೀಗೆ ಗಣಿಗಾರಿಕೆಯಿಂದ ಈ ಪ್ರದೇಶದ ಇತಿಹಾಸಕ್ಕೆ ಬಾರಿ ಪ್ರಮಾಣದ ಧಕ್ಕೆ ಉಂಟಾಗಿದೆ. ಈಗ ಆಗಿರುವ ನಷ್ಟವನ್ನು ಬರಿಸಲಾಗದಿದ್ದರೂ ಇನ್ನೂ ನೋಡುಗರ ಗಮನ ಸೆಳೆಯುತ್ತಿರುವ ಈ ತಾಲ್ಲೂಕಿನ ಅನೇಕ ಸ್ಮಾರಕಗಳು, ದೇವಾಲಯಗಳು, ಕೋಟೆಗಳು, ಶಾಸನಗಳು ಮೊದಲಾದವುಗಳನ್ನು ರಕ್ಷಿಸಬೇಕಾದ ಹೊಣೆ

ಸಾರ್ವಜನಿಕರದ್ದಾಗಿದೆ.

ಈ ಗಣಿಗಾರಿಕೆಯಿಂದ ನಮ್ಮ ಇತಿಹಾಸಕ್ಕಷ್ಟೇ ಧಕ್ಕೆಯಾಗುತ್ತಿಲ್ಲ. ಅದನ್ನೊಳಗೊಂಡಂತೆ ಈ ಪ್ರದೇಶದ ಮೇಲೂ ಅದರ ದುಷ್ಪರಿಣಾಮ ಉಂಟಾಗುತ್ತಿದೆ. ಇದರಿಂದ ಅರಣ್ಯ ನಾಶವಾಗುತ್ತಿದೆ. ಅರಣ್ಯ ನಾಶವಾಗುವುದರಿಂದ ಮಳೆ ಪ್ರಮಾಣ ಇಲ್ಲಿ ಪ್ರತಿವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಜಲಸಂಪತ್ತು ಬತ್ತುತ್ತಿದೆ. ಇದರಿಂದ ಮುಂದೆ ಜನ ಕುಡಿಯುವ ನೀರಿಗಾಗಿ ಪರದಾಡುವಂತ ಸ್ಥಿತಿ ಒದುಗುವುದಂತೂ ಖಂಡಿತ. ಅದರಂತೆ ಕಾಡು ನಾಶವಾಗುವುದರಿಂದ ಮತ್ತು ಗಣಿಯ ಸಿಡಿಮದ್ದಿನ ಸ್ಫೋಟಕಗಳ ಶಬ್ದಕ್ಕೆ ಕಾಡು ಪ್ರಾಣಿಗಳು ಹಾಗೂ ಪಕ್ಷಿಸಂಕುಲಗಳು ಬೇರೆ ಪ್ರದೇಶಕ್ಕೆ ವಲಸೆ ಹೋಗುತ್ತಿವೆ.

ಈ ಗಣಿಗಾರಿಕೆಯಿಂದ ಸ್ಥಳೀಯರ ಮೇಲಾಗುತ್ತಿರುವ ದುಷ್ಪರಿಣಾಮವೆಂದರೆ ಈ ಪ್ರದೇಶದಲ್ಲಿ ಕಂಡುಬರುವ ಅಧಿಕವಾದ ಧೂಳು ಮತ್ತು ನೀರಿನಲ್ಲಿರುವ ಹೆಚ್ಚಿನ ಪ್ರಮಾಣದ ಕಬ್ಬಿಣಾಂಶ ಇವುಗಳಿಂದ ಬರುವ ಮೂಳೆಗಳ ನೋವು, ಅಸ್ತಮ ಕಾಯಿಲೆ, ಹೃದಯ ರೋಗಗಳಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಗಣಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಜೀವನವು ತುಂಬ ಕಷ್ಟಕರವಾಗಿದೆ. ಎಷ್ಟೋ ಜನ ಕಾರ್ಮಿಕರು ಕೆಲಸದಲ್ಲಿ ತೊಡಗಿದ ಸಂದರ್ಭದಲ್ಲಿ ಹಠಾತ್ತಾಗಿ ಸಂಭವಿಸುವ ಅನೇಕ ಅಪಘಾತಗಳಿಗೆ ಬಲಿಯಾಗಿರುವುದನ್ನು ಕಾಣುತ್ತೇವೆ. ಒಬ್ಬ ಕಾರ್ಮಿಕನ ಸಾವಿನಿಂದ ಒಂದು ಕುಟುಂಬವೇ ಅನಾಥವಾಗುತ್ತದೆ. ಇಂತಹ ಅನೇಕ ಘಟನೆಗಳ ಉದಾಹರಣೆಗಳು ಈ ತಾಲ್ಲೂಕಿನಲ್ಲಿ ಪ್ರಸ್ತುತ ಇದೆ. ಇದರಿಂದ ಕೂಲಿ ಕಾರ್ಮಿಕರು ಬಡವರಾಗಿ ಉಳಿಯುವರು. ಹೊರಗಿನಿಂದ ಬಂದ ಬಂಡವಾಳಶಾಹಿಗಳು ಶ್ರೀಮಂತರಾಗುತ್ತಿರುವ ಸಾಮಾನ್ಯ ದೃಶ್ಯ ಈ ತಾಲ್ಲೂಕಿನಲ್ಲಿ ಇಂದಿಗೂ ಜೀವಂತ. ಹೀಗೆ ಗಣಿಗಾರಿಕೆ ತುಂಬ ವೇಗವಾಗಿ ಮುಂದುವರಿದರೆ ಮುಂದೊಂದು ದಿನ ಈ ಪ್ರದೇಶದಲ್ಲಿಯ ಅರಣ್ಯ ಸಂಪತ್ತು, ಜಲಸಂಪತ್ತು, ಪಶು, ಪಕ್ಷಿ ಸಂಕುಲಗಳನ್ನು ಕಳೆದುಕೊಂಡು ಈ ಪರಿಸರವು ಬೋಳು ಬೋಳಾದ ಬೆಟ್ಟಗಳನ್ನು ಕಾಣುವಂತ ಭಯಾನಕವಾದ ವಾತಾವರಣ ಈ ತಾಲ್ಲೂಕಿನಲ್ಲಿ ಸೃಷ್ಟಿಯಾಗುವುದರಲ್ಲಿ ಸಂದೇಹವಿಲ್ಲ.

ಅಡಿಟಿಪ್ಪಣಿಗಳು

೧. ಕ.ಚ.ಮಾ - ೧, ಅನುಬಂಧ-೩, ಪು.೨೦೭

೨. ಕೈಗಾರಿಕೆಗಳಲ್ಲಿ ಲೋಹಗಳು, ಬೆ.ಗೋ.ರಮೇಶ್, ಪು.೩

೩. ಕ.ವಿ.ವಿ.ವಿ.ಕೋ-೨, ಕರಕುಶಲಕಲೆಗಳು, ಪು.೩೫೨

೪. ಅದೇ, ಪು.೩೫೨

೫. ಅದೇ, ಪು.೩೫೨

೬. ಅದೇ, ಪು.೩೫೦

೭. ಅದೇ, ಪು.೩೫೨

೮. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೪೧

೯. ಪ್ರಾ.ಕ.ಶಿ.ಒಂ.ಅ, ಕೆ.ಎಸ್.ಕುಮಾರಸ್ವಾಮಿ, ಪು.೧೩೫

೧೦. ಕ.ವಿ.ವಿ.ವಿ.ಕೋ-೨, ಕರಕುಶಲಕಲೆಗಳು, ಪು.೩೫೨

೧೧. ಅದೇ, ಪು.೩೫೨

೧೨. ಪ್ರಾ.ಕ.ಶಿ.ಒಂ.ಅ, ಕೆ.ಎಸ್.ಕುಮಾರಸ್ವಾಮಿ, ಪು.೧೬೨

೧೩. ಸಂ.ಪ.ಶಾ.ಉ.ದೇ (ಎಂ.ಫಿಲ್.ಅಪ್ರಕಟಿತ ಪ್ರಬಂಧ), ಗಿರಿಜಾ, ಪು.೧೨೧

೧೪. ಪ್ರಾ.ಕ.ಶಿ.ಚಾ.ಒಂ.ಅ, ಕೆ.ಎಸ್.ಕುಮಾರಸ್ವಾಮಿ, ಪು.೮೪.

೧೫. ಅದೇ, ಪು.೯೦

೧೬. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೪೨

೧೭. ಪ್ರಾ.ಕ.ಶಿ.ಚಾ.ಒಂ.ಅ, ಕೆ.ಎಸ್.ಕುಮಾರಸ್ವಾಮಿ, ಪು.೭೦

೧೮. ಸಂ.ಪ.ಶಾ.ಉ.ದೇ (ಎಂ.ಫಿಲ್.ಅಪ್ರಕಟಿತ ಪ್ರಬಂಧ), ಗಿರಿಜಾ, ಪು.೧೧೩

೧೯. ಅದೇ, ಪು.೧೨೨

೨೦. ಕ.ಚ.ಮಾ-೧, ಅನುಬಂಧ-೨, ಪು.೨೦೬

೨೧. ಅದೇ, ಪು.೨೦೬

೨೨. ಸಂ.ಪ.ಶಾ.ಉ.ದೇ (ಎಂ.ಫಿಲ್.ಅಪ್ರಕಟಿತ ಪ್ರಬಂಧ), ಗಿರಿಜಾ, ಪು.೧೧೩

೨೩. ಅದೇ, ಪು.೧೧೪

೨೪. ಅದೇ, ಪು.೧೨೦

೨೫. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೪೧, ೪೨

೨೬. ಸಂ.ಪ.ಶಾ.ಉ.ದೇ (ಎಂ.ಫಿಲ್.ಅಪ್ರಕಟಿತ ಪ್ರಬಂಧ), ಗಿರಿಜಾ, ಪು.೧೨೧

೨೭. ಅದೇ, ಪು.೧೧೫

೨೮. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೨

೨೯. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೫

೩೦. ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ಪು.೧

೩೧. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೮

೩೨. ಧಾರ್ಮಿಕ ವಾಣಿ, ಮಾಸಪತ್ರಿಕೆ, ಪು.೩೨

೩೩. ಅದೇ, ಪು.೩೩

೩೪. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೬

೩೫. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೩೬. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೯

೩೭. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೩೮. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೧೯, ೨೦

೩೯. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೪೦. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೦

೪೧. ಅದೇ, ಪು.೨೦

೪೨. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೪೩. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೦

೪೪. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೪೫. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೦

೪೬. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೪೭. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೧

೪೮. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೪೯. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೧

೫೦. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೫೧. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೧

೫೨. ಅದೇ, ಪು.೨೨

೫೩. ಅದೇ, ಪು.೨೨

೫೪. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೨

೫೫. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೨

೫೬. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೫೭. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೩

೫೮. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೫೯. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೩

೬೦. ಧಾರ್ಮಿಕವಾಣಿ, ಮಾಸಪತ್ರಿಕೆ, ಪು.೩೩

೬೧. ಸಂ.ಪ.ಕಾ.ತ.ಚಾ.ಅ., ವಾಸುದೇವ ಬಡಿಗೇರ, ಪು.೨೩

೬೨. ಅದೇ, ಪು.೨೩, ೨೪

೬೩. ಕೈಗಾರಿಕೆಯಲ್ಲಿ ಲೋಹಗಳು, ಬೆ.ಗೋ.ರಮೇಶ್, ಪು.೩,೪

೬೪. ಕರ್ನಾಟಕದ ಖನಿಜ ಸಂಪತ್ತು, ಬಿ.ಪಿ.ರಾಧಾಕೃಷ್ಣ, ಪು.೩೮

೬೫. ಕೈಗಾರಿಕೆಯಲ್ಲಿ ಲೋಹಗಳು, ಬೆ.ಗೋ.ರಮೇಶ್, ಪು.೪

೬೬. ಕರ್ನಾಟಕ ಸಂಗಾತಿ, ಪ್ರೊ.ಬರಗೂರು ರಾಮಚಂದ್ರಪ್ಪ, ಪು.೨೯

೬೭. ಅದೇ, ಪು.೩೦

೬೮. ಅದೇ, ಪು.೨೯

೬೯. ಖನಿಜಗಳು, ಪುರುಷೋತ್ತಮರೆಡ್ಡಿ, ಪು.೩೪, ೩೫

೭೦. ಕರ್ನಾಟಕದ ಖನಿಜ ಸಂಪತ್ತು, ಬಿ.ಪಿ.ರಾಧಾಕೃಷ್ಣ, ಪು.೩೮

೭೧. ಅದೇ, ಪು.೪೩

೭೨. ಅದೇ, ಪು.೪೫,೪೬

೭೩. ಅದೇ, ಪು.೨೬

೭೪. ಅದೇ, ಪು.೩೪

೭೫. ಅದೇ, ಪು.೧೩೭, ೧೩೯

೭೬. ಅದೇ, ಪು.೧೮೨

೭೭. ಅದೇ, ಪು.೨೧೧

೭೮. ಅದೇ, ಪು.೨೭೬

೭೯. ಅದೇ, ಪು.೩೦೪, ೩೦೫, ೩೦೬, ೩೦೭

೮೦. ಅದೇ, ಪು.೩೧೦, ೩೧೧

೮೧. ಅದೇ, ಪು.೩೧೨, ೩೧೫

೮೨. ಅದೇ, ಪು.೩೩೧, ೩೩೨

೮೩. ಅದೇ, ಪು.೩೭೩

ಅಧ್ಯಾಯ ೬

ಕಲೆಗಳು

೬

ಕಲೆಗಳು

೬.೧. ಚಿತ್ರಕಲೆ

ಮಾನವನು ಕ್ರಿಯಾಶೀಲ ಗುಣವನ್ನುಳ್ಳವನು. ಇತಿಹಾಸಪೂರ್ವ ಕಾಲದಿಂದಲೂ ಅವನು ವಸತಿಗಾಗಿ ದುಡಿಯುತ್ತಲೇ ಬಂದಿದ್ದಾನೆ. ಹೀಗೆ ದುಡಿಯುವ ಅಂಶಗಳಲ್ಲಿ ಚಿತ್ರಕಲೆಯೂ ಒಂದು. ಕಲೆಯ ಸೃಷ್ಟಿ ಮತ್ತು ಆರಾಧನೆ ಎರಡೂ ಗುಣಗಳು ಮಾನವನ ರಕ್ತದಲ್ಲಿ ಬೆರೆತಿದೆ. ಪ್ರಾಚೀನ ಕಲೆಗಾರಿಕೆಯು ಒಂದು ಮಾನವ ಸಮೂಹದ ನಾಗರೀಕತೆಯನ್ನು ಅಳಿಯುವ ಮಾನದಂಡವಾಗಿಯೂ ಇಂದು ಬಳಕೆಯಾಗುತ್ತಿದೆ. ಒಂದು ಅವಧಿಯ ಕಲೆಯ ಅಧ್ಯಯನವೆಂದರೆ ಆ ಕಾಲದ ಮಾನವನ ಸೃಜನಶೀಲ ಮನಸ್ಸಿನ ಅಧ್ಯಯನವೆಂದೇ ಕರೆಯಬಹುದು.

ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ದೊರೆಯುವಂತೆಯೇ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿಯೂ ಇತಿಹಾಸಪೂರ್ವ ಕಾಲದಿಂದ ಹಿಡಿದು ವಿಜಯನಗರೋತ್ತರದ ಅವಧಿಯವರೆಗಿನ ಕಲೆಯ ವಿವಿಧ ಮಾದರಿಗಳು ಕಂಡುಬರುತ್ತವೆ. ಅವುಗಳನ್ನು ಈ ಅಧ್ಯಾಯದಲ್ಲಿ ಚಿತ್ರಕಲೆ, ಕರಕುಶಲಕಲೆ, ಪ್ರದರ್ಶನ ಕಲೆ ಎಂದು ಮೂರು ರೀತಿ ವಿಂಗಡಿಸಿ ಅಧ್ಯಯನ ಕೈಗೊಳ್ಳಲಾಗಿದೆ.

'ಕಲೆ' ಪದವನ್ನು ಆಂಗ್ಲ ಭಾಷೆಯ 'ಆರ್ಟ್' ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲಾಗುತ್ತಿದೆ. ಸಂಸ್ಕೃತದ 'ಕಲಾ' ಕನ್ನಡದಲ್ಲಿ 'ಕಲೆ' ಆಗಿದೆ. ಶಬ್ದಕೋಶಗಳಲ್ಲಿ 'ಕಲಾ' ಶಬ್ದಕ್ಕೆ ಗತಿ, ನಡೆ, ಅರ್ಥ, ಜ್ಞಾನ, ತಿಳುವಳಿಕೆ ಎಂಬ ಅರ್ಥಗಳಿವೆ.[೧] ಪ್ರಾಚೀನರು ಅಧಿಕ ಮನ್ನಣೆ ನೀಡುತ್ತ ಬಂದ ಅವರತ್ನಾಲ್ಕು ಕಲೆಗಳಲ್ಲಿ ಚಿತ್ರಕಲೆಯೂ ಒಂದು.[೨] ಇದು ಗೋಚರ ಜಗತ್ತಿಗೆ ಸಂಬಂಧಿಸಿದ ಮಾಧ್ಯಮ.[೩] ಕಲಾನುರಾಗವೆಂಬುದು ಮಾನವ ಜೀವನದ ಹುಟ್ಟುಗುಣ. ಜನತೆಯನ್ನು ತನ್ನ ಕಲಾಪ್ರೇಮವನ್ನು ಒಂದಿಲ್ಲೊಂದು ರೀತಿಯಲ್ಲಿ ಹೊರ ತೋರುತ್ತಲೆ ಇರುತ್ತದೆ.[೪] ಈ ಚಿತ್ರಕಲೆಯು ವಿವಿಧ ಕಾಲಘಟ್ಟಗಳಲ್ಲಿ ಬದಲಾವಣೆ ಹೊಂದುತ್ತ ಬೆಳವಣಿಗೆಯಾಗುತ್ತ ಬಂದಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಸಂಡೂರು ತಾಲ್ಲೂಕಿನ ಚಿತ್ರಕಲೆಯ ಇತಿಹಾಸದ ಚಿತ್ರಣದ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಇತಿಹಾಸ ಪೂರ್ವ ಅವಧಿಯ ಗೀರು ಚಿತ್ರಗಳು

ಸಂಡೂರು ತಾಲ್ಲೂಕಿನ ಬೈರನಾಯಕನಹಳ್ಳಿಯಲ್ಲಿ ಶಿಲಾ ತಾಮ್ರಯುಗದ ಹಾಗೂ ಬೃಹತ್ ಶಿಲಾಯುಗದ ಗೀರು ಚಿತ್ರಗಳು ದೊರೆತಿವೆ.[೫] ಇದೇ ಮಾದರಿಯ ಶಿಲಾ ತಾಮ್ರಯುಗದ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಗೀರು ಚಿತ್ರಗಳು ಈ ತಾಲ್ಲೂಕಿನ ರಾಜಾಪುರದಲ್ಲಿಯೂ ಕಾಣಸಿಗುತ್ತವೆ.[೬] ಈ ಎರಡು ಪ್ರದೇಶದಲ್ಲಿ ಮಾತ್ರ ಇತಿಹಾಸ ಪೂರ್ವ ಕಾಲದ ಗೀರು ಚಿತ್ರಗಳನ್ನು ಕಾಣುತ್ತೇವೆ.

ಪಾಳೆಗಾರರ ಅವಧಿಯ ಕೊರೆದ ಚಿತ್ರಗಳು

ಈ ತಾಲ್ಲೂಕಿನ ಹಳೆದರೋಜಿ ಬೆಟ್ಟದ ಮೇಲಿರುವ ರಾಮಲಿಂಗೇಶ್ವರ ದೇವಾಲಯದಿಂದ ಮುಂದಕ್ಕೆ ಬೆಟ್ಟವನ್ನು ಹತ್ತಿ ಹೋದರೆ ಬೆಟ್ಟದ ತುದಿಯಲ್ಲಿಯ ವಿಶಾಲವಾದ ಪ್ರದೇಶದಲ್ಲಿಯ ದೊಡ್ಡ ದೊಡ್ಡ ಬಯಲು ಬಂಡೆಗಲ್ಲಿನಲ್ಲಿ ಕೆಲವು ರೇಖಾಚಿತ್ರಗಳನ್ನು ಕಾಣುತ್ತೇವೆ. ಅವುಗಳೆಂದರೆ

ಮೊದಲನೆಯ ರೇಖಾಚಿತ್ರ : ಉಗ್ರವಾಗಿ ಗರ್ಜಿಸುತ್ತ ತನ್ನ ಮೇಲೆ ಎರಗಿ ಬರುತ್ತಿರುವ ಹುಲಿಯನ್ನು ಒಬ್ಬ ಯೋಧನು ಬಂದೂಕಿನಿಂದ ಹೊಡೆಯುತ್ತಿರುವನು. ಈತನು ತಲೆಯಲ್ಲಿ ಕಿರೀಟವನ್ನು ತೋಳಬಂಧಿ, ಕೈಗಡಗ, ಕಾಲುಗಡಗ ಧರಿಸಿದ್ದಾನೆ. ಅಲಂಕಾರಿಕ ಉಡುಪನ್ನು ಧರಿಸಿರುವನು. ಹುಲಿಯನ್ನು ಕೊಲ್ಲುವುದಕ್ಕಾಗಿ ಒಂದು ಕೊಳವೆಯನ್ನೊಂದಿದ ಬಂದೂಕನ್ನು ಹಿಡಿದಿದ್ದಾನೆ. ಹುಲಿಯ ಮೈ ಮೇಲೆ ಪಟ್ಟೆಗುರುತುಗಳನ್ನು ಮತ್ತು ಕಾಲಿನ ಉಗುರುಗಳನ್ನು ತುಂಬಾ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ.

ಎರಡನೆಯ ರೇಖಾಚಿತ್ರ : ಚಲಿಸುತ್ತಿರುವ ಕುದುರೆಯ ಮೇಲೆ ಕುಳಿತ ವ್ಯಕ್ತಿಯು ತಲೆಯಲ್ಲಿ ರುಮಾಲನ್ನು ಇಟ್ಟುಕೊಂಡಿದ್ದಾನೆ. ನಿಲುವಂಗಿಯನ್ನು ಧರಿಸಿದ್ದಾನೆ. ಎಡಗೈಯಿಂದ ಲಗಾಮನ್ನು ಹಿಡಿದಿದ್ದು, ಬಲಗೈಯಲ್ಲಿ ಖಡ್ಗವನ್ನು ಹಿಡಿದಿರುವನು. ಕುದುರೆಯ ಕತ್ತಿನ ಸುತ್ತಲು ತುಂಬ ನಾಜೂಕಾಗಿ ಕೇಶದ ಚಿತ್ರಣವನ್ನು ಬಿಡಿಸಲಾಗಿದೆ.

ಮೂರನೆಯ ರೇಖಾಚಿತ್ರ : ಚಲಿಸುತ್ತಿರುವ ಒಂಟೆಯ ಮೇಲೆ ಕುಳಿತ ವ್ಯಕ್ತಿಯು ನಗಾರಿಯನ್ನು ಬಾರಿಸುತ್ತಿರುವನು. ಈತನು ತಲೆಯಲ್ಲಿ ರುಮಾಲು ಧರಿಸಿದ್ದು, ನಿಲುವಂಗಿಯನ್ನು ತೊಟ್ಟಿದ್ದಾನೆ. ಒಂಟೆಯ ಬೆನ್ನ ಮೇಲೆ ಜುಲಾ ಇದೆ. ಒಂಟೆಯ ಕತ್ತಿನ ಸುತ್ತಲೂ ಕೇಶದ ಚಿತ್ರಣವನ್ನು ಬಿಡಿಸಲಾಗಿದೆ. ನಗಾರಿಯು ಯುದ್ಧದ ಸಂದರ್ಭದಲ್ಲಿ ಬಳಸಲ್ಪಡುತ್ತಿದ್ದ ಒಂದು ವಾದ್ಯವಾಗಿತ್ತು.

ನಾಲ್ಕನೆಯ ರೇಖಾಚಿತ್ರ : ಚಲಿಸುತ್ತಿರುವ ಆನೆಯ ಮೇಲೆ ಅಂಬಾರಿ ಇದ್ದು ಮಂಟಪ ಖಾಲಿಯಾಗಿದೆ. ಆನೆಯ ಮೇಲೆ ಕುಳಿತ ಮಾವುತನು ಅಂಕುಶವನ್ನು ಹಿಡಿದಿರುವನು. ಹಾಗೂ ಆನೆಯ ಹಿಂದೆ ಧ್ವಜವನ್ನು ಹಿಡಿದು ಹಿಂಬಾಲಿಸುತ್ತಿರುವ ಮತ್ತೊಬ್ಬ ವ್ಯಕ್ತಿಯು ಇರುವನು. ಒಬ್ಬ ವ್ಯಕ್ತಿಯ ಅಧಿಕಾರವನ್ನು ಅಥವಾ ಅವನ ಶ್ರೇಷ್ಠತೆಯನ್ನು ಗುರುತಿಸಲು ಧ್ವಜಗಳನ್ನು ಸಂಕೇತವಾಗಿ ಬಳಸುತ್ತಿದ್ದರು. ಈ ಮೇಲಿನ ನಾಲ್ಕು

ರೇಖಾಚಿತ್ರಗಳು ಒಂದೇ ದೊಡ್ಡದಾದ ಬಂಡೆಗಲ್ಲಿನ ಮೇಲೆ ಚಿತ್ರಿಸಲ್ಪಟ್ಟಿವೆ. ಇಲ್ಲಿಂದ ಸ್ವಲ್ಪ ಮುಂದೆ ಎಡಕ್ಕೆ ಹೋದರೆ ಅಲ್ಲಿಯ ಒಂದು ದೊಡ್ಡ ಬಂಡೆಗಲ್ಲಿನ ಮೇಲೆ.

ಐದನೆಯ ರೇಖಾಚಿತ್ರ : ಆನೆಯ ಮೇಲೆ ಎರಗಿರುವ ಸಿಂಹದ ರೇಖಾಚಿತ್ರವಿದೆ. ಇಲ್ಲಿ ಆನೆಯು ಸಿಂಹದ ಆಕ್ರಮಣಕ್ಕೆ ಹೆದರಿ ಘೀಳಿಡುತ್ತಿರುವ ಹಾಗಿದೆ. ಸಿಂಹವು ತನ್ನ ಉಗ್ರವಾದ ಉಗುರುಗಳಿಂದ ಆನೆಯ ಸೊಂಡಿಲನ್ನು ಮತ್ತು ಕತ್ತನ್ನು ಹಿಡಿದಿದೆ. ಸಿಂಹದ ಮುಖವು ಬಹಳ ಉಗ್ರವಾಗಿ ಮತ್ತು ನೈಜವಾಗಿ ಚಿತ್ರಿತವಾಗಿದೆ. ಸಿಂಹದ ಮುಖದ ಸುತ್ತಲೂ ಕೇಶದ ಚಿತ್ರಣವನ್ನು ಬಹಳ ನಾಜೂಕಾಗಿ ಬಿಡಿಸಲಾಗಿದೆ. ಒಟ್ಟಾರೆ ಆನೆ ಮತ್ತು ಸಿಂಹದ ಈ ರೇಖಾಚಿತ್ರ ಬಹಳ ನಿಪುಣನಾದ ಚಿತ್ರಕಾರನೇ ಬರೆದಿದ್ದಾನೆಂದು ಹೇಳುವಂತಿದೆ.

ಇದೇ ಅಲ್ಲದೆ ಮೇಲೆ ತಿಳಿಸಿರುವ ಎಲ್ಲಾ ರೇಖಾಚಿತ್ರಗಳಲ್ಲೂ ರೇಖೆಯ ನಿರ್ದಿಷ್ಟತೆ, ರೇಖೆಯ ಸಮತೋಲನತೆ ಮತ್ತು ಖಚಿತವಾದ ಶೈಲಿಗಳು ಮನಸೆಳೆಯುತ್ತವೆ. ಬಹಳ ಸೂಕ್ಷ್ಮವಾದ ಗೆರೆಗಳನ್ನು ಕೂಡ ಇಲ್ಲಿ ಬಿಡಿಸಿರುವುದು ಚಿತ್ರಕಾರನ ನೈಪುಣ್ಯತೆಗೆ ಸಾಕ್ಷಿಯಾಗಿದೆ. ಈ ಎಲ್ಲಾ ರೇಖಾಚಿತ್ರಗಳು ಪಾಳೆಗಾರರ ಅವಧಿಯಲ್ಲಿ ರಚಿಸಲ್ಪಟ್ಟವುಗಳಾಗಿವೆ. ಹಾಗೂ ಬೆಟ್ಟದ ಮೇಲಿರುವ ರಾಮಲಿಂಗೇಶ್ವರ ದೇವಾಲಯದ ಹಿಂದೆ ಒಂದು ದೊಡ್ಡ ಬಂಡೆಯ ಮೇಲೆ ಸರ್ವಾಲಂಕಾರ ಭೂಷಿತನಾದ ಚರ್ತುಬಾಹುವನ್ನೊಂದಿದ ಭೈರವನ ರೇಖಾಚಿತ್ರವನ್ನು ಚಿತ್ರಿಸಲಾಗಿದೆ. ಈತನು ಹಿಂದಿನ ಬಲಗೈಯಲ್ಲಿ ಡಮರುವನ್ನು ಹಾಗೂ ಎಡಗೈಯಲ್ಲಿ ರುಂಡವನ್ನು ಹಿಡಿದಿದ್ದು, ಮುಂದಿನ ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದಿರುವ ಈತನು ತ್ರಿಭಂಗಿಯಲ್ಲಿ ನಿಂತಿರುವನು. ಇದರ ಕಾಲ ಸುಮಾರು ಪಾಳೆಗಾರರ ಅವಧಿಗಿಂತಲೂ ಹಿಂದಿನದಾಗಿ ಕಂಡುಬರುತ್ತದೆ. ಇಲ್ಲಿ ಭೈರವನ ರೇಖಾ ಚಿತ್ರವಿರುವುದನ್ನು ಗಮನಿಸಿದರೆ ಹಿಂದೆ ಈ ಬೆಟ್ಟ ಪ್ರದೇಶದಲ್ಲಿ ಭೈರವನ ಆರಾಧನೆಯು ಪ್ರಚಲಿತದಲ್ಲಿತ್ತೆಂಬ ಅಂಶವೂ ಸ್ಪಷ್ಟವಾಗುತ್ತದೆ. ಇದೇ ರಾಮಲಿಂಗೇಶ್ವರ ದೇವಾಲಯದ ಮುಂದಿರುವ ಹೊಂಡದ ತಳಭಾಗದ ಬಂಡೆಯ ಮೇಲೆ ಚಿತ್ರಿಸಲಾದ ವೀರಭದ್ರನ ರೇಖಾಚಿತ್ರವು ಸರ್ವಾಲಂಕಾರ ಭೂಷಿತವಾಗಿದ್ದು, ತ್ರಿಭಂಗಿಯಲ್ಲಿ ನಿಂತಿದೆ. ಎಡಗೈಯು ವರದಾ ಮುದ್ರೆಯಲ್ಲಿದ್ದು, ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಈ ರೇಖಾಚಿತ್ರವೂ ಪಾಳೆಗಾರರ ಅವಧಿಯದ್ದಾಗಿದೆ. ಒಟ್ಟಿನಲ್ಲಿ ಈ ರಾಮಲಿಂಗೇಶ್ವರ ಬೆಟ್ಟದ ಮೇಲೆ ದೊರೆತ ದೊಡ್ಡ ದೊಡ್ಡ ಬಯಲು ಬಂಡೆಗಳ ಮೇಲಿನ ರೇಖಾಚಿತ್ರಗಳು ವಿಜಯನಗರೋತ್ತರ ಮತ್ತು ಪಾಳೆಗಾರರ ಅವಧಿಯಲ್ಲಿ ರೇಖಿಸಿದವುಗಳಾಗಿವೆ.

ಇತ್ತೀಚಿನ ಚಿತ್ರಕಲೆ

ಅನೇಕ ವರ್ಷಗಳಿಂದ ಏಕಪ್ರಕಾರವಾಗಿ ಬೆಳೆದು ಬಂದಿದ್ದ ಚಿತ್ರಕಲೆಯು ೧೮ನೆಯ ಶತಮಾನದ ಉತ್ತರಾರ್ಧದಿಂದ ಶಿಥಿಲವಾಗಲು ಪ್ರಾರಂಭವಾಗಿ ೧೯ನೆಯ ಶತಮಾನದ ಪೂರ್ವಭಾಗದಲ್ಲಿ ನಮ್ಮ

ಸಾಂಪ್ರದಾಯಿಕ ಕಲೆಗಳು, ಕುಶಲಕಲೆಗಳು ನಶಿಸಿ ಹೋಗಲು ಪ್ರಾರಂಭವಾಯಿತು. ಮುಂದೆ ಕಲಾಭಿರುಚಿಯಲ್ಲಿ ಆದ ಪ್ರಚಂಡ ಕ್ರಾಂತಿಯಿಂದಾಗಿ ೧೯ನೇ ಶತಮಾನದಲ್ಲಿ ಚಿತ್ರಕಲಾವಿದ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಂಪ್ರದಾಯಿಕ ಇಲ್ಲವೇ ಬೆಳೆಯುತ್ತಿರುವ ಪಾಶ್ಚಿಮಾತ್ಯ ಶೈಲಿಗಳಲ್ಲಿ ಯಾವುದಾದರೊಂದನ್ನು ಅನುಸರಿಸಬೇಕಿತ್ತು. ಬ್ರಿಟೀಷರ ಕಾಲದಲ್ಲಿ ನೇರವಾಗಿ ಪಾಶ್ಚಾತ್ಯ ದೇಶಗಳೊಡನೆ ಸಂಪರ್ಕ ಹೊಂದಿ, ಸಂಪರ್ಕ ಮಾಧ್ಯಮದಿಂದ ಕಲೆಯ ಬೆಳವಣಿಗೆ ತಿಳಿಯುತ್ತಿತ್ತು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಅನೇಕ ಬದಲಾವಣೆಗಳಾದವು. ಬ್ರಿಟೀಷ್ ಕಲಾ ಶಿಕ್ಷಣ ಭಾರತಕ್ಕೆ ಬಂದು ಮುಂಬಯಿ, ಮದರಾಸು, ಲಾಹೋರ್, ಕಲ್ಕತ್ತಗಳಲ್ಲಿ ಕಲಾಶಾಲೆಗಳು ಪ್ರಾರಂಭವಾದವು. ಸರ್.ಜೆ.ಜೆ.ಕಲಾಶಾಲೆ ಬಹಳ ಪ್ರಮುಖವಾದ ಕಲಾಶಾಲೆಯಾಗಿ ಅನೇಕ ಕಲಾವಿದರ ಮೇಲೆ ಪ್ರಭಾವ ಬೀರಿತು. ಭಾರತೀಯ ಕಲೆಯ ಪುನರುಜ್ಜೀವನಕ್ಕಾಗಿ ಶ್ರಮಿಸಿದವರೆಲ್ಲ ಈ ಕಲಾಶಾಲೆಗೆ ಸೇರಿದವರು.[೭] ಇವರೆಲ್ಲರುಗಳಲ್ಲಿ ಒಬ್ಬರಾದವರು ವಿ.ಟಿ.ಕಾಳೆಯವರು.

ಇವರು ಮುರಾರಿರಾವ್ ಘೋರ್ಪಡೆಯವರ ಕಾಲದಿಂದ ಹಿಡಿದು ಇಂದಿನವರೆಗೂ ಚಿತ್ರಕಲೆಯ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡುತ್ತ ಬಂದಂತಹ ಕರ್ನಾಟಕದ ರಾಜ್ಯೋತ್ಸವ, ಛತ್ರಪತಿ ಶಿವಾಜಿ, ನೃಪತುಂಗ ಹಾಗೂ ಸಿದ್ಧಯ್ಯಪುರಾಣಿಕ ಪ್ರಶಸ್ತಿಗಳನ್ನು ಗಳಿಸಿಕೊಂಡಂತ ಚಿತ್ರಕಲಾವಿದರಾದ ಶ್ರೀ.ವಿ.ಟಿ.ಕಾಳೆಯವರು ಸಂಡೂರಿನ ಕಲಾರತ್ನವೆನಿಸಿದ್ದಾರೆ.

ತುಳುಜರಾಮ್, ಬ್ರಹ್ಮಾಂಬಿಕ ಕಾಳೆಯವರ ೬ನೇ ಪುತ್ರರಾದ ವೆಂಕಟೇಶ್ ತುಳುಜರಾಮ್ ಕಾಳೆ (ವಿ.ಟಿ.ಕಾಳೆ)ಯವರು ಮೂಲತಃ ಕೃಷಿಕ ಕುಟುಂಬದ ಮೂಲದಿಂದ ಬಂದವರು. ಇವರು ಮೂಲ ಆರ್ಯರ ದೇಸಾಯಿ ಮನೆತನಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಮಹಾರಾಷ್ಟ್ರದ ಕಾಳೆ ಎಂಬ ಗ್ರಾಮವು ಅಂಬೆಗಾವ್ ಜಿಲ್ಲೆಯಲ್ಲಿದೆ. ಇವರು ಕಾಳೆ ಗ್ರಾಮದವರಾಗಿದ್ದರು. ಕಾರಣಾಂತರಗಳಿಂದ ಆಗಿನ ಬಿಜಾಪುರ ಜಿಲ್ಲೆಯ ಹುನಗುಂದ(ಈಗಿನ ಬಾಗಲಕೋಟೆ ಜಿಲ್ಲೆ) ಎಂಬ ಗ್ರಾಮಕ್ಕೆ ಬಂದು ನೆಲೆಸಿದರು. ಆನಂತರ ಅಲ್ಲಿ ವಾಲಿಕಾರಿಕೆ ಮಾಡಿಕೊಂಡಿದ್ದರು. ಆಗ ಬಿಜಾಪುರದ ಆದಿಲ್‌ಶಾಯಿ ಮನೆತನದವರು ನೂರಾರು ಎಕರೆಯ ಭೂಮಿಯನ್ನು ಇನಾಮು ಆಗಿ ಈ ಮನೆತನದವರಿಗೆ ಕೊಟ್ಟಿದ್ದರು ಎಂದು ತಿಳಿದುಬರುತ್ತದೆ. ಪ್ರಸ್ತುತ ಈ ಯಾವ ಭೂಮಿಯು ಅವರ ಪಾಲಿಗೆ ಇಲ್ಲ.

ವೆಂಕಟೇಶ ತುಳುಜರಾಮ್ ಕಾಳೆಯವರು ೧೯೩೪ರಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಗ್ರಾಮದಲ್ಲಿ ಜನಿಸಿದರು. ಇವರು ಹುನಗುಂದ ಮತ್ತು ಗದಗಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹಾಗೂ ಗದಗದಲ್ಲಿ ಪ್ರೌಢ ಶಿಕ್ಷಣವನ್ನು ಪೂರ್ಣಗೊಳಿಸಿದರು. ಇವರು ಪ್ರಖ್ಯಾತ ಚಿತ್ರಕಲಾವಿದರಾಗುವುದಕ್ಕೆ ಅವರು ಬೆಳೆದ ಪರಿಸರ ಮತ್ತು ಹಿರಿಯ ಚಿತ್ರಕಲಾವಿದರಿಂದ ದೊರೆತ ಸ್ಫೂರ್ತಿ ಕಾರಣವಾಗಿದೆ. ಕಲಾ

ಶಿಕ್ಷಣವನ್ನು ಪ್ರಾರಂಭಿಸಿದ್ದು ಗದುಗಿನ ಮುನಿಸಿಪಲ್ ಹೈಸ್ಕೂಲಿನಲ್ಲಿ. ಎಲಿಮೆಂಟರಿ ಮತ್ತು ಇಂಟರ್ ಮೀಡಿಯಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ಮುಂಬಯಿ ಸರಕಾರವು ನಡೆಸುತ್ತಿದ್ದ ಈ ಪರೀಕ್ಷೆಗಳಲ್ಲಿ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್‌ನಲ್ಲಿ ಮೂರು ಹಾಗೂ ಇಂಟರ್‌ಮೀಡಿಯೇಟಿನಲ್ಲಿ ಎರಡು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ಗದುಗಿನ ವಿಜಯ ಕಲಾಮಂದಿರದಲ್ಲಿ ದಿ.ಶ್ರೀ.ಟಿ.ಪಿ.ಅಕ್ಕಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಉಚ್ಚ ಕಲಾ ಶಿಕ್ಷಣವನ್ನು ಪಡೆದು, ಅಂದಿನ ಮುಂಬಯಿ ಪ್ರಾಂತದ ಎಲಿಮೆಂಟರಿ ಪೇಂಟಿಂಗ್‌ನಲ್ಲಿ ದ್ವಿತಿಯ ರ್‍ಯಾಂಕಿನಲ್ಲೂ, ಇಂಟರ್ ಮೀಡಿಯೇಟ್ ಪೇಂಟಿಂಗ್ ಹಾಗೂ ಅಡ್ವಾನ್ಸ್ ಪೇಂಟಿಂಗ್‌ನಲ್ಲಿ ತೃತೀಯ ರ್‍ಯಾಂಕಿನಲ್ಲೂ ಉತ್ತೀರ್ಣರಾಗಿದ್ದು, ೧೯೫೨ರಲ್ಲಿ ಮುಂಬಯಿಯ ಸರ್.ಜೆ.ಜೆ. ಕಲಾ ಶಾಲೆಯಿಂದ ಗವರ್ನ್‌ಮೆಂಟ್ ಡಿಪ್ಲೋಮ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿದ್ದು, ಕರ್ನಾಟಕ ಸರಕಾರದ ಮಾಡೆಲಿಂಗ್ ಪರೀಕ್ಷೆಯಲ್ಲಿ ಇಂಟರ್ ಮೀಡಿಯೇಟ್‌ನಲ್ಲಿ ಉತ್ತೀರ್ಣರಾದರು. ಇವರು ೧೯೫೨ರಿಂದ ೧೯೬೪ರವರೆಗೆ ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಮುಂದೆ ೧೯೬೪ರಿಂದ ಸಂಡೂರಿನ ವಸತಿ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ಕಲಾಶಿಕ್ಷಕರಾಗಿ ಸೇರಿದ ಇವರು ೧೯೯೨ರಲ್ಲಿ ನಿವೃತ್ತಿಯಾಗುವವರೆಗೂ ಹಾಗೂ ನಂತರ ೧೯೯೭ರವರೆಗೆ ಅದೇ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ವಿ.ಟಿ.ಕಾಳೆಯವರು ಈ ಅವಧಿಯಲ್ಲಿ ಸಲ್ಲಿಸಿದ ವಿವಿಧ ಸೇವೆಗಳು ಕರ್ನಾಟಕ ಸರ್ಕಾರದ ಪಠ್ಯ ಪುಸ್ತಕಗಳ ಕಲಾವಿದ ಸದಸ್ಯನಾಗಿ, ಕರ್ನಾಟಕ ಸರ್ಕಾರದ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರವು ಕೈಗೊಂಡ ಪ್ರಾಥಮಿಕ ಶಿಕ್ಷಣದ ಪಠ್ಯ ಕ್ರಮ ನವೀಕರಣ ಕಾರ್ಯದಲ್ಲಿ ಕಲಾವಿದ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ, ಕರ್ನಾಟಕ ಸರ್ಕಾರದ ಅನೌಪಚಾರಿಕ ಶಿಕ್ಷಣದ ಪಠ್ಯ ಪುಸ್ತಕಗಳಿಗೆ ಕಲಾವಿದ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ, ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ ಎಂಬ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು ಕೈಗೊಂಡ ಕಾರ್ಯದಲ್ಲಿ ಕಲಾವಿದ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ, ಕರ್ನಾಟಕ ಸರ್ಕಾರವು ನೇಮಿಸಿದ (ಕೇಪ್) ಸಲಹಾ ಸಮಿತಿಯ ಸದಸ್ಯನಾಗಿ, ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಪಠ್ಯ ಕ್ರಮವನ್ನು ಅನುಸರಿಸಿ ಸಿದ್ಧಪಡಿಸಿದ ನೂತನ ಪಠ್ಯಕ್ರಮಕ್ಕಾಗಿ ಪಠ್ಯಕ್ರಮ ನವೀಕರಣ ಸಮಿತಿಯ ಸದಸ್ಯನಾಗಿ, ೧೯೬೦ರಿಂದ ೧೯೬೮ರವರೆಗೆ ಕರ್ನಾಟಕ ಸರಕಾರವು ನಡೆಸುವ ಡ್ರಾಯಿಂಗ್ ಗ್ರೇಡ್ ಹಾಗೂ ಉಚ್ಚ ಕಲಾ ಪರೀಕ್ಷೆಗಳಲ್ಲಿ ಪರೀಕ್ಷಕನಾಗಿ, ಧಾರವಾಡ ಕರ್ನಾಟಕ ಆರ್ಟ್ ಸೊಸೈಟಿಯ ಸದಸ್ಯನಾಗಿ, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯನಾಗಿ, ಕರ್ನಾಟಕ ಲಲಿತ ಕಲಾ ಅಕಾಡೆಮಿಗಾಗಿ "ಶ್ರವಣಬೆಳಗೊಳ" ಹಾಗೂ "ಶಿರಾ"ಗಳಲ್ಲಿ ಇರುವ ಭಿತ್ತಿ ಚಿತ್ರಗಳನ್ನು ನಕಲು ಮಾಡಿ ಕೊಟ್ಟಿದ್ದು, ಸೊಂಡೂರು ರೋಟರಿ ಕ್ಲಬ್‌ನ ಗೌರವ ಸದಸ್ಯನಾಗಿ, ಬಳ್ಳಾರಿ

ಜಿಲ್ಲಾ ಜಲ ಸಂವರ್ಧನೆ ಯೋಜನೆ ಸಂಘದ ಸಾಂಸ್ಕೃತಿಕ ಸಲಹಾ ಸಮಿತಿಯ ಸದಸ್ಯನಾಗಿ, ಬಳ್ಳಾರಿ ಜಿಲ್ಲೆಯ ಕನ್ನಡ ಜಾಗೃತ ಸಮಿತಿಯ ಸೊಂಡೂರು ತಾಲ್ಲೂಕಿನ ಪ್ರತಿನಿಧಿಯಾಗಿ, ಧಾರವಾಡ, ಮೈಸೂರು ದಸರಾ, ಗದಗ, ಹೈದರಾಬಾದ್ ಮತ್ತು ಬೆಂಗಳೂರುಗಳಲ್ಲಿ ನಡೆದ ಕಲಾ ಪ್ರದರ್ಶನಗಳಲ್ಲಿ ಅಲ್ಲದೆ ಹೊರದೇಶಗಳಲ್ಲಿ ಸೇವೆಗಳನ್ನು ಸಲ್ಲಿಸಿದ್ದಾರೆ. ಪ್ರಸ್ತುತವಾಗಿ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು.

ಇವರು ಚಿತ್ರಕಲೆಯಲ್ಲಿ ರಾಗಗಳ ಕುರಿತು ಚಿತ್ರ ಸಂಯೋಜನೆಯನ್ನು ಮಾಡಿದ್ದಾರೆ. ಅವುಗಳು: ಭಾಗೆಶ್ರೀ, ಧನಶ್ರೀ, ಬಸಂತ್, ಭೈರವಿ ಮೊದಲಾದ ರಾಗ ಮಾಲಿಕ ಚಿತ್ರಗಳ ಸಂಯೋಜನೆಯನ್ನು ಮಾಡಿದ್ದಲ್ಲದೆ, ದಿವಸದ ನಾಲ್ಕು ಜಾವಗಳನ್ನು ಪ್ರತಿನಿಧಿಸುವ: ಉಷಾ, ದಿವಾ, ಸಂಧ್ಯಾ, ನಿಶ ಚಿತ್ರಗಳನ್ನು ರಚಿಸಿದ್ದಾರೆ. ಹಾಗೂ ಸಂಗೀತದ ಪ್ರತಿಯೊಂದು ಸ್ವರಕ್ಕೂ ಅಂದರೆ : ಸ, ರಿ, ಗ, ಮ, ಪ, ದ, ನಿ ಸಪ್ತ ಸ್ವರಗಳಿಗೆ ಒಂದೊಂದು ಚಿತ್ರಗಳನ್ನೂ ರಚಿಸಿದ್ದಾರೆ. ಮತ್ತು ವೇದ ಕಾಲದ ದೇವತೆಗಳಾದ : ಇಂದ್ರ, ವರುಣ, ಅಗ್ನಿ, ಯಮ, ವಾಯು ಮುಂತಾದ ಚಿತ್ರಗಳನ್ನು ಅಷ್ಟೇ ಅಲ್ಲದೆ ಸಪ್ತಮಾತೃಕೆಯರಾದ : ಮಹೇಶ್ವರಿ, ಕೌಮಾರಿ, ವೈಷ್ಣವಿ, ಬ್ರಾಹ್ಮಿ, ಐಂದ್ರಿ, ನಾರಸಿಂಹ್ಮಿ, ವರಾಹಿ ಚಿತ್ರಗಳನ್ನು ರಚಿಸಿದ್ದಾರೆ. ಹೀಗೆ ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚು ವರ್ಣ ಚಿತ್ರಗಳನ್ನು, ನಿಸರ್ಗ ಚಿತ್ರಗಳನ್ನು ಮತ್ತು ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ರೇಖಾ ಚಿತ್ರಗಳನ್ನು, ವಾಣಿಜ್ಯ ಚಿತ್ರಗಳನ್ನು ರಚಿಸಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಚಿತ್ರಗಳು ಪ್ರಕಟಗೊಂಡಿವೆ. ಇವರು ಚಿತ್ರಕಲಾವಿದರಷ್ಟೇ ಅಲ್ಲದೆ ಉತ್ತಮ ಬರಹಗಾರರಾಗಿದ್ದು, ಅನೇಕ ನಾಟಕಗಳನ್ನು ರಚಿಸಿದ್ದಾರೆ.

ಕಲಾ ಶಿಬಿರಗಳಲ್ಲಿ ಕಲಾವಿದನಾಗಿ

೧೯೮೧ರಲ್ಲಿ ಬೆಂಗಳೂರು ಮತ್ತು ಹಂಪಿಗಳಲ್ಲಿ ನಡೆದ ಕಲಾ ಶಿಬಿರಗಳಲ್ಲಿ ಹಿರಿಯ ಕಲಾವಿದನಾಗಿ, ೧೯೮೫ರಲ್ಲಿ ಜರುಗಿದ ಪ್ರಥಮ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ನಡೆದ ಕಲಾವಿದರ ಶಿಬಿರದಲ್ಲಿ ಕಲಾವಿದನಾಗಿ, ೧೯೯೫ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಮಡಿಕೇರಿಯಲ್ಲಿ ನಡೆಸಿದ ಕಲಾವಿದರ ಶಿಬಿರದಲ್ಲಿ ಕಲಾವಿದನಾಗಿ, ೧೯೯೫ರಲ್ಲಿ ಬೀಳಗಿಯ ಮಾತೃಭೂಮಿ ಯುವಕ ಮಂಡಳಿಯವರು ನಡೆಸಿದ ಕಲಾವಿದರ ರಾಜ್ಯಮಟ್ಟದ ಶಿಬಿರದಲ್ಲಿ ಕಲಾವಿದನಾಗಿ, ೨೦೦೪ರಲ್ಲಿ ಸಾಣೆಹಳ್ಳಿಯಲ್ಲಿ ಜರುಗಿದ ಹಿರಿಯ ಕಲಾವಿದರ ಶಿಬಿರದಲ್ಲಿ ಕಲಾವಿದನಾಗಿ, ಅಲ್ಲದೇ ಅನೇಕ ಕಲಾ ಶಿಬಿರಗಳಲ್ಲಿ ಹಿರಿಯ ಕಲಾವಿದರಾಗಿ ಭಾಗವಹಿಸಿದ್ದಾರೆ.

ಪ್ರಶಸ್ತಿಗಳು

ಕರ್ನಾಟಕ ಲಲಿತ ಕಲಾ ಅಕಾಡೆಮಿ - ೧೯೬೨

ಕರ್ನಾಟಕ ಲಲಿತ ಕಲಾ ಅಕಾಡೆಮಿ - ೧೯೬೮

ಮೈಸೂರು ದಸರಾ ವಸ್ತು ಪ್ರದರ್ಶನ - ೧೯೫೫

ಮೈಸೂರು ದಸರಾ ವಸ್ತು ಪ್ರದರ್ಶನ - ೧೯೬೦

ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿ - ೧೯೮೫-೧೯೮೬

ವಿಜಯ ಕಲಾ ಮಂದಿರ ಸುವರ್ಣ ಮಹೋತ್ಸವ ಪ್ರಶಸ್ತಿ - ೧೯೯೭

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ - ೨೦೦೪ ಮುಂತಾದವು ದೊರಕಿವೆ.

ಪುರಸ್ಕಾರಗಳು

ಬಳ್ಳಾರಿ ಜಿಲ್ಲಾ ೫ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಡೂರು - ೧೯೯೧

ಸೊಂಡೂರು ರೋಟರಿ ಕ್ಲಬ್‌ನಿಂದ - ೧೯೯೨

ರಾಯಚೂರಿನ ಶ್ರೀಗುರು ಕಲಾ ಮಂದಿರದಿಂದ ಸನ್ಮಾನ - ೧೯೯೬

ಸೊಂಡೂರು ಸಂಸ್ಥಾನ ವಿರಕ್ತಮಠದಿಂದ ಸನ್ಮಾನ

ಅಖಿಲ ಭಾರತ ಚಿತ್ರಕಲಾವಿದರ ಶಿಬಿರ ಹಂಪಿಯಲ್ಲಿ "ಸಂಸ್ಕಾರ ಭಾರತಿ" ಸಂಘಟನೆಯವರಿಂದ ಸನ್ಮಾನ, ಶ್ರೀ ಹೇಮರಡ್ಡಿ ಮಲ್ಲಮ್ಮ ಮಹಾಮಂಟಪ ಅತ್ತಿಗೇರಿ ಅವರು ಆಯೋಜಿಸಿದ ಪುರಾಣ ಮಂಗಲೋತ್ಸವ ಸಂದರ್ಭದಲ್ಲಿ ಶ್ರೀ ಬಸವಲಿಂಗ ಶಿವಯೋಗಿಗಳಿಂದ "ವರ್ಣಚಿತ್ರ ಬ್ರಹ್ಮ" ಪದವಿ ಅಲ್ಲದೆ ಇನ್ನೂ ಅನೇಕ ಪುರಸ್ಕಾರ ಸನ್ಮಾನಗಳು ಲಭಿಸಿವೆ.

ವಿ.ಟಿ.ಕಾಳೆಯವರ ನಂತರ ಇವರ ಪುತ್ರರಾದ ಕಾಶಿನಾಥ ವಿ.ಕಾಳೆ ಮತ್ತು ಶ್ರೀನಾಥ ವಿ.ಕಾಳೆಯವರು ಗದುಗಿನ ವಿಜಯ ಕಲಾಮಂದಿರ ಹಾಗೂ ದಾವಣಗೆರೆ ಕಲಾಶಾಲೆಗಳಲ್ಲಿ ಕಲಿತು, ಚಿತ್ರಕಲಾವಿದರಾಗಿ ರೂಪಗೊಂಡಿದ್ದಾರೆ. ಕೆ.ವಿ.ಕಾಳೆಯವರು ಚಿತ್ರಕಲೆಗೆ ಸಂಬಂಧಪಟ್ಟಂತೆ ೨೦೦೦ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದ 'ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ' ಎನ್ನುವ ಬಣ್ಣಗಳ ಕುರಿತು ಒಂದು ಕೃತಿಯನ್ನು ರಚಿಸುವುದರ ಮೂಲಕ ಭಾರತ ಸರಕಾರದಿಂದ ಯುವ ಫೆಲೋಶಿಪ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಹಾಗೂ ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಪ್ರತಿಷ್ಠಿತ ಯುವ ಫೆಲೋಷಿಪ್ ಅವಾರ್ಡ್ ವಿಜೇತರಾದ ಇವರು ಮಥುರಾ, ಖಜುರಾಹೋ, ಸಾವಂತವಾಡಿ, ರಾಜಮಂಡ್ರಿ, ನಾಗಪುರ, ಖಮ್ಮಮ್, ಹೈದರಾಬಾದ್, ಕುರುಕ್ಷೇತ್ರ ಮೊದಲಾದೆಡೆಗಳಲ್ಲಿ ನಡೆದ ರಾಷ್ಟ್ರ ಮಟ್ಟದ ಶಿಬಿರಗಳಲ್ಲಿ ಭಾಗವಹಿಸಿದ ಕಲಾವಿದರೆಂದು ಖ್ಯಾತಿಗಳಿಸಿದ್ದಾರೆ. ಇವರು ಅನೇಕ ಕಲಾ ಪ್ರದರ್ಶನಗಳಲ್ಲಿ ಹಾಗೂ ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದು, ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿ

ಪುರಸ್ಕಾರಗಳನ್ನು ಗಳಿಸಿಕೊಂಡಿದ್ದಾರೆ. ಇವರಂತೆಯೇ ಇವರ ಸಹೋದರ ಶ್ರೀನಾಥ ಕಾಳೆಯವರು ಸಹ ರಾಜ್ಯದ ಕೆಲವೇ ಅತ್ಯುತ್ತಮ ನಿಸರ್ಗ ಚಿತ್ರಕಲಾವಿದರಲೊಬ್ಬರಾಗಿದ್ದಾರೆ.[೮]

ಹೀಗೆ ಸಂಡೂರು ತಾಲ್ಲೂಕಿನ ಚಿತ್ರಕಲೆಯ ಚರಿತ್ರೆಯು ಇತಿಹಾಸ ಪೂರ್ವ ಕಾಲದಿಂದ ಹಿಡಿದು ಇಂದಿನವರೆಗೂ ಶ್ರೀಮಂತವಾಗಿ ಬೆಳೆದು ಬಂದಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಇತ್ತೀಚೆಗೆ ಈ ಚಿತ್ರಕಲಾ ಕ್ಷೇತ್ರದಲ್ಲಿ ಕಾಳೆ ಮನೆತನದವರು ತಮ್ಮದೇ ಆದ ವಿಶೇಷ ಕೊಡುಗೆಯನ್ನು ನೀಡುತ್ತಾ ಬಂದಿರುವುದು ಹಾಗೂ ಬರುತ್ತಿರುವುದು ಗಮನಾರ್ಹ. ಅದೇ ರೀತಿ ಈ ತಾಲ್ಲೂಕಿನಲ್ಲಿ ಅನೇಕ ಸಣ್ಣ ಪುಟ್ಟ ಕಲಾವಿದರೂ ಇದ್ದು ಅವರುಗಳ ಕಲಾ ಪ್ರತಿಭೆಯು ಬೆಳಕಿಗೆ ಬರಬೇಕಿದೆ ಅದಕ್ಕಾಗಿ ತಕ್ಕ ಪ್ರೋತ್ಸಾಹದ ಅಗತ್ಯವಿದೆ. ಆದರೆ ಹೆಸರಾಂತ ಚಿತ್ರಕಲಾವಿದರಿರುವ ಈ ತಾಲ್ಲೂಕಿನಲ್ಲಿ ಚಿತ್ರಕಲೆಗಾಗಿ ಚಿತ್ರಕಲಾ ಶಾಲೆ ಇಲ್ಲದಿರುವುದು ಬಹು ದೊಡ್ಡ ಕೊರತೆಯಾಗಿದೆ. ಈ ಕಾರಣದಿಂದ ಸಂಡೂರು ತಾಲ್ಲೂಕಿನಲ್ಲಿನ ಚಿತ್ರಕಲಾವಿದರು ಹೊರಬರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮುಂದಿನ ಪೀಳಿಗೆಯವರಿಗೆ ಈ ಪ್ರದೇಶದಲ್ಲಿ ಚಿತ್ರಕಲೆಯನ್ನು ಕಲಿಯುವುದಕ್ಕಾಗಿ ಒಂದು ಕಲಾಶಾಲೆ ಮತ್ತು ಕಲಾಗ್ಯಾಲರಿಯನ್ನು ನಿರ್ಮಿಸುವುದು ಅವಶ್ಯವಾಗಿದೆ.

೬.೨. ಕರಕುಶಲಕಲೆ

ಕರ ಎಂದರೆ ಕೈ ಅಥವಾ ಕೈಗಳು ಯಾವುದೋ ಒಂದು ಕಚ್ಚಾ ಸಾಮಾಗ್ರಿಯನ್ನು ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಆಕರ್ಷಕವೂ ಉಪಯುಕ್ತವೂ ಆಗುವಂತೆ ಒಂದು ವಸ್ತುವಾಗಿ ರೂಪಿಸುವ ಕುಶಲತೆಯನ್ನೇ ಕರಕುಶಲ ಕಲೆ ಎನ್ನುತ್ತೇವೆ.[೯] ಸಂಡೂರು ತಾಲ್ಲೂಕಿನಲ್ಲಿಯೂ ಕರಕುಶಲಕಲೆಯ ಕೇಂದ್ರವಿದ್ದು ಅಲ್ಲಿ ಅನೇಕ ಕರಕುಶಲ ಸಾಮಾಗ್ರಿಗಳ ತಯಾರಿಕೆಯ ಕಾರ್ಯ ೧೯೮೮ರಲ್ಲಿ ಪ್ರಾರಂಭವಾಗಿದ್ದು, ಇಂದಿಗೂ ಈ ಕಾರ್ಯ ಉಳಿದು ಬಂದಿದ್ದು, ಅವುಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕಸೂತಿ ಕಲೆ

ಸೂಜಿ ಹಾಗೂ ವಿವಿಧ ವರ್ಣದ ದಾರಗಳಿಂದ ಬಟ್ಟೆಗಳ ಮೇಲೆ ಹಾಕಿದ ಚಿತ್ರ ವಿನ್ಯಾಸವೇ ಕಸೂತಿ ಕಲೆ. ಇದು ತುಂಬಾ ಪ್ರಾಚೀನವಾದ ಕಲೆ. ಶುಭ್ರವಾದ ಬಟ್ಟೆಯ ಮೇಲೆ ಬಣ್ಣ ಬಣ್ಣದ ದಾರಗಳಿಂದ ಹಾಕಿದ ಕಸೂತಿ ವಿನ್ಯಾಸ ತುಂಬಾ ಆಕರ್ಷಕ ಕಲೆ. ಗಿಡ, ಬಳ್ಳಿ, ಹೂ, ಪ್ರಾಣಿ, ಪಕ್ಷಿಗಳ ಚಿತ್ರಗಳು ಹೀಗೆ ಕಸೂತಿಯ ವಿಷಯ ವ್ಯಾಪ್ತಿ ಅತಿ ದೊಡ್ಡದು.[೧೦]

ಕಸೂತಿ ಕಲೆಯು ಕೆಳವರ್ಗದ ಸ್ತ್ರೀಯರಲ್ಲಿ ಹೆಚ್ಚಾಗಿ ಕಾಣಬಹುದು. ಲಂಬಾಣಿ ಹೆಂಗಸರ ಕಸೂತಿ ಕಲೆ ಉನ್ನತ ಮಟ್ಟದ್ದು ಎನ್ನಲು ಅಡ್ಡಿಯಿಲ್ಲ. ಲಂಬಾಣಿ ಹೆಂಗಳೆಯರ 'ಲಂಗ'ಗಳು ಕಸೂತಿಯಿಂದಲೇ

ಆದವು. ಕೆಂಪು ವಸ್ತ್ರದಲ್ಲಿ ಅಲ್ಲಲ್ಲಿಯೇ ಕನ್ನಡಿಯ ಚೂರು ಸೇರಿಸಿ ವಿವಿಧ ಬಣ್ಣದ ದಾರಗಳಲ್ಲಿ ಕಸೂತಿ ಮಾಡುವ ರೀತಿ ಸೊಗಸಾದದ್ದು. ಲಂಗಕ್ಕೆ 'ಫೇಟೆಯಾ' ಎಂದು ಕರೆಯುತ್ತಾರೆ. ಒಂದು ಲಂಗ ತಯಾರಿಸಲಿಕ್ಕೆ ಎನಿಲ್ಲವೆಂದರೂ ಹದಿನೈದು ದಿನಗಳಾದರೂ ಬೇಕು. ಎದೆಯ ಭಾಗಕ್ಕೆ ಕಟ್ಟಿಕೊಳ್ಳುವ 'ಕಾಂಚಳಿ'ಯಲ್ಲಿ ಬಗೆಬಗೆಯ ಕಸೂತಿ ಇರುತ್ತದೆ. ತಲೆಯ ಮೇಲೆ ಹೊದ್ದುಕೊಳ್ಳುವ ಚಾದರದ ಮುಂಭಾಗದಲ್ಲಿ ಬೆಳ್ಳಿಯ ಕಿರುಗೆಜ್ಜೆಯನ್ನು ಅಳವಡಿಸಿ ಕಸೂತಿ ಮಾಡಿರುತ್ತಾರೆ. ಬೆನ್ನಿನ ಮೇಲೆ ಬರುವಂತೆ ಕನ್ನಡಿಯ ಚೂರುಗಳನ್ನಿಟ್ಟು ಚೌಕಾಕಾರದಲ್ಲಿ ಕಸೂತಿ ಹಾಕಿ ಬಂದಿಸಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಉಪಯೋಗಕ್ಕೆ ಬೀಳುವ ಕೆಲ ವಸ್ತುಗಳು ಪ್ರಮುಖವಾಗಿ ಕಸೂತಿ ಹಾಕಿ ಮಾಡಿದವುಗಳು. ಲಂಬಾಣಿಗರ ಬದುಕೇ ಕಸೂತಿ. ಪ್ರಕೃತಿಯ ಪ್ರತಿಯೊಂದು ಚೆಲುವನ್ನೂ ತಮ್ಮ ಕಸೂತಿಯಲ್ಲಿ ಮೂಡಿಸುವ ಕಲೆಗಾರಿಕೆ ಲಂಬಾಣಿ ಹೆಂಗಳೆಯರದ್ದು. ಇದು ವಂಶ ಪಾರಂಪರೆಯಿಂದ ಬಂದ ಕಲೆ.[೧೧]

ಲಂಬಾಣಿಗರು ಮೂಲತಃ ರಾಜಸ್ಥಾನದವರಾಗಿದ್ದು, ಸಂಚಾರಿ ಜನಾಂಗವಾಗಿ ದಕ್ಷಿಣಕ್ಕೆ ಬಂದು ಅಲ್ಲಲ್ಲಿ ತಂಡೋಪತಂಡಗಳಾಗಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳನ್ನೇ ತಮ್ಮ ತಾಯ್ನಾಡನ್ನಾಗಿ ಮಾಡಿಕೊಂಡಿದ್ದಾರೆ.[೮] ಇವರು ಗ್ರಾಮೀಣ ಜನರಿಂದ ದೂರವಿದ್ದು ತಮ್ಮದೇ ಆದ 'ತಾಂಡಾ' ಎಂದು ಅವರೇ ಕರೆದುಕೊಳ್ಳುವ ಪ್ರತ್ಯೇಕ ವಾಸಸ್ಥಳಗಳಲ್ಲಿ ವಾಸಿಸುತ್ತಾರೆ. ಸಂಡೂರು ಸುತ್ತಮುತ್ತ ಅನೇಕ ತಾಂಡಾಗಳಿವೆ. ಆ ತಾಂಡಾಗಳಲ್ಲಿ ವಾಸಿಸುವ ಮಹಿಳೆಯರು ಒಳ್ಳೆಯ ಕಸೂತಿಕಲೆ ಬಲ್ಲವರಾಗಿದ್ದು, ಇಂದು ಅವರು ಸಂಡೂರಿನ ಕರಕುಶಲಕಲಾ ಕೇಂದ್ರದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸುತ್ತಿರುವ ಕುರಿತು ಇಲ್ಲಿ ಚಿತ್ರಿಸಲಾಗಿದೆ.

ಸಂಡೂರಿನ ಕುಶಲಕಲಾ ಕೇಂದ್ರವು ಒಂದು ಸಹಕಾರಿ ಸಂಸ್ಥೆಯಾಗಿದ್ದು, ಸಂಡೂರು ಮ್ಯಾಂಗನೀಜ ಮತ್ತು ಐರನ್ ಓರ್ ಎಂಬ ಪ್ರಾದೇಶಿಕ ಬೃಹತ್ ಸಂಸ್ಥೆಯ ಸಹಯೋಗದಲ್ಲಿ ಪ್ರಾರಂಭಿಸಲ್ಪಟ್ಟ ಸಂಸ್ಥೆಯಾಗಿದೆ. ಸಂಡೂರಿನಲ್ಲಿ ಈ ಕರಕುಶಲಕಲಾ ಕೇಂದ್ರವು ಸಂಡೂರಿನ ಮ್ಯಾಂಗನೀಜ ಮತ್ತು ಐರನ್ ಓರ್ ಸಂಸ್ಥೆಯ ಒಡೆಯರ ಧರ್ಮಪತ್ನಿ ಶ್ರೀಮತಿ ವಸುಂಧರಾ ಘೋರ್ಪಡೆ ಮತ್ತು ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಮಹಾಲಕ್ಷ್ಮಿಯವರು ೧೯೮೦ರಲ್ಲಿ ಲಂಬಾಣಿ ಕುಶಲ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಸ್ಥಳೀಯ "ಮಹಿಳಾ ಮಂಡಳಿ"ಯ ಹೆಸರಿನಲ್ಲಿ ಈ ಸಂಸ್ಥೆಯನ್ನು ಹುಟ್ಟು ಹಾಕಿದರು.

ಸಂಡೂರು ಮ್ಯಾಂಗನೀಜ ಮತ್ತು ಐರನ್ ಓರ್ ಕಂಪನಿಯ ಕಲ್ಯಾಣ ಯೋಜನೆಯ ಅಂಗವಾಗಿ ೧೯೮೪ರಲ್ಲಿ ಸಂಡೂರು ಕುಶಲಕಲಾ ಕೇಂದ್ರವೆಂಬ ಅಭಿದಾನದಲ್ಲಿ ಸಹಕಾರಿ ಸಂಸ್ಥೆಯಾಗಿ ನೊಂದಾಯಿಸಲ್ಪಟ್ಟಿತು. ಅದನ್ನು ೧೯೮೮ರಲ್ಲಿ ಒಂದು ಸಂಘವೆಂದು ನೊಂದಾಯಿಸಲಾಯಿತು. ಈ

ಕರಕುಶಲ ಕಲಾಕೇಂದ್ರವು ಸಂಡೂರು ಸಂಸ್ಥಾನದ ಅರಸು ಮನೆತನದ ಯುವರಾಜರಾದ ಎಂ.ವೈ. ಘೋರ್ಪಡೆಯವರ ಸಹಯೋಗದಲ್ಲಿ ಸ್ಥಾಪಿತವಾಯಿತು.

ಈ ಕೇಂದ್ರದಲ್ಲಿ ಕನ್ನಡಿ ಮತ್ತು ಕಸೂತಿ ಕಲೆ, ಬಿದಿರು ಮತ್ತು ಬೆತ್ತದ ಕಲೆ, ಶಿಲ್ಪ ಕೆತ್ತನೆಯ ಕಲೆ, ಖಾದಿ ನೇಕಾರರು ಮುಂತಾದ ಕುಶಲ ಕರ್ಮಿಗಳನ್ನೊಳಗೊಂಡ ಸಂಸ್ಥೆಯಾಗಿದ್ದರೂ ಇಲ್ಲಿ ಬೊಂಬೆಗಳನ್ನು ತಯಾರಿಸುವ ಒಬ್ಬ ಕಿನ್ನಾಳ ಕಲಾವಿದನು, ವಿಜಯನಗರ ಪೆಂಟಿಂಗ್ಸ್ ಮಾಡುವವರು, ಬಟ್ಟೆಗಳಿಗೆ ಬಣ್ಣ ಹಾಕುವವರು (ಬಣ್ಣದ ಮನೆ) ಇರುವರು. ಇಲ್ಲಿ ತಮ್ಮ ತಮ್ಮ ಕ್ಷೇತ್ರದಲ್ಲಿ ತರಬೇತಿ ಹೊಂದಲು ಅವರನ್ನು ಬೆಂಗಳೂರಿನ ಪ್ರಾದೇಶಿಕ ವಿನ್ಯಾಸ ಮತ್ತು ತಾಂತ್ರಿಕ ಅಭಿವೃದ್ಧಿ ಕೇಂದ್ರ ಅಥವಾ ಹೆಸರಾಂತ ಬೋಧಕ ಕಸುಬುಗಾರರಲ್ಲಿಗೆ ಕಳುಹಿಸಲಾಗುತ್ತಿದೆ. ತರಬೇತಿ ಹೊಂದಿದ ಕಸುಬುದಾರರನ್ನು ಬೋಧಕ ಕಸುಬುದಾರರನ್ನಾಗಿ ಈ ಕೇಂದ್ರದಲ್ಲಿ ನೇಮಕ ಮಾಡಿಕೊಂಡು ಇವರ ಮೂಲಕ ಪರಂಪರಾಗತ ಕುಶಲಕರ್ಮಿಗಳಿಗೆ ಸರ್ಕಾರದ ವಿಶ್ವ, ಟ್ರೈಜಂ, ನಬಾರ್ಡ್ ಯೋಜನೆಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈಗ ಇವರು ಉತ್ಪನ್ನ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಲಂಬಾಣಿ ಹೆಣ್ಣು ಮಕ್ಕಳು ಪರಂಪರಾಗತ ಉಡುಪುಗಳನ್ನು ತಯಾರಿಸಲು ಅಪೂರ್ವ ಕನ್ನಡಿ ಮತ್ತು ಕಸೂತಿ ಕಲೆಯನ್ನು ರೂಢಿಯಲ್ಲಿರಿಸಿ ಕೊಂಡಿದ್ದಾರೆ. ಕೈ ಕೆಲಸದ ಈ ಉಡುಪುಗಳ ಮೇಲಿನ ಕಲೆ ಬಹು ಮೋಹಕವಾಗಿರುತ್ತದೆ. ಹಲವಾರು ವರ್ಷಗಳಿಂದ ಈ ಕೇಂದ್ರವು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಸರ್ಕಾರದ ಯೋಜನೆಗಳಾದ ವಿಶ್ವ, ಟ್ರೈಜಂ, ನಬಾರ್ಡ್ ಮತ್ತು ಭಾರತ ಸರ್ಕಾರದ ಡೆವಲಪ್ ಮೆಂಟ್ ಕಮಿಷನರ್ (ಕರಕುಶಲ) ಡೆಲ್ಲಿಗಳ ಮೂಲಕ ತರಬೇತಿ ಕಾರ್ಯಕ್ರಮಗಳ ಮತ್ತು ಇತರ ಯೋಜನೆಗಳ ಪ್ರಯೋಜನ ಪಡೆದಿದೆ. ಕ್ಲಸ್ಟರ್ ಡೆವಲಪ್ ಮೆಂಟ್ ಯೋಜನೆಯಡಿಯಲ್ಲಿ ನಬಾರ್ಡ್ ಮತ್ತು ಭಾರತೀಯ ಸರಕಾರದ ಡೆವಲಪ್ ಮೆಂಟ್ ಕಮೀಷನರ್ (ಕರಕುಶಲ) ನವದೆಹಲಿ, ಇವರುಗಳ ಸಹಯೋಗದಲ್ಲಿ ಲಂಬಾಣಿ ಕಸೂತಿ ಕಲೆಯನ್ನು ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲು ನಮ್ಮ ಸಂಸ್ಥೆಯನ್ನು ಆರಿಸಿಕೊಂಡಿದ್ದು, ಪಾಲಿ ಸಂಸ್ಥೆಯು ೧೫೦ ಜನ ಲಂಬಾಣಿ ಕುಶಲಕರ್ಮಿಗಳಿಗೆ ಕೆಲಸ ಒದಗಿಸುತ್ತಿದೆ. ೧೯೯೧ ರಿಂದ ದೆಹಲಿಯ ದಸ್ತಕರ್ ಕಲಾಸಂಘವು ಕನ್ನಡಿ ಮತ್ತು ಕಸೂತಿ ಕಲೆಯ ವಿನ್ಯಾಸ ಅಭಿವೃದ್ಧಿಯಲ್ಲಿ ತನ್ನ ಸೂಕ್ತ ಸಲಹೆ ಸೂಚನೆಗಳನ್ನು ನೀಡುವಲ್ಲಿ ದಯೆ ತೋರಿದೆ. ನಮ್ಮ ಉತ್ಪಾದನೆಗಳನ್ನು ದಸ್ತಕಾರ್‌ರವರು ಸಂಘಟಿಸುವ ಪ್ರದರ್ಶನಗಳು, ಮಂಗಳೂರಿನ ಹ್ಯಾಂಡಿ ಕ್ರಾಫ್ಟ್ ಮಾರ್ಕೆಟಿಂಗ್ ಅಂಡ್ ಸರ್ವೀಸ್ ಎಕ್ಸ್‌ಟೆನ್‌ಷನ್, ಸ್ವಯಂ ಸೇವಾ ಸಂಸ್ಥೆಗಳು, ಮುಂಬೈ, ಪುಣೆ ಮತ್ತು ನವದೆಹಲಿಯ ಎಕ್ಸ್ ಪೋರ್ಟ್ ಹೌಸಸ್ ಅಂಡ್ ಬೋಟೆಕ್ಸ್ ಮೂಲಕ ಮಾರಾಟ ಮಾಡಲಾಗುತ್ತಿದೆ. ಈ ಉತ್ಪಾದನೆಗಳನ್ನು ಯು.ಕೆ. ನ್ಯೂಜಿಲ್ಯಾಂಡ್, ಸ್ವಿಡ್ಜರ್‌ಲ್ಯಾಂಡ್ ಮತ್ತು ಫ್ರಾನ್ಸ್ ದೇಶಗಳಿಗೂ ನೇರವಾಗಿ ರಫ್ತು ಮಾಡಲಾಗುತ್ತಿದೆ.

ಬಿದಿರು ಮತ್ತು ಬೆತ್ತದಿಂದ ಗೃಹಕೃತ್ಯದ ವಸ್ತುಗಳನ್ನು ಮತ್ತು ಕೃಷಿ ಸಲಕರಣೆಗಳನ್ನು ತಯಾರಿಸುವ ಕಲೆ ಇದಾಗಿದೆ. ಈ ಪ್ರದೇಶದ ಮೇದಾರ ಜನಾಂಗದವರ ಪರಂಪರಾಗತ ಕಸುಬು ಇದು. ಸ್ಥಳೀಯ ಮೇದಾರ ಜನಾಂಗದವರು ತಮ್ಮ ಕೌಶಲ್ಯತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಈ ಚಟುವಟಿಕೆಯನ್ನು ನಮ್ಮ ಕೇಂದ್ರ ಕೈಗೆತ್ತಿಕೊಂಡಿದೆ. ಪ್ರಾರಂಭದಲ್ಲಿ ಇಲ್ಲಿನ ಕುಶಲಕರ್ಮಿಗಳನ್ನು ತರಬೇತಿ ಪಡೆಯಲು ಬೆಂಗಳೂರಿನ ಪ್ರಾದೇಶಿಕ ವಿನ್ಯಾಸ ಮತ್ತು ತಾಂತ್ರಿಕ ಅಭಿವೃದ್ಧಿ ನಿಗಮ ಮತ್ತು ದಕ್ಷಿಣ ಕನ್ನಡದ ಬಿದಿರು ಮತ್ತು ಬೆತ್ತದ ಸಂಘಗಳಿಗೆ ಕಳುಹಿಸಲಾಯಿತು. ಈಗ ಇವರು ಬಿದಿರು, ಬೆತ್ತದ ಸರಕುಗಳನ್ನು ಮತ್ತು ಪೀಠೋಪಕರಣಗಳನ್ನು ತಯಾರಿಸುತ್ತಿದ್ದಾರೆ. ಇಲ್ಲಿ ಪುನಃ ನಮ್ಮ ಕೇಂದ್ರ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ಕೇಂದ್ರ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಸಂಸ್ಥೆ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ತರಬೇತಿ ಪ್ರಯೋಜನ ಪಡೆದಿದೆ. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಸರ್ಕಾರದ ಬೆಲೆಯಲ್ಲಿ ನಮ್ಮ ಕೇಂದ್ರಕ್ಕೆ ಅಗತ್ಯವಾದ ಬಿದಿರು ಮತ್ತು ಬೆತ್ತವನ್ನು ನೀಡುತ್ತಿದೆ. ನಮ್ಮ ಕೇಂದ್ರವು ಬಿದಿರು ಮತ್ತು ಬೆತ್ತದ ವಸ್ತುಗಳಾದ ಲೆಟರ್ ಹೋಲ್ಡರ್ಸ್, ಲ್ಯಾಂಪ್ ಷಡ್ಸ್, ಪಾಟ್ ಹೋಲ್ಡರ್ಸ್, ಮ್ಯಾಗಜೀನ್ ಹೋಲ್ಡರ್ಸ್‌ನ್ನು ಹಾಗೂ ಪೀಠೋಪಕರಣಗಳು, ಟೀಪಾಯ್ಸ್, ಟಿ.ವಿ.ಸ್ಟ್ಯಾಂಡ್, ಸ್ಕ್ರೀನ್ಸ್ ಮತ್ತು ಸೋಫಾಸೆಟ್ಸ್ ಇತ್ಯಾದಿಗಳನ್ನು ತಯಾರಿಸುತ್ತಿದೆ.

ಖಾದಿ ಉತ್ಪಾದನೆಗಳನ್ನು ತಯಾರಿಸಲು ಮತ್ತು ಅವುಗಳನ್ನು ಮಾರಾಟ ಮಾಡಲು ನಮ್ಮ ಕೇಂದ್ರವು ಲಕ್ನೋದ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಕಮೀಷನ್‌ನಿಂದ ಪ್ರಮಾಣಪತ್ರ ಪಡೆದಿದೆ. ಸಂಡೂರು, ಕೃಷ್ಣಾನಗರ ಮತ್ತು ಯಶವಂತನಗರದಲ್ಲಿ ದಾರ ನೂಲುವ ಕೆಲಸ ನಡೆಯುತ್ತ ಇದೆ. ನೇಯುವ ಕೆಲಸವನ್ನು ಮಾತ್ರ ಸಂಡೂರಿನಲ್ಲಿಯೇ ಮಾಡಲಾಗುತ್ತಿದೆ. ಈ ಕೇಂದ್ರವು ತನ್ನ ಉತ್ಪಾದನೆಗಳನ್ನು ಮಾರಾಟ ಮಾಡಲು ಮಂಗಳೂರಿನ ಹ್ಯಾಂಡಿ ಕ್ರಾಫ್ಟ್ ಅಭಿವೃದ್ಧಿ ಆಯುಕ್ತರವರ ನೆರವು ಪಡೆಯುತ್ತಿದೆ. ನಮ್ಮ ಕೇಂದ್ರವು ಕ್ರಾಫ್ಟ್ ಬಜಾರ್, ಮಾರ್ಕೆಟಿಂಗ್ ಕ್ಲಿನಿಕ್ಸ್, ಪ್ರದರ್ಶನಗಳಲ್ಲಿ ಭಾಗವಹಿಸಿ ಉತ್ಪಾದನೆಗಳ ಮಾರಾಟದ ಪ್ರಯೋಜನ ಪಡೆಯುತ್ತಾ ಇದೆ.

ಕರ್ನಾಟಕದ ಕಸೂತಿ ಕಲೆಯು ಧಾರವಾಡ ಜಿಲ್ಲೆಯ ಸಾಂಪ್ರದಾಯಿಕ ಕಸೂತಿ ಕಲೆಯಾಗಿದ್ದು, ಬಹಳಷ್ಟು ಮಹಿಳೆಯರು ಈ ಕಲೆಯನ್ನು ತಲೆ ತಲಾಂತರಗಳಿಂದ ತಾವು ದಿನ ನಿತ್ಯದ ಉಡುಪುಗಳಾದ ಸೀರೆ ಮತ್ತು ರವಿಕೆಗಳ ಮೇಲೆ ಕಸೂತಿ ಹಾಕುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಕಲೆಯು ವಾಣಿಜ್ಯೀಕರಣಗೊಂಡಿದೆ.

ಒಟ್ಟಿನಲ್ಲಿ ಈ ಕೇಂದ್ರವು ತನ್ನ ೧೫ ವರ್ಷದ ಅವಧಿಯಲ್ಲಿ ಸಮರ್ಪಣೆ ಮತ್ತು ವಚನ ಬದ್ಧತೆಯಿಂದ ಕಾರ್ಯ ನಿರ್ವಹಿಸಿ ಈ ಕಲೆಗಳ ಪುನರುಜ್ಜೀವನ ಮತ್ತು ಈ ಪ್ರದೇಶದ ಕುಶಲಕರ್ಮಿಗಳ

ಸುಸ್ಥಿತಿಯನ್ನು ನೋಡಿಕೊಳ್ಳುವಲ್ಲಿ ಗುರುತರ ಬೆಳವಣಿಗೆಯನ್ನು ಕಂಡಿದೆ. ಈ ಕಲೆಗಳಿಗೆ ಎಂ.ವೈ.ಘೋರ್ಪಡೆ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಕಮೀಷನ್, ನಬಾರ್ಡಿನ ಅಧಿಕಾರಿಗಳು ಹ್ಯಾಂಡಿ ಕ್ರಾಫ್ಟ್ ಅಭಿವೃದ್ಧಿ ಆಯುಕ್ತರು. ಕರ್ನಾಟಕ ರಾಜ್ಯ ಹ್ಯಾಂಡಿಕ್ರಾಫ್ಟ್ ಅಭಿವೃದ್ಧಿ ನಿಗಮ, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳಾದ ದಸ್ತಕರ್ ಮತ್ತು ಕರ್ನಾಟಕ ಖಾದಿ ಬೋರ್ಡ್ ಹಾಗೂ ಕಪಾರ್ಡ್ ಸಂಸ್ಥೆಗಳ ಸಹಯೋಗ ಇತರರ ಬೆಂಬಲ ಮಾರ್ಗದರ್ಶನದಿಂದ ಈ ಕುಶಲಕಲೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಈ ಪ್ರದೇಶದ ಕುಶಲಕರ್ಮಿಗಳ ಮಟ್ಟವನ್ನು ಸುಧಾರಿಸುವ ದಿಶೆಯಲ್ಲಿ ಈ ಸಂಸ್ಥೆ ಅಭಿವೃದ್ಧಿ ಪತದಲ್ಲಿ ಸಾಗಿದೆ. ಆದರೆ ಕೇಂದ್ರದ ಇಂದಿನ ಸ್ಥಿತಿಯ ಬಗ್ಗೆ ನಾವಿಂದು ಚಿಂತಿಸಬೇಕಿದೆ. ಇಲ್ಲಿಯವರೆಗೂ ಸಹಾಯಧನವನ್ನು ನೀಡುತ್ತ ಬಂದ ಸಂಡೂರು ಮ್ಯಾಂಗನೀಜ ಮತ್ತು ಐರನ್ ಓರ್ ಸಂಸ್ಥೆಯು ಈಗ ಅದನ್ನು ನಿಲ್ಲಿಸಿದೆ. ಕಳೆದ ಒಂದೆರಡು ವರುಷಗಳಿಂದ ಕೆಲವು ಲಂಬಾಣಿಗಳು ಕೆಲಸ ಬಿಟ್ಟ ಪರಿಣಾಮವಾಗಿಯೂ ಉತ್ತಮ ಉದ್ಯೋಗವನ್ನರಿಸಿ ತಾಂಡಾಗಳಿಂದ ಸ್ಥಳಾಂತರಗೊಂಡ ಪರಿಣಾಮವಾಗಿಯೂ ಕಾರ್ಯ ಪ್ರಗತಿಯು ಕುಂಠಿತಗೊಂಡಿದೆ. ಆದರೆ ಸಹಯೋಗದಿಂದ ಕೂಡಿ ಕೆಲಸ ಮಾಡುವ ಶಕ್ಯತೆ, ಬದಲಾವಣೆಗಳ ದತ್ತು ಪಡೆಯುವಿಕೆ, ಹೊಸ ಮಾರುಕಟ್ಟೆಗಳ ಪರಿಶೋಧನೆ, ಗ್ರಾಹಕರ ಆಯ್ಕೆಗಳನ್ನು ಅರ್ಥ ಮಾಡಿಕೊಳ್ಳುವುದು, ಅಲ್ಲದೆ ಹೊರಗಿನ ಮಾರುಕಟ್ಟೆಗಳೊಂದಿಗೆ ನಕ್ಷಾ ತಯಾರಕರ ಸಹಯೋಗದೊಂದಿಗೂ ಕಾರ್ಯೋನ್ಮುಖರಾಗುವುದರಲ್ಲಿಯೇ ಕೇಂದ್ರದ ಹಾಗೂ ಲಂಬಾಣಿ ಕೈಗಾರಿಕಾ ಸ್ತ್ರೀಯರ ಭವಿಷ್ಯವಿದೆ. ಇದರಿಂದಾಗಿ ಅವರು ಸ್ವತಂತ್ರವಾಗಿಯೂ, ಬಲಿಷ್ಠರಾದ ಕೈಗಾರಿಕಾ ಗುಂಪಾಗಿ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆಯಲ್ಲದೇ ಮುಂದಿನ ಶತಮಾನದಲ್ಲಿ ಲಂಬಾಣಿ ಕುಶಲ ಕಲೆಗಾರಿಕೆಯ ಹಾಗೂ ಲಂಬಾಣಿ ಸ್ತ್ರೀಯ ಅರ್ಥವತ್ತಾದ ಅಭಿವೃದ್ಧಿಯು ಸಾಧ್ಯವಾಗುತ್ತದೆ.[೧೩]

ಕನ್ನಡಿ ಕಸೂತಿ

ಲಂಬಾಣಿ ಸಮುದಾಯದ ಕಲೆಯನ್ನು ಉಳಿಸಿ ಬೆಳಸುವುದೇ ಸಂಡೂರಿನ ಕರಕುಶಲ ಕೇಂದ್ರದ ಮೂಲ ಉದ್ದೇಶವಾಗಿದೆ. ಹೀಗಾಗಿ ಕೇಂದ್ರವು ಲಂಬಾಣಿ ತಾಂಡಾಗಳಲ್ಲಿಯೇ ಶಿಬಿರ, ಕಾರ್ಯಾಗಾರ ಏರ್ಪಡಿಸಿ ಅವರ ಕಲೆಗೊಂದು ಸೂಕ್ತ ವೇದಿಕೆ ನಿರ್ಮಿಸುತ್ತಿದೆ. ಸಂಡೂರು ಸುತ್ತಲಿನ ಸುಮಾರು ಎಂಟು ತಾಂಡಾಗಳ ಮಹಿಳೆಯರು ನಿತ್ಯವೂ ಕೇಂದ್ರಕ್ಕೆ ಬರುತ್ತಾರೆ. ಕೇಂದ್ರದವರು ಸೂಚಿಸುವ ವಿನ್ಯಾಸದಂತೆ ವಸ್ತುಗಳನ್ನು ತಯಾರಿಸಿಕೊಡುತ್ತಾರೆ. ಕೇಂದ್ರದಲ್ಲಿ ಮಹಿಳೆಯರ ಉಡುಪು, ಶಾಲಾ ಕಾಲೇಜು ಹಾಗೂ ನವನವೀನ ಲಗೇಜ್ ಬ್ಯಾಗುಗಳು, ದಿಂಬು, ಸೋಫಾ ಕವರ್‌ಗಳು ಮತ್ತು ಗೋಡೆ ಅಲಂಕಾರದ ವಸ್ತುಗಳನ್ನು, ಮೊಬೈಲ್ ಕವರ್‌ಗಳನ್ನು ಸಿದ್ಧಪಡಿಸಿಕೊಡುತ್ತಾರೆ. ಬೆಂಗಳೂರು, ಈರೋಡು, ಹೊಸದೆಹಲಿ

ಮತ್ತಿತರೆಡೆಯಿಂದ ಕಚ್ಚಾ ವಸ್ತುಗಳನ್ನು ಖರೀದಿಸಲಾಗುತ್ತದೆ. ತೀವ್ರ ಪೈಪೋಟಿಯ ನಡುವೆಯೂ ಸ್ವದೇಶದಲ್ಲಲ್ಲದೆ ಆಸ್ಟ್ರೇಲಿಯಾ, ಪ್ಯಾರಿಸ್, ಸ್ವಿಟ್ಜರ್‌ಲ್ಯಾಂಡ್ ಮತ್ತಿತರೆಡೆ ಉತ್ತಮ ವ್ಯಾಪಾರ ವಹಿವಾಟು ಹೊಂದಿರುವ ಕೇಂದ್ರವು ದೇಶಾದ್ಯಂತ ವರ್ಷದಲ್ಲಿ ಸುಮಾರು ೨೫ಕ್ಕೂ ಹೆಚ್ಚು ವಸ್ತು ಪ್ರದರ್ಶನಗಳಲ್ಲಿ ಪಾಲ್ಗೊಂಡು ತನ್ನದೇ ಆದ ಮಾರುಕಟ್ಟೆ ಅಸ್ತಿತ್ವ ಉಳಿಸಿಕೊಂಡಿದೆ. ವಿದೇಶದಲ್ಲಿ ನಡೆಯುವ ವಸ್ತು ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವ ಲಂಬಾಣಿ ಮಹಿಳೆಯರಿಗೆ ಕೇಂದ್ರ ಸರಕಾರದ ಸಹಾಯ ದೊರಕಿಸಿ ಕೊಡುತ್ತದೆ. ಕೇಂದ್ರದಲ್ಲಿ ಅನೇಕ ಗ್ರಾಮೀಣ ಪ್ರತಿಭೆಗಳಿವೆ. ಶಾಂತಾಬಾಯಿ ಈಗಾಗಲೇ ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ಸಮುದಾಯದ ಮೂಲ ಕಲೆಯನ್ನೇ ಗುರಿಯಾಗಿಟ್ಟುಕೊಂಡು ಅಗತ್ಯ ಶ್ರಮವಹಿಸಿದರೆ ಕಾರ್ಯ ಸಾಧನೆ ಸುಲಭ ಎಂಬುದನ್ನು ಮಹಾಲಕ್ಷ್ಮಿ ಕರಕುಶಲ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಶೀಲಾನಗರ ತಾಂಡಾದ ಶಾಂತಾಬಾಯಿ ತೋರಿಸಿಕೊಟ್ಟಿದ್ದಾರೆ. ಲಂಬಾಣಿ ಜನಾಂಗದ ಸಾಂಪ್ರದಾಯಿಕ ಕಸೂತಿ ಕಲೆಯ ಜತೆಗೆ ಶ್ರಮ, ಶ್ರದ್ಧೆ, ಸನ್ನಡತೆಯಿಂದಾಗಿ ಕಳೆದ ವರ್ಷ ಪಡೆದಿದ್ದಲ್ಲದೇ ವಿದೇಶಗಳಲ್ಲಿ ಏರ್ಪಡಿಸಿದ್ದ ಕರಕುಶಲಕಲೆಯ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿ ವಿಶ್ವ ಮನ್ನಣೆ ಪಡೆದಿದ್ದಾರೆ. ಈಗಾಗಲೇ ದೇಶದ ಪ್ರಮುಖ ನಗರ ಪ್ರದೇಶಗಳಲ್ಲದೇ ಬಾರ್ಸಿಲೋನಾ (ಸ್ಪೇನ್), ಸ್ವೀಡನ್ ಮತ್ತಿತರೆಡೆ ಏರ್ಪಡಿಸಿದ್ದ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿ ಭಾರತೀಯ ಸಾಂಪ್ರದಾಯಿಕ ಕಲೆ, ಉಡುಗೆ-ತೊಡುಗೆ, ವಸ್ತ್ರ ವಿನ್ಯಾಸಗಳ ಬಗ್ಗೆ ಜಗಜ್ಜಾಹೀರುಗೊಳಿಸಿದ್ದಾರೆ. ಮುಂಬಯಿ, ಹೊಸದಿಲ್ಲಿ, ಕೋಲ್ಕತ್ತಾ ಮುಂತಾದೆಡೆ ವಸ್ತು ಪ್ರದರ್ಶನದಲ್ಲಿ ಪಾಲ್ಗೋಳ್ಳುತ್ತಿದ್ದ ಶಾಂತಾಬಾಯಿಗೆ ವಿಮಾನದಲ್ಲಿ ಪ್ರಯಾಣಿಸುವ ಹೆಬ್ಬಯಕೆ ಮೂಡಿತು. ದೆಹಲಿಯ ದಸ್ತಾಕಾರ್‌ನ (ಕಲಾಕೇಂದ್ರ) ಲೈಲಾ ದಯಾಬ್ ಜೀ ಎಂಬುವವರ ಮುಂದೆ ಹೇಳಿಕೊಂಡರು. ಅದಕ್ಕೆ ಸ್ಪಂದಿಸಿದ ದಯಾಬ್ ಜೀ 'ವಾಲ್‌ಪೀಸ್' ಒಂದನ್ನು ರಚಿಸುವಂತೆ ಮಾರ್ಗದರ್ಶನ ನೀಡಿದರು. ದಯಾಬ್ ಜೀ ಅವರ ಯೋಜನೆ, ಯೋಚನೆ ಹಾಗೂ ಶಾಂತಾಬಾಯಿಯ ಸತತ ಪರಿಶ್ರಮದಿಂದ ನಿರೀಕ್ಷೆಗೂ ಮೀರಿದ ಅದ್ಭುತ ಕಲೆಯ 'ವಾಲ್ ಪೀಸ್ ' ಸಿದ್ಧಗೊಂಡಿತು. ಆ ಕಲೆಗೆ ರಾಷ್ಟ್ರ ಪ್ರಶಸ್ತಿಯೂ ಲಭಿಸಿತು. ನಂತರದ ದಿನಗಳಲ್ಲಿ ಸ್ಪೇನ್‌ನಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಪಾಲ್ಗೊಂಡರು. ಶಾಂತಾಬಾಯಿ ರಚಿಸಿದ ಕೈ ಕುಸುರಿಯನ್ನು ಕಂಡು ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಹಾಗೂ ಮಾಜಿ ಪ್ರಧಾನಿ ಶ್ರೀ ವಾಜಪೇಯಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ನಡೆದ ಸಮಾರಂಭವೊಂದರಲ್ಲಿ ಸನ್ಮಾನಿಸಿದ್ದನ್ನು ಬಿಟ್ಟರೆ ಗ್ರಾಮೀಣ ಪ್ರದೇಶದ ಇಂತಹ ಪ್ರತಿಭೆಗಳನ್ನು ರಾಜ್ಯ ಸರಕಾರ ಗುರುತಿಸಿ ಮುಂದಿನ ಪೀಳಿಗೆಗೆ ಉಳಿಸಿ ಬೆಳಸುವಲ್ಲಿ ಗಮನಹರಿಸಬೇಕಾಗಿದೆ.[೧೪]

ಸಂಡೂರು ಕುಶಲಕಲಾಕೇಂದ್ರವು ರಾಷ್ಟ್ರ ಮಟ್ಟದ ಉತ್ತಮ ಕುಶಲಕರ್ಮಿ ಪ್ರಶಸ್ತಿ ಪಡೆದಿದೆ. ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ರಿಂದ ಕೇಂದ್ರದ

ಶಾಂತಬಾಯಿ ಅವರು ೨೦೦೦ನೇ ಸಾಲಿನ ಪ್ರಶಸ್ತಿ ಸ್ವೀಕರಿಸಿದರು. ದಸ್ತಕರ್‌ನ ಲೈಲಾಥೈಬ್ಜ ಅವರ ಮಾರ್ಗದರ್ಶನದಲ್ಲಿ ಸತತ ನಾಲ್ಕು ತಿಂಗಳ ಕಾಲ ಶಾಂತಬಾಯಿ ತಯಾರಿಸಿದ ಗೋಡೆಗೆ ನೇತು ಹಾಕುವ ಕುಶಲ ವಸ್ತು ಇವರಿಗೆ ರಾಷ್ಟ್ರ ಪ್ರಶಸ್ತಿ ತಂದುಕೊಟ್ಟಿದೆ.[೧೫] ಇವರ ಜೊತೆಗೆ ಈ ಕೇಂದ್ರದಲ್ಲಿ ಸುಶೀಲನಗರದ ಕೆ.ಗೌರೀಬಾಯಿ, ಸಣ್ಣಸೀತವ್ವ, ಲಕ್ಷ್ಮೀಬಾಯಿ, ಎನ್.ದುರ್ಗಾಬಾಯಿ, ಬೆಳಗಲ್ಲು ತಾಂಡಾದ ಧರ್ಮಿಬಾಯಿ, ಕೋಗಳಿ ತಾಂಡಾದ ಮೋತಿಬಾಯಿ, ಗೌರಿಬಾಯಿ ಮತ್ತು ಬಂಡೇ ಬಸಾಪುರದ ಶಾಂತಬಾಯಿ, ಆನೇಕಲ್ ತಾಂಡಾದ ಜಾನಕಿಬಾಯಿ, ಕಡ್ಡಿರಾಮಪುರದ ಗಮನೀಬಾಯಿ ಮತ್ತು ಭೀಮವ್ವ ಮುಂತಾದವರು ಈ ಕ್ಷೇತ್ರದಲ್ಲಿ ಹೆಸರು ಮಾಡಿದ ಕರಕುಶಲ ಕಲಾ ಮಹಿಳೆಯರಾಗಿದ್ದಾರೆ.

ಶಿಲ್ಪಗಳು

ಈ ತಾಲ್ಲೂಕಿನಲ್ಲಿ ಕಾಣುವ ಶಿಲ್ಪಿಗಳು ಪರಂಪರಾಗತವಾಗಿ ಪೂರ್ವಜರಿಂದ ತಮ್ಮ ಮನೆತನದಲ್ಲಿ ಕುಲಕಸುಬಾಗಿ ಅನೌಪಚಾರಿಕ ಶಿಕ್ಷಣವನ್ನು ಪಡೆದು ಈ ಕಲೆಯನ್ನು ಬೆಳೆಸಿಕೊಂಡು ಬಂದವರು ಇಲ್ಲಿದ್ದಾರೆ. ಅವರಲ್ಲಿ ಬಾವಿಹಳ್ಳಿಯ ಶಂಕರಾಚಾರಿ, ಬೊಮ್ಮಘಟ್ಟದ ಚಿಕ್ಕಣ್ಣಾಚಾರಿ, ಸೊಂಡೂರಿನ ಮುನಿರತ್ನಾಚಾರಿ, ನಾಗಭೂಷಣಚಾರಿ, ಕೆ.ಭಾಸ್ಕರಾಚಾರಿ ಮೊದಲಾದ ಶಿಲ್ಪಿಗಳು ಈ ದಶಕದಲ್ಲಿ ಗಮನಾರ್ಹವಾಗಿ ಶಿಲ್ಪ ಕಲಾಕೃತಿ ರಚನಾಕಾರರಾಗಿ ತಮ್ಮನ್ನು ಗುರುತಿಸಿಕೊಂಡಿರುವರು. ರಾಜ್ಯ ಸರಕಾರದ ಪುರಸ್ಕಾರ ಹಾಗೂ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ಲಭಿಸಿರುವವು. ಸೊಂಡೂರಿನ ಶ್ರೀ ವೀರಪ್ಪಾಚಾರ್ ಅವರು ಮೃಣ್ಮೂರ್ತಿ ಶಿಲ್ಪಕಲೆಯಲ್ಲಿ ನಿಷ್ಣಾತರಾಗಿದ್ದಾರೆ. ಇವರು ಗುಡಿಗಳ ಮೇಲೆ ವಿಶಿಷ್ಟ ಶಿಲ್ಪಗಳ ಕಲಾತ್ಮಕವಾದ ಗೋಪುರಗಳ ನಿರ್ಮಾಣ ಮಾಡುವಲ್ಲಿ ಸಿದ್ಧ ಹಸ್ತರು. ಸಮಕಾಲೀನತೆಯೊಂದಿಗೆ ಈ ತಾಲ್ಲೂಕಿನ ಕಲಾವಿದರು ಹೆಜ್ಜೆ ಹಾಕುತ್ತಿರುವುದು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ಟ್ರೇಡ್ ಕ್ರಾಫ್ಟ್, ಯುನೈಟೆಡ್ ಕಿಂಗ್‌ಡಮ್ ಹಾಗೂ ನವದೆಹಲಿಯ ಏಷಿಯನ್ ಹೆರಿಟೇಜ್ ಫೌಂಡೇಶನ್ ಜಂಟಿಯಾಗಿ ಆರಂಭಿಸಿರುವ 'ಮೂಲ ಕಲೆಯ ಅಭಿವೃದ್ಧಿ ಹಾಗೂ ಮಾರುಕಟ್ಟೆ ಜಾಗೃತಿ ಪ್ರವಾಸ'ಕ್ಕೆ ಭಾರತದ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಸಂಡೂರಿನ ಕುಶಲಕಲಾ ಕೇಂದ್ರವು ಸೇರ್ಪಡೆಯಾಗಿದೆ. ಇದಕ್ಕೆ ಕಾರಣ ಸಂಡೂರು ಕುಶಲಕಲಾಕೇಂದ್ರದಲ್ಲಿ ಖಾದಿಬಟ್ಟೆ, ಬೆತ್ತದ ಸಾಮಾಗ್ರಿ, ಲಂಬಾಣಿ ಹಾಗೂ ಕರ್ನಾಟಕ ಕಸೂತಿಕಲೆಯ ಬಟ್ಟೆ ತಯಾರಿಕೆ, ಕಲ್ಲಿನ ಶಿಲ್ಪಗಳು ತಯಾರಾಗುತ್ತಿದ್ದು, ಅವುಗಳಿಗೆ ದೇಶ-ವಿದೇಶಗಳಲ್ಲಿ ಬಹು ಬೇಡಿಕೆ ಇದೆ. ಎಲ್ಲಾ ವರ್ಗದ ಜನರು ಅಭಿರುಚಿಗೆ ತಕ್ಕಂತೆ ಕಲಾಕೃತಿ, ಉಡುಪು, ವಸ್ತುಗಳು ಇಲ್ಲಿ ಸಿದ್ಧವಾಗುತ್ತಿವೆ. ಆದ್ದರಿಂದ ಈ ಯೋಜನೆಯ ಅನುಸಾರ ಕುಶಲಕಲೆಗಾರಿಕೆಯಲ್ಲಿ ತೊಡಗಿರುವ ಕುಶಲ ಕಲೆಗಾರರನ್ನು ಗುರುತಿಸಿ ಅವರು ಸಿದ್ಧಪಡಿಸಿರುವ ವಸ್ತುಗಳಿಗೆ ಯೂರೋಪಿನ ಮಾರುಕಟ್ಟೆಯಲ್ಲಿ ಬೇಡಿಕೆ ದೊರಕಿಸಿಕೊಡುವುದು ಈ ಪ್ರವಾಸದ ಉದ್ದೇಶವಾಗಿದೆ ಎಂದು ಪೂರ್ವಭಾವಿಯಾಗಿ ನವದೆಹಲಿಯಲ್ಲಿರುವ ಏಷಿಯನ್ ಹೆರಿಟೇಜ್ ಫೌಂಡೇಶನ್ ಕಚೇರಿಯಲ್ಲಿ

ಸೆಪ್ಟೆಂಬರ್ ೨೯-೨೦೦೫ರಂದು ಈ ಕುರಿತು ಏರ್ಪಡಿಸಿದ ಕಾರ್ಯಾಗಾರದಲ್ಲಿ ಭಾಗವಹಿಸಿದ ಸಂಡೂರು ಕುಶಲ ಕಲಾ ಕೇಂದ್ರದ ಕಾರ್ಯದರ್ಶಿ ಎ.ವೀರಣ್ಣರವರು ತಿಳಿಸುತ್ತಾರೆ.[೧೬]

೬.೩. ಪ್ರದರ್ಶನ ಕಲೆಗಳು

ಪ್ರದರ್ಶನ ಕಲೆ ಜನಪದ ಕಲೆಗಳ ಜೀವಧಾತು. ಜನಪದರ ಮನಸ್ಸಿನ ಭಾವನೆಗಳಿಂದ ಮೂಡಿ, ಜನಪದ ವೃಂದದ ಮನಸ್ಸಿನ ಭಾವನೆಗಳನ್ನು ಸ್ಪಂದಿಸಿ ಉದ್ದೀಪನಗೊಳಿಸಿ ಚೈತನ್ಯಪೂರ್ಣವನ್ನಾಗಿ ಮಾಡುವ ಜನಪದದ ಪ್ರದರ್ಶನ ಕಲೆ ಅತ್ಯಂತ ಪ್ರಾಚೀನವಾದುದಾಗಿದೆ. ಆದ್ದರಿಂದಲೆ ಹಿಂದೆ ಜನಪದರ ಜೀವನ ಮತ್ತು ಕಲೆಗಳ ಸಂಬಂಧ ಬೇರ್ಪಡಿಸಲಾಗದ ಸಾವಯವ ಸಂಬಂಧವಾಗಿದೆ. ಸಂಗೀತ, ನೃತ್ಯ ಮತ್ತು ಅಭಿನಯಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸೇರಿರುವ ಕಲೆಗಳನ್ನು ಪ್ರದರ್ಶನ ಕಲೆಗಳೆನ್ನುತ್ತಾರೆ.[೧೭] ಈ ತಾಲ್ಲೂಕಿನಲ್ಲಿ ಕಂಡುಬರುವ ಪ್ರದರ್ಶನ ಕಲೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ತೊಗಲುಗೊಂಬೆ ಆಟಗಾರರು

ತೊಗಲುಗೊಂಬೆ ಅತೀ ಪುರಾತನವಾದ ಒಂದು ಕಲ್ಪನೆ. ಇದು ಹೆಸರೇ ಹೇಳುವಂತೆ ಚರ್ಮದಿಂದ ಮಾಡಿದ್ದು, ಮರಾಠಿ ಭಾಷೆಯಲ್ಲಿ ಈ ಆಟವನ್ನು 'ಕಿಲ್ಲಾಭಾವಿ ಖೇಲ್' ಎನ್ನಲಾಗುತ್ತದೆ. ಕಿಲ್ಲೆ(Wood bork or leaf or papers) ನಿಂದ ಮಾಡಿದ ಭಾವಲಿ(ಗೊಂಬೆಗಳ) ಖೇಲ(ಆಟ) ಎಂಬುದು ಇದರ ಅರ್ಥ.[೧೮] ಈ ತೊಗಲುಗೊಂಬೆ ವಿಶಿಷ್ಟವಾದ ಕಲಾಕೃತಿಯಾಗಿದ್ದು, ಇದನ್ನು ತೆಳುವಾದ ಪಾರದರ್ಶಕ ಚರ್ಮದ ಗೊಂಬೆಗಳಿಂದ ಆಡಿಸುವರು. ಈ ಕಲೆಯು ಒಬ್ಬ ವ್ಯಕ್ತಿಯಿಂದ ನಿರ್ಮಾಣಗೊಳ್ಳದೇ ಕುಟುಂಬದ ಎಲ್ಲ ಜನರು ಈ ತೊಗಲುಗೊಂಬೆಯಾಟದ ಕಲೆಯಲ್ಲಿ ಭಾಗವಹಿಸುತ್ತಾರೆ.[೧೯] ಕರ್ನಾಟಕದಲ್ಲಿ ಇವರನ್ನು 'ಕಿಳ್ಳೇಕ್ಯಾತರು' ಎನ್ನುವರು. ಸಂಡೂರು ತಾಲ್ಲೂಕಿನಲ್ಲಿ ಕಂಡುಬರುವ ಈ ತೊಗಲುಗೊಂಬೆ ಆಟಗಾರರ ಬಗ್ಗೆ ಇಲ್ಲಿ ಗಮನಿಸಲಾಗಿದೆ.

ಸಂಡೂರು ತಾಲ್ಲೂಕಿನಲ್ಲಿ ತೊಗಲುಗೊಂಬೆಯ ಆಟವನ್ನಾಡಿಸುವ ಕಲಾವಿದರು ಕಂಡು ಬಂದರೂ ಸಹ ಅವರೇ ಸ್ವತಃ ತೊಗಲುಗೊಂಬೆಗಳನ್ನು ಹೊಂದಿಲ್ಲ. ಆದರೆ ಈ ಜಿಲ್ಲೆಯ ತೋಗಲುಗೊಂಬೆ ಆಟವನ್ನು ಪ್ರದರ್ಶಿಸುವುದರಲ್ಲಿ ಪ್ರಖ್ಯಾತರಾದ ಬೆಳಗಲ್ಲ ವೀರಣ್ಣನವರ ಜೊತೆಗೂಡಿ ಇವರು ಸಹ ತೊಗಲುಗೊಂಬೆ ಆಟವನ್ನು ಆಡಿಸಬಲ್ಲವರಾಗಿದ್ದಾರೆ. ಅವರುಗಳಲ್ಲಿ

ಸಂಡೂರು ತಾಲ್ಲೂಕಿನ ಸಣ್ಣರಾಮಪ್ಪ ಎಂಬುವವರು ಈ ತಾಲ್ಲೂಕಿನ ನಾಗೇನಹಳ್ಳಿಯ ನಿವಾಸಿಗಳಾಗಿದ್ದಾರೆ. ಇವರು ಬೆಳಗಲ್ ವೀರಣ್ಣರವರ ಜೊತೆಗೂಡಿ ಆಟವನ್ನು ಪ್ರದರ್ಶಿಸುತ್ತಾರೆ. ಹಾಗೂ ಅವರಷ್ಟೇ ಅಲ್ಲದೆ ಯರಿಸ್ವಾಮಿ ಎಂಬುವರೊಂದಿಗೂ ಭಾಗವಹಿಸಿ ರಾಜ್ಯದ ನಾನಾ ಭಾಗಗಳಲ್ಲಿ ತೊಗಲುಗೊಂಬೆ ಆಟವನ್ನು ಪ್ರದರ್ಶಿಸಿದ್ದಾರೆ. ಇವರ ಬಳಿ ತೊಗಲುಗೊಂಬೆಗಳಿಲ್ಲ.

ಇದೇ ತಾಲ್ಲೂಕಿನ ಇದೇ ಗ್ರಾಮದ ಮತ್ತೊಬ್ಬ ವ್ಯಕ್ತಿಯಾದ ಜಯಂತಪ್ಪ ಎಂಬುವವರು ಸಹ ಬೆಳಗಲ್ ವೀರಣ್ಣನವರ ತಂಡದಲ್ಲಿ ಹಾಗೂ ಯರಿಸ್ವಾಮಿ ಎಂಬುವರ ಸಂಗಡ ಭಾಗವಹಿಸಿ ತೊಗಲುಗೊಂಬೆಯಾಟವನ್ನು ಪ್ರದರ್ಶಿಸಿರುವರು, ಆದರೆ ಇವರ ಬಳಿಯೂ ತೊಗಲುಗೊಂಬೆಗಳಿಲ್ಲ. ಇದೇ ಗ್ರಾಮದ ಮತ್ತೋರ್ವ ವ್ಯಕ್ತಿ ತಿಪ್ಪೇಸ್ವಾಮಿಯವರೂ ಸಹ ಯರಿಸ್ವಾಮಿ ಹಾಗೂ ಬೆಳಗಲ್ ವೀರಣ್ಣನವರ ತಂಡದಲ್ಲಿ ಭಾಗವಹಿಸುವರು ಇವರಲ್ಲಿಯೂ ತೊಗಲುಗೊಂಬೆಗಳಿಲ್ಲ.[೨೦]

'ಸಂಗ್ರಾಮ' ಎಂಬ ತೊಗಲುಗೊಂಬೆಯಾಟವನ್ನು ಹೊರರಾಜ್ಯವಾದ ಬಿಹಾರದಲ್ಲಿ ಕನ್ನಡ ಮಾಧ್ಯಮದಲ್ಲಿ ತೋರಿಸುವ ಸಲುವಾಗಿ ತಮ್ಮದೇ ಆದ ಕಾಲ್ಪನಿಕ ಪಕ್ಷಿಯ ಗೊಂಬೆಯನ್ನು ಸಂಡೂರಿನ ಖ್ಯಾತ ಕಲಾವಿದರಾದ ಕಾಳೆ ಮಾಸ್ತರ್‌ರಿಂದ ಮಾಡಿಸಿದ್ದಾರೆಂದು ತಿಳಿದುಬರುತ್ತದೆ.[೨೦] ವಿ.ಟಿ.ಕಾಳೆಯವರ ಮನೆಯಲ್ಲಿ ಬಳ್ಳಾರಿಯ ಬೆಳಗಲ್ಲ ವೀರಣ್ಣನವರಿಂದ, ಸುಮಾರು ೪೦೦ ವರ್ಷಗಳಷ್ಟು ಹಳೆಯವು ಎನ್ನಲಾದ ನಾಲ್ಕು ತೊಗಲುಗೊಂಬೆಗಳನ್ನು ಸಂಗ್ರಹಿಸಿ ತಮ್ಮ ಬಳಿಯಲ್ಲಿಟ್ಟುಕೊಂಡು ಸಂರಕ್ಷಿಸುತ್ತಿದ್ದಾರೆ. ಅವು ಇಂದಿಗೂ ಉತ್ತಮ ಸ್ಥಿತಿಯಲ್ಲಿದ್ದು, ನೋಡಲು ಆಕರ್ಷಕವಾಗಿಯೂ, ಸುಂದರವಾಗಿಯೂ ಇವೆ. ಇವುಗಳ ವೈಶಿಷ್ಟ್ಯವೆನೆಂದರೆ ಗಾತ್ರದಲ್ಲಿ ಇವು ಚಿಕ್ಕವಾಗಿದ್ದು ಇಡೀ ಗೊಂಬೆ ಒಂದೇ ಚಿತ್ರದಲ್ಲಿರುವಂತೆ ಚಿತ್ರಿಸಲಾಗಿದ್ದು, ಓರೆಯಾಗಿರುವ ಮುಖದ ಮೇಲೆ ಎರಡು ಕಣ್ಣುಗಳನ್ನು ರಚಿಸಲಾಗಿರುವುದು.

ಈ ತಾಲ್ಲೂಕಿನ ಕೋಡಿಹಳ್ಳಿ ಹನುಮಕ್ಕ ತೊಗಲುಗೊಂಬೆಯಾಟವನ್ನು ಕರಗತ ಮಾಡಿಕೊಂಡವರು. ಪ್ರದರ್ಶನದ ಹಿಮ್ಮೇಳ ಕಲಾವಿದರಾಗಿ, ನಂತರ ಮುಮ್ಮೇಳದ ಕಲೆಯನ್ನು ಕಲಿತರು. ತೊಗಲುಗೊಂಬೆಯಾಟದ ಪ್ರಬುದ್ಧ ಕಲಾವಿದೆಯಾಗಿ ನಾಡಿನಾದ್ಯಂತ ಜನಪ್ರಿಯರಾದರು. ಜೊತೆಗೆ ತತ್ವಪದ ಮತ್ತು ಭಜನೆ ಹಾಡುಗಳನ್ನು ಹಾಡುವುದರಲ್ಲಿಯೂ ನಿಪುಣರು. ಇಳಿವಯಸ್ಸಿನವರೆಗೂ ಊರೂರು ಸುತ್ತುತ್ತಾ ತೊಗಲುಗೊಂಬೆಯಾಟದ ಪ್ರದರ್ಶನ ನೀಡಿದ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೫ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.[೨೨]

ಯಕ್ಷಗಾನ ಕಲೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಯಕ್ಷಗಾನ ಕಲೆಯನ್ನು ಬಯಲು ಸೀಮೆಯಲ್ಲಿ ಮೂಡಲಪಾಯ ಎಂದು ಕರೆಯುವರು. ಇಂತಹ ಯಕ್ಷಗಾನ ಕಲೆಯನ್ನು ಮೈಗೂಡಿಸಿಕೊಂಡಿರುವಂತಹ ಸಂಡೂರು ತಾಲ್ಲೂಕಿನ ಬಸಾಪುರ ಗ್ರಾಮದವರಾದ ಪೂಜಾರ ಅಯ್ಯಪ್ಪನವರು ಸು.೨೫ ವರ್ಷಗಳ ಕಾಲ ದ್ರೌಪದಿ, ಸೀತೆ, ಶಚಿ, ಸುಭದ್ರೆ, ರತಿ ಮುಂತಾದ ಸ್ತ್ರೀಪಾತ್ರಗಳಲ್ಲಿ ಅಭಿನಯಿಸಿ ಜನಪ್ರಿಯ ಕಲಾವಿದರಾಗಿದ್ದಾರೆ. ಹಾರ್ಮೋನಿಯಂ ಮತ್ತು ಬಯಲಾಟದ ಹಾಡುಗಾರಿಕೆಯಲ್ಲೂ ಕಲಾವಿದರಾಗಿರುವ ಇವರು ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅಭಿನಯಿಸಿದ ಬಯಲಾಟಗಳು ತುಂಬಾ ಪ್ರಸಿದ್ಧಿ ಪಡೆದಿವೆ.

ರಾಮಾಯಣದ ದುಶ್ಯಾಸನ ಕಥೆ, ಕನಕಾಂಗಿ ಕಲ್ಯಾಣ, ಪ್ರಹ್ಲಾದ ಚರಿತ್ರೆ, ಲವ-ಕುಶ ಕಾಳಗ, ನಳ ಚರಿತ್ರೆ ಇವು ತುಂಬಾ ಜನಪ್ರಿಯವಾದ ಬಯಲಾಟಗಳು ಇವರ ಕಲೆಯನ್ನು ಗುರ್ತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೭ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಈ ಕ್ಷೇತ್ರದಲ್ಲಿ ಹೆಸರು ಮಾಡಿದ ಈ ತಾಲ್ಲೂಕಿನ ಮತ್ತೊಬ್ಬ ವ್ಯಕ್ತಿ ಎಂದರೆ ಎಸ್.ಜಾನೋಜಿರಾವ್‌ರವರು. ಇವರು ಬಯಲಾಟದ ಮಾಸ್ತರಾಗಿ ಹೆಸರು ಪಡೆದಿದ್ದರು, ತತ್ವಪದಗಳನ್ನು ಹಾಡುವುದರಲ್ಲಿಯೂ ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ. ಶಿಶುನಾಳ ಷರೀಫಾ, ನಿಜಗುಣ ಶಿವಯೋಗಿ, ದಾಸರ ಪದಗಳು ಮುಂತಾದ ಅನುಭಾವದ ಹಾಡುಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. ಸಮಕಾಲೀನ ಹಲವಾರು ಕಲಾವಿದರ ಒಡನಾಟ ಬೆಳೆಸಿದ್ದ ಇವರು ಮಾಸ್ತರಾಗಿ ಕಲಿಸಿದ ಬಯಲಾಟಗಳು ತುಂಬಾ ಮೆಚ್ಚುಗೆ ಪಡೆದಿದ್ದವು. ೧೯೯೩ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಿದೆ.[೨]

ಬುರ್ರಾಕಥಾ ಕಲೆ

ಬುರ್ರಾ ಎಂದರೆ ತಂಬೂರಿ. ತಂಬೂರಿ ವಾದ್ಯ ನುಡಿಸುತ್ತ ಸಹಕಲಾವಿದರೊಂದಿಗೆ ಕಾವ್ಯ ಹಾಡುವುದು ಈ ಕಲೆಯ ವಿಶಿಷ್ಟತೆ. ಜಾನಪದ ಆಶಯವಿರುವ ಹಾಗೂ ಜನ ಪರವಾಗಿ ಮೂಡಿಬರುವ ಕಲೆ ಇದು.

ಬುರ್ರಾಕಥಾ ಈರಮ್ಮ ಎಂದು ಗುರುತಿಸಲ್ಪಡುವ ಇವರು ಸಂಡೂರು ತಾಲ್ಲೂಕಿನ ಹಳೆದರೋಜಿ ಯವರು. ಇವರು ಅಲೆಮಾರಿ ಬುಡ್ಗ ಜಂಗಮ ಜಾತಿಯವರು. ಅದ್ವಿತೀಯ ಜಾನಪದ ಕಲಾವಿದೆಯಾಗಿರುವ ಇವರು ಇಲ್ಲಿಯವರೆಗೆ ಸು.೭೦೦೦ ಪುಟಗಳಷ್ಟಾಗುವ ೨ ಲಕ್ಷ ಸಾಲುಗಳ, ೧೨ ಜನಪದ ಮತ್ತು ಬುಡಕಟ್ಟು ಮಹಾಕಾವ್ಯಗಳನ್ನು ನಿರರ್ಗಳವಾಗಿ ಹಾಡಿರುವ ಶ್ರೀಮಂತ ಕಲಾವಿದೆಯಾಗಿ ಹೆಸರು ಗಳಿಸಿರುವ ಇವರು ಮುಖ್ಯವಾಗಿ ಗ್ರಾಮಗಳ ಹೊರಗಿನ ಗುಡಾರ ನಿವಾಸಿಯಾಗಿ ಜೀವಿಸುತ್ತಿರುವುದು ಖೇದದ ಸಂಗತಿಯಾಗಿದೆ.

ಇವರು ತಂದೆ, ತಾಯಿಗಳಿಂದ ಬುರ್ರಕಥೆಗಳನ್ನು ಹಾಡಲು ಮತ್ತು ತಂಬೂರಿ, ಡಿಮ್ಕಿ, ಗಗ್ಗರ ಮುಂತಾದ ಬುರ್ರವಾದ್ಯಗಳನ್ನು ನುಡಿಸಲು ಕಲಿತಿದ್ದಾರೆ. ಕನ್ನಡ, ತೆಲುಗು, ಬುಡ್ಗ, ಹಿಂದಿ ಭಾಷೆಗಳನ್ನು ಮಾತನಾಡುವ ಈರಮ್ಮನವರು ಸಹಿ ಮಾಡುವಷ್ಟು ಮಾತ್ರ ವಿದ್ಯೆ ಕಲಿತಿದ್ದಾರೆ. ಇವರು ಹಾಡಿರುವ ೩ ಮಹಾಕಾವ್ಯಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದೆ.

೧. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ

೨. ಸ್ವಾಸಿ ಚಿನ್ನಮ್ಮನ ಕಾವ್ಯ

೩. ಎಲ್ಲಮ್ಮನ ಕಾವ್ಯ

ಉಳಿದಂತೆ ಬಬ್ಬುಲಿ ನಾಗಿರೆಡ್ಡಿ, ಆದೋನಿ ಲಕ್ಷಮ್ಮನ ಕಾವ್ಯ, ಬಾಲ ನಾಗಮ್ಮನ ಕಾವ್ಯ, ಬಲಿಚಕ್ರವರ್ತಿ ಕಾವ್ಯ, ಮಾರವಾಡಿ ಸೇರಿಕಾವ್ಯ, ಜೈಸಿಂಗ್‌ರಾಜ ಮತ್ತು ಮಹಮದ್ ಖಾನರ ಕಾವ್ಯ, ಇವುಗಳು ಪ್ರಕಟಣೆಗೊಳ್ಳಬೇಕಾಗಿದೆ.

ಬಳ್ಳಾರಿ, ದಾವಣಗೆರೆ, ಕೊಪ್ಪಳ, ರಾಯಚೂರು -ಹೀಗೆ ನಾಡಿನಾದ್ಯಂತ ಹಲವಾರು ಗ್ರಾಮ ಮತ್ತು ನಗರಗಳಲ್ಲಿ ಬುರ್ರಾಕಥೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಪ್ರಿಯರಾಗಿದ್ದಾರೆ. ಕಲಾಮೇಳ, ಸಾಂಸ್ಕೃತಿಕ ಉತ್ಸವ, ಬುಡಕಟ್ಟು ಉತ್ಸವ, ಜಾನಪದ ಉತ್ಸವ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಹೀಗೆ ವಿವಿಧ, ಕಲಾ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಈರಮ್ಮನ ಕಲಾಸಾಧನೆಯನ್ನು ಗುರ್ತಿಸಿರುವ ಸಂಘ ಸಂಸ್ಥೆ, ಅಕಾಡೆಮಿ ಮತ್ತು ಸರ್ಕಾರಗಳು ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

೧. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೯೯)

೨. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (೨೦೦೩)

೩. ಕರ್ನಾಟಕ ಸರ್ಕಾರದಿಂದ ಅಂಬೇಡ್ಕರ್ ಪ್ರಶಸ್ತಿ (೨೦೦೩)

೪. ಸಂದೇಶ ಪ್ರಶಸ್ತಿ (೨೦೦೪)

೫. ನಾಡೋಜ ಪ್ರಶಸ್ತಿ (೨೦೦೬), ಕ.ವಿ.ವಿ.ಹಂಪಿ.

ಇವಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೀಗೆ ಹಲವಾರು ಸಾಂಸ್ಕೃತಿಕ, ಸಾಹಿತ್ಯಿಕ, ರಾಜಕೀಯ ಸಂಘ, ಸಂಸ್ಥೆಗಳಿಂದ ನಾಗರಿಕ ಸನ್ಮಾನಗಳು, ಪ್ರಶಸ್ತಿಗಳು, ಪ್ರಶಂಸನೀಯ ಪತ್ರಗಳು ಲಭಿಸಿವೆ. ೪೫ ವರ್ಷ ವಯಸ್ಸಿನ ಈರಮ್ಮ ತನ್ನ ಸಹ ಕಲಾವಿದರಾದ ಶ್ರೀಮತಿ ಶಿವಮ್ಮ, ಶ್ರೀಮತಿ ಪಾರ್ವತಮ್ಮನವರೊಂದಿಗೆ ಈಗಲೂ ತಮ್ಮ ಕಲೆಯನ್ನು, ಅಲೆಮಾರಿ ಜೀವನ ಸಾಗಿಸುತ್ತಾ ಮುಂದುವರೆಸಿದ್ದಾರೆ.

ಸಂಡೂರು ತಾಲ್ಲೂಕಿನ ಹಳೆ ದರೋಜಿಯವರಾದ ಪಾರ್ವತಮ್ಮ ಬಿ.ಜಿ.ಯವರು ಬುರ್ರಾಕಥಾ ಈರಮ್ಮನ ಸಹಕಲಾವಿದೆಯಾಗಿದ್ದಾರೆ. ಪಾರ್ವತಮ್ಮನವರು ಬುರ್ರಾಕಥೆಯನ್ನು ಹಾಡುವಾಗ, ಡುಮಿಕಿ ವಾದ್ಯವನ್ನು ನುಡಿಸುತ್ತಾರೆ. ವಂಶಪಾರಂಪರ್ಯವಾಗಿ ಕಲಿತಿರುವ ಈ ಕಲೆಯನ್ನು ಈರಮ್ಮನವರೊಂದಿಗೆ ಹಲವಾರು ಸಭೆ, ಸಮಾರಂಭ, ಉತ್ಸವಗಳಲ್ಲಿ ನೀಡಿದ್ದಾರೆ. ಇವರ ಈ ಕಲೆಯನ್ನು ಗುರ್ತಿಸಿರುವ ಸಂಘ, ಸಂಸ್ಥೆ, ಅಕಾಡೆಮಿಗಳು ಪ್ರಶಸ್ತಿ ಮತ್ತು ಪ್ರಶಂಸನೀಯ ಪತ್ರಗಳನ್ನು ನೀಡಿ ಗೌರವಿಸಿವೆ. ೨೦೦೩ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿರುವ ಇವರು ಗಡಿನಾಡ ಉತ್ಸವ(೨೦೦೦) ಹಂಪಿ ಉತ್ಸವ(೨೦೦೨)ಗಳಲ್ಲಿ ಭಾಗವಹಿಸಿ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.[೨೪]

ವಿವಿಧ ಮಾದರಿಯ ಕಲಾ ಪ್ರಕಾರಗಳನ್ನು ತಮ್ಮದಾಗಿಸಿಕೊಂಡಿರುವ ಚಿತ್ರಕಲಾವಿದರು ಈ ತಾಲ್ಲೂಕಿನಲ್ಲಿ ಕಂಡುಬಂದರೂ, ಅವರನ್ನು ಕಾಡುತ್ತಿರುವ ಬಡತನ, ಸರಕಾರದ ನಿರ್ಲಕ್ಷತೆ, ಸೌಲಭ್ಯದ ಕೊರತೆಯಿಂದ ವಂಚಿತರಾದ ಈ ಕಲಾವಿದರು ಬೆಳಕಿಗೆ ಬರದಿರುವುದು ಖೇದದ ಸಂಗತಿಯಾಗಿರುವುದು. ಆದರೆ ಇಂತಹ ಕಲಾವಿದರನ್ನು ಮತ್ತು ಕಲಾಪ್ರಕಾರಗಳನ್ನು ಉಳಿಸಿ ಬೆಳಸಿ, ನಮ್ಮ ಮುಂದಿನ ಪೀಳಿಗೆಗೆ ಇದರ ಜ್ಞಾನ ತಲುಪುವಂತೆ ಮಾಡಬೇಕಾದ ಜವಾಬ್ದಾರಿ ನಮ್ಮದಾಗಬೇಕಿದೆ.

ಅಡಿಟಿಪ್ಪಣಿಗಳು

೧. ಕ.ಜ.ಕ., ಡಾ.ಸಿ.ಎಸ್.ಪಾಟೀಲ, ಪು.೧೩

೨. ಅದೇ, ಪು.೧೯

೩. ಚಿ.ವಾ., ಶಿವರಾಮ ಕಾರಂತ, ಪು.೩

೪. ಚಿ.ಕ., ಅನಕೃ, ಪು.೩

೫. ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಅ.ಸುಂದರ, ಪು.೬೭, ೬೯

೬. ಇಂ.ಆ.ರಿ., ೧೯೮೭-೮೮, ಪು.೩೩

೭. ಭಾರತದಲ್ಲಿ ಸಮಕಾಲಿನ ಕಲೆ, ಎನ್.ಮರಿಶಾಮಾಚಾರ್, ಪು.೧, ೬

೮. ವಕ್ತೃ, ವಿ.ಟಿ.ಕಾಳೆ, ವಯಸ್ಸು: ೭೧, ಉದ್ಯೋಗ : ಚಿತ್ರಕಲಾವಿದರು, ಗ್ರಾಮ: ಸಂಡೂರು

೯. ಕ.ವಿ.ವಿ.ವಿ.ಕೋ-೨, ಕರಕುಶಲಕಲೆಗಳು, ಪು.೨

೧೦. ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪಿ.ಕೆ.ಖಂಡೋಬ, ಪು.೧೭೫

೧೧. ಕರ್ನಾಟಕದ ಕಲೆಗಳು ಸಂಪುಟ-೩, ಕರಕುಶಲಕಲೆಗಳು, ಪು.೭೯, ೮೦, ೮೧, ೮೩

೧೨. ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪಿ.ಕೆ.ಖಂಡೋಬ, ಪು.೧೪

೧೩. ಸಂಡೂರಿನ ಅನುಭವ, ಕರಕುಶಲ ಕೇಂದ್ರದಿಂದ ಪಡೆದ, ಕರಕುಶಲ ಕಲಾಕೇಂದ್ರದ ಪತ್ರಿಕೆಯನ್ನು ಬಳಸಿ ಕೊಳ್ಳಲಾಗಿದೆ.

೧೪. ವಿಜಯ ಕರ್ನಾಟಕ, ದಿನ ಪತ್ರಿಕೆ, ಪು.೧

೧೫. ಅದೇ, ಪು.೨

೧೬. ಕನ್ನಡ ಪ್ರಭ, ದಿನಪತ್ರಿಕೆ, ಪು.೪

೧೭. ಬಳ್ಳಾರಿ ಜಿಲ್ಲೆಯ ತೋಗಲು ಗೊಂಬೆಯಾಟ(ಅಪ್ರಕಟಿತ ಎಂ. ಫಿಲ್ ಪ್ರಬಂಧ), ನಾಗವರ್ಮ.ಜಿ.ಎಚ್., ಪು.೯೭

೧೮. ತೊ.ಬೆ.ಒಂ.ಅ., ಶಶಿಕಲಾ ಮ.ಹೂಗಾರ, ಪು.೧೮೬,೧೮೭

೧೯. ಬ.ಜಿ.ತೊ.ಗೊ.(ಅಪ್ರಕಟಿತ ಎಂ. ಫಿಲ್ ಪ್ರಬಂಧ), ನಾಗವರ್ಮ.ಜಿ.ಎಚ್., ಪು.೬೩

೨೦. ಕ.ತೊ.ಚಿ.ಒಂ.ಅ., ಶಶಿಕಲಾ ಮ.ಹೂಗಾರ, ಪು.೩೧, ೩೮

೨೧. ಕ.ಸಂ. ಮತ್ತು ಪ., ಆರ್.ಎ., ಶಾಂತರಾಜ್, ಪು.೨, ೫

೨೨. ಬಳ್ಳಾರಿ ಜಿಲ್ಲೆಯ ದರ್ಶನ, ಸಂ.ಕೆ.ರವೀಂದ್ರನಾಥ, ಪು.೧೯೪

೨೩. ಅದೇ, ಪು.೧೯೫

೨೪. ಅದೇ, ಪು.೧೯೦, ೧೯೧

ಅಧ್ಯಾಯ ೭

ತೀರ್ಥಕ್ಷೇತ್ರಗಳು ಮತ್ತು ಮಠಮಾನ್ಯಗಳು

೭.೧. ತೀರ್ಥಕ್ಷೇತ್ರಗಳು

೭.೨. ಮಠಮಾನ್ಯಗಳು

೭

ತೀರ್ಥಕ್ಷೇತ್ರಗಳು ಮತ್ತು ಮಠಮಾನ್ಯಗಳು

ಸಂಡೂರು ತಾಲ್ಲೂಕಿನಲ್ಲಿ ಹಲವಾರು ತೀರ್ಥಕ್ಷೇತ್ರಗಳು ಮತ್ತು ಮಠಗಳು ಕಂಡುಬರುತ್ತವೆ. ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಕೂಡಿದ ಈ ಪ್ರದೇಶದಲ್ಲಿ ಸಹಜವಾಗಿಯೇ ಅನೇಕ ನೀರಿನ ಝರಿಗಳು, ಹಳ್ಳಕೊಳ್ಳಗಳು ಉಂಟಾಗಿವೆ. ಇವನ್ನು ಆಯಾ ಸ್ಥಳಗಳಲ್ಲಿ ತೀರ್ಥಗಳೆಂದು ಕರೆದು ಅವುಗಳ ಬಗ್ಗೆ ಗೌರವ ಭಾವನೆ ಹೊಂದಿರುವುದು. ಅಂತಹ ಅನೇಕ ಕಡೆ ಗುಡಿಗಳನ್ನು, ಮಂಟಪಗಳನ್ನು ಸ್ಥಾಪಿಸಿ ಧಾರ್ಮಿಕ ನಂಬಿಕೆ ಬೆಳೆಸಿಕೊಂಡಿದ್ದಾರೆ. ಅಂತಹ ಹಲವು ಸ್ಥಳಗಳ ಪರಿಚಯವನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

೭.೧. ತೀರ್ಥಕ್ಷೇತ್ರಗಳು

'ತೀರ್ಥ' ಎಂಬುದಕ್ಕೆ ನಿಘಂಟುವಿನಲ್ಲಿ ಪವಿತ್ರಜಲ, ಪುಣ್ಯ ಕ್ಷೇತ್ರ ಎಂಬ ಅರ್ಥವನ್ನು ನೀಡುತ್ತದೆ. ಸಂಡೂರು ತಾಲ್ಲೂಕು ಗಿರಿ-ಕಂದರಗಳಿಂದ ಕೂಡಿದ್ದು, ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಅನೇಕ ಹಳ್ಳ-ಕೊಳ್ಳಗಳಿಂದ ಕೂಡಿದ ಈ ಪ್ರದೇಶದಲ್ಲಿ ಅನೇಕ ಪವಿತ್ರ ಜಲವನ್ನೊಂದಿರುವ ಔಷಧಿ ಗುಣವನ್ನೊಂದಿದ ತೀರ್ಥಕ್ಷೇತ್ರಗಳು ಸಹ ಸಾಕಷ್ಟಿವೆ. ಅವುಗಳಲ್ಲಿ ಇಂದು ಗಣಿಗಾರಿಕೆಯ ಕಾರಣ ಕೆಲವು ತೀರ್ಥಗಳು ಇಲ್ಲವಾಗಿದ್ದರೂ, ಇಂದಿಗೂ ಉಳಿದ ಭಕ್ತರಿಗೆ ಪೂಜ್ಯನಿಯವಾದ ಪ್ರಮುಖ ತೀರ್ಥ ಕ್ಷೇತ್ರಗಳನ್ನು ಮಾತ್ರ ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅವುಗಳು ಈ ಕೆಳಗಿನಂತಿವೆ.

೭.೧.೧. ಅಗಸ್ತ್ಯ ತೀರ್ಥ

ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಮುಂದೆ ಇರುವ ತೀರ್ಥವನ್ನು ಅಗಸ್ತ್ಯ ತೀರ್ಥವೆಂದು ಕರೆಯುತ್ತಾರೆ. ಈ ತೀರ್ಥವು ಅಗಸ್ತ್ಯ ಋಷಿಗಳಿಂದ ನಿರ್ಮಾಣವಾಗಿರುವುದು ಎಂಬ ಪ್ರತೀತಿ ಇದೆ. ಋಗ್ವೇದ, ಮಹಾಭಾರತ, ಪುರಾಣಗಳಲ್ಲಿ ಅಗಸ್ತ್ಯ ಮುನಿಯ ಹೆಸರು ಕಾಣಸಿಗುತ್ತದೆ. ಪರಮೇಶ್ವರನ ಆಜ್ಞೆಯಂತೆ ಅಗಸ್ತ್ಯನು ಲೋಹಾಚಲಕ್ಕೆ ಬಂದು ತೀರ್ಥ ನಿರ್ಮಾಣ ಮಾಡಿ, ಅದರಲ್ಲಿ ತ್ರಿಕಾಲ ಸ್ನಾನ ಮಾಡಿ, ಷಣ್ಮುಖ ದ್ವಾದಶಕ್ಷರ ಮಂತ್ರದ ಪುನಃರುಚ್ಚರಣೆ ಮಾಡತೊಡಗಿದನು. ಆಗ ಕುಮಾರಸ್ವಾಮಿಯು ಪ್ರತ್ಯಕ್ಷನಾಗಿ ಇಲ್ಲಿಯೇ ವಾಸವಾಗಿರು ಕೆಲವು ಕಾಲದ ನಂತರ ನೀನು ಕೇಳಿದ

ಆತ್ಮ ಪೂಜೆಯ ವಿಧಿಯನ್ನು ಉಪದೇಶಿಸಿ ತನ್ನ ಇಷ್ಟಾರ್ಥವನ್ನು ಪೂರ್ಣಗೊಳಿಸುವೆನು ಎಂದನು. ಈ ತೀರ್ಥವು ಎಲ್ಲ ತೀರ್ಥಗಳಿಗಿಂತ ಪರಮ ಪವಿತ್ರವಾಗಲಿ ಎಂದನು. ಅಂದಿನಿಂದ ಈ ತೀರ್ಥಕ್ಕೆ ಸ್ವರ್ಗಾಪವರ್ಗವೆಂದು ಹೆಸರು ಬಂದಿತು. ಭಕ್ತಾದಿಗಳು ಈ ತೀರ್ಥದಲ್ಲಿ ಮಿಂದರೆ ಪಾಪಗಳಿಂದ ಮತ್ತು ಸರ್ವರೋಗಗಳಿಂದ ಮುಕ್ತರಾಗುವರು ಎಂದೂ, ಈ ತೀರ್ಥವು ಗಂಗಾ ನದಿಯಂತಃ ಪುಣ್ಯ ನದಿಗಿಂತಲೂ ಶತಾಂಶ ಶ್ರೇಷ್ಠವೆದ್ದು ಹಾಗೂ ಈ ತೀರ್ಥದಲ್ಲಿ ಸ್ನಾನ ಮಾಡಿದವರಿಗೆ ಶತಾಂಶ ಪುಣ್ಯ ಲಭಿಸುವುದು ಎಂಬ ಪ್ರತೀತಿ ಇದೆ. ಈ ತೀರ್ಥದ ದಂಡೆಯ ಮೇಲೆ ಅಗಸ್ತ್ಯ ಮುನಿಯ ಒಂದು ಚಿಕ್ಕ ದೇವಾಲಯವಿದ್ದು, ಅದರಲ್ಲಿ ಕುಬ್ಜನಂತೆ ಕಾಣುವ ದೊಡ್ಡ ಹೊಟ್ಟೆ, ಚಿಕ್ಕ ಕೈ ಕಾಲುಗಳು, ಕೈಯಲ್ಲಿ ದಂಡ ಹಿಡಿದು ನಿಂತಿರುವ ಚಿಕ್ಕ ಮೂರ್ತಿ ಇದೆ. ಇದನ್ನೇ ಸ್ಥಳೀಯರು ಅಗಸ್ತ್ಯ ಋಷಿ ಎಂದು ಕರೆಯುತ್ತಾರೆ.

ಈ ವಿಷಯವನ್ನು ಕುರಿತು ಹುಲ್ಲೂರು ಶ್ರೀನಿವಾಸ ಜೋಯಿಷರ ಸಂಶೋಧನ ಲೇಖನಗಳಲ್ಲಿಯ, 'ಶ್ರೀ ರೇವಣ ಸಿದ್ದೇಶ್ವರರೂ ಅವರ ಸಮಕಾಲೀನರು' ಎಂಬ ಲೇಖನದಲ್ಲಿ ಈ ಅಗಸ್ತ್ಯ ತೀರ್ಥದ ಬಗ್ಗೆ ವರ್ಣನೆ ಬರುತ್ತದೆ. ಚಾರಿತ್ರಿಕ ದೃಷ್ಟಿಯಿಂದ ಶ್ರೀರೇವಣಸಿದ್ಧರು ದರ್ಶನ ಮಾಡಿದ ಅಗಸ್ತ್ಯರು ತ್ರೇತಾಯುಗದಲ್ಲಿದ್ದವರೆಂದು ನಂಬಲಾಗುವುದಿಲ್ಲ. ಹಾಗಾದರೆ ರೇವಣರ ಕಾಲದ ಅಗಸ್ತ್ಯನಾರು ಎಂಬ ಪ್ರಶ್ನೆಗೆ ಉತ್ತರ ಹೇಳಲು ಕಠಿಣವಾಗಿದೆ. ಈ ಅಗಸ್ತ್ಯನಾರು, ಆಶ್ರಮವೆಲ್ಲಿತ್ತು ಎಂಬುದನ್ನು ಯಾವ ಗ್ರಂಥಕಾರರೂ ಸ್ಪಷ್ಟಪಡಿಸಿರುವುದಿಲ್ಲ. "ದಕ್ಷಿಣದಿಶಾವರಕೆ ಬಂದು ಅಗಸ್ತ್ಯನ ಕೂಡೆ ಶಿವ ಭಕ್ತಿಯೊಳ್ ನಿಂದು" ಎಂದು ರಗಳೆಯಲ್ಲಿ ಹೇಳಿರುವುದರಿಂದ ಅಗಸ್ತ್ಯಾಶ್ರಮವು ಕೊಲ್ಲಿ ಪಾಕಿ ಶಿವ ಕ್ಷೇತ್ರದಿಂದ ದಕ್ಷಿಣ ದಿಕ್ಕಿನಲ್ಲಿತ್ತೆಂದು ಊಹಿಸಬಹುದು. ಬೊಮ್ಮರಸನ ರೇವಣಸಿದ್ದ ಪುರಾಣದಲ್ಲಿ 'ಮಲಯಾಚಲ' ಎಂದಿದೆ. ಬಸವಾಂಕನ ರೇವಣ ಸಾಂಗತ್ಯದಲ್ಲಿ ರೇವಣರು ದಕ್ಷಿಣಾಭಿಮುಖವಾಗಿ ಆಗಮಿಸಿ ಅಗಸ್ತ್ಯಾಶ್ರಮಕ್ಕೆ ಬಂದರೆಂದು ಉಕ್ತವಾಗಿದೆ. ರೇಣುಕವಿಜಯ ಪುರಾಣದಲ್ಲಿ ಮಲಯಾದ್ರಿಯಲ್ಲಿ ಶಿವ ಪೂಜೆಗೆಯ್ಯುತ್ತಿದ್ದ ಅಗಸ್ತ್ಯನನ್ನು ಕಂಡರು ಎಂದಿದೆ. "ಅಗಸ್ತ್ಯ ಮಹರ್ಷಿಯನ್ನು ಉದ್ಧರಿಸಲು ಆಕಾಶಮಾರ್ಗದಿಂದ ಮಲಯಾಚಲಾಭಿಮುಖವಾಗಿ ರೇಣುಕನು ಪ್ರಯಾಣ ಬೆಳೆಸಿದನು" ಎಂದು ಪಂಡಿತರತ್ನಮ್ ಆಸ್ಥಾನ ವಿದ್ವಾನ್ ಶ್ರೀ ಸಿರಸಿ ಗುರುಶಾಂತ ಶಾಸ್ತ್ರಿಗಳು ಪ್ರತಿಪಾದಿಸಿರುವರು. 'ಮಲಯಾಚಲದಲ್ಲಿ ಅಗಸ್ತ್ಯ ಮುನಿಗೆ ರೇಣುಕರು ಶಿವತತ್ವವನ್ನು ಬೋಧಿಸಿ' ಎಂದು ಶ್ರೀಮಾನ್ ಓ.ಎನ್.ಲಿಂಗಣ್ಣಯ್ಯನವರು ಹೇಳಿರುವರು. ಮಲಯಾಚಲವೂ, ಅಗಸ್ತ್ಯರ ಸಿದ್ಧಾಶ್ರಮವೂ ಸಿದ್ಧಾಂತ ಶಿಖಾಮಣಿಯಲ್ಲಿ ವರ್ಣಿಸಲ್ಪಟ್ಟಿರುವವು.

'ಮಲಯಾಚಲ' ಎಂದರೆ ಮಲೆನಾಡು ಪ್ರಾಂತವೆಂದೂ ಅಥವಾ ಮಲಯಾದ್ವೀಪವೆಂದೂ, ಅಗಸ್ತ್ಯ ಎಂದರೆ ಪ್ರಸಿದ್ಧ 'ಅಗಸ್ತ್ಯ ಋಷಿ' ಎಂದೂ ಕೆಲವು ಲೇಖಕರು ಅಭಿಪ್ರಾಯ ಪಟ್ಟಿರುವರು.

ಮಲಯಾಚಲದ ಅಗಸ್ತ್ಯರು ಯಾರು ಎಂಬುದನ್ನು ನಿರ್ಧರವಾಗಿ ಹೇಳಲು ಸಾಧ್ಯವಾಗಿಲ್ಲದ್ದರಿಂದ ಇಲ್ಲಿ ಲೇಖಕ ತನ್ನ ಊಹೆಯ ಮೂಲಕ ಇದು ಒಂದು ಅಗಸ್ತ್ಯ ಋಷಿಯ ಆಶ್ರಮವಾಗಿತ್ತೆ? ಅಗಸ್ತ್ಯ ಋಷಿಗಳಿಂದ ಇಲ್ಲಿ ತೀರ್ಥ ನಿರ್ಮಾಣಗೊಂಡಿರಬಹುದೇ? ಎಂಬ ಊಹಾತ್ಮಕವಾದ ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ.

ಕೊಲ್ಲಿಪಾಕಿಯಿಂದ ದಕ್ಷಿಣ ದಿಕ್ಕಿನಲ್ಲಿರುವ ಮಲಯಾಚಲದ ಅಗಸ್ತ್ಯನ ಆಶ್ರಮವಿದ್ದ ಬೆಟ್ಟವು ಸೊಂಡೂರು ಸಂಸ್ಥಾನದಲ್ಲಿರುವ ಕುಮಾರಸ್ವಾಮಿ ಬೆಟ್ಟವೆಂದು ಊಹಿಸಬಹುದಾಗಿದೆ ಎಂದು ತಿಳಿಸುತ್ತ ಇದು ಬರಿಯ ಊಹೆಯಲ್ಲ. ಇದನ್ನು ದೃಢಪಡಿಸಲು ಕೆಲವು ಸಾಧನಗಳಿವೆ ಎಂದು ಹೇಳುವರು. ಅದು, ಮಲಯಾಚಲ ಮತ್ತು ಮಲಯಾದ್ರಿ ಇವುಗಳಲ್ಲಿರುವ 'ಮಲೆ' ಶಬ್ದವು ಅಚ್ಚಗನ್ನಡದ 'ಮಲೆ' ಎಂದರೆ ಗುಡ್ಡ. ಕುಮಾರಸ್ವಾಮಿ ಬೆಟ್ಟಕ್ಕೆ ಕೊಮಾರನಮಲೆ ಎಂದು ರೂಢಿಯಾಗಿದೆ. ಈ ಬೆಟ್ಟದ ಬಳಿ ಇರುವ ಹಲವಾರು ಗುಡ್ಡಗಳಿಗೆ 'ಮಲೆ' ಎಂದು ಹೆಸರಿದೆ. ಉದಾಹರಣೆಗಾಗಿ ಹೊಸಮಲೆ, ಜಟ್ಟಂಗಿಮಲೆ, ನುಂಕೆಮಲೆ ಇತ್ಯಾದಿ. ಈ ಮಲೆಗಳೆಲ್ಲವೂ ೨೦-೨೫ ಮೈಲಿಯ ಅಂತರದೊಳಗಿವೆ. ಈ ಪ್ರದೇಶಕ್ಕೆ 'ಮಲೆಪ್ರಾಂತ್ಯ' ಎಂದು ಗ್ರಂಥಗಳಲ್ಲಿಯೂ ಉಕ್ತವಾಗಿದೆ. ಆದ್ದರಿಂದ ಈ ಅಚ್ಚಗನ್ನಡ ಶಬ್ದವನ್ನೇ ಸಂಸ್ಕೃತವೆಂದು ಭಾವಿಸಿ, ಮಲಯಾಚಲ ಎಂದೂ, ಸಹ್ಯಾದ್ರಿಯ ಮಲೆನಾಡು ಎಂದೂ, ಮಲಯಾದ್ವೀಪ ಎಂದೂ ಅರ್ಥ ಮಾಡಿದಂತೆ ತೋರುವುದು.

ಹೀಗೆ ಶ್ರೀರೇವಣ ಸಿದ್ದೇಶ್ವರರೂ ಅವರ ಸಮಕಾಲೀನರು ಎಂಬ ಲೇಖನದಲ್ಲಿಯ ಶ್ರೀ ರೇವಣ ಸಿದ್ದೇಶ್ವರರನ್ನು ದರ್ಶನ ಮಾಡಿದ ಅಗಸ್ತ್ಯರು ಯಾರು ಎಂಬುದರ ಕುರಿತು ಲೇಖಕರು ಊಹೆಯ ಮೂಲಕ ತಮ್ಮ ವಿಚಾರವನ್ನು ಸಮರ್ಥಿಸಲು ಪ್ರಯತ್ನಿಸಿದ್ದಾರಾದರೂ ಖಚಿತವಾದ ಹೇಳಿಕೆಯನ್ನು ನೀಡಿಲ್ಲ. ಒಟ್ಟಿನಲ್ಲಿ ಈ ಕುಮಾರನಮಲೆಯಲ್ಲಿ ಇಂದಿಗೂ ಕುಮಾರಸ್ವಾಮಿ ದೇವಾಲಯದ ಎದುರಿಗೆ ಅಗಸ್ತ್ಯತೀರ್ಥವಿದ್ದು, ತೀರ್ಥದ ದಡದ ಮೇಲೆ ಅಗಸ್ತ್ಯಮುನಿಯ ವಿಗ್ರಹವು ಇದೆ.

೭.೧.೨. ಭೀಮ ತೀರ್ಥ

ಈ ತೀರ್ಥವು ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗ ಮಧ್ಯದಲ್ಲಿದೆ. ಸಂಡೂರು ಗ್ರಾಮದಿಂದ ಸುಮಾರು ೨.ಕಿ.ಮೀ. ಅಂತರದಲ್ಲಿದ್ದು ಕೃಷ್ಣಾನಗರದ ಬೆಟ್ಟದ ಹಿಂದಿನ ಸಂದಿನಲ್ಲಿ ಇದೆ. ಈ ತೀರ್ಥ ನಿರ್ಮಾಣದ ಕುರಿತು ಪೌರಾಣಿಕ ಹಿನ್ನೆಲೆ ಹೀಗಿದೆ. ದ್ವಾಪರಯುಗದಲ್ಲಿ ಪಂಚಪಾಂಡವರು ವನವಾಸದಲ್ಲಿದ್ದ ಸಂದರ್ಭದಲ್ಲಿ ಲೋಹಾಚಲವಾಸಿಯಾದ ಶ್ರೀ ಕುಮಾರಸ್ವಾಮಿ ದೇವಾಲಯಕ್ಕೆ ಬಂದು ಸ್ವಾಮಿ ದರ್ಶನ ಪಡೆದುಕೊಂಡು ಅಲ್ಲಿ ತಾವು ಬಂದಿದ್ದರ ಸ್ಮರಣಾರ್ಥವಾಗಿ ತಮ್ಮ ಹೆಸರಿನಿಂದ ಪಂಚಲಿಂಗಗಳನ್ನು ಪ್ರತಿಷ್ಠೆ ಮಾಡಿದರು. ಇಂದಿಗೂ ಇವರುಗಳ ಹೆಸರಿನಿಂದ ಕರೆಯುವ ಪಂಚಲಿಂಗಗಳು

ಕುಮಾರಸ್ವಾಮಿ ದೇವಸ್ಥಾನದ ಆವರಣದಲ್ಲಿವೆ. ಕುಮಾರಸ್ವಾಮಿಯ ದರ್ಶನ ಪಡೆದುಕೊಂಡು ಬೆಟ್ಟದಿಂದ ಇಳಿದು ಬರುತ್ತಿರುವಾಗ ಧರ್ಮರಾಜನು ತಮ್ಮನಾದ ಭೀಮನಿಗೆ ಹೇಳುತ್ತಾನೆ, ನನಗೆ ತುಂಬಾ ಬಾಯಾರಿಕೆಯಾಗುತ್ತಿದೆ ನಿನ್ನ ಗಧೆಯಿಂದ ಈ ಬಂಡೆಯನ್ನು ಹೊಡೆದು ಜಲವನ್ನು ತೆಗೆಯಬಾರದೆ ಎಂದು ಕೇಳಿದ ತಕ್ಷಣ ಭೀಮನು ಅಣ್ಣನ ಆಜ್ಞೆಯಂತೆ ಗಧೆಯಿಂದ ಬಂಡೆಯನ್ನು ಹೊಡೆದು ಜಲ ತೆಗೆದನು. ಹೀಗೆ ಧರ್ಮರಾಜನ ತಮ್ಮ ಭೀಮನಿಂದ ನಿರ್ಮಿತವಾದ ಈ ತೀರ್ಥವು ಇತರ ತೀರ್ಥಗಳಂತೆ ಪ್ರಸಿದ್ಧವಾಗಬೇಕು ಎಂದು ಕುಮಾರಸ್ವಾಮಿಯಲ್ಲಿ ಪ್ರಾರ್ಥಿಸಿಕೊಂಡನು. ಅಂದಿನಿಂದ ಈ ತೀರ್ಥವು ಭೀಮತೀರ್ಥವೆಂದು ಪ್ರಸಿದ್ಧವಾಗಿದ್ದು, ಇದು ಇಂದು ವನವಿಹಾರಕ್ಕೆ ಯೋಗ್ಯವಾದ ಸ್ಥಳವಾಗಿದೆ.

೭.೧.೩. ಭೈರವ ತೀರ್ಥ

ಈ ತೀರ್ಥವು ಸಂಡೂರಿನಿಂದ ಬಳ್ಳಾರಿಗೆ ಹೋಗುವ ಮಾರ್ಗದ ಮಧ್ಯದಲ್ಲಿ ಅಂದರೆ ತಾರಾನಗರ ಗ್ರಾಮದಿಂದ ಸು.೪.ಕಿ.ಮೀ. ಅಂತರದಲ್ಲಿದೆ. ಈ ತೀರ್ಥಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆ ಇದೆ. ತಾರಕಾಸುರನನ್ನು ಶ್ರೀಕುಮಾರಸ್ವಾಮಿಯು ಸಂಹಾರ ಮಾಡಿದನೆಂದು ತಾರಕಾಕ್ಷ ದಾಳಿ ಮಾಡಲು ಪರಶಿವನ ಆದೇಶದಂತೆ ಭೈರವನು ಲೋಹಾಚಲಕ್ಕೆ ಬಂದು ತ್ರಿಶೂಲಾಯುಧದಿಂದ ತಾರಕಾಸುರನ ಪುತ್ರನಾದ ತಾರಕಾಕ್ಷನನ್ನು ಸಂಹಾರ ಮಾಡಿದನು. ದಾನವನ ತೊಂದರೆಯಿಂದ ಮುಕ್ತರಾದ ಅಲ್ಲಿಯ ಜನರು ಭೈರವನನ್ನು ಇಲ್ಲಿ ಸದಾ ವಾಸ ಮಾಡುವಂತೆ ಪ್ರಾರ್ಥಿಸಿದರು. ಬೆಟ್ಟದ ಪೂರ್ವದಿಕ್ಕಿನಲ್ಲಿ ತೀರ್ಥವನ್ನು ನಿರ್ಮಾಣ ಮಾಡಿ ಅಲ್ಲಿ ನೆಲೆಸಿದನು. ಇಲ್ಲಿಯ ದೇವಾಲಯದಲ್ಲಿ ಈಶ್ವರ ಲಿಂಗವಿದೆ. ಈ ತೀರ್ಥವು ಸುಂದರವಾದ ಪ್ರಕೃತಿಯ ಮಧ್ಯೆ ಇದ್ದು, ಪರಿಶುದ್ಧವಾದ ವಾತಾವರಣವನ್ನು ನೀರನ್ನು ಪಡೆದಿದೆ. ಈ ಪ್ರದೇಶವೂ ವನವಿಹಾರಕ್ಕೆ ಯೋಗ್ಯವಾಗಿದೆ.

೭.೧.೪. ಹರಿಶಂಕರ ತೀರ್ಥ

ಈ ತೀರ್ಥವು ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ೪-೫. ಕಿಲೋಮೀಟರ್ ಮೊದಲೇ ಬಲಪಕ್ಕದಲ್ಲಿ ಕಾಣಸಿಗುತ್ತದೆ. ಶಿವನು ತಪಸ್ಸಿಗೆ ಕುಳಿತಾಗ ಮನ್ಮಥನು ಆತನ ತಪಸ್ಸನ್ನು ಭಂಗ ಮಾಡುತ್ತಾನೆ. ಆಗ ಶಿವನು ತನ್ನ ಪಾಲನೇತ್ರದಿಂದ ಮನ್ಮಥನನ್ನು ಸುಟ್ಟು ಭಸ್ಮ ಮಾಡುತ್ತಾನೆ. ಆಗ ವಿಷ್ಣುವು, ಪರಶಿವನನ್ನು ಕಂಡು ತನ್ನ ಮಗ ವೆಸಗಿದ ಕೃತ್ಯವನ್ನು ಮನ್ನಿಸಿ ಪುನಃ ತನ್ನ ಮಗನನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡನು. ಅದಕ್ಕೆ ಶಿವನು, ವಿಷ್ಣುವಿಗೆ ಲೋಹಾಚಲಕ್ಕೆ ಹೋಗಿ ತಪಸ್ಸನ್ನಾಚರಿಸುವಂತೆ ಹಾಗೂ ನಿನ್ನ ಇಷ್ಟಾರ್ಥವನ್ನು ಸಿದ್ಧಿಗೊಳಿಸುವುದಾಗಿ ತಿಳಿಸಿದನು. ಅದೇ ಪ್ರಕಾರ ವಿಷ್ಣುವು ಲೋಹಾಚಲಕ್ಕೆ ಬಂದು ತನ್ನ ಗಧೆಯಿಂದ ಹೊಡೆದು ಒಂದು ತೀರ್ಥವನ್ನು ನಿರ್ಮಿಸಿದನು. ಆ ತೀರ್ಥದಲ್ಲಿ ತ್ರಿಕಾಲ ಸ್ನಾನ ಮಾಡಿ ಈಶ್ವರನನ್ನು ಕುರಿತು ಪ್ರಾರ್ಥನೆ

ಕೈಗೊಂಡನು. ಅಂದು ವಿಷ್ಣುವು ಈ ತೀರ್ಥವನ್ನು ನಿರ್ಮಾಣ ಮಾಡಿದ್ದರ ಪ್ರತೀಕವಾಗಿ ಇಂದಿಗೂ ಈ ಸ್ಥಳದಲ್ಲಿ ತೀರ್ಥವಿದೆಯೆಂದೂ, ಶಿವನ ಸ್ಮರಣಾರ್ಥವಾಗಿ ದೇವಾಲಯ ಕಟ್ಟಿಸಿ ಶಿವಲಿಂಗ ಪ್ರತಿಷ್ಠಾಪಿಸಿದಂತೆಯು ತಿಳಿದು ಬರುತ್ತದೆ. ಈ ತೀರ್ಥಕ್ಕೆ ಬೆಟ್ಟದ ಮೇಲಿನಿಂದ ಸದಾಕಾಲ ನೀರು ಹರಿದು ಬರುತ್ತದೆ. ಇಲ್ಲಿ ಒಂದು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಿದ್ದು, ಗರ್ಭಗೃಹದಲ್ಲಿ ಶಿವಲಿಂಗವಿದೆ.

ಈ ತೀರ್ಥದ ಕುರಿತು ಮತ್ತೊಂದು ಕಥೆಯ ಪ್ರಕಾರ ವಡ್ಡಾರಾಧನೆಯ ಕೃತಿಯಲ್ಲಿ ಬರುವ ಕಾರ್ತಿಕಋಷಿಯ ಕಥೆಯಂತೆ ಕಾರ್ತಿಕಋಷಿ ಪ್ರತಿಮಾಯೋಗದಲ್ಲಿ ಧ್ಯಾನಾಸಕ್ತನಾಗಿದ್ದಾಗ ಅವನ ದೇಹದ ಮೇಲೆ ಸುರಿದ ನೀರು ಇಲ್ಲಿ 'ಸರ್ವೌಷದ'ವಾಗಿ ಪರಿಣಮಿಸಿ ತೀರ್ಥಕ್ಷೇತ್ರವಾಗಿರಬಹುದು ಎನ್ನುವ ನಂಬಿಕೆಯೂ ಇರುವುದು.

ಒಟ್ಟಿನಲ್ಲಿ ಈ ತೀರ್ಥ ಪ್ರದೇಶವು ವನವಿಹಾರಕ್ಕೆ ಸೂಕ್ತವಾದ, ಪ್ರಶಾಂತವಾದ ಮತ್ತು ಪರಿಶುದ್ಧವಾದ ನೀರು ಸಿಗುವ ಸ್ಥಳವಾಗಿದೆ. ಇಲ್ಲಿಯ ನೀರು ಪರಿಶುದ್ದವಾದ ಖನಿಜಾಂಶಗಳಿಂದ ಕೂಡಿರುವ ಆರೋಗ್ಯಕರವಾದ ಔಷಧದಂತೆ ಇರುವವು ಎಂದು ಬ್ರಿಟೀಷ್ ಅಧಿಕಾರದಲ್ಲಿ ಮುಂಬೈ ಸರಕಾರದಿಂದ ಪ್ರಶಂಸೆ ಪಡೆದುಕೊಂಡಿದೆ.

೭.೧.೫. ನವಿಲುಸ್ವಾಮಿ ತೀರ್ಥ

ಕುಮಾರಸ್ವಾಮಿ ದೇವಾಲಯದಿಂದ ಸು.೩.ಕಿ.ಮೀ. ಅಂತರದಲ್ಲಿ ಪಶ್ಚಿಮ ಭಾಗಕ್ಕೆ ಕೊಳ್ಳ ಪ್ರದೇಶದಲ್ಲಿ ಈ ತೀರ್ಥ ಕಾಣಸಿಗುತ್ತದೆ. ಇಲ್ಲಿ ೩೬ ಕಂಬಗಳಿಂದ ಮೂರು ದ್ವಾರಗಳಿಂದ ಕೂಡಿದ, ಮಧ್ಯ ಚಿಕ್ಕ ಗೋಪುರವನ್ನು ಹೊಂದಿದ ಚೌಕಾಕಾರದ ಗುಡಿಯೊಂದು ಅಲ್ಲಿದ್ದು, ಒಳಗಡೆ ಮಯೂರ ವಾಹನವಾದ ಕಾರ್ತಿಕೇಯನ ಪ್ರತಿಮೆಯಿದೆ. ಅದನ್ನೀಗ ನವಿಲುಸ್ವಾಮಿಯ ದೇವಾಲಯ ಹಾಗೂ ನವಿಲು ತೀರ್ಥವೆಂದು ಕರೆಯಲಾಗುತ್ತದೆ. ಮೊದಲು ಗರ್ಭಗುಡಿಯ ಒಳಗೆ ಸುಂದರವಾದ ಕಾರ್ತಿಕೇಯನ ಪ್ರತಿಮೆಯಿತ್ತೆಂದು ಅದು ಹಾಳಾದಾಗ ಅದೇ ರೀತಿಯ ಮತ್ತೊಂದು ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತೆಂದು ತಿಳಿದುಬರುತ್ತದೆ.

ಈ ದೇವಾಲಯದ ಮುಂದುಗಡೆ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ ವಿಷಯವನ್ನೊಳಗೊಂಡ ಎರಡು ಶಾಸನಗಳು ಕಂಡುಬರುತ್ತವೆ. ಈ ದೇವಾಲಯವು ವಿಜಯನಗರದ ಅರಸರಿಂದ ನಿರ್ಮಿಸಲ್ಪಟ್ಟಿರುವ ದೇವಾಲಯದಂತೆ ಕಾಣುತ್ತದೆ. ಅಲ್ಲದೆ ಇದರ ಮುಂದಿನ ಹೊಂಡವನ್ನು ಮತ್ತು ಮಂಟಪವನ್ನು ವಿಜಯನಗರದ ಅರಸ ಬುಕ್ಕರಾಯನು ಮಾಡಿಸಿದನೆಂದೂ ಅಲ್ಲಿಯ ಶಾಸನಗಳು ಸ್ಪಷ್ಟವಾಗಿ ತಿಳಿಸುತ್ತವೆ.

ಶ್ರೀ ಎಚ್.ದೇವೀರಪ್ಪನವರು ವಡ್ಡಾರಾಧನೆಯಲ್ಲಿ ಶಿವಕೋಟ್ಯಾಚಾರ್ಯರು ಹೇಳಿರುವ ನವಿಲುಸ್ವಾಮಿಯ ಇದ್ದಿರುವಿಕೆಯು ಕುಮಾರಸ್ವಾಮಿ ಗುಡಿಯ ಹಿಂಭಾಗದ ತಗ್ಗಾದ ತಂಪು ಪ್ರದೇಶದಲ್ಲಿ ಎಂದಿರುವುದು ಗಮನಾರ್ಹ. ನವಿಲು ರೂಪಿನ ದೇವತೆ ಕಾರ್ತಿಕ ಋಷಿಯನ್ನು ಎತ್ತಿಕೊಂಡು ಬಿಟ್ಟದ್ದು ಇಂದಿನ ನವಿಲುಸ್ವಾಮಿ ಆಗಿರಬಹುದು. ಡಾ.ಡಿ.ಎಲ್.ಎನ್. ಊಹಿಸಿರುವುದನ್ನು, ದೇವೀರಪ್ಪನವರ ಹೇಳಿಕೆಯನ್ನು ಹೋಲಿಸಿ ನೋಡಬಹುದು. ಈ ದೇವಸ್ಥಾನವು ಶಕವರ್ಷ ೬೪೧ (ಕ್ರಿ.ಶ.೭೦೯)ರಲ್ಲಿ ಸ್ಥಾಪಿಸಿದಂತೆ ತಿಳಿದುಬರುತ್ತದೆ.

ಸ್ಥಳೀಯ ಕಥೆಯ ಪ್ರಕಾರ ಪಾರ್ವತಿದೇವಿಯು ಕುಮಾರನಿಗೆ ಮದುವೆ ಮಾಡಬೇಕೆಂಬ ಕಾರಣ ದಿಂದ ಕನ್ಯೆಯನ್ನು ನೋಡಿ ಬಂದಳು. ಕುಮಾರನು ತನ್ನ ತಾಯಿಯನ್ನು ಕೇಳಿದನು ಕನ್ಯೆ ಹೇಗಿದ್ದಾಳೆ ಎಂದು. ಅದಕ್ಕೆ ತಾಯಿ ನನ್ನಂತೆಯೇ ಇದ್ದಾಳೆ ಎಂದಳು. ಅದಕ್ಕೆ ಕುಮಾರನು ನಿನ್ನಂತೆಯೇ ಇದ್ದರೆ ಆಕೆ ನನಗೆ ತಾಯಿ ಸಮಾನಳು. ಆದ್ದರಿಂದ ನನಗೆ ಮದುವೆ ಬೇಡ, ಅಲ್ಲದೇ ನಾನು ಯಾವ ಸ್ತ್ರೀಯರ ಮುಖವನ್ನು ನೋಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ ಅಂದಿನಿಂದ ಕುಮಾರನ ದರ್ಶನ ಸ್ತ್ರೀಯರಿಗೆ ನಿಷೇಧವಾಯಿತು ಎಂದು ತಿಳಿದುಬರುತ್ತದೆ. ಇದರಿಂದ ಮರುಗಿದ ಪಾರ್ವತಿದೇವಿ ಅಬಲೆಯರಿಗೂ ನಿನ್ನ ದರ್ಶನ ಸಿಗುವಂತೆ ಉಪಾಯ ಮಾಡಬೇಕೆಂದು ಕೇಳುತ್ತಾಳೆ. ಅದಕ್ಕಾಗಿ ಮಹಿಳೆಯರಿಗೆ ದರ್ಶನ ನೀಡುವ ಸಲುವಾಗಿ ನವಿಲುಸ್ವಾಮಿಯಾಗಿ ಕಾಣಿಸಿಕೊಳ್ಳುತ್ತಾನೆ ಎಂಬುದು ಪ್ರತೀತಿ. ಆತನು ನೆಲೆಸಿದ ಈ ಸ್ಥಳದಲ್ಲಿ ಇರುವ ಈ ತೀರ್ಥಕ್ಕೆ ನವಿಲುಸ್ವಾಮಿತೀರ್ಥ ಎಂದು ಹೆಸರು ಬಂದಿದೆ.

೭.೧.೬. ನರಸಿಂಹ ತೀರ್ಥ

ಈ ತೀರ್ಥವು ಸಂಡೂರು ಗ್ರಾಮದಿಂದ ದಕ್ಷಿಣಕ್ಕೆ ಇದ್ದು, ಧರ್ಮಾಪುರದಿಂದ ಮುಂದೆ ಸು.೨ ಕಿ.ಮೀ. ಎಡಪಕ್ಕದಲ್ಲಿ ಕಾಲುದಾರಿಯ ಮೂಲಕ ಹೋದರೆ ಈ ದೇವಸ್ಥಾನವು ಸಿಗುತ್ತದೆ. ಓಬಳಗಂಡಿಯ ಅಂಚಿನ ಮೇಲ್ಭಾಗದಲ್ಲಿರುವ ಈ ದೇವಸ್ಥಾನ ಸಾಕಷ್ಟು ವರ್ಷಗಳಿಂದಲೂ ಪೂಜೆಗೊಳಗಾಗುತ್ತ ಬಂದಿದೆ. ಮಾರ್ಚ್ ತಿಂಗಳಲ್ಲಿ ಮೂರು ದಿನಗಳವರೆಗೆ ನಡೆಯುವ ಇಲ್ಲಿಯ ಜಾತ್ರೆಯಲ್ಲಿ ಸುತ್ತಮುತ್ತಲಿನಿಂದಲೂ ಸಾಕಷ್ಟು ಜನರು ಬಂದು ಸೇರುತ್ತಾರೆ. ಈ ಸಂದರ್ಭದಲ್ಲಿ ಪೂಜಾರಿ ಐದು ದಿನ ಉಪವಾಸ ಇದ್ದು, ಹಣ್ಣು, ಹಾಲು ತೆಗೆದುಕೊಳ್ಳುತ್ತಾನೆ. ಜಾತ್ರೆಯ ದಿನ ದೊಡ್ಡ ಬೇಟೆಯ ಮರವನ್ನು ಬಲಿ ಕೊಡುತ್ತಾರೆ. ಇಲ್ಲಿ ಬೇಟೆ ಮರ ಎಂದರೆ ಪ್ರಾಣಿಯ ಬದಲು ಮರವನ್ನು ಬಲಿ ಕೊಡುತ್ತಾರೆ. ಅದು 'ತದಕಿ' ಮರ. ಈ ಮರವನ್ನು ಮೈಯಲ್ಲಿ ದೇವರು ಬಂದ ವ್ಯಕ್ತಿ ಈ ಮರವನ್ನು ಕೇವಲ ಸಲಾಕೆಯಿಂದ ಬೇರು ಸಹಿತ ಕೀಳುತ್ತಾನೆ. ಕೀಳಿದ ಮರವನ್ನು ದೇವಾಲಯಕ್ಕೆ ತರುವಾಗ ಮರದ ಕೊರಡಿನಲ್ಲಿ ಮಲಗಿದ ಪೂಜಾರಿಗೆ ಬಸವಿಯ ಜನಾಂಗದ ಇಬ್ಬರು ಹೆಂಗಸರು ಚಾಮರವನ್ನು ಬೀಸುತ್ತ

ಕರೆದುಕೊಂಡು ಹೋಗುತ್ತಾರೆ. ಪೂಜಾರಿಗೆ ಎಚ್ಚರವಾದ ನಂತರ ತೇರು ಎಳೆಯಲಾಗುತ್ತದೆ. ಈಗಲೂ ಈ ಸಂಪ್ರದಾಯ ಆಚರಣೆಯಲ್ಲಿದೆ. ಸುಮಾರು ಒಂದು ನೂರು ಮೀಟರ್‌ಗಿಂತಲೂ ಹೆಚ್ಚು ಎತ್ತರವಾದ ಎರಡು ಬಂಡೆಗಳ ಅಭಿಮುಖ ಸ್ಥಿತಿಯ ಓಬಳಗಂಡಿ ಮತ್ತು ಶ್ರೀನರಸಿಂಹಸ್ವಾಮಿ ದೇವಸ್ಥಾನ ಇಂದಿಗೂ ವನವಿಹಾರಕ್ಕೆ ಸೂಕ್ತವಾದ ಪ್ರದೇಶವಾಗಿದೆ.

೭.೨. ಮಠಮಾನ್ಯಗಳು

'ಮಠ' ಎಂಬ ಪದವನ್ನು ಮೂಲತಃ ಸಂಸ್ಕೃತದಿಂದ ಎರವಲು ತೆಗೆದುಕೊಳ್ಳಲಾಗಿದೆ. 'ಮಠವೆಂದರೆ ವಿದ್ಯಾರ್ಥಿಗಳು ವಾಸಿಸುವ ತಾಣ' ಎಂದು 'ಶಬ್ದಕಲ್ಪದ್ರುಮ'ದ ವ್ಯಾಖ್ಯಾನ. ಮಠವು ಆಧ್ಯಾತ್ಮಿಕ ಗುರುವೊಬ್ಬರ ನಿವಾಸವಾಗಿದ್ದು ವಿದ್ಯಾಭ್ಯಾಸಕ್ಕಾಗಿ ಆತನಲ್ಲಿ ಬರುವವರಿಗೆ ಆಶ್ರಯ ಕೊಡುವ ಸ್ಥಾನ ಎಂದು ಅರ್ಥ.

ಐತಿಹಾಸಿಕ ಪರಂಪರೆ ಹೊಂದಿರುವ, ಸಮಾಜದ ಅವಿಭಾಜ್ಯ ಅಂಗವಾಗಿರುವ ಮಠಗಳು ಧಾರ್ಮಿಕ ವಿಧಿ ವಿಧಾನಗಳ ಮೂಲಕ ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಸಮಷ್ಟಿ ಜೀವನದ ಒಳತಿಗಾಗಿ ಅಹೋ ರಾತ್ರಿ ದುಡಿಯುತ್ತ ಬಂದಿವೆ.

ಪ್ರಮುಖವಾಗಿ ಮಠಗಳು ಅನ್ನದಾಸೋಹ ಮತ್ತು ಜ್ಞಾನದಾಸೋಹವನ್ನು ಅನುಷ್ಠಾನಗೊಳಿಸಿದವು. ಒಂದರ ಕಾರ್ಯ ಉದರ ಪೋಷಣೆ, ಇನ್ನೊಂದರ ಕಾರ್ಯ ಬುದ್ಧಿ ಪೋಷಣೆ. ಒಂದು ಪ್ರಸಾದ ಎಂಬ ಹೆಸರಿನಿಂದ ಬೆಳಕಿಗೆ ಬಂದರೆ ಇನ್ನೊಂದು ಶಿಕ್ಷಣ ಎಂಬ ಹೆಸರಿನಿಂದ ಬೆಳಕಿಗೆ ಬಂತು. ಶಿಕ್ಷಣದ ಮೂಲಕ ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬಿತ್ತಿದವು. ಸಮಾಜ ಸುಧಾರಣೆಗೆ ಶಿಕ್ಷಣ ಅವಶ್ಯವೆಂದು ಅರಿತ ಮಠಾಧಿಪತಿಗಳು ಮಠಗಳನ್ನೇ ಶಾಲೆಗಳನ್ನಾಗಿ ಮಾಡಿಕೊಂಡರು. ಈ ಕಾರಣದಿಂದಾಗಿ ಓದಿಸುವ ಮಠ, ವಿರಕ್ತಮಠ, ಸಾಲಿಮಠ ಎಂಬ ಅನೇಕ ಹೆಸರುಗಳು ಪ್ರಾಪ್ತವಾದವು.[೧]

ಸಂಡೂರು ತಾಲ್ಲೂಕು ಸಹ ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದ ಸ್ಥಳವಾಗಿದ್ದು, ಇಲ್ಲಿ ವೀರಶೈವ ಧರ್ಮ ಅಭಿವೃದ್ಧಿಗೊಂಡು ಅನೇಕ ಮಠಗಳು ಧರ್ಮ ಪ್ರಚಾರಕ್ಕೆಂದು ಸ್ಥಾಪನೆಯಾಗಿದ್ದವು. ಆದರೆ ಈಗ ಅವುಗಳಲ್ಲಿ ಇಂದು ಕೇವಲ ನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಇಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ಹಾಗೂ ಅಸ್ತಿತ್ವವನ್ನು ಕಳೆದುಕೊಂಡು ಪಾಳು ಬಿದ್ದಿರುವ ಮಠಗಳನ್ನು ಇಲ್ಲಿ ಪ್ರಥಮ ಬಾರಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಸು. ಇತ್ತೀಚೆಗೆ ನಿರ್ಮಾಣವಾದ ಶಂಕರ ಮಠ, ರಾಯರ ಮಠಗಳ ಕುರಿತು ಇಲ್ಲಿ ಚರ್ಚಿಸಲಾಗಿಲ್ಲ.

೭.೨.೧. ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು

ಸಂಡೂರು ನಗರದ ಮಧ್ಯೆ ಸ್ಥಾಪಿತವಾಗಿರುವ ಪ್ರಭುದೇವರ ವಿರಕ್ತಮಠವು ಕ್ರಿ.ಶ.೧೬೭೫ ರಿಂದ ೧೭೨೫ರ ಒಳಗಿನ ಕಾಲಾವಧಿಯಲ್ಲಿ ಸ್ಥಾಪನೆಯಾಗಿರಬೇಕೆಂದು ಸಂಶೋಧಕರು ಸ್ಪಷ್ಟಪಡಿಸಿರುವುದರಿಂದ ಈ ಮಠಕ್ಕೆ ಸುಮಾರು ೩೦೦ ವರ್ಷಗಳ ಇತಿಹಾಸ ಇದೆಯೆಂದು ನಿಶ್ಚಯಿಸಬಹುದು. ಶ್ರೀ ಅರ್ಧನಾರೀಶ್ವರರ ಅವಧಿಯಲ್ಲಿ ಈ ಮಠ ಸ್ಥಾಪನೆಯಾಗಿದೆ. ಶ್ರೀ ಪ್ರಭುಸ್ವಾಮಿಗಳು ಈ ಮಠದ ಸ್ಥಾಪಕರಾದ ಕಾರಣ 'ಪ್ರಭುದೇವರ ವಿರಕ್ತಮಠ' ಎಂಬ ಹೆಸರು ಬಂದಿದೆ. ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಈ ಮಠವು ಧಾರ್ಮಿಕವಾಗಿ ಹೆಸರು ಪಡೆದಿದೆ. ಶ್ರೀ ಅರ್ಧನಾರೀಶ್ವರರಿಂದ ಅನುಗ್ರಹ ಪಡೆದು ಅಧಿಕಾರ ಸ್ವೀಕರಿಸಿದ ಶ್ರೀ ಪ್ರಭುಸ್ವಾಮಿಗಳು ಈ ಭಾಗದಲ್ಲಿ ವೀರಶೈವ ಧರ್ಮವನ್ನು, ಪ್ರಚಾರಪಡಿಸಿ, ಸಂಸ್ಕಾರವಂತ ಸಮಾಜವನ್ನು ಬೆಳೆಸಿದರು.

ಮಠದ ಪರಂಪರೆ

ಶ್ರೀ.ಮ.ನಿ.ಪ್ರ. ಪ್ರಭುಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಹುಚ್ಚ ಪ್ರಭುಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ವೀರಯ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ನಾಗಯ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ವಿಜಯ ಮಹಾಂತ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದಲ್ಲಿ ಈಗಿನ ಗುರುಗಳು ಸೇರಿದಂತೆ ಏಳು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಮಠದಲ್ಲಿ ಆರು ಗದ್ದುಗೆಗಳು ನೋಡ ಸಿಗುತ್ತಿವೆ. ಆದರೆ ಒಬ್ಬರು ಗುರುಗಳ ಹೆಸರು ಲಭ್ಯವಿಲ್ಲ. ಈ ವಿರಕ್ತ ಮಠಕ್ಕೆ ಶ್ರೀ ಪ್ರಭುಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ೧೭೨೫ರಿಂದ ೧೯೧೦ರವರೆಗೆ ಈ ಪರಂಪರೆಯ ಬಗ್ಗೆ ಮಾಹಿತಿಗಳು ಲಭ್ಯವಿರುವುದಿಲ್ಲ. ಪರಂಪರೆಯ ಗುರುಗಳಾದ ಶ್ರೀ ಹುಚ್ಚ ಪ್ರಭುಸ್ವಾಮಿಗಳು ಪವಾಡ ಪುರುಷರಾಗಿ ನಾಡಲ್ಲೆಲ್ಲಾ ಸಂಚರಿಸಿ ಧರ್ಮ ಪ್ರಚಾರವನ್ನು ಮಾಡಿ, ಪುನಃ ಸಂಡೂರಿಗೆ ಬಂದು ೧೯೨೦ರಲ್ಲಿ ಲಿಂಗೈಕ್ಯರಾದರು. ನಂತರ ಶ್ರೀ ವೀರಯ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಕಾಯಕ ಯೋಗಿಗಳಾಗಿ ದುಡಿದು ಇತರರಿಗೆ

ಆದರ್ಶಪ್ರಾಯರಾಗಿದ್ದರು. ಸಂಜೆಯ ವೇಳೆ ಭಕ್ತರನ್ನೆಲ್ಲಾ ಸೇರಿಸಿ ಧರ್ಮೋಪದೇಶವನ್ನು ನೀಡುತ್ತಿದ್ದರು. ಶಿವಶರಣರ ಕಥೆಗಳನ್ನು ಹೇಳಿ ಜನರನ್ನು ಜಾಗೃತರನ್ನಾಗಿ ಮಾಡುತ್ತಿದ್ದರಂತೆ. ಇವರ ಕಾಲದಲ್ಲಿ ಅನ್ನದಾಸೋಹ ವ್ಯವಸ್ಥಿತವಾಗಿ ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ.

ಶ್ರೀ ವೀರಯ್ಯ ಸ್ವಾಮಿಗಳ ನಂತರ ಕಿನ್ನಾಳ ಗ್ರಾಮದವರಾದ ಶ್ರೀ ನಾಗಯ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಹಿರಿಯ ಗುರುಗಳು ನಡೆಸುತ್ತಿದ್ದ ಕಾಯಕಯೋಗ ಮತ್ತು ಅನ್ನ ದಾಸೋಹವನ್ನು ಮುಂದುವರೆಸಿದರು. ಮಠದಲ್ಲಿ ಹಿಂದೆ ನಡೆಯುತ್ತಿದ್ದ ಪ್ರವಚನ ಕಾರ್ಯವನ್ನು ವ್ಯವಸ್ಥಿತವಾಗಿ ಮುಂದುವರೆಸ ತೊಡಗಿದರು. ಮಠದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಉದ್ಧಾನಯ್ಯ ಮತ್ತು ಬಸಯ್ಯಶಾಸ್ತ್ರಿಗಳನ್ನು ನಿಯೋಜಿಸಿಕೊಂಡರು ಎಂದು ಮಠದ ಇತಿಹಾಸದಿಂದ ತಿಳಿಯುತ್ತಿದೆ. ಅನ್ನದಾಸೋಹ ಮತ್ತು ಜ್ಞಾನ ದಾಸೋಹವನ್ನು ನೀಡತೊಡಗಿದರು.

ಶ್ರೀ ನಾಗಯ್ಯ ಸ್ವಾಮಿಗಳ ನಂತರ ಮಠಕ್ಕೆ ಸೂಕ್ತ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡದೆ ಇದ್ದ ಕಾರಣ ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಭಕ್ತರು ಮಠದ ಆಡಳಿತವನ್ನು ನೋಡಿಕೊಂಡು ದಸರಾ ಸಂದರ್ಭದಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸುವುದು, ಗದ್ದುಗೆಗಳಿಗೆ ಪೂಜಾಕಾರ್ಯ ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ವ್ಯವಸ್ಥಿತವಾಗಿ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿದ್ದ ಮಠದಲ್ಲಿ ಧಾರ್ಮಿಕ ಗುರುಗಳು ಇಲ್ಲದಿರುವುದು ಮಠದ ಭಕ್ತರಿಗೆ ವ್ಯಥೆಯಾಯಿತು.

೧೯೬೬ರಲ್ಲಿ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಶ್ರೀ ವಿಜಯಮಹಾಂತ ಸ್ವಾಮಿಗಳನ್ನು ಆಯ್ಕೆ ಮಾಡಿಕೊಂಡು ಸಂಡೂರಿಗೆ ಕರೆ ತಂದರು. ಮರಿದೇವರು ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದ ಕಾರಣ ವೀರಶೈವ ಸಮಾಜವು ಸ್ವಾಮಿಗಳು ವಿದ್ಯಾಸಂಪನ್ನರಾದರೆ ಸಮರ್ಥ ಆಡಳಿತವನ್ನು ನೀಡಬಲ್ಲರು ಎಂಬ ಆಶಾಭಾವನೆಯಿಂದ ಗುರುಗಳನ್ನು ಪುನಃ ಮೈಸೂರು ಮತ್ತು ಕಾಶಿಯಲ್ಲಿ ಉನ್ನತ ಶಿಕ್ಷಣ ಕಲಿಯಲು ಕಳುಹಿಸಿಕೊಟ್ಟರು.

ಉನ್ನತ ಶಿಕ್ಷಣವನ್ನು ಪಡೆದು ಮಠಕ್ಕೆ ಬಂದು ಅಧಿಕಾರವನ್ನು ನೋಡಿಕೊಳ್ಳತೊಡಗಿದ ಶ್ರೀ ವಿಜಯಮಹಾಂತ ಸ್ವಾಮಿಗಳು ಉತ್ಸಾಹ ತೋರದೆ ೧೯೮೪ರಲ್ಲಿ ಮಠವನ್ನು ತ್ಯಜಿಸಿದರು. ಇದರಿಂದ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಪುನಃ ಇಲ್ಲಿನ ವೀರಶೈವ ಮಹಾಸಭೆ ಮತ್ತು ಗದುಗಿನ ಶ್ರೀ ತೋಂಟದಾರ್ಯ ಸ್ವಾಮಿಗಳು ಮಲ್ಲಿಕಾರ್ಜುನ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತರಲು ನಿರ್ಧರಿಸಿದರು.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಬದದ್ವಾಡ ಗ್ರಾಮದ ಹಿರೇಮಠದ ಶ್ರೀ ಶೇಖರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಮಗನಾಗಿ ೧೯೫೪ರ ಜೂನ್ ೧ ರಂದು ಜನಿಸಿದ

ಮಲ್ಲಿಕಾರ್ಜುನಯ್ಯನವರು, ಇಂಗಳಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಎಂ.ಎ.ಪದವಿಯನ್ನು ಪಡೆದರು. ಚೈತನ್ಯ ಮೂರ್ತಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನಯ್ಯನವರನ್ನು ಗುರುತಿಸಿದ ಗದುಗಿನ ಶ್ರೀ ತೋಂಟದಾರ್ಯ ಸ್ವಾಮಿಗಳು ಅನೇಕ ಜವಾಬ್ದಾರಿಯ ಕೆಲಸಗಳನ್ನು ಕೊಟ್ಟು ಅನುಭವವನ್ನು ಗಳಿಸಿಕೊಳ್ಳಲು ಅನುವು ಮಾಡಿಕೊಟ್ಟರು. ನಂತರ ೧೯೮೪ರಲ್ಲಿ ಸಂಡೂರಿಗೆ ಕರೆತಂದು, ೧೯೮೪ರ ಮೇ ಹದಿನಾರರಂದು ಪಟ್ಟಾಧಿಕಾರವನ್ನು ಮಾಡಿದರು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು, ಮಠದ ಜಮೀನನ್ನು ಅಭಿವೃದ್ಧಿಪಡಿಸಲು ಮುಂದಾದರು. ತಾರಾನಗರ, ವಡ್ಡು, ಚಿಮ್ಮನಹಳ್ಳಿ, ಉಬ್ಬಲಗಂಡಿ, ಗೌರೀಪುರ, ತೋರಣಗಲ್ಲು, ದೌಲತ್‌ಪುರ, ನೆಲ್ಕುದ್ರಿ. ಹಗರಿಬೊಮ್ಮನಹಳ್ಳಿ ಹಾಗೂ ದಶಮಾಪುರ ಮುಂತಾದ ಕಡೆಗಳಲ್ಲಿ ಜಮೀನು ಹಾಗೂ ನಿವೇಶನಗಳಿದ್ದು ಅವುಗಳನ್ನೆಲ್ಲಾ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನು ಮಾಡಿಕೊಂಡರು. ಸಮಷ್ಟಿ ಸಮಾಜದ ಒಳಿತಿಗಾಗಿ ಕಾರ್ಯಕ್ರಮವನ್ನು ಒಂದೊಂದನ್ನೇ ಕಾರ್ಯಗತ ಮಾಡುತ್ತಾ ಬಂದಿದ್ದಾರೆ. ಹಳೇ ಮಠವನ್ನು ನವೀಕರಿಸಿ ಅಗತ್ಯಕ್ಕೆ ತಕ್ಕಷ್ಟು ವಿಸ್ತರಿಸಿಕೊಂಡಿದ್ದಾರೆ. ಮಠದ ಆವರಣದಲ್ಲಿರುವ ಆರು ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿದ್ದಾರೆ.

ಶ್ರೀಮಲ್ಲಿಕಾರ್ಜುನ ಸ್ವಾಮಿಗಳು ಸಿದ್ಧಲಿಂಗಶಾಸ್ತ್ರಿಗಳ ಸ್ಮಾರಕ ಗ್ರಂಥಾಲಯವನ್ನು ಸ್ಥಾಪಿಸಿದರು. ಅಕ್ಕಮಹಾದೇವಿ ಹೊಲಿಗೆ ಕೇಂದ್ರವನ್ನು ಸ್ಥಾಪಿಸಿ ನೂರಾರು ಮಹಿಳೆಯರಿಗೆ ಗೃಹ ಕೈಗಾರಿಕೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ. ಹತ್ತು ಜನ ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕೊಟ್ಟು ಉಚಿತವಾಗಿ ಊಟ ಮತ್ತು ವಸತಿಯನ್ನು ಕಲ್ಪಿಸಿದ್ದಾರೆ. ನಿತ್ಯ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗಿದೆ. ಬಹಳ ವರ್ಷಗಳಿಂದ ಮಠಾಧಿಕಾರಿಗಳಿಲ್ಲದೆ ಗ್ರಹಣ ಹಿಡಿದಿದ್ದ ಮಠಕ್ಕೆ ಜ್ಯೋತಿಯಾಗಿ ಬಂದು, ತಮ್ಮ ಕ್ರಿಯಾಶೀಲತೆಯಿಂದ ಕೇವಲ ಕೆಲವೇ ವರ್ಷಗಳಲ್ಲಿ ಪ್ರಬುದ್ಧತೆಯನ್ನು ಸಾಧಿಸಿದ್ದಾರೆ.[೨]

೭.೨.೨. ಮೌನ ಶರಣರ ಮಠ, ಕೃಷ್ಣಾನಗರ

ಸಂಡೂರಿನ ನಾರಿಹಳ್ಳದ ದಂಡೆಯ ಮೇಲೆ ಮೌನ ಶರಣರ ಮಠವು ಸ್ಥಾಪನೆಯಾಗಿದೆ. ರಾಯಚೂರು ತಾಲ್ಲೂಕಿನ ದೇವಸೂಗೂರು ಗ್ರಾಮದಲ್ಲಿ ಜನಿಸಿದ ಬಸವರಾಜ ಸ್ವಾಮಿಗಳು ಬಸವಪುರಾಣ, ಸಿದ್ಧಾಂತ ಶಿಖಾಮಣಿ ಮತ್ತು ವೀರಶೈವ ಆಚಾರಗಳ ಬಗ್ಗೆ ವಿಶೇಷವಾದ ಅನುಭವವನ್ನು ಪಡೆದವರಾಗಿದ್ದರು. ಮನೆಯಲ್ಲಿ ನಡೆದ ಒಂದು ಕಹಿ ಘಟನೆಗೆ ಬೇಸತ್ತು ಲೋಕಸಂಚಾರ ಕೈಗೊಂಡು ಮೌನವ್ರತವನ್ನು ಆಚರಿಸುತ್ತಾ 'ಶ್ರೀ ಮೌನಶರಣರೆಂಬ' ಹೆಸರು ಪಡೆದು ಇಲ್ಲಿಗೆ ಬಂದು ನೆಲೆಸಿದರು.

ಇಲ್ಲಿ ನೆಲೆನಿಂತ ಶ್ರೀ ಮೌನ ಶರಣರು, ಸಂಡೂರು ಮತ್ತು ಕೃಷ್ಣಾನಗರದ ಮಧ್ಯದ ನಾರಿಹಳ್ಳದ ದಡದಲ್ಲಿ ೧೯೬೦ರಲ್ಲಿ ಮಠವನ್ನು ನಿರ್ಮಿಸಿದರು. ನಿತ್ಯ ಪೂಜೆ ಪುನಸ್ಕಾರ, ಭಕ್ತರಿಗೆ ಆಶೀರ್ವಾದ ಮಾಡುವುದು ಶರಣರ ಕಾಯಕವಾಗಿತ್ತು. ಬಸವ ಜಯಂತಿಯಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸಿ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದ್ದರು. ಬದುಕಿನ ಜೀವಿತ ಅವಧಿಯಲ್ಲಿ ಎರಡು ಹುಟ್ಟು ಪಡೆದ ಶ್ರೀ ಮೌನಶರಣರು ೧೯೬೪ರ ಮಾರ್ಚ್ ೨೩ರಂದು ಅನುಷ್ಠಾನಕ್ಕೆ ಕುಳಿತಿದ್ದಾಗಲೇ ಲಿಂಗೈಕ್ಯರಾದರು. ಶ್ರೀ ಮೌನ ಶರಣರ ಸಮಾಧಿಗೆ ಗದ್ದುಗೆಯನ್ನು ನಿರ್ಮಿಸಿ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮೌನಶರಣರ ಪರಮಾಪ್ತ ಭಕ್ತರಾಗಿ ಸೇವೆ ಮಾಡಿದ್ದ ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ಇಲ್ಲಿನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.[೩]

೭.೨.೩. ಸಿದ್ಧರಾಮೇಶ್ವರ ಮಠ, ಯಶವಂತನಗರ

ಯಶವಂತನಗರವು ಸಂಡೂರಿನಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ಅಂತರದಲ್ಲಿದೆ. ಇಲ್ಲಿ ಶ್ರೀ ಸಿದ್ಧರಾಮೇಶ್ವರ ಮಠವು ಅಸ್ತಿತ್ವದಲ್ಲಿದೆ. ಯಶವಂತನಗರ ಗ್ರಾಮದಲ್ಲಿ ೩೦೦ ವರ್ಷಗಳ ಹಿಂದೆ ಸ್ಥಾಪನೆಯಾದ ಶ್ರೀ ಸಿದ್ಧರಾಮೇಶ್ವರ ಮಠವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರ ಬಿಂದುವಾಗಿ ಬೆಳದಿದೆ.

ಈ ಗ್ರಾಮಕ್ಕೆ ಪೂರ್ವದಲ್ಲಿ 'ಕಣಿವೆಹಳ್ಳಿ' ಎಂಬ ಹೆಸರಿದ್ದು, ಇತ್ತೀಚೆಗೆ 'ಯಶವಂತನಗರ' ಎಂಬ ಹೆಸರು ಬಂದಿದೆ. ಇದು ಘೋರ್ಪಡೆ ಮಹಾರಾಜರ ಮನೆತನಕ್ಕೆ ಸೇರಿದ ಒಬ್ಬ ರಾಜನ ಹೆಸರಾಗಿದ್ದು, ಆ ರಾಜನ ಹೆಸರನ್ನೇ ಈ ಗ್ರಾಮಕ್ಕೆ ಇಡಲಾಗಿದೆ. ಈ ಗ್ರಾಮವು ಬೆಟ್ಟ ಗುಡ್ಡಗಳಿಂದ ಸುತ್ತುವರಿದಿದೆ. ಸೀಗೆ ಪೊದೆಗಳು ಆವರಿಸಿದ್ದ ಪ್ರದೇಶದಲ್ಲಿ ದನಗಳನ್ನು ಮೇಯಿಸಲು ಮಾತ್ರ ಜನರು ಹೋಗುತ್ತಿದ್ದರು. ಇಂತಹ ನಿರ್ಜನ ಪ್ರದೇಶದಲ್ಲಿ ಹಸುವೊಂದು ಸೀಗೆ ಪೊದೆಯ ಹತ್ತಿರ ಹೋಗಿ ಹಾಲು ಕರೆದು ಬರುತ್ತಿತ್ತು. ಇದನ್ನು ನೋಡಿದ ದನ ಕಾಯುವಾತ ಬಂಜೆಯಾಗಿದ್ದ ಹಸು ಈ ರೀತಿ ಹಾಲು ಕರೆಯುತ್ತದೆ ಎಂದರೆ ಈ ಸ್ಥಳದಲ್ಲಿ ಏನೋ ಮಹಾತ್ಮೆ ಇರಬೇಕು ಎಂದು ತಿಳಿದು, ಕಣಿವೆಹಳ್ಳಿಯ (ಯಶವಂತನಗರ) ಜನರಿಗೆ ತಿಳಿಸಿದನು. ಜನರು ಈ ಮಹಾತ್ಮೆಯ ಸ್ಥಳಕ್ಕೆ ಆಗಮಿಸಿ ನೋಡಿದಾಗ ತಪಸ್ವಿಗಳೊಬ್ಬರು ತಪೋ ಮಗ್ನರಾಗಿ ಕುಳಿತಿರುವುದನ್ನು ಗಮನಿಸುತ್ತಾರೆ. ಗುರುಗಳ ತಪೋ ಭಂಗವಾಗಬಾರದೆಂದು ಎಚ್ಚರವಾಗುವವರೆಗೆ ಕಾದು ಎಚ್ಚರಗೊಂಡ ಮೇಲೆ ಗುರುಗಳ ಆಶೀರ್ವಾದ ಪಡೆದು ಕೃಪೆಗೆ ಒಳಗಾಗುತ್ತಾರೆ. ದಿನ ಕಳೆದಂತೆ ಗುರುಗಳು ಮತ್ತು ಭಕ್ತರ ಒಡನಾಟ ಹೆಚ್ಚಾಗಿ ಈ ಜಾಗದಲ್ಲಿ ಮಠವನ್ನು ಕಟ್ಟಿಸಿಕೊಡುತ್ತಾರೆ.

ಈ ಮಠದ ಮೊದಲ ಗುರುಗಳು ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಆಗಿದ್ದ ಕಾರಣ ಈ ಮಠಕ್ಕೆ 'ಶ್ರೀ ಸಿದ್ಧರಾಮೇಶ್ವರ ಮಠ' ಎಂದು ನಾಮಕರಣ ಮಾಡಿ ಮಠವನ್ನು ಮುನ್ನಡೆಸಿದ್ದಾರೆ. ಇವರ ನಂತರ

ಶ್ರೀ ಸಂಗನ ಬಸವಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಚಾರಕ್ಕೆ ಒಳಗಾಗಿ ಮಠದ ಸುತ್ತಮುತ್ತಲ ಗ್ರಾಮಸ್ಥರು ಮಠಕ್ಕೆ ಜಮೀನನ್ನು ಬಿಟ್ಟುಕೊಡುತ್ತಾರೆ. ಮಠದಲ್ಲಿ ನಡೆಯುವ ಸಿದ್ಧರಾಮೇಶ್ವರ ರಥೋತ್ಸವಕ್ಕಾಗಿ ನೂತನ ರಥವನ್ನು ನಿರ್ಮಿಸಿದ್ದಾರೆ.

ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಯನ್ನು ಕಂಡಿದೆ. ಸಂಡೂರಿನ ಶ್ರೀ ಮಹಾರಾಜರು ಈ ಮಠದ ಅಭಿವೃದ್ಧಿಗೆ ಭೂಮಿಯನ್ನು ಇನಾಂ ನೀಡಿದ್ದಾರೆ. ಶ್ರೀ ಸಂಗನ ಬಸವ ಸ್ವಾಮಿಗಳ ಕಾಲದಲ್ಲಿ ಮಠದ ಕರ್ತೃ ಗುರುಗಳಾದ ಶ್ರೀ ಸಿದ್ದೇಶ್ವರ ಸ್ವಾಮಿಗಳ ಗದ್ದುಗೆಗೆ ಉತ್ತರಾಭಿಮುಖವಾಗಿ ಮಠವನ್ನು ನವೀಕರಿಸಿ ಭವ್ಯವಾಗಿ ನಿರ್ಮಿಸಿದ್ದಾರೆ.

ಮಠದ ಪರಂಪರೆ

ಶ್ರೀ.ಮ.ನಿ.ಪ್ರ. ಸಿದ್ಧರಾಮೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಮೌನಸಿದ್ಧರಾಮ ಸ್ವಾಮಿಗಳು

ಈ ರೀತಿ ಮೂರು ಜನ ಗುರುಗಳ ಹೆಸರುಗಳು ಮಾತ್ರ ಕೇಳಿ ಬರುತ್ತಿವೆ. ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಜಾಲಿಹಾಳು ಕಡೆಯಿಂದ ಸಂಚಾರಕ್ಕೆ ಬಂದ ಶ್ರೀ ಮೌನ ಸಿದ್ಧರಾಮ ಸ್ವಾಮಿಗಳು (೧೯೫೮) ಈ ಊರಿಗೆ ಬಂದು ಇಲ್ಲಿನ ಮಠದಲ್ಲಿ ನೆಲೆಸಿ, ಮಠವನ್ನು ಹೆಚ್ಚು ಅಭಿವೃದ್ಧಿಗೆ ತಂದರು. ಮಠವನ್ನು ವಿಸ್ತರಿಸಿ ಧಾರ್ಮಿಕ ಚಟುವಟಿಕೆಗಳನ್ನು ಹೆಚ್ಚಿಸಿದ್ದಲ್ಲದೆ ಸಾಮೂಹಿಕ ವಿವಾಹ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ತಪ್ಪದೇ ಮಾಡುತ್ತಾ, ಹೆಸರು ಮಾಡಿ ೧೯೮೫ರಲ್ಲಿ ಲಿಂಗೈಕ್ಯರಾದರು. ಈ ಮಠಕ್ಕೆ ಇಪ್ಪತ್ತಮೂರು ಎಕರೆ ಜಮೀನಿದ್ದು ಇದರಲ್ಲಿ ಒಂಭತ್ತು ಎಕರೆಗೆ ನೀರಾವರಿ ಸೌಲಭ್ಯ ಇದೆ. ನಾಗಲಾಪುರ ಮತ್ತು ಕೊಟ್ಟೂರಿನ ಶಾಖಾಮಠಗಳಲ್ಲೂ ಈ ಮಠಕ್ಕೆ ಸಂಬಂಧಿಸಿದ ಜಮೀನು ಇದೆ. ಶ್ರೀ ಮೌನ ಸಿದ್ಧರಾಮೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಗ್ರಾಮಸ್ಥರು ಸಮಿತಿಯನ್ನು ರಚಿಸಿಕೊಂಡಿದ್ದು, ಮಠವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವ ಸಿದ್ಧತೆಯಲ್ಲಿದ್ದಾರೆ.[೪]

೭.೨.೪. ಗರಗ-ನಾಗಲಾಪುರ ಒಪ್ಪತ್ತೇಶ್ವರ ವಿರಕ್ತಮಠ

ಸಂಡೂರು ತಾಲ್ಲೂಕಿನ ಗರಗ - ನಾಗಲಾಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ಅಂತರದಲ್ಲಿದೆ. ಇಲ್ಲಿ ಶ್ರೀ ಒಪ್ಪತ್ತೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ. ವಿಜಯನಗರದ ಅರಸ ಪ್ರೌಢದೇವರಾಯನ ಮಗ ಸದಾಶಿವರಾಯನು (ಕ್ರಿ.ಶ.೧೫೪೦) ತನ್ನ ತಾಯಿ ನಾಗಲಾಂಬಿಕೆಯ

ನೆನಪಿಗಾಗಿ ನಾಗಲಾಪುರದಲ್ಲಿ (ಕ್ರಿ.ಶ.೧೪೫೦) ಮಠವನ್ನು ಸ್ಥಾಪಿಸಿದನು. ಇಲ್ಲಿ ಸ್ಥಾಪನೆಗೊಂಡ ಶ್ರೀ ಒಪ್ಪತ್ತೇಶ್ವರ ವಿರಕ್ತ ಮಠವು ಧಾರ್ಮಿಕ ಕಾರ್ಯಗಳನ್ನು ಪ್ರಾರಂಭಿಸಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಿತು. ನೂರೊಂದು ವಿರಕ್ತರಲ್ಲಿ ಒಬ್ಬರಾದ ಶ್ರೀ ಒಪ್ಪತ್ತೇಶ್ವರರು ಇಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಶ್ರೀ ಸದಾಶಿವರಾಯನು ಗುರುಗಳಿಗೆ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಿ, ಅನೇಕ ದಾನ ದತ್ತಿಗಳನ್ನು ನೀಡಿದನು.

ಮಠದ ಪರಂಪರೆ

ಶ್ರೀ.ಮ.ನಿ.ಪ್ರ.ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಚನ್ನಮಲ್ಲ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಗುರು ಒಪ್ಪತ್ತೇಶ್ವರ ಸ್ವಾಮಿಗಳು
|
ಶ್ರೀ.ಮ.ನಿ.ಪ್ರ. ಮರಿಮಹಾಂತ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಮಠದ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಸಂಡೂರು ಮತ್ತು ಯಶವಂತನಗರಗಳಲ್ಲಿನ ವಿರಕ್ತಮಠಗಳೊಂದಿಗೆ ಗರಗ-ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಮಠದ ಧಾರ್ಮಿಕ ಸಂಬಂಧವು ಹಿಂದಿನಿಂದಲೂ ನಡೆದುಕೊಂಡು

ಬಂದಿದೆ. ಸಂಡೂರು ಮಠದ ಶ್ರೀ ಪ್ರಭುಸ್ವಾಮಿಗಳು, ಯಶವಂತನಗರದ ಶ್ರೀ ಸಿದ್ಧರಾಮ ಸ್ವಾಮಿಗಳು ಮತ್ತು ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಒಟ್ಟಿಗೆ ಸೇರಿ ಸಂಚಾರ ಕೈಗೊಳ್ಳುತ್ತಿದ್ದರು. ಒಂದು ಬಾರಿ ಯಶವಂತನಗರದ ಶ್ರೀ ಸಿದ್ಧರಾಮಸ್ವಾಮಿಗಳು ಗರಗ-ನಾಗಲಾಪುರದ ಸಮೀಪವಿದ್ದ ಗುಡ್ಡದ ಬಿಲ್ವಪತ್ರೆ ಪೆಂಟೆಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದರಂತೆ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಮತ್ತು ಭಕ್ತರು ವಾದ್ಯ ವೈಭವದಿಂದ ಅವರನ್ನು ನಾಗಲಾಪುರದ ತಮ್ಮ ಮಠಕ್ಕೆ ಆಹ್ವಾನಿಸುತ್ತಿದ್ದರಂತೆ. ಅಂದಿನಿಂದ ಈವರೆಗೂ ಪ್ರತಿವರ್ಷ ಶ್ರಾವಣ ಮಾಸದ ೩ನೇ ಸೋಮವಾರದಂದು ಆ ಪದ್ಧತಿ ನಡೆಯುತ್ತಿದೆ ಹಾಗೂ ಗಣಾರಾಧನೆಯ ಕಾರ್ಯ ಕ್ರಮವೂ ಕೂಡ ಜರುಗುತ್ತಿದೆ. ಸರ್ವಜನಾಂಗದವರು ಈ ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳುವುದು ಒಂದು ವಿಶೇಷ. ಹರಪನಹಳ್ಳಿಯ ಸೋಮಶೇಖರನಾಯಕ, ನಾರಾಯಣದೇವರ ಕೆರೆಯ ಸೋಮಶೇಖರ ದೊರೆ ಈ ಮಠಕ್ಕೆ ನಡೆದುಕೊಳ್ಳುತ್ತಿದ್ದ ಬಗ್ಗೆ ವಿವರಗಳು ಸಿಗುತ್ತವೆ.

ಮಗಿಮಾವಿನಹಳ್ಳಿ, ಹೊಳಲು, ಹೊಸದುರ್ಗ, ಗುಂಡಾ, ಕುರುವತ್ತಿ ಮುಂತಾದ ಕಡೆಗಳಲ್ಲಿ ಗರಗ-ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಮಠದ ಶಾಖಾಮಠಗಳಿವೆ. ಹದಿನೈದು ವರ್ಷಗಳ ಹಿಂದೆ ಗರಗ-ನಾಗಲಾಪುರ ಮಠದ ಆಡಳಿತವು ಅಸ್ತವ್ಯಸ್ತಗೊಂಡಾಗ ಅಲ್ಲಿಯ ಭಕ್ತಾದಿಗಳು ತಮ್ಮ ಊರಿನ ಮಠವನ್ನು ಹೊಸಪೇಟೆಯ ಶ್ರೀಸಂಗನ ಬಸವಸ್ವಾಮಿಗಳ ಸನ್ನಿಧಿಗೆ ಬರೆದುಕೊಟ್ಟರು. ೧೯೮೮ರಲ್ಲಿ ಹೊಸಪೇಟೆಯ ಶ್ರೀ ಗುರು ಕೊಟ್ಟೂರುಸ್ವಾಮಿ ಮಠದ ಶ್ರೀ ಸಂಗನಬಸವ ಸ್ವಾಮಿಗಳು, ಶ್ರೀ ಮರಿಮಹಾಂತ ಸ್ವಾಮಿಗಳನ್ನು ನಾಗಲಾಪುರದ ಮಠಕ್ಕೆ ನೇಮಿಸಿ, ಅಲ್ಲಿಯ ಆಡಳಿತ ವ್ಯವಸ್ಥೆಯನ್ನು ನಡೆಸುತ್ತಾ ಬಂದಿದ್ದಾರೆ.

ಶ್ರೀ ಮರಿಮಹಾಂತ ಸ್ವಾಮಿಗಳು ೧೯೮೩ರಲ್ಲಿ ಅಧಿಕಾರಕ್ಕೆ ಬಂದ ನಂತರ ಶ್ರೀ ಹಾನಗಲ್ ಕುಮಾರೇಶ್ವರ ಸಂಗೀತ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಶ್ರೀ ಬಿದರಿ ಕುಮಾರೇಶ್ವರ ಶಿವಾನಂದ ಮಂಟಪವನ್ನು ೧೯೮೩ರಲ್ಲಿ ಸ್ಥಾಪಿಸಿದ್ದಾರೆ. ಮಠದ ಜೀರ್ಣೋದ್ಧಾರ ಕಾರ್ಯವನ್ನು ಶ್ರೀಸಂಗನ ಬಸವ ಸ್ವಾಮಿಗಳ ಮಾರ್ಗದರ್ಶನ ಪಡೆದು ಪೂರ್ಣಗೊಳಿಸುತ್ತಿದ್ದಾರೆ.

ಬ್ರಹ್ಮ ಮತ್ತು ಈಶ್ವರ ದೇವಸ್ಥಾನಗಳು ಮಠದ ಸಮೀಪದಲ್ಲಿವೆ. ವಿಜಯನಗರದ ರಾಜಲಾಂಛನ ಮಠದ ಗೋಡೆಯಲ್ಲಿ ಇದ್ದಿತಂತೆ. ಅದರ ಹಿಂದೆ ಬಂಗಾರ ಇರಬಹುದೆಂದು ಭ್ರಮಿಸಿ ಯಾರೋ ದುಷ್ಕರ್ಮಿಗಳು ಅದನ್ನು ಒಡೆದು ಹಾಳು ಮಾಡಿದ್ದಾರೆ ಎಂದು ಈಗಿನ ಗುರುಗಳು ಹೇಳುತ್ತಾರೆ. ವಿರಕ್ತ ಮಠಗಳಲ್ಲಿ ಸ್ತ್ರೀ ದೇವತೆಗಳಿಗೆ ಆದ್ಯತೆ ಇರುವುದು ಒಂದು ವಿಶೇಷ. ಸಂಡೂರಿನ ಮಠದಲ್ಲಿ ತಾಯಮ್ಮ ದೇವಿಯ ಮೂರ್ತಿ ಇದ್ದಂತೆ ನಾಗಲಾಪುರ ಮಠದಲ್ಲಿ ಮಹಾಲಕ್ಷ್ಮೀದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಊರಿಗೆ ಕಾಟಕೊಡುವ ಬ್ರಹ್ಮರಾಕ್ಷಸವೊಂದನ್ನು ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ತಮ್ಮ ಮಹಿಮೆಯಿಂದ ಮಹಾಲಕ್ಷ್ಮಿಯನ್ನಾಗಿಸಿ ಮಠದಲ್ಲಿಯೇ ಉಳಿಯುವಂತೆ ಆಶೀರ್ವಾದಿಸಿದರಂತೆ.

ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳ ರಥೋತ್ಸವವು ವಿಜೃಂಭಣೆಯಿಂದ ಜರುಗುತ್ತಿದೆ. ಪ್ರತಿವರ್ಷ ನವರಾತ್ರಿ ಹಬ್ಬದ ಸಮಯದಲ್ಲಿ ಹದಿನೈದರಿಂದ ಇಪ್ಪತ್ತು ದಿವಸ ಪುರಾಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ವಿಶೇಷ ಪೂಜಾಕಾರ್ಯ ನಡೆಯುತ್ತಿದೆ. ಮಾರ್ಗಶಿರಮಾಸದಲ್ಲಿ ಕಾರ್ತಿಕೋತ್ಸವವು ವೈಭವದಿಂದ ಜರುಗುತ್ತಿದೆ. ಸುತ್ತಮುತ್ತ ಊರುಗಳ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಭಕ್ತಿಯನ್ನು ಅರ್ಪಿಸುತ್ತಾರೆ. ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಸಮಾಧಿ ಹೊಂದಿದ್ದು, ಹೊಸಪೇಟೆಯ ಹತ್ತಿರದ ರಾಯಕೆರೆ ಎಂಬಲ್ಲಿ. ಉತ್ಸವದ ದಿನದಂದು ದರ್ಶನ ಕೊಡುತ್ತಾರೆಂದು ಈಗಿನ ಭಕ್ತಾದಿಗಳ ನಂಬಿಕೆಯಾಗಿದೆ.

೭.೨.೫. ತರಳಬಾಳು ಜಗದ್ಗುರು ಶಾಖಾಮಠ, ಭುಜಂಗನಗರ

ಭುಜಂಗನಗರದಲ್ಲಿ ತರಳಬಾಳು ಜಗದ್ಗುರು ಶಾಖಮಠವು ೧೯೧೮ರಲ್ಲಿ ಪ್ರಾರಂಭಗೊಂಡು ೧೯೨೫ರ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ಈ ಮಠವನ್ನು ಸ್ಥಾಪಿಸಿದವರು ತೊಂಡರನಾಳು ಸಿದ್ಧಲಿಂಗಸ್ವಾಮಿಗಳು. ಈ ಮಠದಲ್ಲಿ ಪ್ರತಿವರ್ಷ ತೆಲುಗುಬಾಳ ಜಯಂತಿಯ ಪ್ರಯುಕ್ತ ಸರ್ವಧರ್ಮ ಸಮ್ಮೇಳನ ಎಂಬ ಸಭೆಯನ್ನು ಶ್ರಿ ತರಳಬಾಳು ಜಗದ್ಗುರು ಸಾನಿಧ್ಯದಲ್ಲಿ ನೆರವೇರಿಸಲಾಗುತ್ತದೆ. ಭುಜಂಗನಗರದ ಈ ಮಠವು ತರಳಬಾಳು ಜಗದ್ಗುರುಗಳ ಶಾಖಮಠವಾಗಿದೆ.

೭.೨.೬. ಚೆನ್ನಾಪುರದಯ್ಯ ಸ್ವಾಮಿಮಠ, ಹೊಸ ಜೋಗಿಕಲ್ಲು

ಗುಲ್ಬರ್ಗ ಜಿಲ್ಲೆಯ ದನ್ನಾಡಿ ಗ್ರಾಮದ ನಿವಾಸಿಗಳಾದ ಸಿದ್ಧರಾಮ ಮತ್ತು ರೇವಮ್ಮ ದಂಪತಿಗಳಿಗೆ ಚೆನ್ನಬಸಪ್ಪ ಸ್ವಾಮಿಗಳು ಜನಿಸಿದರು. ಇವರು ಒಂಭತ್ತು ವರ್ಷಗಳವರೆಗೆ ತಂದೆ ತಾಯಿಯ ಸಹಯೋಗದಲ್ಲಿ ಬೆಳೆದರು. ಮುಂದೆ ತಮ್ಮ ವಿದ್ಯಾಭ್ಯಾಸಕ್ಕಾಗಿ ಅಥಣಿಗೆ ಬಂದರು. ಅಥಣಿಯ ಮುರಿಗೇಂದ್ರಸ್ವಾಮಿ ಮಠದಲ್ಲಿ ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಚೆನ್ನಬಸಪ್ಪ ಸ್ವಾಮಿಗಳಿಗೆ ಹದಿನಾರು ವರ್ಷ ವಯಸ್ಸು. ಈ ಸಣ್ಣ ವಯಸ್ಸಿನಲ್ಲಿಯೇ ಚೆನ್ನಬಸಪ್ಪಸ್ವಾಮಿಗಳು ಮುರಿಗೇಂದ್ರಸ್ವಾಮಿ ಯವರಿಗೆ ಅನೇಕ ಪವಾಡಗಳನ್ನು ಮಾಡಿ ತೋರಿಸಿದ್ದರು. ಇದರಿಂದ ಆಶ್ಚರ್ಯಚಕಿತರಾದ ಮುರಿಗೇಂದ್ರಸ್ವಾಮಿಗಳು ಬಾಲಕ ಚೆನ್ನಬಸಪ್ಪನನ್ನು ಕುರಿತು ಹೀಗೆ ಹೇಳಿದರು. ನಮ್ಮ ಮಠದಲ್ಲಿ ನಿನ್ನ ವಿದ್ಯಾಭ್ಯಾಸ ಸಾಕು. ನೀನು ಇನ್ನೂ ಜೀವನದಲ್ಲಿ ಸಾಧಿಸಬೇಕಾದ್ದು ತುಂಬಾ ಇದೆ ಎಂದು ಹೇಳಿದರು. ಅದಕ್ಕೆ ಬಾಲಕ ಚೆನ್ನಬಸಪ್ಪ ಸ್ವಾಮಿಗಳು ಆಯಿತು ನಾನು ಹೊರಡುವೆ ನನ್ನನ್ನು ಆಶೀರ್ವಾದಿಸಿ ಕಳಿಸಿ ಎಂದನು. ಆಗ ಮುರಿಗೇಂದ್ರಸ್ವಾಮಿಗಳು ಚೆನ್ನಬಸಪ್ಪ ಸ್ವಾಮಿಗಳಿಗೆ ಆಶೀರ್ವಾದಿಸಿ ನೀನು ಮುಂದೆ ಸುರಪುರ ಎಂಬ ರಾಜ್ಯದಲ್ಲಿ ಹೋಗಿ ನೆಲೆಸು ಎಂದು ತಿಳಿಸಿದರು. ಅಲ್ಲಿ ವೆಂಕಟಪ್ಪನಾಯಕ ಎಂಬ ಪಾಳೆಗಾರನಿದ್ದಾನೆ, ಆ ಪಾಳೆಗಾರನ ಅರಮನೆಗೆ ಹಾಗೂ ಆ ಸಂಸ್ಥಾನಕ್ಕೆ ರಾಜಗುರುವಾಗಿ ಇರು ಎಂದು

ಆಶೀರ್ವಾದಿಸಿದರು. ಆಗ ಚೆನ್ನಬಸಪ್ಪ ಸ್ವಾಮಿಗಳು ಆ ಮಠವನ್ನು ತ್ಯಜಿಸಿ ಸುರಪುರಕ್ಕೆ ತೆರಳಿದರು. ಸುರಪುರದ ಪೂರ್ವಭಾಗದಲ್ಲಿ ಒಂದು ಆಲದ ಮರದ ಬುಡದ ಬಳಿಯಲ್ಲಿ ವಾಸಮಾಡುತ್ತಿದ್ದರು. ಇದನ್ನು ಕಂಡ ಸುರಪುರದ ಪ್ರಜೆಗಳು ಒಮ್ಮೆ ತಮ್ಮ ಸಂಸ್ಥಾನದ ದೊರೆ ವೆಂಕಟಪ್ಪನಾಯಕನಿಗೆ ಈ ವಿಷಯ ತಿಳಿಸಿದರು. ದೊರೆಗಳೇ ನಮ್ಮ ಸಂಸ್ಥಾನದ ಪೂರ್ವ ಭಾಗದ ಒಂದು ಆಲದ ಮರದ ಬುಡದಲ್ಲಿ ಎಲ್ಲಿಂದಲೋ ಬಂದ ಒಬ್ಬ ತಪಸ್ವಿ ವಾಸಿಸುತ್ತಿದ್ದಾರೆ. ಅವರನ್ನು ಮಾತನಾಡಿಸಲು ನಮಗೆ ಯಾವ ಶಕ್ತಿ ಸಾಲದಾಯಿತು. ಅದಕ್ಕೆ ನೀವೇ ಹೋಗಿ ಆ ಮಹಾತ್ಮರನ್ನು ಮಾತನಾಡಿಸಬೇಕು ಎಂದರು ಪ್ರಜೆಗಳು. ಆಗ ವೆಂಕಟಪ್ಪನಾಯಕ ಅವರ ಕುಟುಂಬದವರು, ಪ್ರಜೆಗಳು ಎಲ್ಲರೂ ಕೂಡಿ ಆ ಚೆನ್ನಬಸಪ್ಪ ಶಿವಯೋಗಿಗಳ ಸನ್ನಿಧಿಗೆ ತೆರಳಿದರು. ಸ್ವಾಮಿಗೆ ವಂದಿಸಿ, ತಾವು ಯಾರು? ಎಲ್ಲಿಂದ ಬಂದಿರಿ? ತಮ್ಮ ಜೀವನ ವೃತ್ತಾಂತವೇನು ಅದನ್ನು ನಮಗೆ ತಿಳಿಸಬೇಕೆಂದು ಕೇಳಿಕೊಂಡರು. ಅದಕ್ಕೆ ಸ್ವಾಮಿಗಳು ತಮ್ಮ ಜೀವನದ ವೃತ್ತಾಂತವನ್ನೆಲ್ಲ ರಾಜ ಮತ್ತು ಪ್ರಜೆಗಳ ಮುಂದೆ ತಿಳಿಸಿ ಹೇಳಿದರು.

ಹೀಗೆ ಇರುವಾಗ ಒಮ್ಮೆ ಸುರಪುರ ಸಂಸ್ಥಾನಕ್ಕೆ ಬರಗಾಲ ಪ್ರಾಪ್ತವಾಯಿತು. ಆಗ ಪ್ರಜೆಗಳು ಈ ಸಂಸ್ಥಾನದಲ್ಲಿ ತಿನ್ನಲು ಆಹಾರವಿಲ್ಲದೆ, ಕುಡಿಯಲು ನೀರಿಲ್ಲದೆ ಜೀವಿಸುವುದು ಕಷ್ಟ, ಅದಕ್ಕೆ ಈ ಸಂಸ್ಥಾನವನ್ನು ಬಿಟ್ಟು ಬೇರೆಡೆ ಹೋಗುವುದು ಒಳಿತೆಂದು ರಾಜ ವೆಂಕಟಪ್ಪ ನಾಯಕನಿಗೆ ಕೇಳಿಕೊಂಡರು. ಅದಕ್ಕೆ ವೆಂಕಟಪ್ಪನಾಯಕರು ಹೇಳಿದರು ನಮ್ಮ ಸಂಸ್ಥಾನದಲ್ಲಿರುವ ಚೆನ್ನಬಸಪ್ಪ ಶಿವಯೋಗಿಗಳ ಹತ್ತಿರ ಹೋಗಿ ಬರ ಪರಿಹಾರಕ್ಕಾಗಿ ಪ್ರಾರ್ಥಿಸೋಣ ಎಂದು ಎಲ್ಲರು ಚೆನ್ನಬಸಪ್ಪ ಶಿವಯೋಗಿಗಳ ಸನ್ನಿಧಿಗೆ ಬಂದರು.

ಸ್ವಾಮಿ ನೀವು ಈ ಸಂಸ್ಥಾನಕ್ಕೆ ಬಂದು ಎಂಟು ವರ್ಷಗಳುರುಳಿದವು, ಆದರೆ ಈಗ ನಮ್ಮ ಸಂಸ್ಥಾನಕ್ಕೆ ಎಂದೂ ಬಾರದ ಬರಗಾಲ ಬಂದಿದೆ. ಈ ಬರಗಾಲವನ್ನು ತೊಲಗಿಸಿ ಆ ಗಂಗಾದೇವಿಯನ್ನು ಭೂಮಿಗೆ ಬರುವಂತೆ ಮಾಡಿರೆಂದು ಕೋರಿದರು. ಅದಕ್ಕೆ ಸ್ವಾಮಿಗಳು ಆಗಲಿ ನಾನು ಹೇಳಿದಂತೆ ನೀವು ನಡೆದುಕೊಳ್ಳಬೇಕು. ಆಡಿದ ಮಾತಿಗೆ ತಪ್ಪಬಾರದು. 'ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕು' ಈ ಪ್ರಕಾರವಾಗಿ ನೀವು ಭಕ್ತಿ, ಶ್ರದ್ಧೆಯಿಂದ ಇದ್ದರೆ, ದಿನ ಮೂರು ಕಳೆಯುವುದರೊಳಗಾಗಿ ಈ ಸುರಪುರ ಸಂಸ್ಥಾನಕ್ಕೆ ಸಾಕಷ್ಟು ಗಂಗಾಮಾತೆಯನ್ನು(ಮಳೆಯನ್ನು) ತರಿಸುತ್ತೇನೆ ಎಂದರು. ಹೀಗೆ ಆ ಸಂಸ್ಥಾನದ ಅರಸ ಮತ್ತು ಪ್ರಜೆಗಳು ಮೂರು ದಿವಸವು ಪೂಜೆಯನ್ನು ಕೈಗೊಂಡರು. ಕೊನೆಯ ದಿನ ಕಳೆದರೂ ಮಳೆ ಬರಲಿಲ್ಲ. ಆಗ ಪ್ರಜೆಗಳಿಗೆ ಆತಂಕವಾಯಿತು. ಪೂಜೆ ನಡೆಯುವ ಸ್ಥಳದಲ್ಲಿ ಚೆನ್ನಬಸಪ್ಪ ಸ್ವಾಮಿಗಳು ಇರಲಿಲ್ಲ. ಅದನ್ನರಿತ ಪ್ರಜೆಗಳು, ಸ್ವಾಮಿಗಳು ಎಲ್ಲಿಗೆ ಹೋದರೆಂದು ಸುತ್ತಮುತ್ತ ಹುಡುಕಿ ದರು ಕಾಣಲಿಲ್ಲ. ಆದರೆ ನಂತರದ ದಿವಸ ಎರಡು ಗಂಟೆ ಮೀರಿ ಮೂರು ಗಂಟೆ ತುಂಬುವುದರೊಳಗೆ ಪ್ರಜೆಗಳು ಅವರವರ ಮನೆಗಳಿಗೆ ಮತ್ತು ಗ್ರಾಮಗಳಿಗೆ ಅವರು ಹೋಗುವುದು ಕಷ್ಟವಾಯಿತು. ಅಂದರೆ

ಅಷ್ಟು ಮಳೆ ಸುರಿಯಿತು. ಮಾರನೆಯ ದಿನ ಬೆಳ್ಳಿಗೆ ನೋಡಿದರೆ ಚೆನ್ನಬಸಪ್ಪ ಸ್ವಾಮಿಗಳು ಅದೇ ಆಲದ ಮರದ ಬುಡದ ಬಳಿಯೇ ಇದ್ದರು. ಅವರನ್ನು ಕಂಡ ಪ್ರಜೆಗಳು ಸ್ವಾಮಿಗಳೇ ನಾವು ನಿಮ್ಮನ್ನು ಬಿಟ್ಟು ಪೂಜೆ ಮಾಡಿದೇವು ನೀವು ಎಲ್ಲಿಗೆ ಹೋಗಿದ್ದಿರಿ ಎಂದು ಕೇಳಿದರು. ಅದಕ್ಕೆ ಸ್ವಾಮಿಗಳು ನಾನು ಕೃಷ್ಣಾಂಬಿಕೆಯ ದಂಡೆಗೆ ಕೃಷ್ಣೆಯನ್ನು ಮಾತನಾಡಿಸಲು ಹೋಗಿದ್ದೆ ಎಂದರು. ಅವರ ಮಾತನ್ನು ಕೇಳಿದ ಪ್ರಜೆಗಳಿಗೆ ಆಶ್ಚರ್ಯವಾಯಿತು. ಈ ಸ್ವಾಮಿಗಳು ಮಾನವ ರೂಪದ ದೇವತೆಯಾಗಿದ್ದಾರೆ. ಆ ಶಿವನೆ ಇವರನ್ನು ಭೂಮಿಗೆ ಕಳಿಸಿರುವನು ಎಂಬ ಭಾವನೆ ಪ್ರಜೆಗಳಲ್ಲಿ ಮೂಡಿತು. ಅಂದಿನಿಂದ ಅಲ್ಲಿನ ಪ್ರಜೆಗಳು ಹಾಗೂ ಸುತ್ತಮುತ್ತಲಿನ ಗ್ರಾಮದವರು ಚೆನ್ನಬಸಪ್ಪ ಸ್ವಾಮಿಗಳನ್ನು ಪೂಜಿಸಲು ಪ್ರಾರಂಭಿಸಿದರು.

ಮುಂದೆ ಚೆನ್ನಬಸಪ್ಪ ಶಿವಯೋಗಿಗಳ ಅಣ್ಣ ಚೆನ್ನವೀರಸ್ವಾಮಿ, ತಮ್ಮಂದಿರು ಈ ಶಿವಯೋಗಿಯನ್ನು ಎಲ್ಲಿ ಹೋಗಿರುವರೆಂದು ಹುಡುಕಿಕೊಂಡು ಅಥಿಣಿಯ ಮುರಿಗೇಂದ್ರ ಶಿವಯೋಗಿ ಸ್ವಾಮಿಗಳ ಮಠಕ್ಕೆ ಬಂದು ಕೇಳಿದರು. ಅದಕ್ಕೆ ಮುರಿಗೇಂದ್ರ ಶಿವಯೋಗಿಗಳು ಹೇಳಿದರು, ಚೆನ್ನಬಸಪ್ಪ ಸ್ವಾಮಿಗಳು ಈಗ ಸುರಪುರ ಎಂಬ ಸಂಸ್ಥಾನದಲ್ಲಿ ವಾಸವಾಗಿದ್ದಾರೆ. ಅಲ್ಲಿಗೆ ಹೋಗಿ ಅವರನ್ನು ಬೇಟಿಯಾಗಿರೆಂದು ತಿಳಿಸಿದರು. ಹೀಗೆ ಚೆನ್ನಬಸಪ್ಪ ಸ್ವಾಮಿಗಳ ಅಣ್ಣತಮ್ಮಂದಿರು ಬಂದು ಇವರ ಹತ್ತಿರವಿದ್ದು ಪ್ರತಿದಿನ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗಿ ಭಿಕ್ಷೆ ಮಾಡಿಕೊಂಡು ಬಂದು ಮೂವರು ಜೀವನ ಸಾಗಿಸುತ್ತಿದ್ದರು.

ವೆಂಕಟಪ್ಪನಾಯಕರು ತಮ್ಮ ಸಂಸ್ಥಾನವನ್ನು ಅಭಿವೃದ್ಧಿ ಪಡಿಸಿದ, ಬರಗಾಲವನ್ನು ಪರಿಹರಿಸಿದ ಚೆನ್ನಬಸಪ್ಪ ಸ್ವಾಮಿಗಳಿಗೆ ಏನಾದರು ಕಾಣಿಕೆ ಕೊಡಬೇಕೆಂದು ಸಭೆಯಲ್ಲಿ ಚರ್ಚಿಸಿ, ಸ್ವಾಮಿಗಳು ಬೇಡಿದ ಕಾಣಿಕೆಯನ್ನು ಅವರಿಗೆ ಕೊಡೋಣ ಎಂದು ಎಲ್ಲರೂ ಚೆನ್ನಬಸಪ್ಪ ಸ್ವಾಮಿಗಳ ಬಳಿಗೆ ತೆರಳಿದರು. ಸ್ವಾಮಿಗಳಿಗೆ ನಮಸ್ಕರಿಸಿ, ಸ್ವಾಮಿಗಳೇ ನೀವು ನಮ್ಮ ಸುರಪುರ ಸಂಸ್ಥಾನಕ್ಕೆ ಬಂದೊದಗಿದ್ದ ಬರಗಾಲವನ್ನು ಬಗೆಹರಿಸಿದಿರಿ, ಆದ್ದರಿಂದ ನೀವು ನಮ್ಮ ವಂಶದವರಿಗೆ ಜೀವನೋಪಾಯಕ್ಕಾಗಿ ಏನು ಕೊಡುವಿರಿ ಎಂದು ಕೇಳಿದರು. ಅದಕ್ಕೆ ದೊರೆಗಳು ಸ್ವಾಮಿ ನೀವು ಬೇಡಿದ್ದನ್ನು ಅರ್ಪಿಸುವೆ ಎಂದರು. ಆಗ ಚೆನ್ನಬಸಪ್ಪ ಸ್ವಾಮಿಗಳು ನನಗೆ "ಅರಿಯದ ಅಚ್ಚಡ ಮುರಿಯದ ಬಂಗಾರ"ವನ್ನು ಸ್ಥಿರ ಮಾಡಿಕೊಡಬೇಕು ಎಂದರು. ಅದಕ್ಕೆ ವೆಂಕಟಪ್ಪನಾಯಕರು ಒಪ್ಪಿಕೊಂಡು, ಸ್ವಾಮಿಗಳಿಗೆ ಬೆಳ್ಳಿ, ಬಂಗಾರ ಇತ್ಯಾದಿಗಳನ್ನು ತಂದು ಕೊಟ್ಟರು. ಅದನ್ನು ಸ್ವಾಮಿ ಚೆನ್ನಬಸಪ್ಪನವರು ಬೇಡವೆಂದು ತಿರಸ್ಕರಿಸಿದರು. ಇದನ್ನು ನಿನ್ನ ಪ್ರಜೆಗಳ ಸಂರಕ್ಷಣೆಗಾಗಿ ಬಳಸಿಕೊ ಎಂದರು. ಅದಕ್ಕೆ ವೆಂಕಟಪ್ಪನಾಯಕರು ನಿಮ್ಮ ಮಾತಿನ ಅರ್ಥ ನನಗೆ ಆಗಲಿಲ್ಲ ಅದರ ಅರ್ಥವನ್ನು ಬಿಡಿಸಿ ಹೇಳಿರಿ ಎಂದು ಕೇಳಿದರು. ಅದಕ್ಕೆ ಸ್ವಾಮಿಗಳು 'ಅರಿಯದ ಅಚ್ಚಡ ಎಂದರೆ 'ಭೂಮಿ' ಎಂದು, ಮುರಿಯದ ಬಂಗಾರ ಎಂದರೆ 'ಆಯಾ' ಎಂದು ಹೇಳಿದರು. ಇದೇ ನನಗೆ ನಿಮ್ಮಿಂದ ಸಿಗಬೇಕಾದ ಕಾಣಿಕೆ ಎಂದು ಕೇಳಿದರು. ಅದರಂತೆ ಸುರಪುರದ ಪೂರ್ವಕ್ಕೆ ಕಡ್ಲೆಪ್ಪ ಎಂಬ ವ್ಯಕ್ತಿಯು ಚೆನ್ನಬಸಪ್ಪ ಸ್ವಾಮಿಯವರಿಗೆ ಮಠವನ್ನು ಕಟ್ಟಿಸಿಕೊಟ್ಟರು. ವೆಂಕಟಪ್ಪನಾಯಕರು

ಆ ಮಠದ ಪೂರ್ವಕ್ಕೆ ನಲವತ್ತೆರಡು ಎಕರೆ ಭೂಮಿಯನ್ನು ಸ್ವಾಮಿಗಳಿಗೆ ಅರ್ಪಿಸಿ ಆ ಭೂಮಿಯ ಸುತ್ತಾವರೆದು ನೂರಾ ಎಂಟು ಲಿಂಗಮುದ್ರೆ ಕಲ್ಲನ್ನು ಸ್ಥಾಪಿಸಿದರು. ಆ ಲಿಂಗಮುದ್ರೆ ಕಲ್ಲುಗಳು ಈಗಲೂ ಅಲ್ಲಿ ಇವೆ.

ಒಮ್ಮೆ ವೆಂಕಟಪ್ಪನಾಯಕನು ಸ್ವಾಮಿಗಳಿಗೆ ನನ್ನ ರಾಜ್ಯದ ಸಿಂಹಾಸನದ ಮೇಲೆ ಪ್ರತಿದಿನ ಬಂದು ಸ್ವಲ್ಪ ಸಮಯದವರೆಗೆ ಕುಳಿತುಕೊಂಡು ಹೋಗಬೇಕು ಎಂದು ಪ್ರಾರ್ಥಿಸಿಕೊಂಡರು. ಅದಕ್ಕೆ ಸ್ವಾಮಿಗಳು ಒಪ್ಪಿಕೊಂಡು, ನಾನು ಸಿಂಹಾಸನದ ಮೇಲೆ ಬಂದು ಕುಳಿತ ನಂತರ ತಮ್ಮ ಸಂಸ್ಥಾನದಲ್ಲಿ ತಪ್ಪು ನಡೆಯಬಾರದು ಹಾಗೂ ನಿನ್ನನ್ನು ಸಹಾಯ ಬೇಡಿ ಬಂದವರನ್ನು ನೀನು ರಕ್ಷಿಸಬೇಕು. ಹೀಗೆ ಆಜ್ಞೆಗೆ ತಪ್ಪದೆ ನಡೆದರೆ ನಿನ್ನ ಸಂಸ್ಥಾನದ ಸಿಂಹಾಸನಕ್ಕೆ ಬಂದು ಕುಳಿತುಕೊಳ್ಳುತ್ತೇನೆ ಎಂದು ಹೇಳಿದರು. ಅದಕ್ಕೆ ವೆಂಕಟಪ್ಪನಾಯಕರು ಒಪ್ಪಿದರು.

ಬಹು ಹಿಂದಿನಿಂದಲೂ ವೆಂಕಟಪ್ಪನಾಯಕರಿಗೂ ಮತ್ತು ಈಗಿನ ಕೂಡ್ಲಿಗಿ ತಾಲ್ಲೂಕಿನ ಜರಿಮಲೆ ಸಂಸ್ಥಾನದ ಸಿದ್ಧಪ್ಪನಾಯಕ ಪಾಳೆಯಗಾರರ ವಂಶದವರಿಗೂ ಬೀಗಸ್ಥನವಿತ್ತು. ಈಗಲೂ ಈ ಎರಡು ವಂಶದವರ ಮಧ್ಯ ಈ ಸಂಪ್ರದಾಯ ನಡೆದುಕೊಂಡು ಬಂದಿದೆ. ಈ ಎರಡು ಸಂಸ್ಥಾನಗಳ ಮಧ್ಯ ಬೀಗಸ್ಥನವಿರುವುದು ಚೆನ್ನಬಸಪ್ಪ ಶಿವಯೋಗಿಗಳಿಗೆ ತಿಳಿಯಿತು.

ಸಂಡೂರು ಪ್ರದೇಶವು ಜರಿಮಲೆ ಸಂಸ್ಥಾನದ ವ್ಯಾಪ್ತಿಗೆ ಒಳಪಟ್ಟ ಪ್ರದೇಶವಾಗಿತ್ತು. ಸಂಡೂರಿಗೆ ಸಮೀಪವಿರುವ ಬಂಡ್ರಿಯಿಂದ ಸುಮಾರು ಮೂರು ಕಿ.ಮೀ. ಅಂತರದಲ್ಲಿರುವ ಜೋಗಿಕಲ್ಲು ಎಂಬುದು ಜೋಗಪ್ಪನಾಯಕ ಎಂಬ ಪಾಳೆಗಾರನ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. ಈ ಜೋಗಪ್ಪನಾಯಕನು ಪ್ರತಿವರ್ಷ ಜರಿಮಲೆಯ ಸಿದ್ಧಪ್ಪನಾಯಕನಿಗೆ ಕಪ್ಪಕಾಣಿಕೆಯನ್ನು ಸಲ್ಲಿಸುತ್ತ ಇದ್ದನು. ಆದರೆ ಮೂರು ವರ್ಷಗಳಿಂದ ಜೋಗಪ್ಪನಾಯಕನು ಜರಿಮಲೆ ಪಾಳೆಗಾರರಿಗೆ ಸಲ್ಲಿಸಬೇಕಿದ್ದ ಕಪ್ಪಕಾಣಿಕೆಯನ್ನು ಸಲ್ಲಿಸಿರಲಿಲ್ಲ. ಆಗ ಜರಿಮಲೆ ಪಾಳೆಗಾರರು ಜೋಗಪ್ಪನಾಯಕನಿಗೆ ಒಂದು ಪತ್ರವನ್ನು ಬರೆದರು. ನಮಗೆ ಸಲ್ಲಬೇಕಿದ್ದ ಕಪ್ಪಕಾಣಿಕೆ ಸಲ್ಲಲಿಲ್ಲ. ಅದಕ್ಕೆ ನಿನ್ನ ಸಂಸ್ಥಾನವನ್ನು ನಾವು ವಶಪಡಿಸಿಕೊಳ್ಳುತ್ತೇವೆ ಎಂದು. ಆಗ ಜೋಗಪ್ಪನಾಯಕನು ಮರು ಉತ್ತರವಾಗಿ ನನಗೆ ನೀವು ಕೇಳಿದ ಕಪ್ಪ ಕಾಣಿಕೆ ಸಲ್ಲಿಸಲು ಸಾಧ್ಯವಿಲ್ಲ. ಹಾಗೂ ರಾಜ್ಯವನ್ನು ಬಿಟ್ಟುಕೊಡುವುದು ಸಾಧ್ಯವಿಲ್ಲ ಎಂದು ಜರಿಮಲೆ ಪಾಳೆಗಾರರಿಗೆ ಪತ್ರ ಬರೆದು ತಿಳಿಸಿದ. ಅದಕ್ಕೆ ಉತ್ತರವಾಗಿ ಜರಿಮಲೆ ಪಾಳೆಗಾರ ಸಿದ್ಧಪ್ಪನಾಯಕ, ಜೋಗಪ್ಪನಾಯಕನಿಗೆ ತನ್ನ ಜೋಗಿಕಲ್ಲು ಸಂಸ್ಥಾನದ ಮೇಲೆ ಮುತ್ತಿಗೆ ಹಾಕಿ ರಾಜ್ಯವನ್ನು ವಶಪಡಿಸಿಕೊಳ್ಳುವೆ ಎಂದು ತಿಳಿಸಿದನು. ಇದನ್ನರಿತ ಜೋಗಪ್ಪನಾಯಕನು ಜರಿಮಲೆ ಪಾಳೆಗಾರರು ಎಂದಾದರು ತನ್ನ ಜೋಗಿಕಲ್ಲು ಸಂಸ್ಥಾನವನ್ನು ಮುತ್ತಿಗೆ ಹಾಕದೆ ಬಿಡುವುದಿಲ್ಲವೆಂದರಿತು ಸುರಪುರದ ಪಾಳೆಗಾರರಾದ ವೆಂಕಟಪ್ಪನಾಯಕರಿಗೆ

ತನ್ನ ಸಹಯಕ್ಕಾಗಿ ಸೈನ್ಯವನ್ನು ಕಳಿಸಿ ಕೊಡಬೇಕೆಂದು ಕೋರಿ ಪತ್ರ ಬರೆದು ಕಳಿಸಿದನು. ಈ ಪತ್ರವು ವೆಂಕಟಪ್ಪನಾಯಕನ ಕೈಗೆ ತಲುಪಿದಾಗ ಎದುರುಗಡೆ ಚೆನ್ನಬಸಪ್ಪಸ್ವಾಮಿಗಳು ಇದ್ದರು. ಈ ಪತ್ರವನ್ನು ಓದಲು ವೆಂಕಟಪ್ಪನಾಯಕರು ಯೋಚಿಸುತ್ತಿದ್ದರು. ಅದನ್ನು ಕಂಡ ಚೆನ್ನಬಸಪ್ಪ ಸ್ವಾಮಿಗಳು, ಪತ್ರ ಓದಲು ಯಾಕೆ ಯೋಚಿಸುತ್ತಿರುವೆ? ಆ ಪತ್ರವನ್ನು ಕೊಡು ಎಂದು ಚೆನ್ನಬಸಪ್ಪ ಸ್ವಾಮಿಗಳು ಪತ್ರವನ್ನು ನೋಡಲಾಗಿ, ವೆಂಕಟಪ್ಪನಾಯಕನಿಗೆ ಹೇಳಿದರು ನೀನು ಹಿಂದೆ ನನಗೆ ವಚನವನ್ನು ಕೊಟ್ಟಿದ್ದಿಯಾ ನಿನ್ನನ್ನು ಸಹಾಯ ಬೇಡಿ ಬಂದವರನ್ನು ನೀನು ಕೈ ಬಿಡುವುದಿಲ್ಲ ಎಂದು. ಈಗ ಒಂದು ಸಣ್ಣ ಸಂಸ್ಥಾನದ ಜೋಗಪ್ಪನಾಯಕನು ಕಷ್ಟಕಾಲದಲ್ಲಿ ತಮ್ಮನ್ನು ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾನೆ. ಅದಕ್ಕೆ ನೀವು ನಿಮ್ಮ ಸೈನ್ಯವನ್ನು ಕೊಟ್ಟು ಕಳಿಸಿ ಅವನ ಸಂಸ್ಥಾನವನ್ನು ಕಾಪಾಡಿರಿ ಎಂದು ಸ್ವಾಮಿಗಳು ನುಡಿದರು. ಅದಕ್ಕೆ ವೆಂಕಟಪ್ಪನಾಯಕನೆಂದನು, ಸ್ವಾಮಿ ಬೇರೆ ಸಂಸ್ಥಾನದ ಅರಸರು ನನಗೆ ಸಹಾಯ ಬೇಡಿ ಬಂದಿದ್ದರೆ ಅವರಿಗೆ ನಾನು ಸಹಾಯ ಮಾಡುತ್ತಿದ್ದೆ. ಆದರೆ ಜರಿಮಲೆ ಪಾಳೆಗಾರರು ನನ್ನ ಸಂಬಂಧಿಕರು ಅಲ್ಲದೆ ಸಿದ್ಧಪ್ಪನಾಯಕ ನನ್ನ ಅಳಿಯಂದಿರು ಆದ್ದರಿಂದ ಅವರು ದಂಡೆತ್ತಿ ಬಂದು ವಶಪಡಿಸಿಕೊಳ್ಳುತ್ತಿರುವ ಜೋಗಿಕಲ್ಲು ಸಂಸ್ಥಾನದ ಜೋಗಪ್ಪನಾಯಕ ಪಾಳೆಗಾರನಿಗೆ ನಾನು ಸೈನ್ಯವನ್ನು ಕಳಿಸಿಕೊಟ್ಟು ಸಹಾಯ ಮಾಡಲು ಸಾಧ್ಯವಿಲ್ಲ ಎಂದರು. ಅದಕ್ಕೆ ಸ್ವಾಮಿಗಳು ಎಂದರು ರಾಜಕಾರಣದಲ್ಲಿ ಸಂಬಂಧಕ್ಕೆ ಮಹತ್ವ ಕೊಡಬಾರದು. ನಿನ್ನನ್ನು ಸಹಾಯ ಬೇಡಿ ಬಂದ ಜೋಗಪ್ಪನಾಯಕನಿಗೆ ನೀನು ಈಗ ಸಹಾಯ ಮಾಡವೆಯೋ ಇಲ್ಲವೊ ತಿಳಿಸು ಎಂದರು ಸ್ವಾಮಿಗಳು. ಅದಕ್ಕೆ ವೆಂಕಟಪ್ಪನಾಯಕರು ಸಾಧ್ಯವಿಲ್ಲ ಎಂದರು. ಈ ಮಾತನ್ನು ಕೇಳಿದ ಚೆನ್ನಬಸಪ್ಪ ಸ್ವಾಮಿಗಳು ಇನ್ನು ಮುಂದೆ ನಾನು ನಿನ್ನ ಸುರಪುರ ಸಂಸ್ಥಾನದಲ್ಲಿ ಇರುವುದಿಲ್ಲ. ಕಾರಣ ಈ ಸಮಸ್ಯೆಯು ನನ್ನ ಸನ್ನಿಧಿಯಲ್ಲಿ ಬಂದಿದೆ ಇವರ ನ್ಯಾಯವನ್ನು ನಾನೇ ಬಗೆಹರಿಸುವೆನು ಎಂದು ಸ್ವಾಮಿಗಳು ಸುರಪುರ ರಾಜ್ಯವನ್ನು ಬಿಟ್ಟು ಹೊರಟು ಹೋದರು. ಅಲ್ಲಿಂದ ಮುಂದೆ ಮಾನಪ್ಪಯ್ಯ ಮಠವಿರುವ ಗ್ರಾಮಕ್ಕೆ ತೆರಳಿದರು.

ಹೀಗೆ ಒಮ್ಮೆ ಮಾನಪ್ಪಯ್ಯನ ಮಠದಲ್ಲಿ ಚೆನ್ನಬಸಪ್ಪ ಸ್ವಾಮಿಗಳು ಆಲೋಚಿಸುತ್ತ ಕುಳಿತಿರುವಾಗ, ಸುರಪುರ ಮಠದಲ್ಲಿ ಒಬ್ಬ ಮಗಳು ಚಿಕ್ಕಂದಿನಿಂದಲೂ ವಿವಾಹವಾಗುವವರೆಗೂ ಸ್ವಾಮಿಯವರ ಸೇವೆ ಮಾಡಿಕೊಂಡಿದ್ದಳು. ಆ ಮಗಳನ್ನು ಈ ಮಾನಪ್ಪಯ್ಯ ಮಠವಿರುವ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿದ್ದರು. ಆ ಮಗಳು ಮಾನಪ್ಪಯ್ಯನ ಮಠಕ್ಕೆ ಬಂದಿದ್ದಳು. ಅಲ್ಲಿ ಕುಳಿತಿದ್ದ ಚೆನ್ನಬಸಪ್ಪ ಶಿವಯೋಗಿಗಳನ್ನು ಕಂಡು ಅಪ್ಪ ನೀವು ಇಲ್ಲಿಗೆ ಯಾಕೆ ಬಂದಿದ್ದೀರಿ ಎಂದು ಕೇಳಿದಳು. ಆಗ ಚೆನ್ನಬಸಪ್ಪ ಸ್ವಾಮಿಗಳು ನಡೆದ ವೃತ್ತಾಂತವನ್ನು ಆಕೆಗೆ ಹೇಳಿ ಇಂದಿಗೆ ನನಗೆ ಸುರಪುರ ಗ್ರಾಮ ಎರವಾಯಿತು ಎಂದರು. ಈಗ ನನ್ನ ಲಿಂಗ ಪೂಜೆಗೆ ವ್ಯವಸ್ಥೆ ಮಾಡಿಕೊಡುವವರು ಈ ಗ್ರಾಮದಲ್ಲಿ ಯಾರು ಇಲ್ಲವಲ್ಲ ಎಂದು ಯೋಚಿಸುತ್ತ ಕುಳಿತಿದ್ದೇನೆ ಎಂದರು ಸ್ವಾಮಿಗಳು. ಅದಕ್ಕೆ ಆಕೆ ನಾನು ನಿಮ್ಮ ಲಿಂಗ ಪೂಜೆಗೆ ಸಹಾಯ

ಮಾಡುವೆ ಎಂದಳು. ಹೀಗೆ ಒಮ್ಮೆ ಸ್ವಾಮಿಗಳ ಲಿಂಗಪೂಜೆಗೆ ಆಕೆ ಸಹಾಯ ಮಾಡಲು ಹೋದಾಗ ಆಕೆಯ ಪತಿ ಮನೆಗೆ ಬಂದನು. ಮನೆಯಲ್ಲಿ ಪತ್ನಿ ಇಲ್ಲದ್ದನ್ನು ಕಂಡು ಪಕ್ಕದವರಿಗೆ ಕೇಳಿದನು. ಅದಕ್ಕೆ ಅವರು ಹೇಳಿದರು ಸ್ವಾಮಿಗಳ ಲಿಂಗ ಪೂಜೆಗೆ ಸಹಾಯ ಮಾಡಲು ಮಾನಪ್ಪಯ್ಯನ ಮಠಕ್ಕೆ ಹೋಗಿದ್ದಾಳೆ ಎಂದು. ಆಗ ಆಕೆಯ ಪತಿಯು ಅಲ್ಲಿಗೆ ಹೋದನು. ಸ್ವಾಮಿಗಳ ಆಶೀರ್ವಾದ ಪಡೆದನು. ನಂತರ ಚೆನ್ನಬಸಪ್ಪ ಸ್ವಾಮಿಗಳು ಆ ಗ್ರಾಮದಿಂದ ಮುಂದೆ ತೆರಳಲು ಸಿದ್ಧರಾದರು. ಆಗ ಆ ದಂಪತಿಗಳು, ಸ್ವಾಮಿಗಳೇ ನೀವು ಇಂದು ಹೋಗ ಬೇಡಿರಿ, ನದಿ ಉಕ್ಕಿ ಹರಿಯುತ್ತಿದೆ. ಆದ್ದರಿಂದ ಈ ದಿನ ಇಲ್ಲೇ ಇದ್ದು ನಾಳೆ ಹೋಗಿರಿ ಎಂದು ಕೇಳಿಕೊಂಡರು. ಆದರೆ ಸ್ವಾಮಿಗಳು ಏನೇ ಆಗಲಿ ನಾನು ಇಂದೇ ಹೋಗುವೆ. ಆ ಗಂಗಾಮಾತೆ ನನ್ನನ್ನು ದಡ ಸೇರಿಸುವಳು ಎಂದು ಹೊರಟರು. ಆಗ ಆಕೆ ತನ್ನ ಪತಿಯನ್ನು ಸ್ವಾಮಿಗಳ ಜೊತೆಗೆ ಹೋಗಿ ಅವರಿಗೆ ನದಿಯ ದಡವನ್ನು ದಾಟಿಸಿ ಬನ್ನಿರಿ ಎಂದು ಕಳಿಸಿದಳು. ಆದರೆ ಅಂದು ನದಿ ದಾಟುವುದು ಸಾಧ್ಯವಾಗಲಿಲ್ಲ. ಆಗ ಸ್ವಾಮಿಗಳು ತನ್ನ ಹಿಂದೆ ಹೋದವನಿಗೆ ಹೇಳಿದರು ಇಲ್ಲಿ ನಡೆಯುವ ಯಾವ ಘಟನೆಯನ್ನು ನೀನು ಯಾರ ಮುಂದೆಯು ಹೇಳಬಾರದು ಎಂದು ವಚನವಿಡುವಂತೆ ಕೇಳಿದರು. ಆಗಲಿ ಎಂದು ಆಕೆಯ ಪತಿ ವಚನವಿತ್ತನು. ನದಿ ದಂಡೆಯಲ್ಲಿ ನೀರಿನ ಬುಡದಲ್ಲಿ ಮೂರು ಅಡಿ ಬಿಟ್ಟು ಯೋಗಾಸನದಲ್ಲಿ ತಪಸ್ಸು ಮಾಡುತ್ತಾ ಕುಳಿತರು. ಆಗ ಕೃಷ್ಣ ನದಿಯ ನೀರು, ಹಿಂದಿನ ನೀರು ಹಿಂದಕ್ಕೆ ಮುಂದಿನ ನೀರು ಮುಂದಕ್ಕೆ ಸರಿದು ನೀರಿನ ಮಧ್ಯದಲ್ಲಿ ಗಂಗೆ ಪ್ರತ್ಯಕ್ಷಳಾದಳು. ಆಗ ಗಂಗಾಮಾತೆ ಚೆನ್ನಬಸಪ್ಪ ಸ್ವಾಮಿಯನ್ನು ಕುರಿತು ಎಲ್ಲಿಗೆ ನಿನ್ನ ಪಯಣ ಎಂದಳು. ಅದಕ್ಕೆ ಸ್ವಾಮಿ ಅಮ್ಮ ಆ ಶಿವನ ಆಜ್ಞೆಯಂತೆ ನಾನು ಹೋಗುವಾಗ ನೀನು ಅಡ್ಡಾವಾಗಿ ಬಿಟ್ಟೆ, ಈಗ ನನಗೆ ಹೋಗಲು ದಾರಿ ಬಿಡು ಎಂದನು. ಅದಕ್ಕೆ ಗಂಗಾಮಾತೆ ನೀನು ಎಲ್ಲಿಗೆ ಹೋಗುವೆ ಎಲ್ಲಿಯವರೆಗೆ ದಾರಿ ಮಾಡಿಕೊಡಲಿ ಎಂದಳು. ಅದಕ್ಕೆ ಚೆನ್ನಬಸಪ್ಪ ಸ್ವಾಮಿಗಳು ನನಗೆ ಎಲ್ಲಿಯವರೆಗೆ ಯೋಗವಿದೆಯೋ ಅಲ್ಲಿಯವರೆಗೆ ದಾರಿ ಮಾಡಿಕೊಡು ಎಂದನು. ಅದಕ್ಕೆ ಗಂಗಾಮಾತೆ ಹೇಳಿದಳು ಕಿಷ್ಕಿಂದ ಪರ್ವತದ ಪಕ್ಕದಲ್ಲಿ ಸಂಡೂರು ಎಂಬ ಗ್ರಾಮವಿದೆ. ಆ ಸಂಡೂರು ಗ್ರಾಮದಲ್ಲಿ ವಾಸವಾಗು. ಆ ಕಿಷ್ಕಿಂದ ಪರ್ವತದಲ್ಲಿ ನರಸಿಂಹಸ್ವಾಮಿ ದೇವರನ್ನು ಪತ್ರಿಷ್ಠಾಪನೆ ಮಾಡಿಕೊಂಡು ನಂತರ ಆ ಕಿಷ್ಕಿಂದ ಪರ್ವತವನ್ನು ದಾಟು ನಂತರ 'ಗಂಡು ಮೆಟ್ಟಿದ' ಬಂಡ್ರಿ ಎಂಬ ಗ್ರಾಮದಲ್ಲಿ ಮಠ ಸ್ಥಾಪನೆ ಮಾಡು ಎಂದು ಆಶೀರ್ವಾದಿಸಿದಳು. ಚೆನ್ನಬಸಪ್ಪ ಸ್ವಾಮಿಗಳು ಹಾಗೆ ಮಾಡಿದರು.

ಇಲ್ಲಿ ಲೋಹಾಚಲಕ್ಕೆ ಕಿಷ್ಕಿಂದ ಪರ್ವತ ಎಂದು ಪ್ರಸ್ತಾಪಿಸಿರಬೇಕು. ಈ ಲೋಹಾಚಲದಲ್ಲಿಯೇ ಅಂದರೆ ಸಂಡೂರಿಗೆ ಸುಮಾರು ಮೂರು ಕಿ.ಮೀ.ದೂರದಲ್ಲಿ ನರಸಿಂಹಾಸ್ವಾಮಿ ದೇವಾಲಯವಿದೆ. ಅಲ್ಲೇ ಚೆನ್ನಬಸಪ್ಪ ಸ್ವಾಮಿಗಳು ನರಸಿಂಹಸ್ವಾಮಿಯನ್ನು ಪ್ರತಿಷ್ಠಾಪಿಸಿರಬೇಕು. ಅಲ್ಲಿಂದ ಮುಂದೆ ಸುಮಾರು

ಎಂಟು-ಒಂಬತ್ತು ಕಿ.ಮೀ. ದೂರದಲ್ಲಿ ಬಂಡ್ರಿ ಎಂಬ ಗ್ರಾಮವಿದೆ. ಅಲ್ಲಿ ಈಗಲೂ ಈ ಸ್ವಾಮಿಯ ಹೆಸರಿನಲ್ಲಿ ಕಟ್ಟಿದ ಮಠ ಹಾಗೂ ಬಾವಿಗಳು ಇಂದಿಗೂ ಇವೆ.

ಜೋಗಪ್ಪನಾಯಕನ ಮೇಲೆ ಜರಿಮಲೆ ಪಾಳೆಗಾರರು ದಂಡೆತ್ತಿ ಬಂದು ರಾಜಧಾನಿಯನ್ನು ವಶಪಡಿಸಿಕೊಳ್ಳಬೇಕೆಂದು ಮುತ್ತಿಗೆ ಹಾಕಿದರು. ಈ ಸಮಾಚಾರವನ್ನು ಅರಿತ ಸ್ವಾಮಿಗಳು ತಕ್ಷಣ ಜೋಗಿಕಲ್ಲು ಸಂಸ್ಥಾನದ ಕೋಟೆಯನ್ನು ಪ್ರವೇಶಿಸಿದರು. ನಡೆಯುತ್ತಿರುವ ಗಲಭೆಯ ಮಧ್ಯ ಪ್ರವೇಶಿಸಿ ನಿಂತರು. ಈ ಶಿವಯೋಗಿಯನ್ನು ಕಂಡು ಅಲ್ಲಿರುವವರಿಗೆಲ್ಲ ಆಶ್ಚರ್ಯವಾಗಿ ಗಲಭೆಯನ್ನು ತಕ್ಷಣ ನಿಲ್ಲಿಸಿದರು. ಆಗ ಚನ್ನಬಸಪ್ಪ ಶಿವಯೋಗಿಗಳು ಜರಿಮಲೆ ದೊರೆಗಳಿಂದ ಒಂದು ವಚನವನ್ನು ಪಡೆದುಕೊಂಡರು. ನಿನ್ನ ಸಂಸ್ಥಾನದ ಮುಂದೆ ಜೋಗಪ್ಪನಾಯಕನ ಸಂಸ್ಥಾನ ಕೇವಲ ಒಂದು ತೃಣ ಸಮಾನವಾದಂತದ್ದಾಗಿದೆ. ಇಂತಹ ಸಣ್ಣ ಸಂಸ್ಥಾನದ ಮೇಲೆ ನೀನು ದಂಡೆತ್ತಿ ಬಂದರೆ ಅದು ನಿನಗೆ ತತ್ಸಮವಲ್ಲ. ನಿನ್ನ ರಾಜ್ಯಕ್ಕೆ ಸೇರಿದ ಈ ಜೋಗಪ್ಪನಾಯಕನ ಸಂಸ್ಥಾನವನ್ನು ನೀನು ಗುರುವಾಗಿ ಗುರುವಿನ ಭಕ್ತರನ್ನಾಗಲಿ, ಶಿಷ್ಯರನ್ನಾಗಲಿ ಒಬ್ಬ ಗುರುವು ಯಾವ ರೀತಿಯಲ್ಲಿ ಕಾಪಾಡಿಕೊಂಡು ಬರುತ್ತಾರೋ ಅದೇ ರೀತಿಯಾಗಿ ನಿನ್ನ ಪ್ರದೇಶಕ್ಕೆ ಸಂಬಂಧಿಸಿದ ಈ ಸಂಸ್ಥಾನವನ್ನು ಇದೇ ವಂಶದ ಪುತ್ರನೆಂದು, ನಮ್ಮ ವಂಶದ ಪುತ್ರನಿಗಾಗಿ ಈ ರಾಜ್ಯವನ್ನು ಸ್ಥಾಪಿಸಿದ್ದೇನೆಂದು ಭಾವಿಸಿ, ನಿಮ್ಮ ಈ ಗಲಭೆಯನ್ನು ಇಲ್ಲಿಗೆ ನಿಲ್ಲಿಸಿ ಈ ಜೋಗಿಕಲ್ಲು ಸಣ್ಣ ಸಂಸ್ಥಾನವನ್ನು ಅವರ ಜೀವನೋಪಾಯಕ್ಕಾಗಿ ಬಿಟ್ಟುಕೊಡಬೇಕು ಎಂದು ಚೆನ್ನಬಸಪ್ಪ ಶಿವಯೋಗಿಗಳು ಜರಿಮಲೆ ಅರಸ ಸಿದ್ಧಪ್ಪನಾಯಕನಿಗೆ ಕೇಳುತ್ತಾರೆ. ಅದಕ್ಕೆ ಸಿದ್ದಪ್ಪನಾಯಕನು ಆಗಲಿ ಎಂದು ಒಪ್ಪಿಕೊಂಡು ಜೋಗಿಕಲ್ಲು ಸಂಸ್ಥಾನವನ್ನು ಜೋಗಪ್ಪನಾಯಕನಿಗೆ ಬಿಟ್ಟುಕೊಟ್ಟನು. ಹೀಗೆ ಗಲಭೆಯನ್ನು ತಡೆದ ಸ್ವಾಮಿಗಳು ಇಬ್ಬರು ಅರಸರಿಗೆ ಹೇಳಿದರು ಇನ್ನು ಮುಂದೆ ನಿಮ್ಮಿಬ್ಬರ ರಾಜ್ಯದಲ್ಲಿ ಏನೇ ಗಲಭೆ ನಡೆದರು ನಾನೇ ಪರಿಹರಿಸುವೆ ಎಂದರು. ಅದಕ್ಕೆ ಈ ಇಬ್ಬರು ಅರಸರು ಚೆನ್ನಬಸಪ್ಪ ಸ್ವಾಮಿಗಳಿಗೆ, ನಿಮ್ಮ ಮಾತಿನಂತೆಯೇ ನಾನು ರಾಜ್ಯ ಪರಿಪಾಲನೆ ಮಾಡುವೆವೆಂದು ನಮಸ್ಕರಿಸಿದರು. ಹಿಂದೆ ಇದೇ ರೀತಿಯಾಗಿ ಸಹಾಯ ಕೋರಿ ಬಂದವರನ್ನು ಕೈಬಿಡುವುದಿಲ್ಲ, ಅವರನ್ನು ರಕ್ಷಿಸುವೆವು ಎಂದು ಹೇಳಿದವರು ಇಂದು ಮಾತು ತಪ್ಪಿದರು. ಅವರು ಮಾತು ತಪ್ಪಿದ್ದರಿಂದ ಸುರಪುರವೆಂಬ ರಾಜ್ಯವನ್ನು ಬಿಟ್ಟು ಈ ಗಂಡುಮೆಟ್ಟಿನ ಬಂಡ್ರಿ ಗ್ರಾಮಕ್ಕೆ ಬಂದು ನೆಲೆಸಿದ್ದೇನೆ ಎಂದರು.

ನಮ್ಮ ಕಷ್ಟವನ್ನು ಪರಿಹರಿಸಿದ ಚೆನ್ನಬಸಪ್ಪ ಸ್ವಾಮಿಗಳ ಬಳಿಗೆ ಜೋಗಪ್ಪನಾಯಕರು ಬಂದು, ಸ್ವಾಮಿ ನಮ್ಮ ಸಂಸ್ಥಾನವನ್ನು ಉಳಿಸಿಕೊಟ್ಟಿದ್ದೀರಿ, ನೀವು ಈ ಸಂಸ್ಥಾನವನ್ನು ಬಿಟ್ಟು ಎಲ್ಲಿಗೆ ಹೋಗದಿರಿ, ನೀವು ಬೇಡಿದ್ದನ್ನು ಕೊಡುವೆ ಎಂದು ಜೋಗಪ್ಪನಾಯಕ ಒಪ್ಪಿಕೊಂಡರು. ಅದೇ

ರೀತಿಯಾಗಿ ಬಂಡ್ರಿ ಗ್ರಾಮದ ಪೂರ್ವಕ್ಕೆ ಬುಡದಲ್ಲಿ ಮಠವನ್ನು ಕಟ್ಟಿಸಿ ಬಾವಿಯನ್ನು ತೋಡಿಸಿ ಕೊಟ್ಟರು. ಈಗಲೂ ಬಂಡ್ರಿಯಲ್ಲಿ ಈ ಸ್ವಾಮಿಯ ಹೆಸರಿನಲ್ಲಿ ನಿರ್ಮಿಸಿದ ಬಾವಿ, ಮಠಗಳು ಇವೆ.

ಒಮ್ಮೆ ಜೋಗಪ್ಪನಾಯಕನು ತನಗೆ ಸಂತಾನವಿಲ್ಲದ್ದಕ್ಕೆ ನನ್ನ ಪರಿವಾರ ಎಷ್ಟು ಇದ್ದರೇನು ಪ್ರಯೋಜನವಿಲ್ಲ. ದೇವರಿಲ್ಲದ ದೇಗುಲದಂತೆ ಜ್ಯೋತಿಯಿಲ್ಲದ ರಾಜ್ಯದಂತೆ ಇರುವ ನಮ್ಮ ಸಂಸ್ಥಾನದಲ್ಲಿ ನಾನು ಯಾಕೆ ವಾಸಿಸಬೇಕು, ಅದಕ್ಕೆ ಚಿತ್ರದುರ್ಗ ಸಂಸ್ಥಾನಕ್ಕೆ ಹೋಗಲು ನಿಶ್ಚಯಿಸಿದರು. ಆದರೆ ಚೆನ್ನಬಸಪ್ಪ ಶಿವಯೋಗಿಗಳು ನಮ್ಮ ಸನ್ನಿಧಿಯಲ್ಲಿರುವಾಗ ನಮಗೆ ಆ ಕಷ್ಟ ಬರಲಾರದು, ದೇವರಿಲ್ಲದ ದೇಗುಲದಲ್ಲಿ ದೇವರನ್ನು ನಿರ್ಮಾಣ ಮಾಡುತ್ತಾರೆ. ಜ್ಯೋತಿ ಇಲ್ಲದ ರಾಜ್ಯದಲ್ಲಿ ಜ್ಯೋತಿಯನ್ನು ಉರಿಸುತ್ತಾರೆ. ಆದ್ದರಿಂದ ನಾವು ಅವರನ್ನು ಕುರಿತು ಪ್ರಾರ್ಥಿಸೋಣ ಎಂದು ಒಮ್ಮೆ ಬಂಡ್ರಿಯ ಮಠದಲ್ಲಿರುವ ಚೆನ್ನಬಸಪ್ಪ ಸ್ವಾಮಿಗಳ ಹತ್ತಿರ ಹೋಗಿ ಈ ರಾಜ ದಂಪತಿಗಳು ತಮಗೆ ಸಂತಾನವಿಲ್ಲದಕ್ಕೆ ಬೇಸರವಾಗಿದೆ. ಅದಕ್ಕೆ ನಾವು ಈ ರಾಜ್ಯ ಬಿಟ್ಟು ಹೋಗಬೇಕೆಂದು ಯೋಚಿಸಿದ್ದೇವೆ. ಅದಕ್ಕೆ ನಿಮ್ಮ ಅಪ್ಪಣೆ ಪಡೆದು ಮುಂದೆ ಹೋಗಬೇಕೆಂದು ಇಲ್ಲಿಗೆ ಬಂದಿರುವೆವು ಎಂದರು. ಅದಕ್ಕೆ ಚೆನ್ನಬಸಪ್ಪ ಶಿವಯೋಗಿಗಳು ರಾಜ ದಂಪತಿಗಳಿಗೆ ಆಶೀರ್ವಾದಿಸಿ, ಇನ್ನೂ ಒಂದು ವರ್ಷ ತುಂಬುವುದರೊಳಗಾಗಿ ನಿನ್ನ ರಾಜ್ಯಕ್ಕೆ ಪುತ್ರನನ್ನು ಪ್ರತ್ಯಕ್ಷ ಮಾಡುತ್ತೇನೆ. ಜ್ಯೋತಿಯನ್ನು ಉರಿಸುತ್ತೇನೆ. ಆ ಜನಿಸಿದ ಮಗುವಿಗೆ ಅಮರಪ್ಪನಾಯಕ ಎಂದು ನಾಮಕರಣ ಮಾಡು ಎಂದು ಹೇಳಿ ಕಳಿಸಿದರು. ಅದರಂತೆ ಮಗು ಜನಿಸಿದಾಗ ಆ ಮಗುವಿಗೆ ಅಮರಪ್ಪನಾಯಕ ಎಂದು ನಾಮಕರಣ ಮಾಡಿದರು.

ಅಮರಪ್ಪನಾಯಕ ಹದಿನಾಲ್ಕು ವರ್ಷ ವಯಸ್ಸಿನವನಾದಾಗ ಜೋಗಪ್ಪನಾಯಕ ಆತನ ಮಡದಿ ಮೃತರಾದರು. ನಂತರ ಬಾಲಕ ಅಮರಪ್ಪನಾಯಕ ಸ್ವಾಮಿ ಸನ್ನಿಧಿಗೆ ಸೇರಿ ಅವರ ಸೇವೆಯಲ್ಲಿ ತೊಡಗಿದನು. ಜೋಗಪ್ಪನಾಯಕ ಬಂಡ್ರಿಯ ಪೂರ್ವಕ್ಕೆ ಆರು ಎಕರೆ ಜಮೀನನ್ನು ಆ ಸ್ವಾಮಿಗಳಿಗೆ ಇನ್ನಾಮು ರೂಪವಾಗಿ ಕಾಣಿಕೆ ಸಲ್ಲಿಸಿದ್ದರು. ಮುಂದೆ ಅಮರಪ್ಪ ನಾಯಕರು ಚೆನ್ನಬಸಪ್ಪ ಸ್ವಾಮಿಗಳನ್ನು ಈ ಜೋಗಿಕಲ್ಲು ಸಂಸ್ಥಾನಕ್ಕೆ ಕರೆಯಿಸಿ ಇಲ್ಲಿಯೂ ಒಂದು ಮಠವನ್ನು ಕಟ್ಟಿಸಿಕೊಟ್ಟರು. ಸ್ವಾಮಿಗಳು ಇಲ್ಲಿ ಬಂದು ನೆಲೆಸಿದ ಮೇಲೆ ಅಮರಪ್ಪನಾಯಕನು ಚಿತ್ರದುರ್ಗಕ್ಕೆ ಹೋದನೆಂದು ತಿಳಿದುಬರುತ್ತದೆ. ಈಗ ಈ ವಂಶದವರು ಯಾರು ಇಲ್ಲಿ ಇಲ್ಲ. ನಂತರ ಈ ಪ್ರದೇಶ ಜರಿಮಲೆ ಅರಸರ ಆಳ್ವಿಕೆಗೆ ಒಳಪಟ್ಟಿತು.

ಚೆನ್ನಬಸಪ್ಪ ಸ್ವಾಮಿಗಳು ಜೋಗಿಕಲ್ಲಿನಲ್ಲಿಯೇ ಮೂವತ್ತೈದು ವರ್ಷವಯಸ್ಸಿನಲ್ಲಿಯೇ ಲಿಂಗೈಕ್ಯರಾದರು. ಈಗಿರುವ ಮಠ ಅವರ ಗದ್ದುಗೆಯಾಗಿದೆ. ಅದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಇತ್ತೀಚೆಗೆ ಮತ್ತೊಂದು ಮಠವನ್ನು ಕಟ್ಟಿಸುತ್ತಿದ್ದಾರೆ. ಅದು ಅವರ ವಾಸಸ್ಥಾನವಾಗಿತ್ತೆಂದು ಅಲ್ಲಿಯೇ ಮತ್ತೊಂದು ಮಠವನ್ನು ಕಟ್ಟುತ್ತಿದ್ದಾರೆ. ಅದೇ ಮಠದ ಪಕ್ಕಕ್ಕೆ ಮತ್ತೊಂದು ಮಠವಿದ್ದು ಅದರಲ್ಲಿ

ಈಶ್ವರಲಿಂಗವಿದೆ. ಅದನ್ನು ಈಗ ಮಲ್ಲಿಕಾರ್ಜುನನ ಗುಡಿ ಎನ್ನುತ್ತಾರೆ. ಇದಕ್ಕೆ ಸುಮಾರು ೧೪೦ ವರ್ಷದ ಇತಿಹಾಸವಿದೆ. ಚಿನ್ನಾಪುರದಯ್ಯ ಚೆನ್ನಬಸಪ್ಪನ ಮಠಕ್ಕೆ ಸುಮಾರು ೬೬೦ ವರ್ಷದ ಇತಿಹಾಸವಿದೆ.

ಒಟ್ಟಿನಲ್ಲಿ ಊರೊಟ್ಟಿಗಿನ ಸಾಂಸ್ಕೃತಿಕ ಸಂಪರ್ಕವೇ ಮಠಗಳ ಮೂಲ ಉದ್ದೇಶವಾಗಿದೆ. ಅದಕ್ಕೆಂದೆ ಹಿಂದಿನ ಹಿರಿಯರು, ರಾಜರು, ಪಾಳೆಗಾರರು ತಮ್ಮ ಸಂಪತ್ತಿನಿಂದ ಬೃಹತ್ತಾದ ದೇವಾಲಯ, ಮಠಗಳನ್ನು ನಿರ್ಮಿಸಿದರು. ಮಠಗಳಿರುವುದು ಸ್ವಾಮಿಗಳ ಪ್ರತಿಷ್ಠೆಗಲ್ಲ, ಸಮಷ್ಠಿಯ ಒಳಿತಿಗಾಗಿ. ಇಲ್ಲಿನ ಮಠ ಕರ್ಮಠವಾಗಬಾರದು ಅರ್ಪಿತ ಭಾವದಿಂದ ಅಹಮ್ಮಿಕೆಯನ್ನು ಕಳೆದುಕೊಳ್ಳುವ ಕ್ರಿಯಾ ಸಂಪನ್ನತೆಗೆ ಸಾಧನವಾಗಬೇಕು.[೬]

೭.೨.೭. ಪುಟ್ಟರಸನಮಠ, ಸಂಡೂರು

ಹರಪನಹಳ್ಳಿ ಅರಸನಾದ ಮೊದಲ ವೀರಬಸಪ್ಪನಾಯಕನಿಗೆ ಪುಟ್ಟರಸ ಎಂಬ ಮಗನಿದ್ದು, ಆತನು ಆರು ವರ್ಷ ಪ್ರಾಯದಲ್ಲಿ ಮೈಲಿ ಬೇನೆಯಿಂದ ಮೃತನಾದನು. ಇವನ ನೆನಪಿಗಾಗಿ ಅರಸನು ಅವನ ಸಮಾಧಿಯ ಮೇಲೆ ಸಣ್ಣದೊಂದು ಮಠ ಕಟ್ಟಿಸಿದನು. ಈಗ ಇದು ಸಂಡೂರು ಕೇರಿಯನ್ನು ಪ್ರವೇಶಿಸುವ ಸ್ಥಳದಲ್ಲಿಯೇ ಇದೆ. ಇದಕ್ಕೆ ಪುಟ್ಟರಸನ ಮಠವೆಂದು ಈಗಲೂ ಕರೆಯುವರು.[೭]

೭.೨.೮. ಸೂಗೇಶ್ವರಮಠ, ಗಂಗಲಾಪುರ

ಈ ತಾಲ್ಲೂಕಿನ ಗಂಗಲಾಪುರ ಗ್ರಾಮದಲ್ಲಿ ಸೂಗಪ್ಪ ತಾತನವರ ಮಠವಿದೆ. ಈ ಮಠದ ಪ್ರಾಚೀನತೆಯ ಬಗ್ಗೆ ಸ್ಪಷ್ಟವಾದ ಯಾವುದೇ ಮಾಹಿತಿ ಲಭಿಸುವುದಿಲ್ಲ. ಈ ಮಠದಲ್ಲಿ ಸೂಗಪ್ಪ ತಾತನವರು ಐಕ್ಯವಾದ ಗದ್ದುಗೆಯಿದೆ. ಈ ಮಠದ ಗರ್ಭಗೃಹದಲ್ಲಿ ಸೂಗಪ್ಪತಾತನವರ ಗದ್ದುಗೆ ಇದ್ದು, ಅದರ ಮುಂದೆ ಒಂದು ಶಿಲೆಯಲ್ಲಿ ಲಿಂಗವನ್ನು, ಸೂರ್ಯ, ಚಂದ್ರರ ಶಿಲ್ಪವನ್ನು ಕೆತ್ತಲಾಗಿದೆ. ಮೊದಲು ಈ ಮಠ ಚಿಕ್ಕದಿತ್ತು. ಈಗ ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ಮಠವನ್ನು ಕಟ್ಟಿಸಿದವರು ಬಳಗನೂರು ಚಿಕ್ಕೆನಕೊಪ್ಪ ಸರನೂರು ಶರಣ ಎನ್ನುವವರು ನಿರ್ಮಿಸಿದರೆಂದು ತಿಳಿದುಬರುತ್ತದೆ. ಈ ಮಠಕ್ಕೆ ಸುಮಾರು ಮೂರು ನೂರು ವರ್ಷಗಳ ಇತಿಹಾಸವಿದೆ.

ಈ ಮಠ ಸ್ಥಾಪನೆಯ ಬಗ್ಗೆ ಐತಿಹ್ಯ ಹೀಗಿದೆ : ಸೂಗಪ್ಪ ತಾತನವರು ಜೀವ ಸಮಾಧಿ ಆದ ಮೂರು ದಿನಗಳ ನಂತರ ಗಂಗಲಾಪುರದ ಜನತೆಗೆ ತನ್ನ ಸಮಾಧಿಯ ಬಳಿ ಇರುವಂತೆ ಹೇಳಿದ್ದರು. ಆದರೆ ಆ ಗ್ರಾಮದ ಜನರು ಮೂರನೇ ದಿನ ಸಮಾಧಿಯ ಬಳಿ ಹೋಗಲು ಮರೆತು ಹೋದರು. ಆದರೆ ಆ ದಿನ ಮಧ್ಯ ರಾತ್ರಿಯಲ್ಲಿ ಹತ್ತಾರು ಬೇರೆ, ಗ್ರಾಮದ ಜನರು ಭಜನೆ ಮೇಳಗಳ ಸಂಗಡ

ಈ ಮಠಕ್ಕೆ ಬಂದರು. ಈ ಭಜನೆಯ ಶಬ್ದಕ್ಕೆ ಆ ಗ್ರಾಮದ ಎತ್ತುಗಳು ಹೆದರಿ ಓಡಿದವು. ಆಗ ಗ್ರಾಮದವರು ಅದನ್ನು ಕಂಡು, ಸೂಗಪ್ಪ ತಾತನವರು ಮೂರು ದಿನ ಬಿಟ್ಟು ಬರಲು ಹೇಳಿದ್ದರು, ಆದರೆ ನಾವು ಹೋಗಲಿಲ್ಲ. ನಮಗೆ ಭಜನೆ ಮೇಳಗಳ ಶಬ್ದ ಕೇಳಿಸಲಿಲ್ಲ ಎಂದುಕೊಂಡರು. ಹೀಗೆ ಈ ಗ್ರಾಮದ ಮಠವನ್ನು ಮೂರು ದಿನದ ನಂತರ ಬೇರೆ ಗ್ರಾಮದವರೇ ನಿರ್ಮಿಸಿದ ಬಗ್ಗೆ ತಿಳಿದುಬರುತ್ತದೆ.

ಪವಾಡಗಳು

ಒಮ್ಮೆ ಈ ಸಮಾಧಿಯ ತುಂಬ ದೊಡ್ಡ ಹಳ್ಳ ಬಂದಿದ್ದರೂ ಸಹ ಈ ಸಮಾಧಿ ಹಾಗೂ ಹಚ್ಚಿದ ದೀಪವು ಸಹ ಶಾಂತವಾಗಿರಲಿಲ್ಲವೆಂದು, ಒಮ್ಮೆ ಮೂರು ತಿಂಗಳ ಮಗುವಿಗೆ ಕಾಯಿಲೆ ಬಂದಾಗ ಈ ತಾತನ ಸಮಾಧಿಗೆ ಐದು ಬಾರಿ ಪ್ರದಕ್ಷಿಣೆ ಹಾಕಿ ಅಲ್ಲಿಯ ಭಸ್ಮವನ್ನು ಮಗುವಿಗೆ ಹಚ್ಚಿದಾಗ ಗುಣವಾಯಿತೆಂದು, ಹೀಗೆ ಅನೇಕ ಪವಾಡಗಳನ್ನು ಈ ಸೂಗಪ್ಪ ತಾತನವರು ಮಾಡಿದ ಬಗ್ಗೆ ಸ್ಥಳೀಯರು ಹೇಳುತ್ತಾರೆ. ಇತ್ತೀಚಿಗೆ ಈ ಮಠ ಪಾಳು ಬಿದ್ದಿದೆ.[೧೦]

ಒಟ್ಟಿನಲ್ಲಿ ಈ ತಾಲ್ಲೂಕಿನಲ್ಲಿ ಕಂಡುಬರುವ ವಿರಕ್ತ ಮಠಗಳು, ಶಾಖಾಮಠಗಳು ಆದಿಯಾಗಿ ಅನೇಕ ಮಠಗಳು ಕಂಡುಬಂದರೂ ಇಂದು ಕೆಲವೇ ಮಠಗಳು ಮಾತ್ರ ತಮ್ಮ ಧಾರ್ಮಿಕ ಕಾರ್ಯ ಚಟುವಟಿಕೆಗಳಲ್ಲಿ ನಿರತವಾಗಿದ್ದು, ಉಳಿದ ಕೆಲವು ಮಠಗಳು ಪಾಳು ಬಿದ್ದಿದ್ದರೂ ಸ್ಥಳೀಯವಾಗಿ ಮಾತ್ರ ಪ್ರಚಲಿತದಲ್ಲಿವೆಯಾದರೂ ಪ್ರಚಾರದಲ್ಲಿಲ್ಲ.

ಅಡಿಟಿಪ್ಪಣಿಗಳು

೧. ಸಂಸ್ಕೃತಿ ಶೋಧ, ರಾಜಶೇಖರ ಇಚ್ಚಂಗಿ, ಪು.೧೧೭, ೧೨೦

೨. ಕರ್ನಾಟಕದ ವೀರಶೈವ ಮಠಗಳು (ಮಠಗಳ ಪರಂಪರೆ- ಮಾಹಿತಿಕೋಶ ಸಂ.೧) ಗೆಳೆಯ ಪ್ರಕಾಶನ, ಚಿಕ್ಕಮಗಳೂರು

೩. ಅದೇ

೪. ಅದೇ

೫. ಅದೇ

೬. ವಕ್ತೃ : ಆರ್.ಷಣ್ಮುಖಪ್ಪ, ವಯಸ್ಸು : ೬೦, ಉದ್ಯೋಗ : ವ್ಯವಸಾಯ, ಗ್ರಾಮ : ಭುಜಂಗನಗರ,

೭. ವಕ್ತೃ : ಕೆ.ಎಂ.ದಾನಯ್ಯ, ವಯಸ್ಸು : ೭೫, ವೃತ್ತಿ : ವ್ಯವಸಾಯ, ಗ್ರಾಮ : ಹೊಸಜೋಗಿಕಲ್ಲು

೮. ಸಂಸ್ಕೃತಿ ಶೋಧ, ರಾಜಶೇಖರ ಇಚ್ಚಂಗಿ, ಪು.೧೨೦

೯. ಸಂ.ಪ.ಶಾ.ಉ.ದೇ.(ಅಪ್ರಕಟಿತ ಎಂ.ಫಿಲ್.ಪ್ರಬಂಧ), ಗಿರಿಜಾ, ಪು.೬೩

೧೦. ಗ್ರಾಮದ ಸ್ಥಳೀಯರಿಂದ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಅಧ್ಯಾಯ ೮

ಸಮಾರೋಪ

೮

ಸಮಾರೋಪ

ಸಮಗ್ರ ಇತಿಹಾಸ ರಚನೆಯಲ್ಲಿ ಸ್ಥಳೀಯ ಚರಿತ್ರೆಯು ಬಹಳ ಮುಖ್ಯ ಪಾತ್ರವಹಿಸುತ್ತದೆ. ಸ್ಥಳೀಯ ಚರಿತ್ರೆಯ ಅಧ್ಯಯನದಿಂದ ಆಯಾ ಪ್ರದೇಶದ ಶಿಲಾಶಾಸನ, ದೇವಾಲಯ, ಕೋಟೆ-ಕೊತ್ತಲ, ಕಟ್ಟಡಗಳ, ಕೆರೆ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ಕಂಡು ಸೂಕ್ಷ್ಮವಾಗಿ ಪರಿಕ್ಷಿಸಿದ ಸ್ಪಷ್ಟವಾದ ಚಿತ್ರಣ ದೊರಕುತ್ತದೆ. ಇತ್ತೀಚಿನ ದಶಕಗಳಲ್ಲಿ ಸ್ಥಳೀಯ ಚರಿತ್ರೆಯ ಅಧ್ಯಯನಕ್ಕೆ ಹೆಚ್ಚು ಮಹತ್ವ ಪ್ರಾಪ್ತವಾಗಿದೆ. ಈ ನಿಟ್ಟಿನಲ್ಲಿ ಸಂಡೂರು ತಾಲ್ಲೂಕಿನ ಇತಿಹಾಸವನ್ನು ಕ್ಷೇತ್ರಕಾರ್ಯದ ಮೂಲಕ ಸ್ಥಳ ಪರಿಶೀಲನೆ ಕೈಗೊಂಡು ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ಒಂದೆಡೆ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಸಂಡೂರು ತಾಲ್ಲೂಕಿನ ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಅಧ್ಯಯನದಲ್ಲಿ ಈ ತಾಲ್ಲೂಕಿನ ವಿವಿಧ ಮುಖಗಳ ಪರಿಚಯವನ್ನು ಹಲವು ಅಧ್ಯಾಯಗಳಲ್ಲಿ ಮಾಡಿಕೊಡಲಾಗಿದೆ. ಅವುಗಳಲ್ಲಿ ಈ ತಾಲ್ಲೂಕಿನ ಭೌಗೋಳಿಕ ಹಿನ್ನೆಲೆಯ ಭಾಗದಲ್ಲಿ ಇಲ್ಲಿಯ ಪರಿಸರದಲ್ಲಿ ದೊರೆಯುವ ಲೋಹ ಸಂಪತ್ತು, ಅರಣ್ಯ ಸಂಪತ್ತು, ಜಲಸಂಪತ್ತು, ಇಲ್ಲಿನ ಬೆಳೆಗಳು, ಪಶು, ಪಕ್ಷಿ ಮೊದಲಾದವುಗಳ ಮಹತ್ವವನ್ನು ಕಂಡುಕೊಳ್ಳಲಾಗಿದೆ. ಪೂರ್ವೇತಿಹಾಸ ಭಾಗದಲ್ಲಿ ಈ ತಾಲ್ಲೂಕಿನ ದರೋಜಿ, ಜೋಗ, ಕುರೆಕುಪ್ಪೆ, ಅಯ್ಯನಹಳ್ಳಿ, ಅಪ್ಪಲಾಪುರ, ಕೊಡಾಳು, ರಾಜಾಪುರ, ತೋರಣಗಲ್ಲು, ಮಲ್ಲಾಪುರ, ಇಂಗಳಗಿ, ಲಿಂಗದಹಳ್ಳಿ, ಲಕ್ಷ್ಮೀಪುರ, ಕಾರ್ತಿಕೇಯ ಕ್ಷೇತ್ರ ಬೈರನಾಯಕನಹಳ್ಳಿಗಳು ಪೂರ್ವೇತಿಹಾಸ ಕಾಲದ ತಾಣಗಳಾಗಿದ್ದವು ಎಂಬ ಬಗ್ಗೆ ಗಮನಿಸಲಾಗಿದೆ. ಇತಿಹಾಸ ಭಾಗದಲ್ಲಿ ಸಂಡೂರಿನ ಪದ ನಿಷ್ಪತ್ತಿಯ ಕುರಿತು ಮತ್ತು ಈ ಪ್ರದೇಶವನ್ನಾಳಿದ ಚಾಲುಕ್ಯರು, ರಾಷ್ಟ್ರಕೂಟ, ಗಂಗ, ಕಲ್ಯಾಣ ಚಾಲುಕ್ಯ, ವಿಜಯನಗರ, ಸ್ಥಳೀಯ ಅರಸರ ಆಳ್ವಿಕೆಗೆ ಈ ತಾಲ್ಲೂಕು ಯಾವ ರೀತಿಯಾಗಿ ಒಳಪಟ್ಟಿತೆಂಬ ಬಗ್ಗೆ ವಿವರವಾದ ಅಧ್ಯಯನವನ್ನು ಇತಿಹಾಸ ಎಂಬ ಅಧ್ಯಾಯದಲ್ಲಿ ಕೈಗೊಂಡಿದೆ.

ಈ ತಾಲ್ಲೂಕಿನ ಐತಿಹಾಸಿಕ ಮಹತ್ವವನ್ನು ಅರಿಯುವಲ್ಲಿ ಮುಖ್ಯ ಪಾತ್ರವಹಿಸಿರುವ ಈ ಪ್ರದೇಶದ ೯೭ ಶಾಸನಗಳ ಸಹಾಯದಿಂದ ಈ ತಾಲ್ಲೂಕಿನ ಅನೇಕ ರಾಜವಂಶಗಳು ನೀಡಿರುವ ಅನೇಕ ರೀತಿಯ ಕೊಡುಗೆಗಳನ್ನು ಕುರಿತು ಚರ್ಚಿಸಲಾಗಿದೆ. ಮತ್ತು ಇವರ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಕೆಲವು ದೇವಾಲಯಗಳ ಬಗ್ಗೆ ಈ ಕೆಳಗಿನಂತೆ ಗಮನಿಸಬಹುದು. ಅವುಗಳಲ್ಲಿ ಕ್ರಿ.ಶ.೧೫೪೨ರ ಶಾಸನದಲ್ಲಿ

ಕುರೆಕುಪ್ಪೆ ಗ್ರಾಮದ ಈಶ್ವರ ದೇವಾಲಯವನ್ನು ಕೃಷ್ಣದೇವರಾಯನ ಅವಧಿಯಲ್ಲಿ ಸಾಮಶಾಖೆಯ ಸಂಗಮೇಶ್ವರದ ಹೆಗ್ಗರಸರ ಮಕ್ಕಳು ಘಳಿಯಾರ ಬಾಗಿಲ ಬೆನಕರಸನೂ ಈ ದೇವಾಲಯವನ್ನು ಕಟ್ಟಿಸಿ ವಿರೂಪಾಕ್ಷ ದೇವರನ್ನು ಪ್ರತಿಷ್ಠಾಪಿಸಿ, ದೇವರ ಪೂಜೆ ಪುನಸ್ಕಾರಕ್ಕಾಗಿ ಬಸವಾದಿಕ್ಷಿತರಿಂದ ಭೂಮಿಯನ್ನು ಕ್ರಯವಾಗಿ ಪಡೆದು ದೇವರಕಾರ್ಯಕ್ಕೆ ದಾನ ನೀಡಿದ್ದನ್ನು ತಿಳಿಸುವುದು. ತಾಳೂರು ಗ್ರಾಮದ ಕ್ರಿ.ಶ.೧೨೧೮ರ ಶಾಸನದಲ್ಲಿ ಹೊಯ್ಸಳ ವೀರಬಲ್ಲಾಳನ ಅವಧಿಯಲ್ಲಿ ಶ್ರೀಮನ್ಮಹನಾಳು ಪ್ರಭುಯಗವಟ್ಟಿ ಬೊಮ್ಮಗವುಡನು ತಲರದಲ್ಲಿ ಈಶ್ವರ ದೇವಾಲಯ ನಿರ್ಮಿಸಿ, ಅದನ್ನು ನಿರ್ಮಿಸಿದ ಬೊಮ್ಮೊಜನಿಗೆ ಭೂಮಿದಾನ ನೀಡಿದ ವಿಷಯವಿದೆ. ಕ್ರಿ.ಶ.೧೫೪೭ರ ಅಂತಾಪುರ ಗ್ರಾಮದ ಶಿಥಿಲವಾದ ಮಲ್ಲಿಕಾರ್ಜುನ ದೇವಾಲಯವನ್ನು ಹರಪಣ್ಣನು ಗೌಡ ಮತ್ತು ಸೇನ ಬೋವ ಹಾಗೂ ಗ್ರಾಮದ ಜನರ ಒಪ್ಪಿಗೆ ಪಡೆದು ಈ ಶಿಥಿಲವಾಗಿದ್ದ ಮಲ್ಲಿಕಾರ್ಜುನದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ ಬಗ್ಗೆ ತಿಳಿಸುವುದು. ಕ್ರಿ.ಶ.೧೫೨೭ರ ಕೃಷ್ಣದೇವರಾಯನ ಅವಧಿಯಲ್ಲಿಯ ಗೋಪಾಯಿ ಎಂಬಾಕೆ ರಾಮನಾಥನ ಕಾಲದ ಪೂರ್ವದ ಛಪ್ಪನ್ನಸಮಂದಿ ವೀರರಿಗೆ ವೀರಸ್ವರ್ಗ ಪ್ರಾಪ್ತವಾಗಲೆಂದು ಈ ರಾಮನಾಥ ದೇವಾಲಯವನ್ನು ಕಟ್ಟಿಸಿ ಕೆಲವು ದಾನಗಳನ್ನು ನೀಡಿದಂತೆ ತಿಳಿಸುವುದು. ಅಷ್ಟೇ ಅಲ್ಲದೆ ದೇವಾಲಯದ ಪೂಜೆ ಪುನಸ್ಕಾರಕ್ಕಾಗಿ ಗ್ರಾಮ ದಾನ ನೀಡಿದ ವಿಷಯವನ್ನು ತಿಳಿಸುವ ಕ್ರಿ.ಶ.೧೨೦೬ ಕುಮಾರಸ್ವಾಮಿ ಬೆಟ್ಟದ ಪಾರ್ವತಿದೇವಿ ದೇವಾಲಯದ ಶಾಸನವನ್ನು ಕಾಣುತ್ತೇವೆ. ದೇವಾಲಯದ ಮುಂದೆ ಮಂಟಪ, ಹೊಂಡಗಳನ್ನು ನಿರ್ಮಿಸಿದ ಬಗ್ಗೆ ನವಿಲುಸ್ವಾಮಿ ಬೆಟ್ಟದ ನವಿಲುಸ್ವಾಮಿ ದೇವಾಲಯದ ಶಾಸನಗಳಿಂದ ತಿಳಿದುಬರುವುದು. ಸಾರ್ವಜನಿಕ ಉಪಯೋಗಕ್ಕಾಗಿ ಕೆರೆ, ಬಾವಿಗಳನ್ನು ನಿರ್ಮಿಸಿದ ಕುರಿತು ಈ ತಾಲ್ಲೂಕಿನ ಚಿಕ್ಕಕೆರೆಯಾಗಿನಹಳ್ಳಿಯ ಮತ್ತು ಹುಲಿಕುಂಟಾ ಗ್ರಾಮದ ಬಯಕಾರ ರಾಮಪ್ಪಯ್ಯನ ಅವಧಿಯ ಶಾಸನಗಳಿಂದ ತಿಳಿದುಬರುತ್ತದೆ. ಹೀಗೆ ಅನೇಕ ವಿಷಯಗಳನ್ನು ಶಾಸನಾಧಾರದಿಂದ ಗುರುತಿಸಿ ಅವುಗಳ ಇತಿಹಾಸವನ್ನು ಕಟ್ಟಿಕೊಡಲಾಗಿದೆ. ಮತ್ತು ಕ್ಷೇತ್ರಕಾರ್ಯದಿಂದ ಮೊಟ್ಟ ಮೊದಲ ಬಾರಿಗೆ ಈ ತಾಲ್ಲೂಕಿನ ಅಪ್ರಕಟಿತ ಶಾಸನಗಳನ್ನು ಬೆಳಕಿಗೆ ತರಲಾಗಿದೆ. ಇವುಗಳಲ್ಲಿ ಬೊಮ್ಮಗಟ್ಟದ ಕೂಟ ತಾಮ್ರ ಶಾಸನ, ಆವಿನಮಡುವಿನ ಶಿಲಾಶಾಸನ, ದರೋಜಿಯ ನಿಸಿದಿ ಶಾಸನ, ಭುಜಂಗನಗರದ ವೀರಗಲ್ಲು ಶಾಸನ, ದರೋಜಿ ಬೆಟ್ಟದ ಮೇಲಿನ ಲಿಂಗಮುದ್ರೆ ಶಾಸನ, ರಾಮಘಡದ ಹುಲಿಮಾನಪ್ಪನ ಮಠಕ್ಕೆ ಸಂಬಂಧಿಸಿದ ಒಂದು ಬೆಳ್ಳಿ ಮುದ್ರೆ ಉಂಗುರ ಶಾಸನ ಮತ್ತೊಂದು ತಾಮ್ರದ ಮುದ್ರೆಯ ಶಾಸನ, ಲಕ್ಷ್ಮೀಪುರದ ಶಿಲಾಶಾಸನ, ಜೋಗಿಕಲ್ಲಿನ ಶಿಲಾಶಾಸನಗಳನ್ನು ಹೆಸರಿಸಬಹುದು. ಇವುಗಳ ಜೊತೆಗೆ ಈ ತಾಲ್ಲೂಕಿನಲ್ಲಿ ಕಾಣಸಿಗುವ ಸ್ಮಾರಕ ಶಿಲ್ಪಗಳ ಬಗ್ಗೆ ಗಮನಿಸುವುದಾದರೆ ಅವುಗಳಲ್ಲಿ ಅಂಕಮ್ಮನಾಳಿನ ವೀರಮಾಸ್ತಿಕಲ್ಲು, ವಿಠಲಾಪುರ ಗ್ರಾಮದ ವೀರಮಾಸ್ತಿಗಲ್ಲು, ಬಂಡ್ರಿ ಗ್ರಾಮದ ಐದು ವೀರ-ವೀರಮಾಸ್ತಿಗಲ್ಲುಗಳು, ಚೋರುನೂರಿನ ಐದು ವೀರ-ವೀರಮಾಸ್ತಿಗಲ್ಲುಗಳು, ಯಶವಂತನಗರದ ವೀರ-ವೀರಮಾಸ್ತಿಗಲ್ಲುಗಳು ಬೊಮ್ಮಗಟ್ಟ ಗ್ರಾಮದ ಯಂತ್ರಕಲ್ಲು, ಚಿಕ್ಕ ಅಂತಾಪುರದ ವಾಮನಮುದ್ರೆ

ಕಲ್ಲು, ದರೋಜಿ ಬೆಟ್ಟದ ವೀರಭದ್ರ ದೇವಾಲಯದ ಮುಂದಿರುವ ಲಿಂಗಮುದ್ರೆ ಕಲ್ಲು ಹೀಗೆ ಈ ತಾಲ್ಲೂಕಿನಲ್ಲಿ ಕಾಣಸಿಗುವ ಅನೇಕ ಸ್ಮಾರಕ ಶಿಲ್ಪಗಳನ್ನು ಮೊದಲ ಬಾರಿಗೆ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿ ಅವುಗಳನ್ನು ಶಾಸನಗಳು ಎಂಬ ಅಧ್ಯಾಯದಲ್ಲಿ ಅಧ್ಯಯನ ನಡೆಸಲಾಗಿದೆ.

ಈ ತಾಲ್ಲೂಕಿನಲ್ಲಿ ಕಂಡುಬರುವ ವಾಸ್ತುಶಿಲ್ಪಗಳ ವೈವಿಧ್ಯತೆಯ ಬಗ್ಗೆ ಗಮನಿಸಲಾಗಿದೆ. ಈ ಪ್ರದೇಶದಲ್ಲಿ ರಾಷ್ಟ್ರಕೂಟರ ಅವಧಿಯ ಪಾರ್ವತಿ ದೇವಾಲಯ, ಈಶ್ವರ ದೇವಾಲಯಗಳು, ಕಲ್ಯಾಣ ಚಾಲುಕ್ಯ ಅವಧಿಯ ಕುಮಾರಸ್ವಾಮಿ, ನಾಗನಾಥ, ಪಾತಾಳೇಶ್ವರ ದೇವಾಲಯಗಳು, ಹರಿಶಂಕರದ ಈಶ್ವರ ದೇವಾಲಯ, ದರೋಜಿ ಬೆಟ್ಟದ ಮೇಲಿನ ರಾಮಲಿಂಗೇಶ್ವರ ದೇವಾಲಯ, ತಾಳೂರಿನ ಈಶ್ವರ ದೇವಾಲಯಗಳು, ವಿಜಯನಗರ ಅವಧಿಯ ಚೋರುನೂರಿನ ವೀರಭದ್ರ ದೇವಾಲಯ, ಕುರೆಕುಪ್ಪೆಯ ಪಂಪಾವತಿ ದೇವಾಲಯ, ಅಂತಾಪುರದ ಮಲ್ಲಿಕಾರ್ಜುನ ದೇವಾಲಯ, ಜಿಗಿನಹಳ್ಳಿಯ ಆಂಜನೇಯ ದೇವಾಲಯ, ನವಿಲುಸ್ವಾಮಿ ಬೆಟ್ಟದ ನವಿಲುಸ್ವಾಮಿ ದೇವಾಲಯ, ಸಂಡೂರಿನ ತಾರಕೇಶ್ವರ ದೇವಾಲಯ ಇನ್ನೂ ಮೊದಲಾದವುಗಳು. ವಿಜಯನಗರೋತ್ತರ ಅವಧಿಯ ತುಂಬರಗುದ್ದಿಯ ಆಂಜನೇಯ ದೇವಾಲಯ, ವಡ್ಡು ಗ್ರಾಮದ ಹಳ್ಳದರಾಯನ ದೇವಾಲಯ ಬಸಾಪುರ ಎಸ್.ನಲ್ಲಿರುವ ರಾಮದೇವಾಲಯ, ಬಂಡ್ರಿಯ ಆಂಜನೇಯ ದೇವಾಲಯ ಮೊದಲಾದವುಗಳು. ಈ ತಾಲ್ಲೂಕಿನಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಅವಧಿಯ ದೇವಾಲಯಗಳ ಅತಿ ವಿರಳವಾಗಿ ಕಂಡುಬರುತ್ತವೆ. ಆದರೆ ಸಂಡೂರು ಪರಿಸರದಲ್ಲಿ ವಿಜಯನಗರ ಅವಧಿಯ ವಾಸ್ತುಶೈಲಿಯನ್ನುಳ್ಳ ದೇವಾಲಯಗಳೇ ಅಧಿಕವಾಗಿ ಕಾಣಸಿಗುತ್ತವೆ. ಅದರಂತೆಯೇ ಸಂಡೂರು ತಾಲ್ಲೂಕಿನ ಕುಮಾರಸ್ವಾಮಿ ಬೆಟ್ಟದಲ್ಲಿ ಚಾಲುಕ್ಯಯುಗದ ಕೇಶವ, ಮಾಧವ, ಪಾರ್ವತಿ, ಅಗಸ್ತ್ಯಮುನಿ ಮೊದಲಾದ ಶಿಲ್ಪಗಳನ್ನು ಕಾಣುತ್ತೇವೆ. ಕಲ್ಯಾಣಚಾಲುಕ್ಯ ಯುಗದ ಶಿಲ್ಪಗಳು ಹೆಚ್ಚಾಗಿ ಕುಮಾರಸ್ವಾಮಿ ಬೆಟ್ಟದಲ್ಲಿಯೇ ಕಾಣುತ್ತೇವೆ. ಅವುಗಳೆಂದರೆ ಕುಮಾರಸ್ವಾಮಿ, ರಂಗನಾಥ, ನಂದಿ ಮೊದಲಾದ ಶಿಲ್ಪಗಳಾಗಿವೆ. ಹೊಯ್ಸಳಯುಗದ ಶಿಲ್ಪಗಳು ಹೆಚ್ಚಾಗಿ ಕಂಡುಬರುವುದು ಹೊಸಮಲೆದುರ್ಗ(ರಾಮಘಡ)ದ ಪ್ರದೇಶದಲ್ಲಿ, ಅವುಗಳೆಂದರೆ ದುರ್ಗ, ವಿಷ್ಣು, ಭೈರವ ಮೊದಲಾದವು ಗಳಾಗಿವೆ. ವಿಜಯನಗರ ಅವಧಿಯ ಶಿಲ್ಪಗಳು ಈ ತಾಲ್ಲೂಕಿನಲ್ಲಿ ಅಧಿಕವಾಗಿ ಕಂಡುಬರುವವು. ಆಂಜನೇಯನ ವಿಗ್ರಹಗಳು, ನಂದಿಶಿಲ್ಪಗಳು, ಗಣೇಶನ ಮೂರ್ತಿಗಳು, ವೀರಭದ್ರನ ಶಿಲ್ಪಗಳು ಅಧಿಕವಾಗಿವೆ. ವಿಜಯನಗರೋತ್ತರ ಅವಧಿಯಲ್ಲಿಯೂ ನಮಗೆ ಆಂಜನೇಯನ ವಿಗ್ರಹಗಳು ಮತ್ತು ವೀರಭದ್ರನ ಶಿಲ್ಪಗಳೇ ಅಧಿಕವಾಗಿ ದೊರೆಯುತ್ತವೆ. ಒಟ್ಟಿನಲ್ಲಿ ವಿಜಯನಗರ ಅವಧಿಯ ಅನೇಕ ಮಂಟಪಗಳು ಸಹ ಈ ತಾಲ್ಲೂಕಿನಲ್ಲಿವೆ.

ಈ ತಾಲ್ಲೂಕಿನಲ್ಲಿ ಕಂಡುಬರುವ ದರೋಜಿ ಮತ್ತು ರಾಮಘಡದ ಕೋಟೆಗಳು ಕಾಲದ ದೃಷ್ಟಿಯಿಂದ ಪ್ರಾಚೀನವಾದವುಗಳಾಗಿವೆ. ಇವನ್ನು ಹೊರತುಪಡಿಸಿದರೆ ಪಾಳೆಗಾರರ ಅವಧಿಯ ಜೋಗಿಕಲ್ಲಿನ

ಕೋಟೆ, ಉತ್ತರಮಲೆಯ ಕೋಟೆ ತಿಮ್ಮಪ್ಪನ ಬೆಟ್ಟದ ಕೋಟೆ, ಬೊಮ್ಮಗಟ್ಟದ ಕೋಟೆ, ಕೃಷ್ಣಾನಗರದ ಕೋಟೆಗಳಿವೆ. ಈ ತಾಲ್ಲೂಕಿನ ಹೆಚ್ಚಿನ ಕೋಟೆಗಳು ಬೆಟ್ಟದ ತುದಿಯಲ್ಲಿ ನಿರ್ಮಿಸಿರುವುದು ಗಮನಾರ್ಹವಾದುದಾಗಿದೆ. ಇವುಗಳ ಜೊತೆಗೆ ಈ ತಾಲ್ಲೂಕಿನ ಭಿತ್ತಿ ಶಿಲ್ಪಗಳ ವೈಶಿಷ್ಟ್ಯಗಳನ್ನು ಮತ್ತು ದೇವಕೋಷ್ಠದ ಶಿಲ್ಪದ ವೈವಿಧ್ಯತೆಯನ್ನು, ಕಾಷ್ಠ ವಾಸ್ತುಶಿಲ್ಪ ಕಲೆಯ ಶೈಲಿಯ ಮಾದರಿಯನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಒಟ್ಟಾರೆಯಾಗಿ ವಾಸ್ತುಶಿಲ್ಪ ಎಂಬ ಅಧ್ಯಯನದಲ್ಲಿ ಈ ತಾಲ್ಲೂಕಿನಲ್ಲಿ ಕಂಡುಬರುವ ವಾಸ್ತು ವೈವಿಧ್ಯತೆಯ ಚಿತ್ರಣವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಈ ತಾಲ್ಲೂಕು ಪ್ರಾಚೀನ ಕಾಲದಿಂದಲೂ ಉತ್ತಮ ಲೋಹ ತಯಾರಿಕ ಕೇಂದ್ರವಾಗಿತ್ತು ಎಂಬ ಬಗ್ಗೆ ಮತ್ತು ಹಿಂದೆ ಪುರಾಣಗಳ ಉಲ್ಲೇಖದಂತೆ ಈ ಪ್ರದೇಶಕ್ಕೆ ಲೋಹಾಚಲವೆಂದು ಹೆಸರಿದ್ದ ಬಗೆಗೆ ಚರ್ಚಿಸಲಾಗಿದೆ. ಹಿಂದಿನಿಂದಲೂ ಈ ಪ್ರದೇಶವು ಗಣಿಗಾರಿಕೆಗೆ ಹೆಚ್ಚು ಪ್ರಸಿದ್ಧಿ ಪಡೆದ ಪ್ರದೇಶವಾಗಿತ್ತೆಂದು ಇತಿಹಾಸದಿಂದ ತಿಳಿಯುತ್ತದೆ. ಇಂದಿಗೂ ಈ ತಾಲ್ಲೂಕು ಪ್ರದೇಶವು ಶ್ರೀಮಂತವಾದ ಖನಿಜ ಸಂಪತ್ತನ್ನು ಹೊಂದಿದ್ದು, ಕಬ್ಬಿಣದ ಜೊತೆಗೆ ಇನ್ನೂ ಅನೇಕ ಮಾದರಿಯ ಲೋಹಗಳು ಈ ಪ್ರದೇಶದಲ್ಲಿ ದೊರೆಯುತ್ತಿದೆ. ಕುಮಾರಸ್ವಾಮಿ ದೇವಾಲಯದ ಪರಿಸರಕ್ಕೆ ಹಿಂದೆ ಕಾರ್ತಿಕೇಯ ತಪೋವನ ಎಂದು ಮತ್ತು ಇಲ್ಲಿದ್ದ ಅನೇಕ ಮುನಿಗಳ ಬಗ್ಗೆ ಗಮನಿಸಲಾಗಿದೆ. ಇದರ ಜೊತೆಗೆ ಈ ತಾಲ್ಲೂಕಿನಲ್ಲಿ ಈಗ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಮತ್ತು ಇದರಿಂದ ಆಗುವ ದುಷ್ಪರಿಣಾಮದ ಬಗ್ಗೆ ಸಂಡೂರು ಒಂದು ಲೋಹ ತಯಾರಿಕಾ ಕೇಂದ್ರ ಎಂಬ ಈ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ.

ಈ ತಾಲ್ಲೂಕಿನ ಪ್ರಾಗಿತಿಹಾಸಕಾಲದ ಗೀರು ಚಿತ್ರಗಳಿರುವ ರಾಜಾಪುರ, ಜೋಗ, ಇಂಗಳಗಿ, ಲಿಂಗದಹಳ್ಳಿ, ಮಲ್ಲಾಪುರ ಮೊದಲಾದ ತಾಣಗಳ ಬಗ್ಗೆ ಮತ್ತು ಪಾಳೆಗಾರರ ಅವಧಿಯ ದರೋಜಿ ಬೆಟ್ಟದ ಮೇಲಿರುವ ರೇಖಾಚಿತ್ರಗಳ ವೈವಿಧ್ಯತೆಯನ್ನು ಗಮನಿಸಲಾಗಿದೆ. ಈ ತಾಲ್ಲೂಕಿನ ಪ್ರಮುಖ ಹಿರಿಯ ಚಿತ್ರ ಕಲಾವಿದರಾದ ವಿ.ಟಿ.ಕಾಳೆಯವರ ಕಲಾಸಾಧನೆಯ ಬಗ್ಗೆ ಮತ್ತು ಅದರೊಂದಿಗೆ ಈ ತಾಲ್ಲೂಕಿನ ಕರಕುಶಲ ಕಲಾಕೇಂದ್ರದಲ್ಲಿಯ ವಿವಿಧ ಮಾದರಿಯ ಕರಕುಶಲ ಕಲೆಗಳ ವೈವಿಧ್ಯತೆಯ ಬಗ್ಗೆ ಗಮನಿಸಲಾಗಿದೆ. ಈ ತಾಲ್ಲೂಕಿನ ವಿವಿಧ ಕಲಾಪ್ರಕಾರಗಳಾದ ಬುರ್ರಕಥಾ ಕಲೆಯ, ಯಕ್ಷಗಾನ ಕಲಾವಿದರ, ತೊಗಲುಗೊಂಬೆ ಆಟಗಾರರ ಬಗ್ಗೆಯೂ ವಿಷಯ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿ ಅವುಗಳ ವಿಶಿಷ್ಟತೆಯ ಬಗ್ಗೆ ಕಲೆಗಳು ಎಂಬ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಈ ತಾಲ್ಲೂಕಿನಲ್ಲಿ ಕಾಣಸಿಗುವ ಅಗಸ್ತ್ಯತೀರ್ಥ, ನವಿಲುತೀರ್ಥ, ಭೈರವತೀರ್ಥ, ನರಸಿಂಹತೀರ್ಥ, ಹರಿಶಂಕರತೀರ್ಥ ಮೊದಲಾದ ಪ್ರಮುಖ ತೀರ್ಥಕ್ಷೇತ್ರಗಳ ಇತಿಹಾಸವನ್ನು ಮೊದಲಿಗೆ ಇಲ್ಲಿ ಕಂಡುಕೊಳ್ಳಲಾಗಿದೆ. ಈ ತಾಲ್ಲೂಕಿನಲ್ಲಿ ಕಂಡುಬರುವ ಹಾಳು ಮಠಗಳ ಬಗ್ಗೆ ಮೊದಲ ಬಾರಿಗೆ ಈ

ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಅವುಗಳೆಂದರೆ ಜೋಗಿಕಲ್ಲಿನ ಚಿನ್ನಾಪುರದಯ್ಯಸ್ವಾಮಿ ಮಠ, ಗಂಗಲಾಪುರದ ಸೋಗೇಶ್ವರ ಮಠ, ಭುಜಂಗನಗರದ ತರಳಬಾಳು ಶಾಖಾಮಠ ಮೊದಲಾದವುಗಳ ಚರಿತ್ರೆಯನ್ನು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿ ಅವುಗಳ ಇತಿಹಾಸವನ್ನು ತೀರ್ಥಕ್ಷೇತ್ರಗಳು ಮತ್ತು ಮಠಮಾನ್ಯಗಳು ಎಂಬ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ. ಕೊನೆಯದಾಗಿ ಈ ಅಧ್ಯಯನಕ್ಕೆ ಪೂರಕವಾದ ಇನ್ನೂ ಕೆಲವು ವಿವರಣೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಒಟ್ಟಾರೆಯಾಗಿ ಸಂಡೂರು ತಾಲ್ಲೂಕಿನ ಚಾರಿತ್ರಿಕ ಅಧ್ಯಯನ ಎಂಬ ಈ ಅಧ್ಯಯನದಲ್ಲಿ ಈ ತಾಲ್ಲೂಕಿನ ಚರಿತ್ರೆಯನ್ನು, ಶಾಸನಗಳು, ದೇವಾಲಯಗಳು, ಕೋಟೆ-ಕೊತ್ತಲಗಳು, ಸ್ಮಾರಕಾವಶೇಷಗಳನ್ನು ಪ್ರಮುಖ ಆಕರಗಳನ್ನಾಗಿ ಬಳಸಿಕೊಂಡು ನಿರ್ವಚಿಸಲಾಗಿದೆ. ಗಣಿಗಾರಿಕೆಯ ಇತಿಹಾಸ ಮತ್ತು ಈ ಗಣಿಗಾರಿಕೆಯಿಂದ ಆಗುತ್ತಿರುವ ದುಷ್ಪರಿಣಾಮ ಮತ್ತು ಅನಾನುಕೂಲಗಳ ಬಗ್ಗೆ ಮೊದಲಿಗೆ ಇಲ್ಲಿ ಚರ್ಚಿಸಲಾಗಿದೆ. ಈ ತಾಲ್ಲೂಕಿನಲ್ಲಿ ಕಂಡುಬರುವ ವೈವಿಧ್ಯಮಯವಾದ ಕಲಾಪ್ರಕಾರಗಳ ಬಗ್ಗೆ ಮತ್ತು ಕಲಾವಿದರ ಸಾಧನೆಗಳ ಬಗ್ಗೆ ವಿವರವಾಗಿ ಇಲ್ಲಿ ಗಮನಿಸಲಾಗಿದೆ. ಇಲ್ಲಿನ ತೀರ್ಥಕ್ಷೇತ್ರಗಳ ಮಹತ್ವವನ್ನು ಮತ್ತು ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿರುವ ಮಠಮಾನ್ಯಗಳ ಪ್ರಮುಖ ಪಾತ್ರಗಳನ್ನು ಚರ್ಚಿಸಲಾಗಿದೆ. ಆದರೆ ಇಂದು ಅಕ್ರಮ ಗಣಿಗಾರಿಕೆಯ ಪ್ರಭಾವ ಈ ಪ್ರದೇಶ ದಲ್ಲಿ ಹೆಚ್ಚಾಗಿದ್ದು, ಇದರಿಂದ ನಮ್ಮ ಐತಿಹಾಸಿಕ ಸ್ಮಾರಕಗಳು ವಿನಾಶದ ಅಂಚಿನಲ್ಲಿವೆ. ಆದ್ದರಿಂದ ಸ್ಥಳೀಯರು ತಮ್ಮ ತಮ್ಮ ಗ್ರಾಮಗಳ ಸ್ಮಾರಕಗಳನ್ನು ರಕ್ಷಿಸಿ ಅವನ್ನು ತಮ್ಮ ಮುಂದಿನ ಪೀಳಿಗೆಗೆ ಉಳಿಸಬೇಕಾದ ಅಗತ್ಯವಿದೆ. ಅದಕ್ಕಾಗಿ ಈ ತಾಲ್ಲೂಕಿನಲ್ಲಿ ಕಾಣಸಿಗುವ ಶಾಸನಗಳು, ವೀರಗಲ್ಲು, ವೀರಮಾಸ್ತಿಕಲ್ಲು, ನಿಸಿದಿಗಲ್ಲು, ಯಂತ್ರಕಲ್ಲು, ಲಿಂಗಮುದ್ರೆಕಲ್ಲು, ವಾಮನಮುದ್ರೆಕಲ್ಲು ಮೊದಲಾದ ಸ್ಮಾರಕಗಳನ್ನು ಸಂರಕ್ಷಿಸುವುದಕ್ಕೋಸ್ಕರ ಈ ತಾಲ್ಲೂಕಿನಲ್ಲಿ ಒಂದು ಪುರಾತತ್ವ ವಸ್ತುಸಂಗ್ರಹಾಲಯದ ಅಗತ್ಯವಿದ್ದು ಆ ಕೆಲಸ ತುರ್ತಾಗಿ ಆಗಬೇಕಾಗಿದೆ.

ಹೀಗೆ ಸಂಡೂರು ತಾಲ್ಲೂಕನ್ನು ಕುರಿತು ಈವರೆಗೆ ನಡೆದಿರುವ ಅಧ್ಯಯನಗಳ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ರಚಿಸಲಾಗಿದ್ದು, ಮೊಟ್ಟಮೊದಲಿಗೆ ಅನೇಕ ಅಂಶಗಳ ಮೇಲೆ ಬೆಳಕನ್ನು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

೧. ಈ ತಾಲ್ಲೂಕಿನಲ್ಲಿ ಈಗಾಗಲೇ ಪ್ರಕಟವಾಗಿರುವ ಶಾಸನಗಳ ಜೊತೆಗೆ, ಕ್ಷೇತ್ರಕಾರ್ಯದ ಮೂಲಕ ಮತ್ತಷ್ಟು ಹೊಸ ಶಾಸನಗಳನ್ನು ಶೋಧಿಸಿ ಚರ್ಚಿಸಲಾಗಿದೆ.

೨. ಕ್ಷೇತ್ರಕಾರ್ಯದಿಂದ ಅನೇಕ ಐತಿಹಾಸಿಕ ಮಹತ್ವವುಳ್ಳ ದೇವಾಲಯಗಳ ಮಾಹಿತಿಯನ್ನು ಮೊದಲ ಬಾರಿಗೆ ಸಂಗ್ರಹಿಸಿ ಅವುಗಳ ಇತಿಹಾಸವನ್ನು ಇಲ್ಲಿ ಕಟ್ಟಿಕೊಟ್ಟಿದೆ.

೩. ಈ ತಾಲ್ಲೂಕಿನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಎಷ್ಟೋ ವೀರಗಲ್ಲು, ವೀರಮಾಸ್ತಿಗಲ್ಲು, ನಿಸಿದಿಗಲ್ಲು, ಯಂತ್ರಕಲ್ಲು, ವಾಮನಮುದ್ರೆಕಲ್ಲು, ಲಿಂಗಮುದ್ರೆಕಲ್ಲು, ಮೊದಲಾದವುಗಳನ್ನು ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಿ ಅವುಗಳ ಮಹತ್ವ ಮತ್ತು ವೈವಿಧ್ಯತೆ, ಕಾಲ, ಶೈಲಿ ಮೊದಲಾದವುಗಳನ್ನು ಕುರಿತು ಗಮನಿಸಲಾಗಿದೆ.

೪. ಕ್ಷೇತ್ರಕಾರ್ಯದಿಂದ ಈ ತಾಲ್ಲೂಕಿನ ಕೆಲವು ಬೆಟ್ಟಗಳ ತುದಿಯಲ್ಲಿ ಕಂಡುಬರುವ ಪಾಳೆಗಾರರ ಅವಧಿಯಲ್ಲಿ ನಿರ್ಮಾಣಗೊಂಡಿರುವ ಅಪರೂಪದ ಯಾರ ಗಮನವನ್ನೂ ಸೆಳೆಯದ ಅನೇಕ ಕೋಟೆಗಳ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

ನಮ್ಮ ಅಧ್ಯಯನದ ಸಂದರ್ಭದಲ್ಲಿ ಹಲವು ವಿಷಯಗಳು ಇನ್ನೂ ಹೆಚ್ಚಿನ ಅಥವಾ ಪ್ರತ್ಯೇಕವಾಗಿಯೇ ಅಧ್ಯಯನವಾಗಬೇಕಾದ್ದನ್ನು ಮನಗಂಡಿದ್ದೇವೆ.

೧. ಸಂಡೂರು ತಾಲ್ಲೂಕಿನ ಮೌಖಿಕ ಚರಿತ್ರೆಯ ಬಗೆಗೆ ಹೆಚ್ಚು ಅಧ್ಯಯನವನ್ನು ಮಾಡುವ ಅಗತ್ಯವಿದೆ.

೨. ಸಂಡೂರು ತಾಲ್ಲೂಕಿನಲ್ಲಿ ಅನೇಕ ಕೋಟೆಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಬಹುದಾಗಿದೆ.

ಸಂಡೂರು ತಾಲ್ಲೂಕು ತನ್ನದೇ ಆದ ಹಲವು ವೈವಿಧ್ಯಗಳಿಂದ ಕೂಡಿದ ಪ್ರದೇಶವಾಗಿರುವುದರಿಂದ ಇಲ್ಲಿನ ಹಲವಾರು ವಿಷಯಗಳನ್ನು ಕುರಿತು ಅಧ್ಯಯನ ನಡೆಸಬಹುದು. ಇಲ್ಲಿನ ಬುಡಕಟ್ಟು ಜನರ ಸ್ಥಿತಿ-ಗತಿಗಳು, ಅವರ ಆಚರಣೆಗಳು, ಅರಣ್ಯ ನಾಶದ ಪರಿಣಾಮಗಳು, ಗಣಿಗಾರಿಕೆಯಿಂದ ಆಗುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು, ಇಲ್ಲಿನ ಜೀವ ಸಂಕುಲದ ಬಗೆಗೆ ಹೀಗೆ ಹತ್ತು ಹಲವು ವಿಷಯಗಳ ಮೇಲೆ ಕೆಲಸ ಮಾಡಲು ಈ ಸ್ಥಳ ಆಹ್ವಾನಿಸುತ್ತಿದೆ.

ಅನುಬಂಧಗಳು

೧. ಅಪ್ರಕಟಿತ ಶಾಸನಗಳು

೨. ನಕ್ಷೆಗಳು

೩. ಛಾಯಾಚಿತ್ರಗಳು

೪. ಗ್ರಂಥಋಣ

೧. ಅಪ್ರಕಟಿತ ಶಾಸನಗಳು

೧

ಬೊಮ್ಮಗಟ್ಟ

ಗ್ರಾಮದ ಶಾನುಭೋಗರ ಮನೆಯಲ್ಲಿರುವ ತಾಮ್ರ ಶಾಸನ ಪಾಠ

ಕ್ರಿ.ಶ.೧೮ನೆಯ ಶತಮಾನ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾ

೨. ಯ ಶಂಭವೆ | ಸ್ವಸ್ತಿ ಶ್ರೀ ಜಯಾಬ್ಯುದಯ ಶಾಲಿವಾಹನ ಶಕ ವರುಷಂಗಳು ೧೨೫೬ನೆಯ

೩. ವಿಭವನಾಮ ಸಂವತ್ಸರದ ವೈಶಾಕ ಶು.೧೫ರಲ್ಲು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ

೪. ಪದವಾಕ್ಯ ಪ್ರಮಾಣಜ್ಞ ಪಾರಾವಾರವಾರಿಣಯಮಯ ಮಾಸನ ಪ್ರಾಣಾಯಮ ಪ್ರತ್ಯಾಹಾ

೫. ರ ದ್ಯಾನ ದಾರೀಣನಮಾದ್ಯಾಷ್ಠಾಂಗ ಯೋಗಾನುಷ್ಠಾನ ಬ್ರತ ಪ್ರಶ್ಚಕ್ರವರ್ತಿಗುರು ಪರಂಪರಾ ಪ್ರಾಪ್ತವ್ಯಾ

೬. ಖ್ಯಾಯನ ಸಿಂಹಾಸನ | ಪ್ರತಿಷ್ಠಾಪನಾಚಾರ್ಯ ಸಿಂಹಾಸನಾಧಿಶ್ವರ ಸಕಲವೆದಾರ್ತ ಪ್ರಕಾಸಿಕ ಸಾಂಖತ್ರ

೭. ಯ ಪ್ರತಿಪಾಲಕನಿಗಮಾಗಮಸಾರ ಹೃದಯ ವೈದಿಕ ಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರ

೮. ಆಧಿರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ

೯. ತುಂಗಭದ್ರಾ ತೀರವಾಸ ಋಷಿಶೃಂಗ ಪುರವರಾಧಿಶ್ವರ ವ್ಯಾಸರಾಯ ಮುನಿಂದ್ರ ಆರ್‍ಯರು ವಿದ್ಯಾ

೧೦. ನಗರಕ್ಕೆ ಸಲುವ ಸೊಂಡೂರು ಮಲೆ ಪ್ರಾಂತ್ಯ ಶ್ರೀ ||೧|| ಸುಕ್ಷೇತ್ರಕ್ಕೆ ಸಂನಿಧಿ ತುಂಬರಗುದ್ದಿಗೆ ಪ್ರ

೧೧. ತಿನಾಮ ವ್ಯಾಸಾಪುರವೆಂಬ ಗ್ರಾಮವಂನು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರ

೧೨. ತಾಪ ಶ್ರೀ ಸಾಳೊನರಸಿಂಗರಾಯರು ಪೃಥ್ವಿ ಸಾಮ್ರಾಜ್ಯದಲ್ಲು ಆಳುವಾಳಿಕೆಯಲ್ಲು ನಂಮ ಮಠ

೧೩. ಕ್ಕೆ ಸುಧಾಗ್ರಾಮ ಮಾಡಿ ಸಮರ್ಪಿಸಲಾಗಿ ಗ್ರಾಮ ಪೂರ್ವವಾದುಯಂದು ಈ ಗ್ರಾಮಕ್ಕೆ ನಾವು ಸ್ವಥಾ ದೊ

೧೪. ಡ್ಡ ಕೆರೆ ಕಟ್ಟಿಸಿ ಈ ಗ್ರಾಮದ ಸಮಸ್ತ ಬಾರ ಬಲೂತಿ ಗಲುಡ ಶಾನಭೋಗ ಸಮಸ್ತ ಪ್ರಜೆಗಳಿಗು ಬರ್‍ಸಿ

೧೫. ಕೊಟ್ಟ ಕಲುಲು ಮಾಂನ್ಯದ ಕ್ರಮವೆಂತೆಂದರೆ ಆ | ಈ ಕೆರೆ ಹಿಂದೆ ಬಾರಾಬಲೂತಿಯವರಿಗೆ

೧೬. ಆಯ ಕಟ್ಟು ಮಾಡಿ ಕೊಟ್ಟ ವಿವರಾ | ನಾಲ್ಕು ಯತ್ತಿನಗಳೆವು ೧ಕ್ಕೆ ನಿತ್ಯ ಗುತ್ತಿಗೆ ಗ ೪ ಬೆಡಿಕೆ ಗೆ ೧೯

೧೭. ಲಖಿಯಂಗ ೫೯ದ ಪ್ರಕಾರ ಪ್ರಜೆಗಳಿಗೆ ನಡಸಲುಳವರು ನಮ ಮಠದಾಸೋಸುವದಕೆ ದವಸ ಖಂ ೧ ಗಳೆ ೧

೧೮. ಕೊಟು ನಡಸಲುಳವರು ಗ | ಶಾ || ಬಾರಬಲಿ ತರಿಗೆ ಕೊಟ ಮಾನ್ಯ | ದ ವಿವರವೂ | ಸಾದರ ಚಿಕಂಣ

೧೯. ಗಉಡಗ ಕುಮಾರ ನಾರಾಯಣ ಗ | ಗೆ ನಾಲ್ಕು ಹತ್ತಿನ ಗಳೆವು ೨ ಶಾ | ವೆಂಕರಸ್ಯೆನ ಕುಮಾರ ತಿಂಮರಸಯಗೆ

೨೦. ನಾಲ್ಕು ಯತ್ತಿನಗಳೆ ೨ ತಳವಾರ ಮುಡಿಗೊಂಡಲ ಚಿಂಗಿನಾಯ್ಕಗೆ ನಾಲ್ಕು ಯತ್ತಿನಗಳೆ ೨ ಕಂಮಾರ ಮಲೋಜ

೨೧. ಗೆ ಗಳೆ ೧ ಬಡಗಿ ದೊರೊಜಗೆ ಗಳೆ ೧ ಅಕ್ಕಸಾಲಿವೊರೊಜಗೆ ಗಳೆ ೦೧೧ ಬಾರಿಕ ಕೊಂಡಗೆ ಗಳೆ ೦೧೧ ಆಗಸ

೨೨. ನಾಗರಾಜಗೆ ಗಳೆ ೦೧೧ ಕ್ಷೌರಿಕ ತಿಪ್ಪಗೆ ಗಳೆ ೦೧೧ ಬೆಗಾರ ತಿಂಮಗೆ ಗಳೆ ೧ ಕುಂಬಾರ ತಿಮಗೆ ೦೧೧ ಮಾ

೨೩. ದಿಗಯಲ್ಲ ಜಗಲಿಗೆ ಗಳೆ ೧ ಈ ಪ್ರಾಕಾರ ಬಾರ ಬಲೂತಿ ಮುಂತಾದ ಹನ್ನೆರಡು ಮಂದಿಗು ತಪ್ಪದೆ

೨೪. ನಡಸಲುಳವರು ಈ ಕಉಲು ಆಯಕಟ್ಟಿಗೆ ಯಾರು ತಪ್ಪಿದರು ಮಾತಂಗ ಮಾಲ್ಯವಂತ ರುಷಿ ಶ್ರುಂ

೨೫. ಗಕಿಷ್ಕಿಂದ ಪಂಪಾಕ್ಷೇತ್ರ ಈ ಪಂಚಕ್ರೋಶ ಮಧ್ಯದಲ್ಲು ಗೋವು ಬ್ರಾಂಹ್ಮರಕೊಂದ ಪಾಪಕ್ಕೆ ಹೊಹ

೨೬. ರೆಂದು ಬಸ್ಸಿಕೊಟಕವುಲು ಮಾಂನ್ಯದ ಆಯಕಟ್ಟು ಸ್ವದತ್ತಂ ಪರದತ್ತಾಂ ವಾಯೊಹರೆತವ

೨೭. ಸುಂಧರಾ ಷಷ್ಟವರುಷ ಸಹಸ್ರಾಣಿ ವಿಷ್ಟಯಂ ಜಾಯತೆ ಕ್ರಿಮಿಃ |

೨

ಹಳೆದರೋಜಿ

ಬೆಟ್ಟದ ಕೆಳಗಿನ ವೆಂಕಟೇಶ್ವರ ದೇವಾಲಯದ ಬಳಿ
ಕ್ರಿ.ಶ.೧೩ನೆಯ ಶತಮಾನದ ನಿಸಿದಿ ಶಾಸನ ಪಾಠ

೧. ಶ್ರೀ ಕೆಸೆಣೆದೆವೇಮ

೨. ನುಗನು ಮಲಪ

೩. ನ ನಿಸಿದ್ದಿ ||

೩

ಹಳೆದರೋಜಿ

ಬೆಟ್ಟದಲ್ಲಿಯ ವೀರಭದ್ರ ದೇವಾಲಯದ ಪ್ರಾಕಾರದಲ್ಲಿಯ
ಗಡಿಗಲ್ಲಿನ ಮೇಲಿನ ಶಾಸನ ಪಾಠ
ಕ್ರಿ.ಶ.೧೫ನೆಯ ಶತಮಾನ

೧. ಶ್ರೀ ವಿರೂಪಾಕ್ಷ

೪

ಭುಜಂಗನಗರ

ಗ್ರಾಮದ ಜನತಾ ಕಾಲೋನಿಯಲ್ಲಿ ಕಾಣಸಿಗುವ
ನಾಲ್ಕು ನಾಗರಿ ಲಿಪಿಯ ಲಿಂಗಮುದ್ರೆ ಕಲ್ಲಿನಲ್ಲಿ
ಕ್ರಿ.ಶ.೧೫ನೆಯ ಶತಮಾನ

೧. ಶ್ರೀ ಶಿವಪುರಕಾರ
೨. ಶ್ರೀ ವಿಶ್ವೆಶ್ವರ ಪ್ರಂತ

೧. ಶ್ರೀ ಶಿವಪುರಕಾರ
೨. ಶ್ರೀವಿಶ್ವೆಶ್ವರ ಪ್ರಂತ

೧. ಶ್ರೀ ಶಿವಪುರಕಾರ
೨. ಶ್ರೀ ವಿಶ್ವೆಶ್ವರ ಪ್ರಂತ

೧. ಶ್ರೀ ಶಿವಪುರಕಾರ
೨. ಶ್ರೀ ವಿಶ್ವೇಶ್ವರ ಪ್ರಂತ

೫

ಜೋಗಿಕಲ್ಲು

ಗ್ರಾಮದ ಹೊಲದಲ್ಲಿಯ ಬಂಡೆಯಲ್ಲಿ
ಕ್ರಿ.ಶ.೧೭ನೆಯ ಶತಮಾನ

೧. ನಮಸ್ತುಂಗ ಶಿರಶ್ಚುಂಬಿ

೬

ಆವಿನಮಡಗು

ಗ್ರಾಮದ ಕೆರೆಯ ಬಳಿಯ ಶಾಸನ ಪಾಠ
ಕ್ರಿ.ಶ.೧೫೫೧

೧. ವಿದ್ಯಾ ಶಂಕರಾಯ ನಮಃ | ಶ್ರೀ ಗಣಾಧಿಪತಯೆ ನಮಃ | ಶುಭಮಸ್ತು | ವಿರೂಪಾಕ್ಷ ಲಿಂಗಾಯ ನಮಃ ||

೨. ಶ್ರೀ ಜಯಾದ್ಭುದಯ ಶಾಲಿವಾಹನ ಶಕ ವರುಷ ೧೪೭೩ನೆಯ ವಿರೋಧಿಕೃತ ಸಂವತ್ಸರದ ಆಷಾಢ ಶುದ್ಧ ೧೨ ರಲು ‖

೩. ಶ್ರೀಮದ್‌ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ಸದಾಸಿವದೇವ ಮಹಾರಾಯರು| ವಿದ್ಯಾನಗರದಲು ರತ್ನ ಸಿಂ

೪. ಹಾಸನಾರೂಢರಾಗಿ ಪೃಥ್ವಿ ಸಾಂಬ್ರಾಜ್ಯಂ ಆಳುತಂಯಿರಲಾಗಿ ಶ್ರೀಮಹಾಮಂಡಳೇಶ್ವರ ರಾಮರಾಜ ತಿಂಮರಾಜ

೫. ಗಳ ಕೊಮಾರ ವಿಠಲ ರಾಜದೇವ ಮಹಾ ಅರಸುಗಳು ಆವಿನಮಡುವಿನ ಸೀಮೆಗೆ ಸಲುವ ಹಿರಿಯ ಅನಂ

೬. ತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವಿನ ಕೆರೆಯ ಕೆಳಗಣ ಸ್ಥಾವರದೊಳಗಣ ತಿಪ್ಪಯ್ಯ ಬಸವಯ್ಯ ಕೈ

೭. ಯ್ಯಲೂ ವಿರುಪಣಗಳು ಕ್ರಯವಾಗಿ ಕೊಂಡು ಕೊಟ್ಟದಾನದ ಹೊಲ ೩೧೩ ತೋಟದ(ಪಾ)(ಲು)

೮. ಸೀಮೆಯ ವಿವರ ‖ ಮೂಡಲು ಭೊಳಪನ ವಿರುಪಣನ ಹೊಲ ಮೇರೆ | ಥೆಂಕಲು ವಿರುಪಣನ ಸಿವನಪನ ಹೊಲ

೯. ಮೇರೆ | ಪಡುವಲು ಹಿರೆಯ ಕಾಲುವೆ ಮೇರೆ | ಬಡಗಲು ಭೊಳಪನ ಮಗ ಭದ್ರಪನ ಹೊಲ ಮೇರೆ | ಅಂತು ಯೀ ಭೂ

೧೦. ಮಿ ಸೀಮೆಯ ಒಳಗಾದ ತೆಂಗು, ಹಲಸು, ಮಾಉ, ನಿಂಬೆ, ಹೇರಳೆನ್ನು ಆವೂರ ಫಲಗಳನು ಅಂತಾಪುರದ

೧೧. ಮಲ್ಲಿಕಾರ್ಜುನ ದೇವರ ಅಮೃತಪಡಿಗೆ ಅಚಂದ್ರಾರ್ಕಸ್ತಾಯಿಯಾಗಿ ಧಾರೆಯ ದ್ವಾದಸೆಯಾ ಪುಂಣ್ಯ ಕಾಲದಲು ಯಿ

೧೨. ತೋಟದ ವಕ್ಕಲಪಾಲು ರಾಜಪಾಲು ಸಹವಾಗಿ ಮಲ್ಲಿಕಾರ್ಜುನ ದೇವರಿಗೆ ವಿಠಲ ರಾಜ್ಯ ಅಯ್ಯನವರೂ ಸರ್ವಮಾನ್ಯವಾಗಿ

೧೩. ಧಾರೆಯನೂಯೆರದು ಕೊಟ್ಟರು ‖ ಸ್ವದತ್ತಾಂ ಪರದತ್ತಾಂ ವಾಯೊ ಹರೆತ ವಸುಂದರಾಂ ಸಷ್ಟಿರ್ವರುಷ ಸಹ ಸ್ರಾ

೧೪. ಣಿ ವಿಷ್ಟಾಯಂ ಜಾಯತೆ ಕ್ರಿಮಿಃ | ದಾನ ಪಾಲನಯೊರ್ಮದ್ಯೆ ದಾನ ಚ್ಛ್ರೆರ್‍ಯೋನು ಪಾಲನಂ

೧೫. ದಾನತ್ಸ್ವರ್ಗ ಮಹಾಪ್ನೊತಿ ಪಾಲಾನಾದಚ್ಯುತಂ ಪದಂ ‖ ಸ್ವದತ್ತಾಂ ದ್ವಿಗುಣಂ ಪುಣ್ಯಂ | ಪರದತ್ತಾ

೧೬. ನು ಪಾಲನಂ ಪರದತ್ತಾಪಹಾರೇಣ | ಸ್ವದತ್ತಾಂ ವಿಷ್ಣುಂ ಭವೇತ್ ‖ ಯಿಧರ್ಮಕೆ ಆವನ

೧೭. ನೊಬನು ಅಳುಪಿದರು | ಕಾಸಿ ಕ್ಷೇತ್ರದಲು ತಮ ತಂದೆ ತಾಯಿ ಗುರು ಉ ದೈಯಿವವನು

೧೮. ಗೋವು ಬ್ರಾಹ್ಮಣರನು ಅಲ್ಲಿಕೊಂದು ಸುರೆಯನು ಕುಡಿದ ಪಾಪಕೆ ಹೋಹರು | ದೇವಲೋಕ

೧೯. ಕೆ ಮರ್ತ್ಯ ಲೋಕಕೆ ಹೊರಗು ಯಿದ ಅಳಿಪಿದವನ ಬಾಯಿಲಿಕತೆ ತುಣಿಕಳು ಮೊಗೆ |

೨೦. ಶ್ರೀ ಶ್ರೀ ಶ್ರೀ

೭

ಲಕ್ಷ್ಮೀಪುರ

ಹೊಲಮಠ ಎಂಬ ಸ್ಥಳದಲ್ಲಿ ದೊರೆತ ಶಾಸನ

ಕ್ರಿ.ಶ.೧೨೮೬

೧ ಶ್ರೀ ಜಯಾದ್ಭುದಯಾ . . . . .

೨ . . . . ೧೨೦೮

೩ . . . .

ಹೀಗೆ ಒಂಭತ್ತು ಸಾಲು ಇದ್ದು ಸಂಪೂರ್ಣವಾಗಿ ಸವೆದಿವೆ.

೮

ಬೆಳ್ಳಿ ಮುದ್ರೆ ಉಂಗುರದಲ್ಲಿನ ನಾಲ್ಕು ಸಾಲಿನ ಶಾಸನ ಪಾಠ

(ರಾಮಘಡದ ಹುಲಿಮಾನಪ್ಪನ ಮಠಕ್ಕೆ ಸೇರಿದ್ದು)

೧. ಶ್ರೀ ಮಂತ್ಕಾಶಿ ಹಂಪಿನಿ

೨. ರಾಲಂಬಪುರಿ (ಸಿಂ) (ಹಾ) (ಸ)

೩. ನ ಪ್ರಥಮ ರು(ರೂ)ಡಾಚಾರ್ಯ

೪. ಚಿಕ್ಕೇಶ್ವರಸ್ವಾಮಿ ಶ್ರೀ

೯

ಹಿತ್ತಾಳೆಯ ಮುದ್ರೆ ಉಂಗುರದಲ್ಲಿನ ಶಾಸನ ಪಾಠ

(ರಾಮಘಡದ ಹುಲಿಮಾನಪ್ಪನ ಮಠಕ್ಕೆ ಸಂಬಂಧಿಸಿದ್ದು)

೧ ಶ್ರೀ

೨ ಚಿಕ್ಕೇಶ್ವರ ಮು(ಮೂ)ರು ಜಾವಸ್ವಾಮಿ ಶ್ರೀ

೩. ವಂಶ

೪. * ಶ್ರೀಜ್ಜಗದ್ಗುರು *

೫. ಶ್ರೀ ನಿರಂಜನಸ್ವಾಮಿ ಮು(ಮೂ)ಲ ಸಂಸ್ಥಾನ


೬. * ಅಂತರ್‌ವಳ್ಳಿ ಮುದ್ರ್ರ *

೭. * ನಂಬರ್ *

೮. ೧


೨. ನಕ್ಷೆಗಳು

ಸಂಡೂರು ತಾಲ್ಲೂಕಿನ ನಕ್ಷೆ






ಸಂಡೂರು ತಾಲ್ಲೂಕಿನ ಶಾಸನಗಳ ನಕ್ಷೆ






ಸಂಡೂರು ತಾಲ್ಲೂಕಿನ ದೇವಾಲಯಗಳ ನಕ್ಷೆ






ಸಂಡೂರು ತಾಲ್ಲೂಕಿನ ಕೋಟೆಗಳ ನಕ್ಷೆ






ತಿಮ್ಮಪ್ಪನ ಬೆಟ್ಟದ ಕೋಟೆ ನಕ್ಷೆ



೧. ಪ್ರವೇಶದ್ವಾರ
೨. ಬುರುಜುಗಳು
೩. ಇಟ್ಟಿಗೆಯಿಂದ ನಿರ್ಮಿಸಿದ ಹೊಂಡ
೪. ನೈಸರ್ಗಿಕವಾಗಿ ನಿರ್ಮಿತವಾದ ಹೊಂಡ
೫. ನೈಸರ್ಗಿಕವಾಗಿ ನಿರ್ಮಾಣಗೊಂಡ ಬಾವಿಗಳು



ಬೊಮ್ಮಗಟ್ಟ ಗ್ರಾಮದ ಕೋಟೆಯ ನಕ್ಷೆ



೧. ಕೋಟೆಯ ಅಗಸೆ ಬಾಗಿಲು

೨. ಚಾವಡಿ

೩. ಶಿಥಿಲವಾದ ಬುರುಜುಗಳು

೪. ಜಲಾವೃತಗೊಂಡ ಕಂದಕ


೫. ಊರ ಮುಂದಿನ ರಾಯನ ಗುಡಿ(ಆಂಜನೇಯ)

೬. ರಸ್ತೆ

೭. ಕೋಟೆ ಒಳಗಿನ ಗ್ರಾಮ


೮. ಕೆರೆ

ಉತ್ತರಮಲೆ ಬೆಟ್ಟದ ಕೋಟೆ ನಕ್ಷೆ




೧. ಪ್ರವೇಶದ್ವಾರ
೨. ಬುರುಜುಗಳು
೩. ಶಸ್ತ್ರಾಸ್ತ್ರ ಗೃಹ
೪. ನೈಸರ್ಗಿಕ ಬಾಗಿಲು
೫. ಹಾಲು ಕಾಯಿಸುವ ದೊಣೆ
೬. ಕೋಟೆ ಪೇಟೆಯ ಅವಶೇಷಗಳಿರುವ ಸ್ಥಳ
೭. ಮಲಿಯಮ್ಮನಗುಡಿ
೮. ಬತ್ತಿದ ಕೆರೆ

ಜೋಗಿಕಲ್ಲು ಬೆಟ್ಟದ ಕೋಟೆಯ ನಕ್ಷೆ



೧. ಪ್ರವೇಶದ್ವಾರ
೨. ಬುರುಜುಗಳು
೩. ಕೋಟೆ ಪೇಟೆಗಳು
೪. ದುರ್ಗಾದೇವಿ ಗುಡಿ
೫. ಪಾಳೆಯಗಾರರ ಹೊಂಡ
೬. ಸವೆದ ಮೆಟ್ಟಿಲುಗಳು
೭. ಪಾಳೆಗಾರರಿಂದ ನಿರ್ಮಿಸಲ್ಪಟ್ಟ ಕೆರೆ

ಸಂಡೂರು ಪರಿಸರದ ಆದಿರಿನ ನಿಕ್ಷೇಪವನ್ನು ತೋರಿಸುವ ನಕ್ಷೆ





ಸಂಡೂರು ಪರಿಸರ ಮ್ಯಾಂಗನೀಸ್ ಅದಿರಿನ ವಲಯ ನಕ್ಷೆ





೩. ಅನುಬಂಧ

ಛಾಯಾಚಿತ್ರಗಳು


ಬಯಕಾರ ರಾಮಪ್ಪನ ಶಾಸನ,
ಚಿಕ್ಕಕೆರೆಯಾಗಿನಹಳ್ಳಿ



ವೀರಗಲ್ಲು, ಸುಲ್ತಾನಪುರ


ವೀರಗಲ್ಲು, ಭುಜಂಗನಗರ



ನವಿಲುಸ್ವಾಮಿ ದೇಗುಲದ ಶಾಸನ,
ನವಿಲುತೀರ್ಥ



ಪಾರ್ವತಿ ದೇವಾಲಯದ ಶಾಸನ, ಕುಮಾರಸ್ವಾಮಿಬೆಟ್ಟ




ನಿಸಿಧಿ ಶಾಸನ, ಹಳೆ ದರೋಜಿ



ಪರ್ಶಿಯನ್ ಶಾಸನ, ಹಳೆದರೋಜಿ




ಪರ್ಶಿಯನ್ ಶಾಸನ, ಹಳೆದರೋಜಿ



ರಾಮಲಿಂಗಗುಡಿ ಶಾಸನ, ಹಳೆದರೋಜಿ ಬೆಟ್ಟ



ವೀರಭದ್ರಗುಡಿ ಶಾಸನ, ಚೋರುನೂರು



ವೀರಭದ್ರಗುಡಿ ಶಾಸನ ಹಳೆದರೋಜಿ



ನಿಸಿಧಿ ಶಿಲ್ಪ, ಹಳೆದರೋಜಿ



ವೀರಗಲ್ಲು, ರಾಮಘಡ




ಕುಮಾರರಾಮನ ಶಾಸನ, ರಾಮಘಡ




ವೀರಭದ್ರಗುಡಿ ಶಾಸನ, ಚೋರುನೂರು



ಮಲ್ಲಿಕಾರ್ಜುನಗುಡಿ ಶಾಸನ, ಅಂತಾಪುರ



ವ್ಯಾಸರಾಯರ ತಾಮ್ರಶಾಸನ, ಬೊಮಘಟ್ಟ



ವಾಮನಮುದ್ರೆ ಕಲ್ಲು, ಚಿಕ್ಕಅಂತಾಪುರ



ಲಿಂಗಮುದ್ರೆಶಾಸನ, ಭುಜಂಗನಗರ



ವೀರಮಾಸ್ತಿಗಲ್ಲು, ಬಂಡ್ರಿ



ವೀರಮಾಸ್ತಿಗಲ್ಲು, ಬಂಡ್ರಿ



ವೀರಗಲ್ಲು, ಬಂಡ್ರಿ




ವೀರಗಲ್ಲು, ಬಂಡ್ರಿ



ವೀರಮಾಸ್ತಿಗಲ್ಲು, ಅಂಕಮ್ಮನಹಾಳು



ವೀರಮಾಸ್ತಿ, ಹಳೆದರೋಜಿ



ಮಾಸ್ತಿಶಿಲ್ಪ, ರಾಮಘಡ



ವೀರಮಾಸ್ತಿ ಸಮೂಹ, ಚೋರನೂರು



ವೀರಮಾಸ್ತಿಶಿಲ್ಪ, ಚೋರನೂರು




ವೀರಗಲ್ಲು, ಹಳೆದರೋಜಿ



ವೀರಗಲ್ಲು, ಹಳೆದರೋಜಿ



ವೀರಗಲ್ಲು, ಹಳೆದರೋಜಿ



ವೀರಗಲ್ಲುಗಳ ಸಮೂಹ, ಹಳೆದರೋಜಿ




ತುಂಡಾದ ವೀರಗಲ್ಲು, ರಾಮಘುಡ




ಬಿಡಿಶಿಲ್ಪಗಳು, ರಾಮಘುಡ



ಕುಮಾರಸ್ವಾಮಿ ದೇವಾಲಯ, ಕುಮಾರಸ್ವಾಮಿಬೆಟ್ಟ



ಪಾರ್ವತಿ ದೇವಾಲಯ, ಕುಮಾರಸ್ವಾಮಿಬೆಟ್ಟ



ರಾಮಲಿಂಗೇಶ್ವರ ಗುಡಿ,
ಹಳೆದರೋಜಿ ಬೆಟ್ಟ



ರಾಮನಾಥಗುಡಿ, ರಾಮಘಡ



ಈಶ್ವರದೇವಾಲಯ, ತಾಳೂರು



ಬಾಲಕೃಷ್ಣದೇವಾಲಯ, ಹುಲಿಕುಂಟೆ



ವಿಠಲದೇವಾಲಯ, ಸಂಡೂರು




ಆಂಜನೇಯ ದೇವಾಲಯ, ಹಳೆದರೋಜಿ



ಹುಲಿಮಾನಪ್ಪನ ಪಾಳುಮಠ, ರಾಮಘಡ



ಪೀರಲದೇವರ ದರ್ಗಾ, ರಾಮಘಡ



ನರಸಿಂಹದೇವಾಲಯ, ಸಂಡೂರು



ತಿಮ್ಮಪ್ಪನ ದೇವಾಲಯ, ತಿಮ್ಮನಬೆಟ್ಟ



ವಿಷ್ಣು ಶಿಲ್ಪ, ಕುಮಾರಸ್ವಾಮಿಬೆಟ್ಟ



ವಿಷ್ಣು ಶಿಲ್ಪ, ಕುಮಾರಸ್ವಾಮಿಬೆಟ್ಟ



ಸ್ತ್ರೀವಿಗ್ರಹ, ಜೋಗಿಕೊಳ್ಳ



ವೆಂಕಟರಮಣಶಿಲ್ಪ, ಹಳೆದರೋಜಿ



ಹುಲಿಮಾನಪ್ಪ, ರಾಮಘಡ



ನಾಗಶಿಲ್ಪ, ರಾಮಘಡ್ಡ



ವೀರಭದ್ರ ಮಾನಪ್ಪನಮಠ, ರಾಮಘಡ



ದುರ್ಗಿ, ರಾಮಘಡ



ಅಷ್ಟದಿಕ್ಕಪಾಲಕರು, ಭೀಮತೀರ್ಥ

ಈಶ್ವರದೇವಾಲಯ ಭಿತ್ತಿಶಿಲ್ಪ,
ಸಂಡೂರು





ಆಂಜನೇಯ, ಮೆಟ್ರಿಕಿ

ಸುಂಕಲಮ್ಮ, ಹಳೆದರೋಜಿ





ಬಸವ, ಹಳೆದರೋಜಿ ಬೆಟ್ಟ



ಬಸವ, ಹಳೆದರೋಜಿ ಬೆಟ್ಟ



ಬಸವ, ಕುಮಾರಸ್ವಾಮಿಬೆಟ್ಟ



ಸಂಡೂರು ಅರಸರ ಅರಮನೆ, ಸಂಡೂರು



ಸಂಡೂರು ಅರಸರ ಅರಮನೆ, ಸಂಡೂರು



ಕೋಟೆಯ ಪ್ರವೇಶ, ಕೃಷ್ಣನಗರ



ಕೋಟೆ, ಕೃಷ್ಣನಗರ



ಕೋಟೆಯ ಬಾಗಿಲು,
ಜೋಗಿಕಲ್ಲು



ಬತೇರಿ, ಜೋಗಿಕಲ್ಲು



ಕೋಟೆ, ಹಳೆದರೋಜಿ ಬೆಟ್ಟ



ಕೋಟೆಯ ಅವಶೇಷ, ರಾಮಘಡ



ಕೋಟೆಯ ಅವಶೇಷ, ರಾಮಘಡ



ಕೋಟೆಯ ಅವಶೇಷ, ರಾಮಘಡ



ಕೋಟೆಯ ಅವಶೇಷ, ರಾಮಘಡ



ಬ್ರಿಟಿಷ್ ಬಂಗಲೆ, ರಾಮಘಡ



ಬ್ರಿಟಿಷ್ ಬಂಗಲೆ, ರಾಮಘಡ



ದ್ವಾರಪಾಲಕ, ಕುಮಾರಸ್ವಾಮಿಬೆಟ್ಟ



ನರಸಿಂಹಕೊಳ್ಳ, ಸಂಡೂರು



ಒಂಟೆಯ ಮೇಲಿನ ಯೋಧ, ಹಳೆದರೋಜಿ ಬೆಟ್ಟ



ಕುದುರೆ ಮೇಲಿನ ಯೋಧ, ಹಳೆದರೋಜಿ ಬೆಟ್ಟ




ಆನೆ ಮೇಲಿನ ಯೋಧ, ಹಳೆದರೋಜಿ ಬೆಟ್ಟ



ಆನೆಯನ್ನು ಕೊಲ್ಲುತ್ತಿರುವ ಸಿಂಹ,
ಹಳೆದರೋಜಿ ಬೆಟ್ಟ



ಭೈರವ
ಹಳೆದರೋಜಿ ಬೆಟ್ಟ



ವೀರಭದ್ರ
ಹಳೆದರೋಜಿ ಬೆಟ್ಟ



ಗಣಿ ಪ್ರದೇಶ, ದೋಣಿಮಲೈ



ಸಿದ್ಧರಾಮೇಶ್ವರ ಮಠ, ಯಶವಂತನಗರ



ಚಿನ್ನಾಪುರದಯ್ಯಸ್ವಾಮಿ ಮಠ, ಜೋಗಿಕಲ್ಲು



ಜನಪದ ಕಲಾವಿದೆ ಈರಮ್ಮ, ದರೋಜಿ




ತೊಗಲುಗೊಂಬೆಯ ಕಲೆ, ಸಂಡೂರು



ತೊಗಲುಗೊಂಬೆಯ ಕಲೆ, ಸಂಡೂರು



ಕಸೂತಿ ಮಾಡುತ್ತಿರುವ
ಲಂಬಾಣಿಗಳು, ಸಂಡೂರು



ಚಿತ್ರಕಲಾವಿದ ವಿ.ಟಿ.ಕಾಳೆ,
ಸಂಡೂರು



ಗಣಿ ಚಟುವಟಿಕೆಯ ಪ್ರದೇಶ,
ಸಂಡೂರು



ಮಹಾಲಕ್ಷ್ಮೀ ಕರಕುಶಲ ಕೇಂದ್ರ
ಸಂಡೂರು

೪. ಅನುಬಂಧ

ಗ್ರಂಥಋಣ

೧. ಕನ್ನಡ ಗ್ರಂಥಗಳು

೧. ಅನಕೃ, ಚಿತ್ರಕಲೆ, ಎಚ್.ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು, ೧೯೭೦

೨. ಕಲಬುರ್ಗಿ ಎಂ.ಎಂ.(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩. ಕಲಬುರ್ಗಿ ಎಂ.ಎಂ.(ಸಂ), ಕೊಮಾರ ರಾಮಯ್ಯನ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪. ಕಲಬುರ್ಗಿ ಎಂ.ಎಂ., ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೫. ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಐ.ಬಿ.ಎಚ್ .ಪ್ರಕಾಶನ, ಬೆಂಗಳೂರು, ೧೯೮೦

೬. ಕೃಷ್ಣರಾವ್ ಎಂ.ವಿ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರೀ ಪ್ರಕಾಶನ, ೧೯೭೦

೭. ಕುಮಾರಸ್ವಾಮಿ ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು (ಆಧುನಿಕ ಪೂರ್ವ ಕನ್ನಡ ಶಾಸನಗಳನ್ನು ಅನುಲಕ್ಷಿಸಿ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೮. ಖಂಡೋಬಾ ಪಿ.ಕೆ., ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ.ತೇಜಸಿಂಗರಾಠೋಡ್ ಮೇಮೋರಿಯಲ್ ಟ್ರಸ್ಟ್ ಗುಲಬರ್ಗಾ, ೧೯೯೧

೯. ಗಿರಿಜಾ, ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು, ಎಂ.ಫಿಲ್ (ಅಪ್ರಕಟಿತ ಸಂಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೧೦. ಗೋಪಾಲರಾವ್ ಎಚ್.ಎಸ್., ನಮ್ಮ ನಾಡು ಕರ್ನಾಟಕ (ನವ ಕರ್ನಾಟಕ ಕೈಪಿಡಿ), ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೩

೧೧. ಗೋಪಾಲರಾವ್ ಎಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೧೯೯೬

೧೨. ಚನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂಧರು ಒಂದು ಅಧ್ಯಯನ, ಕರ್ನಾಟಕ ವಿ.ವಿ.ಧಾರವಾಡ, ೧೯೯೫

೧೩. ಚನ್ನಬಸಪ್ಪ ಎಸ್. ಪಾಟೀಲ, ಕರ್ನಾಟಕದ ಜಾನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ, ೧೯೯೩

೧೪. ಚಂದ್ರಶೇಖರ ನಾರಣಾಪುರ, ಕರ್ನಾಟಕದ ವೀರಶೈವ ಮಠಗಳು (ಮಠಗಳ ಪರಂಪರೆ - ಮಾಹಿತಿ ಕೋಶ; ಸಂಪುಟ-೧), ಗೆಳೆಯ ಪ್ರಕಾಶನ ಚಿಕ್ಕಮಗಳೂರು, ೨೦೦೨

೧೫. ಚಂದ್ರಶೇಖರಪ್ಪ ಟಿ.ಜಿ., ಭಾರತದ ಇತಿಹಾಸ(ಆರಂಭದಿಂದ ಕ್ರಿ.ಶ.೧೫೨೬ರವರೆಗೆ), ಪೂರ್ಣ ಪ್ರಕಾಶನ ಶಿವಮೊಗ್ಗ, ೨೦೦೩

೧೬. ಚಿದಾನಂದಮೂರ್ತಿ ಎಂ., ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೪

೧೭. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೧೮. ಚೆನ್ನಕ್ಕ ಪಾವಟೆ, ಸಂಸ್ಕೃತಿ ಸಂಶೋಧನೆ, ಚನ್ನಗಂಗಾ ಪ್ರಕಾಶನ, ಧಾರವಾಡ, ೧೯೯೫

೧೯. ಚೆನ್ನಕ್ಕ ಎಲಿಗಾರ, ಬಂಕಾಪುರ ಶೋಧನೆ, ಚನ್ನಗಂಗಾ ಪ್ರಕಾಶನ, ಧಾರವಾಡ, ೧೯೯೦

೨೦. ತಿಪ್ಪೇಸ್ವಾಮಿ ಪಿ.ಆರ್.(ಪ್ರ.ಸಂ), ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೪

೨೧. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪, ೧೯೮೫

೨೨. ದೇ.ಜ.ಗೌ, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೧

೨೩. ನಂಜುಂಡಸ್ವಾಮಿ ಎ.ಎಸ್., ವಿಜಯನಗರ ಇತಿಹಾಸ, ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೧

೨೪. ದೇ.ಜ.ಗೌ, ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ೧೯೯೦

೨೫. ನಂಜುಂಡಸ್ವಾಮಿ ಎ.ಎಸ್., ಕರ್ನಾಟಕದ ಪಾಳೆಗಾರರು ಮತ್ತು ಒಡೆಯರ ಇತಿಹಾಸ ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ ಧಾರವಾಡ, ೧೯೮೬

೨೬. ನರಸಿಂಹಮೂರ್ತಿ ಎ.ವಿ., ಕರ್ನಾಟಕದ ಸೇವುಣರ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೧

೨೭. ನರಸಿಂಹಮೂರ್ತಿ ಎ.ವಿ., ಕರ್ನಾಟಕ ಶಾಸನ ಸಂಪತ್ತು, ಕನ್ನಡ ಮತ್ತು ಸಂಸ್ಕೃತಿಯ ನಿರ್ದೇಶನಾಲಯ ನೃಪತುಂಗ ರಸ್ತೆ ಬೆಂಗಳೂರು, ೧೯೮೩

೨೮. ನಾಗಯ್ಯ ಜೆ.ಎಂ., ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯಾ ಪ್ರಕಾಶನ, ಬಳ್ಳಾರಿ ೨೦೦೨

೨೯. ನಾಗವರ್ಮ ಜಿ.ಎಚ್., ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆಯಾಟ, ಎಂ.ಫಿಲ್ (ಅಪ್ರಕಟಿತ ಸಂಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩೦. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೧. ಪಾಟೀಲ ಎಸ್.ಸಿ., ಕರ್ನಾಟಕ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ, ೧೯೯೩

೩೨. ಪುರುಷೋತ್ತಮ ಬಿಳಿಮಲೆ, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೩೩. ಪುರುಷೋತ್ತಮ ಬಿಳಿಮಲೆ, ಕುಮಾರರಾಮ ಮತ್ತು ಕುಮ್ಮಟದುರ್ಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೪. ಪುರುಷೋತ್ತಮ ರೆಡ್ಡಿ, ಖನಿಜಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ೧೯೯೦.

೩೫. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು, ೨೦೦೨

೩೬. ಬಸವರಾಜ ಸಬರದ(ಪ್ರ.ಸಂ), ಬಳ್ಳಾರಿ ಜಿಲ್ಲೆಯ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೩೭. ಬ್ರಹ್ಮಶ್ರೀ ಬಾಲಚಂದ್ರ ಶಾಸ್ತ್ರಿ, ಶ್ರೀಸ್ಕಂದ ಕ್ಷೇತ್ರ ಮಾಹಾತ್ಮೆ, ಧಾರವಾಡ, ೧೯೫೫

೩೮. ಬಾಯಿರಿ ಬಿ.ಪಿ., ಭಾರತೀಯ ಚಿತ್ರಕಲೆ (ಸಂಕ್ಷಿಪ್ತ ಇತಿಹಾಸ), ಮನೋಹರ ಘಾಣೇಕರ, ಸಮಾಜ ಪುಸ್ತಕಾಲಯ ಧಾರವಾಡ, ೧೯೭೨

೩೯. ಮಹಾದೇವ ಸಿ., ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪೦. ಮಹಾದೇವ ಸಿ., ಬಳ್ಳಾರಿ ಜಿಲ್ಲೆಯ ಮರದ ವಾಸ್ತು (ಪುರಾತತ್ವ ವಿಭಾಗದ ಪ್ರಕಟಣೆ-೪), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೪೧. ಮಹಾದೇವ ಸಿ., ವಿಜಯನಗರದ ಗಾರೆಶಿಲ್ಪ (ಪುರಾತತ್ವ ವಿಭಾಗದ ಪ್ರಕಟಣೆ-೩), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೪೨. ಮರಿ ಶಾಮಾಚಾರ್ ಎನ್., ಭಾರತದಲ್ಲಿ ಸಮಕಾಲೀನ ಕಲೆ, ಸಿ.ಎಂ.ಎನ್.ಪ್ರಕಾಶನ ಬೆಂಗಳೂರು, ೧೯೮೭

೪೩. ರವಿಕುಮಾರ್ ಎನ್ .ಎಂ., ಮುನ್ನಡೆಯ ಕೂಡ್ಲಿಗಿ (ಕೂಡ್ಲಿಗಿ ತಾಲ್ಲೂಕಿನ ಸಮಗ್ರ ದರ್ಶನ), ಹಿಮಂತ ಪ್ರಕಾಶನ, ಎಂ.ಬಿ.ಅಯ್ಯನಹಳ್ಳಿ, ೧೯೯೮

೪೪. ರಾಮಶರ್ಮ ಮೈ.ಹ., ರಣಧೀರ ರಾಮನಾಥ, ಎಚ್.ಎಮ್.ಶಂಕರ್ ನಾರಾಯಣರಾವ್, ಶಾರದ ವಿಲಾಸ್ ಕಾಲೇಜ್, ಮೈಸೂರು, ೧೯೬೦.

೪೫. ರಾಘುವೇಂದ್ರರಾವ್ ವಿ., ವಿಜಯನಗರ, ವೆಂಕಟರಾಮಯ್ಯ ಅಂಡ್ ಸನ್ಸ್ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು, ೧೯೮೫

೪೬. ರಾಮಪ್ರಸಾದ್ ಎನ್.ಎಸ್., ಪ್ರಾಚೀನ ಕರ್ನಾಟಕದಲ್ಲಿ ರಾಜ್ಯಾಡಳಿತ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೪೭. ರಾಜಶೇಖರ ಇಚ್ಚಂಗಿ, ಸಂಸ್ಕೃತಿ ಶೋಧ (ವಿಮರ್ಶೆ - ಸಂಶೋಧನೆ, ವೈಚಾರಿಕ ಲೇಖನಗಳು), ಅಕ್ಕಮಹಾದೇವಿ ಪ್ರಕಾಶನ ಹುಕ್ಕೇರಿ, ೨೦೦೩

೪೮. ರಾಮರಾಯರು ಕೆ., (ವಿದ್ವಾನ್ ಕನ್ನಡ ಪಂಡಿತರು), ಶ್ರೀ ಷಣ್ಮುಖ ಯಾತ್ರೆ, ೧೯೪೭

೪೯. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೫೦. ಲಕ್ಕಪ್ಪಗೌಡ ಎಚ್ .ಜೆ., ಜಾನಪದ ಕೈಪಿಡಿ(ಜಾನಪದ ಮಾಲೆ-೧), ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೭

೫೧. ಲಕ್ಷ್ಮಣ್ ತೆಲಗಾವಿ(ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೯೫

೫೨. ಲಕ್ಷ್ಮಣ್ ತೆಲಗಾವಿ(ಸಂ), ಚರಿತ್ರ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫೩. ಲಿಂಗಯ ಡಿ., ಕರ್ನಾಟಕದ ಗ್ರಾಮ ದೇವತೆಗಳು, ಐ.ಬಿ.ಎಚ್. ಪ್ರಕಾಶನ ಬೆಂಗಳೂರು, ೧೯೮೪

೫೪. ಲಕ್ಷ್ಮಣ ಅಳವಂಡಿ, ಇತಿಹಾಸ ಕೋಶ (ಭಾಗ-೧, ಪ್ರಾಚೀನ ಕರ್ನಾಟಕ), ೧೯೯೭

೫೫. ವರದರಾಜರಾವ್ ಜಿ., ಕುಮ್ಮಟದುರ್ಗ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೫

೫೬. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫೭. ವಾಸುದೇವ ಅಗ್ನಿಹೋತ್ರಿ, ಪುರಂದರ ದಾಸರು ಮತ್ತು ಶ್ರೀಮದ್ಭಾಗವತ ಒಂದು ತೌಲಾನಿಕ ಅಧ್ಯಯನ, ಸಂಸ್ಕೃತಿ ಪ್ರಕಾಶನ, ೨೦೦೪

೫೮. ವಾಸುದೇವ ಬಡಿಗೇರ, ಸಂಡೂರು ಪರಿಸರದ ಕಾರ್ತಿಕೇಯ ತಪೋವನ - ಚಾರಿತ್ರಿಕ ಅಧ್ಯಯನ, ಮಯ ಪ್ರಕಾಶನ ಕಾಮಲಾಪುರ, ೧೯೯೭

೫೯. ವಿರೂಪಾಕ್ಷ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಗಾರರು, ಪ್ರಸಾರಾಂಗ, ಕನ್ನಡ ವಿಸ್ವವಿದ್ಯಾಲಯ, ಹಂಪಿ, ೨೦೦೪

೬೦. ಶಶಿಕಲಾ ಮ.ಹೂಗಾರ, ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೬೧. ಶಾಂತರಾಜ್ ಆರ್.ಎ., ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ, ಸ್ಪಂದನ ಚಿತ್ರಕಲಾವಿದರ ಯುವ ಬಳಗ, ಬೆಂಗಳೂರು, ೧೯೯೫

೬೨. ಶಿವರಾಮ ಕಾರಂತ, ಚಿತ್ರಶಿಲ್ಪ ವಾಸ್ತು ಕಲೆಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

೬೩. ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೬೪. ಶಿವಕುಮಾರಸ್ವಾಮಿ ಸಿ.ಎಸ್., ಕರ್ನಾಟಕದ ಜಾತ್ರೆಗಳು, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್, ಮೈಸೂರು ವಿ.ವಿ.ಮೈ., ೧೯೯೮

೬೫. ಶ್ರೀನಿವಾಸಮೂರ್ತಿ ಎಚ್.ವಿ., ಇತಿಹಾಸ ಸಂಶೋಧನಾ ವಿಧಾನ ಮತ್ತು ಇತಿಹಾಸ ಲೇಖನ ಕಲೆ, ಕೈಲಾಸ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಬೆಂಗಳೂರು, ೧೯೮೨

೬೬. ಶಿವರಾಮಪ್ಪ ಎ., ಹೊಸಪೇಟೆ ತಾಲ್ಲೂಕು ದರ್ಶನ, ೧೯೮೭

೬೭ ಶ್ರೀನಿವಾಸ ಕುಲಕರ್ಣಿ, ದಾಸರ ಪದಗಳು, ೧೯೯೭

೬೮. ಶೇಷಶಾಸ್ತ್ರೀ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೬೯. ಶೇಷಾದ್ರಿ ಬಿ.(ಸಂ), ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮

೭೦. ಷೇಕ್ ಅಲಿ ಬಿ.(ಪ್ರ.ಸಂ), ಕರ್ನಾಟಕ ಚರಿತ್ರೆ ಮಾಲೆ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭

೭೧. ಷೇಕ್ ಅಲಿ ಬಿ., ಟಿಪ್ಪುಸುಲ್ತಾನ್, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಹೊಸ ದೆಹಲಿ, ೧೯೭೯

೭೨. ಸದಾಶಿವಪ್ಪ ಕು.ಬಾ., ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ (ಸಂಶೋಧಿತ ಲೇಖನಗಳು), ೧೯೯೦

೭೩. ಸಂಭಾಪೂರ ಜಿ.ಎಚ್., ಶ್ರೀಕಾರ್ತಿಕೇಯ ಸುಪ್ರಭಾತ ಮತ್ತು ಶ್ರೀ ಸುಬ್ರಹ್ಮಣ್ಯ ಸ್ತೋತ್ರ, ೧೯೮೦

೭೪. ಸುರೇಶ ಕೆ.ಎಂ.(ಸಂ) ಕರ್ನಾಟಕ ದೇವಾಲಯ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೭೫ ಸುರೇಶ್ ಪಾಟೀಲ, ಚಾಲುಕ್ಯ ದರ್ಶನ, ೧೯೯೩

೭೬. ಸೂರ್ಯನಾಥ್ ಯು.ಕಾಮತ್(ಮು.ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-I, ೨೦೦೧

೭೭. ಸೋಮಶೇಖರ್ ಎಸ್.ವಿ., ಜಟಂಗಿರಾಮೇಶ್ವರ ಸಾಂಸ್ಕೃತಿಕ ದರ್ಶನ, ಸುಮೇಧ ಪ್ರಕಾಶನ, ದೇವಸಮುದ್ರ, ೨೦೦೪

೭೮. ಹನುಮಂತ, ಸಂಡೂರು ಹೋರಾಟ, ಜನ ಪ್ರಕಾಶನ ಬೆಂಗಳೂರು, ೧೯೮೧

೭೯. ಜ್ಞಾನನಂದ ಜಿ., ಶಿಲ್ಪಾದರ್ಶ ಸಂಪುಟ I, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೨. ಲೇಖನಗಳು

೧. ಅಭಿಶಂಕರ್ ಕೆ., *ಕಂಪಿಲಿ/ಕುಮ್ಮಟ : ಚಿಕ್ಕ ರಾಜ್ಯದ ದೊಡ್ಡ ಮಾರ್ಮಿಕ ಪಾತ್ರ*, ಕರ್ನಾಟಕ ಇತಿಹಾಸ ದರ್ಶನ, ಸಂಪುಟ-೫, ೧೯೯೦

೨. ಅಪ್ಪನಗೌಡ ಎಸ್.ಎಂ., *ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು*, ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ೧೯೯೧

೩. ಅರ್ಕಸಾಲಿ ವೃಷಬೇಂದ್ರಾಚಾರ್, *ಬಳ್ಳಾರಿ ಜಿಲ್ಲೆಯ ಶಿಲ್ಪಕಲೆ*, ಸ್ಕಂದ-ಶ್ರೀಗಂಧ, ಸ್ಮರಣ ಸಂಚಿಕೆ, ೧೯೯೧

೪. ಅರ್ಕಸಾಲಿ ವೃಷಬೇಂದ್ರಾಚಾರ್, *ಸೊಂಡೂರಿನ ಶ್ರೀಕುಮಾರಸ್ವಾಮಿ*, ನೆನಪಿನ ಸಂಚಿಕೆ, ಪ್ರಭು ಪ್ರಕಾಶನ, ೧೯೯೪

೫. ಅರ್ಕಸಾಲಿ ವೃಷಬೇಂದ್ರಾಚಾರ್, *ಸೊಂಡೂರು ತಾಲ್ಲೂಕಿನ ಇತಿಹಾಸ ಘೋರ್ಪಡೆಯವರ ಕಾಲ*, ಸ್ಮರಣ ಸಂಚಿಕೆ, ಲೋಹಾದ್ರಿಯ ಮಡಿಲು, ೨೦೦೪

೬. ಚನ್ನಬಸಪ್ಪ ಎಸ್.ಪಾಟೀಲ್, *ಮುಮ್ಮಡಿ ಸಿಂಗನ ಮೇಲೆ ಮತ್ತಷ್ಟು ಬೆಳಕು*, ವಿಜಯನಗರ ಅಧ್ಯಯನ, ಸಂಪುಟ-೩, ೧೯೯೩

೭. ಚೆನ್ನಬಸವಯ್ಯ ಹಿರೇಮಠ, *ಬಲ್ಲಕುಂದೆ ನಾಡು*, ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು, ಭಾಗ.I, ೧೯೯೯

೮. ಜಾಜಿ ದೇವೇಂದ್ರಪ್ಪ, *ಸಂಡೂರು ತಾಲ್ಲೂಕಿನ ಸ್ಥಳನಾಮಗಳು*, ಸ್ಮರಣ ಸಂಚಿಕೆ, ಲೋಹಾದ್ರಿಯ ಮಡಿಲು, ೨೦೦೪

೯. ನರಸಿಂಹಮ್ ಡಬ್ಲ್ಯೂ.ವಿ.ಎಸ್., *ಜೋಗದ ತಾಮ್ರ ಶಾಸನ*, ವಿಜಯನಗರ ಅಧ್ಯಯನ ಸಂಪುಟ ೨, ೧೯೯೭

೧೦. ನಾಗಭೂಷಣ ಎಸ್.ಎಂ., *ಸೊಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ*, ಕರ್ನಾಟಕ ಇತಿಹಾಸ ದರ್ಶನ, ಸಂಪುಟ-೧೦, ೧೯೯೫

೧೧. ನಾಗಯ್ಯ ಜೆ.ಎಂ., *ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸೊಂಡೂರು*, ಕರ್ನಾಟಕ ಇತಿಹಾಸ ದರ್ಶನ ಸಂಪುಟ-೧೦, ೧೯೯೫

೧೨. ನಾಗಯ್ಯ ಜೆ.ಎಂ., *ಸಂಡೂರು ಕೆಲವು ಐತಿಹಾಸಿಕ ಘಟನೆಗಳು*, ನೆನಪಿನ ಸಂಚಿಕೆ, ಪ್ರಭು ಪ್ರಕಾಶನ, ೧೯೯೪

೧೩. ನಾಗಭೂಷಣ ಸಿ., *ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಯ ಹಿರಿಮೆ,* ನೆನಪಿನ ಸಂಚಿಕೆ, ದಶಮಾನ,೧೯೯೭

೧೪. ಪುರುಷೋತ್ತಮ ರೆಡ್ಡಿ ಆರ್., *ಸೊಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ,* ಕರ್ನಾಟಕ ಇತಿಹಾಸ ದರ್ಶನ, ಸಂಪುಟ ೧೭

೧೫. ಬಾಲಸುಬ್ರಹ್ಮಣ್ಯ, *ವ್ಯಾಸರಾಯರು ಮತ್ತು ವಿಜಯನಗರ,* ವಿಜಯನಗರ ಅಧ್ಯಯನ ಸಂಪುಟ-೬, ೨೦೦೧

೧೬. ಮಹದೇವ ಸಿ., *ವಿಜಯನಗರ ಮತ್ತು ಕುಮಾರರಾಮ,* ವಿಜಯನಗರ ಅಧ್ಯಯನ ಸಂಪುಟ-೭, ೨೦೦೩

೧೭. ಮೃತ್ಯುಂಜಯ ರುಮಾರೆ, *ಸೊಂಡೂರು - ಒಂದು ಪರಿಚಯ,* ಸ್ಕಂದ-ಶ್ರೀರಂಧ್ರ, ಸ್ಮರಣ ಸಂಚಿಕೆ, ೧೯೯೪

೧೮. ಮೃತ್ಯುಂಜಯ ರುಮಾಲೆ, *ಸೊಂಡೂರಿನ ವಿರಕ್ತಮಠ,* ನೆನಪಿನ ಸಂಚಿಕೆ, ಪ್ರಭುಪ್ರಕಾಶನ, ೧೯೯೪

೧೯. ಮುಧೋಳ್ ಎಂ.ಎಸ್., *ಪ್ರಾಗೈತಿಹಾಸಿಕ ಕರ್ನಾಟಕದಲ್ಲಿಯ ಲೋಹ ತಂತ್ರಗಾರಿಕೆ,* ಕರ್ನಾಟಕ ಚರಿತ್ರೆ ಮಾಲೆ ೧, ೧೯೯೭

೨೦. ಯೂಸೂಫ್ ಕೆ., *ಕೋಮು ಸೌಹಾರ್ದತೆಯ ನೆಲೆ ಸಂಡೂರು,* ಸ್ಮರಣ ಸಂಚಿಕೆ, ಲೋಹಾದ್ರಿಯ ಮಡಿಲು, ೨೦೦೪

೨೧. ಲಕ್ಷ್ಮಣ್ ತೆಲಗಾವಿ(ಸಂ), *ಪುವ್ವಲ ಅರಸರು,* ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫

೨೨. ಲಕ್ಷ್ಮಣ್ ತೆಲಗಾವಿ(ಸಂ), *ಕುಮಾರರಾಮನ ಸಾಂಗತ್ಯಗಳು,* ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫

೨೩. ಲಕ್ಷ್ಮಣ್ ತೆಲಗಾವಿ(ಸಂ), *ಬಾಲ ಕುಮಾರರಾಮನ ಸಾಂಗತ್ಯ,* ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫

೨೪. ಲಕ್ಷ್ಮಣ್ ತೆಲಗಾವಿ(ಸಂ), *ಕುಮಾರರಾಮನ ಸಾಹಸಗಳು,* ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫

೨೫. ವಾಸುದೇವ ಬಡಿಗೇರ, *ಕಬ್ಬಿಣ ಮತ್ತು ಪರಂಪರೆ,* ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೬. ವೀರಭದ್ರಶರ್ಮ ಕೆ.ಎಂ., *ಹೆಸರುಗಳು,* ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧, ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೭. ವೆಂಕಟೇಶಮೂರ್ತಿ ಆರ್., *ಕರ್ನಾಟಕದಲ್ಲಿ ಪ್ರಾಗ್ ಇತಿಹಾಸ ಕಾಲದ ಶಿಲ್ಪಗಳು,* ಶಿಲ್ಪಕಲಾ ಪ್ರಪಂಚ, ೧೯೯೪

೨೮. ಶ್ರೀನಿವಾಸ್ ಎಂ.ವಿ., *ಸ್ಥಳೀಯ ಚರಿತ್ರೆ,* ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

೨೯. ಸ್ವಾಮಿ ಎನ್.ಎನ್., *ದೇವಾಲಯಗಳ ಶಿಲ್ಪಗಳು,* ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೨, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೩೦. ಸುಂದರ ಅ., ಶ್ರೀಮದ್ರಾಮಾಯಣದ *ಕಾರ್ತಿಕೇಯ ವನ'ವು ಸೊಂಡೂರಿನ ಕುಮಾರಸ್ವಾಮಿ ಬೆಟ್ಟವೆ?,* ಕರ್ನಾಟಕ ಇತಿಹಾಸ ದರ್ಶನ ಸಂಪುಟ-೧೦, ೧೯೯೫

೩೧. ಸೂರ್ಯನಾಥ ಕಾಮತ್, *ಕುಮಾರರಾಮ* ಮತ್ತು *ಸಂಗಮ ವಂಶ,* ವಿಜಯನಗರ ಅಧ್ಯಯನ ಸಂಪುಟ ೧, ೧೯೯೬

೩೨. ಹುಲ್ಲೂರು ಶ್ರೀನಿವಾಸ ಜೋಯಿಸ, *ದೊರವಡಿ,* ಪ್ರಬುದ್ಧ ಕರ್ನಾಟಕ, ಸಂಪುಟ-೫, ಮೈಸೂರು ವಿ.ವಿ.ಮೈಸೂರು, ೧೯೪೩

೩. ಇಂಗ್ಲೀಷ್ ಗ್ರಂಥಗಳು

1. **Annual Reports on Indian Epigraphy (1922-25),** Director(Epigraphy)-K.V.Ramesh, Pub : The Director General archaeological survey of India, New Delhi, 1986

2. **Annual Reports an Indian Epigraphy (1939-44),** Director(Epigraphy)-K.V.Ramesh, Pub : The Director General Archaeological survey of India, New Delhi, 1986

3. **Annual Reports an Indian Epigraphy (1974-75),** Director(Epigraphy)-K.V.Ramesh, Pub : The Director General Archaeological survey of India, New Delhi, 1990

4. **South Indian Inscriptions,** Vol-IX, Part-II, Archaeological survey of India, 1986

5. **South Indian inscriptions,** Vol-XXVII, Part-II, Ed: Dr.M.D. Sampath and others, Pub: The Director General Archaeological survey of India, New Delhi, 2001

6. **Temples of Raichur and Bellary Districts,** Directorate of Archaeology and Musieums Mysore, 1992

7. **Vijayanagara progress research, 1988-91,** C.S.patil, Director General Archaeological survey of mysore.

8 **Inscriptions of Karnataka Vol.II : Inscriptions of Bellary District,** C.S.patil, Vinoda.c.patil, 1997

Gazetteer's

1. Abishankar.k, **Bellary District,** Mysore state Gazetteer, 1972

೪. ಶಾಸನ ಸಂಪುಟಗಳು

೧. **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ,** ಸಂ: ಡಾ. ದೇವರಕೊಂಡಾರೆಡ್ಡಿ, ಸ.ಸಂ.: ಡಾ.ಡಿ.ವಿ.ಪರಮಶಿವಮೂರ್ತಿ, ಡಾ.ಕೆ.ಜಿ.ಭಟ್ಟಸೂರಿ, ಡಾ. ಕಲವೀರ ಮನ್ವಾಚಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೨. **ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು,** ಸಂ : ಎಂ.ಯಾಸೀನ್ ಖುದ್ದೂಸಿ ಸೀತಾರಾಮ ಜಾಗೀರ್‌ದಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೩. **ಕರ್ನಾಟಕ ಶಾಸನಗಳು ಸಂಪುಟ-೧, ವಿಜಯನಗರದ (ಹಂಪೆಯ) ಶಾಸನಗಳು,** ಸಂ : ಸಿ.ಎಸ್.ಪಾಟೀಲ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬

೫. ವಿಜಯನಗರ ಅಧ್ಯಯನ ಸಂಪುಟಗಳು

೧. **ವಿಜಯನಗರ ಅಧ್ಯಯನ ಸಂಪುಟ-೧,** ಸಂ : ಡಾ.ಡಿ.ವಿ.ದೇವರಾಜ್, ಡಾ.ಸಿ.ಎಸ್.ಪಾಟೀಲ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು, ನಿರ್ದೇಶನಾಲಯ ಮೈಸೂರು, ೧೯೯೬

೨. **ವಿಜಯನಗರ ಅಧ್ಯಯನ ಸಂಪುಟ-೨,** ಸಂ : ಎಂ.ಎಲ್.ಶಿವಶಂಕರ, ಡಾ.ಸಿ.ಎಸ್.ಪಾಟೀಲ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು, ನಿರ್ದೇಶನಾಲಯ ಮೈಸೂರು, ೧೯೯೮

೩. **ವಿಜಯನಗರ ಅಧ್ಯಯನ ಸಂಪುಟ-೬,** ಸಂ : ಪ್ರೊ.ಎಂ.ವಿ.ಕೃಷ್ಣಪ್ಪ, ಎಚ್ .ಟಿ.ತಳವಾರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು, ನಿರ್ದೇಶನಾಲಯ ಹೊಸಪೇಟೆ, ೨೦೦೧

೪. ವಿಜಯನಗರ ಅಧ್ಯಯನ ಸಂಪುಟ-೨, ಸಂ : ಕೆ.ಆರ್.ರಾಮಕೃಷ್ಣ, ಟಿ.ಎಸ್.ಗಂಗಾಧರ್, ಟಿ.ಎಂ.ಮಂಜುನಾಥಯ್ಯ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ನಿರ್ದೇಶನಾಲಯ, ಹೊಸಪೇಟೆ, ೨೦೦೩

೬. ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶಗಳು

೧. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೨, ಕರಕುಶಲ ಕಲೆಗಳು, ಸಂ:ಕರೀಗೌಡ ಬೀಚನಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ, ಸಂ:ಟಿ.ಪಿ.ವಿಜಯ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೭. ಸಮಗ್ರ ದಾಸಸಾಹಿತ್ಯ ಸಂಪುಟಗಳು

೧. ಸಮಗ್ರ ದಾಸಸಾಹಿತ್ಯ ಸಂಪುಟ-೧, 'ಶ್ರೀ ಶ್ರೀಪಾದರಾಜರ ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು, ಸಂ : ಡಾ.ಶ್ರೀನಿವಾಸ ಹಾವನೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೨. ಸಮಗ್ರ ದಾಸಸಾಹಿತ್ಯ ಸಂಪುಟ-೨, ಶ್ರೀವಾದಿರಾಜರ ಕೀರ್ತನೆಗಳು, ಸಂ : ಟಿ.ಎನ್.ನಾಗರತ್ನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೩. ಸಮಗ್ರ ದಾಸಸಾಹಿತ್ಯ ಸಂಪುಟ-೫, ಭಾಗ-೧, ಕನಕದಾಸರ ಕೀರ್ತನೆಗಳು ಭಾಗ-೧, ಸಂ : ಪ್ರೊ. ಸುಧಾಕರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೮. ಸ್ಮರಣ ಸಂಚಿಕೆಗಳು

೧. ದಶಮಾನ, ನೆನಪಿನ ಸಂಚಿಕೆ, ಸಂ: ಡಾ.ಮೃತ್ಯುಂಜಯ ಹೊರಕೇರಿ, ಗುಲ್ಬರ್ಗ ವಿಶ್ವವಿದ್ಯಾಲಯ ಗುಲ್ಬರ್ಗ, ಸ್ನಾತಕೋತ್ತರ ಕೇಂದ್ರ, ಕೃಷ್ಣದೇವರಾಯನಗರ, ಸಂಡೂರು, ೧೯೯೭

೨. ಪ್ರಭು ಪ್ರಕಾಶನ, ನೆನಪಿನ ಸಂಚಿಕೆ, ಸಂ: ಡಾ.ಮೃತ್ಯುಂಜಯ ಹೊರಕೇರಿ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು, ೧೯೯೪

೩. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಸಂ: ಡಾ.ಎ.ವೃಷಬೇಂದ್ರಾಚಾರ್, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ಸಂಡೂರು, ೨೦೦೪

೪. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಸಂ: ಮೃತ್ಯುಂಜಯ ಹೊರಕೇರಿ, ಕನ್ನಡ ಸಾಹಿತ್ಯ ಪರಿಷತ್ತು, ಸಂಡೂರು, ೧೯೯೧